START

START

File No. ARS 1 APP 90.

MICROFILMED BY
KARNATAKA STATE
ARCHIVES.

CAMP: MYSORE DATED 26:12:91

File No. AR 1 APP 90.

MICROFILMED BY
KARNATAKA STATE
ARCHIVES.

CAMP: MYSORE DATED 26:12:91

File No. ARS 1 APP 90.

MICROFILMED BY
KARNATAKA STATE
ARCHIVES.

CAMP: MYSORE DATED 26:12:91

ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು, ಇವ್ವಿರುವ ಪಕ್ಷೆಯ
ನಿಯತಕಾಲಿಕೆಗಳ, ಕಿತ ಭೋಧಿನಿ,
ಮತ್ತು (ಫೆಬ್ರವರಿ 1885)
ವಾಗ್ಭೂಷಣ ಅಗಷ್ಟ 1911
ಇಂದ ಮುಂಮುವರಿಸಿ
ಆಗಿದೆ.

ಕನ್ನಡ ಅಧ್ಯಯನ ಸಂಸ್ಥೆ,
ಮೈಸೂರು, ಪ್ರಿಪ್ಲಿರುವ ರಕ್ಷಿಯ
ನಿಯತಕಾಲಿಕೆಗಳ ಪಟ್ಟಿಯನ್ನು
ಮತ್ತು (ಫೆಬ್ರವರಿ 1985)
ಪಾಗ್ಟಾಪ್ಷಣ ಅಗಷ್ಟ 1911
ಯಿಂದ ಮುಂದುವರಿಸಿ
ಆಗಿದೆ.

ಎತ್ತು ಹಾರುವದಕ್ಕೆ ಮುಂಚೆ ಕೌದಿ ಹಾರಿತು.

ತ್ತಿದ್ದನು. ಸರ ಬುರುಡೆಯವನ ಗೂಡಿನಲ್ಲಿ ಜಗಜ್ಜಾಲಿಪತಿರಾಯನ ಮನೆಯಲ್ಲಿ ಅಣ್ಣನ ಮಾನ ಗೆಡಿಸಿದವಳ ಹೆಸರಿನ ಕನ್ಯೆ ಇರುವದಾಗಿ ತಿಳಿಯಬರುತ್ತದೆ. ಆ ಹುಡುಗಿಯು ಪ್ರಥಮಭೂತಾಗತಳಾದ ಕಾಲಮುಂತಾದ್ದನ್ನು ತಿಳಿಸುವ ಎಲೆಯನ್ನು ತೆಗೆದು ಕಳುಹಿಸುವದು.

ಇತಿ ಚತುರ್ಥೋಪಾಯ.

ಸಿನೇ ಸಂಜಿಕೆಯಲ್ಲಿನ ಒಗಟೆಗಳಿಗೆ ಉತ್ತರಗಳು.

(೧) ಮೋಟುಮರ ಮತ್ತು ಈಶ್ವರ. ಹ್ಯಾಗಂದರೆ: ನೀನು ಸ್ಥಾಣು (ಮೋಟುಮರ, ಶಿವನು.) ; ಮೂಲವಿಹೀನ (ಬೇರಿಲ್ಲದ್ದು, ಆದಿರಹಿತನು.) ಪುತ್ರನು ವಿಶಾಖನು (ನಿನಗೆ ರೆಂಜೆಯಿಲ್ಲ, ನಿನ್ನ ಪುತ್ರನು ಕುಮಾರಸ್ವಾಮಿ) ರಮಣಿಯು ಅಪರ್ಣಾ (ನಿನಗೆಎಲೆಯಿಲ್ಲ. ನಿನ್ನ ಹೆಂಡತಿ ಪಾರ್ವತಿ.) ಹೀಗಿದ್ದರೂ ಪರರಿಂದೆ ಸಮರ್ಪಿಸಲ್ಪಟ್ಟ ಪುಷ್ಪಗಳಿಂದ ಬೇಕಾದ ಫಲವನ್ನು ದಯಪಾಲಿಸುವಿ. ಇದೇನುಚಿತ್ರ!

(೨) ಪಂಚಭೂತಗಳು (ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ.) ಇವರ ತಾತ್ಪರ್ಯವೇನೆಂದರೆ : ವಾಯುಪುತ್ರನಾದ ಭೀಮನು ಆಕಾಶಗಾಮಿಯಾಗಿ, ಪೃಥ್ವಿ (ಭೂಮಿ) ಯಲ್ಲಿಹುಟ್ಟಿದವಳಾದ ಸೀತೆಯನ್ನು ನೋಡಿ, ತೇಜಸ್ಸನ್ನು (ಅಗ್ನಿಯನ್ನು) ಅಲ್ಲಿಟ್ಟು, ಪುನಃ ಅಪ್ಪನ್ನು (ಜಲವನ್ನು) ದಾಟಿದನು.

(೩) ಶ್ರೀಮತು ಗಣಪತಪ್ಪನಿಗ.

ಅನೇಕಲ್ಲು ಬೈರನ ಬಿನ್ನಹ. ಈ ಮಾರ್ಗಶಿರ ಶುದ್ಧ ಪಂಚಮಿ ಶುಕ್ರವಾರದವರಿಗೆ ಇಲ್ಲಿ ತೀರ್ಥರೂಪರು, ಸಾಭಾಗ್ಯವತಿಗಳೊಡನೆ, ನಾನು ಕ್ಷೇಮ. ಅಲ್ಲಿ ಚಿರಂಜೀವಿಗಳು, ಸಾಭಾಗ್ಯವತಿಗಳೊಡನೆ ನಿಮ್ಮ ಕ್ಷೇಮಕ್ಕೆ ಕಾಗದ ಬರೆಯಬೇಕು. ಸಾಂಪ್ರತ. ಇಲ್ಲಿ ಚಿಕ್ಕಬೈರಪ್ಪನಿಗೆ ಖರಸಂವತ್ಸರ ಜ್ಯೇಷ್ಠ ಬಹುಳ ಅಷ್ಟಮಿ ಸೋಮವಾರ ಭರಣೀ ನಕ್ಷತ್ರದಲ್ಲಿ ವಿವಾಹ ನಿರ್ಣಯಿಸಿ ಇದೆ. ಇದಕ್ಕೆ ಬೇಕಾದ ಪದಾರ್ಥಗಳು, ಅಕ್ಕಿ, ಗೋಧಿ, ಅಕ್ಕಿ, ತೊಗರೀಬೇಳೆ, ಅವರೆ, ಎಳ್ಳು, ಉದ್ದು, ಹುರಳಿ, ಉಪ್ಪು, ಇವುಗಳಲ್ಲದೆ ಕುಂಬಳಕಾಯಿ, ಪಜುವಲಕಾಯಿ ದಂಟು, ಸೀಬೇ ಹಣ್ಣು, ಸೋರೇಕಾಯಿ, ತೆಂಗಿನಕಾಯಿ, ಕೇವು, ಹಾಗಲಕಾಯಿ, ಹಲಸಿನಕಾಯಿ, ಬದನೇಕಾಯಿ, ಅಡಿಕೆ, ವಿಳ್ಯದೆಲೆ, ಜೀನು, ಹಾಲು, ಕಬ್ಬಿನ ಹಾಲು, ಬಾಳೇಹಣ್ಣು, ಮಜ್ಜಿಗೆ ಇವುಗಳನ್ನು ಎತ್ತುಗಳಮೇಲೆ ಹೇರಿಸಿಕೊಂಡು ದಯ ಮಾಡಿಸುವದು.

ಇಂತಿ ಬಿನ್ನಹ.

ಮಂತಬೋಧಿನಿ.

ಸಂಪುಟ ೨.] ಫೆಬ್ರುವರಿ. ೧೮೮೫. [ಸಂಚಿಕೆ ೫.

೧. ಆನಂದಬಾಯಿ ಜೋಷಿ.

ಬೊಂಬಾಯಿ ವಾಸಸ್ಥಳಾದ ಆನಂದಬಾಯಿ ಜೋಷಿ ಎಂಬಾಕೆಯು ವಿದ್ಯಾಭ್ಯಾಸವನ್ನು ಮಾಡಿ, ೩—೪ ಭಾಷೆಗಳಲ್ಲಿ ಒಳ್ಳೇ ಪಾಂಡಿತ್ಯವನ್ನು ಸಂಪಾದಿಸಿಕೊಂಡು, ಇಂಗ್ಲಿಷ್‌ನಲ್ಲಿಯೂ ಸಂಸ್ಕೃತದಲ್ಲಿಯೂ ಪ್ರವೀಣಳಾಗಿ ತನ್ನ ಪತಿಯ ಆಜ್ಞೆಯನ್ನು ತೆಗೆದುಕೊಂಡು, ಜಾತಿ ಭ್ರಷ್ಟತೆಯನ್ನು ಹೊಂದದೆ ಈ ದೇಶಕ್ಕೆ ಪುನಃ ಬರುವದಕ್ಕೋಸ್ಕರ ಬೇಕಾದ ಏರ್ಪಾಡುಗಳನ್ನು ಮಾಡಿಕೊಂಡು, ಅಮರಿಕಾಖಂಡಕ್ಕೆ ಹೋಗಿ, ಅಲ್ಲಿ ಪರೀಕ್ಷೆಯನ್ನು ಕೊಟ್ಟಳು. ಇನ್ನು ೫—೬ ತಿಂಗಳೊಳಗಾಗಿ ಪುನಃ ಸ್ವದೇಶವನ್ನು ಕುರಿತು ಬರುವಳಂತೆ. ಈಕೆಯು ಅಮರಿಕಾಖಂಡಕ್ಕೆ ಹೊರಡುವದಕ್ಕೆ ಮುಂಚೆ ಹಿಂದೂ ಮತ್ತು ಯೂರೊಪಿಯರ್ ಜಾತಿಯ ಸಾವಿರಾರು ಜನರು ಸೇರಿ ಇದ್ದ ಬಂದು ಸಭೆಯಲ್ಲಿ ತನ್ನ ಪ್ರಯಾಣದ ವಿಷಯದಲ್ಲಿ ಇಂಗ್ಲೀಷಿನಲ್ಲಿ ಆಡಿದ ಮಾತುಗಳನ್ನು ನೂಸ್‌ಪೇಪರ್‌ನಲ್ಲಿ ಅಚ್ಚು ಹಾಕಿದರು. ಅದರ ಅಭಿಪ್ರಾಯವನ್ನು ನಾವು ಇಲ್ಲಿ ಬರೆಯುತ್ತೇವೆ.

ಎಲೈ ಸಭೀಕರೇ!

ನಾನು ದೊಡ್ಡ ಕೆಲಸದಲ್ಲಿ ಪ್ರವರ್ತಿಸಿ ಇದ್ದೇನೆ. ಕಾರ್ಯವು ಸಫಲವಾಗುವದೋ ಇಲ್ಲವೋ ನನಗೆ ತಿಳಿಯದು. ನನ್ನ ಉದ್ದಿಶ್ಯವಾಗಿ ತಾವೆಲ್ಲರೂ ಈ ಸಭೆಗೆ ದಯಮಾಡಿಸಿರುವದಕ್ಕಾಗಿ ನಾನು ಬಹಳ ಕೃತಜ್ಞಳಾಗಿ ಇದ್ದೇನೆ. ಹಿಂದೂಸ್ತ್ರೀಯರು ಇಂಥಾ ಸಭೆಗಳಲ್ಲಿ ಪ್ರಾತನಾಡುವದೇ ಅಪೂರ್ವವೆಂಬದಾಗಿಯೂ, ನಾನು ಬಹಳ ರಮಣೀಯವಾಗಿ ಮಾತನಾಡುವೆನೆಂಬದಾಗಿಯೂ, ತಾವು ತಿಳಿದುಕೊಂಡು ಒಂದು ಇರಬಹುದು. ಆದರೆ

ಎಮ್ಮೇ ಮೇಲೆ ಮಳಿಗರೆದಹಾಗೆ.

ನಾನು ಸ್ವವಿಷಯವಾಗಿ ಮಾತನಾಡುತ್ತೇನಾದ್ದರಿಂದ ಅದು ಬಹುಶಃ ನಿಮಗೆ ರಮಣೀಯವಾಗಿ ಇರಲಾರದು. ನಾನು ಸಭಾ ಮುಖದಲ್ಲಿ ಮಾತನಾಡುವದಕ್ಕೆ ಇದೇ ಮೊದಲು. ನಾನು ಬಹಳ ವ್ಯಾಸಂಗ ಮಾಡಿದವಳಲ್ಲ. ಇದಲ್ಲದೆ ನಾನು ಈಗ ಅನ್ಯಭಾಷೆಯಲ್ಲಿ ಮಾತನಾಡಬೇಕಾಗಿದೆ. ಆದಕಾರಣ ಮಾತನಾಡತಕ್ಕ ಕಾಲದಲ್ಲಿ ಅನೇಕ ತಪ್ಪುಗಳಾಗಬಹುದು. ವಿದ್ಯಾರ್ಥಿಗಳೆಲ್ಲರೂ ನನ್ನ ಮಾತುಗಳನ್ನು ಕೇಳಿ ನಗಬಹುದು ; ಆದರೆ ವಿದ್ವಾಂಸರೆಲ್ಲರೂ ಕನಿಕರ ಪಡಬಹುದು. ಹೀಗಿದ್ದಾಗ್ಯೂ ಸ್ವವಿಷಯವಾಗಿ ಕೆಲವು ಅಂಶಗಳನ್ನು ಹೇಳುವೆನು. ಆದರಿಸಿ ಕೇಳಬೇಕು.

ನಾನು ವಿದ್ಯಾಭ್ಯಾಸಕ್ಕಾಗಿ ಅಮರಿಕಾಖಂಡಕ್ಕೆ ಹೋಗುವಂತೆ ನಿಷ್ಕರ್ಷೆಮಾಡಿ ಇದ್ದೇನೆ. ಇದನ್ನು ನೋಡಿ ನನ್ನ ಕ್ಷೇಮಚಿಂತಕರಾದ ಅನೇಕರು ಅನೇಕವಾಗಿ ನನ್ನನ್ನು ಪ್ರಶ್ನೆಮಾಡಿದರು. ಅವರಿಗೆಲ್ಲಾ ಬೇರೆಬೇರೆ ಉತ್ತರಗಳನ್ನು ಕೊಡುವದಕ್ಕಿಂತ ಮುಖ್ಯವಾದ ಪ್ರಶ್ನೆಗಳಿಗೆ ಸಭಾಮುಖದಲ್ಲಿ ಬಂದೇಸಾರಿ ಉತ್ತರಕೊಡುವದಾಗಿ ನಿಷ್ಕರ್ಷೆಮಾಡಿದೆನು.

೧ನೇ ಪ್ರಶ್ನೆ.—ನೀನು ಅಮರಿಕಾಖಂಡಕ್ಕೆ ಯಾತಕ್ಕೋಸ್ಕರ ಹೋಗಬೇಕು?

ಉತ್ತರ.— ವೈದ್ಯಶಾಸ್ತ್ರವನ್ನು ಅಭ್ಯಾಸಮಾಡುವದಕ್ಕೆ. ಈಗ ಇಂಡಿಯಾದೇಶದಲ್ಲಿ ವೈದ್ಯಶಾಸ್ತ್ರ ಪ್ರವೀಣರಾದವರು ಎಲ್ಲರೂ ಗಂಡಸರೇ ಹೊರ್ತು ಹೆಂಗಸರು ಯಾರೂ ಇಲ್ಲ. ಘನತೆಯನ್ನು ಹೊಂದಿದ ಅನೇಕ ಸ್ತ್ರೀಯರು ಅನೇಕ ರೋಗಗಳಿಗೆ ಗಂಡಸರಲ್ಲಿ ಔಷಧತೆಗದುಕೊಳ್ಳುವದಕ್ಕೆ ಇಷ್ಟವಿಲ್ಲದೆ ನಾನಾವಿಧ ಸಂಕಟಗಳನ್ನು ಪಟ್ಟು ಪ್ರಾಣವನ್ನು ಕೂಡ ಬಿಡುತ್ತಾರೆ. ಸ್ತ್ರೀಯರಿಗೆ ವಿದ್ಯಾಭ್ಯಾಸಮಾಡಿಸುವದಕ್ಕೂ, ವಸ್ತುತತ್ವಗಳನ್ನು ಹೇಳುವ ಅನೇಕ ಶಾಸ್ತ್ರಗಳನ್ನು ಅಭ್ಯಾಸಮಾಡಿಸುವದಕ್ಕೂ, ಸರಕಾರದವರೂ ಅನೇಕರು ದೊಡ್ಡಮನುಷ್ಯರೂ ನಾನಾವಿಧವಾದ ಏರ್ಪಾಡುಗಳನ್ನು ಮಾಡಿ ಇದ್ದಾರೆ. ಇವುಗಳೆಲ್ಲಾ ಇದ್ದಾಗ್ಯೂ ವೈದ್ಯಶಾಸ್ತ್ರವನ್ನು ತಿಳಿದ ಸ್ತ್ರೀಯರು ಇಲ್ಲದೆ ಇರುವದರಿಂದ ಇಂಡಿಯಾದಲ್ಲಿರುವ ದೊಡ್ಡಮನುಷ್ಯರ ಮನೇಸಂಗ

ಎರಡುದಾಸರಿಗೆ ನಂಬಿ ಕುರುಡುದಾಸ ಕೆಟ್ಟ.

ಸರಿಗೆ ಉಂಟಾಗತಕ್ಕ ಹಿಂಸೆಯನ್ನು ಯೋಚಿಸಿ ಅದಕ್ಕೆ ತಕ್ಕ ಏರ್ಪಾಡನ್ನು ಯಾರೂ ಮಾಡಲಿಲ್ಲ. ಇಂಗ್ಲಂಡಿನಿಂದಲೂ ಅಮರಿಕಾದ ವೈದ್ಯಶಾಸ್ತ್ರದಲ್ಲಿ ಗಟ್ಟಿಗರಾದ ಕೆಲವರು ಹೆಂಗಸರು ನಮ್ಮಲ್ಲಿಯೂ ಹೆಂಗಸರಿಗೆ ಔಷಧ ಕೊಡುವದಕ್ಕೋಸ್ಕರ ಬಂದು ಇದ್ದಾರೆ. ಇವರ ಭಾಷೆಗೂ ನಡೆನುಡಿಗಳಿಗೂ ಆಚಾರವ್ಯವಹಾರಗಳಿಗೂ ನಮ್ಮ ಭಾಷಾದಿಗಳಿಗೂ ತುಂಬಾ ತಾರತಮ್ಯ ವಿರುವದರಿಂದ ನಮ್ಮ ಸ್ತ್ರೀಯರು ಅವರಲ್ಲಿಯೂ ಔಷಧತೆಗದುಕೊಳ್ಳುವದಿಲ್ಲ. ನಮ್ಮ ಜನರೇ ವೈದ್ಯಶಾಸ್ತ್ರದಲ್ಲಿ ಪ್ರವೀಣರಾಗಿ ವೈದ್ಯಮಾಡುವದಕ್ಕೆ ಉಪಕ್ರಮಿಸಿದರೆ ಈ ಅಸಂದರ್ಭಗಳೆಲ್ಲಾ ತಪ್ಪಿಹೋಗುವವು. ಅದ್ದರಿಂದ ವೈದ್ಯಶಾಸ್ತ್ರಭ್ಯಾಸಕ್ಕಾಗಿ ನಾನು ಅಮರಿಕಾಖಂಡಕ್ಕೆ ಹೋಗುವೆನು.

ಪ್ರ ನೇದು.—ಇದಕ್ಕಾಗಿ ಅಮರಿಕಾ ಖಂಡಕ್ಕೇನೇ ಹೋಗಬೇಕೆ ? ಇಂಡಿಯಾದಲ್ಲಿಯೇ ವ್ಯಾಸಂಗ ಮಾಡುವದಕ್ಕಾಗುವದಿಲ್ಲವೆ ?

ಉತ್ತರ.—ಇಂಡಿಯಾದಲ್ಲಿ ಪಾಠಶಾಲೆಗಳೂ ಇವೆ, ಹೇಳತಕ್ಕವರೂ ಇದ್ದಾರೆ. ಆದರೆ ಹೇಳತಕ್ಕವರು ಗಂಡಸರು. ಹೆಂಗಸರು ಶಾಸ್ತ್ರವನ್ನು ಚನ್ನಾಗಿ ತಿಳಿದುಕೊಳ್ಳಬೇಕಾದರೆ ಶಾಸ್ತ್ರಪಾರಂಗತರಾದ ಹೆಂಗಸರಲ್ಲಿ ತಿಳಿಯಬೇಕು. ಗಂಡಸರಲ್ಲಿ ತಿಳಿದುಕೊಳ್ಳುವದಕ್ಕೆ ಅನೇಕ ಪ್ರತಿಬಂಧಕಗಳಿರುವವು. ಇದಲ್ಲದೆ ನಾನು ಬ್ರಾಹ್ಮಣ ಸ್ತ್ರೀಯು. ಕ್ರಿಸ್ತಮತ ಅಥವಾ ಬ್ರಹ್ಮಸಮಾಜಕ್ಕೆ ಸೇರಿದ ಸ್ತ್ರೀಯರು ಧಾರಾಳವಾಗಿ ಪಾಠಶಾಲೆಗಳಲ್ಲಿ ಓದುತ್ತಾರೆ. ಜನರೂಕೂಡ ಅವರಿಗೆ ಯಾವ ವಿಧವಾದ ಅವಮಾನವನ್ನೂ ಮಾಡುವದಿಲ್ಲ. ಬ್ರಾಹ್ಮಣಳಾಗಿದ್ದುಕೊಂಡು ಹೀಗೆ ಪಾಠಶಾಲೆಗೆ ಹೋಗುವದು ವಾಡಿಕೆಯಿಲ್ಲವಾದ್ದರಿಂದ ನಮ್ಮ ಇಂಡಿಯಾ ದೇಶದ ಹಿಂದೂಗಳಾದ ಸ್ತ್ರೀ ವಿದ್ಯಾರ್ಥಿಗಳಿಗೆ ನಾನಾವಿಧ ಹಿಂಸೆಗಳು ಉಂಟಾಗುವವು. ಯೂರೋಪಿಯರ್ಯ ಮತ್ತು ಈಸ್ಟ್‌ಇಂಡಿಯರ್ಯ ಜನಗಳು ಪಾಠಶಾಲೆಗೆ ಹೋಗುವದಕ್ಕೋಸ್ಕರ ಬೀದಿಯಲ್ಲಿ ಸಂಚರಿಸಿದರೆ ಅವರನ್ನು

ಜನರು ಕಣ್ಣೆತ್ತಿ ಕೂಡ ನೋಡುವದಿಲ್ಲ. ನಮ್ಮ ಜನಗಳಾದರೋ ಪುಸ್ತಕಗಳನ್ನು ತೆಗೆದುಕೊಂಡು ಹೊಸಲುಬಿಟ್ಟು ಈಚೆಗೆ ಒಂದರಿ ಅವರನ್ನೇ ನೋಡುವರು. ಗಾಡಿಯುಮೇಲೆ ಹೋದರೂ ನಡೆದುಕೊಂಡು ಹೋದರೂ ದುರುಗುಟ್ಟಿಕೊಂಡು ನೋಡಿ ಬಾಯಿಗೆ ಬಂದಹಾಗೆಲ್ಲಾ ಮಾತನಾಡುವರು. ಈ ಸಂಕಟಗಳನ್ನೆಲ್ಲಾ ನಾನು ಬಹಳವಾಗಿ ಅನುಭವಿಸಿದೆನು. ಕೆಲವು ವರ್ಷಗಳ ಕೆಳಗೆ ನಾನು ಬೊಂಬಾಯಿಯಲ್ಲಿ ಪಾಠಶಾಲೆಗೆ ಹೋಗುತ್ತಿದ್ದೆನು. ಆಗ ಅನೇಕರು ತಮ್ಮ ಮನೇ ಕಿಟಕಿಗಳಿಂದ ಪುಸ್ತಕಹಸ್ತಳಾದ ನನ್ನನ್ನು ಕಂಡು ನಗುತ್ತಿದ್ದರು. ದಾರಿಯಲ್ಲಿ ಗಾಡಿ ಕುದುರೆಗಳ ಮೇಲೆ ಹುಳತು ಹೋಗುವವರು ತಮ್ಮ ಗಾಡಿಗಳನ್ನು ನಿಲ್ಲಿಸಿ ನನ್ನನ್ನು ನೋಡಿ ನಗುತ್ತಿದ್ದರು. ಮತ್ತೆ ಕೆಲವರು ನನಗೆ ಕೇಳಿಸುವಂತೆ "ಇದೇ ನಾಶ್ಚರ್ಯ! ಮೋಜಾಗಳು ಮುಂತಾದ ವಿರಸನ್ನು ಹಾಕಿಕೊಂಡು ಪಾಠಶಾಲೆಗೆ ಹೋಗತಕ್ಕ ಈಕೆಯು ಯಾರು? ಇದೆಲ್ಲಾ ಕಲಿಯುಗದ ಚಿಹ್ನೆಗಳು; ಮಾಡತಕ್ಕದೇನು!" ಎಂಬುದಾಗಿ ವಿಧವಿಧವಾಗಿ ಮೂತನಾಡಿಕೊಳ್ಳುತ್ತಿದ್ದರು. ಒಂದಾನೊಂದುದಿವಸ ನಾನು ಪಾಠ ಶಾಲೆಯಿಂದ ಬರುವಾಗ ದಾರಿಯಲ್ಲಿ ಹೋಗುತ್ತಾ ಇದ್ದ ಕೆಲವು ಜನರೆಲ್ಲಾ ನನ್ನನ್ನು ಹಾಸ್ಯಮಾಡುತ್ತಲೂ ನಗುತ್ತಲೂ ದಾರಿಯಲ್ಲಿ ನನ್ನನ್ನು ಅಡ್ಡಹಾಕಿ ವಾಚಾಮಗೋಚರವಾದ ಮಾತುಗಳನ್ನೆಲ್ಲಾ ಅಂದು ನನ್ನ ಮುಖದಮೇಲೆ ಉಗುಳಿ ನನ್ನನ್ನು ಕಲ್ಲುಗಳಿಂದಲೂ ಹೊಡೆದರು. ಈ ಗುಂಪಿನಲ್ಲಿ ವೃದ್ಧರುಕೂಡ ಅನೇಕರು ಸೇರಿ ಇದ್ದರು. ಆದಿವಸ ನಾನು ಪ್ರಾಣಸಹಿತ ಮನೆಗೆ ಸೇರುವದೇ ವಿಶ ಪ್ರಯತ್ನವಾಯಿತು. ಬೊಂಬಾಯಿಯನ್ನು ಬಿಟ್ಟು ವಿದ್ಯಾರ್ಥಿಯಾಗಿ ಇಲ್ಲಿಗೆ ಬಂದಾಗ್ಯೂ ನನಗೆ ಈ ಸಂಕಟಗಳು ತಪ್ಪಲಿಲ್ಲ. ಈ ಬಂಗಾಳಾದೇಶದವರೂ ಕೂಡ ನನಗೆ ಬೊಂಬಾಯಿಯವರಿಗಿಂತ ಹೆಚ್ಚಾದ ಅವಮಾನವನ್ನು ಮಾಡಿ ಇದ್ದಾರೆ. ಸಾಯಂಕಾಲದ ವೇಳೆಯಲ್ಲಿ ಸಮುದ್ರತೀರಕ್ಕೆ ಸಂಚಾರಾರ್ಥವಾಗಿ ಹೋದರೆ ಯೂರೋಪಿಯನರೂ

ಎಲೆಗೆ ಕಾಯಿಮರೆ, ಕಾಯಿಗೆ ಎಲೆ ಮರೆ.

ಕೂಡ ನನ್ನೊಡನೆ ಮಾತನಾಡುವದಿಲ್ಲ. ಈ ಬಂಗಾಳಾ ಬಾಬು ಗಳಾವರೋ ಪರಿಚಯವಿಲ್ಲದಿದ್ದಾಗ್ಯೂ ದಾರಿಯಲ್ಲಿ ನನ್ನನ್ನು ನಿಲ್ಲಿಸಿ "ನೀನು ಯಾರು? ನೀನು ಯಾವ ಜಾತಿಯವಳು? ನೀನು ಎಲ್ಲಿಂದ ಬಂದೆ? ಎಲ್ಲಿಗೆ ಹೋಗುತ್ತೀಯೆ? ನೀನು ವಿಧವೆಯೆ? ಅಲ್ಲದೆ ಮುತ್ತೈದೆಯೆ? ನಿನ್ನ ನಡತೆ ಎಂಥಾದ್ದು? ನಿನಗೆ ಬಹಿಷ್ಕಾರ ಹಾಕಿ ಇವ್ವಾರೆಯೆ?" ಎಂದು ಇನ್ನೂ ಅನೇಕ ಅವಿವೇಕವಾದ ಪ್ರಶ್ನೆಗಳನ್ನು ಕೇಳಿ ನನ್ನನ್ನು ಹಿಂಸೆ ಪಡಿಸುತ್ತಾರೆ. ಇದು ಯುಕ್ತವೋ ಅಯುಕ್ತವೋ ನೀವೇ ತಿಳಿದುಕೊಳ್ಳಿರಿ. ಈ ಹಿಂಸೆಗಳನ್ನೆಲ್ಲಾ ತಪ್ಪಿಸಿಕೊಂಡು ವಿದ್ಯಾಭ್ಯಾಸ ಮಾಡುವದಕ್ಕೋಸ್ಕರ ನಾನು ಅಮೆರಿಕಾಖಂಡಕ್ಕೆ ಹೋಗುತ್ತೇನೆ.

೩ನೇ ಪ್ರಶ್ನೆ.—ನಿನ್ನ ಗಂಡನನ್ನೂ ಕರೆದುಕೊಳ್ಳದೆ ನೀನು ಬಬ್ಬಳೇ ಯಾತಕ್ಕೆ ಹೋಗುತ್ತೀಯೆ?

ಉತ್ತರ.—ನಾವಿಬ್ಬರೂ ಹೋಗುವಂತೆ ಮೊದಲು ಉದ್ದೇಶಮಾಡಿ ಕೊಂಡಿದ್ದೆವು. ಆದರೆ ದ್ರವ್ಯಾನುಕೂಲ ಕಡಿಮೆಯಾಗಿರುವದರಿಂದಲೂ, ನನ್ನ ಗಂಡನ ವೃದ್ಧರಾದ ತಂದೆತಾಯಿಗಳಿಗೂ ಸಹೋದರ ಸಹೋದರಿಯರಿಗೂ ಇತರಪೋಷಕರು ಇಲ್ಲದೆ ಇರುವದರಿಂದಲೂ, ಅತನು ಇಲ್ಲಿಯೇ ನಿಲ್ಲಬೇಕಾಯಿತು. ಈ ಕಾರಣಗಳಿಂದಲೇ ನಾನು ಅತನ ಅನುಜ್ಞೆಯನ್ನು ಪಡೆದು ಪ್ರಯಾಣಸಿದ್ಧಳಾಗಿ ಇದ್ದೇನೆ.

೪ನೇ ಪ್ರಶ್ನೆ..ನೀನು ಪುನಃ ಇಂಡಿಯಾಕ್ಕೆ ಬಂದಮೇಲೆ ನಿನಗೆ ಬಹಿಷ್ಕಾರ ಹಾಕುವರಲ್ಲಾ! ಅದಕ್ಕೆ ಏನು ಮಾಡುವಿ?

ಉತ್ತರ.—ನಾನು ಬಬ್ಬ ಪರಿಚಾರಕಳ ಸಂಗಡ ಹೋಗುವೆನು. ನನ್ನ ನಡೆನುಡಿಗಳಲ್ಲಿಯೂ ಆಹಾರವ್ಯವಹಾರಗಳಲ್ಲಿಯೂ ಮುತಾಚರಣೆಯಲ್ಲಿಯೂ ನನ್ನ ವರ್ಣಾಶ್ರಮ ಧರ್ಮವನ್ನು ಬಿಡದೆ ವಿದ್ಯಾಕಾಲಕ್ಷೇಪವನ್ನು ಮಾಡಿಕೊಂಡು ಹಿಂತಿರುಗಿ ಬರುವೆನು. ಇದೇ ಬಂದು

ದೊಡ್ಡ ಅಪರಾಧವೆಂದು ತಿಳಿದು ಕೊಂಡು ನನಗೆ ಬಹಿಷ್ಕಾರ ಹಾಕಿದ ಪಕ್ಷದಲ್ಲಿ ನನ್ನ ಯತ್ನವೇನಿದೆ? ಮತಾಧಿಕಾರಿಗಳು ಧರ್ಮಾಧರ್ಮ ಗಳನ್ನು ವಿಚಾರಿಸಿ ಬಹಿಷ್ಕಾರವನ್ನು ಹಾಕುವರೇ ಹೊರ್ತು ಮತ್ತೆ ಬೇರೆ ಇಲ್ಲ. ಈ ವಿಷಯದಲ್ಲಿ ನನಗೆ ಅಂಜಿಕೆಯಿಲ್ಲ, ಮತ್ತು ಈ ಭಯವನ್ನು ಇಟ್ಟುಕೊಂಡು ನಾನು ಉದ್ದೇಶಿಸಿರುವ ಕಾರ್ಯವನ್ನು ಬಿಡತಕ್ಕವಳಲ್ಲ.

ಏನೇ ಪ್ರಶ್ನೆ.—ದಾರಿಯಲ್ಲೇ ಆಗಲೀ ಅಮರಿಕಾಖಂಡದಲ್ಲಿಯೇ ಆಗಲೀ ರೋಗಾದಿ ಅನಿವಾರ್ಯಗಳು ಪ್ರಾಪ್ತವಾದರೆ ಏನು ಮಾಡುವಿ?

ಉತ್ತರ.— ಸಾಹಸಿಗಳಾದವರು ಉದ್ದೇಶಿಸಿದ ಕಾರ್ಯವನ್ನು ಆರಂಭಿಸಿ ಇದಕ್ಕೆ ಪ್ರತಿಬಂಧಕಗಳೇನು ಬಂದಾವೋ ಎಂಬುದಾಗಿ ಭಯಪಡುವದು ಅಪೂರ್ವ. ಅವರ ದೃಷ್ಟಿಗೆ ಮುಂದೆ ಬರತಕ್ಕ ಫಲಗಳು ಕಾಣುವವೇ ಹೊರ್ತು ಪ್ರತಿಬಂಧಕಗಳು ಕಾಣುವದಿಲ್ಲ. ಪ್ರಾಣ ಭಯವುಂತಾದ ವಿಪತ್ತುಗಳು ಪ್ರಾಪ್ತವಾದಾವು ಎಂದು ಅನೇಕರು ಹೇಳುವರು. ಬರತಕ್ಕ ವಿಪತ್ತುಗಳು ಇಲ್ಲಿದ್ದರೂ ತಪ್ಪಲಾರವು. ಇದಲ್ಲದೆ ಸಾಹಸಿಗಳು ಏನು ವಿಪತ್ತು ಬರುವದೋ ಎಂದು ಭಯ ಪಡುತ್ತಿದ್ದರೆ ಅವರ ಉದ್ದೇಶವು ನೆರವೇರಲಾರದು. ಧೈರ್ಯವೂ ಉತ್ಸಾಹವೂ ಇರುವವರು ಎಂಥಾ ಪ್ರತಿಬಂಧಕಗಳು ಬಂದಾಗ್ಯೂ ಅವುಗಳನ್ನು ನಿವಾರಿಸಿಕೊಂಡು ಫಲವನ್ನೇ ಹೊಂದುವರು. ಪ್ರಾಣಿಗಳಿಗೆ ಉಂಟಾಗತಕ್ಕ ರೋಗ ದುಃಖ ಮರಣಾದಿ ಸಂಕಟಗಳೆಲ್ಲಾ ಸಂಚಾರ ಮಾಡತಕ್ಕವರಿಗೂ ಸ್ವದೇಶದಲ್ಲಿರುವವರಿಗೂ ಸಮನಾಗಿಯೇ ಇರುವವು. ಇವುಗಳ ಭಯದಿಂದ ಉದ್ಯೋಗಿಸಿದ ಕೆಲಸವನ್ನು ಬಿಡಬಾರದು. ಉದ್ಯೋಗಿಸಿದ ಕಾರ್ಯವು ಉತ್ತಮವಾದದ್ದಾದಪಕ್ಷದಲ್ಲಿ ಯಾವದಕ್ಕೂ ಹೆದರದೆ ಕಾರ್ಯವನ್ನು ನೆರವೇರಿಸಬೇಕು. ಮಾಡಿದ ಕಾರ್ಯವು ಸಫಲವಾದರೆ ಲೋಕದಲ್ಲಿ ಎಲ್ಲರೂ ಸ್ತೋತ್ರಮಾಡುವರು; ನಿಷ್ಫಲವಾದರೆ ಹಾಸ್ಯಮಾಡುವರು. ನನ್ನ

ಎಲ್ಲಾ ಬಣ್ಣ ಮಸಿ ನುಂಗಿತು.

ಪ್ರಯತ್ನವು ಸಫಲವಾಗಿ ನಮ್ಮ ದೇಶೀಯರ ಮೆಚ್ಚಿಕೆಗೆ ನಾನು ಪಾತ್ರಳಾದರೆ ಸಂತೋಷಪಡುವೆನು; ಹಾಗಲ್ಲದೆ ವಿಧಿಸಂಕಲ್ಪದಿಂದ ದುಃಖಗಳು ಪ್ರಾಪ್ತವಾದರೆ ಅವುಗಳನ್ನೂ ಅನುಭವಿಸುವೆನು. ಲೋಕದಲ್ಲಿ ಕಷ್ಟವಿಲ್ಲದೆ ಸುಖ ಬರಲಾರದು. ದೇಶಸಂಚಾರದಿಂದ ಬುದ್ಧಿಕೌಶಲ್ಯ ಉಂಟಾಗುವದು; ಅನೇಕವಿಷಯಗಳು ತಿಳಿಯುವವು. ಪರದೇಶಸಂಚಾರಮಾಡಿ ಅಲ್ಲಿನ ಶಾಸ್ತ್ರಾದಿವಿಷಯಗಳನ್ನು ತಿಳಿದು ಕೊಂಡು ನಮ್ಮದೇಶದ ಶಾಸ್ತ್ರಗಳನ್ನೂ ತಿಳಿದುಕೊಳ್ಳುವದು ಉತ್ತಮವಾದದ್ದು. ಆದಕಾರಣವೇ ನಾನು ಅಮರಿಕಾಕ್ಕೆ ಹೋಗುವಂತೆ ನಿಷ್ಕರ್ಷೆಮಾಡಿ ಇದ್ದೇನೆ. ಮನುವು ಹೇಳುವದೇನಂದರೆ :— "ಯಥಾಯಥಾಹಿಪುರುಷಃ ಶಾಸ್ತ್ರಂ ಸಮಿಪಿ ಗಚ್ಛತಿ ॥ ತಥಾತಥಾ ವಿಜಾನಾತಿ ವಿಜ್ಞಾನಂ ಚಾಸ್ಯರೋಚತೆ ॥" ನಮ್ಮ ಆಚಾರ ವ್ಯವಹಾರಗಳನ್ನೂ ನಾವು ಮುಂದೆ ಬದುಕತಕ್ಕ ಮಾರ್ಗಗಳ ನ್ನೂ ಚನ್ನಾಗಿ ಆಲೋಚಿಸಿದೆನು. ಹ್ಯಾಗೆ ಹ್ಯಾಗೆ ನೋಡಿ ದಾಗ್ಯೂ ನಮ್ಮ ಸ್ತ್ರೀಯರು ತಾವು ಬದುಕತಕ್ಕ ಮಾರ್ಗವ ನ್ನು ಅರಿಯರೆಂದು ತೋರುತ್ತದೆ. ಸರ್ವವಿಧದಲ್ಲಿಯೂ ನಮ್ಮ ಬುದ್ಧಿಯನ್ನು ಪ್ರಚಾರಗೊಳಿಸಿ ಸಾಹಸದಿಂದ ಕರ್ತವ್ಯವಾದ ಕಾರ್ಯ ಗಳನ್ನು ನೆರವೇರಿಸಿ ತಾವೂ ಸುಖಪಡುತ್ತ ಪರರಿಗೂ ಸುಖವನ್ನು ಉಂಟುಮಾಡತಕ್ಕ ಶಕ್ತಿಯನ್ನು ಎಲ್ಲರೂ ಪಡೆಯಬೇಕು. ಆದ ಕಾರಣ ದೇವರಮೇಲೆ ಭಾರಹಾಕಿ ವೈದ್ಯಶಾಸ್ತ್ರದಲ್ಲಿ ಪ್ರವೀಣಳಾಗಿ ಪರರಿಗೆ ಹಿತವನ್ನುಮಾಡಿ ಜೀವನ ಮಾಡಿಕೊಳ್ಳುವದಕ್ಕೋಸ್ಕರ ಅಮರಿಕಾಖಂಡಕ್ಕೆ ಹೋಗಬೇಕೆಂದು ನಿಷ್ಕರ್ಷೆಮಾಡಿ ಇದ್ದೇನೆ.

ಒನೇ ಪ್ರಶ್ನೆ.— ನಿನ್ನ ದೇಶೀಯರಾದ ಯಾವ ಸ್ತ್ರೀಯರೂ ಮಾಡದೆಇರ ತಕ್ಕ ಕಾರ್ಯವನ್ನು ಮಾಡುವೆನೆಂದು ನೀನು ಯಾತಕ್ಕೆ ಉದ್ಯೋಗಿಸುತ್ತಿ?

ಉತ್ತರ—. ಲೋಕದಲ್ಲಿ ಸಕಲರೂ ತಮಗೆ ಯುಕ್ತವಾದದ್ದೆಂದು ತೋರಿ ದ್ದನ್ನು ಮಾಡುತ್ತಲೇ ಇದ್ದಾರೆ. ಹಾಗೆ ಯುಕ್ತವಾದ ಕೆಲಸಗ

ದೊಡ್ಡ ಅಪರಾಧವೆಂದು ತಿಳಿದು ಕೊಂಡು ನನಗೆ ಬಹಿಷ್ಕಾರ ಹಾಕಿದ ಪಕ್ಷದಲ್ಲಿ ನನ್ನ ಯತ್ನವೇನಿದೆ? ಮುಂತಾಧಿಕಾರಿಗಳು ಧರ್ಮಾಧರ್ಮ ಗಳನ್ನು ವಿಚಾರಿಸಿ ಬಹಿಷ್ಕಾರವನ್ನು ಹಾಕುವರೇ ಹೊರ್ತು ಮತ್ತೆ ಬೇರೆ ಇಲ್ಲ. ಈ ವಿಷಯದಲ್ಲಿ ನನಗೆ ಅಂಜಿಕೆಯಿಲ್ಲ, ಮತ್ತು ಈ ಭಯವನ್ನು ಇಟ್ಟುಕೊಂಡು ನಾನು ಉದ್ದೇಶಿಸಿರುವ ಕಾರ್ಯವನ್ನು ಬಿಡತಕ್ಕವಳಲ್ಲ.

ಇನೇ ಪ್ರಶ್ನೆ.—ದಾರಿಯಲ್ಲೇ ಆಗಲೀ ಅಮರಿಕಾಖಂಡದಲ್ಲಿಯೇ ಆಗಲೀ ರೋಗಾದಿ ಅನಿವಾರ್ಯಗಳು ಪ್ರಾಪ್ತವಾದರೆ ಏನು ಮಾಡುವಿ?

ಉತ್ತರ.— ಸಾಹಸಿಗಳಾದವರು ಉದ್ದೇಶಿಸಿದ ಕಾರ್ಯವನ್ನು ಆರಂಭಿಸಿ ಇದಕ್ಕೆ ಪ್ರತಿಬಂಧಕಗಳೇನು ಬಂದಾವೋ ಎಂಬುದಾಗಿ ಭಯಪಡು ವದು ಅಪೂರ್ವ. ಅವರ ದೃಷ್ಟಿಗೆ ಮುಂದೆ ಬರತಕ್ಕ ಫಲಗಳು ಕಾಣುವವೇ ಹೊರ್ತು ಪ್ರತಿಬಂಧಕಗಳು ಕಾಣುವದಿಲ್ಲ. ಪ್ರಾಣ ಭಯವುಂಟಾದ ವಿಪತ್ತುಗಳು ಪ್ರಾಪ್ತವಾದಾವು ಎಂದು ಅನೇಕರು ಹೇಳುವರು. ಬರತಕ್ಕ ವಿಪತ್ತುಗಳು ಇಲ್ಲಿದ್ದರೂ ತಪ್ಪಲಾರವು. ಇದಲ್ಲದೆ ಸಾಹಸಿಗಳು ಏನು ವಿಪತ್ತು ಬರುವದೋ ಎಂದು ಭಯ ಪಡುತ್ತಿದ್ದರೆ ಅವರ ಉದ್ದೇಶವು ನೆರವೇರಲಾರದು. ಧೈರ್ಯವೂ ಉತ್ಸಾಹವೂ ಇರುವವರು ಎಂಥಾ ಪ್ರತಿಬಂಧಕಗಳು ಬಂದಾಗ್ಯೂ ಅವುಗಳನ್ನು ನಿವಾರಿಸಿಕೊಂಡು ಫಲವನ್ನೇ ಹೊಂದುವರು. ಪ್ರಾ ಣಿಗಳಿಗೆ ಉಂಟಾಗತಕ್ಕ ರೋಗ ದುಃಖ ಮರಣಾದಿ ಸಂಕಟಗಳೆಲ್ಲಾ ಸಂಚಾರ ಮಾಡತಕ್ಕವರಿಗೂ ಸ್ವದೇಶದಲ್ಲಿರುವವರಿಗೂ ಸಮಾನವಾಗಿ ಯೇ ಇರುವವು. ಇವುಗಳ ಭಯದಿಂದ ಉದ್ಯೋಗಿಸಿದ ಕೆಲಸ ವನ್ನು ಬಿಡಬಾರದು. ಉದ್ಯೋಗಿಸಿದ ಕಾರ್ಯವು ಉತ್ತಮವಾ ದದ್ದಾದಪಕ್ಷದಲ್ಲಿ ಯಾವದಕ್ಕೂ ಹೆದರದೆ ಕಾರ್ಯವನ್ನು ನೆರವೇರಿಸ ಬೇಕು. ಮಾಡಿದ ಕಾರ್ಯವು ಸಫಲವಾದರೆ ಲೋಕದಲ್ಲಿ ಎಲ್ಲರೂ ಸ್ತೋತ್ರಮಾಡುವರು; ನಿಷ್ಫಲವಾದರೆ ಹಾಸ್ಯಮಾಡುವರು. ನನ್ನ

ಎಲ್ಲಾ ಬಣ್ಣ ಮಸಿ ನುಂಗಿತು.

ಪ್ರಯತ್ನವು ಸಫಲವಾಗಿ ನಮ್ಮ ದೇಶೀಯರ ಮೆಚ್ಚಿಕೆಗೆ ನಾನು ಪಾತ್ರಳಾದರೆ ಸಂತೋಷಪಡುವೆನು; ಹಾಗಲ್ಲದೆ ವಿಧಿಸಂಕಲ್ಪದಿಂದ ದುಃಖಗಳು ಪ್ರಾಪ್ತವಾದರೆ ಅವುಗಳನ್ನೂ ಅನುಭವಿಸುವೆನು. ಲೋಕದಲ್ಲಿ ಕಷ್ಟವಿಲ್ಲದೆ ಸುಖ ಬರಲಾರದು. ದೇಶಸಂಚಾರದಿಂದ ಬುದ್ಧಿ ಕೌಶಲ್ಯ ಉಂಟಾಗುವದು; ಅನೇಕವಿಷಯಗಳು ತಿಳಿಯುವವು. ಪರದೇಶಸಂಚಾರಮಾಡಿ ಅಲ್ಲಿನ ಶಾಸ್ತ್ರಾದಿವಿಷಯಗಳನ್ನು ತಿಳಿದು ಕೊಂತು ನಮ್ಮದೇಶದ ಶಾಸ್ತ್ರಗಳನ್ನೂ ತಿಳಿದುಕೊಳ್ಳುವದು ಉತ್ತಮವಾದದ್ದು. ಆದಕಾರಣವೇ ನಾನು ಅಮರಿಕಾಕ್ಕೆ ಹೋಗುವಂತೆ ನಿಶ್ಚಯಿಸಿ ಇದ್ದೇನೆ. ಮನುವು ಹೇಳುವದೇನೆಂದರೆ :— "ಯಥಾಯಥಾಹಿಪುರುಷಃ ಶಾಸ್ತ್ರಂ ಸಮುಪಿ ಗಚ್ಛತಿ ॥ ತಥಾತಥಾ ವಿಜಾನಾತಿ ವಿಜ್ಞಾನಂ ಚಾಸ್ಯರೋಚತೆ ॥" ನಮ್ಮ ಆಚಾರ ವ್ಯವಹಾರಗಳನ್ನೂ ನಾವು ಮುಂದೆ ಬದುಕತಕ್ಕ ಮಾರ್ಗಗಳ ನ್ನೂ ಚನ್ನಾಗಿ ಆಲೋಚಿಸಿದೆನು. ಹ್ಯಾಗೆ ಹ್ಯಾಗೆ ನೋಡಿ ದಾಗ್ಯೂ ನಮ್ಮ ಸ್ತ್ರೀಯರು ತಾವು ಬದುಕತಕ್ಕ ಮಾರ್ಗವ ನ್ನು ಅರಿಯರೆಂದು ತೋರುತ್ತದೆ. ಸರ್ವವಿಧದಲ್ಲಿಯೂ ನಮ್ಮ ಬುದ್ಧಿಯನ್ನು ಪ್ರಚಾರಗೊಳಿಸಿ ಸಾಹಸದಿಂದ ಕರ್ತವ್ಯವಾದ ಕಾರ್ಯ ಗಳನ್ನು ನಿರವೇರಿಸಿ ತಾವೂ ಸುಖಪಡುತ್ತ ಪರರಿಗೂ ಸುಖವನ್ನು ಉಂಟುಮಾಡತಕ್ಕ ಶಕ್ತಿಯನ್ನು ಎಲ್ಲರೂ ಪಡೆಯಬೇಕು. ಆದ ಕಾರಣ ದೇವರಮೇಲೆ ಭಾರಹಾಕಿ ವೈದ್ಯಶಾಸ್ತ್ರದಲ್ಲಿ ಪ್ರವೀಣಳಾಗಿ ಪರರಿಗೆ ಹಿತವನ್ನು ಮಾಡಿ ಜೀವನ ಮಾಡಿಕೊಳ್ಳುವದಕ್ಕೋಸ್ಕರ ಅಮರಿಕಾಖಂಡಕ್ಕೆ ಹೋಗಬೇಕೆಂದು ನಿಶ್ಚಯಿಸಿ ಇದ್ದೇನೆ.

ಒನೇ ಪ್ರಶ್ನೆ.— ನಿನ್ನ ದೇಶೀಯರಾದ ಯಾವ ಸ್ತ್ರೀಯರೂ ಮಾಡದಿಇರ ತಕ್ಕ ಕಾರ್ಯವನ್ನು ಮಾಡುವೆನೆಂದು ನೀನು ಯಾತಕ್ಕೆ ಉದ್ಯೋಗಿಸುತ್ತಿ?

ಉತ್ತರ—. ಲೋಕದಲ್ಲಿ ಸಕಲರೂ ತಮಗೆ ಯುಕ್ತವಾದದ್ದೆಂದು ತೋರಿ ದ್ದನ್ನು ಮಾಡುತ್ತಲೇ ಇದ್ದಾರೆ. ಹಾಗೆ ಯುಕ್ತವಾದ ಕೆಲಸಗ

ಳನ್ನು ಮಾಡುವದಕ್ಕೆ ಹೆದರುವವರು ಹೇಡಿಗಳೇ ಸರಿ. ಲೋಕಕ್ಕೆ ಹಿತಕರವಾವ ಕಾರ್ಯ್ಯಗಳು ಎಲ್ಲರಿಗೂ ಹಿತಕರವಾದವುಗಳೇ. ಲೌಕಿಕಪ್ರತಿಬಂಧಕಗಳಿಗೋಸ್ಕರ ಹೆದರಿಕೊಂಡು ಕರ್ತವ್ಯವಾದ ಕಾರ್ಯ್ಯವನ್ನು ಮಾಡದೆ ಬಿಡತಕ್ಕವರು ಮಹಾಪಾತಕಿಗಳು. ಮನುವು ಹೀಗೆಂದು ಹೇಳಿ ಇದ್ದಾನೆ:— "ಅಕೃತ್ಯಂ ನೈವಕರ್ತವ್ಯಂ ಪ್ರಾಣ ತ್ಯಾಗೇಪಿ ಸಂಸ್ಥಿತೆ | ನಚಕೃತ್ಯಂ ಪರಿತ್ಯಾಜ್ಯಂ ಧರ್ಮ್ಮಏವ ಸನಾತನಃ ||"

ಇನ್ನ್ಯಾರೂ ಈ ಕೆಲಸವನ್ನು ಮಾಡಲಿಲ್ಲವೆಂಬುವದೇ ನಾನು ಇದನ್ನು ಬಿಡುವದಕ್ಕೆ ಕಾರಣವಲ್ಲ. ನಮ್ಮ ಪೂರ್ವಿಕರೆಲ್ಲರೂ ಯಾರೂ ಮಾಡದ ಕೆಲಸವನ್ನು ನಾವು ಹ್ಯಾಗೆ ಮಾಡುವದು ಎಂದು ಅಂದುಕೊಂಡು ಸುಮ್ಮನೆ ಇದ್ದರೆ ಈಗ ನಾವು ಆಚರಿಸತಕ್ಕ ವ್ಯವಹಾರಗಳು ಹ್ಯಾಗೆತಾನೆ ಆಗುತ್ತಿದ್ದವು? ಆರಂಭಿಸಿದ ಕೆಲಸದಲ್ಲಿ ಫಲೋತ್ಪತ್ತಿಯನ್ನು ಪಡೆಯಬೇಕು; ಇಲ್ಲದಿದ್ದರೆ ಪ್ರಾಣತ್ಯಾಗವನ್ನಾದರೂ ಮಾಡಿಕೊಳ್ಳಬೇಕು. ಮನುವು ಹೀಗೆಂದು ಹೇಳಿದ್ದಾನೆ:— "ಆರಭ್ಯತೇ ನಖಲು ವಿಘ್ನ ಭಯೇನ ನೀಚೈಃ ಆರಭ್ಯ ವಿಘ್ನ ನಿಹತಾ ವಿರಮಂತಿ ಮಧ್ಯಾಃ || ಮಧ್ಯೇ ಪುನಃಪುನರಪಿ ಪ್ರತಿಹನ್ಯಮಾನಾಃ ಪ್ರಾರಬ್ಧಮುತ್ತಮಜನಾ ನಪರಿತ್ಯಜಂತಿ ||"

ವಿಘ್ನ ಭಯದಿಂದ ಬಂದು ಕೆಲಸವನ್ನು ಪ್ರಾರಂಭಿಸದೆ ಇರುವವರು ನೀಚರು; ಕೆಲಸವನ್ನು ಆರಂಭಿಸಿ ಮಧ್ಯೆ ವಿಘ್ನಗಳು ಬಂದು ಬಿದ್ದಿದರೆ ಅದನ್ನು ಅಲ್ಲಿಗೇ ಬಿಟ್ಟುಬಿಡುವವರು ಮಧ್ಯಮರು; ಹಾಗಲ್ಲದೆ ಮಧ್ಯದಲ್ಲಿ ಎಷ್ಟು ವಿಘ್ನಗಳು ಬಂದು ಪ್ರಾಪ್ತಿಸಿದರೂ ಬಿಡದೆ ಕಾರ್ಯ್ಯವನ್ನು ನೆರವೇರಿಸುವವರು ಉತ್ತಮರು. ಎಷ್ಟು ವಿಘ್ನಗಳು ಬಂದರೂ ಅವುಗಳನ್ನು ಲಕ್ಷ್ಯಮಾಡದೆ ಆರಂಭಿಸಿದ ಕಾರ್ಯ್ಯವನ್ನು ನೆರವೇರಿಸಬೇಕು. ಆದದರಿಂದ ಪ್ರಾರಂಭಿಸಿದ ಈ ಯುಕ್ತವಾದ ಕಾರ್ಯ್ಯವನ್ನು ನಾನು ಬಿಡತಕ್ಕವಳಲ್ಲ. ತಾವೆಲ್ಲರೂ ದಯಮಾಡಿ ಎಷ್ಟು ಕಾಲವಾದರೂ ನಿಂತದ್ದಕ್ಕಾಗಿ ತುಂಬಾ ಕೃತಜ್ಞಳಾಗಿ ಇದ್ದೇನೆ.

ಎಲ್ಲಾ ಹೊಕ್ಕಿತು, ಬಾಲಮಾತ್ರ ಉಳಿಯಿತು.

೨. ವೈದ್ಯಶಾಸ್ತ್ರ. (ಜ್ವರ.)

ರೋಗಗಳಲ್ಲೆಲ್ಲಾ ಒಹಳ ವಾಡಿಕೆಯಾಗಿ ಬರತಕ್ಕದ್ದು ಜ್ವರವು. ಜ್ವರ ಬಂದಾಗ ಚರ್ಮವು ಬಿಸಿಯಾಗುವದು; ನಾಡಿಯು ೨—೩ ಘಂಟೆಗಳ ವರಿಗೂ ಅವಿಚ್ಛಿನ್ನವಾಗಿ ವೇಗವಾಗಿರುವದು; ತಲೆ ನೋಯುವದು; ನಿದ್ರೆ ಬರುವದಿಲ್ಲ; ಬಾಯಿಯಲ್ಲಿ ಕೆಟ್ಟವಾಸನೆ ಹುಟ್ಟುವದು; ದಾಹ ಹೆಚ್ಚುವದು; ಹಸಿವು ಮುಚ್ಚಿಹೋಗುವದು. ಜ್ವರ ಬರುವದಕ್ಕೆ ಮುಂಚೆ ಚಳಿ ಬರುವದೂ ಉಂಟು. ಜ್ವರದ ತರುವಾಯ ಶರೀರವು ಬೆವರಿ ತಣಿವು, ತಲೆ ನೋವು, ದಾಹ, ನಾಡೀಚಲನ, ಇವೆಲ್ಲಾ ಕ್ರಮೇಣ ಕಡಿಮೆಯಾಗುವವು. ಜ್ವರದ ಕಾಲದಲ್ಲಿ ರಕ್ತ ಚಲನೆಯು ಹೆಚ್ಚಾಗಿ, ಆಹಾರವು ಕಡಿಮೆಯಾಗಿ, ಶರೀರದ ಉಷ್ಣವೂ ಕಡಿಮೆಯಾಗುವದರಿಂದ ದೇಹವು ಕೃಶವಾಗುವದು.

ಜ್ವರವು ರಕ್ತ ಕೆಡುವವರಿಂದಲೂ ಬರುವದುಂಟು. ಇದಲ್ಲದೆ ಶರೀರದಲ್ಲಿ ವ್ರಣ ಮುಂತಾದವುಗಳಿಂದ ರಕ್ತದಲ್ಲಿ ಸೇರಿದ ವಿಷದಿಂದ ಜ್ವರಬಂದ ಕಾಲದಲ್ಲಿ ಅದು ಬಲವಾದದ್ದೆಂದು ತಿಳಿಯಬೇಕು. ವ್ರಣಸಂಬಂಧವಾದ ಜ್ವರಗಳು ಆ ವ್ರಣವನ್ನು ಪರಿಹಾರಮಾಡುವದರಿಂದಲೇ ವಾಸಿಯಾಗುವವು. ಜ್ವರಗಳಲ್ಲಿ ಪ್ರತಿನಿತ್ಯವೂ ಬರತಕ್ಕ ಜ್ವರಕ್ಕೆ ಸಂತತಜ್ವರವೆಂದು ಹೇಳುವರು. ಇದಲ್ಲದೆ ಜ್ವರಗಳು ದಿನ ಬಿಟ್ಟು ದಿನ, ೪ ದಿನಕ್ಕೆ ೧ ಸಾರಿ ಹೀಗೆ ಕಾಲ ತಪ್ಪಿ ಬರುವದುಂಟು. ಹೀಗೆ ಬಿಟ್ಟುಬಿಟ್ಟು ಬರತಕ್ಕ ಜ್ವರಗಳು ಕೆಟ್ಟಗಾಳಿಯಿಂದ ಹುಟ್ಟುವ ವಿಷಜನ್ಯವಾದವುಗಳು.

ರೋಗಿಯು ಜ್ವರಪೀಡಿತನಾಗಿರುವಾಗ ವೈದ್ಯನು ಚಿಕಿತ್ಸೆಯಿಂದ ಮೊದಲು ಶರೀರದ ಕಾವನ್ನು ಕಡಿಮೆಮಾಡಬೇಕು; ನಾಡೀಚಲನೆಯನ್ನು ಪೂರ್ವಸ್ಥಿತಿಗೆ ತರಬೇಕು; ಮೈ ಬೆವರುವಹಾಗೂ ಜಲಮಲಗಳು ಕ್ರಮವಾಗಿ ವಿಸರ್ಜನೆಯಾಗುವಹಾಗೂ ತಕ್ಕ ಚಿಕಿತ್ಸೆ ಮಾಡಿ ಆ ಕಾಲಕ್ಕೆ ತಕ್ಕ ಅಂದರೆ ಸುಲಭವಾಗಿ ಜೀರ್ಣಕ್ಕೆ ಒರುವ ಆಹಾರವನ್ನು ಕೊಡಬೇಕು. ತಾಪವನ್ನು ಕಡಿಮೆಮಾಡುವವಕ್ಕೊಸ್ಕರ ಹುಳೀ ದ್ರಾಕ್ಷೀರಸವನ್ನೂ (ಇದಕ್ಕೆ ತುರುಕರು ಅಂಗೂರಾ ಸಿರ್ಕಾ ಎಂದು ಹೇಳುತ್ತಾರೆ.) ನೀರನ್ನೂ ಬೆರಸಿ

ಏಕಮತ್ಯ ಕಾಕಮಾಡದು.

ಬೆಚ್ಚಗೆಮಾಡಿ ಆಚರಲ್ಲಿ ಸ್ಪಂಜನ್ನು ಅದ್ದಿ ಮೈಗೆ ಸವರುವದುಂಟು. ತಣ್ಣಗಿರತಕ್ಕ ವಗರುನೀರನ್ನು ಕುಡಿಯುವದಕ್ಕೆ ಕೊಡುವದುಂಟು. ಇದು ಜ್ವರವು ಸಾಮಾನ್ಯವಾಗಿದ್ದಾಗ ಚಿಕಿತ್ಸೆ. ಇದಲ್ಲದೆ ಸಾಮಾನ್ಯಜ್ವರವು ಬಂದಾಗ ತುಂಗಮುಸ್ತೆ, ಪರ್ಪಾಟ್ಟಕ, ಕಹಿಪಡವಲ, ನಾರುಂಬೇಳೆ, ನಾಯಿಬೇಲ, ವಿಷ್ಣುಕ್ರಾಂತಿ, ಲಾವುಂಚ, ಬಜೆ, ಶ್ರೀಗಂಧ ಇವುಗಲ್ಲಿ ಯಾವದಾದರೂ ಬಂದನ್ನು ಕಷಾಯಹಾಕಿ ಕುಡಿಯುತ್ತಾ ಬಂದರೆ ಬೆವರುಹುಟ್ಟುವದು. ರಸಕರ್ಪೂರವನ್ನು ಜೀನುತುಪ್ಪದಲ್ಲಿ ತೇದು ಕೊಡುವದು ಈ ದೇಶದ ವೈದ್ಯ. ನಿಲಾಂಜನ ಭಸ್ಮವನ್ನೂ ರಸ ಭಸ್ಮವನ್ನೂ ಸೇರಿಸಿಕೊಡುವದು ಇಂಗ್ಲೀಷ್‌ವೈದ್ಯವು. ಜ್ವರವು ಬಹಳ ಹೆಚ್ಚಾಗಿದ್ದಾಗ ಕೆಲವು ಇಂಗ್ಲೀಷ್ ವೈದ್ಯರು ತಲೆಗೆ ಹಿಮವನ ಗಡ್ಡೆಯಲ್ಲಿ ಮಾಡಿದ ಟೋಪಿಯನ್ನು ಹಾಕಿ ಶರೀರಕ್ಕೆ ಬದ್ದೀಬಟ್ಟೆಯನ್ನು ಸುತ್ತಿ ಹೊಟ್ಟೆಗೂ ತಂಪು ಮಾಡತಕ್ಕ ಔಷಧಗಳನ್ನು ಕೊಡುವರು.

ಜ್ವರ ಪೀಡಿತರಾದವರಿಗೆ ಶರೀರಕ್ಕೂ ಮನಸ್ಸಿಗೂ ಬಾಧಕವಾಗತಕ್ಕ ಯಾವ ಕೆಲಸವನ್ನೂ ಮಾಡಬಾರದು, ಅಂದರೆ ಅವರನ್ನು ಮೆತ್ತಗಿರುವ ಹಾಸಿಗೇಮೇಲೆ ಮಲಗಿಸಿ ಉಪಚಾರ ಮಾಡುವದಕ್ಕೆ ಮಾತ್ರ ಒಬ್ಬರು ಸಮೀಪದಲ್ಲಿ ಇರಬೇಕು ; ಅವರ ಶರೀರಕ್ಕೂ ಮನಸ್ಸಿಗೂ ವಿಶ್ರಾಂತಿಯು ಅವಶ್ಯವಾಗಿ ಬೇಕಾಗಿರುವಕಾರಣ ಅವರು ಇರತಕ್ಕ ಮನೆಯಲ್ಲಿ ಗಲಭೆಯಿಲ್ಲದೆ ಇರಬೇಕು ; ಇವರೊಂದಿಗೆ ಮಾತನಾಡುವದಕ್ಕೂಸ್ಕರ ಬಂಧು ಮಿತ್ರರನ್ನು ಕೂಡ ಬಿಡಕೂಡದು. ಮಾತನಾಡುವದರಿಂದ ಅವರಿಗೆ ಬಾಧಕವಾಗುವದು. ಅವರು ಇರತಕ್ಕ ಮನೆಯು ವಿಸ್ತಾರವಾಗಿಯೂ ನಿರ್ಮಲವಾದ ಗಾಳಿಯ ಸಂಚಾರವುಳ್ಳದ್ದಾಗಿಯೂ ಇರಬೇಕು ; ಆ ರೋಗಿಯ ಬಳಿಗೆ ಹೋಗತಕ್ಕವರ ಕಾಲಿನ ಶಬ್ದಕೂಡ ಕೇಳಬರಬಾರದು ; ಮತ್ತಾರೂ ಅಲ್ಲಿ ಮಾತನಾಡಕೂಡದು.

ಪ್ರಾಯೆಶಃ ಅಜೀರ್ಣದಿಂದ ಜ್ವರ ಬರುವದುಂಟು. ಆ ಕಾಲದಲ್ಲಿ ಭೇದಿಯಾಗುವದಕ್ಕೂಸ್ಕರ ಮ್ಯಾಗ್ನೀಸಿಯಂ ಎಂಬ ಭೇದಿಯ ಉಪ್ಪನ್ನು

ಕೊಟ್ಟು, ಜಲಭೀತಿಯಾಗುವಹಾಗೂ ಬೆವರು ಬರುವಹಾಗೂ ಚಿಕಿತ್ಸೆ ಮಾಡುವವರಿಂದ ಉಪಯೋಗವುಂಟು. ಬೋಳವನ್ನು (ಗೋಪರಸ) ಕೆಲವು ಬೊಟ್ಟುಗಳನ್ನು ನೀರಿನಲ್ಲಿ ಬಿಟ್ಟು ಅದರಲ್ಲಿ ಬಾಯಿಮುಕ್ಕುಳಿಸುವದರಿಂದ ಬಾಯಿನ ನಾತವು ಹೋಗುವದು.

ಅಲ್ಪಜ್ವರಗಳಲ್ಲಿ ಜ್ವರವು ಅಜೀರ್ಣದಿಂದ ಬಂದಿದ್ದರೆ ನಿರಾಹಾರದಿಂದ ಗುಣವಾಗುವದು. ಆದರೆ ದೀರ್ಘಜ್ವರಗಳು ಬಂದಾಗ ರೋಗಿಗಳು ಜೀರ್ಣಿಸತಕ್ಕ ಆಹಾರವನ್ನು ಆಗಾಗ್ಯೆ ತೆಗೆದುಕೊಳ್ಳುತ್ತಲೇ ಇರಬೇಕು. ಬಂದೇಸಾರಿ ಹೆಚ್ಚಾಗಿ ಆಹಾರವನ್ನು ತೆಗೆದುಕೊಳ್ಳುವದಕ್ಕಿಂತ ಆಗಾಗ್ಯೆ ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಳ್ಳುವದು ಉತ್ತಮ. ಬಂದುಸಾರಿ ಆಹಾರ ತೆಗೆದುಕೊಂಡು ಮತ್ತೊಂದುಸಾರಿ ತೆಗೆದುಕೊಳ್ಳುವದಕ್ಕೆ ೩ ಘಂಟೆ ವಿರಾಮವಿರಬೇಕು. ಜ್ವರಬಂದವರಿಗೆ ಚನ್ನಾಗಿ ಬೆಂದ ಅನ್ನವೂ ರುಚಿಯುದ ಸಾರೂ ಅಥವಾ ಮೆಣಸಿನನೀರೂ ಬಳಕೆ ಪಥ್ಯವಸ್ತುಗಳು. ಅಭ್ಯಾಸವಿರುವವರು ಇದರ ಜೊತೆಗೆ ಹಾಲನ್ನೂ ತೆಗದುಕೊಳ್ಳಬಹುದು. ಕೆಲವರಿಗೆ ಆಹಾರವೇ ಸೇರದೆ ಇರುವದುಂಟು. ಇಂಥಾವರು ಹಾಲಿನಲ್ಲಿ ಸೀಮೇ ಗಂಜಿಯನ್ನು ಮಾಡಿಕೊಂಡು ಕುಡಿಯುವದು ಉತ್ತಮ. ಅನೇಕರು ಜ್ವರಬಂದಾಗ ರೋಗಿಗಳಿಗೆ ಬಲವಂತದಿಂದ ನಾನಾವಿಧವಾದ ಆಹಾರಗಳನ್ನು ಕೊಡುವರು. ಅವರು ಬಾಯಿಗೆ ರುಚಿಸಿದ್ದರಿಂದ ತಿನ್ನದೆ ಇದ್ದರೆ ಅನುತಾಪಪಡುವರು. ಇದು ಅಕ್ರಮ. ಬಲವಾದ ಜ್ವರ ಬಂದಾಗ ಅನ್ನಕೋಶವು ಕಟ್ಟಿರುವದು. ಬಲವಾದ ಆಹಾರ ಕೊಟ್ಟದ್ದೇ ಆದರೆ ಅನ್ನಕೋಶಕ್ಕೆ ಆದನ್ನು ಜೀರ್ಣಿಸತಕ್ಕ ಕೆಲಸವು ಹೆಚ್ಚಾಗಿ ವಿಶ್ರಾಂತಿ ತಪ್ಪಿ ರೋಗವು ವೃದ್ಧಿಯಾಗುವದು. ರೋಗಿಯು ತಣ್ಣೀರನ್ನು ಕೇಳಿದರೆ ಅದರಿಂದ ಏನೋ ಬಾಧಕವೆಂದು ತಿಳಿದುಕೊಂಚು ಕೊಡುವದಿಲ್ಲ. ಇದು ತಪ್ಪು. ನೀರು ಕುಡಿಯುವವರಿಂದ ವಾಂತಿಯಾಗತಕ್ಕ ಸಂದರ್ಭವಿನಹಾ ಯುತ್ತೇನೂ ಬಾಧಕವಿಲ್ಲ. ಗಂಜಿ, ಟೀ, ಕಾಫಿ, ಪಕ್ವವಾದ ಫಲಗಳು, ಇವೆಲ್ಲಾ ಪಥ್ಯವಸ್ತುಗಳೆಂದೆಣಿಸಬೇಕು. ಬಲಿಯವಾದ ರೋಗಗಳಲ್ಲಿ ಅರಾರೋಟ್ ಗಂಜಿಯನ್ನು ಮಾಡಿಸಿ ಕೊಡಬಹುದು.

ವಿಷಮತ್ಯಕಾರವಾಡದು.

ಬೆಚ್ಚಗೆನೂಡಿ ಅದರಲ್ಲಿ ಸ್ಪಂಜನ್ನು ಅದ್ದಿ ಮೈಗೆ ಸವರುವದುಂಟು. ತಣ್ಣಗಿರತಕ್ಕ ನೀರನ್ನು ಕುಡಿಯುವದಕ್ಕೆ ಕೊಡುವದುಂಟು. ಇದು ಜ್ವರವು ಸಾಮಾನ್ಯವಾಗಿದ್ದಾಗ ಚಿಕಿತ್ಸೆ. ಇದಲ್ಲದೆ ಸಾಮಾನ್ಯಜ್ವರವು ಬಂದಾಗ ತುಂಗವುಸ್ತೆ, ಪರ್ಪಾಷ್ಟಕ, ಕಹಿಪಡವಲ, ನಾರುಂಬೇಳೆ, ನಾಯಿಬೇಲ, ವಿಷ್ಣುಕ್ರಾಂತಿ, ಲಾವುಂಚ, ಬಜೆ, ಶ್ರೀಗಂಧ ಇವುಗಳಲ್ಲಿ ಯಾವದಾದರೂ ಬಂದನ್ನು ಕಷಾಯಮಾಡಿ ಕುಡಿಯುತ್ತಾ ಬಂದರೆ ಬೆವರುಹುಟ್ಟುವದು. ರಸಕರ್ಪೂರವನ್ನು ಜೀರ್ಣಿಸುತ್ತುಪ್ಪದಲ್ಲಿ ತೇದು ಕೊಡುವದು ಈ ದೇಶದ ವೈದ್ಯ. ನಿಲಾಂಜನ ಭಸ್ಮವನ್ನೂ ರಸ ಭಸ್ಮವನ್ನೂ ತೇರಿಸಿಕೊಡುವದು ಇಂಗ್ಲೀಷ್‌ವೈದ್ಯವು. ಜ್ವರವು ಬಹಳ ಹೆಚ್ಚಾಗಿದ್ದಾಗ ಕೆಲವು ಇಂಗ್ಲೀಷ್ ವೈದ್ಯರು ತಲೆಗೆ ಹಿಮವಿದ ಗಡ್ಡೆಯಲ್ಲಿ ಮಾಡಿದ ಟೋಪಿಯನ್ನು ಹಾಕಿ ಶರೀರಕ್ಕೆ ಒದ್ದೀಬಟ್ಟೆಯನ್ನು ಸುತ್ತಿ ಹೊಟ್ಟೆಗೂ ತಂಪು ಮಾಡತಕ್ಕ ಔಷಧಗಳನ್ನು ಕೊಡುವರು.

ಜ್ವರ ಪೀಡಿತರಾದವರಿಗೆ ಶರೀರಕ್ಕೂ ಮನಸ್ಸಿಗೂ ಬಾಧಕವಾಗತಕ್ಕ ಯಾವ ಕೆಲಸವನ್ನೂ ಮಾಡಬಾರದು, ಅಂದರೆ ಅವರನ್ನು ಮೆತ್ತಗಿರುವ ಹಾಸಿಗೇಮೇಲೆ ಮಲಗಿಸಿ ಉಪಚಾರ ಮಾಡುವದಕ್ಕೆ ಮಾತ್ರ ಒಬ್ಬರು ಸಮೀಪದಲ್ಲಿ ಇರಬೇಕು ; ಅವರ ಶರೀರಕ್ಕೂ ಮನಸ್ಸಿಗೂ ವಿಶ್ರಾಂತಿಯು ಅವಶ್ಯವಾಗಿ ಬೇಕಾಗಿರುವಕಾರಣ ಅವರು ಇರತಕ್ಕ ಮನೆಯಲ್ಲಿ ಗಲಭೆಯಿಲ್ಲದೆ ಇರಬೇಕು ; ಇವರೊಂದಿಗೆ ಮಾತನಾಡುವದಕ್ಕೋಸ್ಕರ ಬಂಧು ಮಿತ್ರರನ್ನು ಕೂಡ ಬಿಡಕೂಡದು. ಮಾತನಾಡುವವರಿಂದ ಅವರಿಗೆ ಬಾಧಕವಾಗುವದು. ಅವರು ಇರತಕ್ಕ ಮನೆಯು ವಿಸ್ತಾರವಾಗಿಯೂ ನಿರ್ಮಲವಾದ ಗಾಳಿಯ ಸಂಚಾರವುಳ್ಳದ್ದಾಗಿಯೂ ಇರಬೇಕು ; ರೋಗಿಯ ಬಳಿಗೆ ಹೋಗತಕ್ಕವರ ಕಾಲಿನ ಶಬ್ದಕೂಡ ಕೇಳಬರಬಾರದು ; ಮತ್ತಾರೂ ಅಲ್ಲಿ ಮಾತನಾಡಕೂಡದು.

ಪ್ರಾಯೆಶಃ ಅಜೀರ್ಣದಿಂದ ಜ್ವರ ಬರುವದುಂಟು. ಆ ಕಾಲದಲ್ಲಿ ಭೇದಿಯಾಗುವದಕ್ಕೋಸ್ಕರ ಮ್ಯಾಗ್ನೀಸಿಯಂ ಎಂಬ ಭೇದಿಯ ಉಪ್ಪನ್ನು

ಏನಯ್ಯಾ ಅಂದರೆ ಶ್ವಾನನ ಮರಿ ಸತ್ತಿತೆಂದ.

ಕೊಟ್ಟು, ಜಲಭಾಧೆಯಾಗುವಹಾಗೂ ಬೆವರು ಬರುವಹಾಗೂ ಚಿಕಿತ್ಸೆ ಮಾಡುವವರಿಂದ ಉಪಯೋಗವುಂಟು. ಬೋಳವನ್ನು (ಗೋಪರಸ) ಕೆಲವು ಬೊಟ್ಟುಗಳನ್ನು ನೀರಿನಲ್ಲಿ ಬಿಟ್ಟು ಅದರಲ್ಲಿ ಬಾಯಿಮುಕ್ಕುಳಿಸುವದರಿಂದ ಬಾಯಿನ ನಾತವು ಹೋಗುವದು.

ಅಲ್ಪಜ್ವರಗಳಲ್ಲಿ ಜ್ವರವು ಅಜೀರ್ಣದಿಂದ ಬಂದಿದ್ದರೆ ನಿರಾಹಾರದಿಂದ ಗುಣವಾಗುವದು. ಆದರೆ ದೀರ್ಘಜ್ವರಗಳು ಬಂದಾಗ ರೋಗಿಗಳು ಜೀರ್ಣಿಸತಕ್ಕ ಆಹಾರವನ್ನು ಆಗಾಗ್ಯೆ ತೆಗೆದುಕೊಳ್ಳುತ್ತಲೇ ಇರಬೇಕು. ಬಂದೇಸಾರಿ ಹೆಚ್ಚಾಗಿ ಆಹಾರವನ್ನು ತೆಗೆದುಕೊಳ್ಳುವದಕ್ಕಿಂತ ಆಗಾಗ್ಯೆ ಸ್ವಲ್ಪ ಸ್ವಲ್ಪವಾಗಿ ತೆಗೆದುಕೊಳ್ಳುವದು ಉತ್ತಮ. ಬಂದುಸಾರಿ ಆಹಾರ ತೆಗೆದುಕೊಂಡು ಮತ್ತೊಂದುಸಾರಿ ತೆಗೆದುಕೊಳ್ಳುವದಕ್ಕೆ ೩ ಘಂಟೆ ವಿರಾಮವಿರಬೇಕು. ಜ್ವರಬಂದವರಿಗೆ ಚನ್ನಾಗಿ ಬೆಂದ ಅನ್ನವೂ ರುಚಿಯಾದ ಸಾರೂ ಅಥವಾ ಮೆಣಸಿನನೀರೂ ಒಳ್ಳೇ ಪಥ್ಯವಸ್ತುಗಳು. ಅಭ್ಯಾಸವಿರುವವರು ಇದರ ಜೊತೆಗೆ ಹಾಲನ್ನೂ ತೆಗೆದುಕೊಳ್ಳಬಹುದು. ಕೆಲವರಿಗೆ ಆಹಾರವೇ ಸೇರದೆ ಇರುವದುಂಟು. ಇಂಥಾವರು ಹಾಲಿನಲ್ಲಿ ಸೀಮೇ ಗಂಜಿಯನ್ನು ಮಾಡಿಕೊಂಡು ಕುಡಿಯುವದು ಉತ್ತಮ. ಅನೇಕರು ಜ್ವರಬಂದಾಗ ರೋಗಿಗಳಿಗೆ ಒಲವಂತೆದಿಂದ ನಾನಾವಿಧವಾದ ಆಹಾರಗಳನ್ನು ಕೊಡುವರು. ಅವರು ಬಾಯಿಗೆ ರುಚಿಸಿದ್ದರಿಂದ ತಿನ್ನದೆ ಇದ್ದರೆ ಅನುತಾಪಪಡುವರು. ಇದು ಅಕ್ರಮ. ಬಲವಾದ ಜ್ವರ ಬಂದಾಗ ಅನ್ನಕೋಶವು ಕೆಟ್ಟಿರುವದು. ಒಲವಾದ ಆಹಾರ ಕೊಟ್ಟದ್ದೇ ಆದರೆ ಅನ್ನಕೋಶಕ್ಕೆ ಅದನ್ನು ಜೀರ್ಣಿಸತಕ್ಕ ಕೆಲಸವು ಹೆಚ್ಚಾಗಿ ವಿಶ್ರಾಂತಿ ತಪ್ಪಿ ರೋಗವು ವೃದ್ಧಿಯಾಗುವದು. ರೋಗಿಯು ತಣ್ಣೀರನ್ನು ಕೇಳಿದರೆ ಅದರಿಂದ ಏನೋ ಬಾಧಕವೆಂದು ತಿಳಿದುಕೊಂಡು ಕೊಡುವದಿಲ್ಲ. ಇದು ತಪ್ಪು. ನೀರು ಕುಡಿಯುವದರಿಂದ ವಾಂತಿಯಾಗತಕ್ಕ ಸಂದರ್ಭವಿನಹಾ ಮತ್ತೇನೂ ಬಾಧಕವಿಲ್ಲ. ಗಂಜಿ, ಟೀ, ಕಾಫಿ, ಪಕ್ವವಾದ ಫಲಗಳು, ಇವೆಲ್ಲಾ ಪಥ್ಯವಸ್ತುಗಳೆಂದೆಣಿಸಬೇಕು. ಬಲಿಯವಾದ ರೋಗಗಳಲ್ಲಿ ಅರಾರೋಟ್ ಗಂಜಿಯನ್ನು ಮಾಡಿಸಿ ಕೊಡಬಹುದು.

ಏನಾದರೂ ಮಾಡಿದರೆ ಹ್ಯಾಗಾದರೂ ಆಗುವದು.

೩. ಆರೋಗ್ಯ ವಿಚಾರ. (ಉಡಿಗೆಗಳು.)

ಗಾಳಿಯು ಶೀತವಾಗಿರುವಾಗ ಒನರು ಬೆತ್ತಲೆಯಿದ್ದರೆ ಶರೀರದ ಶಾಖವು ನಷ್ಟವಾಗಿ ಗಾಳಿಯಲ್ಲಿ ಸೇರಿಹೋಗುವದು. ನಾವು ಬಟ್ಟೆಗಳನ್ನು ಹಾಕಿಕೊಂಡಿದ್ದರೆ ಶರೀರದ ಶಾಖವು ಹೀಗೆ ಬೇಗ ನಷ್ಟವಾಗುವದಿಲ್ಲ. ಯಾಕಂದರೆ, ನಮ್ಮ ಶರೀರದ ಶಾಖವು ನಮ್ಮ ಬಟ್ಟೆಗಳಲ್ಲಿ ದೂರಿ ಅನಂತರದಲ್ಲಿ ಗಾಳಿಯಲ್ಲಿ ಸೇರಬೇಕಾಗಿರುತ್ತದೆ. ಬಟ್ಟೆಗಳಲ್ಲಿ ಎರಡು ವಿಧವುಂಟು. ೧ನೇದು—ಸಸ್ಯಸಂಬಂಧವಾದವುಗಳು ಅಂದರೆ ಹತ್ತಿ ನಾರು ಮುಂತಾದವುಗಳಿಂದ ಮಾಡಿದವುಗಳು, ೨ನೇದು—ಪ್ರಾಣಿಸಂಬಂಧವಾದವುಗಳು ಅಂದರೆ ಮೃಗಗಳ ತುಬುಟ ಮುಂತಾದವುಗಳಿಂದ ಮಾಡಿದವುಗಳು. ನೂಲು ಮತ್ತು ನಾರು ಬಟ್ಟೆಗಳನ್ನು ಹಾಕಿಕೊಂಡಿದ್ದಾಗ್ಯೂ ಶರೀರದ ಶಾಖವು ತೀವ್ರವಾಗಿ ನಷ್ಟವಾಗುವದು. ತುಬಟದ ಬಟ್ಟೆಗಳನ್ನು ಹಾಕಿಕೊಂಡಿದ್ದರೆ ಆ ಶಾಖವು ಸಿಧಾನವಾಗಿ ನಷ್ಟವಾಗುವದು. ನಮ್ಮ ಶರೀರದ ಸವುಸ್ತ ರೋಮಕೂಪಗಳಿಂದಲೂ ಬೆವರು ಈಚಿಗೆ ಹೊರಡುವದು. ಈ ಬೆವರು ಬಟ್ಟೆಗಳನ್ನು ಹಾಕಿಕೊಳ್ಳದಿದ್ದರೆ ಶರೀರದ ಶಾಖವನ್ನು ತೆಗೆದುಕೊಂಡು ವಾಯುರೂಪವಾಗಿ ಗಾಳಿಯಲ್ಲಿ ಸೇರುವದು. ತುಬಟದ ಬಟ್ಟೆಗಳನ್ನು ಹಾಕಿಕೊಂಡಿದ್ದರೆ ಹೀಗಾಗುವದಿಲ್ಲ. ಹೀಗೆ ಶಾಖವು ನಷ್ಟವಾಗುವದರಿಂದ ಶೀತಸಂಬಂಧವಾದ ರೋಗಗಳೂ ಕ್ಷಯಜಾಡ್ಯವೂ ಒರುವವು; ದೇಹದಾರ್ಢ್ಯವು ಕಡಿಮೆಯಾಗುವದು; ಬುದ್ಧಿಯು ಮಂದವಾಗುವದು. ತುಬಟದ ಬಟ್ಟೆಗಳು ನಾರು ಮತ್ತು ನೂಲು ಬಟ್ಟೆಗಳಿಗಿಂತ ಉತ್ತಮವಾದವುಗಳು. ಅವುಗಳನ್ನು ಹಾಕಿಕೊಳ್ಳತಕ್ಕವರಿಗೆ ಅವು ಬೇಸಿಗೇ ಕಾಲದಲ್ಲಿ ತನುವನ್ನೂ ಚಳಿಗಾಲದಲ್ಲಿ ಶಾಖವನ್ನೂ ಉಂಟುಮಾಡುವವು. ಶಾಖವಾದ ಬಟ್ಟೆಗಳನ್ನು ಹಾಕಿಕೊಂಡಿದ್ದರೆ ಶರೀರದ ಪೋಷಣೆಗೆ ಆಹಾರವು ಸ್ವಲ್ಪ ಕಡಿಮೆಯಾದರೂ ಸಾಕಾಗಿರುತ್ತದೆ, ಅಂದರೆ ಹೆಚ್ಚಾದ ಆಹಾರವು ಅಪೇಕ್ಷೆ ಯಿರುವದಿಲ್ಲ. ಹಾಗಿಲ್ಲದಿದ್ದರೆ ಶರೀರದ ಶಾಖವುಕಡಿಮೆಯಾಗುವದರಿಂದ ಪುನಃ ಆಹಾರವನ್ನು ತೆಗೆದುಕೊಂಡು ಶಾಖವನ್ನು ಹುಟ್ಟಿಸ ಬೇಕಾಗಿರುತ್ತದೆ. ಈ ಉಪಾಯವನ್ನು ತಿಳಿದು

ಏನಮಾಡಿದರೂ ಮಗ ಹರಿ ಎಂಬುವದನ್ನು ಬಿಡ.

ಕೊಂಡು ಹುಲ್ಲು ಹುರಳಿಯನ್ನು ಮಿತವಾಗಿ ವೆಚ್ಚಮಾಡಿ ಮಿಕ್ಕದ್ದನ್ನು ಮಿಗಿಸಿಕೊಳ್ಳುವದಕ್ಕೋಸ್ಕರ ಕೆಲವು ದೇಶಗಳಲ್ಲಿ ಎತ್ತು ಕುದುರೆ ಮೊದಲಾದವುಗಳಿಗೆಲ್ಲಾ ಶಾಖವಾದ ಹೊದ್ದಿಕೆಯನ್ನು ಹೊದಿಸುತ್ತಾರೆ. ತುಬಟಿಗಳು, ಕೂದಲು, ರೇಶ್ಮೆ, ಚರ್ಮ, ಇವುಗಳಿಂದ ಮಾಡಿದ ಹೊದಿಕೆಗಳು ಶಾಖವಾಗಿರುವವು. ಹತ್ತಿ, ಶಣಬು, ನಾರು ಮುಂತಾದವುಗಳಿಂದ ಮಾಡಿದ ಒಟ್ಟೆಗಳು ಅಷ್ಟು ಶಾಖವಾಗಿರುವದಿಲ್ಲ. ಹತ್ತೀ ಒಟ್ಟೆಗಳು ನಾರು ಒಟ್ಟೆಗಳಿಗಿಂತ ಉತ್ತಮವಾಗಿಯೂ ತುಬಟಿದವುಗಳಿಗಿಂತ ಕಡಿಮೆಯಾಗಿಯೂ ಇವೆ. ಇವು ರೋಮಕೂಪಗಳಿಂದ ಈಚಿಗೆ ಬರತಕ್ಕ ಬೆವರು ಮುಂತಾದ ಕಶ್ಮಲಗಳನ್ನು ಈಚಿಗೆ ಬಿಡುತ್ತವೆ. ಈ ಗುಣವು ನಾರು ಒಟ್ಟೆಗಳಲ್ಲಿ ಇಲ್ಲ. ಆದ್ದರಿಂದ ಅವುಗಳನ್ನು ಚರ್ಮದ ಮೇಲೆ ಹಾಕಿಕೊಳ್ಳಬಾರದು. ಬೇಸಿಗೆಯಲ್ಲಿಯೂ ಚಳಿಗಾಲದಲ್ಲಿಯೂ ಕೂಡ ಒಳಗಿನ ಒಟ್ಟೆಯು ತುಬಟಿದ್ದಾಗಿ ಇರಬೇಕು. ಇದರಿಂದ ಬೇಸಿಗೇಕಾಲದಲ್ಲಿ ಶಾಖವು ಮತ್ತೂ ಹೆಚ್ಚಾಗುವದೆಂದು ಅನೇಕರು ತಿಳಿದುಕೊಳ್ಳುವರು. ಇದು ಅನುಭವಸಿದ್ಧವಾದ ಮಾತಲ್ಲ. ಯಾಕಂದರೆ, ಬೇಸಿಗೇ ಕಾಲದಲ್ಲಿ ಇದರಿಂದ ತನುವು ಆಗುವದೇ ಹೊರ್ತು ಶಖೆಯಾಗುವದಿಲ್ಲ. ನಿದ್ದೆ ಮಾಡುವಾಗ ಫ್ಲಾನಲ್ ಉಡುಪುಗಳನ್ನು ಹಾಕಿಕೊಂಡಿದ್ದರೆ ಶೀತಸಂಬಂಧವಾದ ರೋಗಗಳ್ಯಾವವೂ ಬರುವದಿಲ್ಲ. ಮುಕ್ಕಳಿಗೆ ಶರೀರಶಾಖವು ಬಹಳ ಮುಖ್ಯವಾದದ್ದು. ಮುಕ್ಕಳು ಬಹಳ ಆರೋಗ್ಯವಂತರಾಗಿಯೂ ದೃಢಕಾಯರಾಗಿಯೂ ಇರಬೇಕಾದರೆ ಶರೀರಕ್ಕೆ ಫ್ಲಾನಲ್ ಒಟ್ಟೆಯನ್ನು ಹೊದಿಸಬೇಕು. ಕಾಗದವು ಫ್ಲಾನಲ್‌ಗೆ ಸಮಾನವಾದದ್ದು. ಫ್ಲಾನಲನ್ನು ಕೊಂಡುಕೊಳ್ಳುವದಕ್ಕೆ ಚೈತನ್ಯವಿಲ್ಲದವರು ಕಾಗದಗಳನ್ನು ಸೇರಿಸಿ ಪಟ್ಟವಮಾಡಿ ಮೇಲೆ ಒಟ್ಟೆಹಾಕಿ ಹೊಲಿದು ಅವುಗಳನ್ನು ಹಾಕಿಕೊಳ್ಳ ಬಹುದು. ರಾತ್ರಿಯಲ್ಲಿ ತೊಡುವ ಫ್ಲಾನಲನ್ನು ಚರ್ಮದ ಮೇಲೆ ತೊಡುವ ಫ್ಲಾನಲನ್ನು ಪ್ರತಿದಿನವೂ ತೊಳೆದು ಗಾಳಿಯಲ್ಲಿ ಆರಹಾಕಬೇಕು. ಶೀತ ಪ್ರಕೃತಿಯವರೂ, ಶ್ಲೇಷ್ಮ ಪ್ರಕೃತಿಯವರೂ, ಉಬ್ಬಸರೋಗದವರೂ, ಛೇದಿಮಾಡಿಕೊಳ್ಳುತ್ತಾ ಇರುವವರೂ

ಏನೂ ಇಲ್ಲದವ ಯಾವದಕ್ಕೂ ಹೇಸ.

ಫ್ಲಾನಲ್ ಉಡುಪುಗಳನ್ನು ಹಾಕಿಕೊಂಡಿದ್ದರೆ ಆ ರೋಗಗಳು ತೊಲಗಿ ಆರೋಗ್ಯವಾಗಿ ಇರುವರು. ವಾತರೋಗದವರಿಗೆ ಫಾಮ್ವೆಲೆದರ್ ಎಂಬ ಚರ್ಮದ ಉಡುಪುಗಳು ಒಳ್ಳೇವು.

೪. ಮಕ್ಕಳನ್ನು ಪೋಷಿಸುವ ವಿಧ.

ಲೋಕದಲ್ಲಿ ಶಿಶುಗಳು ಜನನವಾಗುವದಕ್ಕೆ ಮುಂಚೆಯೇ ಪ್ರಾಣ ಬಿಡುವವು. ಮುಕ್ಕಾಲುಪಾಲು ಮಕ್ಕಳು ಹುಟ್ಟಿದ ಹತ್ತು ದಿನಗಳಲ್ಲಿಯೇ ಪ್ರಾಣಬಿಡುವವು. ಹತ್ತು ದಿವಸಗಳಮೇಲೆ ಬದುಕತಕ್ಕ ಮಕ್ಕಳಲ್ಲಿ ಅರ್ಧ ಮಕ್ಕಳು ೫ವರ್ಷಗಳೊಳಗಾಗಿ ಸಾಯುವವು. ಮೂಢರಾದ ತಂದೆತಾಯಿಗಳು ಇದೆಲ್ಲಾ ತಮ್ಮ ದುರದೃಷ್ಟವೆಂದು ತಿಳಿಯುವರೇ ಹೊರ್ತು ತಮ್ಮ ಅಜ್ಞಾನ ಜನ್ಯವಾದ ವುಗಳೆಂದು ತಿಳಿಯುವದಿಲ್ಲ. ಲೋಕವಲ್ಲಿ ಜನರು ತಮ್ಮ ಮನೆಗಳಲ್ಲಿರತಕ್ಕ ಹಸು ಕರು ನಾಯಿ ಕುದುರೆ ಮುಂತಾದವುಗಳನ್ನೆಲ್ಲಾ ಯಾವ ರೀತಿಯಲ್ಲಿ ಸಾಕಬೇಕೆಂಬದನ್ನು ತಕ್ಕಮಟ್ಟಿಗೆ ತಿಳಿದುಕೊಂಡೇ ಇರುವರು. ಮೂಢರಾದ ಅನೇಕರು ತಮ್ಮ ಮಕ್ಕಳನ್ನು ಯಾವರೀತಿಯಲ್ಲಿ ಸಾಕಬೇಕೋ, ಅವರಿಗೆ ಆಹಾರ ವಸ್ತುಗಳನ್ನು ಯಾವ ಯಾವ ಕಾಲದಲ್ಲಿ ಹ್ಯಾಗೆ ಹ್ಯಾಗೆ ಕೊಡಬೇಕೋ ಸ್ನಾನಪಾನಾದಿಗಳಿಗೆ ಏನು ಏರ್ಪಾಡು ಮಾಡಬೇಕೋ ಅದನ್ನು ಚನ್ನಾಗಿ ತಿಳಿದುಕೊಂಡು ಆಚರಿಸದೆ ತಮ್ಮ ಅವಿವೇಕದಿಂದ ಮಕ್ಕಳು ಸತ್ತರೆ ಇದು ದೇವರ ಸಂಕಲ್ಪವೆಂದು ತಿಳಿದುಕೊಂಡು ಇಂಥಾ ಕೂಲೆಗಳಿಗೆಲ್ಲಾ ದೇವರನ್ನು ಕಾರಣಭೂತನನ್ನಾಗಿ ಎಣಿಸುವರು. ಗರ್ಭದಲ್ಲಿಯೇ ಮೊಗುವು ಸಾಯುವದಕ್ಕೂ ಅಥವಾ ಜನನವಾದಾಗಲಾಗಲೀ ಕೆಲವು ದಿನಗಳಾದಮೇಲಾಗಲೀ ಸಾಯುವದಕ್ಕೂ ಅಥವಾ ಹುಟ್ಟಿದ ಮಕ್ಕಳು ಕೃಶವಾಗಿ ಶಕ್ತಿಯಿಲ್ಲದೆ ಇರುವದಕ್ಕೂ ಆಮಕ್ಕಳ ತಾಯಿಯ ಅಜ್ಞಾನವೇ ಮುಖ್ಯವಾದ ಕಾರಣವು. ಮೊಗುವು ತಾಯಿಯ ಗರ್ಭದಲ್ಲಿರುವಾಗ ತಾಯಿಯ ಸ್ನಾನ ಪಾನಗಳಲ್ಲಿಯೂ ಆಹಾರ ವ್ಯವಹಾರಗಳಲ್ಲಿಯೂ ಕ್ರಮವನ್ನು ಬಿಟ್ಟು ನಡಿ

ಪರಿಷತ್ ಚರಿತಾಮೃತ.

ಯಬಾರದು. ನಿರ್ಮಲವಾದ ಗಾಳಿ ಇರತಕ್ಕ ಸ್ಥಳಗಳಲ್ಲಿ ಕೈಲಾದ ಮಟ್ಟಿಗೆ ಕೆಲಸಮಾಡುವದರಿಂದ ದೇಹಕ್ಕೆ ಸಾಧನೆಯನ್ನು ಕೊಡಬೇಕು. ಸಮಸ್ತ ವ್ಯಾಕುಲಗಳನ್ನೂ ಬಿಟ್ಟು ಸಾಧ್ಯವಾದಮಟ್ಟಿಗೂ ಸಂತೋಷವನ್ನು ಉಂಟು ಮಾಡತಕ್ಕ ಆಟಪಾಟಗಳಲ್ಲಿ ಕಾಲಹರಣಮಾಡಬೇಕು. ಏನು ಕೇಸವಿದ್ದರೂ ನಿದ್ದೆ ಕೆಡಬಾರದು. ಈ ಕಟ್ಟಳೆಗಳನ್ನು ಅತಿಕ್ರಮಿಸಿ ನಡೆದರೆ ತನ್ನ ದೇಹಕ್ಕೂ ಕೂಡಲೆ ತನ್ನ ಗರ್ಭದಲ್ಲಿರುವ ಮಗುವಿಗೂ ಬಾಧೆಯುಂಟಾಗುವದು. ಇವುಗಳನ್ನೆಲ್ಲಾ ಉಪೇಕ್ಷೆಮಾಡತಕ್ಕ ಜನಗಳಿಗೆ ಅವರು ತಾವು ನಿರ್ದೋಷಿಗಳೆಂದು ತಿಳಿದುಕೊಂಡಿದ್ದಾಗ್ಯೂ ಅವರಿಗೆ ಶಿಶುಹತ್ಯಾ ದೋಷ ಬರುವದು. ಯಾಕಂದರೆ, ಗರ್ಭವನ್ನು ಧರಿಸಿರುವ ಸ್ತ್ರೀಯು ಈ ಕಟ್ಟಲೆಗಳನ್ನು ಆಚರಿಸದೆ ಇರುವದರಿಂದ ಶಿಶುವಿಗೆ ಬಾಧಕವಾಗಿ ಗರ್ಭದಲ್ಲಾಗಲೀ ಜನನವಾದ ಮೇಲಾಗಲೀ ಸಾಯುವದು; ಅಥವಾ ಬದುಕಿ ಇದ್ದಾಗ್ಯೂ ಅನಂತರದಲ್ಲಿ ಇವರ ಅಜಾಗರೂಕತೆಯಿಂದಲೇ ರೋಗದಿಂದ ನರಳುತ್ತಾ ಇರುವದು. ಆದಕಾರಣ ಸ್ತ್ರೀಯರು ಮಕ್ಕಳನ್ನು ಪಡೆಯುವದಕ್ಕೆ ಮುಂಚೆಯೇ ಯಾವಯಾವ ರೀತಿಯಲ್ಲಿ ಇದ್ದರೆ ದೃಢಕಾಯರಾಗಿಯೂ ದೀರ್ಘಾಯುಗಳಾಗಿಯೂ ಬುದ್ಧಿಶಾಲಿಗಳಾಗಿಯೂ ಇರತಕ್ಕ ಮಕ್ಕಳನ್ನು ಪಡೆಯುವರೋ ಅದನ್ನು ಮೊದಲೇ ತಿಳಿದುಕೊಳ್ಳಬೇಕು. ಈ ವಿಷಯವನ್ನು ಅವರಿಗೆ ತಿಳಿಸುವದಕ್ಕೋಸ್ಕರ ಕೆಲವು ಕಟ್ಟಳೆಗಳನ್ನು ಸಂಕ್ಷೇಪವಾಗಿ ಇಲ್ಲಿ ಬರೆಯುವೆವು.

ಜನನವಾದ ಕೂಡಲೆ ಮಗುವು ಆರು ಪೌಂಡಿನಿಂದ ಎಂಟು ಪೌಂಡ್ ವರಿಗೂ ತೂಕವಿರುವದುಂಟು. ಮಾಂಸಭೋಜನ ಮಾಡತಕ್ಕ ಜನಗಳಲ್ಲಿ ೧೦—೧೨ ಪೌಂಡು ಇರುವದೂ ಉಂಟು. ಸಾಧಾರಣವಾಗಿ ಗಂಡುಮಕ್ಕಳು ಹೆಣ್ಣುಮಕ್ಕಳಿಗಿಂತ ಸ್ವಲ್ಪಹೆಚ್ಚು ತೂಗುವರು. ಜನನವಾದ ಮಗುವು ೧೫ರಿಂದ ೧೯ಅಂಗುಲ ಉದ್ದವಾಗಿರುವದು. ಜನನವಾದಕೂಡಲೆ ಸಾವಕಾಶ ಮಾಡದೆ ಮಗುವನ್ನು ತೊಳೆಯಬೇಕು. ತೊಳೆಯುವದಕ್ಕೆ ನೀರು ಬಹಳ ತಣ್ಣಗೂ ಬಹಳ ಬಿಸಿಯಾಗಿಯೂ ಇರಕೂಡದು. ಮಕ್ಕಳು ಚಳಿಯನ್ನೆನ್ನ

ಬಂದು ಸಿಟ್ಟಿನಿಂದ ಬಾವಿಗೆ ಬಿದ್ದರೆ, ಏಳು ಸಿಟ್ಟಿನಿಂದ ಏಳತೀರದು.

ತಡೆಯುವಾರವು. ಆದಕಾರಣ ಚಳಿಯು ನಿವಾರಣೆ ಯಾಗುವಹಾಗೆ ಹೊದಿಸಬೇಕು. ಶಾಖವಾಗಿಯೂ ತೆಳ್ಳಗೂ ಇರತಕ್ಕದ್ದು ಫ್ಲಾನಲ್ ಆದ್ದರಿಂದ ಇದೇ ಉತ್ತಮವಾದ ಹೊದ್ದಿಕೆ. ದೊಡ್ಡವರಿಗಿಂತಲೂ ಮಕ್ಕಳಿಗೆ ನಿರ್ಮಲವಾದ ಗಾಳಿಯು ಹೆಚ್ಚಾಗಿ ಬೇಕಾಗಿರುವದರಿಂದ ಗಾಳಿಯ ಸಂಚಾರವಿರತಕ್ಕ ವಿಸ್ತಾರವಾದ ಮನೆಯಲ್ಲಿ ಬಾಣಂತಿಯನ್ನೂ ಮಗುವನ್ನೂ ಇಡಬೇಕು. ಮಗುವಿಗೆ ಉಚ್ಛ್ವಾಸನಿಶ್ವಾಸಗಳಿಗೆ ಆಟಂಕ ವಿಲ್ಲದಂತೆ ತುಂಬಾ ಹೊದಿಸಬೇಕು. ಬಾಣಂತಿಯನ್ನೂ ಮಗುವನ್ನೂ ಬೀಸುವ ಗಾಳಿಗೆ ಎದುರಾಗಿ ಇಡಕೂಡದು. ಬಾಣಂತಿಯರಿಗೆ ದಾಹವಾದರೆ ಬಿಸಿ ನೀರನ್ನು ಕೊಡಬಹುದು. ಈ ಸುಲಭವಾದ ಕಟ್ಟಳೆಗಳನ್ನು ಅತಿಕ್ರಮಿಸುವದರಿಂದಲೇ ಅನೇಕ ಮಕ್ಕಳು ಹತ್ತು ದಿನಗಳೊಳಗಾಗಿ ಸತ್ತು ಹೋಗುವವು. ಮಕ್ಕಳು ಹುಟ್ಟಿದ ಕೂಡಲೆ ಗಟ್ಟಿಯಾಗಿ ಅಳುವರು. ಇದರಿಂದ ಏನೂ ಬಾಧಕವಿಲ್ಲ. ಅಂಥಾ ಮಕ್ಕಳಿಗೆ ಪ್ರಾಣಭಯವೇನೂ ಇರುವದಿಲ್ಲ. ಕೆಲವು ಮಕ್ಕಳು ಬಿಡತೆಯಿಲ್ಲದೆ ನರಳುತ್ತಾ ಅಳುವರು. ಇವರು ಬದುಕುವದು ಕಷ್ಟ. ಮಗುವನ್ನು ಪ್ರತಿದಿನ ಪ್ರಾತಃಕಾಲದಲ್ಲಿಯೂ ತೊಳೆಯಬೇಕು. ಇದರಿಂದ ಮೈಗೆ ರೋಗಗಳು ಹತ್ತುವದಿಲ್ಲ. ಶರೀರಕ್ಕೆ ಬಲ ಬರುವದು. ಮಕ್ಕಳ ತಲೆಯನ್ನು ಪ್ರತಿದಿನ ಪ್ರಾತಃಕಾಲದಲ್ಲಿಯೂ ತೊಳೆಯುವದು ಒಳ್ಳೇದು. ಹೀಗೆ ತೊಳೆಯದಿದ್ದರೆ ಮೈಮೇಲೂ ತಲೆಯಲ್ಲೂ ಕೊಳೆಯಿಂದ ಕ್ರಿಮಿಗಳು ಹುಟ್ಟಿ ಚರ್ಮರೋಗಗಳಿಗೆ ಆಸ್ಪದವಾಗುವದೆಂದು ಪಂಡಿತರು ಭೂತಕನ್ನಡಿಯಿಂದ ನೋಡಿ ಪರೀಕ್ಷಿಸಿರುತ್ತಾರೆ. ಇಂಥಾ ರೋಗಗಳಿಂದ ಅನೇಕ ಮಕ್ಕಳು ಸಾಯುವದೂ ಉಂಟು. ಆದದರಿಂದ ಆರೋಗ್ಯವಾಗಿರ ಬೇಕಾದರೆ ಶರೀರವನ್ನು ನಿರ್ಮಲವಾಗಿ ತೊಳೆಯುವದಲ್ಲದೆ ಚನ್ನಾಗಿ ಬಿಗೆದ ಬಟ್ಟೆಗಳನ್ನು ಹೊದಿಸಬೇಕು. ಮನೆಗಳನ್ನೂ ಅದರ ಸುತ್ತು ಮುತ್ತು ಇರುವ ಪ್ರದೇಶಗಳನ್ನೂ ನಿರ್ಮಲವಾಗಿ ಇಡಬೇಕು. ಹೀಗೆ ಮಾಡುವದರಿಂದ ಮಕ್ಕಳಿಗೆ ಕ್ರಮವಾಗಿ ಹಸಿವ್ರಹುಟ್ಟಿ ಬಲ ಬಂದು ಆರೋಗ್ಯ ಉಂಟಾಗುವದು. ಮಕ್ಕಳನ್ನು ತೊಳೆಯತಕ್ಕ ಸ್ಥಳವು ವಿಶಾಲ

ಒಕ್ಕಳಹೊನ್ನಿನ ಪದ್ಯ.

ನಾಗಿಯೂ ವಾಯುಸಂಚಾರ ವುಳ್ಳದ್ದಾಗಿಯೂ ಇರಬೇಕು. ಆದರೆ ಜಿಸ್ಸೆಂದು ಗಾಳಿ ಬೀಸುವ ಸ್ಥಳವಾಗದು. ಬಹಳ ಚಳಿಯಾಗಿದ್ದರೆ ಸವಿಾಪದಲ್ಲಿ ಉರಿ ಹಾಕಿ ಶಾಖ ಮಾಡಿಕೊಂಡು ಇರಬೇಕು. ಮಳೇನೀರನ್ನು ಹಿಡಿದು ಕೂಡಿ ಹಾಕಿದ್ದು ಅದರಿಂದ ಮಗುವನ್ನು ತೊಳೆದರೆ ಬಳ್ಳೀದು. ಶರೀರವನ್ನು ನಿಧ್ಮ ಲವಾಗಿ ತೊಳೆಯಬೇಕಾದರೆ ಸಾಬೂನನ್ನು ಉಪಯೋಗಿಸಬೇಕು. ಶರೀ ರದಮೇಲೆ ಗುಳ್ಳೆಗಳಿದ್ದರೆ ಗ್ಲಿಸರೈನ್ ಸೋಪನ್ನೂ ಇಲ್ಲದಿದ್ದರೆ ಕ್ಯಾಸ್ಟೈಲ್ ಸೋಪನ್ನೂ ಉಪಯೋಗಿಸಬೇಕು. ಅದೂ ಇಲ್ಲದ ಪಕ್ಷದಲ್ಲಿ ಕಡಲೆ ಹಿಟ್ಟು ಅಥವಾ ಹೆಸರುಹಿಟ್ಟಿನಿಂದ ಉಜ್ಜಬಹುದು. ಮಕ್ಕಳಿಗೆ ನೀರುಹಾಕು ವಾಗ ನೀರನ್ನು ಬಂದೇಸಮಕ್ಕೆ ಇಟ್ಟುಕೊಂಡು ಹಾಕಬೇಕೇಹೊರತು ಬಂದು ಸಾರಿ ಬೆಚ್ಚಗೂ ಬಂದುಸಾರಿ ತಣ್ಣಗೂ ಹಾಕಬಾರದು. ಇದಲ್ಲದೆ ಅಕಾಲ ದಲ್ಲಿ ಮಕ್ಕಳು ಅಳದೆ ಇರುವಹಾಗೆ ಹಾಡು ಹೇಳಿಕೊಂಡಾಗಲೀ ಸಮಾಧಾನ ಮಾಡುತ್ತಲಾಗಲೀ ನೀರು ಹಾಕಬೇಕು. ಇಲ್ಲದಿದ್ದರೆ ಆಮಕ್ಕಳು ಸ್ವಭಾ ವವಾಗಿ ಚಿಕ್ಕಂದಿನಿಂದಲೂ ಹಟವಾದಿಗಳಾಗುವರು. ಮಕ್ಕಳಿಗೆ ಪ್ರತಿದಿನ ದಲ್ಲಿಯೂ ಒಗೆವ ಬಟ್ಟೆಗಳನ್ನೇ ಹೊದಿಸಬೇಕು. ಯಾಕಂದರೆ, ಹಳೇ ಬಟ್ಟೆಗಳಲ್ಲಿ ಬೆವರು ಮೊದಲಾದ ಕಶ್ಮಲಗಳೆಲ್ಲಾ ಸೇರಿಕೊಂಡಿದ್ದು ಬಾಧೆ ಯನ್ನುಂಟುಮಾಡುವವು. ನೀರುಹಾಕುವವರಲ್ಲಿ ತಾಯಿಯಾದವಳು ಮತ್ತಾ ರನ್ನೂ ನೆಚ್ಚದೆ ಸ್ವಂತವಾಗಿ ನೀರನ್ನು ಒಂದೇ ಸಮಕ್ಕೆ ಬೆಚ್ಚಗೆ ಮಾಡಿ ಕೊಂಡು ಇದ್ದು ಹಾಕಬೇಕು.

೫. ಇಂದ್ರಚಾಪ.

ಸೂರ್ಯನು ಪೂರ್ವದಿಕ್ಕಿನಲ್ಲಿ ಇರುವಾಗ ಪಶ್ಚಿಮದಿಕ್ಕಿನಲ್ಲಿಯೂ, ಅಥವಾ ಪಶ್ಚಿಮದಿಕ್ಕಿನಲ್ಲಿರುವಾಗ ಪೂರ್ವದಿಕ್ಕಿನಲ್ಲಿಯೂ ಅಕಾಶದಲ್ಲಿ ಜಲ ಕಣಗಳು ನಿಬಿಡವಾಗಿ ಸೇರಿಯಿದ್ದರೂ, ಅಥವಾ ಮಳೆಹುಯ್ಯುತ್ತಿದ್ದರೂ, ಅವುಗಳಮೇಲೆ ಸೂರ್ಯಕಿರಣಗಳು ಬಿದ್ದು ಅವುಗಳ ಕಾಂತಿಯು ಸ್ವಲ್ಪವಾಗಿ ಬೊಗ್ಗುವದರಿಂದ ಇಂದ್ರಚಾಪವು ಕಾಣಬರುವದು. ಇದರ ಮೇಲಗಡೆ

ಬುದ್ಧಿ ಕೆಟ್ಟರೆ ಹಬ್ಬ ಕೆಟ್ಟೀತೆ?

ಬಣ್ಣವು ಕೆಂಪಾಗಿಯೂ ಕೆಳಗಿನ ಬಣ್ಣವು ಕನ್ನೈದಿಲೆಯ ಬಣ್ಣವುಳ್ಳದ್ದಾಗಿಯೂ ಇರುವದು. ಚಂದ್ರನಿಗೆ ಅಭಿಮುಖವಾಗಿ ಮುಳಿಹುಯ್ಯುವಾಗಲೂ ಇಂದ್ರಚಾಪವು ಕಾಣುವದುಂಟು; ಆದರೆ ಇದು ಬಹಳ ಅಪೂರ್ವ.

೬. ವಿದ್ಯುಚ್ಛಕ್ತಿ.

ಒಂದು ಗಾಜಿನ ಕೊಳಬಿಯನ್ನು ಬಂದು ಕಂಬಳೀಬಟ್ಟೆಯಿಂದ ಉಜ್ಜಿದರೆ ಸ್ವಲ್ಪಹೊತ್ತಿನಲ್ಲಿ ಆಗಾಜು ಶಾಖವಾಗಿ ಸವಿಾಪದಲ್ಲಿರತಕ್ಕ ಕಾಗದದ ಚೂರು ಗರಿ ಮುಂತಾದ ಹಗುರವಾದ ಪದಾರ್ಥಗಳನ್ನು ಮೊದಲು ತನ್ನ ಕಡೆಗೆ ಎಳೆದುಕೊಂಡು ಅನಂತರದಲ್ಲಿ ಹಿಂದಕ್ಕೆ ತಳ್ಳುವದು. ಹಾಗೆ ಶಾಖವಾದ ಗಾಜಿನ ಕೊಳಬಿಗೆ ನಮ್ಮ ಬೆರಳನ್ನು ಇಟ್ಟರೆ ಬಂದು ಕಿಡಿಯು ಹುಟ್ಟುವದು ಮತ್ತು ನಮ್ಮ ಬೆರಳನ್ನು ದಬ್ಬಳದಿಂದ ಚುಚ್ಚಿದಹಾಗೆ ಆಗುವದು. ಅದೇ ಕೊಳಬಿಯಿಂದ ಚನ್ನಾಗಿ ಶಾಖವಾಗುವವರಿಗೂ ಉಜ್ಜಿ, ಕೂಡಲೆ ಅದನ್ನು ಕೆನ್ನೀಬಳಿ ಹಿಡಿದರೆ ಕೆನ್ನೆಯಲ್ಲಿ ಜೋರು ಹಿಡಿದಹಾಗೆ ಆಗುವದು. ಗಂಧಕವನ್ನಾಗಲೀ, ಗಾಜಿನ ಪಾತ್ರೆಗಳನ್ನಾಗಲೀ, ಅರಗನ್ನಾಗಲೀ ಹೀಗೆಯೇ ಉಜ್ಜುವದಿಂದ ಆ ವಿದ್ಯುಚ್ಛಕ್ತಿಯು ಕಾಣಬರುವದು. ಹೀಗೆ ದೃಷ್ಟಿಗೆ ಗೋಚರವಾಗದೆ ಸ್ಪರ್ಶೇಂದ್ರಿಯಕ್ಕೆ ಮಾತ್ರ ಗೊತ್ತಾಗುವ ಶಕ್ತಿಗೆ ವಿದ್ಯುಚ್ಛಕ್ತಿಯೆಂದು ಹೇಳುವರು. ಈ ಶಕ್ತಿಯನ್ನು ಸುಲಭವಾಗಿ ಉಂಟುಮಾಡತಕ್ಕ ಯಂತ್ರಕ್ಕೆ ವಿದ್ಯುದುತ್ಪಾದಕಯಂತ್ರವೆಂದು ಹೆಸರು. ಈ ಯಂತ್ರದ ಶಕ್ತಿಯಿಂದ ಕ್ಷಣಮಾತ್ರದಲ್ಲಿ ಎಂಥಾ ಕಠಿನವಾದ ಲೋಹಗಳನ್ನಾದರೂ ಕರಗಿಸಬಹುದು; ಅಸಾಧ್ಯವಾದ ಅನೇಕ ಕೆಲಸಗಳನ್ನು ಮಾಡಬಹುದು. ಮೀಷೆಗಳಲ್ಲಿ ಈ ಶಕ್ತಿಯು ವಿಶೇಷವಾಗಿ ಇರುವದು. ಮೀಷೆಗಳು ಬಂದನ್ನೊಂದು ಉಜ್ಜುವದರಿಂದ ಹುಟ್ಟುವ ವಿದ್ಯುತ್ತೇ ಈ ಶಕ್ತಿಯು. ಮಿಂಚಿದ ಕೂಡಲೆ ಆಗತಕ್ಕ ಶಬ್ದವನ್ನೇ ನಾವು ಗುಡುಗೆಂದು ಹೇಳುತ್ತೇವೆ. ಈ ವಿದ್ಯುದ್ಜ್ವಾಲೆಯೆನ್ನು ಸಿಡಿಲು ಎಂದು ಹೇಳುವದುಂಟು. ಮರಗಳು,

ಒಪ್ಪಿತದ ಮಾತು ತಪ್ಪಿಸಬಾರದು.

ಮನೆಗಳು, ಇವುಗಳಿಗೆ ಈ ಜ್ವಾಲೆಯು ತಗಲಿದ್ದೇ ಆದರೆ ಅವು ಬಿದ್ದುಹೋಗುವವು. ಮಳೆಯು ಗುಡುಗು ಮಿಂಚುಗಳೊಂದಿಗೆ ಸೇರಿದಾಗ ಈ ವಿದ್ಯುಚ್ಛಕ್ತಿಯಿಂದ ವಾಯುಮಂಡಲದಲ್ಲಿ ಇರುವ ವಿಷಕಣಗಳೆಲ್ಲಾ ನಾಶವಾಗುವವು; ಭೂಮಿಯು ಫಲವತ್ತಾಗಿ ಸಸ್ಯಾದಿಗಳು ಚನ್ನಾಗಿ ಬೆಳೆಯುವವು. ಈ ಸಿಡಿಲಿನಿಂದ ಸಂಭವಿಸುವ ಬಾಧೆಗಳನ್ನು ತಪ್ಪಿಸಿಕೊಳ್ಳುವದಕ್ಕೆ ಬಂದು ಉಪಾಯ ಉಂಟು. ಏನೆಂದರೆ: — ಸಮಸ್ತ ಲೋಹಗಳಿಗೂ ಈ ವಿದ್ಯುಚ್ಛಕ್ತಿಯನ್ನು ಎಳೆದುಕೊಳ್ಳತಕ್ಕ ಶಕ್ತಿಯುಂಟು. ಆವದರಿಂದ ಬಂದು ಉದ್ದವಾದ ಕಬ್ಬಿಣದ ಸಲಾಕಿಯನ್ನು ಮಾಡಿಸಿ ಅದನ್ನು ಕಟ್ಟಡಗಳ ಸಮೀಪದಲ್ಲಿ ಕೆಳಗೆ ನೀರು ತಗಲುವವರಿಗೂ ಹೂಳಿಬಿಡುತ್ತಾರೆ. ಆ ಸಮೀಪದಲ್ಲಿ ಎಲ್ಲಾದರೂ ಸಿಡಿಲು ಬಿದ್ದರೂ ಈ ಸಲಾಕಿಯು ಅದನ್ನು ಆಕರ್ಷಿಸಿಕೊಂಡು ಭೂಮಿಯೊಳಕ್ಕೆ ಎಳೆದುಕೊಂಡು ಹೋಗಿ ಬಿಟ್ಟು ಬಿಡುತ್ತದೆ. ಇದರಿಂದ ಕಟ್ಟಡಕ್ಕೆ ಏನೂ ಬಾಧೆಯಿಲ್ಲ. ಗಿಡಗಳಿಗೂ ಈ ಶಕ್ತಿಯನ್ನು ಎಳೆದು ಕೊಳ್ಳುವ ಸಾಮರ್ಥ್ಯವುಂಟು ಮನೆಯ ಸುತ್ತಲೂ ದೊಡ್ಡ ದೊಡ್ಡ ಮರಗಳಿದ್ದರೆ ಅಂಥಾ ಮನೆಗೆ ಸಿಡಿಲಿನ ಭಯವೇನೂ ಇರುವದಿಲ್ಲ. ಯಾಕಂದರೆ, ಸಿಡಿಲನ್ನು ಮರಗಳು ಆಕರ್ಷಿಸುವದರಿಂದ ಆ ಸಿಡಿಲಿನಿಂದ ಬರುವ ಅಪಾಯವು ಮರಗಳಿಗೆ ತಗಲುವದು. ಗುಡುಗು ಮಿಂಚುಗಳೊಡನೆ ಸೇರಿ ಮಳೆ ಹುಯ್ಯುವಾಗ ಮರಗಳ ಕೆಳಗೆ ನಿಲ್ಲಬಾರದು. ಅಂಥಾ ಮಳೆಗಳು ಹುಯ್ಯುವಾಗ ಮನೆಯಲ್ಲಿದ್ದರೆ ಮನೆಯ ಮಧ್ಯಭಾಗದಲ್ಲಿ ಅಪಾಯವು ಕಡಿಮೆ.

೭. ಜ್ಯೋತಿಷ.

ಭೂಗೋಳಕ್ಕೆ ಚಕ್ರಭ್ರಮಣೆ ಯುಂಟೆಂಬುವದಕ್ಕೆ ಪ್ರಮಾಣಗಳು.

೫ನೇದು.—ಸೂರ್ಯನನ್ನು ನೋಡುವ ಯಂತ್ರದ ಮೂಲಕ ಸೂರ್ಯನನ್ನು ನೋಡಿದರೆ, ಮೇಘದಂತೆ ಸ್ವಲ್ಪ ಕಪ್ಪಾಗಿರುವ ಕೆಲವು ಪ್ರದೇಶಗಳು

ಒಣಗಿದ ಕಾಡಿಗೆ ಚಿಚ್ಚು ಬಿದ್ದಹಾಗೆ.

ಕಾಣಬರುವವು. ಈ ಕಪ್ಪಾದ ಪ್ರದೇಶಗಳು ಸೂರ್ಯಬಿಂಬದ ಪೂರ್ವ ಭಾಗದಿಂದ ಪಶ್ಚಿಮವಾಗಿ ಸಂಚರಿಸುವದನ್ನು ನೋಡುವೆವು. ಹೀಗೆ ಇವು ಪ್ರಯಾಣಮಾಡುತ್ತಾ ಕೆಲವು ದಿನಗಳನಂತರ ಕಣ್ಣಿಗೆ ಕಾಣಿಸದೆ ಮರೆಯಾಗುವವು. ಮತ್ತು ಸ್ವಲ್ಪ ಹೆಚ್ಚು ಕಡಿಮೆ ಒಂದು ಪಕ್ಷಕಾಲವಲ್ಲಿ ಇವು ಪುನಃ ಕಾಣಿಸಿಕೊಳ್ಳುವವು. ಹೀಗೆಯೇ ಇವು ಪ್ರತಿತಿಂಗಳಲ್ಲಿಯೂ ಮರೆಯಾಗುತ್ತಲೂ ಕಾಣುತ್ತಲೂ ಬರುವವು. ಇದರಿಂದ ಸೂರ್ಯನಿಗೆ ೨೫ ದಿನಗಳಿಗೆ ಒಂದುಸಾರಿ ಚಕ್ರಭ್ರಮಣೆ ಅಂದರೆ ಆತ್ಮಪ್ರದಕ್ಷಿಣೆಯುಂಟೆಂದು ನಮಗೆ ಸ್ಪಷ್ಟವಾಗಿ ಗೊತ್ತಾಗುವದು. ಹೀಗೆಯೇ ಇತರ ಗ್ರಹಗಳನ್ನೂ ಪರೀಕ್ಷಿಸಿ ನೋಡುವಲ್ಲಿ ನಮ್ಮ ಭೂಗೋಳದಷ್ಟೇ ಗಾತ್ರವುಳ್ಳ ಶುಕ್ರಗ್ರಹವು ೨೩೫ ಘಂಟೆಗಳಿಗೆ ಒಂದುಸಾರಿಯೂ, ಬೃಹಸ್ಪತಿಗ್ರಹವು ೧೦ ಘಂಟೆಗಳಿಗೆ ಒಂದು ಸಾರಿಯೂ ಆತ್ಮಪ್ರದಕ್ಷಿಣೆಮಾಡುವದನ್ನು ನೋಡುವೆವು. ಈ ಪ್ರಕಾರ ಸರ್ವಗ್ರಹಗಳಿಗೂ ಚಕ್ರಭ್ರಮಣೆಯುಂಟಾಗಿರುವದರಿಂದ ನಮ್ಮ ಭೂಗೋಳಕ್ಕೂ ಚಕ್ರಭ್ರಮಣೆಯುಂಟೆಂದೇ ಊಹಿಸತಕ್ಕದ್ದು ಸರಿಯಲ್ಲವೆ?

ಮುಂದೆ ಬರೆಯುವ ನಾಲ್ಕುಪ್ರಮಾಣಗಳೂ ಭೂಭ್ರಮಣೆಯನ್ನು ಪ್ರತ್ಯಕ್ಷವಾಗಿ ತೋರಿಸುವವುಗಳಾದ್ದರಿಂದ ಅವುಗಳನ್ನು ನಿಧಾನಿಸಿ ಪರೀಕ್ಷಿಸಬೇಕೆಂದು ಪ್ರಾರ್ಥಿಸುತ್ತೇವೆ. ಆ ಪ್ರಮಾಣಗಳನ್ನು ಚನ್ನಾಗಿ ತಿಳಿದುಕೊಳ್ಳುವದಕ್ಕೋಸ್ಕರ ಅವುಗಳನ್ನು ಹೇಳುವದಕ್ಕೆ ಮೊದಲು ತಿಳಿಯಬೇಕಾದ ಕೆಲವು ಅಂಶಗಳನ್ನು ಇಲ್ಲಿ ಹೇಳುತ್ತೇವೆ.

'ಮ ಗ ಕ' ಎಂಬುವದು ಒಂದು ದಂಡ. ಈದಂಡದಲ್ಲಿ ಕ, ಗ, ಮ ಎಂಬುವು ದಂಡದ ಮೂರು ಪ್ರದೇಶಗಳು ಅಥವಾ ಬಿಂದುಗಳು. 'ಮ' ಎಂಬ ಪ್ರದೇಶದಲ್ಲಿ ಗಟ್ಟಿಯಾಗಿ ಆದಿಮಿ ದಂಡವನ್ನು ತಿರುಗಿಸಲು ಒಂದುಸುತ್ತು ಬರುವಾಗ್ಗೆ 'ಮ' ಎಂಬ ಮಧ್ಯಪ್ರದೇಶಕ್ಕೆ ದೂರದಲ್ಲಿರುವ 'ಕ' ಎಂಬ ಬಿಂದುವು ಹೆಚ್ಚಾಗಿಯೂ, ಇನ್ನು ಸ್ವಲ್ಪ ಹತ್ತರವಿರುವ 'ಗ' ಬಿಂದುವು ಅದಕ್ಕಿಂತ ಕಡಿಮೆಯಾಗಿಯೂ, ಇದೇರೀತಿಯಲ್ಲಿ ಇನ್ನೂ ಹತ್ತರವಿರುವ

ಒಡ್ಡರಲ್ಲಿ ದಡ್ಡನಾಗಬಾರದು.

ಬಿಂದುಗಳು ಕಡಿಮೆ ಕಡಿಮೆಯಾಗಿಯೂ, ಒಂದೇಕಾಲದಲ್ಲಿ ಸಂಚರಿಸುವವಾ ದ್ದರಿಂದ ಮಧ್ಯಪ್ರದೇಶಕ್ಕೆ ದೂರವಿರುವ ಬಿಂದುವು ಅತ್ಯಂತ ವೇಗವುಳ್ಳದ್ದಾ ಗಿಯೂ, ಹತ್ತರಹತ್ತರವಿರುವವುಗಳು ಕಡಿಮೆಕಡಿಮೆಯಾದ ವೇಗವುಳ್ಳ ವುಗಳಾಗಿದ್ದೂ, ಮಧ್ಯಪ್ರದೇಶವು ಚಲಿಸದೆಯೂ ಇರುವವು. ಈ ವಿಷಯವು ಸ್ಪಷ್ಟವಾಗಿದೆ. ಹೀಗೆ ಮಧ್ಯಪ್ರದೇಶಕ್ಕೆ ಹತ್ತರವಿರುವ ಪ್ರದೇಶಕ್ಕಿಂತ ದೂರದಲ್ಲಿರುವ ಪ್ರದೇಶಗಳಿಗೆ ಪದಾರ್ಥದ ಚಕ್ರಭ್ರಮಣೆ ಯಿಂದ ವೇಗವು ಜಾಸ್ತಿಯಾಗಿರುವದು.

'ಅಕಗಕ್ಷ' ಎಂಬ ಈ ಅಂಡಾಕಾರವಾದ ಪದಾರ್ಥದ ಸಮಸ್ತ ಪ್ರದೇಶಗಳೂ ಈ ಅಂಡದ ಮಧ್ಯಗತರೇಖೆಗೆ ಸಮಸಪ್ರಮಾಣವಾಗಿ ಇರುವವಾದ್ದರಿಂದ ಆ ಬಿಂದು ಗಳಿಗೆ ಚಕ್ರಭ್ರಮಣೆಯಿಂದ ಉಂಟಾಗುವ ಸಮಸ್ತ ವೃತ್ತಗಳಿಗೆ ಮಧ್ಯಬಿಂದುಗಳೆಲ್ಲಾ ಈ ರೇಖೆಯಲ್ಲಿಯೇ ಇರುವವು. ಮೇಲೆ ವೃತ್ತಮಧ್ಯಪ್ರದೇಶ ಗಳಿಗೆ ಚಲನೆಯಿಲ್ಲವೆಂದು ತೋರಿಸಿ ಇದ್ದೇವಷ್ಟೆ. ಆದ್ದರಿಂದ ಇಂಥಾ ಮಧ್ಯಪ್ರದೇಶಗಳ ಸೇರಿಕೆಯಿಂದ ಉಂಟಾಗಿರುವ ಈ ಅಂಡಮಧ್ಯರೇಖೆಗೆ ಚಲನೆಯಿಲ್ಲ ಎಂಬುವದು ಸಿದ್ಧ. ಸಮಸ್ತವಸ್ತು ಗಳಲ್ಲಿಯೂ ಇರುವ ಇಂಥಾರೇಖೆಗೆ ಪದಾರ್ಥದ ಧೃವರೇಖೆಯೆಂದು ಜ್ಯೋ ತಿಷ್ಕರು ಹೇಳುವರು. ಮತ್ತು ಈ ಅಂಡದಲ್ಲಿ 'ಕ' ಎಂಬ ಪ್ರದೇಶವು ಈ ಧೃವರೇಖೆಗೆ ಸಮೀಪವಾಗಿಯೂ, 'ಗ' ಎಂಬುವದು ದೂರವಾಗಿಯೂ ಇರೋಣದರಿಂದ ಅಂಡಕ್ಕೆ ಚಕ್ರಭ್ರಮಣೆಯನ್ನುಂಟುಮಾಡಿದರೆ 'ಗ' ಎಂಬ ಬಿಂದುವು 'ಕ' ಎಂಬುವದಕ್ಕಿಂತ ವೇಗವಾಗಿ ಚಲಿಸುವದರಲ್ಲಿ ಏನೂ ಸಂಶಯವಿಲ್ಲವಷ್ಟೆ.



ಟಿಪ್ಪನೀದು.—ಭೂಗೋಳಕ್ಕೆ ಚಕ್ರಭ್ರಮಣೆಯುಂಟಾಗಿರುವದೇ ಸತ್ಯವಾಗಿದ್ದಲ್ಲಿ ಭೂಮಿಯ ಮೇಲಿರುವ ಯಾವದಾದರೂ ಒಂದು ಅತ್ಯುನ್ನತವಾದ ಗೋಪುರದ ತುದಿಯು ಆ ಗೋಪುರದ ಬುಡಕ್ಕಿಂತಲೂ ವೇಗವಾಗಿ

ಚಲಿಸುವದು. ಆದ್ದರಿಂದಲೇ ನಾವು ಬಂದು ಕಲ್ಲುಗುಂಡನ್ನು ಗೋಪುರದ ತುದಿಯಿಂದ ಬಿಟ್ಟರೆ ಅಂಥಾ ಕಲ್ಲಿಗೆ ಗೋಪುರದ ಬುಡಕ್ಕಿಂತ ಹೆಚ್ಚಾದ ವೇಗ ವಿರೋಧದರಿಂದ ಅದು ಬುಡದಲ್ಲಿಯೇ ಬಿಳದೆ ಮುಂದಕ್ಕೆ ಬಿಳುವದು. ಇದನ್ನು ಎಲ್ಲರೂ ಪರೀಕ್ಷಿಸಿ ನೋಡಬಹುದು. ಮತ್ತು ಈ ಕಲ್ಲು ಪೂರ್ವದ ಕಡೆಗೇ ಬೀಳುವದರಿಂದ ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ತಿರುಗುತ್ತಾ ಇದೆ ಯೆಂದು ಗೊತ್ತಾಗುವದು.

೩ನೇದು.— ವಿಷುವದ್ವೃತ್ತದ ಬಳಿ ಇರುವ ಪ್ರದೇಶಗಳಲ್ಲಿ ಇತರ ಪ್ರದೇಶಗಳಿಗಿಂತ ಬಿಸಿಲಿನ ರುಳವು ಹೆಚ್ಚಾಗಿರುವದರಿಂದ ಆ ಪ್ರದೇಶಗಳ ಲ್ಲಿನ ವಾಯುವು ಶಾಖದಿಂದ ಹಗುರವಾಗಿ ಮೇಲಕ್ಕೆ ಎದ್ದು ಹೋಗುವದು. ಹೀಗೆ ಉಷ್ಣ ವಾದ ವಾಯುವು ಹೋಗಿ ಬರಿದಾಗಿರುವ ಸ್ಥಳವನ್ನು ಆಕ್ರ ಮಿಸಿಕೊಳ್ಳುವದಕ್ಕೋಸ್ಕರ ಶೀತಪ್ರದೇಶಗಳ ಬಳಿ ಇರುವ ಪ್ರದೇಶಗಳಿಂದ ಶೀತವಾದ ವಾಯುವು ಇಲ್ಲಿಗೆ ನುಗ್ಗಿ ಬರುವದು. ಹೀಗೆ ಭೂಮಿಯು ಸ್ಥಿರವಾಗಿ ಇದ್ದ ಪಕ್ಷದಲ್ಲಿ ಉತ್ತರ ದಕ್ಷಿಣ ಧ್ರುವಗಳಿಂದ ಸರಿಯಾಗಿ ಬೀಸುವ ಗಾಳಿಯು ಉತ್ತರಾರ್ಧಗೋಳದಲ್ಲಿರುವವರಿಗೆ ದಕ್ಷಿಣವಾಯುವಾಗಿಯೂ ಪಶ್ಚಿಮಾರ್ಧಗೋಳದಲ್ಲಿರುವವರಿಗೆ ಉತ್ತರವಾಯುವಾಗಿಯೂ ಇದೆ. ಆದರೆ ಈ ಭೂಗೋಳಕ್ಕೆ ಪಶ್ಚಿಮದಿಂದ ಪೂರ್ವಾಭಿಮುಖವಾದ ಚಕ್ರ ಭ್ರಮಣೆ ಯುಂಟಾಗಿರುವದು ಸತ್ಯವಾದಲ್ಲಿ ವಿಷುವದ್ವೃತ್ತದ ಬಳಿ ಇರುವ ಬಿಂದುವು ಧ್ರುವದ ಬಳಿ ಇರುವ ಬಿಂದುವಿಗಿಂತ ವೇಗವಾಗಿ ಚಲಿಸುವದು. ಆದ್ದರಿಂದ ಉತ್ತರದಿಂದ ಬರುವ ವಾಯುಪರಮಾಣುಗಳು ವಿಷುವದ್ವೃತ್ತದ ಬಳಿ ಇರುವ ಬಿಂದುಗಳಿಗಿಂತ ಕಮ್ಮಿ ವೇಗದಿಂದಬರುವವು. ಆದ್ದರಿಂದ ಈ ಗಾಳಿಗೆ ವೇಗ ಕಡಿಮೆಯಾಗಿ ಇರುವದರಿಂದಲೂ, ಭೂಮಿಯು ಪಶ್ಚಿಮಪೂರ್ವವಾಗಿ ತಿರುಗುವದರಿಂದಲೂ, ಈ ಗಾಳಿಯು ಪೂರ್ವದಿಂದ ಪಶ್ಚಿಮಕ್ಕೆ ಬೀಸುವಂತೆ ಕಾಣುವದು. ಈ ಎರಡು ವಿಧವಾದ ಚಲನೆಗಳಿಂದ ನಮಗೆ ಈಶಾನ್ಯವಾಗಿ ಬೀಸುವಂತೆ ಕಾಣುವದು. ದಕ್ಷಿಣಗೋಳದವರಿಗೆ ಆಕಡೆಗೇ ಗಾಳಿಯು ಆಗ್ನೇಯದಿಂದ ಬೀಸುವಂತೆ ಕಾಣುವದು. ವಿಷುವದ್ವೃತ್ತದ ಬಳಿ ನಮು

ಒಗಟು ಮಾತಿಗೆ ಸಟಗಾ ತಂದ.

ದ್ರಗಳಲ್ಲಿ ಸಂಚಾರ ಮಾಡತಕ್ಕ ವರ್ತಕರೆಲ್ಲಾ ಇದನ್ನು ತಿಳಿದು ತಮ್ಮ ಹಡಗುಗಳನ್ನು ನಡಿಸುವದರಲ್ಲಿ ಈ ಗಾಳಿಯನ್ನು ಉಪಯೋಗಿಸಿಕೊಳ್ಳುತ್ತಾರೆ. ಆದ್ದರಿಂದ ಈ ಭೂಗೋಳವು ಪಶ್ಚಿಮದಿಂದ ಪೂರ್ವಕ್ಕೆ ತಿರುಗುವದೆಂದು ಗೊತ್ತಾಗಿದೆ.

೮ನೇದು.— 'ಗ' ಎಂಬ ಬಂದು ಕಬ್ಬಿಣದ ಗುಂಡನ್ನು 'ಡ' ಎಂಬ ದಾರಕ್ಕೆ ತಗಲಿಸಿ 'ಪ' ಬಳಿಯಿಂದ ಸಳೆದುಬಿಟ್ಟರೆ ಆ ಗುಂಡು 'ಪಗ' ಎಂಬ ಪರಿಧ್ಯಂಶದಲ್ಲಿ ಲೋಲಾಡುವದು. ಹೀಗೆ ಲೋಲಾಡುತ್ತಿರುವಾಗ ಗುಂಡಿಗೆ ಕಟ್ಟಿರುವ ದಾರವನ್ನು ನುಲಚಿದರೆ ಬಂದುವೇಳೆ ಗುಂಡು ತಿರುಗಿದಾಗ್ಯೂ ಪೂರ್ವಪರಿಧಿಯಲ್ಲಿಯೇ ಲೋಲಾಡುವದೇ ಹೊರತು ಆ ಪರಿಧಿಯು ದಿಕ್ಕು ವ್ಯತ್ಯಾಸವಾಗುವದಿಲ್ಲ. 'ಕಡಲ' ಎಂಬ ತೊಲೆಗೆ 'ಗ' ಎಂಬ ಭಾರವಾದ ಬಂದು ಕಬ್ಬಿಣದ ಗುಂಡಿಗೆ 'ಡಗ' ಎಂಬ ತಂತಿಯನ್ನು ಕಟ್ಟಿ ನೇತಹಾಕಿ ಗುಂಡು ಲೋಲಾಡುವಂತೆ ಮಾಡಿದರೆ ಭೂಮಿಯು ತಿರುಗದೆ ಇದ್ದ ಪಕ್ಷದಲ್ಲಿ ಮೇಲೆ ಹೇಳಿರುವಂತೆ 'ಪರಿ' ಎಂಬ ಲೋಲಕದ ದಿಕ್ಕು ಏನೇನೂ ವ್ಯತ್ಯಾಸವಾಗಲಾರದು. ಭೂಮಿಗೆ ಚಕ್ರಭ್ರಮಣೆಯು ಸತ್ಯವಾಗಿ ಇದ್ದಪಕ್ಷದಲ್ಲಿ ಲೋಲಕದ ದಿಕ್ಕು ವ್ಯತ್ಯಾಸವಾಗಬೇಕಲ್ಲವೆ ? ಹೀಗೆ ವ್ಯತ್ಯಾಸವಾಗತಕ್ಕದ್ದನ್ನು ಎಲ್ಲರೂ ನೋಡಬಹುದು. ಗುಂಡನ್ನು ಉತ್ತರ ಧೃವದ ಬಳಿ ನೇತಹಾಕಿ ಯಾವನಾದರೂ ತನಗೆ ಅಭಿಮುಖವಾಗಿ ಲೋಲಾಡುವಂತೆ ಗುಂಡನ್ನು ಲೋಲಾಡಿಸಿದರೆ ಅದು ಲೋಲಾಡುತ್ತಾ ಕೆಲವು ಘಂಟೆಗಳಾದಮೇಲೆ ಪಾರ್ಶ್ವವಾಗಿ 'ಚಗಜ' ಪರಿಧಿಯಲ್ಲಿ ಲೋಲಾಡುವಂತೆ ಕಾಣಬರುವದು. ದಕ್ಷಿಣಧೃವದಬಳಿ ನೇತಹಾಕಿದರೂ ಹೀಗೆಯೇ ಲೋಲಕದ ದಿಕ್ಕು ವ್ಯತ್ಯಾಸವಾಗುವದು. ಎರಡು ಧೃವಗಳಿಗೂ ಸಮದೂರದಲ್ಲಿರುವ



ಒಬ್ಬ ಭೋಗಿಯಾದರೆ ಮತ್ತೊಬ್ಬ ಜೋಗಿ.

ವಿಷುವದ್ವೃತ್ತದಬಳಿ ಲೋಲಕದದಿಕ್ಕು ಬೇರೆಯಾದಂತೆ ಸಹಜವಾಗಿ ಕಾಣಬರುವದಿಲ್ಲ. ನಾವು ವಿಷುವದ್ರೇಖೆಗೆ ಬಹಳ ಸಮೀಪದಲ್ಲಿ ಇರುವದರಿಂದ ನಮಗೆ ಲೋಲಾಡುವ ದಿಕ್ಕು ವ್ಯತ್ಯಾಸವಾದಂತೆ ಕಾಣುವದು ಬಹಳ ಸ್ಪಷ್ಟವಾಗಿಲ್ಲ. ಆದರೂ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಗುಂಡು ಲೋಲಾಡುವಂತೆ ಮಾಡಿದರೆ ಲೋಲಕದ ದಿಕ್ಕು ವ್ಯತ್ಯಾಸವಾಗುವದು ಸ್ಪಷ್ಟವಾಗಿ ತಿಳಿಯುವದು. ಮತ್ತು ಗಣಿತ ಶಾಸ್ತ್ರದ ಸಹಾಯದಿಂದ ಇಂಥಾ ಪ್ರದೇಶದಲ್ಲಿ ಇಷ್ಟೇ ವ್ಯತ್ಯಾಸವಾಗುವದೆಂದು ಗೊತ್ತಾಗಿ ನಿರ್ಣಯಿಸಬಹುದು. ವಿಷುವದ್ರೇಖೆಗೆ ೧೮॥ ಭಾಗ ದೂರದಲ್ಲಿರುವ ಮೈಸೂರಲ್ಲಿ ೧೦ ಘಂಟೆಗಳಿಗೆ ೪೦ ಭಾಗಗಳ ವ್ಯತ್ಯಾಸವು ಲೋಲಕದ ದಿಕ್ಕಿನಲ್ಲಿ ಕಾಣಬರುವದು. ಇದೇ ವಿಷುವದ್ರೇಖೆಗೆ ಸುಮಾರು ೭೩½ ಲಂಬಾಂಶದಲ್ಲಿರುವ ಉಜ್ಜಯಿನೀ ಪಟ್ಟಣದಲ್ಲಿ ೬೦ ಭಾಗಗಳು ವ್ಯತ್ಯಾಸ ಕಾಣಬರುವದು. ಹೀಗೆ ಆಗುವದನ್ನು ಇಂಗ್ಲಿಷರು ಅನೇಕ ದೇಶಗಳಲ್ಲಿ ಪರೀಕ್ಷೆ ಮಾಡಿ ನೋಡಿದ್ದಾರೆ, ಮತ್ತು ಹಾಗೆ ನೋಡಬೇಕೆಂಬ ಕುತೂಹಲವುಳ್ಳವರೆಲ್ಲರೂ ನೋಡುವದರಲ್ಲಿ ಏನೂ ಕಷ್ಟವಿಲ್ಲ. ಹೀಗೆ ಲೋಲಕದ ಭ್ರಮಣದಿಕ್ಕು ವ್ಯತ್ಯಾಸವಾದಂತೆ ಕಾಣಬರುವದರಿಂದ ಭೂಗೋಳಕ್ಕೆ ಚಕ್ರಭ್ರಮಣೆಯುಂಟೆಂಬುವದಕ್ಕೆ ಏನೇನೂ ಸಂಶಯವಿಲ್ಲ.

ಗಮನೇಪು.—ಬಂದು ಬುಗರಿಯನ್ನು ಸ್ವಲ್ಪ ವಾರೆಯಾಗಿ ಗರ್ರನೆ ತಿರುಗುವಂತೆ ಆಡಿಲು ನಾವು ಏನ್ನೇನೂ ಮಾಡದೆ ಇದ್ದರೆ ಆ ಬುಗುರಿಯು ವಾರೆಯಾಗಿಯೇ ಆಡುತ್ತಾ ಇರುವದಲ್ಲದೆ ನೆಟ್ಟಗೆ ನಿಲ್ಲುವದೂ ಇಲ್ಲ, ಕೆಳಗೆಬಿದ್ದು ಹೋಗುವದೂ ಇಲ್ಲ,ಅಂದರೆ ಅದರ ಮಧ್ಯರೇಖೆಯಾದ ಧ್ರುವರೇಖೆಯು ಬಿಡುವಾಗ ಯಾವ ದಿಕ್ಕನ್ನು ತೋರಿಸುವದೋ ಅಮೇಲೆಯೂ ಅದೇ ದಿಕ್ಕನ್ನು ತೋರಿಸುತ್ತಾ ಗರ್ರನೆತಿರುಗುತ್ತಾ ಇರುವದು ಎಂದು ಅರ್ಥ. ಹುಡುಗರು ಪೀಪಾಯಿಗಳಿಗೆ ಹಾಕಿಬರುವ ಕಬ್ಬಿಣದ ಪಟ್ಟಿಗಳನ್ನು ಬಂಗರ ತಿರುಗಿಸುವಾಗ್ಗೆಅವು ವಾರೆಯಾಗಿಯೇ ತಿರುಗುತ್ತಾ ಹೋಗುವವು. ಇದಲ್ಲದೆ ಭಂಡೀಚಕ್ರವನ್ನು ಬೀದಿಯಲ್ಲಿ ಉರುಳಿಸಿಕೊಂಡು ಹೋಗುವಾಗ್ಗೆ ಆ ಚಕ್ರವು ನಿಂತರೆ

ಒಲೆ ಸೊಟ್ಟಾದರೆ ಬದನೇಕಾಯಿ ಬೇಯದೆ ?

ಬಿದ್ದುಬಿಡುವದು; ಹಾಗೆಲ್ಲದೆ ಉರುಳಿಕೊಂಡು ಹೋಗುತ್ತಾಲೇ ಇದ್ದರೆ ಬೀಳದೆ ಹೋಗುತ್ತಲೇ ಇರುವದು. ಹೀಗೆಯೇ ಇನ್ನಾವದೊಂದೂ ತೊಂದರೆಯಿಲ್ಲದೆ ಚಕ್ರಭ್ರಮಣೆಯಲ್ಲಿರುವ ಪದಾರ್ಥಗಳ ಧೃವರೇಖೆಯ ದಿಕ್ಕು ವ್ಯತ್ಯಾಸವಾಗದೇಲೇ ಇರುತ್ತದೆ. ಇಂಥಾದ್ದೊಂದು ಯಂತ್ರವನ್ನು ಮಾಡಿ ಅದರ ಧೃವರೇಖೆಯನ್ನು ಯಾವದಾದರೂ ಒಂದು ನಕ್ಷತ್ರಕ್ಕೆ ಸರಿಯಾಗಿ ಇಟ್ಟರೆ ನಕ್ಷತ್ರಕ್ಕೆ ಚಲನೆಯಿಲ್ಲದ ಪಕ್ಷದಲ್ಲಿ ಈ ರೇಖೆಯು ಯಾವಾಗಲೂ ಆ ನಕ್ಷತ್ರವನ್ನೇ ತೋರಿಸುತ್ತಿರುವದು. ನಕ್ಷತ್ರಕ್ಕೆ ಚಲನೆಯುಂಟಾದ ಪಕ್ಷದಲ್ಲಿ ನಕ್ಷತ್ರವು ತೋರಿಸಲಾರದಷ್ಟೆ ? ನಕ್ಷತ್ರ ಚಲಿಸದೆ ಭೂಮಿ ಚಲಿಸಿದರೆ ಈ ರೇಖೆಯು ಕಕ್ಷವನ್ನೇ ತೋರಿಸುತ್ತಾ ಭೂಮಿಯೊಡನೆ ತಿರುಗಬೇಕಲ್ಲವೆ ? ಇಂಥಾ ಯಂತ್ರವನ್ನು ಯೂರೋಪಿನವರು ಮಾಡಿರುತಾರೆ. ಅದನ್ನು ಈ ಕೆಳಗೆ ವಿವರಿಸುವೆವು.

ಇಲ್ಲಿ 'ಡ ಢ' ಎಂಬುವದು ಭಾರವಾದ ಲೋಹದ ಚಕ್ರ. 'ಬ' ಎಂಬ ವೃತ್ತಕೇಂದ್ರದಮೂಲಕ ಹಾಯ್ದುಹೋಗುವ ರೇಖೆಯೇ ಈ ಲೋಹ ಚಕ್ರದ ಮಧ್ಯರೇಖೆ ಅಂದರೆ ಅಕ್ಷರೇಖೆ. ಈ ರೇಖೆಯು ಚಕ್ರಕ್ಕೆ ಸಮಕೋಣವಾಗಿದೆ. ಈ ಅಕ್ಷರೇಖೆಯ ಕೊನೆಗಳು 'ಶ ಷ' ಎಂಬ ವಿವರ್ತಕಕೀಲಗಳಲ್ಲಿ ಇರಿಸಲ್ಪಟ್ಟಿವೆ. ಈ ವಿವರ್ತಕಕೀಲಗಳು 'ಬ ಶ ಭ ಷ' ಎಂಬ ವೃತ್ತದ ವ್ಯಾಸದ ಕೊನೆಗಳಲ್ಲಿವೆ. ಈ 'ಬ ಶ ಭ ಷ' ಎಂಬ ವೃತ್ತದಲ್ಲಿ ತೂಗುವ ತ್ರಾಸುಗಳಲ್ಲಿ ಚೂರೀತುಂಡುಗಳಂತಿರುವ ಎರಡು ಧಾರಗಳು 'ಬ ಭ' ಎಂಬ ಕಡ್ಡಿಗಳಲ್ಲಿವೆ. 'ಬ ಭ' ಎಂಬ ರೇಖೆಯನ್ನೇ 'ಶ ಷ'



ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು.

ಎಂಬ ರೇಖೆಗೆ ಸಮಕೋಣವಾಗಿ ಇರಿಸಿದೆ. ಮೇಲೆ ಹೇಳಿದ ಧಾರಗಳು 'ಅ ಬ ಆ ಭ' ಎಂಬ ಊರ್ಧ್ವಾಧರವೃತ್ತದ ಪೂರ್ವ ಪಶ್ಚಿಮರೇಖೆಯ ತುದಿಗಳಲ್ಲಿರುವ ರಂಧ್ರಗಳಲ್ಲಿ ಇರಿಸಲ್ಪಟ್ಟಿವೆ. 'ಅ ಬ ಆ ಭ' ಎಂಬ ವೃತ್ತವನ್ನು ಬಹಳ ನಯವಾಗಿಯೂ, ತೆಳುವಾಗಿಯೂ ಇರುವ 'ಅ ಸ' ಎಂಬ ತಂತಿಯು ಮೂಲಕ 'ಸ' ಎಂಬ ಪ್ರದೇಶಕ್ಕೆ ನೇತಹಾಕಿ ಇದೆ. 'ಅ ಆ' ಎಂಬ ಊರ್ಧ್ವಾಧರ ಅಕ್ಷರೇಖೆಯು ಕೊನೆಯಾದ 'ಆ' ಎಂಬ ಪ್ರದೇಶದಲ್ಲಿ ಸಣ್ಣ ರಂಧ್ರದಲ್ಲಿ ನಿಂತಿರುವ ಚಿಕ್ಕದೊಂದು ಗೂಟವು ಇದೆ. ವಿವರ್ತಕಕೀಲಗಳನ್ನೂ ಚಕ್ರಗಳನ್ನೂ ಚನ್ನಾಗಿ ಬರಸಬೇಕು. ಹೀಗೆ ಚನ್ನಾಗಿ ಬರಸಿ ಇಡುವವರಿಂದ ಯಂತ್ರದಲ್ಲಿನ ಭಾಗಗಳ ಪರಸ್ಪರಘರ್ಷಣವು ಬಹಳ ಕಡಿಮೆಯಾಗುತ್ತದೆ; ಮತ್ತು ಲೋಹಚಕ್ರವೇ ಮೊದಲಾದವುಗಳು ಸೇರುವ ಬಟ್ಟೆಯಂತ್ರಕ್ಕೆ 'ಬ' ಎಂಬ ಪ್ರದೇಶವೇ ಮುಖ್ಯವಾಗಿದೆ. ಈ ಯಂತ್ರದ ಎಲ್ಲಾ ಪ್ರದೇಶಗಳೂ 'ಶ ಷ' ಎಂಬ ರೇಖೆಗೆ ಸಮಸಪ್ರಮಾಣದೂರದಲ್ಲಿ ಇರುವವಾದ್ದರಿಂದ ಈ ಯಂತ್ರಕ್ಕೆ 'ಶ ಷ' ಎಂಬ ರೇಖೆಯು ಧೃವರೇಖೆಯಾಗುವದು. ಈ ಯಂತ್ರದ ಭಾರವೆಲ್ಲಾ 'ಬ' ಎಂಬ ಮಧ್ಯಪ್ರದೇಶದ ಮೂಲಕ ಅವುಕುತ್ತದೆ. 'ಸ ಅ' ಎಂಬ ತಂತಿಯು ಮೇಲಕ್ಕೆ ಸೆಳೆಯುವದರಿಂದಲೂ, ಕೆಳಗಡೆ 'ಆ' ಎಂಬ ಪ್ರದೇಶದಲ್ಲಿರುವ ಬತ್ತಿನ ಬಲದಿಂದಲೂ, ಈ ಭೂಮಿಯ ಆಕರ್ಷಣೆ ಅಂದರೆ ಯಂತ್ರದ ಭಾರವು ಲೋಹಚಕ್ರಭ್ರಮಣೆಗೆ ಏನೂ ತೊಂದರೆ ಮಾಡಲಾರದು.

ಈ ಯಂತ್ರವನ್ನು ನಮ್ಮಲ್ಲಿರುವ ಪ್ರಜ್ಞಾವಂತರು ತರಿಸಿ, ನಮ್ಮ ಜನಗಳಿಗಿರುವ ಭಚಕ್ರಭ್ರಮಣೆ ಯೆಂಬ ಭ್ರಮೆಯನ್ನು ನಿಮಿಷಮಾತ್ರದಲ್ಲಿ ಬಿಡಿಸಿ ಭೂಭ್ರಮಣೆಯೇ ಸತ್ಯವಾದದ್ದೆಂದು ತೋರಿಸುವದರಲ್ಲಿ ಪ್ರಯತ್ನಪಡುವರೆಂದು ಸಂಪೂರ್ಣವಾಗಿ ನಂಬಿಇದ್ದೇವೆ.

ಕೋ॥ ಕಂ॥ ವೆ॥

ಓಡಿ ಸಿಕ್ಕ್ಹಾಕಿ, ಆಡಿ ತಪ್ಪಬೇಡ.

೪. ಮೈಸೂರು ಗೆಜೆಟ್ ಸಂಗ್ರಹ.

ಜನವರೀ ತಾರೀಖು ೬.—ಮೆಸರ್ಸ್ ವಿ. ಹೆಚ್. ಕಾರ್ವರವರು ಎಗ್ಸಿಕ್ಯೂಟಿವ್ ಎಂಜಿನಿಯರ್ ಮೆಸರ್ಸ್ ಬೇಲೀ ಸಾಹೇಬರಿಂದ ಮೈಸೂರು ಡಿವಿಜ್ಞ್ ಚಾರ್ಜ್ ತೆಗೆದುಕೊಂಡರು.

ಜನವರೀ ತಾರೀಖು ೭ಂ.—ಬೆಂಗಳೂರು ಡಿಸ್ಟ್ರಿಕ್ಟ್ ಡಿಸ್ಟ್ರಿಕ್ಟ್ ಕಮಿಷನರ್ ಮೆಸರ್ಸ್ ಕೆಪ್ಟ್ ಎ. ಹೆಚ್. ಮೆಕ್ಕಿಂಟೈರ್ ಸಾಹೇಬರವರಿಗೆ ಮೂರುತಿಂಗಳ ರಜಾ ಕೊಟ್ಟಿದೆ.

ಜನವರೀ ತಾ॥ ೭೩.—ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರವುಳ್ಳ ಸರಕಾರದ ಉದ್ಯೋಗಸ್ಥರೆಲ್ಲರೂ ತಮ್ಮ ಅಧಿಕಾರಕ್ಕೆ ಒಳಪಟ್ಟ ಪ್ರದೇಶಗಳಲ್ಲಿ ಇರತಕ್ಕ ಅಥವಾ ತಮ್ಮ ಕೋರ್ಟಿಗೆ ಏನಾದರೂ ಕೆಲಸವಾಗಿ ಬಂದ ಜನಗಳಲ್ಲಿ ಆದಾಯಕರವಾದ ಯಾವ ಲೇವಾದೇವಿಯನ್ನೂ ಇಟ್ಟುಕೊಳ್ಳಕೂಡದು ಪ್ರಕೃತದಲ್ಲಿ ಅಂಥಾ ಲೇವಾದೇವಿಗಳನ್ನು ಮಾಡಿರತಕ್ಕ ಡಿಸ್ಟ್ರಿಕ್ಟ್ ಜಡ್ಜಿಗಳು, ಡಿಪ್ಯೂಕಮ್ಮಿಷನರುಗಳು, ಅಸಿಸ್ಟೆಂಟ್ ಕಮ್ಮಿಷನರುಗಳು, ಮುನಸೀಫರು, ಅಮಲ್ದಾರರು, ಡಿಪ್ಯೂ ಅಮಲ್ದಾರರು ಎಲ್ಲರೂ ತಮ್ಮ ಲೇವಾದೇವೀ ವಿಷಯವನ್ನೂ ಯಾರಿಂದಲಾದರೂ ಹಣ ತೆಗೆದುಕೊಂಡಿದ್ದರೆ ಅವರ ಹೆಸರುಗಳನ್ನೂ ತೆಗೆದುಕೊಂಡು ಇರತಕ್ಕ ಮೊಬಲಗನ್ನೂ ಬರೆದು ತಮ್ಮ ಮೇಲ್ವಿಚಾರಣೆಯ ಆಫೀಸರುಗಳ ಮೂಲಕವಾಗಿ ಸರಕಾರಕ್ಕೆ ಸರಕಾರದ ತಿಳುವಳಿಕೇ ಬಗ್ಗೆ ಕಳುಹಿಸಿ ಕೊಡಬೇಕು.

ಫರ್ಸ್ಟ್ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸರ್ಸ್ ಇ. ಸಿ. ಷಣ್ಮುಗವೇಲು ಪಿಳ್ಳೈಯವರು ಮೆಸರ್ಸ್ ರಿಕ್ಕೆಟ್ಸ್ ಸಾಹೇಬರವರು ವಿಲಾಯಿತಿಯಿಂದ ಬರುವವರಿಗೆ ಅಥವಾ ಇನ್ನೊಂದು ಹುಕುಂ ಕೊಡುವವರಿಗೆ ಬೆಂಗಳೂರು ಡಿಸ್ಟ್ರಿಕ್ಟಿಗೆ ಡಿಪ್ಯೂಕಮಿಷನರಾಗಿಯೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ ಇರತಕ್ಕದ್ದು.

ಬೆಂಗಳೂರು ಟೌನ್ ಮ್ಯಾಜಿಸ್ಟ್ರೇಟ್ ಮೆಸರ್ಸ್ ಪಿ. ಎಸ್. ಪೂರ್ಣಯ್ಯನವರು ಇನ್ನೊಂದು ಹುಕುಂ ಕೊಡುವವರಿಗೂ ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರೀ ಆಫೀಸರಾಗಿ ಇರತಕ್ಕದ್ದು.

ಜನವರೀ ತಾ॥ ೭೪.—ಹಾಸನದ ಸಬ್ ಡಿವಿಜ್ಞ್ ಅ॥ ಕ॥ ಮೆಸರ್ಸ್ ಟಿ. ಆನಂದರಾಯರವರು ರೆವಿನ್ಯೂ ಇಲಾಖೆ ಅಂಡರ್ ಸೆಕ್ರಿಟರಿಗೆಳಾಗಿ ಇರತಕ್ಕದ್ದು. ಮೈಸೂರು ಅ॥ ಕ॥ರವರು ಮೆಸರ್ಸ್ ಬಿ. ತಿರುಮಲಾಚಾರ್ಯರವರು ಹಾಸನದ ಸಬ್ ಡಿವಿಜ್ಞ್ ಅ॥ ಕ॥ರಾಗಿ ಇರತಕ್ಕದ್ದು. ದಿವಾನರ ಪ್ರೈವೇಟ್ ಸೆಕ್ರಿಟರಿಯವರು ಮೆಸರ್ಸ್ ಸಿ. ವಿ. ರಾಘವಾಚಾರ್ಯರವರು ಬೆಂಗಳೂರು ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟರಾಗಿ ಇರತಕ್ಕದ್ದು. ಅ॥ ಕ॥ ಮೆಸರ್ಸ್ ಎಂ. ಕೃಷ್ಣಸ್ವಾಮಯ್ಯಂಗಾರ್ಯರಿಗೆ ಈ ತಾರೀಖು ಲಾಗಾಯಿತು ೭ ತಿಂಗಳ ರಜಾ ಕೊಟ್ಟಿದೆ.

ಓಡುವವನ ಕಂಡಿ ಅಟ್ಟುವವಗೆ ಘನ.

ಜನವರೀ ತಾ॥ ೧೦.—ಈ ಕೆಳಗೆ ಹೇಳಿರತಕ್ಕ ರೇವಿನ್ಯು ಅಸಿಸ್ಟೆಂಟ್ ಕಮ್ಮಿಷನರುಗಳನ್ನೆಲ್ಲಾ ಪೋಲೀಸ್ ಅ॥ ಕ॥ ರುಗಳನ್ನಾಗಿ ನೇಮಿಸಿ ಇದೆ.—

ಮೆ॥ ಕೃಷ್ಣಯ್ಯಂಗಾರ್ಯರು.	..	... ಬೆಂಗಳೂರು ಡಿಸ್ಟ್ರಿಕ್ಟ್‌ಗೆ
ಮೆ॥ ಜಿ. ರಘುನಾಥರಾಯರು.	..	.. ಕೋಲಾರಕ್ಕೆ.
ಮೆ॥ ಎಸ್. ಕೃಷ್ಣರಾಯರು.	..	.. ತುಮಕೂರಿಗೆ.
ಮೆ॥ ಸಿ. ಮಾದಯ್ಯನವರು.	..	.. ಮೈಸೂರಿಗೆ.
ಮೆ॥ ಸಯ್ಯದ್‌ನಸೀರು ದ್ದೀನ್ ಸಾಹೇಬರು.		.. ಶಿವಮೊಗ್ಗಕ್ಕೆ.
ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ಯರು.		.. ಕಡೂರಿಗೆ.

೧೪೪೫ನೇ ಇಸವಿ ಜನವರೀ ತಾ॥ ೭೪ರವರಿಗಿನ ಕಾಲಸ್ಥಿತಿಯ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟು.—ಪೈರು ಚೆನ್ನಾಗಿದೆ. ಖುಷ್ಕಿ ಬೆಳೆಯು ಮುಗಿಯುತ್ತಾ ಬಂತು. ಕಾರ್ತೀಕದ ಪುಣಜೆ ಬತ್ತ ಬೆಳೆಯಾಗುವದರಲ್ಲಿದೆ. ಈಚಿಗೆ ಬಿತ್ತಿದ ವೈಶಾಖದ ಬೆಳೆಯು ನೀರಿಲ್ಲದೆ ಬಣಗಿ ಹೋಗುತ್ತಾ ಇದೆ. ಕುಡಿಯುವ ನೀರೂ ದನಗಳ ಮೇವೂ ನಿತ್ಯವೂ ಕಡಮೆಯಾಗುತ್ತಾ ಇವೆ. ರೂಪಾಯಿ ೧ಕ್ಕೆ ದುಯ್ಯಂ ಅಕ್ಕಿ ೯॥ ಸೇರು, ರಾಗಿ ಮತ್ತು ಹುರಳಿ ೧೦॥ ಸೇರು.

ಕೋಲಾರ ಡಿಸ್ಟ್ರಿಕ್ಟು.—ಪೈರು ಚೆನ್ನಾಗಿದೆ. ಕಾಲಸ್ಥಿತಿಯು ಅಧೈರ್ಯಕರವಾಗಿದೆ. ನೀರೂ ಹುಲ್ಲೂ ಸಿಕ್ಕುತ್ತವೆ. ದಾರಣೆವಾಸಿಯು ಹೆಚ್ಚುತ್ತಾ ಇದೆ. ರೂಪಾಯಿ ೧ಕ್ಕೆ ಅಕ್ಕಿ ೮—೧೧ ಸೇರು, ರಾಗಿ ೧೦—೧೪ ಸೇರು.

ತುಮಕೂರು ಡಿಸ್ಟ್ರಿಕ್ಟು.—ತುಮಕೂರು ತಾಲ್ಲೂಕು ಕೆಲವು ಪ್ರದೇಶಗಳಲ್ಲಿ ರಾಗಿ ಪೈರು ಬಣಗಿ ಹೋಯಿತು. ಸೀರಾ ತಾಲ್ಲೂಕಿನಲ್ಲಿಯೂ ಕಪಿಲೆಗಳಿರುವ ಸ್ಥಳಗಳನ್ನು ಬಿಟ್ಟು ಮಿಕ್ಕ ಕಡೆಯಲ್ಲಿಯೂ ಹೀಗೆಯೇ ಆಯಿತು. ಸೀರಾ ತಾಲ್ಲೂಕಿನಲ್ಲಿ ಸೋಸಿ ರಾಗಿಯನ್ನೂ, ತಿಪಟೂರು ಪಾವಗಡ ಚಳ್ಳಕೆರೆ ತಾಲ್ಲೂಕುಗಳಲ್ಲಿ ಬತ್ತವನ್ನೂ ಬಿತ್ತಿದರು. ಕಾಲಸ್ಥಿತಿಯು ಕೆಲವು ಕಡೆವಾತ್ರ ಚೆನ್ನಾಗಿದೆ. ಜನರು ಸಾಖ್ಯವಾಗಿದ್ದಾರೆ. ದನಗಳಿಗೆ ತೆವಲು ರೋಗ ತಗಲಿದೆ. ಕೆಲವು ಕಡೆ ಕುಡಿಯುವ ನೀರೂ ದನಗಳ ಮೇವೂ ಸಾಲವು. ರೂಪಾಯಿ ೧ಕ್ಕೆ ದುಯ್ಯಂ ಅಕ್ಕಿ ೯॥—೧೪ ಸೇರು, ರಾಗಿ ೧೦—೧೬ ಸೇರು, ಹುರಳಿ ೧೫॥—೨೪ ಸೇರು.

ಮೈಸೂರು ಡಿಸ್ಟ್ರಿಕ್ಟು.—ಪೈರು ಚೆನ್ನಾಗಿದೆ. ಕೆಲವು ಕಡೆ ಬತ್ತ, ಹುರಳಿ, ಹೆಸರು ಇವುಗಳ ಫಸಲು ಆಗುತ್ತಾ ಇದೆ. ಕಾಲಸ್ಥಿತಿ ಚೆನ್ನಾಗಿದೆ. ಸದ್ಯಕ್ಕೆ ಕುಡಿಯುವ

ಓಮತಿಂದ ಕತ್ತೆಯಹಾಗೆ.

ನೀರಿಗೂ ದನಗಳ ಮೇವಿಗೂ ಕಡಿಮೆಯಿಲ್ಲ. ರೂಪಾಯಿ ೧ಕ್ಕೆ ದುಬ್ಬೂಂ ೬೫ ಸೇರು, ರಾಗಿ ೨೪ ಸೇರು, ಹುರಳಿ ೨೦ ಸೇರು.

ಶಿವಮೊಗ್ಗಾ ಡಿಸ್ಟ್ರಿಕ್ಟ್.—ದಾವಣಗೆರೆ ತಾಲ್ಲೂಕು ವಿನಹ ಮಿಕ್ಕಾದಕಡೆ ಪೈರು ಬಹಳ ಚೆನ್ನಾಗಿದೆ. ಅವರೆ ಕಡಲೆ ತೊಗರಿಗಳ ಬಳಿ ಆಯಿತು. ಶಿವಮೊಗ್ಗೆಯಲ್ಲಿ ಕಬ್ಬಿನ ಬೆಲ್ಲವಾಗುತ್ತಾ ಇದೆ. ಜ್ವರವೂ ಹೊಟ್ಟೇನೋವೂ ತಲೆಯೆತ್ತಿಕೊಂಡಿವೆ. ಸಿಕಾರ ಪುರದಲ್ಲಿಯೂ ಸಾಗರದಲ್ಲಿಯೂ ದನಗಳು ತೆವಲು ರೋಗದಿಂದ ನರಳುತ್ತಿವೆ. ರೂಪಾಯಿ ೧ಕ್ಕೆ ೧೪—೧೬ ಸೇರು, ರಾಗಿ ೨೦—೪೦ ಸೇರು, ಜೋಳ ೨೦—೩೪ ಸೇರು.

ಕಡೂರು ಡಿಸ್ಟ್ರಿಕ್ಟ್.—ಪೈರು ಸಾಧಾರಣವಾಗಿ ಚೆನ್ನಾಗಿದೆ. ಮಲ್ನಾಡಿನಲ್ಲಿ ವೈಶಾಖದ ಪೈರು ಬಿತ್ತಿದರು. ರಾಗಿ, ಕಬ್ಬು, ಹುರಳಿ, ಕಡಲೆ, ಹರಳು ಇವುಗಳ ಬೆಳೆ ಯಾಯಿತು. ಕಾಫಿ ಮತ್ತು ಅಡಿಕೇ ಫಸಲು ಆಯಿತು. ಕಡೂರು ಮತ್ತು ಕೊಪ್ಪದ ತಾಲ್ಲೂಕುಗಳಲ್ಲಿ ವಾಂತಿ ಭೇದಿಯು ಪ್ರಾರಂಭವಾಗಿದೆ.

೯. ವೃತ್ತಾಂತ ಸಂಗ್ರಹ.

ಹೊಸ ಗವರ್ನರ ಜನರಲ್‌ರಾದ ಅರಲ್ ಆಫ್ ಡಫರಿನ್ ಸಾಹೇಬರವರು.

ಇಂಡಿಯಾಚಕ್ರವರ್ತಿನಿಯವರಿಗೆ ಪ್ರತಿನಿಧಿಗಳಾಗಿಯೂ ನಮ್ಮ ಸಂಸ್ಥಾನಕ್ಕೆ ಗವರ್ನರ್‌ಜನರಲ್‌ರಾಗಿಯೂ ಬಂದು ಇರತಕ್ಕ ಅರಲ್ ಆಫ್ ಡಫರಿನ್ ಸಾಹೇಬರವರು ೧೮೨೬ನೇ ಇಸವಿಯಲ್ಲಿ ಹುಟ್ಟಿದರು. ಇವರ ತಂದೆಯವರು ಹಡಗಿನ ಮುಖ್ಯಸ್ಥರಾಗಿ ಇದ್ದರು. ಇವರು ಆಕ್ಸ್‌ಫರ್ಡ್ ಯೂನಿವರ್ಸಿಟಿಯಲ್ಲಿ ಓದಿಕೊಂಡು ೧೮೪೬ನೇ ಇಸವಿಯಲ್ಲಿ ಐರ್ಲೆಂಡ್ ದ್ವೀಪಕ್ಕೆ ಹೋದರು. ಅಲ್ಲಿ ಆ ವರುಷ ಕ್ಷಾಮವು ಹೆಚ್ಚಿ ಇತ್ತು. ಇವರು ಆ ಕ್ಷಾಮದ ಪೂರ್ವಾಪರೆಗಳನ್ನೆಲ್ಲಾ ವಿಚಾರಿಸಿ ಅದರ ವಿಷಯದಲ್ಲಿ ಬಂದು ರಿಪೋರ್ಟ್‌ನ್ನು ಬರೆದರು. ೧೮೫೫ನೇ ಇಸವಿಯಲ್ಲಿ ಇಂಗ್ಲೀಷ್ ರಾಯಭಾರಿಗಳಾಗಿ ವೀನಾಪಟ್ಟಣಕೆ ಹೋಗಿದ್ದರು. ೧೮೬೦ನೇ ಇಸವಿಯಲ್ಲಿ ಸಿರಿಯಾದೇಶದವರು ಕ್ರಿಸ್ತಮತಸ್ಥರನ್ನು ಅನೇಕವಾಗಿ ಕೊಂದು ಹಾಕಿಇದ್ದರು. ಈ ವಿಷಯವನ್ನು ವಿಚಾ

ಕಂಕುಳಲ್ಲಿ ದೊಣ್ಣೆ,ಕೈಲಿ ಶರಣಾರ್ತಿ

ರಣೆವಡುವಪಕ್ಕೆ ಇವರು ಕಮ್ಮಿಷನರಾಗಿ ನಿಯೋಗಿಸಲ್ಪಟ್ಟರು. ಈ ಕೆಲಸದಲ್ಲಿ ಅವರು ಮಾಡಿದ ಮೆಹನತ್ತಿಗೋಸ್ಕರ ಕೆ. ಸಿ. ಬಿ. ಎಂಬ ಬಿರುದನ್ನು ಹೊಂದಿದರು. ಅನಂತರದಲ್ಲಿ ಎರಡು ವರ್ಷಗಳವರಿಗೂ ನಮ್ಮ ಇಂಡಿಯಾದೇಶಕ್ಕೆ ಸೆಕ್ರೆಟರಿಗಳಾಗಿ ಇದ್ದರು. ೧೮೩೬ನೇ ಇಸವಿಯಲ್ಲಿ ಕನಡಾದೇಶಕ್ಕೆ ಗವರ್ನರ ಜನರಲ್‌ರಾಗಿ ನೇಮಿಸಲ್ಪಟ್ಟರು. ೧೮೪೮ನೇ ಇಸವಿಯಲ್ಲಿ ಡರ್ಬ್ಲಿ ಯೂನಿವರ್ಸಿಟಿಯವರು ಇವರಿಗೆ ಎಲ್‌ಎಲ್. ಡಿ. ಎಂಬ ಬಿರುದನ್ನು ಕೊಟ್ಟರು. ೧೮೫೯ನೇ ಇಸವಿಯಲ್ಲಿ ಆಕ್ಸ್‌ಫರ್ಡ್ ಯೂನಿವರ್ಸಿಟಿಯವರು ಡಿ. ಸಿ. ಎಲ್. ಎಂಬ ಬಿರುದನ್ನು ಕೊಟ್ಟರು. ಇದೇ ವರ್ಷದಲ್ಲಿ ಇವರು ರಷ್ಯಾದೇಶದ ಚಕ್ರವರ್ತಿಯ ರಾಜಧಾನಿಯಲ್ಲಿ ಇಂಗ್ಲಿಷ್ ಸಂಸ್ಥಾನದ ರಾಯಭಾರಿಗಳಾಗಿ ನೇಮಿಸಲ್ಪಟ್ಟರು. ೧೮೬೧ನೇ ಇಸವಿಯಲ್ಲಿ ತುರಕೀದೇಶದ ರಾಯಭಾರಿಗಳಾದರು. ಈ ಕೆಲಸದಲ್ಲಿ ಇವರು ಅತ್ಯಂತ ಅದ್ಭುತವಾದ ರಾಜತಂತ್ರಗಳಲ್ಲಿ ಪ್ರವೀಣತೆಯನ್ನು ತೋರಿಸಿ ತಾವು ತೊಡಗಿದ ರಾಜಕಾರ್ಯವನ್ನು ನೆರವೇರಿಸಿದರು. ಈ ಕೆಲಸದಿಂದ ಈಜಿಪ್ಟ್ ದೇಶದ ಕೈರೋ ಪಟ್ಟಣಕ್ಕೆ ಇಂಗ್ಲೀಷ್‌ಕಾರ್ಯಗಳ ನಿರ್ವಹಣಾರ್ಥವಾಗಿ ಕಳುಹಿಸಲ್ಪಟ್ಟರು. ಇವರು ರಾಜತಂತ್ರಗಳ ವಿಷಯದಲ್ಲಿ ಅನೇಕ ಗ್ರಂಥಗಳನ್ನು ಬರೆದು ಇದ್ದಾರೆ. ಇವುಗಳನ್ನೆಲ್ಲಾ ನೋಡಿದರೆ ಇವರಿಗೆ ರಾಜ್ಯಭಾರ ಮಾಡುವದರ ಅನುಭವವು ವಿಶೇಷವಾಗಿರುವಂತೆ ತೋರುತ್ತದೆ. ಆದರೆ ಲಾರ್ಡ್ ರೈಪ್ಪ ಸಾಹೇಬರವರು ನಿಷ್ಪಕ್ಷಪಾತವಾಗಿ ರಾಜ್ಯಪರಿಪಾಲನೆಯನ್ನು ಮಾಡಿ ಲೋಕೋತ್ತರವಾದ ಕೀರ್ತಿಯನ್ನು ಸಂಪಾದಿಸಿದರು. ಇವರ ರಾಜ್ಯಭಾರ ಕ್ರಮವು ಇನ್ನು ಮೇಲೆ ಗೊತ್ತಾಗಬೇಕು.

ಟ್ರಾವನ್ಕೂರ್ ಮಹಾರಾಜರವರು ಬ್ರಿಟಿಷ್ ರಾಜ್ಯಗಳಲ್ಲಿ ಹೋದರೆ ೨೧ ಗುಂಡಾಗುವಂತೆ ಮೊದಲು ನಿಬಂಧನೆಯಿತ್ತು. ಈಗ ೧೯ ಗುಂಡೇ ಆಗತಕ್ಕದ್ದೆಂದು ಬ್ರಿಟಿಷ್ ಸರಕಾರದವರು ಕಟ್ಟುಮಾಡಿ ಇರುವದರಿಂದ ಆ ಮಹಾರಾಜರು ಇದಕ್ಕಾಗಿ ಇಂಡಿಯಾ ಗವರ್ನಮೆಂಟಿಗೆ ಬರೆದುಕೊಂಡು ಇದ್ದಾರೆ.

ಕಂಡದ್ದು ಬಿಡದು ಮುಂಡೇ ದೈವ.

ಕೇಪ್ ಅಫ್ ಗುಡ್ ಹೋಪ್ ಬಳಿಯಿರುವ ವಜ್ರದ ಗಣಿಗಳಲ್ಲಿ ಕಳೆದ ಅಕ್ಟೋಬರ್ ತಿಂಗಳಲ್ಲಿ ೨೫,೭೦,೧೭೭ ರೂಪಾಯಿ ಬಾಳುವಷ್ಟು ವಜ್ರಗಳು ಸಿಕ್ಕಿದವು.

ಇಂಡಿಯಾದೇಶವನ್ನು ನೋಡಿಕೊಂಡು ಸ್ವದೇಶಕ್ಕೆ ಹೋದ ಒಬ್ಬ ಇಂಗ್ಲೀಷ್ ಮನುಷ್ಯನು ಹೀಗೆ ಹೇಳುತ್ತಾನೆ :—"ಇಂಡಿಯಾ ದೇಶವು ಉದ್ಧಾರವಾಗಬೇಕಾದರೆ ಹಿಂದೂಸ್ತ್ರೀಯರ ಧರ್ಮಾಚರಣೆಯಿಂದಲೇ ಸರಿ. ಈ ಸ್ತ್ರೀಯರಹಾಗೆ ಘನತೆಯುಳ್ಳವರೂ ಪ್ರಾಮಾಣಿಕರೂ ಧರ್ಮದೃಷ್ಟಿಯುಳ್ಳವರೂ ಇನ್ನ್ಯಾವ ಖಂಡದ ನಾಗರೀಕರಾದ ಜನರಲ್ಲಿಯೂ ಸಿಕ್ಕುವದು ಅಪೂರ್ವ ಯೂರೋಪಿಯನರು ಕೀಳು ಜಾತಿಯಲ್ಲಿ ಹುಟ್ಟಿದ ಕೆಟ್ಟ ಹಿಂದೂ ಹೆಂಗಸರನ್ನು ನೋಡಿ ಎಲ್ಲಾ ಹಿಂದೂ ಸ್ತ್ರೀಯರೂ ಹೀಗೆಯೇ ಇರುವರೆಂದು ತಿಳಿದುಕೊಳ್ಳುವರು. ಇದು ತಪ್ಪು. ನೀಚರು ವಿನಹಾ ಸಾಮಾನ್ಯವಾದ ಜನಗಳಲ್ಲೆಲ್ಲಾ ಪ್ರಾಯಶಃ ಸ್ತ್ರೀಪಾತಿವ್ರತ್ಯ ಧರ್ಮವು ಬಹಳ ಚನ್ನಾಗಿದೆ. ಹೀಗೆ ಈ ಧರ್ಮವನ್ನು ಆಚರಿಸತಕ್ಕ ಸ್ತ್ರೀಯರು ವಿದ್ಯಾವಂತರೂ ಆದರೆ ಇಂಡಿಯಾದೇಶವು ಉದ್ಧಾರವಾಗುವದು."

ಹೈದರಾಬಾದಿನಲ್ಲಿ ರೆವಿನ್ಯೂಜೋರ್ಡನ್ನು ತೆಗೆಯಬೇಕೆಂಬದಾಗಿಯೂ ರೆವಿನ್ಯೂ ವಿಷಯಗಳನ್ನು ನಡಿಸುವದಕ್ಕೋಸ್ಕರ ಒಬ್ಬ ಸೆಕ್ರಿಟೆರಿಯೂ ಇಬ್ಬರು ಅಸಿಸ್ಟೆಂಟುಗಳೂ ಇರಬೇಕೆಂಬದಾಗಿಯೂ ಏರ್ಪಾಡುಮಾಡಿ ಇದ್ದಾರೆ. ರೇಲ್ವೇ, ಪೋಲೀಸ್, ಆಬಕಾರಿ ಇಲಾಖೆಗಳ ವಿಚಾರಣೆಗೋಸ್ಕರ ಇಬ್ಬರು ಸೆಕ್ರಿಟೆರಿಗಳು ನೇಮಕವಾಗಿ ಇದ್ದಾರೆ. ಚಾನಲ್ ಕೆಲಸಗಳನ್ನು ಇವರಿಗೇ ಸೇರಿಸಿ ಇರುತ್ತಾರೆ. ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗಾಗಿ ಒಬ್ಬ ಕ್ಯಾಸಲ್ಟಿಂಗ್ ಎಂಜಿನಿಯರನ್ನು ನೇಮಕಮಾಡಿ ಇದ್ದಾರೆ.

ನವನಗರಿನ ಮಹಾರಾಜರವರು ಅಹಮ್ಮದಾಬಾದ್ ಪಾಠಶಾಲೆಗೆ ೨೫,೦೦೦ ರೂಪಾಯಿಕೊಟ್ಟರೆಂದು ಕೇಳಿ ಸಂತೋಷಿಸುತ್ತೇವೆ.

ಯಾವಾಗಲಾದರೂ ಒಬ್ಬ ಮನುಷ್ಯನ ಮೇಲೆ ಅವನು ಖೂನೀಮಾಡಿದನೆಂದು ತಪ್ಪು ಸಾಬೀತಾಗಿ ಅವನನ್ನು ಖೈದಿನಲ್ಲಿಟ್ಟುರೆ ಅವನು ಬಂದುವೇಳೆ ನಿರಪರಾಧಿಯಾಗಿ ಇದ್ದಾಗ್ಯೂ ತನ್ನ ಮೊಕದ್ದಮೆಯನ್ನು ತನ್ನಪಕ್ಷವಾಗಿ ವಾದಿಸುವದಕ್ಕೆ ವಕೀಲರನ್ನು ಏರ್ಪಾಡು ಮಾಡುವದಕ್ಕೆ ಶಕ್ತಿಯಿಲ್ಲದೆ ಇರುವದೂ ಉಂಟು. ಅಂಥಾ ಸಂದರ್ಭಗಳಲ್ಲಿ ಸರಕಾರದವರೇ ಫಿರ್ಯಾದಿಗಳಾಗಿ ಸರಕಾರದ ಅಡ್ವೋಕೇಟರನ್ನು ಇಡುವಹಾಗೆಯೇ ಅಪರಾಧಿಗಳ ಪಕ್ಷದಲ್ಲಿಯೂ ಡಿಫೆನ್ಸ್ ಬಗ್ಗೆ ಅಡ್ವೋಕೇಟುಗಳನ್ನು ನೇಮಕಮಾಡಬೇಕೆಂಬದಾಗಿ ಮದರಾಸು ಸರಕಾರದವರು ಏರ್ಪಾಡುಮಾಡಿ ಇದ್ದಾರೆ.

ಕಂಡರೆ ಕೋಪ, ಕಾಣದಿದ್ದರೆ ತಾಪ.

ಬಳ್ಳಾರಿಯಲ್ಲಿ ೪ ವರ್ಷದ ಒಬ್ಬ ಮಾಧ್ವಹುಡುಗನಿಗೆ ಬಂದೂವರೆ ವರ್ಷದ ಮಗುವನ್ನು ಕೊಟ್ಟು ಮದುವೆಮಾಡಿದರು. ತಂದೆತಾಯಿಗಳಿಗೆ ಮಕ್ಕಳು ಇಷ್ಟು ಚಿಕ್ಕವರಾಗಿರುವಾಗಲೇ ಮದುವೆಮಾಡಬೇಕೆಂಬ ರೋಗವು ಎಂದಿಗೆ ಪರಿಹರಿಸುವದೋ ತಿಳಿಯದು.

ಡಿಸೆಂಬರು ೯ನೇ ತಾರೀಖಿನಲ್ಲಿ ಜಪಾನ್‌ದೇಶದಲ್ಲಿ ಬಂದು ಭೂಕಂಪವಾಯಿತು. ಹೀಗೆಯೇ ಸುಮಾರು ೨೫೦ ವರ್ಷಗಳಿಗೆ ಮುಂಚೆ ಬಂದು ಭೂಕಂಪವಾಗಿ ಎಡ್ಡೊ ಪಟ್ಟಣವು ನಾಶವಾಯಿತು. ಆ ಪಟ್ಟಣವಿದ್ದ ಸ್ಥಳದಲ್ಲಿ ಗುಡ್ಡಗಳೂ ಬೆಟ್ಟಗಳೂ ತುಂಬಿಕೊಂಡವು. ಪೂರ್ವದಹಾಗೆಯೇ ಈಗಲೂ ಎಲ್ಲಿ ಆದೀತೋ ಎಂದು ಜನರು ಭಯಪಟ್ಟು ಇದ್ದಾರೆ.

ತಂಜಾವೂರಿನಲ್ಲಿ ಕಳೆದ ಕ್ರಿಮಿನಲ್ ಸೆಷ್ಷನ್ನಲ್ಲಿ ಆರು ಡಕಾಯಿತೀ ಮೊಕದ್ದಮೆಗಳು ದಾಖಲಾದವು: ಕಳ್ಳರು ಗುಂಪು ಗುಂಪಾಗಿ ಸೇರಿಕೊಂಡು ಗ್ರಾಮಗಳನ್ನೆಲ್ಲಾ ಲೂಟಿ ಮಾಡುತ್ತಾ ಪೋಲೀಸ್‌ನವರು ಬಂದರೆ ಅವರನ್ನೂ ಹೊಡೆದು ಓಡಿಸುತ್ತಾ ಇದ್ದಾರಂತೆ. ೧೪೨೨—೨೪ನೇವರ್ಷಗಳಲ್ಲಿ ಉಂಟಾದ ಕ್ಷಾಮಗಳಿಂದ ಅನೇಕರು ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಜೀವನಕ್ಕೆ ಉಪಾಯಾಂತರಗಳನ್ನು ತಿಳಿಯದೆ ಹೀಗೆ ದುಷ್ಕರ್ಮ ಪ್ರವರ್ತಕರಾಗಿ ಇದ್ದಾರೆ. ಸರಕಾರದವರು ಇದರ ಕಾರಣಗಳನ್ನು ವಿಚಾರಿಸಿ ಅವರ ದಾರಿದ್ರ್ಯವು ಪರಿಹಾರವಾಗುವ ಹಾಗೂ ಸರಕಾರಕ್ಕೆ ಉಪಯೋಗವಾಗುವಹಾಗೂ ತಕ್ಕ ಏರ್ಪಾಡುಗಳನ್ನು ಮಾಡದೆ ಇರುವದರಿಂದಲೇ ಇವರು ಈ ಕೆಟ್ಟ ಜೀವನದಲ್ಲಿ ಪ್ರವರ್ತಿಸಿದರು. ಸರಕಾರದವರು ಬೇರೆ ಬೇರೆ ಕಸುಬುಗಳನ್ನು ಕಲ್ಪಿಸಿ ಸೋಮಾರಿಗಳಾದ ಜನರಿಗೆಲ್ಲಾ ಜೀವನೋಪಾಯಗಳನ್ನು ತೋರಿಸಿದರೇನೇ ಹೊರತು ಇಲ್ಲದಿದ್ದರೆ ಇವರು ಈ ದುರ್ಮಾರ್ಗಗಳನ್ನು ಬಿಡುವದಿಲ್ಲ.

ಕಳೆದ ಜನವರೀ ತಾರಿಖು ೧೦ ರಲ್ಲಿ ಚನ್ನಪಟ್ಟಣದಲ್ಲಿ ಸುಮಾರು ೩೦ ಜನ ಕಳ್ಳರು ಹನುಮಂತಯ್ಯನೆಂಬ ಒಬ್ಬ ಗೌಡನ ಮನೆಗೆ ಬಿದ್ದು ಹಣಕಾಸುಗಳನ್ನೂ ಒಡವೇವಸ್ತುಗಳನ್ನೂ ಒಟ್ಟುದ್ದಾರೆಂದು ತಿಳಿದುಕೊಂಡಿದ್ದ ಬಂದು ಪೆಟ್ಟಿಗೆಯನ್ನು ಹೊತ್ತುಕೊಂಡು ಈಚಿಗೆ ಬರುವಕಾಲಕ್ಕೆ ಮನೆಯವರಿಗೆ ಎಚ್ಚರಿಕೆಯಾಗಿ ಅವರಿಗೂ ಕಳ್ಳರಿಗೂ ಜಗಳಹತ್ತಿ ಆ ಗದ್ದಲವು ಪೋಲೀಸಿಗೆ ತಿಳಿಯಿ ಪೋಲೀಸಿನವರು ಆ ಕಳ್ಳರನ್ನು ಹಿಡಿದು ಬೆಂಗಳೂರಿಗೆ ಕಳುಹಿಸಿಕೊಟ್ಟರು.

ಲಂಡನ್ನಲ್ಲಿ ನಾನಾವಿಧವಾದ ಕಸುಬುಗಳುಂಟು. ಕೆಲಸಮಾಡತಕ್ಕವರಿಗೆ ವಿಶೇಷವಾಗಿ ಕೆಲಸ ಸಿಕ್ಕುತ್ತದೆ. ಹಾಗೆ ದೇಹಶ್ರಮಪಟ್ಟು ಜೀವಿಸತಕ್ಕವರಿಗೆ ಸುಲಭವಾಗಿ

ಕಂಡವರ ಮಕ್ಕಳನ್ನು ಬಾವೀಲಿ ದೂಡಿ ಆಳ ನೋಡಿದ ಹಾಗೆ.

ಜೀವನ ಸಿಕ್ಕುವದಲ್ಲದೆ ಧನಿಕರಾಗುವದಕ್ಕೂ ಅಸ್ಪದವಿರುತ್ತದೆ. ಕೆಲವು ಇತರ ದೇಶಗಳಲ್ಲಿ ಹಣಗಾರರಾದ ಅನೇಕ ಜನರು ಆ ಹಣವನ್ನು ಲೋಕಕ್ಕೂ ತಮಗೂ ಪ್ರಯೋಜನವಿಲ್ಲದೆ ಸುಮ್ಮನೆ ಇಟ್ಟುಕೊಂಡಿರುತ್ತಾರೆ. ಇದರಿಂದ ಲೋಕಕ್ಕೆ ಉಪಕಾರ ತಪ್ಪುವದಲ್ಲದೆ ಇವರೂ ತಮ್ಮ ದ್ರವ್ಯವನ್ನು ವೃದ್ಧಿ ಮಾಡಿಕೊಳ್ಳುವದಕ್ಕಾಗುವದಿಲ್ಲ. ಜನರಿಗೆ ದೇಹಕ್ರಮಪಟ್ಟ್ಯಾಗ್ಯೂ ಜೀವನ ಸಿಕ್ಕದಿದ್ದರೆ ಕಳ್ಳತನ ಮೊದಲಾದವುಗಳಿಂದ ಜೀವಿಸುವದಕ್ಕೆ ಉಪಕ್ರಮಿಸುವರು. ಇವರು ಹೀಗೆ ದುರ್ಮಾರ್ಗದಲ್ಲಿ ಪ್ರವರ್ತಿಸುವದರಿಂದ ಲುಬ್ಧರಾದ ದ್ರವ್ಯವಂತರಲ್ಲಿ ಅನೇಕರ ದ್ರವ್ಯವು ಇವರ ಪಾಲಾಗುವದು. ಹೀಗೆ ಅತ್ಯಾಶೆಯಿಂದ ತಮ್ಮ ದ್ರವ್ಯವನ್ನೆಲ್ಲಾ ಭದ್ರಮಾಡಬೇಕೆಂದಿದ್ದು ಚೋರರ ಪಾಲು ಮಾಡುವದಕ್ಕಿಂತ ದ್ರವ್ಯವಂತರೆಲ್ಲರೂ ಸೇರಿ ಬಂದು ಸಮಾಜಮಾಡಿಕೊಂಡು ತಮ್ಮ ದ್ರವ್ಯಗಳನ್ನೆಲ್ಲಾ ಕಾರಖಾನೆಗಳಲ್ಲಿ ಕೆಲಸಮಾಡುವದಕ್ಕೆ ವಿನಿಯೋಗಿಸಿ ಜಾಗರೂಕರಾಗಿ ಅನೇಕ ಕಸಬುಗಳನ್ನು ಮಾಡಿಸಿದರೆ ತಮ್ಮ ದ್ರವ್ಯವೂ ವೃದ್ಧಿಯಾಗುವದು; ಜನರಿಗೆ ಜೀವನವುಂಟಾಗುವದು; ಕಳವು ಮುಂತಾದ ಅಕೃತ್ಯಗಳೆಲ್ಲಾ ತಪ್ಪಿಹೋಗುವವು.

ಮದರಾಸಿನಲ್ಲಿ ಗೋಪಾಲರಾಯರು ಭಾಷ್ಯಂವೆಂಕ್ಟಾರ್ಯರು ಮುಂತಾ ಯರು ಮೊದಲಾದ ಅನೇಕ ವಿದ್ವಾಂಸರು ಸೇರಿ ಬಂದು ಸಭೆಯನ್ನು ಮಾಡಿ ಇದ್ದರು. ನಮ್ಮ ಜನರು ವಿದ್ಯಾವಂತರಾಗಿಯೂ ಐಶ್ವರ್ಯವಂತರಾಗಿಯೂ ಸುಖಿಗಳಾಗಿಯೂ ಇರಬೇಕಾದರೆ ಏನು ಪ್ರಯತ್ನ ಮಾಡಬೇಕೆಂಬುವದೇ ಈ ಸಭೆಯ ಉದ್ದೇಶವು. ಅದಕ್ಕೆ ಗೋಪಾಲರಾಯರು ಹೇಳಿದ್ದೇನೆಂದರೆ: —ನಮ್ಮ ಉದ್ದೇಶಗಳೆಲ್ಲಾ ನೆರವೇರಬೇಕಾದರೆ ಪ್ರಥಮತಃ ನಮ್ಮ ಹೆಂಗಸರಿಗೆ ವಿದ್ಯಾಭ್ಯಾಸಮಾಡಿಸಬೇಕು. ಹೆಂಗಸರು ವಿದ್ಯಾವಂತರಾದರೆ ಯುಕ್ತಾಯುಕ್ತಗಳನ್ನು ತಿಳಿದುಕೊಂಡು ಪತಿಸೇವೆಯನ್ನು ಮಾಡಿಕೊಂಡು ಮಕ್ಕಳನ್ನು ಜಾಣ್ಮಾಗಿ ಪೋಷಿಸುತ್ತಾ ಅವರಿಗೆ ಒಳ್ಳೇ ವಿವೇಕವನ್ನೂ ವಿದ್ಯೆಯನ್ನೂ ಬುದ್ಧಿಯನ್ನೂ ಹೇಳುತ್ತಾ ಕಾಲವನ್ನು ಕಳೆಯುವರು. ಸಂಸಾರವನ್ನು ಜಾಣ್ಮಾಗಿ ನೋಡಿಕೊಳ್ಳುವರು. ಇವರು ಮೂಢರಾಗಿ ಇದ್ದರೆ ಇವರ ಸಹವಾಸವಲ್ಲಿಯೇ ಯಾವಾಗಲೂ ಇರುವ ಮಕ್ಕಳೂ ಕೂಡ ಇವರ ಹಾಗೆಯೇ ಮೂಢರಾಗುವರು. ಅವೇಲೆ ಈ ಮಕ್ಕಳಿಗೆ ಪಾಠಶಾಲೆಗಳಲ್ಲಿ ಎಷ್ಟು ವಿವೇಕವನ್ನು ಬೋಧಿಸಿದರೂ ಚಿಕ್ಕಂದಿನಿಂದಲೂ ಅವರಲ್ಲಿ ನೆಲೆಗೊಂಡಿರುವ ಮೌಢ್ಯವು ಹೋಗುವದು ದುರ್ಲಭ. ಆದಕಾರಣ ಸರ್ವಪ್ರಯತ್ನಗಳಿಂದಲೂ ಹೆಣ್ಣು ಮಕ್ಕಳಿಗೆ ವಿದ್ಯೆಯನ್ನು ಕಲಿಸುವದರಿಂದ ಲೋಕದಲ್ಲಿ ಎಲ್ಲರೂ ವಿವೇಕಿಗಳೂ ಬುದ್ಧಿವಂತರೂ ಆಗುವರು.

ಕಳ್ಳಿದ ಮನೆ ಪೆಟ್ಟಲ್ಲಿಲ್ಲ, ಅಟ್ಟುಕೊಂಡು ಬಂದೆಯೂ ಜವರಾಯ ?

ನಮ್ಮ ದೇಶದಲ್ಲಿ ಉತ್ತಮವರ್ಣದವರು ಬಾಲ್ಯದಲ್ಲಿಯೇ ಸ್ತ್ರೀಯರಿಗೆ ಮದುವೆ ಮಾಡುವರು. ದಂಪತಿಗಳು ಇನ್ನೂ ಹುಡುಗರಾಗಿ ಇರತಕ್ಕ ಕಾಲದಲ್ಲಿಯೇ ಸಂಸಾರಿಗ ಳಾಗುವದರಿಂದ ಇವರ ಮಕ್ಕಳು ಹುಟ್ಟುತ್ತಲೇ ಸಾಯುವರು, ಅಥವಾ ಸಾಯದೆ ಬದುಕಿ ಇದ್ದಾಗ್ಯೂ ಬಲಹೀನರೂ ರೋಗಿಗಳೂ ಆಗಿ ಇರುವರು. ಒಂದು ವೇಳೆ ಪತಿಯು ಮೃತ ನಾದರೆ ಆಕೆಯು ಯಾವಜ್ಜೀವವೂ ಸಂನ್ಯಾಸಿಯಾಗಿರಬೇಕೆಂದು ವಿಧಿಸುವರು. ಇದರಿಂದ ಶಿಶುಹತ್ಯಗಳೇ ಮುಂತಾದ ಅನೇಕ ಪಾಪಕೃತ್ಯಗಳಿಗೆ ಆಕರವಾಗುವದು ''

ಹೀಗೆಯೇ ಮಿಕ್ಕಾದವರೆಲ್ಲರೂ ತಮ್ಮ ತಮ್ಮ ತಾತ್ಪರ್ಯಗಳನ್ನು ಹೇಳಿದ ಕೂಡಲೆ ಸಭೆಯವರೆಲ್ಲರೂ ಸಮ್ಮತಿಸಿ ಈ ಕೆಳಗೆ ಹೇಳಿರುವ ಧರ್ಮಶಾಸ್ತ್ರವಚನಗಳು ಅನುಸರಣೆಗೆ ಯೋಗ್ಯವಾದವುಗಳೆಂದು ಒಪ್ಪಿಕೊಂಡರು.

ಸ್ತ್ರೀಯರೂ ಪುರುಷರೂ ತಮ್ಮ ಮನಸ್ಸು ಬಂದರೆ ಮದುವೆಮಾಡಿಕೊಳ್ಳಬಹುದು ಇಲ್ಲದಿದ್ದರೆ ಅವಶ್ಯಕವಿಲ್ಲವೆಂದು ಮನು ವಿಷ್ಣುವೊದಲಾದ ಹತ್ತು ಜನ ಋಷಿಗಳು ಹೇಳು ತ್ತಾರೆ. ವಿಷ್ಣುಪುರಾಣ ಶ್ರೀಭಗವದ್ಗೀತೆ ಮುಂತಾದ ಅನೇಕ ಗ್ರಂಥಗಳಲ್ಲಿಯೂ ಹೀಗೆಯೇ ಹೇಳಿ ಇದೆ. ಮದುವೆಯಾದ ಸ್ತ್ರೀ ಪುರುಷರಿಗಿಂತಲೂ ಇಲ್ಲದವರಿಗೆ ಉತ್ತಮ ವಾದ ಸ್ವರ್ಗಪದವಿಯು ಉಂಟಾಗುವದೆಂದು ಶ್ರೀಭಾಗವತದಲ್ಲಿ ಹೇಳಿ ಇದೆ. ಸ್ತ್ರೀಯು ಬೇಕಾದರೆ ಮದುವೆಮಾಡಿಕೊಳ್ಳದೇಲೆ ಇರಬಹುದು ಎಂಬದಾಗಿ ಶ್ರೀಭಾಗವತದಲ್ಲಿಯೂ ಮಾಧವಾಚಾರ್ಯರಿಂದಲೂ ಹೇಳಲ್ಪಟ್ಟಿದೆ. ಅವಳ ಸಮ್ಮತಿಯಿಲ್ಲದೆ ಅವಳಿಗೆ ಮದುವೆ ಮಾಡಕೂಡದೆಂದು ಕಾತ್ಯಾಯನವಚನವಿದೆ. ದಕ್ಷವುತ್ತು ಆಶ್ವಲಾಯನ ಸೂತ್ರಗ ಳಲ್ಲಿ ಗಂಡಸರಿಗೆ ೨೫ ವರ್ಷದೊಳಗಾಗಿ ಮದುವೆಯಾಗಕೂಡದೆಂದು ಹೇಳಿದೆ. ಪರಾ ಶರಸ್ಮೃತಿಯಲ್ಲಿ ಸ್ತ್ರೀಯು ೧೦ ವರ್ಷಕ್ಕೆ ವ.ಂಚೆ ಮದುವೆಯಾಗಕೂಡದೆಂದು ಹೇಳಿ ಇದೆ. ಮನು ಮತ್ತು ವಿಷ್ಣುವಚನಗಳಲ್ಲಿ ಸ್ತ್ರೀಯು ಋತುಮತಿಯಾದ ೩ ವರ್ಷಗಳೊಳಗಾಗಿ ಮದುವೆ ಮಾಡಿಕೊಳ್ಳಬಹುದೆಂದು ಹೇಳಿ ಇದೆ. ಮದುವೆಯಾಗಿ ನಿಷೇಕಪ್ರಸ್ತವಾಗುವ ದಕ್ಕೆ ಮುಂಚೆ ಪತಿಯು ಮೃತನಾದರೆ ಸ್ತ್ರೀಯು ಪುನಃ ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಳ್ಳಬಹುದೆಂದು ಮನು ಪರಾಶರ ನಾರದ ಸ್ಮೃತಿಗಳಲ್ಲಿಯೂ ಋಗ್ವೇದ ಸಂಹಿತೆ ಅರಣ್ಯಕ ಮುಂತಾದವುಗಳಲ್ಲಿಯೂ ಹೇಳಲ್ಪಟ್ಟಿದೆ. ಮೇಲೆ ಹೇಳಿದ ರೀತಿಯಲ್ಲಿ ಪತಿ ನಷ್ಟನಾದ ಮೇಲೆ ಮದುವೆಯಾದ ಸ್ತ್ರೀಯು ಮಕ್ಕಳನ್ನು ಪಡೆದರೆ ಅವರು ಔರಸ ಪುತ್ರರೇಸರಿ ಎಂಬದಾಗಿ ಮನು ಪರಾಶರ ವಿಷ್ಣು ಬೋಧಾಯನ ನಾರದ ವಸಿಷ್ಠಮುಂ ತಾದವರು ಹೇಳುತ್ತಾರೆ. ನಿಷೇಕಪ್ರಸ್ತವಾದ ಮೇಲೆ ಪತಿಯನ್ನು ಕಳೆದುಕೊಂಡವರು ಕೂಡ ಮದುವೆ ಮಾಡಿಕೊಳ್ಳಬಹುದು. ಅವರ ಮಕ್ಕಳೂ ಔರಸಪುತ್ರರೆಂದೇ ಭಾವಿಸ ತಕ್ಕದ್ದು. ನಿಷೇಕವಾಗುವದಕ್ಕೆ ಮುಂಚೆಯೇ ಪತಿಯನ್ನು ಕಳೆದುಕೊಂಡ ಹೆಂಗಸು ಬೇರೆ

ಕಟುಕರ ಮನೇ ಕುರಿಯಹಾಗೆ.

ಪುರುಷನನ್ನು ಮದುವೆಯಾದರೆ ನಿಷೇಕವಾದ ಕೂಡಲೆ ಅವಳು ತನ್ನ ಪತಿಯ ಗೋತ್ರ ಸೂಕ್ತಪಿಂಡಾದಿಗಳಿಗೆ ಸೇರುವಳು

ಈ ರೀತಿಯಲ್ಲಿ ಧರ್ಮಶಾಸ್ತ್ರ ವಚನಗಳಿರುವದರಿಂದ ಅನೇಕ ಪಂಡಿತರು ಸೇರಿ ಹಿಂದೂ ಸ್ತ್ರೀಯರ ಪುನರ್ವಿವಾಹಸಭೆ ಎಂಬ ಒಂದು ಸಂಘವನ್ನು ಮಾಡಿ ಇದ್ದಾರೆ. ನಿಷೇಕಸಂಸ್ಕಾರವಾಗುವದಕ್ಕೆ ಮುಂಚೆ ಪತಿಯನ್ನು ಕಳೆದುಕೊಂಡ ಸ್ತ್ರೀಯರಿಗೆ ಪುನರ್ವಿವಾಹವನ್ನು ಮಾಡಿಸಿ ಅಂಥಾದಂಪತಿಗಳನ್ನು ತಮ್ಮ ಸಮೂಹಕ್ಕೆ ಸೇರಿಸಿಕೊಳ್ಳುವದಕ್ಕೆ ಈ ಸಮಾಜದವರು ಬದ್ಧಕಂಕಣರಾಗಿ ಇರುತ್ತಾರೆ.

ಈ ಸಮಾಜದವರು ಕಳೆದ ಡಿಸೆಂಬರು ೨೯—೩೦ ರಲ್ಲಿ ಹಿಂದೂಲಾನಲ್ಲಿ ಸೇರಿಸುವದಕ್ಕೋಸ್ಕರ ಕೆಲವು ಏರ್ಪಾಡುಗಳನ್ನು ಮಾಡಿ ಅವುಗಳನ್ನು ಸರಕಾರದವರ ಅಭಿಪ್ರಾಯಕ್ಕೋಸ್ಕರ ಕಳುಹಿಸಿ ಇರುತ್ತಾರೆ. ಅವುಗಳು ಯಾವವೆಂದರೆ :—(೧) ಮದುವೇಮಾಡಿಕೊಳ್ಳುವದೂ ಬಿಡುವದೂ ಹೆಂಗಸರ ಇಷ್ಟಾನುಸಾರವಾಗಿ ಇರತಕ್ಕದ್ದು. (೨) ಗಂಡಸರು ೧೬ ವರ್ಷಕ್ಕೆ ಮುಂಚೆಯೂ, ಹೆಂಗಸರು ೧೦ ವರ್ಷಕ್ಕೆ ಮುಂಚೆಯೂ ಮದುವೆ ಮಾಡಿಕೊಳ್ಳಕೂಡದು. (೩) ನಿಷೇಕಕ್ಕೆ ಮುಂಚೆಯೇ ವಿಧವೆಯಾದ ಸ್ತ್ರೀಯು ವೇದೋಕ್ತವಾಗಿ ಮದುವೆ ಮಾಡಿಕೊಳ್ಳಬಹುದು ; ನಿಷೇಕವಾದ ಮೇಲೆ ವಿಧವೆಯಾದ ಸ್ತ್ರೀಯ ವಿವಾಹಕ್ಕೆ ವೇದೋಕ್ತವಾದ ಆಚಾರವು ಅವಶ್ಯಕವಿಲ್ಲ. (೪) ಹೀಗೆ ಮದುವೆಯಾದವಗ ಮಕ್ಕಳು ಔರಸರೆಂದು ಗಣಿಸತಕ್ಕದ್ದು. (೫) ನಿಷೇಕಕ್ಕೆ ಮುಂಚೆಯೇ ಗಂಡನನ್ನು ಕಳೆದುಕೊಂಡು ಪುನಃ ಮದುವೆಮಾಡಿಕೊಳ್ಳುವ ಸ್ತ್ರೀಗೆ ಮೊದಲನೇ ಗಂಡನ ಆಸ್ತಿಗೆ ಬಾಧ್ಯತೆಯಿಲ್ಲ. (೬) ನಿಷೇಕವಾದ ಮೇಲೆ ಗಂಡನನ್ನು ಕಳೆದುಕೊಂಡು ಪುನಃ ವಿವಾಹ ಮಾಡಿಕೊಳ್ಳುವವರಿಗೆ ಮೊದಲಿನ ಗಂಡನ ಆಸ್ತಿಗೂ ಬಾಧ್ಯತೆಯುಂಟು. (೭) ಗಂಡನ ಆಸ್ತಿಯನ್ನು ಪಡೆದ ವಿಧವೆಯರು ಪುನಃ ಮದುವೆಯಾಗಿ ವಿಧವಾವಸ್ಥೆಯನ್ನು ಕಳೆದುಕೊಳ್ಳುವದಕ್ಕೆ ಮುಂಚೆಯೇ ಸಂಸಾರಧರ್ಮದಲ್ಲಿ ಇದ್ದಂತೆ ಗೊತ್ತಾದರೆ ಆಕೆಯು ಆ ಆಸ್ತಿಯನ್ನು ಕಳೆದುಕೊಳ್ಳುವಳು.

ಮದರಾಸ್ ಸಂಸ್ಥಾನದ ಮ್ಯಾಜಿಸ್ಟ್ರೇಟರುಗಳಿಗೆ ರೇವಿನ್ಯೂ ಅಧಿಕಾರವೂ ಮ್ಯಾಜಿಸ್ಟ್ರೇಟ್ ಅಧಿಕಾರವೂ ಸಮ ಇರುತ್ತವೆ ಎಂಬದಾಗಿಯೂ, ಇದರಿಂದ ರೈತರಿಗೆ ಬಹಳ ಸಹಾಯವಾಗುವದೆಂಬದಾಗಿಯೂ, ೫೦ ರೂಪಾಯಿನ ಸಬ್ ಮ್ಯಾಜಿಸ್ಟ್ರೇಟಿಗೆ ಲಕ್ಷಾಧಿಕಾರಿಗಳಾದ ರೈತರೂಕೂಡ ನಿಷ್ಕಾರಣವಾಗಿ ಕಾರಾಗೃಹಪ್ರಾಪ್ತಿಯಾದೀತು ಎಂದು ಭಯಪಡುತ್ತಾರೆಂಬದಾಗಿಯೂ, ಈ ಕಾರಣದಿಂದ ಮ್ಯಾಜಿಸ್ಟ್ರೇಟ್, ರೆವಿನ್ಯೂ, ಸಿವಿಲ್ ಅಧಿಕಾರಿಗಳು ಪ್ರತ್ಯೇಕಪ್ರತ್ಯೇಕವಾಗಿರಬೇಕೆಂಬದಾಗಿಯೂ, ಅನೇಕ ದೊಡ್ಡಮನುಷ್ಯರನ್ನು ಒಂದು

ಕಂಡು ದಣಿದೆಯೊ, ಉಂಡು ದಣಿದೆಯೊ ?

ಸಭೆಯನ್ನು ಸೇರಿಸಿ ಅವರ ಮುಖಾಂತರ ಮ್ಯಾಜಿಸ್ಟ್ರೇಟ್ ಕೆಲಸ ನಡಿಸತಕ್ಕದ್ದು ಉತ್ತಮವಾದದ್ದೆಂಬದಾಗಿಯೂ ಬಂದು ಮದರಾಸು ವರ್ತಮಾನಪತ್ರಿಕೆಯು ಹೇಳುತ್ತದೆ.

ಅಯೋಧ್ಯಾದೇಶದ ರಾಮಪುರ್ ತಾಲ್ಲೂಕುದಾರರಾದ ರಾಜಾರಾಂಪಾಲಸಿಂಗರವರ ಇಲಾಯಿತಿಗೆ ಹೋಗಿದ್ದು ಅಲ್ಲಿಂದ ಮದರಾಸಿಗೆ ಬಂದರು. ಇಂಡಿಯಾ ದೇಶದ ವಿಷಯಗಳನ್ನೆಲ್ಲಾ ತಿಳಿಸುವದಕ್ಕೋಸ್ಕರ ಇವರು ಇಲಾಯಿತಿಯಲ್ಲಿಯೇ ಹಿಂದುಸ್ಥಾನ್ ಎಂಬ ಒಂದು ಪತ್ರಿಕೆಯನ್ನು ನಡಿಸುತ್ತಾ ಇದ್ದಾರೆ. ಅದಕ್ಕೆ ಇವರು ಮ್ಯಾನೇಜರು. ಜನವರಿ ೬ನೇ ತಾರೀಖಿನಲ್ಲಿ ಇವರು ಲಾರ್ಡ್ ರೈಪರ್ ಮತ್ತು ಲಾರ್ಡ್ ಹರ್ಡಿಂಜ್ ಸಾಹೇಬರ ಇಂಡಿಯಾದೇಶದ ರಾಜ್ಯಭಾರವನ್ನು ಕುರಿತು ಉಪನ್ಯಾಸ ಮಾಡಿದರಂತೆ. ಅದು ಬಹಳ ಪ್ಲಾಟೋನೀಯವಾಗಿ ಇತ್ತೆಂದು ಎಲ್ಲರೂ ಕೊಂಡಾಡುತ್ತಾರೆ.

ಈ ಏಪ್ರಿಲ್ ತಿಂಗಳಲ್ಲಿ ಬೊಂಬಾಯಿ ಗವರ್ನರ್ ಜೇಮ್ಸ್ ಫರ್ಗೂಸನ್ ಸಾಹೇಬರು ಸ್ವದೇಶಕ್ಕೆ ಹೋಗುವರು ಇವರ ಜೊತೆಯಲ್ಲಿಯೇ ಕೊಲ್ಲಾಪುರದ ರಾಜರಿಗೆ ಪ್ರತಿನಿಧಿಯಾಗಿ ಆಳತಕ್ಕ ಕಾರಭಾರಿಯವರು ಹೊರಡುವರು.

ಲೋಕದಲ್ಲಿ ಸ್ವಲ್ಪ ತಪ್ಪು ಮಾಡಿದವರಿಗೆ ದೊಡ್ಡ ಶಿಕ್ಷೆಯೂ, ದೊಡ್ಡತಪ್ಪು ಮಾಡಿದ್ದಕ್ಕೆ ವಿಚಾರಣೆಯಿಂದ ಪರ್ಯವಸಾನವೂ ಸಾಧಾರಣವಾದದ್ದು. ತಿನ್ನವೆಲ್ಲಿ ಕಲೆಕ್ಟರ್ ಆಟ್ಕಿನ್ಸ್ ಸಾಹೇಬರು ಹಣ ಸಾಲಾ ತೆಗದುಕೊಂಡು ಇದ್ದದ್ದಕ್ಕಾಗಿ ಇವರಿಗೆ ಡಿಸ್‌ಮಿಸ್ ಆಯಿತು. ಸೇಲಂನಲ್ಲಿ ಡಾಕ್ಟರ್ ಮೆಕ್ಲೀನ್ ಸಾಹೇಬರವರು ಇದಕ್ಕಿಂತಲೂ ಅತಿಶಯವಾದ ಅಧರ್ಮಗಳನ್ನು ಮಾಡಿ ಇದ್ದಾಗ್ಯೂ ಆಮೋಕದ್ದೆಂಬಯು ಬರೀ ವಿಚಾರಣೆಯಲ್ಲಿಯೂ ಅವರುಕೊಟ್ಟ ಸಮಾಧಾನದಲ್ಲಿಯೂ ಪರ್ಯವಸಾನವಾಯಿತು.

ಉದಯಪುರದ ಮಹಾರಾಜರವರು ಸ್ವರ್ಗಸ್ಥರಾದರು. ಇವರು ರಾಜಪುತ್ರಸ್ಥಾನದಲ್ಲಿ ಎಲ್ಲಾ ದೊರೆಗಳಿಗಿಂತಲೂ ಹೆಚ್ಚಾದ ಕೀರ್ತಿಯನ್ನು ಪಡೆದು ಇದ್ದರು. ಇಂಡಿಯಾಪ್ರಭುತ್ವದವರಿಗೆ ಈಗ ಸುಮಾರು ನಾಲ್ಕು ವರ್ಷಗಳಿಗೆ ಮುಂಚೆ ಇವರಿಗೆ ಜಿ. ಸಿ. ಎಸ್. ಐ. ಎಂಬ ಬಿರುದನ್ನು ಕೊಟ್ಟರು. ಈ ಬಿರುದನ್ನು ಕೊಡುವ ಉತ್ಸವವನ್ನು ನಡಿಸುವದಕ್ಕೆ ಲಾರ್ಡ್ ರೈಪರ್ ಸಾಹೇಬರೇ ಹೋಗಿದ್ದರು. ಇವರು ಸಾಯುವಾಗ ಇವರಿಗೆ ೭೫ ವರುಷ ವಯಸ್ಸು. ಇವರು ಹೀಗೆ ಅಕಾಲಮರಣವನ್ನು ಹೊಂದಿದ್ದಕ್ಕೋಸ್ಕರ ವ್ಯಸನಪಡಬೇಕಾಗಿ ಇದೆ.

ಕಂಡರೆ ಸುಂಕ ಕಾಣದಿದ್ದರೆ ಬಿಂಕ.

ಕರೆಸ್‌ಪಾಂಡೆನ್ಸ್.

ಅಯ್ಯಾ, ಎಡಿಟರವರೆ,

ಈಗ ಒಂದು ತಿಂಗಳಿಗೆ ಮುಂಚೆ ಈ ಪ್ರಾಂತ್ಯದಲ್ಲಿ ಒಂದು ವಿಚಿತ್ರವಾದ ಸಂಗತಿ ನಡೆಯಿತು. ಮೈಸೂರು ಸೀಮೆಯ ಈಚೆಯಿಂದ ತಮಗೆ ಸಮಾಚಾರ, ಮುಂತಾದದ್ದು ಬರೆದು ಕಳುಹಿಸುವದು ಅಪೂರ್ವವಾಗಿದೆ. ಇದಕ್ಕೆ ಕಾರಣವೇನೆಂದೂ ಇಷ್ಟರ ಮಟ್ಟಿಗೆ ಜನಗಳು ನಾಗರೀಕರಾಗಿಲ್ಲವೇ ಎಂದೂ ಬಹಳ ಮನಸ್ಸಿಗೆ ಯೋಚನೆಯೂ ಸಂದೇಹವೂ ಆಗಿತ್ತು. ಆದರೆ ಈಚಿಗೆ ನಡೆದ ಇಲ್ಲಿನ ಸಂಗತಿಗಳಲ್ಲಿ ಈ ಪ್ರಾಂತ್ಯದಿಂದ ತಮ್ಮ್ಯಂಥ ಉತ್ಸಾಹಕರಿಗೆ ಯಾವ ಸಹಾಯವೂ ಇಲ್ಲದೆ ಇರುವದು ಬಂದಾಶ್ಚರ್ಯವಲ್ಲ!

ಸಾಧಾರಣವಾಗಿ ಎಲ್ಲಾ ಭಾಗದ ಮುಸಲ್ಮಾನ್ ಜನಗಳು, ನಮ್ಮ ವಿಭಕ್ತರು, ಇವರೇ ಮುಂತಾದವರು ಬಹಳ ವಿದ್ಯಾವಂತರಷ್ಟೆ! ಈ ಎರಡನೇ ಪಂಗಡದವರಲ್ಲಿ ಒಬ್ಬ ವಿಭಕ್ತರು ಚಿತ್ರದುರ್ಗಕ್ಕೆ ದಯಮಾಡಿಸಿದ್ದರು. ಇವರಿಗೆ ವಯಸ್ಸು ಬಹಳ ಚಿಕ್ಕದು. ಕಣ್ಣಿಗೆ ಸುಮಾರು ೧೦–೧೨ ವರ್ಷದೊಳಗಿರಬಹುದೆಂದು ತೋರಿತು, ಮತ್ತು ಇವರು ನೋಡುವದಕ್ಕೆ ಚೆನ್ನಾಗಿಯೇ ಇರುವರು. ಇವರು ಹುಬ್ಬಳ್ಳೀತಾಲ್ಲೂಕಿನ ಒಂದು ಮಠದ ಐಗಳ ಮಕ್ಕಳು. ಇವರು ತಮ್ಮ ತಾಯಿತಂದೆಗಳು ಕ್ಷಾಮಕಾಲದಲ್ಲಿ ಕಾಲವಾಗಲು, ದಿಕ್ಕಿಲ್ಲದೆ ಒಬ್ಬ ಪಟೇಲನ ಮನೆಯಲ್ಲಿದ್ದರು. ಇವರು ಒಂದುದಿನ ಕಾಡಿಗೆಹೋಗಿ ೧೦–೧೫ದಿವಸದ ವರಿಗೂ ಹಿಂದಕ್ಕೆ ಬರದೆ ಕೊನೆಗೆ ಆ ತಾಲ್ಲೂಕಿನ ಒಂದು ಊರಿನಲ್ಲಿ ಜಾತ್ರೆಗೆ ಬಂದಿದ್ದರು. ಆ ಜಾತ್ರೆಗೆ ಬಂದಿದ್ದ ಜನಗಳಿಗೆ ಇವರು ಉಪಚಾರಾದಿಗಳನ್ನು ಮಾಡಿ ತೃಪ್ತಿಗೊಳಿಸಿದರು. ಇವರು ಮಾತನಾಡುವದೂ ಸ್ವಲ್ಪವೂ ಗಾಂಭೀರ್ಯವಿಲ್ಲದೆ ಹುಡುಗಾಟವಾಡುವದೂ, ನಮ್ಮಂಥಾ ಮೂಢರಿಗೆ ಹುಚ್ಚುತನ (ಐಲೆಂದು) ವೆಂದು ತೋರುತ್ತೆ. ಹೀಗಿರಲಿಕ್ಕಾಗಿ ಒಬ್ಬ ಸ್ಕೂಲ್‌ಮಾಸ್ಟರು (ದಾವಣಗೆರೆ ಪ್ರಾಂತ್ಯದ ಒಬ್ಬ ಬ್ರಾಹ್ಮಣನೆಂದು ಹೇಳಿಕೊಳ್ಳುತ್ತಿದ್ದರು) ಇಲ್ಲಿನ ಜನಗಳನ್ನು ನೋಸಿಸಬೇಕೆಂದು ಬಂದು ಆಟವನ್ನು ಕಟ್ಟಿದನು. ಈ ಹುಡುಗನ ವಿಷಯದಲ್ಲಿ ಆ ಬ್ರಾಹ್ಮಣನು ಹೇಳಿಕೊಳ್ಳುತ್ತಾ ಇರುವದೇನೆಂದರೆ :–ಇವರು" ಐಗಳು ; ಇವರು ಕಾಡಿನಲ್ಲಿ ತಪಸ್ಸುಮಾಡಲು, ಬನಶಂಕರಿಯು ಪ್ರತ್ಯಕ್ಷವಾಗಿ ಕೇಡಿದ ವರಿಗೆ ಬೇಕಾದ ವರಗಳನ್ನು ಕೊಡುವಹಾಗೆ ಇವರಿಗೆ ಅನುಗ್ರಹಿಸಿದನು. ಇವರು ಸಿದ್ಧರು, ಮಹಾಪುರುಷರು. ಈ ಸಿದ್ಧಾಪುರದ ಜಾತ್ರೆಯಲ್ಲಿ ಪರಶಿಗಳಿಗೆಲ್ಲಾ ಸಮಾರಾಧನೆ ಮಾಡಿಸಿದರು. ಪದಾರ್ಥಗಳು ಸ್ವಲ್ಪವೇ ಇದ್ದರೂ ತಮ್ಮ ತಪಸ್ಸಿನಿಂದ ಎಲ್ಲರಿಗೂ ಬೇಕಾದಷ್ಟು ಬಡಿಸುವಂತೆ ಅಪ್ಪಣೆ ಮಾಡಿದರು ಅವರು ಆಜ್ಞೆ ಮಾಡಿದ ಕೂಪಲೆ ಎಲ್ಲಾ ಪದಾರ್ಥಗಳು ವಿಪರೀತವಾದವು. ಇವರು ಲೋಕೋಪಕಾರಕ್ಕೋಸ್ಕರ ಮೈಸೂರು ಸೀಮೆಯಲ್ಲಿ ಸುತ್ತುವರು. ಬೇಕಾದವರು ಬೇಕಾದದ್ದನ್ನು ಬೇಡಬಹುದು "

ಕಂಡರೆ ಸೇರದವನಿಗೆ ಉಂಡರೆ ಸೇರೀತೆ ?

ಈ ಸಮಾಚಾರವನ್ನು ಕೇಳಿದ ಅತ್ಯಂತ ನಾಗರಿಕರಾದ ಇಲ್ಲಿನ ಜನರು ನಿಜವೆಂದು ನಂಬಿ ಪ್ರತಿಯೊಂದು ಕಡೆಗೂ ಈವೃತ್ತಾಂತವನ್ನು ತಿಳಿಸುವವರಾದರು. ಈ ವದಂತಿಯು ವಾಯು ವೇಗಕ್ಕಿಂತ ಹೆಚ್ಚಾಗಿ ಎಲ್ಲೆಲ್ಲಿಯೂ ಮುಟ್ಟಿತು. ಎಲ್ಲರೂ ತೆಂಗಿನಕಾಯಿ ಮುಂತಾದವನ್ನು ಸಮರ್ಪಿಸಿ ಈ ಮಹಾಪುರುಷರಿಂದ ಅಭಯವನ್ನು ತೆಗೆದುಕೊಂಡು ಹೋಗಲು ಮೊದಲಾಯಿತು. ಕೊನೆಗೆ ಇವರು ಚಿತ್ರದುರ್ಗಕ್ಕೆ ದಯಮಾಡುವ ಕಾಲದಲ್ಲಿ, ಊರೊಳಕ್ಕೆ ಮರ್ಯಾದೆಯೊಡನೆ ಪ್ರವೇಶಮಾಡಬೇಕೆಂದು ಹೇಳಲು, ಬ್ರಾಹ್ಮಣರಲ್ಲಿ ಜಗದ್ಗುರುಗಳೇ ಮುಂತಾದ ಸಂನ್ಯಾಸಿಗಳಿಗೆ ನಡೆಯುತಕ್ಕ ಛತ್ರಚಾಮರಾದಿ ಮರ್ಯಾದೆಗಳು ಈ ಮಹಾಪುರುಷರಿಗೂ ಆಗಬೇಕೆಂದು ಇಲ್ಲಿನ ನಮ್ಮ ಶಿವಭಕ್ತರು ನಿಶ್ಚಯಮಾಡಿಕೊಂಡರು. ಈ ಸಮಯಕ್ಕೆ ಸರಿಯಾಗಿ ತಾಲ್ಲೂಕಿನ ಅಮಲ್ದಾರರೂ ಸಬ್‌ಡಿವೀಜ್ಞ ಆಫೀಸರೂ ಊರಲ್ಲಿ ಇರಲಿಲ್ಲವಾಗಿ, ಅಧಿಕಾರಿಗಳಲ್ಲಿ ದೊರುಹೇಳಿಕೊಂಡು ಮಹಾಪುರುಷರ ನಗರ ಪ್ರವೇಶವನ್ನು ಅಡ್ಡಿಮಾಡುವದಕ್ಕೆ ಯಾರಿಗೂ ಆಗಲಿಲ್ಲ. ದುರ್ಗದ ರಂಗಪ್ಪನಾಯಕನ ಬಾಗಲಿನ ಹತ್ತರ ಇರುವ ನಮ್ಮ ಮಠದಲ್ಲಿ ಇವರು ಬಿಜಮಾಡಿಸಿದರು. ಇವರು ಇಲ್ಲಿದ್ದ ೫–೬ ದಿವಸದವರಿಗೂ ಒಳ್ಳೇ ಉತ್ಸವಕಾಲವಾಗಿತ್ತು. ಸುತ್ತಲೂ ಇರುವ ಗ್ರಾಮಗಳಿಂದಲೂ ದೂರದಲ್ಲಿರುವ ಚಳ್ಳಕೆರೆ ಹೊಳಲುಕೆರೆ ಮುಂತಾದ ಪ್ರಾಂತ್ಯಗಳಿಂದಲೂ ಜನಗಳು ಹಿಂಡು ಹಿಂಡಾಗಿ ಬಂದರು. ಅವರು ಇಳಿದಿದ್ದ ಮನೆಯು ಸ್ವಲ್ಪ ಕಿಷ್ಕಂಧವಾಗಿದ್ದದ್ದರಿಂದ, ಪರಿಷೆಗೆ ಕೂತುಕೊಳ್ಳುವದಕ್ಕೆ ಜಾಗವಿಲ್ಲದೆ ಮಗ್ಗಲಲ್ಲಿರತಕ್ಕ ಅಂಗಡಿ ಮನೆ ಬಾಗಿಲುಗಳೆಲ್ಲಾ ತುಂಬಿಹೋದವು. ಈ ಸಮೂಹದಲ್ಲಿಯೂ ಈ ಮಹಾಪುರುಷರ ಸುತ್ತು ಮುತ್ತುಲೂ ಜನಗಳು ಬಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದದ್ದು ಏನೆಂದರೆ:—ನಮ್ಮ ಸ್ವಾಮಿಯು ಸಾಕ್ಷಾತ್ ಬಸವೇಶ್ವರನ ಅವತಾರ ; ಇವರ ಪಾದದಲ್ಲಿ ವಿಷ್ಣುಚಕ್ರ ಇರವದು. ಇದರಿಂದಲೇ ವೈಷ್ಣವಾದಿಮತವು ಖಂಡಿಸಲ್ಪಟ್ಟು ವೀರಾಗಮ ನಿಷ್ಠರಾದ ನಮ್ಮ ಸ್ವಾಮಿಯ ಪಾದಾಕ್ರಾಂತವಾಯಿತೆಂಬುವದು ಗೊತ್ತಾಯಿತು. ಈಗ ಇವರು ಸಂಚಾರಕ್ಕೆ ಹೊರಟಿರುವದು ಲೋಕಹಿತಾರ್ಥವಾಗಿಯೆ ಹೊರ್ತು ಮತ್ತೇನೂ ಇಲ್ಲ. ಸದ್ಯದಲ್ಲಿ ಮೈಸೂರು ಸೀಮೆಯ ದೊರೆಗಳಿಗೆ ತಮ್ಮ ಭೇಟಿಯನ್ನು ಕೊಡುವದಕ್ಕೆ ಹೋಗುವರು. ಇವರ ದರ್ಶನವನ್ನು ತೆಗೆದುಕೊಳ್ಳುವದಕ್ಕೆ ಬಂದವರು ಇನ್ನು ಮುಂದಕ್ಕೆ ಮಹಾಪುರುಷರು ಬಿಜಮಾಡಿಸುವದೆಲ್ಲಿಗೆಂದು ಕೇಳಲಾಗಿ, ಮಹಾಪುರುಷರು–ನಾವು ಮೈಸೂರಿಗೆ ಹೋಗಿ ನಮ್ಮ ದೊರೆಗಳಕ್ಷ್ಮಾವದ ಸಾಲಕ್ಕಾಗಿ ಪಡುವ ಯೋಚನೆಯನ್ನು ಹೋಗಲಾಡಿಸಿ ಬರುವೆವು ! ಎದು ಉತ್ತರಕೊಟ್ಟರು. ಇನ್ನೊಂದುವೇಳೆ ಬಂದುರಾತ್ರಿ ದೀಕ್ಷೆಯಲ್ಲಿ ಎಚ್ಚರವು ಮುಗಿಯುತ್ತಾ ಬಂದಾಗ ಹತ್ತರದಲ್ಲಿದ್ದ ಸೇವಕರು ಎಚ್ಚರಾಲದ , ಅಂಗಡಿಯಿಂದ ತರಿಸಬೇಕೆಂದು ಹೇಳಿದ್ದಕ್ಕೆ ಮಹಾಪುರುಷರು–ಎಲಾ ಏನೂ ಬೇಡ ; ನೀರುತೆಗೆದುಕೊಂಡು ಬಾ, ಆದೀವಿಗೆ ಬೆಡು, ನಮ್ಮ ಮಹಿಮೆಯಿಂದ ಉದಿಯುವದು ಎಂದರು.

ಕರೀಕಂಬ್ಳೀವೇಲೆ ಕಣಿಕಾನಾಬಿದ.

ಇದೇ ಮುಂತಾದ ಅತಿಶಯಗಳು ಜನಗಳನ್ನು ಭ್ರಾಂತಿಪಡಿಸಿತು. ಹೆಂಗಸರ ಎಲ್ಲಾ ಕಜೆಯಿಂದಲೂ ಬಂದು ತಮಗೆ ೀಕಾದವರಗಳನ್ನು ಕೇಳುತ್ತಾ ಬಂದರು ಬ್ರಾಹ್ಮಣರ ಹೆಂಗಸರೂ ರಾತ್ರಿಕಾಲದಲ್ಲಿ ಏಕಾಂತವಾಗಿ ಬಂದು ತಮ ತಮಗಳಿಗೆ ಮಕ್ಕಳಫಲ ವಿವೆಯೇ ಇಲ್ಲವೇ ಎಂದುಕೇಳಿ ಮಹಾಪ್ರಸಾದವನ್ನು ತೆಗೆದುಕೊಂಡು ಹೋಗುವವರಾದರು. ಕಣ್ಣು ಇಲ್ಲದವರು, ಕಿವಿಕೇಳಸದಿರುವವರು, ಪ್ರಬಲವಾದ ರೋಗಗಳಿಂದ ನರಳುವವರು, ಮುಂತಾದವರು ತಮ ತಮಗೆ ಬೇಕಾದದ್ದನ್ನು ಕೇಳಿದರು. ಇಂಥಾವರಿಗೆಲ್ಲಾ ತೆಂಗಿನ ಕಾಯನ್ನು ತಾವು ಕೈಯಿಂದ ಮುಟ್ಟಿ—ಈ ತೆಂಗಿನಕಾಯನ್ನು ಪೂಜೆಮಾಡುತ್ತಿರು. ನಿನಗೆ ಎಲ್ಲಾ ಒಳ್ಳೀದಾಗುತ್ತೆ, ಎಂದು ಹೇಳುತ್ತಿದ್ದರು. ಇವರು ಹೊರಕ್ಕೆ ಹೋದಾಗ ಬಬ್ಬು ಆಂನ ತೋಳಿನಮೇಲೆ ದಯಮಾಡಿಸುವರು. ಆಗ ಹಿಂದೆ ಮುಂದೆ ದೊಡ್ಡ ಪರಿಷೆಯ ಹಾಗೆ ಜನಗಳು ಮುತ್ತಿಕೊಂಡಿರುವರು. ಇಷ್ಟುದಿವಸಕ್ಕೆ ಅವರು ಅಪ್ಪಣೇಕೊಡಿಸಿದ ಪ್ರಕಾರ ಮೈಸೂರಿಗೆ ದಯಮಾಡಿ ಮೈಸೂರು ರಾಜ್ಯಭಾರ ನಡಿಸುವವರಿಗೆ ಸಾಲದವಿಚಾರ ವಾಗಿರುವ ಯೋಚನೆಯನ್ನು ಬಿಡಿಸಿರಬಹುದೆಂದು ನಂಬುತ್ತೇನೆ : ಮೌಢ್ಯವು ಈಗಲೇ ಇಷ್ಟರಮಟ್ಟಿಗೆ ಜನರನ್ನು ಆವರಿಸಿ ಎಂಥಾ ಅಮಾನುಷ ಕೃತ್ಯವನ್ನೂ ನಂಬುವಂತೆ ಮಾಡಿದರೆ, ಪೂರ್ವಕಾಲದಲ್ಲಿ ಜನರು ಇನ್ನು ಯಾವದನ್ನು ತಾನೇ ನಂಬುವದು ಅಸಾಧ್ಯ!

ಜಂಪಣನಾಯಕನಕೊಟೆ, ೧೯೧೫ಕ್ಕೆ.

ತಮ್ಮವಿಧೇಯ,
ತತ್ವವಿಚಾರಿ.

೧೧. ಒಗಟೆಗಳು.

(೧) ಪಾಂಥಾರಿವ್ವಿಷವಂಗನಾಸುತವಿಭೋ ಭೃತ್ಯಸ್ಯವರ್ಮಾಹೃತಃ ಪುತ್ರಸ್ತ್ರೀ ಸಹಜಃಧರಸ್ಯ ಭಗಿನೀನಾಥಾತ್ಮಜಸ್ತ್ರೀಪತುಃ ॥ ಸೂನೋರ್ಮಾತುಲ ವೈರಿತಾತ ತನಯು ನ್ಯಾವಿಖ್ಯರಸ್ಯಾಂಗನಾ । ಮಾತಾ ತದ್ಧರರಾಜಸೂನುಸುಹೃದಃ ಪುತ್ರೀ ಕಟಾಕ್ಷೋಸ್ತುವಃ ॥

(೨) ಕಃ ಬಿಡಿತರತ್ರಿಕಾರಮ್ಯಾ । ಕಿಂ ಜಪ್ಯಂ ಕಿಂ ವಿಭೂಷಣಂ ॥ ಕೋ ವಂದ್ಯಃ ಕೀದೃಶಿ ಲಂಕಾ । ವೀರಮುಕ್ಕಟಕಂಪಿತಾ ॥

(೩) ಕಂ॥ ಪನ್ನೊಂದು ವರ್ಷದಾತನ । ಮುನ್ನೆತ್ತಿಯನೇರಿ ಬಹನ ಅಣ್ಣನ ಸಬನೊಳು। ಉನ್ನತವಿ ಜನಿಸಿದಾತನ ಪುಣ್ಯಾಂಗನೆ ಇರಲಿ ನಮ್ಮ ಜಿಹ್ವಾಗ್ರದೊಳು ॥

ಕಂತೆಗೆ ತಕ್ಕ ಶಾಂತೆ.

(೪) ಕಲಶವನು ತಾಳುವದು ಗೋಪುರವದಲ್ಲ । ಒಳಗೆ ರತ್ನಗಳುಂಟು ಅಂಬುಧಿಯು ಅಲ್ಲ । ಒಳ ಹೊದಿಕೆ ಹೊರ ಹೊದಿಕೆ ಮನುಜ ತಾನಲ್ಲ । ಇದ ಹೇಳಬಲ್ಲ ಜ್ಞಾನಿರಿಗೆ ಅರಿದಲ್ಲ ॥

೪ನೇ ಸಂಚಿಕೆಯಲ್ಲಿನ ಬಗಟೆಗಳಿಗೆ ಉತ್ತರ.

(೧) ಅಂಗಿ. (೭) ಹಂಡೆ.

(೩) ಲಕ್ಷ್ಮೀಕಟಾಕ್ಷಯುಕ್ತರಾದ ಶೇಷಗಿರಿರಾಯರಿಗೆ.

ಶ್ರೀ ವ್ಯಾಸರಾಯನು ಮಾಡುವ ನಮಸ್ಕಾರ, ತಾರಣಸಂವತ್ಸರದ ನ್ಯಾಸ್ಕ ಬ॥ ೨೩ ಮಂಗಳವಾರದವರಿಗೆ, ಮೈಸೂರಿನಲ್ಲಿ ಚಿರಂಜೀವಿ ಸೌಭಾಗ್ಯವತಿಗಳುಸಹ ನಾನು ಸುಖದಲ್ಲಿದ್ದೇನೆ.—ಅಲ್ಲಿಇರುವಂಥಾ ಚಿರಂಜೀವಿ ಸೌಭಾಗ್ಯವತಿಗಳು ಮುಂತಾಗಿ ಸರ್ವರ ಸಂತೋಷಕ್ಕೆ ಬರೆದು ಕಳುಹಿಸಬೇಕು. ಸಾಂಪ್ರತ :—ಪಾರ್ಥಿವಸಂವತ್ಸರದ ವೈಶಾಖ ಶುದ್ಧ ೫ ಶುಕ್ರವಾರ ಪ್ರಷ್ಯನಕ್ಷತ್ರ ಕಟಕಲಗ್ನದಲ್ಲಿ ಗೋಪಾಲರಾಯನಿಗೆ ಉಪನಯನ ಮಾಡಬೇಕೆಂದು ನಿಷ್ಕರ್ಷೆ ಮಾಡಿದ್ದೇನೆ ದಯವಿಟ್ಟು ನಿಮ್ಮ ಗಂಡು ಹೆಣ್ಣು ಮಕ್ಕಳು, ಕುಟುಂಬ, ಭಾವನವರನ್ನು ಸಹ ಕರೆದುಕೊಂಡು ದಯಮಾಡಿಸಬೇಕು. ನೀವು ಬರುವಾಗ ಕವರಾಯನ ತೋಟದಿಂದ ತೆಂಗಿನಕಾಯಿ, ಬಲ್ಲ, ಮಲ್ಲಿಗೆ ಸಂಪಿಗೆ ಹುವ್ವುಗಳನ್ನೂ ಒಳ್ಳೆ ಸಾದೆಯನ್ನೂ ಸಹ ಎತ್ತಿನ ಗಾಡೀ ಮೇಲೆ ಹಾಕಿಕೊಂಡು ಬರುವಂತೆ ಮಾಡಿಸಬೇಕು.

ಹನುಮಂತರಾಯನು ತನ್ನ ಮಗ ನರಸಿಂಗರಾಯನಿಗೆ ವಿವಾಹಮಾಡಬೇಕೆಂದು ಯೋಚಿಸಿ ಇರುತ್ತಾನೆ. ರಕ್ತಾಕ್ಷಿ ಸಂವತ್ಸರದ ಭಾದ್ರಪದ ಬ॥ ೪ ಚಿತ್ತಾನಕ್ಷತ್ರ ಸಿಂಹಲಗ್ನದಲ್ಲಿ ಆ ಹುಡುಗನು ಜನಿಸಿದನು ಆಕಾಲದಲ್ಲಿ ಸಿಂಹದಲ್ಲಿ ಸೂರ್ಯ-ಶುಕ್ರರೂ ತುಲಾದಲ್ಲಿ ಚಂದ್ರ-ಶನಿಗಳೂ ಧನುಸ್ಸಿನಲ್ಲಿ ಗುರು-ಕುಜರೂ ಮೀನದಲ್ಲಿ ಕೇತುವೂ ಕನ್ಯದಲ್ಲಿ ಬುಧ-ರಾಹುಗಳೂ ಇದ್ದರು. ನಂಜನಗೂಡಿನಲ್ಲಿ ಶ್ರೀಪತಿರಾಯನು ಮನೆಯಲ್ಲಿ ರುಕ್ಮಿಣಿಯೆಂಬ ಕನ್ನೆ ಇರುವದಾಗಿ ತಿಳಿಯಬರುತ್ತದೆ. ಆ ಹುಡಗಿಯ ಜಾತಕವನ್ನು ತೆಗೆದು ಕಳುಹಿಸುವದು.

ಇತಿ ನಮಸ್ಕಾರ.

ರಂತಬೋಧಿನಿ.

ಸಂಪುಟ ೨.] ಮಾರ್ಚಿ ೧೮೮೩. [ಸಂಚಿಕೆ ೬.

೧. ವಿಜಯನಗರದ ಬಾಲಿಕಾಪಾಠಶಾಲೆಯ ಸಭೆ.

ವಿಜಯನಗರದ ಮಹಾರಾಜರವರ ಸ್ತ್ರೀವಿದ್ಯಾಪಾಠಶಾಲೆಯಲ್ಲಿ ಫೆಬ್ರುವರಿ ತಿಂಗಳು ೮ನೇ ತಾರೀಖಿನಲ್ಲಿ ಬಾಲಕಿಯರಿಗೆ ಇನಾಮುಗಳನ್ನು ಕೊಡುವದಕ್ಕೋಸ್ಕರ ಒಂದು ಸಭೆಯು ಸೇರಿಯಿತ್ತು. ಆ ಸಭೆಗೆ ಮದರಾಸು ಗವರ್ನರ್ ಗ್ರ್ಯಾಂಡ್ ಡಫ್ ಸಾಹೇಬರವರೂ, ವಿಜಯನಗರದ ಮಹಾರಾಜರವರೂ, ಇನ್ನೂ ಮುದರಾಸಿನ ಅಧಿಕಾರಸ್ಥರೂ, ವಿದ್ವಾಂಸರೂ ಸೇರಿ ಇದ್ದರು. ಮಿ|| ರಾ|| ರಾ|| ವಿಜಯರಂಗಂ ಮೊದಲ್ಯಾರ್ ರವರು ಪಾಠಶಾಲೆಯ ಅಭಿವೃದ್ಧಿಯ ರಿಪೋರ್ಟನ್ನು ಓದಿದ ತರುವಾಯ ಮ|| ರಾ|| ರಾ|| ಚಂಚಲರಾಯರವರು ಸ್ತ್ರೀವಿದ್ಯಾಭ್ಯಾಸ ವಿಷಯದಲ್ಲಿ ಒಂದು ಉಪನ್ಯಾಸವನ್ನು ಮಾಡಿದರು. ಅದರ ತಾತ್ಪರ್ಯವೇನೆಂದರೆ:—

ಎಷ್ಟು ಪ್ರತಿಬಂಧಕಗಳಿದ್ದರೂ ಸ್ತ್ರೀವಿದ್ಯಾಭ್ಯಾಸವು ನಿಧಾನವಾಗಿ ವೃದ್ಧಿಯಾಗುತ್ತಲೇ ಇದೆ. ಜನರೂ ಕೂಡ ಇದು ಉತ್ತಮವಾದದ್ದೆಂದು ಕ್ರಮೇಣ ತಿಳಿದುಕೊಳ್ಳುತ್ತಾ ಇದ್ದಾರೆ. ಕೆಲವು ದಿವಸಗಳ ಕೆಳಗೆ ಬಾಲಕಿಯರನ್ನು ಪಾಠಶಾಲೆಗೆ ಬರಮಾಡಿಕೊಳ್ಳುವದಕ್ಕೋಸ್ಕರ ನಾನಾವಿಧವಾದ ಪ್ರಯತ್ನಗಳನ್ನು ಮಾಡಬೇಕಾಗಿತ್ತು. ಈಗ ಅಂಥಾ ಪ್ರಯತ್ನಗಳು ಆವಶ್ಯಕವಿಲ್ಲ. ಸ್ತ್ರೀಯರು ವಿದ್ಯೆಯನ್ನು ಕಲಿಯುವದರಿಂದ ಆಗತಕ್ಕ ಪ್ರಯೋಜನವನ್ನು ತಿಳಿದುಕೊಂಡು, ಅನೇಕ ದೊಡ್ಡ ಮನುಷ್ಯರು ತಮ್ಮ ಸ್ತ್ರೀಯರಿಗೆ ಪಾಠ ಹೇಳುವದಕ್ಕೋಸ್ಕರ ಯೂರೋಪಿಯರ್ ಹೆಂಗಸರನ್ನು ಸಂಬಳಕೊಟ್ಟು ಇಟ್ಟು ಇದ್ದಾರೆ. ೧೮೮೧ನೇ ಇಸವಿಯಲ್ಲಿನ ಖಾನಿಷುಮಾರೀ ಲೆಕ್ಕದ ಪ್ರಕಾರ ಮದರಾಸು ಸಂಸ್ಥಾನದಲ್ಲಿ ೪೦೩೯ಕ್ಕೆ ಒಬ್ಬಳು ಓದತಕ್ಕವಳಾಗಿಯೂ, ಬಂಗಾಳಾದಲ್ಲಿ ೯೭೬ಕ್ಕೆ ಒಬ್ಬಳಾಗಿಯೂ, ಬೊಂಬಾಯಿಯಲ್ಲಿ ೪೫೧೦ಕ್ಕೆ ಒಬ್ಬ

ಈಡ ಸಿಕ್ಕೋದಾದರೆ ಹಡಗ ನನಗೆ ಇರಲಿ ಅಂದ.

ಳಾಗಿಯೂ ಇತ್ತು. ಬರೆಯುವದಕ್ಕೂ ಓದುವದಕ್ಕೂ ಬಂದಿರತಕ್ಕ ಸ್ತ್ರೀಯರ ಸಂಖ್ಯೆಯು ಮುಂಬಯಿನಲ್ಲಿ ೧೬೬ರಲ್ಲಿ ಬಂದೂ, ಬಂಗಾಳದಲ್ಲಿ ೫೬೮ರಲ್ಲಿ ಬಂದೂ, ಬೊಂಬಾಯಿಯಲ್ಲಿ ೬೦೬ರಲ್ಲಿ ಬಂದೂ ಆಗಿಯಿದೆ. ಯಾವರೀತಿಯಲ್ಲಿ ನೋಡಿದರೂ ಇತರ ಸಂಸ್ಥಾನಗಳಿಗಿಂತ ನಮ್ಮ ಸಂಸ್ಥಾನದಲ್ಲಿ ವಿದ್ಯಾವಂತರಾದ ಸ್ತ್ರೀಯರ ಸಂಖ್ಯೆಯು ಹೆಚ್ಚಿಯಿದೆ. ಈ ಕೀರ್ತಿಯು ಮುದರಾಸು ಗವರ್ನಮೆಂಟನವರಿಗೂ, ಎಜುಕೇಷನಲ್ ಡಿಪಾರ್ಟಮೆಂಟಿನವರಿಗೂ ನಮ್ಮ ವಿಜಯನಗರದ ಮಹಾರಾಜರವರಿಗೂ ಸೇರತಕ್ಕದ್ದಾಗಿದೆ. ಈ ವಿದ್ಯಾಭ್ಯಾಸವು ಹೀಗೆಯೇ ನಡೆಯುತ್ತಾ ಇದ್ದರೆ, ನಮ್ಮ ಸ್ತ್ರೀಯರೆಲ್ಲರೂ ನಮ್ಮ ದೇಶದ ಯುಗಾಂತರದ ಸ್ತ್ರೀಯರು ಎಷ್ಟು ವಿದ್ಯಾವಂತರಾಗಿದ್ದರೋ ಅಷ್ಟು ವಿದ್ಯಾವಂತರಾಗಬಹುದು ಎಂದು ತೋರುತ್ತದೆ. ವೇದವೇದಾಂತ ಪುರಾಣಗಳಿಂದ ಬಂದಾನೊಂದು ಕಾಲದಲ್ಲಿ ಸ್ತ್ರೀಯರು ವಿದ್ಯಾವಂತರಾಗಿ ವೇದಗಳನ್ನು ಓದುತ್ತಲೂ, ಕವಿತ್ವಗಳನ್ನು ಮಾಡುತ್ತಲೂ, ಧರ್ಮನೀತಿ ಮುಂತಾದ ಶಾಸ್ತ್ರಗಳಲ್ಲಿ ಅಪರಿಮಿತಪಾಂಡಿತ್ಯವನ್ನು ಸಂಪಾದಿಸಿ ಸಭಾಮುಖದಲ್ಲಿ ಪ್ರವೇಶಮಾಡುತ್ತಲೂ, ಇಷ್ಟಬಂದರೆ ಮದುವೇಮಾಡಿಕೊಳ್ಳುತ್ತಲೂ, ಇಲ್ಲದಿದ್ದರೆ ಬ್ರಹ್ಮಚಾರಿಣಿಯಾಗಿಯೇ ಇರುತ್ತಲೂ, ಪತಿಗಳೊಡನೆ ಯುದ್ಧರಂಗವನ್ನು ಪ್ರವೇಶಿಸಿ ಸೇನಾಧಿಪತ್ಯವನ್ನು ಮಾಡುತ್ತಲೂ ಇದ್ದರೆಂಬದಾಗಿ ಗೊತ್ತಾಗುತ್ತದೆ ಮತ್ತು ಆಕಾಲದಲ್ಲಿ ಬಾಲಿಕಾ ವಿವಾಹವೂ, ದ್ವಿತೀಯ ವಿವಾಹನಿಷೇಧವೂ ಇರಲಿಲ್ಲವೆಂಬದಾಗಿಯೂ ತಿಳಿಯುಬರುತ್ತದೆ. ವಿದ್ಯೆಗೆ ಅಧಿದೇವತೆಯು ಹೆಂಗಸಾದ ಸರಸ್ವತಿಯಲ್ಲವೆ? ಗಾರ್ಗಿ, ಮೈತ್ರೇಯಿ ಎಂಬುವರು ತಮ್ಮ ಪಾಂಡಿತ್ಯದಿಂದ ಪ್ರಸಿದ್ಧರಾಗಿ ಇರಲಿಲ್ಲವೆ? ಅಪ್ಪಯರ್, ಕಲ್ಯಾಣದೇವಿ, ಮತ್ತು ಮಾಲಿ ಎಂಬ ಸ್ತ್ರೀಯರ ಗ್ರಂಥಗಳನ್ನು ಲೋಕವೆಲ್ಲಾ ಕೊಂಡಾಡುವದಿಲ್ಲವೆ? ಕುಂತಿ ದ್ರೌಪದಿ ಗಾಂಧಾರಿಯರು ಧರ್ಮಶಾಸ್ತ್ರದ ವಿಷಯದಲ್ಲಿಯೂ ರಾಜನೀತಿ ವಿಷಯದಲ್ಲಿಯೂ ಹೇಳಿರತಕ್ಕ ಮಾತುಗಳು ಜಗತ್ಪ್ರಸಿದ್ಧವಾಗಿ ಇಲ್ಲವೆ? ಮಾಲಿಯು ತನ್ನ ಅವಸಾನಕಾಲದಲ್ಲಿ ರಾಜತಂತ್ರಗಳು ಏನಾದರೂ ತಿಳಿಯುವಿದ್ದರೆ ತಾರೆಯನ್ನು ಕೇಳಿದರೆ ಅವಳು ರಾಜ

ಕವಿಯವ ಪಾಪ ಬಿಡ್ಡ ಮಾಡಿದವನಿಗೆ ಉಂಟೆ ?

ತಂತ್ರದಲ್ಲಿ ನಿಪುಣೆಯಾದ್ದರಿಂದ ರಾಜ್ಯಭಾರಮಾಡುವದರಲ್ಲಿ ಸಂಭವಿಸತಕ್ಕ ತೊಂದರೆಗಳನ್ನೆಲ್ಲಾ ನಿವಾರಣೆಮಾಡಿಕೊಳ್ಳತಕ್ಕ ಆಲೋಚನೆಯನ್ನು ನಿನಗೆ ಹೇಳುವಳು ಎಂದು ಸುಗ್ರೀವನಿಗೆ ಹೇಳಲಿಲ್ಲವೆ ? ಭೋಜರಾಯನ ಆ ಸ್ಥಾನದಲ್ಲಿ ಸೀತೆ ಎಂಬುವಳು ಮಹಾಕವಿ ಎಂಬದಾಗಿ ಹೆಸರುಗೊಂಡಿರಲಿಲ್ಲವೆ ? ಸುಲೇಭೆ ಎಂಬುವಳು ಜನಕಮಹಾರಾಜನೊಡನೆ ಮತವಿಷಯವಾಗಿ ವಾಗ್ವಾದಮಾಡಿ, ಕಡೆಗೆ ಅತನನ್ನು ತನ್ನ ಶಿಷ್ಯನನ್ನಾಗಿ ಮಾಡಿಕೊಂಡು, ಅತನಿಗೆ ಅನೇಕ ತತ್ವಗಳನ್ನು ಬೋಧಿಸಲಿಲ್ಲವೆ ? ಚಿತ್ರಲೇಖೆ ಎಂಬುವಳು ಚಿತ್ರಬರೆಯುವದರಲ್ಲಿ ಬಹುಸಮರ್ಥಳೆಂದು ಅನ್ನಿಸಿಕೊಂಡು ಇರಲಿಲ್ಲವೆ ? ಮಾಸಳು ಎಂಬುವಳು ವೈದ್ಯಶಾಸ್ತ್ರದಲ್ಲಿಯೂ ಶಿಲ್ಪಶಾಸ್ತ್ರದಲ್ಲಿಯೂ ಪಂಡಿತಳಾಗಿ ಇರಲಿಲ್ಲವೆ ? ಕೈಕೇಯಿಯು ದಶರಥನ ಸಂಗಡ ಯುದ್ಧರಂಗವನ್ನು ಪ್ರವೇಶಿಸಿ ಅತನಿಗೆ ಸಹಾಯಮಾಡಲಿಲ್ಲವೆ ? ಸತ್ಯಭಾಮೆಯು ನರಕಾಸುರನ ಯುದ್ಧದಲ್ಲಿ ಅತ್ಯಂತ ಪರಾಕ್ರಮವನ್ನು ತೋರಿಸಿ ಕೃಷ್ಣನಿಗೆ ಜಯವಾಗುವ ಹಾಗೆ ಮಾಡಲಿಲ್ಲವೆ ? ದ್ರೌಪದಿಯೂ ದಮಯಂತಿಯೂ ಕೂಡ ಸಭಾಮುಖದಲ್ಲಿ ತಮ್ಮ ಪತಿಗಳನ್ನು ವರಿಸಲಿಲ್ಲವೆ ? ಕೌರವರ ಮಕ್ಕಳು ಸಾಧನೆಮಾಡತಕ್ಕ ಕಾಲದಲ್ಲಿ ರಾಜಸ್ತ್ರೀಯರೆಲ್ಲಾ ಸೇರಿ ಇರಲಿಲ್ಲವೆ ?

ಪೂರ್ವಕಾಲದಲ್ಲಿ ಅನೇಕ ಸ್ತ್ರೀಯರು ವಿವಾಹಮಾಡಿಕೊಳ್ಳುವದಿಲ್ಲವೆಂದು ನಿಷ್ಕರ್ಷೆಮಾಡಿ ಯೋಗಿನಿಯರಾಗಿಯೇ ಕಾಲಹರಣಮಾಡಿದರು. ಆಕಾಲದಲ್ಲಿ ಸ್ತ್ರೀಯರು ಮದುವೆ ಮಾಡಿಕೊಳ್ಳಲೇ ಬೇಕೆಂಬ ನಿರ್ಬಂಧವು ಇರಲಿಲ್ಲ. ಬೇಕಾದವರು ಮದುವೆಮಾಡಿಕೊಳ್ಳುತ್ತಲೂ ಬೇಡದವರು ಬ್ರಹ್ಮಚಾರಿಣಿಯರಾಗಿಯೇ ಇರುತ್ತಲೂ ಇದ್ದರು; ಆದರೆ ಅವರು ಮದುವೆಮಾಡಿಕೊಂಡರೂ ಇಲ್ಲದಿದ್ದರೂಕೂಡ ಧರ್ಮಾಚರಣೆಯಲ್ಲಿ ನಿರತರಾಗಿ ಇರುತ್ತಿದ್ದರು. ಪತಿವ್ರತಾಶಿರೋಮಣಿಗಳಾದ ಸೀತೆ, ಚಂದ್ರಮುಖಿ, ದಮಯಂತಿ ಮುಂತಾದ ಅನೇಕ ಸ್ತ್ರೀಯರ ಪಾತಿವ್ರತ್ಯಧರ್ಮವನ್ನು ಯಾರು ತಾನೆ ಕೇಳಿಲ್ಲ ? ಪೂರ್ವಕಾಲದಲ್ಲಿ ಹೀಗೆಲ್ಲಾ ಇದ್ದುಕೂಡ ಈಗ ನಮ್ಮ ಸ್ತ್ರೀಯರು ನಿರಕ್ಷರಕುಕ್ಷಿಗಳಾಗುವದಕ್ಕೆ ಅನೇಕ ಕಾರಣಗಳುಂಟು.

ಕಡಲೆ ಇದ್ದವನಿಗೆ ಹಲ್ಲಿಲ್ಲ, ಹಲ್ಲಿದ್ದವನಿಗೆ ಕಡಲೆ ಇಲ್ಲ.

ಒಳದೇಶದ ಕಲಹಗಳೂ ತುರುಕರ ಜಯವೂ ಇದಕ್ಕೆ ಮುಖ್ಯಕಾರಣಗಳೆಂದು ಹೇಳಬಹುದು. ಈಗಿನ ನಮ್ಮ ಸ್ತ್ರೀಯರಿಗೆ ಸ್ವಲ್ಪಮಾತ್ರವೂ ಸ್ವಾತಂತ್ರ್ಯವಿಲ್ಲ. ತಮಗೆ ಇಷ್ಟವಿದ್ದರೂ ಇಲ್ಲದಿದ್ದರೂ ಯಾರನ್ನಾದರೂ ಮದುವೆ ಮಾಡಿಕೊಳ್ಳಲೇಬೇಕು. ತಮಗೆ ಅನುರೂಪರಾದ ಪತಿಗಳನ್ನು ವರಿಸತಕ್ಕ ಶಕ್ತಿಯು ಇವರಿಗೆ ಇಲ್ಲ. ಇದಲ್ಲದೆ ಮದುವೆಯಾಗತಕ್ಕ ಕಾಲದಲ್ಲಿ ವಧೂವರರಿಬ್ಬರಿಗೂ ತಾರತಮ್ಯಜ್ಞಾನವಿರುವದೇ ಇಲ್ಲ. ಯಾವಳಿಗಾದರೂ ಬಂದುವೇಳೆ ಬಾಲ್ಯದಲ್ಲಿಯೇ ಪತಿಯು ಮೃತನಾದಪಕ್ಷದಲ್ಲಿ, ಅವಳು ಐಹಿಕವ್ಯಾಪಾರಗಳನ್ನೆಲ್ಲಾ ತ್ಯಜಿಸಿ ದೀಪವನ್ನು ದಂಡಿಸುತ್ತಾ ಬಂದೇ ಪೊತ್ತು ಊಟವಮಾಡುತ್ತಾ ಯಾವಜ್ಜೀವವೂ ವಿಧವೆಯಾಗಿ ಇರಬೇಕು. ಈಕೆಗೆ ದಾಯಭಾಗವು ತಪ್ಪಿಹೋಗಿ ಜೀವನಾಂಶಕ್ಕೂ ಮಾರ್ಗವಿಲ್ಲದಪಕ್ಷದಲ್ಲಿ ಸೇವಕವೃತ್ತಿಯಲ್ಲಿ ಕಾಲಕ್ಷೇಪ ಮಾಡಬೇಕಾಗುತ್ತದೆ. ಹಾಗೆ ಸೇವಕವೃತ್ತಿಯಲ್ಲಿ ಇರುವದಕ್ಕೆ ಪ್ರಯತ್ನಮಾಡಿದರೂ, ಮುಂಡೆ ಎದುರಿಗೆ ಬಂದಳು ಎಂದು ಎಲ್ಲರೂ ದೂಷಿಸುವರು.

ಇದಲ್ಲದೆ ಸ್ತ್ರೀಯರು ಮೊದಲು ತಂದೆಯ ಪೋಷಣೆಯಲ್ಲಿಯೂ, ಅನಂತರದಲ್ಲಿ ಗಂಡನ ಪೋಷಣೆಯಲ್ಲಿಯೂ, ತರುವಾಯ ಮಕ್ಕಳ ಪೋಷಣೆಯಲ್ಲಿಯೂ ಇರಬೇಕೆಂದು ಶಾಸ್ತ್ರವಿದೆ. ಈಕೆಯು ಮನೆಯಲ್ಲಿರತಕ್ಕ ಗಂಡಸರೆಲ್ಲರಿಗೂ ಭೋಜನವಾದಮೇಲೆ ತಾನು ಭುಜಿಸಬೇಕು. ಪತಿಯುತರಾದ ಹೆಂಗಸರು ಈಕೆಯೊಂದಿಗೆ ಮಾತನಾಡುವದಿಲ್ಲ. ಈಕೆಯು ತನ್ನ ಹೆಣ್ಣುಮಕ್ಕಳು ಓದುವ ಪಾಠಶಾಲೆಗಳಲ್ಲಿ ನಾಮಮುಕೊಡುವ ಇಂಥಾ ಸಭೆಗಳಿಗೆಕೂಡ ಬರುವದಕ್ಕಿಲ್ಲ. ಸ್ತ್ರೀ ವಿದ್ಯಾಭ್ಯಾಸ ಮಾಡತಕ್ಕಂಥಾ ಲೋಕೋಪಕಾರಿಗಳಾದ ಅನೇಕಜನರಿಗೆ ಇನ್ನು ಮೇಲೆ ನಮ್ಮ ಹೆಂಗಸರಿಗೆ ವಿದ್ಯಾಭ್ಯಾಸ ಮಾಡಿಸುವದರಿಂದ ನಮ್ಮ ಪೂರ್ವದ ಸ್ತ್ರೀಯರಿಗೆ ಇದ್ದ ಸ್ವಾತಂತ್ರ್ಯವನ್ನೂ ವಿದ್ಯೆಯನ್ನೂ ಧರ್ಮಾಚರಣೆಯನ್ನೂ ಉಂಟುಮಾಡುವದೇ ಮುಖ್ಯತಾತ್ಪರ್ಯವು. ನಾವು ಮತಸಂಬಂಧವಾದ ವಿದ್ಯೆಯನ್ನು ಹೇಳಬಾರದು. ಯಾಕಂದರೆ, ಲೋಕದಲ್ಲಿ ನಾವಿರಾರು ಮತಗಳವೆ; ಎಲ್ಲಾ

ಕಣ್ಣು ಕಾಣದ ಹೊಟ್ಟೆಗೆ ಮಣ್ಣೇನು ಮಸಿಯೇನು ?

ಮತಗಳಿಗೂ ಸಮ್ಮತವಾದ ಮತಸಮರ್ಥಗಳನ್ನು ಹೇಳುವದಕ್ಕಾಗುವದಿಲ್ಲ; ಇದಲ್ಲದೆ ಮತಸಂಬಧವಾದ ವಿಷಯಗಳನ್ನು ಹೇಳುವದರಿಂದ ಸ್ವಮತಾಭಿಮಾನವೂ ಅನ್ಯಮತದ್ವೇಷವೂ ಉಂಟಾಗುವವು. ಯಾವರೀತಿಯಲ್ಲಿ ನೋಡಿದರೂ ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ಮಾಡಿಸತಕ್ಕದ್ದು ಬಹಳ ಅವಶ್ಯಕವಾವದ್ದೆಂದು ತೋರುವದು. ಸ್ತ್ರೀಯರಿಗೂ ಪುರುಷರಿಗಿರುವಂತೆಯೇ ಬುದ್ಧಿಯೂ, ಸುಖ ದುಃಖಗಳೂ, ತಕ್ಕ ಉದ್ಯೋಗಗಳೂ ಇರುತ್ತವೆ. ಸ್ತ್ರೀಯರು ವಿದ್ಯಾವಂತರೂ ಶಾರತಮ್ಯಜ್ಞರೂ ಆದರೆ ಅವರು ಮಕ್ಕಳೂ ಕೂಡ ಯಾವಾಗಲೂ ವಿವೇಕಪೂರ್ವಕವಾದ ಕೆಲಸಗಳನ್ನೇ ನೋಡುತ್ತಾ ಇರುವದರಿಂದ ತಾವೂ ವಿವೇಕಶಾಲಿಗಳಾಗುವರು. ಈಗ ನಮ್ಮ ಸ್ತ್ರೀಯರೆಲ್ಲಾ ವಿದ್ಯಾವಿಹೀನರಾಗಿಯೂ ಲೋಕವ್ಯವಹಾರಗಳನ್ನು ತಿಳಿಯದವರಾಗಿಯೂ ಇರುವದರಿಂದ, ಲೋಕೋಪಕಾರವಾದ ಯಾವಯಾವ ಕೆಲಸಗಳನ್ನು ಮಾಡುವದಕ್ಕೆ ಹೋದರೂ ಅವರು ಅವುಗಳಿಗೆಲ್ಲಾ ಪ್ರತಿಕೂಲರಾಗುವರು. ಇವರೆಲ್ಲರೂ ವಿದ್ಯಾವಂತರಾಗಿದ್ದ ಪಕ್ಷದಲ್ಲಿ ನಮಗೂ ಲೋಕಕ್ಕೂ ಎಷ್ಟೋ ಪ್ರಯೋಜನಕರವಾಗಿ ಇರುತ್ತಿತ್ತು. ಇದಲ್ಲದೆ ಈಗ ನಾವು ಸ್ತ್ರೀವಿದ್ಯಾಭ್ಯಾಸವನ್ನು ಪ್ರಾರಂಭಮಾಡಿ ಇದ್ದಾಗ್ಯೂ ಸ್ತ್ರೀಯರನ್ನು ಸಿಕ್ಷಯುವಾಗಿ ವಿವೇಕಶಾಲಿಗಳಾಗಿ ಮಾಡುವದಕ್ಕೆ ತಕ್ಕ ಏರ್ಪಾಡುಗಳನ್ನು ಇನ್ನೂ ಮಾಡಿಯಿಲ್ಲ. ನಾವು ಈಗ ದೇಶಭಾಷೆಯನ್ನು ಬರೆಯುವದು ಓದುವದು ಮಾತ್ರ ಕಲಿಸುತ್ತಾ ಇದ್ದೇವೆ. ಇವುಗಳಿಂದ ಎಷ್ಟೋ ಪ್ರಯೋಜನವುಂಟು. ಆದಾಗ್ಯೂ ಇಂಥಾ ವಿದ್ಯಾಭ್ಯಾಸದಿಂದ ಇವರ ದುರ್ಭಿವಮಾನಗಳೆಲ್ಲಾ ತೊಲಗಿ ನಮ್ಮ ಪೂರ್ವದ ಸ್ತ್ರೀಯರಂತೆಯೂ, ಈಗ ಪ್ರಸಿದ್ಧರಾದ ಯೂರೋಪ್ ಮತ್ತು ಅಮರಿಕಾಖಂಡಗಳಲ್ಲಿನ ಸ್ತ್ರೀಯರಂತೆಯೂ, ವಿದ್ಯಾಪಾಂಡಿತ್ಯವನ್ನು ಪಡೆದು ಅದರಿಂದ ಲೋಕಕ್ಕೆ ಉಪಕಾರವಾಗುವದಕ್ಕೆ ಇವರಿಗೆ ತಕ್ಕಷ್ಟು ಯೋಗ್ಯತೆ ಬರುವದಿಲ್ಲ.

ಈಗಿನ ಲೌಕಿಕಭಾವೆಯು ಇಂಗ್ಲಿಷ್ ಆದ್ದರಿಂದ ಸುಲಭವಾಗಿ ಜೀವನೋಪಾಯವನ್ನು ಹೊಂದಬೇಕೆಂಬ ಗಂಡಸರೆಲ್ಲರೂ ಈ ಭಾಷೆಯನ್ನು

ವಿಶೇಷವಾಗಿ ವ್ಯಾಸಂಗವಮಾಡುತ್ತಾರೆ. ಇಂಗ್ಲಿಷ್ ಭಾಷೆಯು ಸ್ವಲ್ಪಹೆಚ್ಚು ಕಡಿಮೆಯಾಗಿ ನಮ್ಮ ಜನಗಳಲ್ಲೆಲ್ಲಾ ಸ್ವಭಾಷೆಗಿಂತಲೂ ಸ್ವಲ್ಪಹೆಚ್ಚಾಗಿಯೇ ಪ್ರಬಲವಾಗಿ ಇದೆ. ಇದಲ್ಲದೆ ಲೋಕದಲ್ಲಿ ಜನರು ಯಾವಯಾವ ವಿಷಯಗಳನ್ನು ತಿಳಿದುಕೊಂಡು, ಯಾವ ಯಾವಶಾಸ್ತ್ರಗಳನ್ನು ಅಭ್ಯಾಸ ಮಾಡಿದರೆ, ನಿಜವಾದ ಪಾಂಡಿತ್ಯವನ್ನು ಹೊಂದಿ, ದುರಭಿಮಾನಗಳನ್ನು ಹೋಗಲಾಡಿಸಿಕೊಂಡು, ಸ್ವತಂತ್ರರೂ ಐಶ್ವರ್ಯವಂತರೂ ಆಗುವರೋ, ಅಂಥಾ ಶಾಸ್ತ್ರಮುಂತಾದವುಗಳನ್ನೆಲ್ಲಾ ಇಂಗ್ಲಿಷ್ ಭಾಷೆಯಲ್ಲಿ ಸಮಗ್ರವಾಗಿ ಎಲ್ಲರಿಗೂ ತಿಳಿಯುವದಕ್ಕೆ ಸುಲಭವಾಗಿ ಬರೆದು ಇದೆ. ಈ ಭಾಷೆಯನ್ನು ಚನ್ನಾಗಿ ವ್ಯಾಸಂಗಮಾಡಿ ಲೋಕವ್ಯವಹಾರಗಳ ವಿಷಯದಲ್ಲಿಯೂ, ಸಕಲ ಶಾಸ್ತ್ರಗಳ ವಿಷಯದಲ್ಲಿಯೂ, ಅಸಾಧಾರಣವಾದ ಪ್ರಜ್ಞೆಯನ್ನು ಪಡೆದು, ಸಕಲ ದುರಭಿಮಾನಗಳನ್ನೂ ಬಿಟ್ಟು, ಧರ್ಮೈಕತತ್ಪರರಾಗಿ ಇರತಕ್ಕ ಗಂಡಸರಿಗೆ ಇವುಗಳಲ್ಲಿ ಪಾಂಡಿತ್ಯವಿಲ್ಲದೆಯೂ ಸ್ವಭಾಷೆಯನ್ನು ಅಲ್ಪಸ್ವಲ್ಪ ಓದುವದಕ್ಕೆ ಬಂದಾಗ್ಯೂ ಯುಕ್ತಾಯುಕ್ತಗಳನ್ನೂ ಧರ್ಮಾಧರ್ಮಗಳನ್ನೂ ಲೋಕವ್ಯವಹಾರಗಳನ್ನೂ ತಿಳಿಯುವೆಯೂ ಮತ್ತು ಅನಾದಿಯಿಂದ ಬಂದ ಅನೇಕ ದುರಭಿಮಾನಗಳಿಂದ ಬದ್ಧರಾಗಿಯೂ ಇರತಕ್ಕ್ಕಂಥಾ, ಸಕಲ ವಿಷಯಗಳಲ್ಲಿಯೂ ಅಜ್ಞಾನದಿಂದ ಪ್ರತಿಕೂಲವಾಗಿಯೇ ಆಲೋಚನೆ ಮಾಡತಕ್ಕ್ಕಂಥಾ ಅಕ್ಕತಂಗಿಯರ ಸಂಭಾಷಣೆಯು ಎಂದಿಗೆತಾನೆ ರುಚಿಸೀತು? ವಿದ್ಯಾವಂತರಾದ ಗಂಡಸರಲ್ಲಿಯೂ ಕೂಡ ಕೆಲವರು ತಮ್ಮ ಪುನೆಯ ಹೆಂಗಸರನ್ನು ಪೊರತರಕ್ಕೆ ಯಾವರೀತಿಯಲ್ಲಿ ಆದರಣೆ ಮಾಡಿದಾಗ್ಯೂ, ವಸ್ತುತಃ ಅವರನ್ನು ಮನೆಯಲ್ಲಿ ನಿರಂತರವೂ ಇರುವ ಸೇವಕರ ಹಾಗೆಯೂ ಅನೇಕ ವೇಳೆಗಳಲ್ಲಿ ಮನೆಯಲ್ಲಿ ಕಟ್ಟಿರತಕ್ಕ ಎತ್ತು ಕುದುರೆಗಳ ಹಾಗೆಯೂ ಗಣನೆಮಾಡುವರು. ಸ್ತ್ರೀಯರು ಸಕಲವಿಷಯಗಳಲ್ಲಿಯೂ ಪುರುಷರಿಗೆ ಸಮಾನಸ್ಕಂಧರಾಗಬೇಕಾದರೆ, ಗಂಡಸರ ಹಾಗೆಯೇ ಶ್ರಮಪಟ್ಟು ಅವರು ಯಾವಯಾವ ವಿಷಯಗಳಲ್ಲಿ ಎಂಥಾ ಪಾಂಡಿತ್ಯವನ್ನು ಸಂಪಾದಿಸುತ್ತಾರೋ ಯಾವರೀತಿಯಲ್ಲಿ ಅವಿವೇಕ ಮಾರ್ಗಗಳನ್ನು ಬಿಟ್ಟು ವಿವೇಕವನ್ನೇ ಅವಲಂ

ಕತ್ತಿಗೆ ಕುದುರೆ ಸೋದರಮಾವನೆ ?

ಬಿಸುತ್ತಾರೋ ಹಾಗೆಬಿಸೀ ಇವರೂ ಮಾಡಬೇಕು. ಈಗ ನಮ್ಮ ದೇಶದ ಜನರಲ್ಲಿ ಅನೇಕರು ಗಂಡಸರು ಸಕಲ ದುರಭಿಮಾನಗಳನ್ನೂ ಹೋಗಲಾಡಿಸತಕ್ಕ ಇಂಗ್ಲಿಷ್ ಭಾಷೆಯನ್ನು ಚನ್ನಾಗಿಕಲಿತು ಇರುವದರಿಂದ, ನಮ್ಮಲ್ಲಿ ಸ್ತ್ರೀಯರು ವಿದ್ಯಾಭ್ಯಾಸವನ್ನು ಮಾಡಕೂಡದು ಎಂಬ ಆಚಾರವು ಅಕ್ರಮವಾವದ್ದೆಂದುತಿಳಿದು ಅವರನ್ನೂ ತಮಗೆ ಸಮಾನಸ್ಕಂಧರನ್ನಾಗಿ ಮಾಡಿಕೊಳ್ಳುವದರಿಂದ ಆಗುವ ಪ್ರಯೋಜನಗಳನ್ನೆಲ್ಲಾ ಚನ್ನಾಗಿ ವಿಮರ್ಶೆಮಾಡಿ, ತಮ್ಮ ಹಾಯಮಾಗಿ ಪಾಠಶಾಲೆಯೇ ಮೊದಲಾದ ಏರ್ಪಾಡುಗಳನ್ನೆಲ್ಲಾ ಮಾಡಿ ಇದ್ದಾರೆ. ಸ್ತ್ರೀಯರು ನಿಜ ಯುವಾಗಿ ವಿದ್ವಾಂಸರಾಗಬೇಕಾದರೆ ಅವರು ಅನೇಕ ವಿಷಯಗಳನ್ನು ತಿಳಿದು ಕೊಳ್ಳಬೇಕು ; ಇಂಥಾ ವಿಷಯಗಳು ನಮ್ಮ ದೇಶ ಭಾಷೆಯಲ್ಲಿ ಅಲ್ಪ ಸ್ವಲ್ಪ ಸಿಕುತ್ತವೆಯೇ ಹೊರ್ತು ಸಮಗ್ರವಾಗಿ ಸಿಕ್ಕುವದಿಲ್ಲ. ಇಂಗ್ಲಿಷ್ ಭಾಷೆಯಲ್ಲಾದರೋ ಆ ಇಂಗ್ಲಿಷ್ ಜನಗಳು ಲೋಕದಲ್ಲಿ ಇರತಕ್ಕ ಸಕಲ ಭಾಷೆಗಳನ್ನೂ ಪರಿಶೀಲನೆಮಾಡಿ ಅವುಗಳಲ್ಲಿ ಇರತಕ್ಕ ಗ್ರಂಥಗಳನ್ನೆಲ್ಲಾ ಶೋಧಿಸಿ ಮುಖ್ಯವಾದ ಸಾರಾಂಶಗಳನ್ನೆಲ್ಲಾ ಬೇರೆ ಬೇರೆ ಶಾಸ್ತ್ರಗಳನ್ನಾಗಿ ನಿರ್ಮಿಸಿ ಇರುತ್ತಾರೆ. ಈ ವಿಷಯಗಳನ್ನೆಲ್ಲಾ ನಮ್ಮ ಸ್ತ್ರೀಯರು ತಿಳಿದುಕೊಳ್ಳಬೇಕಾದರೆ ಆ ಇಂಗ್ಲಿಷ್ ಭಾಷೆಯನ್ನೇ ಓದಿಕೊಳ್ಳಬೇಕು, ಅಥವಾ ಅವುಗಳ ಭಾಷಾಂತರಗಳಿದ್ದರೆ ಅವುಗಳಿಂದ ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಳ್ಳತಕ್ಕ ಗ್ರಂಥಗಳೆಲ್ಲಾ ನಮ್ಮ ಸ್ವಭಾಷೆಗೆ ಭಾಷಾಂತರವಾಗಿ ಇಲ್ಲ. ಹಾಗೆ ಅವುಗಳನ್ನು ಭಾಷಾಂತರ ಮಾಡಿಸುವದಕ್ಕೂ ಅದ್ವಿತೀಯ ಪಾಂಡಿತ್ಯವುಳ್ಳ ವಿದ್ವಾಂಸರ ಸಹಾಯವೂ ದ್ರವ್ಯ ಸಹಾಯವೂ ಕಾಲವಿಳಂಬವೂ ಬೇಕು. ಈ ತೊಂದರೆಗಳನ್ನೆಲ್ಲಾ ನೋಡಿದರೆ ಇವರಿಗೆ ಇಂಗ್ಲಿಷ್ ವ್ಯಾಸಂಗವನ್ನು ಮಾಡಿಸುವದೇ ಸುಲಭವೆಂದು ತೋರುತ್ತದೆ. ಅಪಕಾರಣ ಈ ಸ್ತ್ರೀ ಪಾಠಶಾಲೆಗಳಲ್ಲೆಲ್ಲಾ ವಿಶೇಷ ಪಾಂಡಿತ್ಯವನ್ನು ಅಪೇಕ್ಷಿಸುವಂಥಾವರಿಗೂ, ವಿದ್ವಾಂಸರಾದ ಪತಿಗಳನ್ನು ಪಡೆದು ಇರತಕ್ಕವರಿಗೂ, ಇಂಗ್ಲಿಷ್‌ನಲ್ಲಿ ಸರಿಯಾದ ವಿದ್ಯಾಭ್ಯಾಸವನ್ನು ಮಾಡಿಸತಕ್ಕ ಏರ್ಪಾಡು ಮಾಡಬೇಕು. ವಿದ್ವಾಂಸರಾದ ಗಂಡಸರು

ಕತ್ತೆಗೆ ಯಾಕೆ ಕಾಲುಕಡಗ?

ತಮ್ಮ ಸ್ತ್ರೀಯರನ್ನು ನಿರಕ್ಷರಕುಕ್ಷಿಗಳಾಗಿ ಇಟ್ಟುಕೊಂಡಿದ್ದರೆ ಅವರಿಗೆ ಸ್ವಭಾವ ಸಿದ್ಧವಾಗಿಯೇ ಶೀಕ್ಷೆಯಾಗುವದು. ಹ್ಯಾಗಂದರೆ— ಗಂಡಸರು ಅನೇಕ ಶಾಸ್ತ್ರಗಳನ್ನೂ ಇತರ ವಿಷಯಗಳನ್ನೂ ತಿಳಿದುಕೊಂಡು ಬಂದು ಕಡೆಗೆ ಎಳೆದರೆ, ಸ್ತ್ರೀಯು ತನ್ನ ಅಜ್ಞಾನ ಜನ್ಯವಾದ ಮೌಢ್ಯದಿಂದಲೂ ದುರಭಿಮಾನದಿಂದಲೂ ಮತ್ತೊಂದುಕಡೆಗೆ ಎಳೆಯುವಳು. ಕ್ರಮೇಣ ಮನಃಕಾಷಾಯಗಳು ಹುಟ್ಟಿ ಸಂಸಾರ ಸುಖಕ್ಕೆ ಭಂಗ ವುಂಟಾಗುವದು. ಸ್ತ್ರೀಯರು ಗಂಡಸರಂತೆಯೇ ಚನ್ನಾಗಿ ವಿದ್ಯಾವಂತರಾಗುವವರಿಗೂ ನಮ್ಮ ಹಿಂದೂಜನರಿಗೆ ಸಂಸಾರ ಸುಖವು ಬರುವದಿಲ್ಲ.

ಈ ರೀತಿಯಲ್ಲಿ ಚಂಚಲರಾಯರು ತಮ್ಮ ಉಪನ್ಯಾಸವನ್ನು ಮುಗಿಸಿದ ಕೂಡಲೆ ಗ್ರಾಂಡ್ ಡಫ್ ಸಾಹೇಬರು ಸಮರ್ಥರಾದ ಬಾಲಕರಿಗೆ ಇನಾಮುಗಳನ್ನು ಕೊಟ್ಟರು. ಅನಂತರದಲ್ಲಿ ಇವರ ಹೆಂಡತಿಯು ಅಲ್ಲಿದ್ದ ದೊಡ್ಡ ಮನುಷ್ಯರನ್ನೂ ಬಾಲಕಿಯರನ್ನೂ ಕುರಿತು ಹೇಳಿದ್ದೇನಂದರೆ:—

ಚಂಚಲರಾಯರು ಹೇಳಿದ ಮಾತುಗಳನ್ನು ಕೇಳಿ ನನಗೆ ಬಹಳ ಆನಂದವಾಯಿತು. ಇಂಥಾ ದೊಡ್ಡ ಮನುಷ್ಯರೆಲ್ಲರೂ ಸ್ತ್ರೀವಿದ್ಯಾಭಿವೃದ್ಧಿಯಲ್ಲಿ ಕುತೂಹಲರಾಗಿ ಇರುವದನ್ನು ನೋಡಿದರೆ ಹಿಂದೂ ಸ್ತ್ರೀಯರ ಪುಣ್ಯವು ಪರಿಪಕ್ವವಾಗುವಂತೆ ತೋರುತ್ತದೆ. ನಾನು ಈ ದೇಶಕ್ಕೆ ಬಂದು ಮೂರುವರ್ಷವಾಯಿತು. ನಾನು ಒಂದಕಾಲದಲ್ಲಿ ಈಗ ನಾನು ನೋಡುತ್ತಾ ಇರುವದನ್ನೆಲ್ಲಾ ಎಂದಿಗಾಗಲೀ ನೋಡುತ್ತೇನೆಂದು ತಿಳಿದುಕೊಂಡೇ ಇರಲಿಲ್ಲ. ಈ ವಿಸ್ತಾರವಾದ ದೇಶದಲ್ಲಿ ಧರ್ಮದ ವಿಷಯದಲ್ಲಿಯೂ, ರಾಜತಂತ್ರದ ವಿಷಯದಲ್ಲಿಯೂ, ಲೋಕವ್ಯವಹಾರದ ವಿಷಯದಲ್ಲಿಯೂ, ಚಿತ್ರ ವಿಚಿತ್ರವಾದ ಉಪನ್ಯಾಸಗಳುನಡೆಯುವಂತೆ ಪರೋಕ್ಷವಾಗಿ ಇದ್ದುಕೊಂಡು ವರ್ತಮಾನ ಪತ್ರಿಕೆಗಳಲ್ಲಿ ಮಾತ್ರ ಓದುತ್ತಿದ್ದೆನು. ಈಗ ಪ್ರತ್ಯಕ್ಷವಾಗಿ ನಿಮ್ಮ ಸಾಹಸ ಕೃತ್ಯಗಳನ್ನೆಲ್ಲಾ ನೋಡಿ ಬಹಳ ಸಂತುಷ್ಟಳಾದೆನು. ಲೋಕದಲ್ಲಿ ಸಕಲರಿಗೂ ಪ್ರಾಣಕ್ಕೂ ಧನಕ್ಕೂ ಅಪ್ಪೋಹವಿಲ್ಲದಂತೆ ಮಾಡಿ

ಕತ್ತೆ ಬಲ್ಲದೇ ಹೊತ್ತ ಕಸ್ತೂರೀ ವಾಸನೆಯ ?

ಇರತಕ್ಕ ಧರ್ಮಶಾಸ್ತ್ರಗಳಿಗಿಂತಲೂ ಅತಿಶಯವಾದದ್ದು ಯಾವದೂ ಇಲ್ಲ. ಯಾಕಂದರೆ, ಅಂಥಾ ಧರ್ಮಶಾಸ್ತ್ರಗಳು ಇಲ್ಲದಿದ್ದರೆ ಲೋಕವೂ ಇರುವ ದಿಲ್ಲ. ಪ್ರಾಮುಖ್ಯತೆಯಲ್ಲಿ ಇವುಗಳಿಗಿಂತ ಸ್ವಲ್ಪ ಕಡಿಮೆಯಾದಾಗ್ಯೂ ಲೋಕದ ಅಭಿವೃದ್ಧಿಗೆ ಎಲ್ಲಾದಕ್ಕಿಂತ ಹೆಚ್ಚಾಗಿ ಸಹಕಾರಿಯಾಗಿರುವದು ವಿದ್ಯಾಭ್ಯಾಸ. ಅದರಲ್ಲಿ ಪುರುಷರಿಗೆ ಮಾಡಿಸುವ ವಿದ್ಯಾಭ್ಯಾಸಕ್ಕಿಂತ ಉತ್ತಮವಾಗಿರುವದು ಸ್ತ್ರೀಯರಿಗೆ ಮಾಡಿಸುವ ವಿದ್ಯಾಭ್ಯಾಸ. ಯಾಕಂದರೆ, ತಾಯಿತಂದೆಗಳಿಬ್ಬರಲ್ಲಿ ತಂದೆಯ ಕಾಲವೆಲ್ಲಾ ಲೌಕಿಕವ್ಯಾಪಾರದಲ್ಲಿಯೇ ಕಳೆದುಹೋಗುವದು. ತಾಯಿಯಾದರೋ ಗೃಹಕೃತ್ಯಗಳಲ್ಲಿಯೇ ನಿರತಳಾಗಿರುವಳು. ಯಾವಾಗಲೂ ಮಕ್ಕಳ ಯೋಗಕ್ಷೇಮಚಿಂತಕಳಾಗಿ ಇರತಕ್ಕ ತಾಯಿಯು ವಿದ್ಯಾವಂತಳಾಗಿದ್ದರೆ ಆಕೆಯ ಸಹವಾಸದಲ್ಲಿರುವ ಮಕ್ಕಳೂ ಕೂಡ ಸ್ವಭಾವ ಸಿದ್ಧವಾಗಿ ಪಂಡಿತರಾಗುವರು. ಈ ಸ್ತ್ರೀವಿದ್ಯಾಭ್ಯಾಸವಿಷಯವಲ್ಲಿ ನಮ್ಮ ದೇಶದವರಿಗೂ ಈ ದೇಶದವರಿಗೂ ಇದ್ದ ತಾತ್ಪರ್ಯಗಳು ಬಾಯಕ್ಕೊಂದು ವಿರೋಧವಾಗಿಯೇ ಇರುತ್ತಾ ಇದ್ದವು. ಈಗ ನಿಮ್ಮಲ್ಲಿ ವಿದ್ವಾಂಸರಾದವರು ಅನೇಕರು ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸುವದೇ ಉತ್ತಮವಾದದ್ದು ಎಂಬದಾಗಿ ತಿಳಿದುಕೊಂಡು ಇದಕ್ಕೆ ತಕ್ಕ ಸನ್ನಾಹಗಳನ್ನೆಲ್ಲಾ ಮಾಡುತ್ತಾ ಇದ್ದಾರೆ. ಈ ವಿಷಯವಲ್ಲಿ ನೀವು ಮಾಡಿರತಕ್ಕ ಸಾಹಸಗಳು ನನಗೆ ಬಹಳ ಸಂತೋಷವನ್ನು ಉಂಟುಮಾಡಿದವು. ನಿಮ್ಮ ಪ್ರಯತ್ನಗಳೆಲ್ಲಾ ಸಫಲವಾಗಲೆಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ.

ಎಲ್ಲಾದೇಶಗಳಲ್ಲಿಯೂ ಸ್ತ್ರೀಯರು ಬಹಳ ವಿದ್ಯಾವಂತರಾದರೆ ಗೃಹಕೃತ್ಯವನ್ನು ಸರಿಯಾಗಿ ನೋಡಿಕೊಳ್ಳುವದಿಲ್ಲವೆಂದು ತಿಳಿದುಕೊಂಡು ಇದ್ದಾರೆ. ನಮ್ಮ ದೇಶದಲ್ಲಿಯೂ ಮೊದಲು ಜನರು ಹೀಗೆಯೇ ತಿಳಿದುಕೊಂಡಿದ್ದರು. ಈ ವಿಷಯವನ್ನು ಪರೀಕ್ಷಿಸುವದಕ್ಕೋಸ್ಕರ ಇಲಾಯಿತಿಯಲ್ಲಿ ಕೆಲವು ವರ್ಷಗಳ ಕೆಳಗೆ ಕೆಲವು ಏರ್ಪಾಡುಗಳನ್ನು ಮಾಡಿದರು. ಈ ಏರ್ಪಾಡುಗಳ ಪ್ರಕಾರ ಸ್ತ್ರೀಯರು ಪ್ರಾಥವಿದ್ಯೆಯಲ್ಲಿ ಪ್ರವೀಣರಾದರು.

ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ.

ಆವರು ಗೃಹಕೃತ್ಯವಿಷಯದಲ್ಲಿ ಹ್ಯಾಗೆ ಇದ್ದಾರೋ ಅದನ್ನು ತಿಳಿದುಕೊಳ್ಳೋಣ. ಕೆಲವು ವರ್ಷಗಳಿಗೆ ಮುಂಚೆ ವಿಲಾಯತಿಯಲ್ಲಿ ಸ್ತ್ರೀಪ್ರಾಥ ವಿದ್ಯಾಭ್ಯಾಸವು ಬಹಳ ಕಡಿಮೆಯಾಗಿ ಇತ್ತು. ಆ ಕಾಲದಲ್ಲಿ ವಿದ್ಯಾವಿಹೀನರಾದ ಸ್ತ್ರೀಯರ ಅಜ್ಞಾನದ ದೆಸೆಯಿಂದ ಉಂಟಾಗುತ್ತಿದ್ದ ಪ್ರಮಾದಗಳು ಅನೇಕವಾಗಿದ್ದವು. ಅವುಗಳಲ್ಲಿ ಒಂದನ್ನು ಇಲ್ಲಿ ದೃಷ್ಟಾಂತವಾಗಿ ಹೇಳುತ್ತೇನೆ.

ಸೇರಿಗ್ಯಾಂಪ್ ಎಂಬ ಒಬ್ಬ ಸ್ತ್ರೀಯು ಒಬ್ಬ ಅಸ್ವಸ್ಥನಾದ ಮನುಷ್ಯನಿಗೆ ಉಪಚಾರಮಾಡುವದಕ್ಕೋಸ್ಕರ ನೇಮಿಸಲ್ಪಟ್ಟಳು. ಈಕೆಯು ರೋಗಿಗೋಸ್ಕರವಾಗಿ ತಂದ ಪದಾರ್ಥಗಳನ್ನೆಲ್ಲಾ ಸ್ವಲ್ಪ ಸ್ವಲ್ಪವಾಗಿ ಹಾಳು ಮಾಡುತ್ತಾ, ಪಥ್ಯಕ್ಕಾಗಿ ಮಾಡಿದ ಪದಾರ್ಥಗಳನ್ನೆಲ್ಲಾ ಕಡಿಸುತ್ತಾ, ನಸ್ಯ ಮುಂತಾದವುಗಳನ್ನೆಲ್ಲಾ ಕೈಯಲ್ಲಿಟ್ಟುಕೊಂಡು ಔಷಧಿಗಳಲ್ಲೆಲ್ಲಾ ಬೆಳಿಸುತ್ತಾ ರೋಗಿಗೋಸ್ಕರ ತಂದ ಸಕಲ ಮಧುರಪದಾರ್ಥಗಳನ್ನೂ ತಾನೇ ಭಕ್ಷಿಸುತ್ತಾ, ರಾತ್ರಿವೇಳೆಗಳಲ್ಲಿ ರೋಗಿಯ ತಲೆದಿಂಬನ್ನು ತೆಗೆದು ತಾನೇ ಹಾಕಿಕೊಳ್ಳುತ್ತಾ, ಔಷಧಿ ಕಷಾಯ ಮುಂತಾದವುಗಳನ್ನು ಮಾಡಬೇಕಾದರೆ ಯಾವಯಾವ ಪದಾರ್ಥಗಳನ್ನು ಎಷ್ಟೆಷ್ಟು ಸೇರಿಸಬೇಕೆಂದು ವೈದ್ಯನು ಹೇಳಿ ಇರುತ್ತಾನೊ, ಅವನ್ನು ಉಲ್ಲಂಘಿಸಿ ತನ್ನ ಮನಸ್ಸು ಬಂದಷ್ಟು ಸೇರಿಸುತ್ತಾ, ಹೀಗೆ ಪ್ರಮಾಣಮೀರಿ ಸೇರಿಸುವವರಿಂದ ರೋಗಿಯ ರೋಗ ವೃದ್ಧಿಗೂ ವೈದ್ಯನ ಅಪಯಶಸ್ಸಿಗೂ ಕಾರಣಭೂತಳಾಗಿ ಇದ್ದುಕೊಂಡಿದ್ದಳು. ಇವಳಿಗೆ ಬಾಲ್ಯದಾರಭ್ಯ ಪ್ರಾಥವಿದ್ಯಾಭ್ಯಾಸಮಾಡಿಸಿ ಪರೋಪಕಾರನಿರತರೂ ಪ್ರಾಮಾಣಿಕರೂ ಆದ ಸ್ತ್ರೀಯರ ಸಹವಾಸದಲ್ಲಿ ಇಟ್ಟಿದ್ದರೆ ಇವಳು ಭೂತದಯ ಪಶ್ಚಾತ್ತಾಪಗಳುಳ್ಳವಳಾಗಿಯೂ, ಅತ್ಯನುಭವಿಗೆ ಉಪಕಾರಿಯಾಗಿಯೂ, ಔಷಧ ಪ್ರಮಾಣಗಳು ಹೆಚ್ಚು ಕಡಿಮೆಯಾದರೆ ಪ್ರಾಣಗಳು ಹೋಗುವದು ಎಂದು ತಿಳಿದುಕೊಂಡಿರುವಳಾದ್ದರಿಂದ ತನ್ನ ಮನಸ್ಸುಬಂದಂತೆ ಮಾಡದೆಯೂ ಇರುತ್ತಿದ್ದಳು. ಅಜ್ಞಾನದಿಂದ ಉಂಟಾಗುವ ಕೇಡುಗಳು ಇಷ್ಟಮಾತ್ರವೇ ಅಲ್ಲದೆ ಅಪರಿಮಿತವಾಗಿರುವವು.

ಕಥೆಗೊಂದು ಕಾಲುಂಟೆ ?

ವಿದ್ಯಾವಂತರಾದ ಸ್ತ್ರೀಯರು ಉಪಕಾರಿಗಳಾಗಿರುವರೆಂಬುವದಕ್ಕೆ ಅನೇಕ ದೃಷ್ಟಾಂತಗಳುಂಟು:— ೧೮೫೪ ನೇ ಇಸವಿಯಲ್ಲಿ ಯೂರೋಪ್ ಖಂಡದಲ್ಲಿ ರಷ್ಯಾ, ತುರ್ಕಿ, ಫ್ರಾನ್ಸ್ ಮತ್ತು ಇಂಗ್ಲಂಡ್ ದೇಶಗಳಿಗೆ ಯುದ್ಧವಾಯಿತು. ಅದರಲ್ಲಿ ಅನೇಕರು ಸತ್ತರು ಮತ್ತು ಲಕ್ಷಾಂತರ ಜನಗಳು ಗಾಯಗೊಂಡು ಬಿದ್ದರು. ಆ ಕಾಲದಲ್ಲಿ ಬಹಳ ವಿದ್ಯಾವತಿಯಾದ ಫ್ಲಾರೆನ್ಸ್ ನೈಟಿಂಗೇಲ್ ಎಂಬುವಳು ಸಕಲ ಶಾಸ್ತ್ರಗಳಲ್ಲಿಯೂ ನಿಪುಣೆಯಾಗಿದ್ದದ್ದು ಮಾತ್ರವಲ್ಲದೆ ವೈದ್ಯಶಾಸ್ತ್ರದಲ್ಲಿ ಅಖಂಡಪಾಂಡಿತ್ಯವನ್ನು ಸಂಪಾದಿಸಿ ಇದ್ದಳು. ಈಕೆಯು ಲಕ್ಷಾಂತರ ಜನಗಳು ಗಾಯದಿಂದ ಪೀಡಿತರಾಗಿ ಬಹಳ ಸಂಕಟಪಡುತ್ತಿದ್ದಾರೆಂಬ ವರ್ತಮಾನ ಕೇಳಿ, ತನ್ನ ಆಸ್ತಿಯನ್ನೆಲ್ಲಾ ಮಾರಿ, ಆ ದ್ರವ್ಯದಿಂದ ಔಷಧ ಸಾಮಗ್ರಿಗಳನ್ನು ಮಾಡಿಕೊಂಡು, ಯುದ್ಧವಾಗುತ್ತಿದ್ದ ದೇಶವನ್ನು ಪ್ರವೇಶಿಸಿ, ನಿದ್ರಾಹಾರಗಳನ್ನು ಬಿಟ್ಟು, ಗಾಯದಿಂದ ತಪಿಸುತ್ತಿದ್ದ ಸ್ವಪಕ್ಷದವರಿಗೂ ಶತ್ರುಪಕ್ಷದವರಿಗೂ ಕೂಡ ಗಾಯಗಳಿಗೆ ತಕ್ಕ ಔಷಧಿಗಳನ್ನು ಹಾಕಿ ಗುಣಮಾಡಿದಳು. ಎಲ್ಲರೂ ಈಕೆಯನ್ನು ಈಕೆ ಮಾಡಿದ ಧರ್ಮಕಾರ್ಯಕ್ಕೋಸ್ಕರ ಸ್ತೋತ್ರ ಮಾಡಿದರು. ಆದರೆ ಈಕೆಯ ಶತ್ರುಗಳೆಲ್ಲಾ ಇವಳು ಗಂಡುಬೀರಿ ಎಂದು ಮನಸ್ಸುಬಂದಂತೆ ದೂಷಿಸಿದರು. ಆದರೂ ಅವರಲ್ಲಿ ಅನೇಕರು ಇಷ್ಟು ವಿದ್ಯೆಗೆ ಲೋಕಹಿತ ಚಿಂತನೆಯು ಇರುವದು ಅಪೂರ್ವವೆಂಬದಾಗಿ ಒಪ್ಪಿಕೊಂಡರು. ವಿದ್ಯಾವಂತರು ಬಡವರಾಗಿದ್ದರೆ ಪ್ರತ್ಯುಪಕಾರದೃಷ್ಟಿಯಿಂದ ಹೀಗೆಮಾಡುವರೆಂತಲೂ ಐಶ್ವರ್ಯವಂತರು ಹೀಗೆಮಾಡುವದಿಲ್ಲವೆಂತಲೂ ಕೆಲವರು ಹೇಳುತ್ತಾರೆ. ಸದ್ಗುಣವುಳ್ಳವರು ಬಡವರಾದರೂ ಭಾಗ್ಯವಂತರಾದರೂ ಬಂದೇವಿಧವಾಗಿರುವರು. ೧೮೭೦ನೇ ಇಸವಿಯಲ್ಲಿ ಫ್ರಾನ್ಸ್ ನವರಿಗೂ ಇಂಗ್ಲಿಷ್ ನವರಿಗೂ ಯುದ್ಧವಾಯಿತು. ಆಗ ಯುದ್ಧದಲ್ಲಿ ೫೦ನೇ ಇಸವಿಗಿಂತಲೂ ಹೆಚ್ಚಾಗಿ ಅನೇಕರು ಗಾಯಗೊಂಡು ಬಿದ್ದರು. ಆಗ ವಿದ್ಯಾವಂತರಾದ ಸ್ತ್ರೀಯರು ಈ ಜನಗಳ ಪೋಷಣೆಗಾಗಿ ಯುದ್ಧರಂಗವನ್ನು ಪ್ರವೇಶಿಸಿದರು. ಈ ಜನಗಳ ಜೊತೆಯಲ್ಲಿ ಪರಹಿತವೇ ಮುಖ್ಯವಾಗಿ

ಕದ ತಿಂಬುವನಿಗೆ ಹಪ್ಪಳ ಈಡೆ ?

ಯುಳ್ಳ ನಮ್ಮ ಇಂಡಿಯಾ ಚಕ್ರವರ್ತಿನಿಯವರ ಮಹಿಳಾವತಿ ಬ್ರಿಟಿಸೆನ್ ಅಲಿಸ್ ಎಂಬಾಕೆಯು ತಾನುಮಾಡಿದ ಚಿಕಿತ್ಸೆಗಳಿಂದ ಮೇಲೆ ಹೇಳಿದ ನೈಟಿಂಗೇಲ್ ಎಂಬಾಕೆಗಿಂತಲೂ ಬೆಚ್ಚಿದ ಕೀರ್ತಿಯನ್ನು ಸಂಪಾದಿಸಿದಳು. ಲೋಕದಲ್ಲಿ ಸಕಲಧರ್ಮಗಳಿಗೂ ಕಾರಣಭೂತವಾದದ್ದು ಜ್ಞಾನ. ಅದಕ್ಕೆ ಕಾರಣಭೂತವಾದದ್ದು ವಿದ್ಯೆ. ಆ ವಿದ್ಯೆಯನ್ನು ಉಪೇಕ್ಷಮಾಡತಕ್ಕವರು ಪಶುಗಳಿಗಿಂತಲೂ ಕಡೆ. ಯಾಕಂದರೆ, ಪಶುಗಳು ಅನೇಕ ವಿಧಗಳಲ್ಲಿ ಲೋಕಕ್ಕೆ ಹಿತವನ್ನು ಮಾಡುತ್ತವೆ. ಸದ್ವಿದ್ಯಾಭ್ಯಾಸವನ್ನು ಮಾಡಿ ಒಳ್ಳೇ ಜ್ಞಾನವನ್ನು ಪಡೆದು ಲೋಕಕ್ಕೆ ಹಿತವನ್ನು ಮಾಡದೆ ಇರತಕ್ಕವರು ಈ ಪಶುಗಳಷ್ಟು ಉಪಕಾರವನ್ನು ಕೂಡ ಮಾಡಲಾರರು. ಇವರು ಒಂದು ವೇಳೆ ದುರ್ವ್ಯಾಪಾರದಲ್ಲಿ ಪ್ರವರ್ತಕರಾದರೆ ಲೋಕಕಂಟಕರಾಗುವರು. ಆದದರಿಂದ ಸ್ತ್ರೀಯರಿಗೆ ಶಾಸ್ತ್ರವಿದ್ಯಾಭ್ಯಾಸ ಮಾಡಿಸುವದರಿಂದ ಒಹಳ ಪ್ರಯೋಜನವುಂಟು.

ಸ್ತ್ರೀಯರು ತಿಳಿಯಬೇಕಾದ ಶಾಸ್ತ್ರಗಳು ಯಾವವೆಂದರೆ :—ಮೊದಲನೇದು ಆರೋಗ್ಯ ಶಾಸ್ತ್ರ.—ಮನೆಯವರೆಲ್ಲಾ ಆರೋಗ್ಯವಾಗಿ ಇರಬೇಕಾದರೆ ಅದರ ಮಾರ್ಗಗಳನ್ನೆಲ್ಲಾ ಸ್ತ್ರೀಯರು ತಿಳಿದು ಇರಬೇಕಾದದ್ದು ಅವಶ್ಯಕವಾದದರಿಂದ ಈ ಶಾಸ್ತ್ರವು ಒಹಳ ಮುಖ್ಯವಾದದ್ದು. ಎರಡನೇದು ವೈದ್ಯ ಶಾಸ್ತ್ರ.—ಆರೋಗ್ಯ ಶಾಸ್ತ್ರವನ್ನು ಚನ್ನಾಗಿ ತಿಳಿದು ಆದನ್ನು ಆಚರಣೆಗೆ ತರುವದರಿಂದ ಪ್ರಾಯಶಃ ರೋಗಬರದಹಾಗೆ ಮಾಡಿಕೊಳ್ಳಬಹುದು; ಆದಾಗ್ಯೂ ಕಾರಣಾಂತರಗಳಿಂದ ರೋಗವು ಪ್ರಾಪ್ತವಾಗುವವಾದ್ದರಿಂದ ಇದಕ್ಕೆ ತಕ್ಕ ಚಿಕಿತ್ಸೆಗಳನ್ನು ಮಾಡಿಕೊಳ್ಳುವದಕ್ಕೆ ವೈದ್ಯಶಾಸ್ತ್ರ ಓದಬೇಕು. ಮೂನೇದು ಮಕ್ಕಳ ಪೋಷಣೆ.—ಲೋಕದಲ್ಲಿ ಜನರು ಪಶುಪಕ್ಷಿವೃಗಾದಿಗಳನ್ನು ಸಾಕುವದರಲ್ಲಿ ಒಹಳ ಜಾಗರೂಕರಾಗಿರುವರು; ಗಿಣಿ ಮುಂತಾದವುಗಳಿಗೆ ಮಾತು ಕಲಿಸಬೇಕೆಂಬ ಉದ್ದೇಶದಿಂದ ಅತ್ಯಂತ ಆದರವನ್ನು ತೋರಿಸುವರು. ಆದರೆ ಇವರು ಮಕ್ಕಳನ್ನು ಪೋಷಿಸಿ ಅವರಿಗೆ ಸರಿಯಾದ ವಿದ್ಯಾಭ್ಯಾಸ ಮಾಡಿಸತಕ್ಕ ವಿಷಯದಲ್ಲಿ ಅಜಾಗರೂಕರಾಗಿರುವರು. ಈ

ಕದ್ದು ಮದುವೇ ಮಾಡುತ್ತೇನೆ, ಮತ್ತೆ ಶೇಕಾದರೆ ಕೊಲ್ಲು.

ವಿಷಯವನ್ನು ಚೆನ್ನಾಗಿ ಆಲೋಚಿಸಿ ಇವರಲ್ಲಿರತಕ್ಕ ಜ್ಞಾನವನ್ನು ಪಡೆಯುವದು ಬಹಳ ಮುಖ್ಯವಾದದ್ದು.

ವಿದ್ಯಾವ್ಯಾಸಂಗ ಮಾಡುವದರಿಂದ ಸ್ತ್ರೀಯರಿಗೆ ಆರೋಗ್ಯ ತಪ್ಪುವದೆಂದು ಕೆಲವರು ಹೇಳುವರು. ಸೋಮಾರಿತನಕ್ಕಿಂತಲೂ ಹಬ್ಬಾಗಯಾವದೂ ಅರೋಗ್ಯವನ್ನು ಕೆಡಿಸಲಾರದು. ಬೀಗದ ಕೈಗಳನ್ನು ಉಪಯೋಗಿಸುತ್ತಲೇ ಇದ್ದರೆ ಅವು ಪ್ರಕಾಶವಾಗಿ ಇರುವವು; ಸುಮ್ಮನೆ ಬಂದುಕೆಡೆಹಾಕಿ ಇದ್ದರೆ ತುಕ್ಕು ಹಿಡಿಯುವವು. ಹಾಗೆಯೇ ಶರೀರಕ್ಕೆ ಕೆಲಸಮಾಡುವದರಿಂದಲೂ ಬುದ್ಧಿಗೆ ವ್ಯಾಸಂಗದಿಂದಲೂ ಶಕ್ತಿಯುಂಟಾಗುವದು. ಕೆಲಸವೂ ವ್ಯಾಸಂಗವೂ ಎರಡೂ ಇಲ್ಲದೆ ಇರತಕ್ಕವರು ಶಕ್ತಿಹೀನರೂ ಬುದ್ಧಿಹೀನರೂ ಆಗುವರು. ಅವದರಿಂದ ಶರೀರಕ್ಕೆ ಬಲ ಬರುವದಕ್ಕೋಸ್ಕರ ಆಹಾರವೂ ಕೆಲಸವೂ ಹ್ಯಾಗೆ ಅವಶ್ಯಕವಾದವುಗಳೋ, ಬುದ್ಧಿಗೆ ಶಕ್ತಿ ಬರುವದಕ್ಕೋಸ್ಕರ ವ್ಯಾಸಂಗವು ಅಷ್ಟು ಮುಖ್ಯವಾದದ್ದು. ಬಹುಕಾಲಕ್ಕೆ ಮುಂಚೆ ನಿಮ್ಮ ಸ್ತ್ರೀಯರೆಲ್ಲರೂ ಬಹಳ ವಿದ್ಯಾವಂತರಾಗಿ ಇದ್ದರು. ಈಚೆಗೆ ಅನೇಕ ಕಾರಣಗಳಿಂದ ಆ ವಿದ್ಯಾಪ್ರಾಚುರ್ಯವು ಕಡಿಮೆಯಾಯಿತು. ಈಗ ನಿಮ್ಮಲ್ಲಿ ಪುರುಷರೆಲ್ಲರೂ ವಿದ್ಯಾವಂತರೂ ಬುದ್ಧಿಶಾಲಿಗಳೂ ಆಗುತ್ತಾ ಬಂದಿರಿ, ಸ್ತ್ರೀಯರನ್ನೂ ವಿದ್ಯಾವಂತರನ್ನಾಗಿ ಮಾಡಬೇಕೆಂದು ಪ್ರಯತ್ನಪಡುತ್ತಲಿದ್ದೀರಿ. ಈ ನಿಮ್ಮ ಪ್ರಯತ್ನಗಳಿಂದ ನಾನು ಸಂತುಷ್ಟಳಾವೆನು. ನಿಮ್ಮ ಆಚಾರ ವ್ಯವಹಾರ ನಾಗರೀಕತೆಗಳಿಗೂ ನಿಮ್ಮ ಆಚಾರವಿಚಾರಗಳಿಗೂ ಬಹಳ ತಾರತಮ್ಯವುಂಟು. ನಾವು ಬಬ್ಬರ ಸಂಪ್ರದಾಯಗಳನ್ನು ಬಬ್ಬರು ಅನುಸರಿಸುವದರಿಂದ ಅಣಕಿಸಿದಹಾಗೆ ಆಗುವದೇ ಹೊರತು ಮತ್ತೆ ಬೇರೆ ಇಲ್ಲ. ಲೋಕದಲ್ಲಿ ಸಕಲರೂ ವೃದ್ಧಿಯಾಗಬೇಕಾದರೆ ಜೇನು ನೊಣಗಳು ಸಕಲ ಪುಷ್ಪಗಳಿಂದಲೂ ಮಕರಂದವನ್ನು ಮಾತ್ರವೇ ತೆಗೆದು ಕೊಂಡು ಹೋಗುವ ಹಾಗೆ ಸಕಲಜನಾಂಗಗಳೂ ಇತರ ಜನಾಂಗಗಳಲ್ಲಿರುವ ವಿವೇಕವನ್ನು ಅನುಸರಿಸುತ್ತಾ ಅವಿವೇಕಗಳನ್ನು ಬಿಟ್ಟುಬಿಡುತ್ತಾ ಇರಬೇಕು. ಲೋಕದಲ್ಲಿ ಅನೇಕ ಜನಾಂಗಗಳು ಬಂದೇ ವಿಧವಾಗಿಇದ್ದು

ಕಪ್ಪೆ ಕೂಗಿ ಮಳೆ ಬರಿಸಿದ ಹಾಗೆ.

ಕೊಂಡು ಪಾಂಡಿತ್ಯದಲ್ಲಿಯೂ ನಾಗರಿಕತೆಯಲ್ಲಿಯೂ ಸ್ವಲ್ಪ ಸ್ವಲ್ಪವಾಗಿ ವೃದ್ಧಿಯಾಗುತ್ತಾರೆ. ಇನ್ನು ಕೆಲವು ಜನಾಂಗಗಳು ಅತ್ಯಂತ ವೇಗದಿಂದ ವೃದ್ಧಿಯಾಗುತ್ತಾರೆ. ಹಿಂದೂ ಸ್ತ್ರೀ ಪುರುಷರ ವಿದ್ಯಾ ಭಿವೃದ್ಧಿಯ ವೇಗವನ್ನು ನೋಡಿದರೆ ಇವರು ಸ್ವಲ್ಪದಲ್ಲಿಯೇ ಲೋಕವನ್ನೆಲ್ಲಾ ಆಶ್ಚರ್ಯಪಡಿಸುವಂತೆ ತೋರುತ್ತದೆ. ಈಗಿನ ಹಿಂದೂ ಸ್ತ್ರೀಯರು ವಿಶೇಷ ವಿದ್ಯಾವಂತರಾಗಿ ಇಲ್ಲದಿದ್ದಾಗ್ಯೂ ಪ್ರಾಯಶಃ ಬಹಳ ಗುಣಶಾಲಿಗಳಾಗಿ ಇದ್ದಾರೆ. ಇವರು ಸಕಲಶಾಸ್ತ್ರಜ್ಞರಾಗಿ ಅದರಿಂದ ಹುಟ್ಟುವ ಸಕಲ ಸದ್ಗುಣಗಳನ್ನೂ ಪಡೆದರೆ ಇವರಿಗೆ ಸಮಾನರಾದ ಸ್ತ್ರೀಯರು ಯಾವ ದೇಶದಲ್ಲಿ ತಾನೇ ಸಿಕ್ಕಾರು! ಲೋಕದಲ್ಲಿ ಎಲ್ಲರೂ ಅಚಕಂದಾರ್ಕವಾಗಿ ಯಶಸ್ಸು ಇರಬೇಕೆಂದು ಕೆಲಸಗಳನ್ನು ಮಾಡುವರು. ಸ್ತ್ರೀಯರಿಗೆ ವಿದ್ಯಾಭ್ಯಾಸ ಮಾಡಿಸಿ ಲೋಕೋಪಕಾರ ಮಾಡುವದಕ್ಕಿಂತ ಹೆಚ್ಚಾದದ್ದು ಯಾವದೂ ಅಲ್ಲ. ಈ ವಿಷಯದಲ್ಲಿ ಇಷ್ಟು ಜಾಗ್ರತೆಯಾಗಿ ಪಲೋನ್ಮುಖವಾಗುವಹಾಗೆ ನೀವು ಮಾಡಿರತಕ್ಕ ಪ್ರಯತ್ನಗಳಿಂದ ನಾನು ಅತ್ಯಂತ ಸಂತುಷ್ಟನಾದೆನು.

ಹೀಗೆ ಮಿಸೆಸ್ ಗ್ರ್ಯಾಂಡಫ್ ಎಂಬಾಕೆಯು ಹೇಳಿದ ಮೇಲೆ ವಿಜಯನಗರದ ಮಹಾರಾಜರವರು ಇನ್ನು ಮೇಲೆ ಮಿಡಲ್‌ಸ್ಕೂಲ್ ಪರೀಕ್ಷೆಯನ್ನು ಕೊಡುವದಕ್ಕೂ ಮೆಟ್ರಿಕ್ಯುಲೇಷನ್ ಪರೀಕ್ಷೆಯನ್ನು ಕೊಡುವದಕ್ಕೂ ಪ್ರೋತ್ಸಾಹಪಡಿಸಬೇಕೆಂಬದಾಗಿಯೂ, ಅಂಥಾ ಪರೀಕ್ಷೆಯನ್ನು ಕೊಡುವದಕ್ಕೆ ಒಪ್ಪಿಕೊಂಡ ಬಾಲಕಿಗೆ ಮೂರುವರ್ಷಗಳವರಿಗೂ ಅರಿಂದ ೬೦ ರೂಪಾಯಿವರಿಗೆ ಸ್ಕಾಲರ್‌ಷಿಪ್ ಕೊಡುತ್ತೇವೆಂಬದಾಗಿಯೂ, ಪರೀಕ್ಷೆ ಕೊಟ್ಟು ಕೂಡಲೆ ಹಾಗೆ ಪರೀಕ್ಷೆ ಕೊಟ್ಟ ಬಾಲಕಿಗೆ ಒಂದು ಚಿನ್ನದ ಮೆಡಲನ್ನೂ ೫೦ ರೂಪಾಯಿಯನ್ನೂ ಕೊಡುತ್ತೇವೆಂಬದಾಗಿಯೂ ಹೇಳಿದರು.

ಮೂ. ವಿ.—ನಮ್ಮ ಮೈಸೂರು ನಿವಾಸಿಗಳಾದ ಒಬ್ಬ ವಿದ್ವಾಂಸರು ಮೇಲೆ ಹೇಳಿದ ಮಾ॥ ರಾ॥ ಜೆಂಜಲರಾಯರ ಉಪನ್ಯಾಸದ ಮೇಲೆ ಕೆಲವು ಆಕ್ಷೇಪಣೆಗಳನ್ನು ಬರೆದು ಇರುತ್ತಾರೆ. ಸ್ಥಳ ಸಂಕೋಚವಾದ್ದರಿಂದ ಅದನ್ನು ಮುಂದಲ ಸಂಚಿಕೆಯಲ್ಲಿ ತಿಳಿಸುವೆವು.

೨. ವೈದ್ಯಶಾಸ್ತ್ರ

ವಿಷಮಜ್ವರ ಅಥವಾ ಸನ್ನಿಪಾತಜ್ವರವು ಬಂದಾಗ ಸಾಧಾರಣವಾಗಿ ಶರೀರವು ಯಾವಾಗಲೂ ಬಿಸಿಯಾಗಿಯೇ ಇರುವದು. ಸಾಯಂಕಾಲದಲ್ಲಿ ಈ ತಾಪವು ಹೆಚ್ಚುವದು. ಈ ಜ್ವರವು ಬಂದ ೫ ದಿನಗಳ ಮೇಲೆ ೮ ದಿನಗಳೊಳಗಾಗಿ ಮೈಮೇಲೆಲ್ಲಾ ಸೊಳ್ಳೆ ಕಡಿದಹಾಗೆ ದದ್ದುಗಳು ಕಾಣಿ ಬರುವವು; ಶರೀರವು ಕೃಶವಾಗಿ ವಿಕಾರವಾಗಿ ಕಾಣುವದು. ಈ ಜ್ವರ ಬಂದವರಿಗೆ ತಲೆ ತಿರುಗುವದು ತೂಗಡಿಸುವದು ಮೊದಲಾದ ಅವಗುಣಗಳು ಪ್ರಾಪ್ತವಾದರೆ ಬದುಕುವದು ಕಷ್ಟ. ಈ ಜ್ವರವು ೧೪—೨೧ ದಿನಗಳ ತನಕ ಇರುವದು; ಆದರೆ ನಿಂತಮೇಲೆ ಪುನಃ ಬರುವದಿಲ್ಲ.

ಅತಿಸಾರ ವಿಷಮಜ್ವರವು ಇವಕ್ಕಿಂತಲೂ ಕೆಟ್ಟದ್ದು. ಇದು ಬಂದಾಗ ಮೇಲಿಹೇಳಿದ ದದ್ದುಗಳು ಕಾಣುವದಕ್ಕೆ ೮—೧೦ ದಿನಗಳಾಗುವವು. ಈ ಜ್ವರಬಂದ ೧೫ ದಿನಗಳಮೇಲೆ ರೋಗಿಯ ಕತ್ತು, ಎದೆ, ಹೊಟ್ಟೆ, ಈ ಸ್ಥಳಗಳಲ್ಲಿ ಎಲ್ಲಾವರೂ ಬಂದು ಕಡೆ ಗುಳ್ಳೆಗಳು ಏಳುವವು. ಈ ಜ್ವರಬಂದವರಿಗೆ ರೋಗಿಯ ಸ್ನೇಹಿತರುಳು ಹುಷಾರಾಗಿ, ಭೇದಿಕಂತು, ಮಲ ದೊಂದಿಗೆ ರಕ್ತ ಬೀಳುವದು. ಇದು ೩೦ ದಿನಗಳವರಿಗೂ ಇರುವದು.

ಜ್ವರಗಳಿಗೆ ಮಾಡುವ ಸಾಧಾರಣ ಚಿಕಿತ್ಸೆಯು ವಿಷಮಜ್ವರಕ್ಕೆ ಉಪಯೋಗಿಸಲಾರದು. ಓಟ್ಟೆಗಾಳಿ ಬೀಸುವ ಸ್ಥಳದಲ್ಲಿ ಸುಣ್ಣದ ನೀರನ್ನು ಚಿಮುಕಿಸಿ ರೋಗಿಯನ್ನು ಅಲ್ಲಿ ಇಡಬೇಕು; ಜನರ ಸಂದಣಿ ಇರಬಾರದು; ಹೆಚ್ಚಾಗಿ ಔಷಧ ಕೊಡಬಾರದು. ೩ ದಿವಸ ಅಥವಾ ಜ್ವರವು ಶಮನವಾಗುವವರಿಗೂ ೬ ಗಂಟೆಗೆ ೧ ಸಾರಿ ಕ್ವೈನಾವಲ್ಲಿ ೧೦ ಗ್ರೊಧಿಯಂತೂಕ ಕೊಡಬಹುದು. ಭೇದಿ, ರಕ್ತಭೇದಿಗಳು ಆಗುತ್ತಾ ಇದ್ದರೂ ಕ್ವೈನಾ ಕೊಡಬಹುದು. ಕ್ವೈನಾಕ್ಕೆ ಬದಲಾಗಿ ಬೇವಿನ ಚಕ್ಕೆಯ ಚೂರ್ಣವನ್ನು ಕೊಡಬಹುದು. ಪೂರ್ವದಲ್ಲಿ ಹೇಳಿದಂತೆ ಸ್ವಲ್ಪವನ್ನು ಬಿಸಿನೀರಿನಲ್ಲಿ ಅದ್ದಿ ಮೈಮೇಲೆ ಸವರುತ್ತಾ ಇರಬೇಕು; ಸುಲಭವಾಗಿ ಜೀರ್ಣವಾಗತಕ್ಕ ಆಹಾರ

ಕಬ್ಬು ಸೀ ಎಂತ ಬುಜಸಹಿತ ಆಗಿಯ ಬಾರದು.

ವನ್ನೂ ದಾಹಕ್ಕೆ ಗಂಜೀನೀರನ್ನೂ ಕೊಡುವದು. ನಿದ್ರೆಬಾರದೆ ಇದ್ದರೆ ಅಫೀಂಕೊಡುವದು. ಕೆವ್ಮಿಗೆ ಸೀಸಿವೆಯನ್ನು ಅರೆದು ಎದೆಗೆ ಹಾಕಬಹುದು. ರಸಗಂಧಕಪಾಷಾಣಗಳನ್ನು ಪ್ರಯೋಗಿಸಬಾರದು.

ಅತಿಸಾರ ವಿಷಮಜ್ವರಕ್ಕೂ ಮೇಲೆ ಹೇಳಿದ ಚಿಕಿತ್ಸೆಯನ್ನೇಮಾಡಿ ಭೇದಿಹ ಟ್ಟುವದಕ್ಕೆ ಕಾಚಕು, ವಾಯಿಪಾಳ ಇವುಗಳಲ್ಲಿ ಬಂದಕ್ಕ ಅಫೀಂ ಸೇರಿಸಿ ಕೊಡಬಹುದು. ಜ್ವರಬಿಟ್ಟು ದುರ್ಬಲವಾಗಿರುವಾಗ ನೆಲಬೇವಿನ ಕಷಾ ಯವನ್ನು ಕೊಟ್ಟರೆ ದೇಹಕ್ಕೆ ದಾರ್ಢ್ಯಬರುವದು.

ಜ್ವರಬರುವದಕ್ಕೆ ಕಾರಣಗಳು.—ಚಿಕ್ಕವಯಸ್ಸಿನಲ್ಲಿ ಬೊಡ್ಡಸಿಡುಬು ಸೀತಾಳಸಿಡುಬು ಮುಂತಾದವುಗಳು ಒರುವಕಾಲದಲ್ಲಿ ಜ್ವರಬರುವದುಂಟು. ಕೃಷ್ಣದೋಷ ಜ್ವರಗಳು ೫ ವರ್ಷದಮೇಲೆ ವಯಸ್ಸುಳ್ಳವರಿಗೇ ಹೊರ್ತು ಅದಕ್ಕ ಚಿಕ್ಕವರಿಗೆ ಒರುವದು ಅಪೂರ್ವ. ಜ್ವರಬಂದು ಸ್ವಲ್ಪ ವಾಸಿಯಾಗಿ ಪುನಃ ಮುರ್ಕಳಿಸುವದುಂಟು. ಆಹಾರ ವ್ಯವಹಾರಗಳಲ್ಲಿ ಕಟ್ಟು ನಿಟ್ಟಾಗಿ ಇದ್ದರೆ ಇದರಿಂದ ಏನೂ ಬಾಧಕವಿರುವದಿಲ್ಲ. ಸಿಡುಬು ಹಾಕಿಸದೆ ಇದ್ದವರಿಗೆ ಪೂರ್ವವಯಸ್ಸಿನಲ್ಲಿಯಾಗಲೀ ಅಪರೆ ವಯಸ್ಸಿನಲ್ಲಾಗಲೀ ಸಿಡುಬು ಏಳುವದುಂಟು. ಹಾಗೆ ಸಿಡುಬು ಎದ್ದವರಿಗೂ ಕೂಡ ಜ್ವರಬರುವದು. ಅನೇಕರು ತಮ್ಮತಮ್ಮ ಉದ್ಯೋಗಗಳನ್ನು ಮಾಡುವದರಿಂದ ಜ್ವರಪೀಡಿತ ರಾಗುವರು. ಹ್ಯಾಗಂದರೆ,—ಮಗ್ಗನೇಯುವವರೂ ಚಿತ್ರಗಾರರೂ ಒಟ್ಟೆ ಗಳಿಗೆ ಬಣ್ಣ ಹಾಕುವವರೂ ನಾನಾವಿಧವಾದ ಬಣ್ಣಗಳನ್ನು ಮುಟ್ಟಿ ಕಲ ಸವಮಾಡುವದರಿಂದ ಆ ಬಣ್ಣದಲ್ಲಿ ಸೇರಿದ ಕೆಲವು ವಿಷಪರಮಾಣುಗಳು ಅವರ ಉಚ್ಛ್ವಾಸವಾಯುವಿನೊಡನೆ ಅವರ ಶರೀರಗಳನ್ನು ಸೇರಿ ಅರೋ ಗ್ಯವನ್ನು ಕೆಡಿಸಿ ಜ್ವರಬರುವಹಾಗೆ ಮಾಡುವವು. ಗಿಡಗಳಿಂದ ತುಂಬಿದ ಪ್ರದೇಶಗಳಲ್ಲಿ ವಾಸ ಮಾಡುವವರಿಗೆ ಅಲ್ಲಿನ ಸೊಪ್ಪುಸೆದೆಗಳೆಲ್ಲಾ ಕೊಳೆತು ವಿಷಗಾಳಿಯಾಗಿ ಜಂಗಲ್ ಫೀವರ್ ಎಂಬ ಬಂದು ವಿಷಮವಾದ ಜ್ವರವನ್ನುಂಟು ಮಾಡುವವು. ಇದಲ್ಲದೆ ಮನೇಹತ್ತರಲೇ ತಿಪ್ಪೆ, ಒಚ್ಚಲು, ಹಾಯಿಹೊ ನಿಗುಂಡಿ ಮುಂತಾದವುಗಳಿದ್ದು ಅವು ಶುದ್ಧವಾಗಿಲ್ಲದಿರುವದರಿಂದ ಅವುಗಳಲ್ಲಿ

ಕಮ್ಮಾರಸಾಲೆಗೆ ಸೂಜಿ ಕೊಂಡು ಹೋದ ಹಾಗೆ.

ಹೆಚ್ಚಾಗಿ ಜನಭರಿತವಾದ ಊರುಗಳಲ್ಲಿ ಹುಟ್ಟುವ ವಿಷಪರಮಾಣುಗಳು ಗಾಳಿಯಲ್ಲಿ ಸೇರುವದರಿಂದಲೂ, ಮನೆಗಳಲ್ಲಿ ಸಾಕಷ್ಟು ವಾಯುಸಂಚಾರವಿರುವಹಾಗೆ ಕಿಟಕಿಗಳು ಇಲ್ಲದೆ ಇರುವದರಿಂದಲೂ ಜನರು ಜ್ವರಪೀಡಿತರಾಗುವರು. ಹೀಗೆ ನಾನಾಕಾರಣಗಳಿಂದ ಜ್ವರಪೀಡಿತರಾದವರಿಗೆ ನಿರ್ಮಲವಾದ ಗಾಳಿಯೂ ನೀರೂ ಬಳ್ಳೀ ಆಹಾರವೂ ಲಭಿಸುವಹಾಗೆ ತಕ್ಕ ಏರ್ಪಾಡುಗಳನ್ನು ಮಾಡಿ ಚಿಕಿತ್ಸೆಯನ್ನು ಮಾಡಿದರೆ ರೋಗವು ಸುಲಭವಾಗಿ ನಿವರ್ತಿಯಾಗುವದು. ದಾರಿದ್ರ್ಯದಿಂದಲೇ ಆಗಲೀ ಅಜ್ಞಾನದಿಂದಲೇ ಆಗಲೀ ಈ ವಿಷಯದಲ್ಲಿ ಏರ್ಪಾಡುಗಳನ್ನು ಮಾಡದೆ ಹೋದರೆ ಜ್ವರವು ಪ್ರಬಲವಾಗಿ ಪ್ರಮಾದಸಂಭವಿಸುವದು. ಹೀಗೆ ಜ್ವರದಿಂದ ಪೀಡಿತರಾದವರ ಜಲಮಲಗಳಿಂದ ಪರಮಾಣುಗಳು ವಾಯುವಿನಲ್ಲಿ ಸೇರಿ ಇತರ ಜನಗಳಿಗೂ ಬಾಧಕವನ್ನು ಉಂಟುಮಾಡುವವು. ಈ ರೀತಿಯಲ್ಲಿ ಅನೇಕ ರೋಗಗಳು ಬಡವರಲ್ಲಿ ಮೊದಲು ಹುಟ್ಟಿ ಆ ಮೇಲೆ ಐಶ್ವರ್ಯವಂತರನ್ನು ಕೂಡ ಪೀಡಿಸುವವು. ಆದ್ದರಿಂದ ಯಾರಿಗಾಗಲೀ ರೋಗ ಬರದಹಾಗೆ ತಕ್ಕ ಏರ್ಪಾಡುಗಳನ್ನು ಮಾಡತಕ್ಕದ್ದು ಎಲ್ಲರಿಗೂ ಸೇರಿ ಇರುತ್ತದೆ.

೩. ಆರೋಗ್ಯವಿಚಾರ. (ಬಟ್ಟೆಗಳ ಶೋಧ ಮತ್ತು ಬಣ್ಣ.)

ಉಡುಪುಗಳಲ್ಲೆಲ್ಲಾ ಬಿಳೀ ಬಣ್ಣದವುಗಳೇ ಉತ್ತಮವಾದವುಗಳು. ಬೂದು, ಹಳದಿ, ಗುಲಾಬಿ, ನೀಲಿ, ಕಪ್ಪು ಬಣ್ಣಗಳು ಬಂದಕ್ಕಿಂತ ಮತ್ತೊಂದು ಕನಿಷ್ಟವಾದವುಗಳು. ಬಿಳೀಬಟ್ಟೆಗಳನ್ನು ಬಿಸಿಲಿನ ಶೋಧವು ಸುಲಭವಾಗಿ ಪ್ರವೇಶಿಸಲಾರದು; ಕರೀ ಬಟ್ಟೆಗಳನ್ನು ಸುಲಭವಾಗಿ ಪ್ರವೇಶಿಸುವದು. ಬೆಂಜಮಿನ್ ಫ್ರಾಂಕ್ಲಿನ್ ಎಂಬ ಬಬ್ಬ ವಿದ್ವಾಂಸನು ಇದನ್ನು ಬಂದು ಉಪಾಯದಿಂದ ಕಂಡು ಹಿಡಿದನು. ಏನಂದರೆ :—ತೊಕದಲ್ಲಿಯೂ ಗಾತ್ರದಲ್ಲಿಯೂ ಸಮನಾದ ಎರಡು ಹಿಮದ ಗಡ್ಡೆಗಳನ್ನು ತೆಗೆದುಕೊಂಡು ಕರೀಬಟ್ಟೆಯಲ್ಲಿ ಬಂದನ್ನೂ ಬಿಳೀಬಟ್ಟೆಯಲ್ಲಿ ಬಂದನ್ನೂ ಕಟ್ಟಿ ಬಿಸಿಲಿನಲ್ಲಿ ಇಟ್ಟನು.

ಕರಣ ತಪ್ಪಿದರೆ ಮರಣ.

ಕರೀಬಟ್ಟೆಯಲ್ಲಿ ಇದ್ದದ್ದು ಬೇಗ ಕರಗಿ ಹೋಯಿತು. ಆದದರಿಂದಲೇ ಬಿಳೀಬಟ್ಟೆಯನ್ನು ಉಟ್ಟರೆ ತಣ್ಣಗಿರುವದು ; ಕರೀದನ್ನು ಉಟ್ಟರೆ ಬಿಸಿಲಿನ ಝಳವು ಕಾಣಿಸುವದು. ಈ ಕರೀಬಟ್ಟೆಗಳು ಬಿಳಿಯವುಗಳಿಗಿಂತ ಶಾಖವನ್ನು ಜಾಗ್ರತೆಯಾಗಿ ಎಳೆದು ಕೊಳ್ಳುವದು ಮಾತ್ರವಲ್ಲದೆ ಅದನ್ನು ಜಾಗ್ರತೆಯಾಗಿ ಬಿಟ್ಟುಬಿಡುವವು. ಅನೇಕರು ಬೇಸಿಗೆಯಲ್ಲಿ ಬಿಳೀಬಟ್ಟೆಗಳನ್ನೂ ಚಳಿಗಾಲದಲ್ಲಿ ಕರಿಯವುಗಳನ್ನೂ ತೊಡುವದುಂಟು. ಬೇಸಿಗೆಯಲ್ಲಿ ಬಿಳೀಬಟ್ಟೆಗಳನ್ನು ಹಾಕಿಕೊಳ್ಳುವದರಿಂದ ಶಾಖವು ಕಡಿಮೆಯಾಗುವದು ಸರಿಯೆ. ಆದರೆ ಚಳಿಗಾಲದಲ್ಲಿ ಕರೀಬಟ್ಟೆಗಳನ್ನು ಹಾಕಿಕೊಂಡರೆ ಶರೀರಶಾಖವು ಕಡಿಮೆಯಾಗಿ ಅನೇಕ ರೋಗಗಳಿಗೆ ಆಸ್ಪದ ವಾಗುವದು. ಅನೇಕ ಶೀತ ದೇಶಗಳಲ್ಲಿ ಚಳಿಗಾಲವು ಬಂದ ಕೂಡಲೆ ಮೃಗಗಳಿಗೆ ಕೂಡ ಬಿಳೀತುಪಟಿಗಳು ಹುಟ್ಟುವವು. ಹೀಗೆ ಶರೀರದ ಶಾಖವನ್ನು ಆಚೆಗೆ ಬಿಡದೆಯೂ ಹೊರಗಿನ ಶಾಖವನ್ನು ಶರೀರಕ್ಕೆ ಸೇರಿಸದೆಯೂ ಇರುವವುಗಳು ಬಿಳೀ ಬಟ್ಟೆಗಳಾಗಿರುವದನ್ನು ನೋಡಿದರೆ ಇದು ದೇವರ ನಿಯಾಮಕವೆಂದೇ ತಿಳಿಯಬರುತ್ತದೆ. ಚಳಿಗಾಲಕ್ಕೆ ಚರ್ಮವು ಮತ್ತು ಇಂಡಿಯಾರಬ್ಬರಿನ ಉಡುಪುಗಳು ಅತ್ಯಂತ ಉತ್ತಮವಾದವುಗಳು. ತುಪಟದ ಬಟ್ಟೆಗಳು ಇವುಗಳಿಗಿಂತ ಸ್ವಲ್ಪ ಕನಿಷ್ಟವಾದವುಗಳು. ಹತ್ತಿ ಮತ್ತು ನಾರಿನ ಬಟ್ಟೆಗಳು ಬಹಳ ಕನಿಷ್ಟವಾದವುಗಳು. ತುಪಟದ ಬಟ್ಟೆಗಳು ಮೈಬೆವರನ್ನು ಹೀರಿಕೊಂಡು ಶರೀರದ ಶಾಖಕ್ಕೆ ಲೋಪಮಾಡುವದಿಲ್ಲ. ಬಟ್ಟೆಗಳು ಅಂಗಾಂಗಗಳನ್ನು ಸುಲಭವಾಗಿ ಅಲ್ಲಾಡಿಸುವಷ್ಟು ಸಡಿಲವಾಗಿ ಇರಬೇಕು. ಉಡುಪಿನ ಭಾರವೆಲ್ಲಾ ಭುಜಗಳಮೇಲೆ ಇರಬೇಕೇ ಹೊರತು ಮತ್ತಾವದಕ್ಕೂ ಇರ ಕೂಡದು. ನಮ್ಮ ದೇಶದಲ್ಲಿ ಸ್ತ್ರೀ ಪುರುಷರಿಗೆ ಸಾಮಾನ್ಯವಾಗಿ ಅರ್ಧ ಉಡುಪಿನ ಭಾರವೆಲ್ಲಾ ನಡುವಿನ ಮೇಲೆ ಬಿಳುವದು. ಈ ಬಟ್ಟೆಗಳನ್ನು ಬಲವಾಗಿ ಬಿಗಿ ಯೋಣದರಿಂದ ಮೊದಲೇ ಕೆಟ್ಟನಡುವನ್ನು ಡಾಬು ಮುಂತಾದವುಗಳನ್ನು ಹಾಕಿಕೊಂಡು ಇನ್ನೂ ಕೆಡಿಸಿಕೊಳ್ಳುವರು. ಹೀಗೆ ಬಿಗಿದ ಪ್ರದೇಶಗಳಿಗೆ ರಕ್ತಸಂಚಾರವಿಲ್ಲದೆ ಹೋಗುವದರಿಂದ ಆಪ್ರದೇಶಗಳೆಲ್ಲಾ

ವಿಕಾರವಾಗುವವು. ಕವಿಗಳೆಲ್ಲಾ ನಡುವು ಕೃಶವಾಗಿ ಇರಬೇಕೆಂದು ವರ್ಣಿಸಿದ್ದೇ ಈ ವಿರೂಪಕ್ಕೆ ಕಾರಣವಾಯಿತು.

೪. ಮಕ್ಕಳ ಪೋಷಣೆ.

ಅನೇಕರು ಜನನವಾದಕೂಡಲೆ ಮಕ್ಕಳನ್ನು ತಣ್ಣೀರಿನಿಂದ ತೊಳೆಯುವರು. ಇದರಿಂದ ಅವರು ಮಗುವಿಗೆ ಬಲಬರುವದೆಂದು ತಿಳಿದುಕೊಳ್ಳುವರು. ಇದರಿಂದ ಬಾಧಕವೇ ಹೊರ್ತು ಸಾಧಕವೇನೂ ಇಲ್ಲ. ತಣ್ಣೀರಿನಿಂದ ತೊಳೆದರೆ ಕಣ್ಣು ಕೆರಳುವದು, ನೆಗಡಿ ಬರುವದು, ಕೆಮ್ಮುಲು ಬರುವದು, ಮತ್ತು ಭೇದಿಯಾಗುವದು. ಬಹಳ ಬಿಸಿಯಾದ ನೀರಿನಿಂದ ತೊಳೆದರೂ ಹೀಗೆಯೇ ಮಗುವು ದುರ್ಬಲವುಳ್ಳದ್ದಾಗಿ ರೋಗವು ಬರುವದು. ಇಂಥಾ ಮಕ್ಕಳನ್ನು ತೊಳೆಯಬೇಕಾದರೆ ಮಳೇನೀರನ್ನು ಹಿಡಿದು ಅದನ್ನು ಉಗುರು ಬೆಚ್ಚಗೆಮಾಡಿ ತೊಳೆಯಬೇಕು. ಬೇಸಿಗೆಯಲ್ಲಿ ಜನನವಾದ ಮಕ್ಕಳನ್ನು ಕಾದು ಆರಿದ ನೀರಿನಿಂದ ತೊಳೆಯಬೇಕು. ಚಳಿಗಾಲದಲ್ಲಿ ಹುಟ್ಟಿದ ಮಗುವನ್ನು ಸುಮಾರು ಬಿಸಿ ಯಾಗಿರತಕ್ಕ ನೀರಿನಲ್ಲಿ ತೊಳೆಯಬೇಕು. ತೊಳೆಯುವದರಲ್ಲಿ ಸೋಪಾಗಲೀ ಸೀಗೇಕಾಯಿನ್ನಾಗಲೀ ಹಾಕಿ ಉಜ್ಜಬೇಕು. ಉಜ್ಜುವಾಗ ಅದು ಕಣ್ಣಿಗೆ ಬಿಳದಂತೆ ನೋಡಿಕೊಳ್ಳಬೇಕು. ಮಕ್ಕಳಿಗೆ ಸ್ನಾನವು ಮುಖ್ಯವಾದದ್ದು. ಅದು ತಪ್ಪಿದರೆ ಮಕ್ಕಳು ಕೃಶವಾಗುವವು. ಉಜ್ಜುವಾಗ ಫ್ಲಾನಲ್‌ನಿಂದಲಾಗಲೀ ಸ್ಪಂಜ್‌ನಿಂದಲಾಗಲೀ ಉಜ್ಜಬೇಕು. ಇದರಲ್ಲಿ ಸ್ಪಂಜೇ ಉತ್ತಮವಾದದ್ದು.

ಮಕ್ಕಳು ಹುಟ್ಟಿದ ಕೂಡಲೆ ಮೈಮೇಲೆ ಹಿಟ್ಟಿನಹಾಗೆ ಕಲ್ಮಷವು ಹತ್ತಿಕೊಂಡಿರುವದು. ಆ ಕಲ್ಮಷವನ್ನು ತೆಗೆದು ಹಾಕಬೇಕಾದರೆ ಮೊದಲು ಒಳ್ಳೆಣ್ಣೆಯನ್ನು ಮೈಗೆ ಸವರಿ ಮೊದಲು ಸೀನೀರನ್ನು ಹಾಕಿ ಫ್ಲಾನಲ್‌ನಿಂದ ಉಜ್ಜಿ ಅನಂತರ ಸಬ್ಬುಹಾಕಿದ ನೀರಿನಲ್ಲಿ ಸ್ಪಂಜನ್ನು ಅದ್ದಿಕೊಂಡು

ಕರೂ ಕೂಡಿ ಕದ ಮುಚ್ಚಿದಂತೆ.

ಆ ಕಲ್ಮಷವನ್ನು ತೆಗೆದುಹಾಕಬೇಕು. ಹಾಗೆ ಮಾಡದೆ ಅದನ್ನು ಬಿಟ್ಟು ಬಿಟ್ಟರೆ ಆ ಮೇಲೆ ವಿಷಬು ಮೊದಲಾದ ಚರ್ಮರೋಗಗಳೆಲ್ಲಾ ಬರುವವು.

ಪ್ರತಿದಿನವು ಪ್ರಾತಃಕಾಲದಲ್ಲಿ ಮಗುವಿಗೆ ತಲೆಗೂ ಮೈಗೂ ನೀರನ್ನು ಹಾಕಿ ಕಂಕುಳ ಸಂದಿ ಮುಂತಾದ ಯಾವ ಭಾಗದಲ್ಲಿಯೂ ಕೊಳೆಯಿಲ್ಲದಂತೆ ತೊಳೆದು, ಮೃದುವಾಗಿಯೂ ಶುದ್ಧವಾಗಿಯೂ ಇರತಕ್ಕ ಬಟ್ಟೆಗಳಲ್ಲಿ ಮಗುವಿಗೆ ಏನೂ ಹಿಂಸೆಯಾಗದಹಾಗೆ ಚನ್ನಾಗಿ ಒರಸಬೇಕು. ಸ್ನಾನ ವಾದಕೂಡಲೆ ಕಿವೀರಂಧ್ರಗಳನ್ನು ಸ್ವಲ್ಪವೂ ತ್ಯಾವವಿಲ್ಲದಹಾಗೆ ಬರಸಿ ಒಣಗಿಸಬೇಕು. ಹಾಗಿಲ್ಲದಿದ್ದರೆ ಕರ್ಣೇಂದ್ರಿಯಕ್ಕೆ ಬಾಧಕವಾಗುವದು.

ಸಾಯಂಕಾಲದ ಹೊತ್ತು ಮಕ್ಕಳಿಗೆ ಮೇಲೆ ಹೇಳಿದ ವಿಧಾನದಿಂದ ಕಂಠಸ್ನಾನವನ್ನು ಮಾಡಿಸಬೇಕು. ಮಕ್ಕಳು ಪಾಯಿಖಾನೆಗೆ ಹೋದಾಗೆಲ್ಲಾ ಬಿಸಿನೀರಿನಿಂದಲೂ ಸಾಬೂನಿನಿಂದಲೂ ತೊಳೆಯಬೇಕು. ಎರಡು ತಿಂಗಳಾದಮೇಲೆ ಮಗುವು ದುರ್ಬಲವಾಗಿದ್ದಪಕ್ಷದಲ್ಲಿ ಸ್ನಾನದ ನೀರಿಗೆ ಎರಡು ಹಿಡಿ ಉಪ್ಪನ್ನು ಹಾಕಿ ಅದರಲ್ಲಿ ಸ್ನಾನಮಾಡಿಸಬೇಕು. ಮಕ್ಕಳಿಗೆ ಸ್ನಾನ ಮಾಡಿಸದೆ ಇರುವದರಿಂದ ಅನೇಕ ಚರ್ಮರೋಗಗಳು ಬರುತ್ತವೆ. ಮೇಲೆ ಹೇಳಿದ ರೀತಿಯಲ್ಲಿ ಮಕ್ಕಳ ಶರೀರವನ್ನು ತೊಳೆಯುತ್ತಿದ್ದರೆ ಮಕ್ಕಳು ಆಯು ರಾರೋಗ್ಯ ವುಳ್ಳವುಗಳಾಗುವವು; ರೋಗಗಳು ತಲೆದೋರವು; ನರಗಳು ಬಲವಾಗುವವು; ಶರೀರವು ದೃಢವಾಗುವದು. ಎಲ್ಲಾ ಔಷಧಗಳಿಗಿಂತಲೂ ಸ್ನಾನವೇ ಬಹಳ ಬಲಕಾರಿಯಾದ ಔಷಧವು. ಇದರಿಂದ ಅಕಾಲಮರಣವೂ ಅನಾರೋಗ್ಯವೂ ತಪ್ಪುವವು.

ಹೊಕ್ಕಳು ಕುಯ್ಯುವಾಗ್ಗೆ ಮೆತ್ತಗಿರತಕ್ಕ ಶುಭ್ರವಾದ ಬಟ್ಟೆಯನ್ನು ಬಂದುಧಾರಕ್ಕೆ ಸುತ್ತಿ ಅದನ್ನು ಹೊಕ್ಕಳಿಗೆ ಕಟ್ಟಬೇಕು. ಕೆಲವರು ಬಟ್ಟೆಯನ್ನು ಸ್ವಲ್ಪ ಸುಟ್ಟು ಅದನ್ನು ಧಾರಕ್ಕೆ ಸುತ್ತಿ ಅದನ್ನು ಹೊಕ್ಕಳಿಗೆ ಕಟ್ಟುವರು. ಹೀಗೆ ಮಾಡುವದರಿಂದ ಚರ್ಮಕ್ಕೆ ಬಾಧಕವುಂಟು. ಈ ಧಾರವನ್ನು

ಕರೆಯುವ ಹಸ ಕೊಟ್ಟು ಬದೆಯುವ ಕತ್ತಿ ತಂದಹಾಗೆ.

ಕಟ್ಟುಇದ್ದರೂ ರಕ್ತ ಬರುವದಕ್ಕೆ ಉಪಕ್ರಮಿಸಿದರೆ ಆ ಧಾರದ ಮೇಲೆಯೇ ಪ್ರತ್ಯೇಕ ಧಾರಗಳನ್ನು ಸುತ್ತಿ ರಕ್ತ ಬರುವದನ್ನು ನಿಲ್ಲಿಸಬೇಕು. ಹಾಗಿಲ್ಲ ದಿದ್ದರೆ ಆರೋಗ್ಯ ತಪ್ಪುವದು ಮಾತ್ರವಲ್ಲದೆ ಕೆಲವುವೇಳೆ ಪ್ರಾಣವೇ ಹೋಗುವದು. ಹೀಗೆ ಕಟ್ಟಿದ ಧಾರವು ೬—೭ ದಿನಗಳಲ್ಲಿ ತಾನಾಗಿಯೇ ಬಿದ್ದು ಹೋಗುವದೂ ಉಂಟು, ಕೆಲವುವೇಳೆ ಮೂರುವಾರಗಳವರಿಗೂ ಇರುವದೂ ಉಂಟು. ಆ ಧಾರವು ತಾನೇ ಬಿಳುವವರಿಗೂ ಸುಮ್ಮನಿರಬೇಕು. ಹಾಗಿ ಲ್ಲದಿದ್ದರೆ ಮಕ್ಕಳಿಗೆ ಬಹಳ ಹಿಂಸೆಯಾಗುವದು. ಕೆಲವು ಮಕ್ಕಳು ಇದ ರಿಂದ ಸತ್ತು ಹೋಗುವದೂ ಉಂಟು. ಆ ಹೊಕ್ಕಳ ಧಾರವು ಬಿದ್ದ ಕೂಡಲೆ ಸ್ವಲ್ಪ ಗಾಯವುನಿಂತರೆ ಅದಕ್ಕೆ ಮೇಣದಿಂದ ಮಾಡಿದ ಪ್ಲಾಸ್ಟ್ರಿಯನ್ನು ಸೀಮೇ ದೂದಿಯ ಮೇಲೆ ಹಾಕಿ ಪ್ರತಿದಿನದಲ್ಲಿಯೂ ಅದನ್ನು ಆ ಗಾಯದಮೇಲೆ ಹಾಕಬೇಕು. ಪ್ರತಿರಾತ್ರಿಯೂ ಹಿಟ್ಟಿನಲ್ಲಿ ಪೋಲ್ಟೀಸ್ ಮಾಡಿ ಕಟ್ಟಬೇಕು.

೫. ಜ್ಯೋತಿಷ.

ಕಂ॥ ಬರೆದಿಹರೆವ್ಮಂಯು ಬುಧರೀ। ಧರಣಿಯು ನಾರವಿಯು ಬಿಡದೆ ಸುತ್ತು
ವನೆನುತಂ ॥ ಪರಿಕಿಸಿ ನೋಡಲು ಧರೆಯೇ। ತರಣಿಯು ಬಲವರ್ಪು
ದೆಂದು ಪೇಳ್ವರು ಹೂಣರ್ ॥

ಧರೆ ಸೂರ್ಯನ ಸುತ್ತುವುದೋ। ಖರಕರನೀಧರೆಯ ಸುತ್ತು ತಿರ್ಪ
ನೊ ನೋಡಲ್ ॥ ಗುರುಸಂದೇಹಾಸ್ಪದ ವಿದು ಪರಿಹಾರಕ ಮೊವು
ದಿದಕೆ ಪೇಳ್ವುದು ವಿಬುಧರ್ ॥

ಇದುವರಿಗೆ ಬರೆಯಲ್ಪಟ್ಟ ಪ್ರಕರಣಗಳಲ್ಲಿ ನಾವು ವಾಸಮಾಡುತ್ತ ಲಿರುವ ಈ ಭೂಗೋಳವು ಸರ್ವತೋವೃತ್ತವಾಗಿರುವದೆಂದೂ, ಇದರ ಪರಿ ಧಿಪ್ರಮಾಣವು ಸ್ವಲ್ಪ ಹೆಚ್ಚು ಕಡಿಮೆ ೭೯೦೦ ಮೈಲಿಗಳಾಗಿರುವದೆಂದೂ, ಇದು ಬುಗುರಿಯಂತೆ ಧೃವನೆ ಸುತ್ತುತ್ತಾ ದಿನಕ್ಕೊಂದೊಮ್ಮೆ ಆತ್ಮಪ್ರದಕ್ಷಿಣೆ

ಕರೂ ಕೂಡಿ ಕದ ಮುಚ್ಚಿದಂತೆ.

ಆ ಕಲ್ಮಷವನ್ನು ತೆಗೆದುಹಾಕಬೇಕು. ಹಾಗೆ ಮಾಡದೆ ಅದನ್ನು ಬಿಟ್ಟು ಬಿಟ್ಟರೆ ಆ ಮೇಲೆ ವಿಷಬು ಮೊದಲಾದ ಚರ್ಮರೋಗಗಳೆಲ್ಲಾ ಬರುವವು.

ಪ್ರತಿದಿನವು ಪ್ರಾತಃಕಾಲದಲ್ಲಿ ಮಗುವಿಗೆ ತಲೆಗೂ ಮೈಗೂ ನೀರನ್ನು ಹಾಕಿ ಕಂಕುಳ ಸಂದಿ ಮುಂತಾದ ಯಾವ ಭಾಗದಲ್ಲಿಯೂ ಕೊಳೆಯಿಲ್ಲದಂತೆ ತೊಳೆದು, ಮೃದುವಾಗಿಯೂ ಶುದ್ಧವಾಗಿಯೂ ಇರತಕ್ಕ ಬಟ್ಟೆಗಳಲ್ಲಿ ಮಗುವಿಗೆ ಏನೂ ಹಿಂಸೆಯಾಗದಹಾಗೆ ಚನ್ನಾಗಿ ಒರಸಬೇಕು. ಸ್ನಾನ ವಾದಕೂಡಲೆ ಕಿವೀರಂಧ್ರಗಳನ್ನು ಸ್ವಲ್ಪವೂ ತ್ಯಾವವಿಲ್ಲದಹಾಗೆ ಒರಸಿ ಬಣಗಿಸಬೇಕು. ಹಾಗಿಲ್ಲದಿದ್ದರೆ ಕರ್ಣೇಂದ್ರಿಯಕ್ಕೆ ಬಾಧಕವಾಗುವದು.

ಸಾಯಂಕಾಲದ ಹೊತ್ತು ಮಕ್ಕಳಿಗೆ ಮೇಲೆ ಹೇಳಿದ ವಿಧಾನದಿಂದ ಕಂಠಸ್ನಾನವನ್ನು ಮಾಡಿಸಬೇಕು. ಮಕ್ಕಳು ಪಾಯಿಖಾನೆಗೆ ಹೋದಾಗೆಲ್ಲಾ ಬಿಸಿನೀರಿನಿಂದಲೂ ಸಾಬೂನಿನಿಂದಲೂ ತೊಳೆಯಬೇಕು. ಎರಡು ತಿಂಗಳಾದಮೇಲೆ ಮಗುವು ದುರ್ಬಲವಾಗಿದ್ದಪಕ್ಷದಲ್ಲಿ ಸ್ನಾನದ ನೀರಿಗೆ ಎರಡು ಹಿಡಿ ಉಪ್ಪನ್ನು ಹಾಕಿ ಅದರಲ್ಲಿ ಸ್ನಾನಮಾಡಿಸಬೇಕು. ಮಕ್ಕಳಿಗೆ ಸ್ನಾನ ಮಾಡಿಸದೆ ಇರುವದರಿಂದ ಅನೇಕ ಚರ್ಮರೋಗಗಳು ಬರುತ್ತವೆ. ಮೇಲೆ ಹೇಳಿದ ರೀತಿಯಲ್ಲಿ ಮಕ್ಕಳ ಶರೀರವನ್ನು ತೊಳೆಯುತ್ತಿದ್ದರೆ ಮಕ್ಕಳು ಆಯು ರಾರೋಗ್ಯ ವುಳ್ಳವುಗಳಾಗುವವು; ರೋಗಗಳು ತಲೆದೋರವು; ನರಗಳು ಬಲವಾಗುವವು; ಶರೀರವು ದೃಢವಾಗುವದು. ಎಲ್ಲಾ ಔಷಧಗಳಿಗಿಂತಲೂ ಸ್ನಾನವೇ ಬಹಳ ಬಲಕಾರಿಯಾದ ಔಷಧವು. ಇದರಿಂದ ಅಕಾಲಮರಣವೂ ಅನಾರೋಗ್ಯವೂ ತಪ್ಪುವವು.

ಹೊಕ್ಕಳು ಕುಯ್ಯುವಾಗ್ಗೆ ಮೆತ್ತಗಿರತಕ್ಕ ಶುಭ್ರವಾದ ಬಟ್ಟೆಯನ್ನು ಬಂದುಧಾರಕ್ಕೆ ಸುತ್ತಿ ಅದನ್ನು ಹೊಕ್ಕಳಿಗೆ ಕಟ್ಟಬೇಕು. ಕೆಲವರು ಬಟ್ಟೆಯನ್ನು ಸ್ವಲ್ಪ ಸುಟ್ಟು ಅದನ್ನು ಧಾರಕ್ಕೆ ಸುತ್ತಿ ಅದನ್ನು ಹೊಕ್ಕಳಿಗೆ ಕಟ್ಟುವರು. ಹೀಗೆ ಮಾಡುವದರಿಂದ ಚರ್ಮಕ್ಕೆ ಬಾಧಕವುಂಟು. ಈ ಧಾರವನ್ನು

ಕರೆಯುವ ಹಸ ಕೊಟ್ಟು ಒದೆಯುವ ಕತ್ತೆ ತಂದಹಾಗೆ.

ಕಟ್ಟುಇದ್ದರೂ ರಕ್ತ ಬರುವದಕ್ಕೆ ಉಪಕ್ರಮಿಸಿದರೆ ಆ ಧಾರದ ಮೇಲೆಯೇ ಪ್ರತ್ಯೇಕ ಧಾರಗಳನ್ನು ಸುತ್ತಿ ರಕ್ತ ಬರುವದನ್ನು ನಿಲ್ಲಿಸಬೇಕು. ಹಾಗಿಲ್ಲ ದಿದ್ದರೆ ಆರೋಗ್ಯ ತಪ್ಪುವದು ಮಾತ್ರವಲ್ಲದೆ ಕೆಲವುವೇಳೆ ಪ್ರಾಣವೇ ಹೋಗುವದು. ಹೀಗೆ ಕಟ್ಟಿದ ಧಾರವು ೬—೭ ದಿನಗಳಲ್ಲಿ ತಾನಾಗಿಯೇ ಬಿದ್ದು ಹೋಗುವದೂ ಉಂಟು, ಕೆಲವುವೇಳೆ ಮೂರುವಾರಗಳವರಿಗೂ ಇರುವದೂ ಉಂಟು. ಆ ಧಾರವು ತಾನೇ ಬಿಳುವವರಿಗೂ ಸುಮ್ಮನಿರಬೇಕು. ಹಾಗಿ ಲ್ಲದಿದ್ದರೆ ಮಕ್ಕಳಿಗೆ ಬಹಳ ಹಿಂಸೆಯಾಗುವದು. ಕೆಲವು ಮಕ್ಕಳು ಇದ ರಿಂದ ಸತ್ತು ಹೋಗುವದೂ ಉಂಟು. ಆ ಹೊಕ್ಕಳ ಧಾರವು ಬಿದ್ದಕೂಡಲೆ ಸ್ವಲ್ಪಗಾಯವುಂತರೆ ಅದಕ್ಕೆ ಮೇಣದಿಂದ ಮಾಡಿದ ಪ್ಲಾಸ್ಟ್ರಿಯನ್ನು ನೀವೇ ದೂದಿಯ ಮೇಲೆ ಹಾಕಿ ಪ್ರತಿದಿನದಲ್ಲಿಯೂ ಅದನ್ನು ಆ ಗಾಯದಮೇಲೆ ಹಾಕಬೇಕು. ಪ್ರತಿರಾತ್ರಿಯೂ ಹಿಟ್ಟಿನಲ್ಲಿ ಪೋಲ್ಟೀಸ್ ಮಾಡಿ ಕಟ್ಟಬೇಕು.

೫. ಜ್ಯೋತಿಷ.

ಕಂ॥ ಬರೆದಿಹರೆವ್ಮಯ ಬುಧರೀ। ಧರಣಿಯ ನಾರವಿಯು ಬಿಡದೆ ಸುತ್ತು
ವನೆನುತಂ ॥ ಪರಿಕಿಸಿ ನೋಡಲು ಧರೆಯೇ। ತರಣಿಯ ಬಲವರ್ಪು
ದೆಂದು ಪೇಳ್ವರು ಹೂಣರ್ ॥

ಧರೆ ಸೂರ್ಯನ ಸುತ್ತುವುದೋ। ಖರಕರನೀಧರೆಯ ಸುತ್ತು ತಿರ್ಪ
ನೊ ನೋಡಲ್ ॥ ಗುರುಸಂದೇಹಾಸ್ಪದ ವಿದು ಪರಿಹಾರಕ ಮಾವು
ದಿದಕೆ ಪೇಳ್ವುದು ವಿಬುಧರ್ ॥

ಇದುವರಿಗೆ ಬರೆಯಲ್ಪಟ್ಟ ಪ್ರಕರಣಗಳಲ್ಲಿ ನಾವು ವಾಸಮಾಡುತ್ತ ಲಿರುವ ಈ ಭೂಗೋಳವು ಸರ್ವತೋವೃತ್ತವಾಗಿರುವದೆಂದೂ, ಇದರ ಪರಿ ಧಿಪ್ರಮಾಣವು ಸ್ವಲ್ಪ ಹೆಚ್ಚು ಕಡಿಮೆ ೭೯೦೦ ಮೈಲಿಗಳಾಗಿರುವದೆಂದೂ, ಇದು ಬುಗುರಿಯಂತೆ ಧರ್ರನೆ ಸುತ್ತುತ್ತಾ ದಿನಕ್ಕೊಂದೊಮ್ಮೆ ಆತ್ಮಪ್ರದಕ್ಷಿಣೆ

ಕಲಕಾಲದ ದಾಸಯ್ಯನಾದರೆ ತಿರುಮಂತ್ರ ಹೇಳಾನು.

ಯನ್ನು ಮಾಡುತ್ತಾ ಇರುವುದೆಂದೂ ಸಂದೇಹಕ್ಕೆ ಆಸ್ಪದವಿಲ್ಲದಂತೆ ಸ್ಪಷ್ಟವಾಗಿ ತೋರಿಸಿದೆವು. ಇದುವರಿಗೂ ಅಷ್ಟವಿಧ ಜ್ಯೋತಿಷ ಸಿದ್ಧಾಂತಗಾರರಾದ ನಮ್ಮ ಆರ್ಯರ ವಾಕ್ಯಗಳೂ ಸಕಲ ಯಂತ್ರತಂತ್ರ ಸಹಾಯಯುಕ್ತರಾದ ನವೀನಹೂಣಜ್ಯೋತಿಷಸಿದ್ಧಾಂತಿಗಳ ವಾಕ್ಯಗಳೂ ಬಂದೇ ಆಗಿದ್ದವೆಂಬದು ಪ್ರತ್ಯಕ್ಷವು. ಈಗ ಹೇಳುವ ವಿಷಯದಲ್ಲಿ ಇಂಗ್ಲೀಷರೂ ನಮ್ಮ ಆರ್ಯರೂ ಬೇರೆಬೇರೆ ಮಾರ್ಗಗಳನ್ನು ಹಿಡಿದಿರುವರಾಗಿರುವರು. ಹ್ಯಾಗಂದರೆ—" ಬ್ರಹ್ಮಾಂಡಮಧ್ಯಸ್ಥನಭೋಂತರಾಳೇ ಪೂರ್ವೋಕ್ತಸಂಖ್ಯಾಸಹಿತಸ್ಸವೃತ್ತಃ। ಆಧಾರಶಕ್ತ್ಯಾ ಧೃತ ಏವ ಧಾತುಃ ಗೋಳಸ್ಸದಾ ತಿಷ್ಠತಿ ಭೂತಧಾತ್ರ್ಯಾಃ ॥ " ಎಂಬ ವೈವಜ್ಞಾಭರಣದಲ್ಲಿನ ಶ್ಲೋಕರೀತಿಯಾಗಿಯೂ, " ಅಯಸ್ಕಾಂತಾಂತಸ್ಥೋ ಲೋಹ ಇವಾವಸ್ಥಿತೋ ವೃತ್ತಃ । " ಎಂಬ ವರಾಹಮಿಹಿರವಚನ ರೀತಿಯಾಗಿಯೂ, ಈ ಭೂಗೋಳವು ಬ್ರಹ್ಮಾಂಡ ಕಟಾಹದ ಮಧ್ಯಭಾಗದಲ್ಲಿ ಅಯಸ್ಕಾಂತಗಳಿಂದ. ಆಕರ್ಷಿಸಲ್ಪಟ್ಟು ಅಯೋಗೋಳದಂತೆ ನಿಶ್ಚಲವಾಗಿರುವದೆಂದೂ, " ಯಥೋಷ್ಣತಾ ಕಾರ್ಶಾನಲಯೋಶ್ಚ ಶೀತತಾ ವಿಧೌ ಧೃತಿಃ ಖೇ ಕಠಿನತ್ವಮುಶ್ಮನೀ । ಗುರುಚ್ಚ ಲೋ ಭೂ ರಚಲಾಸ್ವಭಾವತೋ ಯತೋವಿಚಿತ್ರಾ ಬತ ಪಸ್ತು ವಸ್ತ ಯುಃ ॥ " ಯುಂಬ ಭಾಸ್ಕರಾಚಾರ್ಯರ ವಚನರೀತ್ಯಾ ಈ ಭೂಗೋಳಕ್ಕೆ ಯಾವ ವಿಧ ಭ್ರಮಣೆಯೂ ಇಲ್ಲವೆಂದೂ, " ಅಯನಾದಯನಂ ಚೈವ ಕಕ್ಷ್ಯಾ ತಿರ್ಯಕ್ ಸ್ಥಿತಾ ಪರಾ। ಕ್ರಾಂತಿ ಸಂಜ್ಞಾತಯಾ ಸೂರ್ಯಸ್ಸದಾ ಪರ್ಯೇತಿ ಭಾಸರ್ಯ್ಯಾ ।"ಎಂಬ ಸೂರ್ಯಸಿದ್ಧಾಂತ ವಾಕ್ಯರೀತ್ಯಾ ಈ ಗೋಳವನ್ನು ಸೂರ್ಯನು ಸಂವತ್ಸರಕ್ಕೊಂದೊಪ್ಪತ್ತು ಸುತ್ತುತ್ತಲಿರುವದರಿಂದ ಋತುಭೇದಗಳುಂಟಾಗುವವೆಂದೂ ನಮ್ಮ ಆರ್ಯರಾದ ಜ್ಯೋತಿಷಸಿದ್ಧಾಂತಿಗಳೆಲ್ಲಾ ಬಂದೇ ಮುಖವಾಗಿ ಹೇಳುತ್ತಿರುವರು. ಇಂಗ್ಲಿಷ್ ಜ್ಯೋತಿಷ ಸಿದ್ಧಾಂತಿಗಳಾದರೋ ಈ ಭೂಗೋಳವು ಬ್ರಹ್ಮಾಂಡ ಕಟಾಹದ ಬಂದು ಮೂಲೆಯಲ್ಲಿರುವದೆಂದೂ, ಭೂಮಿಯು ದಿನೇದಿನೇ ಆತ್ಮಪ್ರದಕ್ಷಿಣೆಯನ್ನು ಮಾಡುತ್ತಾ ಸಂವತ್ಸರಕ್ಕೊಂದುಸಾರಿ ಸೂರ್ಯನನ್ನು ಸುತ್ತಿಬರುವದರಿಂದ ಋತು ಭೇದಗಳುಂಟಾಗುವವೆಂದೂ

ಕರಡೀ ಕೈಗೆ ಹೆದರದವ ಕರೀ ಕಂಬಳಿಗೆ ಹೆದರಾನೆ?

ನಿಷ್ಕರ್ಷೆ ಯಾಗಿಹೇಳಿರುವರು. ಹೀಗೆ ಪರಸ್ಪರ ವಿರೋಧಗಳಾಗಿರುವ ವಾಕ್ಯಗಳಲ್ಲಿ ಸಿದ್ಧಾಂತವಿದೆಂದು ನಿಷ್ಕರ್ಷೆ ಮಾಡಲ್ಪಟ್ಟಿರುವ ರೀತಿಯನ್ನು ಗ್ರಹಿಸುವದು ಗಣಿತಜ್ಞರಿಗೆಲ್ಲದೆ ಇತರರಿಗೆ ಬಹಳ ಕಷ್ಟತರವಾಗಿರುವದು. ಆದರೂ ಸಾಮಾನ್ಯರಿಗೂ ತಿಳಿಯುವಂತೆ ಸರಳವಾಗಿ ಬರೆಯಲ್ಪಟ್ಟಿರುವ ಗ್ರಂಥಗಳು ಅನೇಕವಿರುವದರಿಂದ ಆಗ್ರಂಥಗಳಲ್ಲಿ ಹೇಳಲ್ಪಟ್ಟಿರುವ ಕೆಲವು ವಿಷಯಗಳನ್ನು ಮಾತ್ರ ಮುಂದೆ ಬರೆಯುವವು.

ಗ್ರೀಷ್ಮಋತುವಿಗೂ ಹೇಮಂತಋತುವಿಗೂ ಇರುವ ವ್ಯತ್ಯಾಸವು ಸಕಲರಿಗೂ ಅನುಭವಪೂರ್ವವಷ್ಟೆ. ಗ್ರೀಷ್ಮಕಾಲದಲ್ಲಿ ಸೂರ್ಯನು ಬಹಳ ಹೊತ್ತು ಕ್ಷಿತಿಜದಮೇಲಿರುವನು, ಹೇಮಂತದಲ್ಲಿ ಬಹಳ ಬೇಗ ಕ್ಷಿತಿಜದಕೆಳಕ್ಕೆ ಹೋಗಿಬಿಡುವನು; ಅಂದರೆ ಅಹಸ್ಸು ಗ್ರೀಷ್ಮಕಾಲದಲ್ಲಿ ಹೆಚ್ಚಾಗಿಯೂ, ಹೇಮಂತದಲ್ಲಿ ಕಡಿಮೆಯಾಗಿಯೂ ಇರುವದು. ಗ್ರೀಷ್ಮಕಾಲದಲ್ಲಿ ರುಳಕ್ಕೆ ತಡಿಯಲಾರದೆ ಜನರು ನೆರಳನ್ನೇ ಬಯಸುತ್ತಿರುವರು, ಹೇಮಂತದಲ್ಲಿ ಛಳಿಗೆ ತಡೆಯಲಾರದೆ ಬಿಸಿಲನ್ನು ಬಯಸುವರು. ಗ್ರೀಷ್ಮಕಾಲದಲ್ಲಿ ಬರಬರುತ್ತಾ ಸೂರ್ಯನು ಉಚ್ಚಸ್ಥಾನಗತನಾಗುವನು, ಹೇಮಂತದಲ್ಲಿ ಸೂರ್ಯನು ವಾರೆಯಾಗಿ ಅಂತರಿಕ್ಷದಲ್ಲಿ ಸಂಚರಿಸುವನು. ಗ್ರೀಷ್ಮ ಹೇಮಂತಗಳಲ್ಲಿ ಸೂರ್ಯನಿರತಕ್ಕ ಪ್ರದೇಶಗಳು ಬೇರೆಬೇರೆಯಾಗಿರುವವು. ನಾವು ಪೂರ್ವಾಭಿಮುಖವಾಗಿ ನಿಂತು ನೋಡಲು, ಸೂರ್ಯನು ಗ್ರೀಷ್ಮದಲ್ಲಿ ಉತ್ತರದಕಡೆಗಾಗಿರುವನು, ಹೇಮಂತದಲ್ಲಿ ದಕ್ಷಿಣದಕಡೆಗಾಗಿರುವನು; ಅಂದರೆ ಸೂರ್ಯನು ಗ್ರೀಷ್ಮದಲ್ಲಿ ಉತ್ತರಮೇರು ಸವಿುಾಪಗತನಾಗಿಯೂ ಹೇಮಂತದಲ್ಲಿ ದಕ್ಷಿಣಮೇರುಸವಿುಾಪಗತನಾಗಿಯೂ ಇರುವನು. ಹೀಗಾಗುವದಕ್ಕೆ ಕಾರಣವೇನು?

ಇದಲ್ಲದೆ ಪ್ರತಿತಿಂಗಳಲ್ಲಿಯೂ ಪೂರ್ಣಮಾದಿವಸ ರಾತ್ರಿ ೧೨ ಘಂಟೇವೇಳೆಯಲ್ಲಿ ನಕ್ಷತ್ರಗಳನ್ನು ನೋಡುತ್ತಾ ಬಂದಲ್ಲಿ ಕೆಲವು ವಿಶೇಷಗಳು ತಿಳಿಯುವವು. ಚೈತ್ರಶುದ್ಧ ಪೂರ್ಣಿಮಾ ರಾತ್ರಿ ೧೨ ಘಂಟೇವೇಳೆಯಲ್ಲಿ ಆಕಾಶವನ್ನು ನೋಡಿದರೆ ಚಿತ್ತಾನಕ್ಷತ್ರವು ಸರಿಯಾಗಿ ಉಚ್ಚಕ್ಕೆ ಬಂದಿರುವದು; ವೈಶಾಖದಲ್ಲಿ ಅದೇ ದಿನ ಅದೇ ವೇಳೆಯಲ್ಲಿ ಚಿತ್ತಾನಕ್ಷತ್ರಕ್ಕೆ ಪೂರ್ವದ

ಈರೆದು ಹೆಣ್ಣು ಕೊಟ್ಟರೆ ಮುಲನಾಗರು ಹಿಡಿಯಿತು.

ಕಡೆಗಾಗಿರುವ ವಿಶಾಖಾನಕ್ಷತ್ರವು ಉಚ್ಚಕ್ಕೆ ಬಂದಿರುವದು; ಚಿತ್ತೆಯು ಪಶ್ಚಿಮಕ್ಕೆ ಹೋಗಿರುವದು; ಜ್ಯೇಷ್ಠದಲ್ಲಿ ಜ್ಯೇಷ್ಠಾನಕ್ಷತ್ರವೂ ಆಷಾಢಮಾಸದಲ್ಲಿ ಪೂರ್ವಾಷಾಢವೂ ಭಾದ್ರಪದದಲ್ಲಿ ಪೂರ್ವಾಭಾದ್ರೆಯೂ ಆಶ್ವೀಜದಲ್ಲಿ ಅಶ್ವಿನಿಯೂ ಕಾರ್ತೀಕದಲ್ಲಿ ಕೃತ್ತಿಕೆಯೂ ಮಾರ್ಗಶಿರದಲ್ಲಿ ಮೃಗಶಿರೆಯೂ ಪುಷ್ಯದಲ್ಲಿ ಪುಷ್ಯಮಿಯೂ ಮಾಘದಲ್ಲಿ ಮಖೆಯೂ ಫಾಲ್ಗುಣದಲ್ಲಿ ಉತ್ತರೆಯೂ ಪುನಹಾ ಚೈತ್ರಶುದ್ಧ ಪೂರ್ಣಿಮಾದಿನ ರಾತ್ರಿ ಚಿತ್ತೆಯೂ ಉಚ್ಚಕ್ಕೆ ಬರುವವು. ಹೀಗೆ ತಿಂಗಳುತಿಂಗಳಿಗೂ ಬಂದೇನಕ್ಷತ್ರ ಆ ವೇಳೆಯಲ್ಲಿ ಉಚ್ಚದಲ್ಲಿರದೆ ಪೂರ್ವದಕಡೆಗಾಗಿರುವ ನಕ್ಷತ್ರಗಳು ಉಚ್ಚಕ್ಕೆ ಬರುತ್ತಾ ಹೀಗೆ ಉಚ್ಚಕ್ಕೆ ಬಂದವು ಬರಬರುತ್ತಾ ಪಶ್ಚಿಮದಕಡೆಗಾಗಿಯೂ ಸಂಚರಿಸುವಂತೆ ಕಾಣಬರುವವು.

ಹೀಗೆ ಆಗುವದು ನಕ್ಷತ್ರ ಭ್ರಮಣೆಯಿಂದಲೋ ಇಲ್ಲದೆ ಸೂರ್ಯಗತಿಯಿಂದಲೋ ಅಥವಾ ಭೂಭ್ರಮಣೆಯಿಂದಲೋ ಎಂಬ ಸಂಶಯವನ್ನು ಮುಂದಕ್ಕೆ ತಿಳಿಸುವೆವು. ಈಗ ಕೆಲವು ನಕ್ಷತ್ರಗಳ ನಾಮಧೇಯವನ್ನೂ ಅವುಗಳ ರೂಪವನ್ನೂ ತಿಳಿಸುವೆವು. ಕೋ ॥ ಕಂ ॥ ವೆಂ. ॥

೬. ಮದುವೆ.

ಸ್ತ್ರೀಪುರುಷರು ಮೊತಾಪಿತೃಗಳಾಗುವದಕ್ಕೆ ಸರಿಯಾದ ಕಾಲವು ಸ್ತ್ರೀಯರಿಗೆ ೨೪ ವರ್ಷವೆಂಬುದಾಗಿಯೂ, ಪುರುಷರಿಗೆ ೩೦ ವರ್ಷವೆಂಬುದಾಗಿಯೂ ವೈದ್ಯಶಾಸ್ತ್ರನಿಬಂಧನೆ ಇದೆಯೆಂದು ೨ನೇ ಸಂಪುಟದ ೧೧ನೇ ಸಂಚಿಕೆಯಲ್ಲಿ ಹೇಳಿದ್ದೇವಷ್ಟೆ. ಈ ವೈದ್ಯಶಾಸ್ತ್ರ ಸಿದ್ಧಾಂತವನ್ನು ಪ್ರಾಯಶಃ ಯೂರೊಪ್ ಮತ್ತು ಅಮರಿಕಾಖಂಡದಲ್ಲಿನಜನರು ಅನುಸರಿಸಿ ನಡೆಯುತ್ತಾರೆ. ಹೀಗೆ ನಡೆಯುತಕ್ಕ ಸರ್ವರೂ ಅವರ ಮಕ್ಕಳೂ ಕೂಡ ಬಳ್ಳೀ ಆರೋಗ್ಯ ಭಾಗ್ಯವನ್ನೂ ದಾರ್ಢ್ಯವನ್ನೂ ಪಡೆದು ಇರುತ್ತಾರೆ. ನಮ್ಮ ದೇಶವು ವುಷ್ಣರಾಜ್ಯವಾದ್ದರಿಂದ ವೈದ್ಯಶಾಸ್ತ್ರನಿಬಂಧನೆಮೇರಿಗೆ ಏರ್ಪಾಡಿಗಿರತಕ್ಕ ವಯಸ್ಸು

ಗಿಂತ ಸ್ತ್ರೀಪುರುಷರಿಬ್ಬರಿಗೂ ೪ ವರ್ಷ ಕಡಮೆಯಾಗಿರುವಾಗಲೇ ಅಂದರೆ, ಸ್ತ್ರೀಯರು ೧೦ ವರ್ಷಕ್ಕೂ ಪುರುಷರು ೧೬ ವರ್ಷಕ್ಕೂ ಸಂಸಾರ ಧರ್ಮಕ್ಕೆ ಯೋಗ್ಯರಾಗುವರೆಂದು ಈ ದೇಶದ ವೈದ್ಯಶಾಸ್ತ್ರದಲ್ಲಿ ಅನುಭವವುಳ್ಳ ಅನೇಕ ವಿದ್ವಾಂಸರು ಹೇಳುತ್ತಾರೆ. ಬಾಲ್ಯದಲ್ಲಿಯೇ ಮದುವೆಯಾದರೂ ಈ ವೈದ್ಯಶಾಸ್ತ್ರೋಕ್ತವಾದ ವಯಸ್ಸು ಆಗುವವರಿಗೂ ಸಂಸಾರ ಧರ್ಮದಲ್ಲಿ ಪ್ರವರ್ತಿಸದೆ ಇದ್ದರೆ ನಮ್ಮ ಜನಗಳೂ ಕೂಡ ಯೂರೋಪ್ ಮತ್ತು ಅಮರಿಕಾ ಖಂಡದವರಹಾಗೆ ಆರೋಗ್ಯಭಾಗ್ಯವನ್ನೂ ದಾರ್ಢ್ಯವನ್ನೂ ಇದರ ಸಹಾಯದಿಂದ ಸಕಲ ಸಂಪತ್ತುಗಳನ್ನೂ ಹೊಂದಬಹುದು. ಲೋಕದಲ್ಲಿ ವಿವಾಹದಿಂದ ದಂಪತಿಗಳಿಗೆ ಯಾವಜ್ಜೀವವೂ ಸುಖವಾಗಿ ಇರುವದು ಮುಖ್ಯವೇ ಹೊರ್ತು ಅನ್ಯಥಾ ಇಲ್ಲ. ಆದರೆ ಅನೇಕರು ದ್ರವ್ಯವನ್ನೂ ಪದವಿಯನ್ನೂ ಮುಖ್ಯವಾಗಿ ಎಣಿಸುತ್ತಾರೆ. ಇಂಥವರು ಕ್ರಮೇಣ ಪರಸ್ಪರಾನುರಾಗವನ್ನೂ ಸಾಖ್ಯವನ್ನೂ ಕೂಡ ಕಳೆದುಕೊಳ್ಳುವರು. ಬೇರೆ ಬೇರೆ ಜನಾಂಗಗಳಲ್ಲಿ ವಿವಾಹದ ಕ್ರಮಗಳು ಚಿತ್ರ ವಿಚಿತ್ರವಾಗಿರುವವು. ಅವುಗಳನ್ನು ಈ ಕೆಳಗೆ ಸಂಕ್ಷೇಪವಾಗಿ ಹೇಳುತ್ತೇವೆ.

ಅಸಿರಿಯಾ ದೇಶದ ಜನಗಳು ವಿವಾಹಕ್ಕೆ ಬದಗಿದ ಹುಡುಗಿಯರನ್ನೆಲ್ಲಾ ಬಂಡುಕಡೆ ಸೇರಿಸಿ, ಅದರಲ್ಲಿ ಅತ್ಯಂತ ಸುಂದರಿಯರಾದವರನ್ನು ಪರಾಜು ಹಾಕುತ್ತಿದ್ದರು. ಧನಿಕರಿಲ್ಲರೂ ಇವರನ್ನು ಕೊಂಡುಕೊಳ್ಳುವದಕ್ಕೋಸ್ಕರ ಪೈಪೋಟಿ ಮಾಡುತ್ತಿದ್ದರು. ಅದ್ದರಿಂದಲೇ ಸುಂದರಿಯಾದ ಪ್ರತಿಯೊಬ್ಬ ಸ್ತ್ರೀಯ ಪ್ರೀತಿಯು ಲಕ್ಷಾಂತರರೂಪಾಯಿ ಆಗುತ್ತಿತ್ತು. ಹೀಗೆ ಸುಂದರಿಯರನ್ನೆಲ್ಲಾ ಖರೀದಿಮಾಡಿ, ಅದರಿಂದ ಬಂದ ಹಣವನ್ನು ಸರಕಾರದವರು ತಮ್ಮ ಬಳಿಯಲ್ಲಿ ಇಟ್ಟುಕೊಂಡು ಕುರೂಪಿಗಳಾದವರನ್ನು ಅವರ ಜೊತೆಯಲ್ಲಿ ಎಷ್ಟು ಹಣ ಕೊಟ್ಟರೆ ಮದುವೆ ಮಾಡಿಕೊಳ್ಳುತ್ತೀರಿ ಎಂಬುದಾಗಿ ಪರಾಜು ಹಾಕುತ್ತಿದ್ದರು. ಅದರಲ್ಲಿ ಎಲ್ಲರಿಗಿಂತಲೂ ಕಡಮೆಯಾಗಿ ಯಾವನು ಕೇಳುತ್ತಿದ್ದನೋ ಅವನಿಗೆ ಅವಳನ್ನು ಆ ಹಣದೊಂದಿಗೆ ಒಪ್ಪಿಸುತ್ತಿದ್ದರು. ಈ ಏರ್ಪಾಡಿನಿಂದ ಕುರೂಪಿಗಳಿಗೂ ರೂಪಿಷ್ಠರಿಗೂ ಸಹ ಗಂಡರಂದಿರು

ಕಲ್ಲಾದರೇನು ಗುಂಡಾದರೇನು, ತಲೆಪೊಡೆಯುವದಕ್ಕೆ ?

ದೊರೆಯುತ್ತಿದ್ದರು. ಚೀನಾ ದೇಶದವರು ಅಕ್ಕಿ ಬೇಳೆ ಮುಂತಾದ ಪದಾರ್ಥಗಳನ್ನು ಮಾರುವಹಾಗೆ ತಮ್ಮ ಮಕ್ಕಳನ್ನೂ ಮಾರುತ್ತಾರೆ. ಆಫ್ರಿಕಾ ಖಂಡದಲ್ಲಿರುವ ಮೂರ್ಸ್ ಎಂಬ ಮುಸಲ್ಮಾನರು ತಮ್ಮ ಮಕ್ಕಳಿಗೆ ನಮ್ಮ ಹಿಂದೂಗಳಂತೆ ಬಾಲ್ಯದಲ್ಲಿ ವಿವಾಹಶಾಸ್ತ್ರವನ್ನು ನಡಿಸುತ್ತಾರೆ. ಗಂಡನು ಆವೇಲೆ ತನ್ನ ಹೆಂಡತಿಯ ಕ್ರಯವನ್ನು ಕೊಟ್ಟುಬಿಟ್ಟರೆ ಆಕೆಗೆ ಅವನಲ್ಲಿ ಅನುರಾಗವಿಲ್ಲದೆ ಇದ್ದರೂ, ಬಂದುವೇಳೆ ಇಬ್ಬರಿಗೂ ಅತ್ಯಂತ ವಿರೋಧವಿದ್ದರೂ, ಅವನ ಆಜ್ಞಾನುಸಾರವಾಗಿ ಇರಬೇಕೇ ಹೊರತು ಬೇರೆ ವಿಧಿಯಿಲ್ಲ. ಸುಮಾತ್ರಾ ಎಂಬ ದ್ವೀಪದಲ್ಲಿ ಗಂಡಸರು ತಮಗೆ ಬೇಕಾದ ಹೆಂಗಸರನ್ನು ಕ್ರಯಕ್ಕೆ ತೆಗದು ಮದುವೆ ಮಾಡಿಕೊಳ್ಳುತ್ತಾರೆ; ಆದರೆ ಆವೇಲೆ ಯಾವಾಗಲಾಗಲೀ ಇಬ್ಬರಿಗೂ ವಿರೋಧಬಂದರೆ ಅವಳನ್ನು ಮತ್ತೊಬ್ಬನಿಗೆ ಜಾಜಿನಲ್ಲಿ ಸೋತುಬಿಡುತ್ತಾನೆ, ಆಥವಾ ಹೋದಷ್ಟು ಕ್ರಯಕ್ಕೆ ಮಾರಿಬಿಡುತ್ತಾನೆ. ತುರುಕರು ನಾಲ್ಕು ಜನ ಹೆಂಡಿರನ್ನು ಕೂಡ ಮದುವೆ ಮಾಡಿಕೊಳ್ಳಬಹುದು; ಆದರೆ ನಿಷೇಕದಿವಸದವರಿಗೂ ಒಬ್ಬರ ಮುಖವನ್ನು ಒಬ್ಬರು ನೋಡುವದಿಲ್ಲವಾದ್ದರಿಂದ ಪುರುಷನು ತನಗೆ ಅನುರೂಪಳಾದ ಸ್ತ್ರೀಯನ್ನಾಗಲೀ ಸ್ತ್ರೀಯು ತನಗೆ ಅನುರೂಪನಾದ ಪುರುಷನನ್ನಾಗಲೀ ವರಿಸುವದಕ್ಕೆ ಇವರಲ್ಲಿಯೂ ಆಸ್ಪದವಿಲ್ಲ. ಪಶ್ಚಿಮ ಟಾಟರಿದೇಶದಲ್ಲಿ ಒಬ್ಬ ಹೆಂಗಸಿನ ಕ್ರಯವು ೧೫ರಿಂದ ೩೦೦ ರೂಪಾಯಿವರಿಗೂ ಆಗುತ್ತದೆ. ಅದೇ ದೇಶದ ಕಾಡುಕುರುಬರಲ್ಲಿ ಬಳ್ಳೀ ಸುಂದರಸ್ತ್ರೀಗೆ ೧೦ರಿಂದ ೨೦ರೂ. ವರಿಗೂ ಖರೀದಿಯಾಗುತ್ತದೆ. ಟಾರ್ಟರಿದೇಶದ ಸೈಂಗಾನ್ ಎಂಬ ಜನಗಳಲ್ಲಿ ವಿವಾಹವಿಧಿಯು ವಿಚಿತ್ರವಾದದ್ದು. ವಿವಾಹಕ್ಕೆ ಯೋಗ್ಯಳಾದ ಸ್ತ್ರೀಯು ವೇಗವಾಗಿ ಹೋಗತಕ್ಕ ಬಂದು ಕುದುರೇವೇಲೆ ಕೂತುಕೊಂಡು ಸವಾರಿಬಿಡುವಳು. ವರನೂ ಬಂದು ಕುದುರೇವೇಲೆ ಕೂತುಕೊಂಡು ಅವಳನ್ನು ಅಟ್ಟಿಕೊಂಡು ಹೋಗಿ ತನ್ನ ಡೇರೆಗೆ ಕರೆದುಕೊಂಡು ಹೋದರೆ ವಿವಾಹವಿಧಿಯು ಪೂರಯಿಸುವದು. ಸೈಬೀರಿಯಾ ದೇಶದಲ್ಲಿ ವಧುವು ವರನ ಮೋಜಾವನ್ನು ಈಚಿಗೆ ತೆಗೆಯುವದೇ ವಿವಾಹವಿಧಿಯು. ಇದೇ ದೇಶದ

ಕಳ್ಳಗೆ ಸಂದುಕೊಟ್ಟು ಒಡವೆಗೆ ಹುಯ್ಯಲಿಕ್ಕಿದ.

ಮತ್ತೊಂದು ಭಾಗದಲ್ಲಿ ವರನು ತನ್ನ ಮೂವನಿಂದ ಬಂದು ಚಾಪೆಯನ್ನು ತೆಗದುಕೊಂಡು ಅದರಿಂದ ವಧುವನ್ನು ಚನ್ನಾಗಿ ಹೊಡೆಯುವದೇ ವಿವಾಹ ವಿಧಿಯು. ಆಸ್ಟ್ರೇಲಿಯಾ ಮತ್ತು ಜಪಾನ್‌ದೇಶಗಳಲ್ಲಿ ಆಗತಕ್ಕ ವಿವಾಹ ವಿಧಾನವನ್ನು ೧೦ನೇ ಸಂಪುಟದ ೯ನೇ ಸಂಚಿಕೆಯಲ್ಲಿ ಹೇಳಿ ಇರುತ್ತೇವೆ.

ಹೀಗೆ ಚಿತ್ರವಿಚಿತ್ರವಾದ ಬೇರೆಬೇರೆ ಜನಾಂಗಗಳ ಪದ್ಧತಿಗಳನ್ನು ನೋಡಲಾಗಿ ಪೂರ್ವದಿಂದಲೂ ಜನಗಳು ಹೆಂಡಿರು ಮಕ್ಕಳನ್ನು ಮನೆ ಬಾಗಲು ಹೊಲ ದನ ಮುಂತಾದವುಗಳಂತೆಯೇ ಗಣಿಸಿ ಇದ್ದರೇ ಹೊರತು ಅವರನ್ನು ಯುಕ್ತಾಯುಕ್ತಗಳನ್ನು ತಿಳಿದ ಮತ್ತು ತಮ್ಮ ತಮ್ಮ ಕಷ್ಟ ಸುಖಗಳಿಗೆ ಬಾಧ್ಯರಾದವರೆಂದು ಎಣಿಸಿ ಇರಲಿಲ್ಲವೆಂದು ತೋರುತ್ತದೆ.

ಇವುಗಳೆಲ್ಲಾ ಒರಟು ಜನರ ಸಂಪ್ರದಾಯಗಳು. ನಾಗರಿಕರಲ್ಲಿ ವಿವಾಹದ ಆಚರಣೆಗಳು ಹ್ಯಾಗೆ ಇರುತ್ತವೊ ವಿಚಾರಿಸಿ ನೋಡೋಣ. ಇವರು ವಧುವನ್ನು ವಿಚಾರಿಸುವದರಲ್ಲಿ ಆಕೆಯು ತನಗೆ ಅನುರೂಪಳೆ ಎಂಬದಾಗಿಯೂ, ಆಕೆಯ ನಡೆನುಡಿಗಳು ಸರಿಯಾಗಿವೆಯೇ ಇಲ್ಲವೇ ಎಂಬದಾಗಿಯೂ, ದೇಹದಾರ್ಢ್ಯವು ಸರಿಯಾಗಿ ಇದೆಯೇ ಇಲ್ಲವೇ ಎಂಬ ದಾಗಿಯೂ ವಿಚಾರಿಸುವದಿಲ್ಲ. ವರನನ್ನು ವಿಚಾರಿಸುವದರಲ್ಲಿಯೂ ಹೀಗೆಯೇ ಸರಿ. ವರನಿಗೆ ಒಳ್ಳೇವೇಷವನ್ನು ಹಾಕಿ ವಧುವಿನ ಕಡೆಯವರಿಗೂ, ವಧುವಿಗೆ ಅಲಂಕಾರಮಾಡಿ ವರನ ಕಡೆಯವರಿಗೂ ತೋರಿಸುವರು. ವಧೂವರರಿಗೆ ಪರಸ್ಪರ ಅನುರಾಗವು ಇದೆಯೋ ಇಲ್ಲವೋ ಎಂದು ಒಬ್ಬರೂ ಆಲೋಚಿಸುವದಿಲ್ಲ. ವಧುವಿನ ಕಡೆಯವರಿಗೆ ವರನು ಆಭರಣಗಳನ್ನು ಸರಿಯಾಗಿ ಇಡುತ್ತಾನೆಯೇ ಇಲ್ಲವೇ ಎಂಬುವದು ಮುಖ್ಯವೇ ಹೊರತು ಮುಂದೆ ವಧುವು ಸುಖವಾಗಿರುವಳೇ ಇಲ್ಲವೇ ಎಂಬ ಯೋಚನೆಯು ಇಲ್ಲವೇ ಇಲ್ಲ. ಈ ರೀತಿಯಲ್ಲಿ ವಿವಾಹವೂ ನಡೆಯುವದು, ದಂಪತಿಗಳೂ ಕ್ರಮೇಣ ಮಕ್ಕಳನ್ನು ಪಡೆಯುವರು. ಅನಂತರದಲ್ಲಿ ಇವರು ಸಂಸಾರವನ್ನು ಪೋಷಿಸುವದಕ್ಕೆ ಶಕ್ತಿಯಿಲ್ಲದೆ, ಇದ್ದದ್ದನ್ನೂ ಹಾಳುಮಾಡಿಕೊಂಡು, ಜೀವನಾಂತರೋಪಾಯಗಳನ್ನು ತಿಳಿಯದೆ, ದಂಪತಿಗಳೂ ಮಕ್ಕ

ಕಳ್ಳನ ತಾಯಿಯು ಸಂಗಡ ಕಣ್ಣೀ ಕೇಳಿದ ಹಾಗೆ.

ಸೂಕೂಡ ಭಿಕ್ಷಾಪಾತ್ರೆಗೆ ಅಧಿಕಾರಿಗಳಾಗುವರು. ದಂಪತಿಗಳಿಗೆ ಸ್ವಲ್ಪ ಪರಸ್ಪರಾನುರಾಗವಿದ್ದರೂ ಈ ತೊಂದರೆಗಳಿಂದ ಅದೂ ಹೋಗಿ ಅವರಿಗೆ ಭೂಮಿಯ ಮೇಲೆ ಬದುಕಿ ಇರುವದೇ ಭಾರವಾಗುವದು. ದೂರದೃಷ್ಟಿಯಿಲ್ಲದೆ ಮದುವೆ ಮಾಡಿಕೊಂಡು ಸಂಕಟಪಡುತ್ತಿರುವ ಲಕ್ಷಾಂತರಜನಗಳನ್ನು ನಾವು ಪ್ರತ್ಯಕ್ಷವಾಗಿ ನೋಡುತ್ತಾ ಇದ್ದೇವೆ. ಹೀಗಾಗುವದಕ್ಕಿಂತಲೂ ಅಂಥಾ ಸ್ತ್ರೀಪುರುಷರು ವಿವಾಹವಿಲ್ಲದೆ ಇರತಕ್ಕದ್ದು ಉತ್ತಮವಾದದ್ದಲ್ಲವೆ? ಹೀಗೆ ಸಂಕಟಪಡತಕ್ಕ ಜನಗಳನ್ನು ನೋಡಿಯೂಕೂಡ ತಮಗೆ ಇರತಕ್ಕ ಅಲ್ಪಸ್ವಲ್ಪವನ್ನೂ ಮಾರಿ ಮದುವೆ ಮಾಡಿಕೊಳ್ಳತಕ್ಕ ಅಜ್ಞಾನವನ್ನು ಏಷ್ಟೆಂದು ಹೇಳಬೇಕು? ಲೋಕದಲ್ಲಿ ಜನರು ಭೂಮಿ ಕಾಣಿ ಮನೆ ಮಠ ಮುಂತಾದವುಗಳನ್ನು ಕೊಂಡುಕೊಳ್ಳುವದಕ್ಕೆ ಮುಂಚೆಯೇ ಅವುಗಳನ್ನು ತೆಗೆದುಕೊಳ್ಳುವದರಿಂದ ತಮಗೆ ಲಾಭವೋ ನಷ್ಟವೋ ಕಷ್ಟವೋ ಸುಖವೋ ಎಂದು ಯೋಚಿಸಿ ತೆಗೆದುಕೊಳ್ಳುವರು. ಆದರೆ ಜನರು ಮದುವೆ ಮಾಡಿಕೊಳ್ಳುವ ವಿಷಯದಲ್ಲಿ ಯಾರೂ ಆಲೋಚನೆ ಮಾಡುವದಿಲ್ಲ. ತಾನು ಕೊಂಡ ಯಾವ ಪದಾರ್ಥದಿಂದಲಾಗಲೀ ತನಗೆ ನಷ್ಟವಾದರೂ ಅದರಿಂದ ಪುಂಟಾಗತಕ್ಕ ದುಃಖವು ಕ್ಷಣಿಕವಾಗಿರುವದು. ಆದರೆ ದೂರದೃಷ್ಟಿಯಿಲ್ಲದೆ ಮಾಡಿಕೊಂಡ ವಿವಾಹದ ದುಃಖವನ್ನು ಯಾವಜ್ಜೀವವೂ ಅನುಭವಿಸಬೇಕು. ವಧೂವರರಿಗೆ ವಿವಾಹಮಾಡಿಕೊಳ್ಳುವದಕ್ಕೆ ತಕ್ಕ ಯೋಗ್ಯತೆಗಳ್ಯಾವವಂದರೆ:—ಇಬ್ಬರಿಗೂ ಅನ್ನವಸ್ತ್ರಗಳಿಗೆ ಕೊರತೆ ಇಲ್ಲದೆ ಇರಬೇಕು; ಪರಸ್ಪರಾನುರಾಗವಿರಬೇಕು; ಧರ್ಮಸೂಕ್ಷ್ಮಗಳನ್ನು ಇಬ್ಬರೂ ಬಂದೇವಿಧವಾಗಿ ಆಲೋಚಿಸುವವರಾಗಿ ಇರಬೇಕು. ಇಂಥಾವರು ಸುಖಪಡುವರು.

ಕಳ್ಳಭಂಟ ಬಜೆಯುಗೆ ಹಿತ.

೭. ಮೈಸೂರು ಗೆಜೆಟ್ ಸಂಗ್ರಹ.

ಜನವರಿ ತಾರೀಖು ೫ಂ.—ಶಿವಮೊಗ್ಗಾ ಡಿವಿಜ್ ಅಸಿಸ್ಟೆಂಟ್ ಎಂಜನಿಯರ್ ಮೆ॥ ಬಿ. ಪಿ. ರಾಘವಲುನಾಯಿಡು ಅವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ೬ ತಿಂಗಳ ಐಚ್ ರಜಾವನ್ನೂ, ಆಮೇಲೆ ೧॥ ವರುಷದವರಿಗೆ ಅಲ್ಲೋವೆನ್ಸ್ ಇಲ್ಲದೆ ಸ್ಪೆಷಲ್ ರಜಾವನ್ನೂ ಕೊಟ್ಟಿರುತ್ತೆ. ಅಸಿಸ್ಟೆಂಟ್ ಎಂಜನಿಯರ್ ಮೆ॥ ಇ. ಆರ್. ಸುಬ್ಬರಾಯರವರು ಕಳೆದ ಜನವರೀ ತಾರೀಖು ೧೪ರಿಂದ ಕಡೂರು ಡಿವಿಜ್ ಎಗ್ಸೆಕ್ಯೂಟಿವ್ ಎಂಜನಿಯರಾಗಿ ಇರತಕ್ಕದ್ದು.

ಫೆಬ್ರುಅರಿ ೩.—ಮೆ॥ ಅ॥ ಕ॥ ಪಂಕನಾಥರಾಯರು ಜನವರೀ ತಾರೀಖು ೧೪ರಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಟ್ರೆಜರೀಚಾರ್ಜನ್ನೂ, ೧೫ರಲ್ಲಿ ಜೈಲ್ ಚಾರ್ಜನ್ನೂ, ೧೬ರಲ್ಲಿ ಟ್ರೆಜರೀ ಅ॥ ಕ॥ ಕೋರ್ಟ್ ಚಾರ್ಜನ್ನೂ ಮೆ॥ ಸಯ್ಯದ್ ನಸೀರುದ್ದೀನ್ ಸಾಹೇಬರಿಗೆ ಒಪ್ಪಿಸಿದರು.

ಫೆಬ್ರುಅರಿ ೪.—ಮೈಸೂರು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಎಗ್ಸೆಕ್ಯೂಟಿವ್ ಎಂಜನಿಯರ್ ಮೆ॥ ಜಿ. ಹೆಚ್. ಜೇಲೀಸಾಹೇಬರಿಗೆ ಯೂರೋಪಿಗೆ ಹೋಗಿ ಬರುವದಕ್ಕೋಸ್ಕರ ಈ ಫೆಬ್ರುಅರಿ ೧೮ರ ಲಾಗಾಯಿತು ಅಥವಾ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯಿತು ೧೧೧ ತಿಂಗಳ ರಜಾ ಕೊಟ್ಟು ಇದ.

ಫೆಬ್ರುಅರಿ ೧೦.—ಮೆ॥ ಅ॥ ಕ॥ ವೆಂಕಟವರದಯ್ಯಂಗಾರ್ಯರು ಜನವರಿ ೩೦ರಲ್ಲಿ. ಮೆ॥ ಅ॥ ಕ॥ ನಾಗೇಶರಾಯರಿಗೆ ಕಡೂರು ಡಿಸ್ಟ್ರಿಕ್ಟ್ ಟ್ರೆಜರೀ ಚಾರ್ಜನ್ನು ಒಪ್ಪಿಸಿದರು.

ಫೆಬ್ರುಅರಿ ೧೦.—ಮದರಾಸು ಇಂಡಿಯನ್ ಮೆಡಿಕಲ್ ಸರ್ವಿಸ್ ಸರ್ಜನ್ ಮೆ॥ ಎ. ಎಸ್ ಡಾಬ್ಸನ್ ಸಾಹೇಬರು ಮೆ॥ ಪಿ. ಎಚ್. ಬೆರ್ಸನ್ ಸಾಹೇಬರಿಗೆ ಬದಲಾಗಿ ಬೆಂಗಳೂರಲ್ಲಿ ರೆಸಿಡೆನ್ಸಿ ಸರ್ಜನರಾಗಿ ಇರತಕ್ಕದ್ದು.

ಫೆಬ್ರುಅರಿ ೧೦.—ಮೆ॥ ಎಂ. ಎ. ತಿರುಮಲಾಚಾರಿ ಬಿ. ಎ., ಬಿ. ಎಲ್. ರವರು ಚಿಕ್ಕಬಳ್ಳಾಪುರದ ೨ನೇ ಗ್ರೇಡ್ ಮುನಸೀಫರಾಗಿ ಇರತಕ್ಕದ್ದು. ಮೆ॥ ಎಂ. ರಾಮರಾಯರವರು ಮೆ॥ ಬರ್ಡ್ ಪರೀಫರವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವವರಿಗೆ ಹಾಸನದ ೩ನೇ ಗ್ರೇಡ್ ಮುನಸೀಫರ ಕೆಲಸವನ್ನು ಆಕ್ಟಿಂಗ್ ನೋಡತಕ್ಕದ್ದು. ಮೆ॥ ಮುನಸೀಫ್ ಎಸ್. ಎನ್. ರಾಮಸ್ವಾಮಯ್ಯಂಗಾರ್ಯರವರನ್ನು ಮದ್ದಗಿರಿ

ಕಸ ಗುಡಿಸು ಅಂದರೆ ಬಸ ಬಸ ಸುರೀತೊ ?

ಯಿಂದ ಹೊನ್ನಳ್ಳಿಗೂ, ವೆಃ ಮುನಸೀಫ್ ಯು. ಮಂಗಪತಿನಾಯಿಡು ಅವರನ್ನು ಹೊನ್ನಳ್ಳಿಯಿಂದ ಮದ್ದಗಿರಿಗೂ ವರ್ಗಾಯಿಸಿ ಇದೆ.

ಫೆಬ್ರುಆರಿ ೭.—ಮೈಸೂರು ಸ್ಪೆಷಲ್ ಸಬ್‌ರೆಜಿಸ್ಟ್ರಾರ್ ತಿರುಮಲಾಚಾರಿಯವರಿಗೆ ಒಂದು ತಿಂಗಳ ಪ್ರಿವಲೀಜ್‌ರಜಾ ಕೊಟ್ಟು ಇರುವದರಿಂದ ಇವರ ಗೈರ್‌ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ವರಿಗೆ ಇವರ ಕೆಲಸವನ್ನು ಮೈಸೂರು ಡಿಸ್ಟ್ರಿಕ್ಟ್ ರೆಜಿಸ್ಟ್ರಾರ್ ಆಫೀಸ್ ಡಿಪ್ಯೂಟ್ಯಿ ಕೃಷ್ಣರಾಯರವರು ನೋಡತಕ್ಕದ್ದು. ತಿರುಮಕೂಡ್ಲು ನರಸೀಪುರದ ಸ್ಪೆಷಲ್ ಸಬ್‌ರೆಜಿಸ್ಟ್ರಾರ್ ಲಕ್ಷ್ಮೀನರಸಿಂಹಯ್ಯನವರು ೧೫ ದಿನಗಳ ರಜಾ ತೆಗೆದುಕೊಂಡಿರುವದರಿಂದ ಇವರ ಗೈರ್‌ಹಾಜರಾತಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವವರಿಗೆ ಇವರ ಕೆಲಸವನ್ನು ಆ ತಾಲ್ಲೂಕ್ ಅಮಲ್‌ದಾರರು ನೋಡತಕ್ಕದ್ದು.

೧೮೮೫ನೇ ಇಸವಿ ಪೆಬ್ರುಆರಿ ೧೦ರವರೆಗಿನ ಕಾಲಸ್ಥಿತಿಯ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟ್.—ಕಬ್ಬು ವೈಶಾಖದ ಬತ್ತದ ಪೈರೂ ನೀರಿಲ್ಲದೆ ಒಣಗುತ್ತಿವೆ. ಈ ಕಾರಣದಿಂದಲೇ ನಾಟಿ ಹಾಕಿದ ಕಬ್ಬು ಹಾಗೆಯೇ ನಿಂತು ಇರುತ್ತದೆ. ಧಾನ್ಯಗಳನ್ನು ಬಿಡಿಯುತ್ತಾ ಇದ್ದಾರೆ. ಪ್ರತಿದಿನವೂ ನೀರೂ ದನಗಳ ಮೇವೂ ಕಡಿಮೆಯೂ ಗುತ್ತಲೂ ದಾರಣೆವಾಸಿಯು ಹೆಚ್ಚುತ್ತಲೂ ಇದೆ. ರೂಪಾಯಿ ೧ಕ್ಕೆ ಅಕ್ಕಿ ೧೦ ಸೇರು, ರಾಗಿ ೭೫ ಸೇರು, ಹುರಳಿ ೮೯ ಸೇರು.

ಕೋಲಾರಡಿಸ್ಟ್ರಿಕ್ಟ್.—ಪೈರು ಒಣಗುತ್ತಿದೆ. ಕೆರೆಗಳು ಬರಿದಾಗಿವೆ. ಕೆಲವು ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಕಷ್ಟ. ದನಗಳಿಗೆ ಮೇವು ಸಾಲದು. ದಾರಣೆವಾಸಿಯು ಹೆಚ್ಚುತ್ತಿದೆ. ರೂಪಾಯಿ ೧ಕ್ಕೆ ಅಕ್ಕಿ ೧೦—೧೧ ಸೇರು, ರಾಗಿ ೨೪—೩೦ ಸೇರು.

ತುಮಕೂರು ಡಿಸ್ಟ್ರಿಕ್ಟ್.—ಪೈರುಗಳೆಲ್ಲಾ ಹೀನಸ್ಥಿತಿಯಲ್ಲಿವೆ. ಕೆಲವುಕಡೆ ಜ್ವರವು ತಲೆಯೆತ್ತಿಕೊಂಡಿದೆ. ಕೆಲವು ತಾಲ್ಲೂಕುಗಳಲ್ಲಿ ದನಗಳಿಗೆ ತೆವುಲುರೋಗ ತಗಲಿ ಇದೆ. ತುಮಕೂರು ತಾಲ್ಲೂಕಿನಲ್ಲಿನ ದನಗಳು ಹುಲ್ಲೂ ನೀರೂ ಇಲ್ಲದೆ ಬಡವಾಗುತ್ತಾ ಇವೆ. ರೂಪಾಯಿ ೧ಕ್ಕೆ ದುಯ್ಯೂಂ ಅಕ್ಕಿ ೯॥—೧೦ ಸೇರು, ರಾಗಿ ೨೦—೩೦ ಸೇರು, ಹುರಳಿ ೧೬—೨೦ ಸೇರು.

ಮೈಸೂರು ಡಿಸ್ಟ್ರಿಕ್ಟ್.—ಹೆಗ್ಗಡದೇವನಕೋಟೆ ತಾಲ್ಲೂಕು ಕೆಲವು ಪ್ರದೇಶಗಳಲ್ಲಿ ಪೈರು ಒಳ್ಳೇ ಸ್ಥಿತಿಯಲ್ಲಿ ಇದೆ. ನಾಗಮಂಗಲ, ಚನ್ನರಾಯಪಟ್ಟಣ, ಮತ್ತು ಶ್ರೀರಂಗ

ಕಳ್ಳ ಕಳ್ಳಗೆ ನೆಂಟು, ಹುಳಿ ಮೊಣಸಿಗೆ ನೆಂಟು.

ಪಟ್ಟಣದ ತಾಲ್ಲೂಕುಗಳಲ್ಲಿ ರಾಗಿ, ಜೋಳ, ಹುಚ್ಚೆಳ್ಳು, ಅವರೆ, ಹುರಳಿ, ಕಡಲೆ ಇವುಗಳ ಬೆಳೆ ಆಯಿತು. ಗಂಜಾಮಿನಲ್ಲಿಯೂ ಮೈಸೂರು ಪಟ್ಟಣದಲ್ಲಿಯೂ ಕೆಲವರು ವಾಂತಿ ಭೇದಿಯಿಂದ ಮೃತರಾದರು. ನೀರು ಸಾಲದು. ನಾಗಮಂಗಲದ ತಾಲ್ಲೂಕು ವಿನಹಾ ಮಿಕ್ಕ ಕಡೆ ದನಗಳಿಗೆ ರೋಗವಿಲ್ಲ. ದನಗಳಿಗೆ ಮೇವು ಸಾಲದು. ರೂಪಾಯಿ ೧ಕ್ಕೆ ದುಯ್ಯಂ ಅಕ್ಕಿ ೧೦—೧೪ ಸೇರು, ರಾಗಿ ೨೧—೩೦ ಸೇರು, ಹುರಳಿ ೨೦—೨೫ ಸೇರು.

ಶಿವಮೊಗ್ಗಾ ಡಿಸ್ಟ್ರಿಕ್ಟ್.—ಮೈರು ಚನ್ನಾಗಿದೆ. ದಾವಣಗೆರೇಪ್ರಾಂತ್ಯದಲ್ಲಿ ಜೋಳದ ಮೈರೂ ಹತ್ತಿಮೈರೂ ಬಣಗಿ ಹೋದವು. ಹೊನ್ನಳ್ಳಿಯಲ್ಲಿ ಗೋಧಿ ಮತ್ತು ಕಡಲೇಮೈರೂ ಸಿಕಾರಪುರದಲ್ಲಿ ಅವರೆ ಮತ್ತು ತೊಗರೀಮೈರೂ, ದಾವಣಗೆರೆಯಲ್ಲಿ ಹತ್ತಿಮೈರೂ ಆಯಿತ್ತು. ಸಾಗರದಲ್ಲಿಯೂ, ನಗರದಲ್ಲಿಯೂ ಕಬ್ಬನ್ನು ಅಲೆಯಾಡುತ್ತಾ ಇದ್ದಾರೆ, ಮತ್ತು ಅಲ್ಲ ಕಾರಬತ್ತವನ್ನು ಬಿತ್ತಿದರು. ಶಿವಮೊಗ್ಗಾ ಮತ್ತು ಚನ್ನಗಿರಿಗೆ ಸೇರಿದ ಕೆಲವು ಪ್ರದೇಶ ಗಳಲ್ಲಿ ವಾಂತಿಭೇದಿಯು ಉಪಕ್ರಮವಾಗಿದೆ. ದನಗಳು ಸಾಖ್ಯವಾಗಿವೆ. ರೂಪಾಯಿ ೧ಕ್ಕೆ ಅಕ್ಕಿ ೧೨—೧೬ ಸೇರು, ರಾಗಿ ೨೦—೪೦ ಸೇರು, ಹುರಳಿ ೨೫—೩೦ ಸೇರು.

ಕಡೂರು ಡಿಸ್ಟ್ರಿಕ್ಟ್.—ಮೈರು ಪ್ರಾಯಶಃ ಚನ್ನಾಗಿದೆ. ಯಾವ ಬಿತ್ನೆಯೂ ಆಗಿಲ್ಲ. ಬತ್ತ, ಕಬ್ಬು, ತೊಗರಿ, ಅವರೆ, ಕಡಲೆ, ಗೋಧಿ, ಹರಳು ಇವುಗಳ ಬೆಳೆ ಆಯಿತು. ಅಡಿಕೆ ಮತ್ತು ಕಾಫಿ ಇವುಗಳ ಫಸಲು ಆಯಿತು. ಕುಡಿಯುವ ನೀರೂ ದನಗಳ ಮೇವೂ ಸಿಕ್ಕುತ್ತವೆ. ರೂಪಾಯಿ ೧ಕ್ಕೆ ಅಕ್ಕಿ ೧೨—೨೦ ಸೇರು, ರಾಗಿ ೨೦—೩೦ ಸೇರು.

೮. ವೃತ್ತಾಂತ ಸಂಗ್ರಹ.

ಇನ್ನು ಸ್ವಲ್ಪ ದಿವಸದಲ್ಲಿಯೇ ಲಾರ್ಡ್ ಡಫರೀ ಸಾಹೇಬರವರು ಬರಮಾಕ್ಕೆ ಹೋಗ ವರೆಂದು ವರ್ತಮಾನವಿದೆ.

ಕಳೆದ ೧೮ ವರ್ಷಗಳೊಳಗಾಗಿ ಕೊಲ್ಲಾಪುರದಲ್ಲಿ ೩ ಜನ ಮಹಾರಾಜರು ದೈವಾ ಧೀನರಾದರು. ಮೂರನೇ ಶಿವಾಜಿ ಎಂಬ ಧೊರೆಯನ್ನು ಸುಟ್ಟಾಗ ಆ ಬೂದಿಯನ್ನು ತೆಗೆದು ಕೊಂಡು ಹೋಗಿ ಗಂಗಾನದಿಯಲ್ಲಿ ಸಂಚಯನ ಮಾಡದೆ ಇರುವದೇ ಈ ದುರದೃಷ್ಟ ಪರಂಪರೆಗೆ ಕಾರಣವೆಂದು ಆ ಜನರೆಲ್ಲರೂ ನಂಬಿ ಇದ್ದಾರೆ. ಈ ಕಾರಣದಿಂದ ಕೊಲ್ಲಾ ಪುರದ ದಿವಾನರವರು ಗೋರಿಗಳಲ್ಲಿ ರಾಸಿಹಾಕಿರುವ ಬೂದಿಯನ್ನೆಲ್ಲಾ ತೆಗಿಸಿ ಕಾಸಿಗೆ ಕಳುಹಿಸಿಕೊಟ್ಟರು.

ಕಳ್ಳಗೆ ಚೇಳು ಬಡಿದ ಹಾಗೆ.

ಪೂನಾದಲ್ಲಿ ಮಹಾಜನಗಳೆಲ್ಲರೂ ಸೇರಿ ಬಂದು ಸಭೆಯನ್ನು ಮಾಡಿ ಇದ್ದಾರೆ. ಮಹಾರಾಷ್ಟ್ರದಲ್ಲಿ ದರಿದ್ರರಾದವರಿಗೆ ಜೀವನೋಪಾಯಗಳನ್ನು ಏರ್ಪಡಿಸುವದೇ ಇವರ ಉದ್ದೇಶವು. ಇವರು ವಿದ್ಯಾರ್ಥಿಗಳ ಅಭಿವೃದ್ಧಿಗೋಸ್ಕರ ೫೫ ಸ್ಕಾಲರ್‌ಷಿಪ್‌ಗಳನ್ನು ನೇಮಕಮಾಡಿ ಇದ್ದಾರೆ. ಈ ಧರ್ಮಕಾರ್ಯಕ್ಕೋಸ್ಕರ ಈಗ ಆಗಲೇ ೧೫೦೦೦ ರೂ ಪಾಯಿ ಕೂಡಿಹಾಕಿ ಇದ್ದಾರೆ. ಇನ್ನೂ ಅನೇಕ ದೊಡ್ಡ ಮನುಷ್ಯರು ಸಹಾಯಮಾಡುವ ದರಲ್ಲಿ ಇದ್ದಾರೆ.

ಲಾರ್ಡ್ ರೈಪರ್ ಸಾಹೇಬರು ಇಲಾಯತಿಯನ್ನು ಸೇರಿದರು. ಬೊಂಬಾಯಿಯಿಂದ ಇವರು ಹೋಗುವಾಗ ನಮ್ಮ ಜನರು ಎಷ್ಟು ಮರ್ಯಾದೆಯಿಂದ ಕಳುಹಿಸಿಕೊಟ್ಟರೋ ಅಷ್ಟು ಮರ್ಯಾದೆಗಳಿಂದಲೂ ಅವರ ದೇಶೀಯರೂ ಅವರನ್ನು ಎದುರುಗೊಂಡರು. ಲೋಕ ಹಿತವೇ ಮುಖ್ಯವಾಗಿ ಇರತಕ್ಕವರಿಗೆ ಇಂಥಾ ಸನ್ಮಾನಗಳು ಆತಕ್ಕದ್ದು ಆಶ್ಚರ್ಯವೇನು ?

ನಮ್ಮ ಬಾಲಕಿಯರಿಗೆ ತಕ್ಕ ವರರನ್ನು ಸಂಪಾದಿಸುವದು ಬಹಳ ಕಷ್ಟ. ಈ ಕಷ್ಟವು ಜ್ಯೋತಿಶ್ಶಾಸ್ತ್ರನಿಬಂಧನೆಯಿಂದ ಶತಾಂಶ ಹೆಚ್ಚುತ್ತದೆ. ವಯಸ್ಸು, ಆರೋಗ್ಯ, ರೂಪು, ಅನ್ನ ವಸ್ತ್ರ ವಿಷಯಗಳಲ್ಲಿ ನಮ್ಮವರಿ ಇವುಗಳೆಲ್ಲೆಲ್ಲಾ ಸರಿಯಾಗಿರುವ ಒಬ್ಬ ವರನನ್ನು ಹುಡುಕಿಕೊಂಡು ಬಂದಾಗ್ಯೂ ವಧೂವರರ ಜಾತಕಗಳು ಸರಿಯಾಗಿಲ್ಲವೆಂದು ಪುರೋಹಿತರು ಹೇಳಿಬಿಟ್ಟರೆ ಆ ವಿವಾಹವು ನಡೆಯುವದಿಲ್ಲ. ಪುರೋಹಿತರು ಇವರಿಗೆ ನಕ್ಷತ್ರಾನುಕೂಲವು ಆಗುವದಿಲ್ಲವೆಂಬದಾಗಿಯೂ, ಗಂಡಿನ ಜಾತಕರೀತಿಯಾಗಿ ಅವನು ಅಲ್ಪಾಯುವೆಂಬದಾಗಿಯೂ, ಇದರಿಂದ ಹುಡಗಿಯು ವಿಧವೆ ಯಾಗುವಳೆಂಬದಾಗಿಯೂ, ಹಾಗಿಲ್ಲದೆ ಹುಡಗಿಯೇ ಅಲ್ಪಾಯುವೆಂಬದಾಗಿಯೂ, ಕೆಲವುವೇಳೆಗಳಲ್ಲಿ ಹುಡುಗನಿಗೆ ಅಥವಾ ಹುಡುಗಿಗೆ ಅತ್ತೆ ಮಾವ ಮೊದಲಾದವರಿಲ್ಲದ ನಕ್ಷತ್ರವೆಂಬದಾಗಿಯೂ ಹೇಳುವರು. ಈ ಮಾತುಗಳನ್ನು ಕೇಳಿ ವಧೂವರರ ತಾಯಿ ತಂದೆಗಳು ಭಯಪಟ್ಟು ವಿವಾಹವನ್ನೇ ನಿಲ್ಲಿಸಿಬಿಟ್ಟು, ಆಮೇಲೆ ಕೆಲವು ಕಾಲದವರಿಗೂ ಅವರಿಗೆ ತಕ್ಕ ವರರನ್ನು ಹುಡುಕುವವರಲ್ಲಿ ಉದ್ಯುಕ್ತರಾಗಿ ಇರುವರು. ವಧುಗಳಿಗೆ ಬಂದು ಕ್ಲುಪ್ತವಾದ ಕಾಲದಲ್ಲಿ ಮದುವೆಯಾಗಬೇಕಾದ ಕಾರಣ ನಕ್ಷತ್ರಾನುಕೂಲವಾಗಿ ಮಿಕ್ಕಾದದ್ದರಲ್ಲಿಯೂ ಉಪಪನ್ನನಾದ ವನು ಸಿಕ್ಕದೆ ಇದ್ದರೆ ಶಾಸ್ತ್ರೋಕ್ತಕಾಲಾತೀತವಾದೀತೆಂಬ ಭಯದಿಂದ ನಕ್ಷತ್ರಾನುಕೂಲವು ಯಾವನಿಗಾಗುತ್ತದೋ ಅವನಿಗೆ ಕೊಟ್ಟು ಮದುವೆಮಾಡುವರು. ಅಂಥಾವನು ಉಪಪನ್ನನೂ ವಿದ್ಯಾವಂತನೂ ಕಾಯಶಕ್ತಿಯುಳ್ಳವನೂ ಆಗಿ ಇಲ್ಲದ ಪಕ್ಷದಲ್ಲಿ ಆತನನ್ನು ಮದುವೆಮಾಡಿಕೊಂಡವಳು ನಾನಾ ಕಷ್ಟಗಳಿಗೆ ಗುರಿಯಾಗುವಳು. ವರನಿಗೆ ಜಾತಕ

ಕಾವುನ ಹುಣುವೆಗೆ ಕಲಕನೀರು.

ಚನ್ನಾಗಿಲ್ಲವೆಂದು ಗೊತ್ತಾದರೆ ಅವನಿಗೆ ಯಾರೂ ಹೆಣ್ಣು ಕೊಡುವದಿಲ್ಲ. ಲೋಕದಲ್ಲಿ ಸ್ತ್ರೀ ಪುರುಷರಿಗೆ ಅನುಕೂಲವಾದ ವಿವಾಹಗಳಾಗುವದಕ್ಕೆ ಜ್ಯೋತಿಷ್ಕರೇ ಮುಖ್ಯಕಾರಣಭೂತರು. ಇವರು ತಾವು ಮಾಡುವದು ಅಕೃತ್ಯವೆಂದು ತಿಳಿದುಕೊಂಡು ಮಾಡುವದಿಲ್ಲ; ಅಂದರೆ, ತಾವು ಹೇಳತಕ್ಕ ಶಾಸ್ತ್ರವು ನಿಶ್ಚಯವಾದದ್ದೆಂಬದಾಗಿಯೂ ಅದರಿಂದ ಲೋಕಕ್ಕೆ ಉಪಕಾರಮಾಡಿದೆವೆಂಬದಾಗಿಯೂ ತಿಳಿದುಕೊಳ್ಳುವರು. ಇವರು ಹೀಗೆ ತಿಳಿದುಕೊಂಡು ಮಾಡಿದ ಅಕೃತ್ಯದಿಂದ ಬಹಳ ನಷ್ಟ ಉಂಟಾಗುವದು. ಅಂದರೆ, ಇವರು ಮಾಡುವ ಕೆಲಸದಿಂದ ದಂಪತಿಗಳು ಮುಂದಕ್ಕೆ ತಿನ್ನುವದಕ್ಕೆ ಗತಿಯಿಲ್ಲದೆ ಜೀವನಕ್ಕೆ ಉಪಾಯಾಂತರೆಗಳನ್ನರಿಯದೆ ನಿರಂತರವೂ ದಾರಿದ್ರ್ಯದಿಂದ ಒದ್ದಾಡುತ್ತಿರುವದು ಮಾತ್ರವಲ್ಲದೆ ನಾನಾವಿಧವಾದ ಸಂಸಾರ ದುಃಖಗಳಿಗೆ ಗುರಿಯಾಗುವರು. ಈ ಕೇಡುಗಳಿಗೆ ಕಾರಣಭೂತರು ಜ್ಯೋತಿಷ್ಕರು ಮಾತ್ರವೇ ಅಲ್ಲ. ಮಾತಾ ಪಿತ್ರುಗಳ ಅಜ್ಞಾನವೂ ಇದಕ್ಕೆ ಕಾರಣಭೂತವಾದದ್ದು. ಯಾಕಂದರೆ, ಇವರು ಜ್ಯೋತಿಷ್ಕರ ಮಾತುಗಳನ್ನೆಲ್ಲಾ ವೇದವಾಕ್ಯಗಳೆಂದು ತಿಳಿದುಕೊಂಡು ನಿರ್ವಿಚಾರವಾಗಿ ನಂಬುವದರಿಂದ ಜ್ಯೋತಿಷ್ಕರು ಪ್ರಮಾಣವಾಗಿ ನಡಿಯದೆ ಇರತಕ್ಕ ಮಾತುಗಳನ್ನೆಲ್ಲಾ ಹೇಳಿ ದ್ರವ್ಯಾರ್ಜನೆಯನ್ನು ಮಾಡಿಕೊಳ್ಳುವರು. ಲೋಕದಲ್ಲಿ ಎಲ್ಲರೂ ಸ್ವಲ್ಪತಾರತಮ್ಯಜ್ಞಾನವನ್ನು ಸಂಪಾದಿಸಿಕೊಂಡು ಈ ಜ್ಯೋತಿಷ್ಕರು ಹೇಳುವ ಸಂದಿಗ್ಧವಾದ ಮಾತುಗಳನ್ನು ಪರೀಕ್ಷಿಸಿ ನೋಡಿದರೆ ಜ್ಯೋತಿಶ್ಶಾಸ್ತ್ರವೇ ಲೋಕಕಂಟಕವಾದದ್ದೆಂಬದಾಗಿಯೂ ಅದರ ಸಹಾಯದಿಂದಲೇ ಮಾಡತಕ್ಕ ಜೀವನವು ನೀಚವಾದದ್ದೆಂಬದಾಗಿಯೂ ಗೊತ್ತಾಗುವದು. ನಾನು ಜ್ಯೋತಿಷದಲ್ಲಿ ಮಹಾಪಂಡಿತರಾದವರನ್ನು ಅನೇಕವಾಗಿ ನೋಡಿ ಇದ್ದೇನೆ. ಇವರು ತಮ್ಮ ಮನೆಯಲ್ಲಿ ಅಕ್ಕತಂಗಿಯರಿಗೂ ತಮ್ಮ ಮಕ್ಕಳಿಗೂ ಜ್ಯೋತಿಶ್ಶಾಸ್ತ್ರ ಸಿದ್ಧಾಂತಕ್ಕೆ ಸ್ವಲ್ಪವೂ ವ್ಯತ್ಯಾಸಬಾರದಂತೆ ಜಾತಕಗಳನ್ನು ಪರಿಶೋಧಿಸಿ ಲಗ್ನವನ್ನು ಮಾಡಿದರು. ಹೀಗೆ ಹಿಂದೂ ಮುಂದೂ ಚನ್ನಾಗಿ ಆಲೋಚಿಸಿ ಇವರು ಮಾಡಿದ ವಿವಾಹಗಳಿಂದಲೂ ಎಲ್ಲರಿಗೂ ಇವರು ಎಣಿಸಿ ಇದ್ದಂತೆ ಸುಖವು ಉಂಟಾಗಲಿಲ್ಲ; ಅಂದರೆ, ಈ ಜ್ಯೋತಿಷ್ಕರ ಮನೆಗಳಲ್ಲಿ ಇವರು ಜ್ಯೋತಿಶ್ಶಾಸ್ತ್ರ ಕ್ರಮಗಳನ್ನು ಎಷ್ಟು ಮಟ್ಟಿಗೆ ಅನುಸರಿಸಿ ಮದುವೇಮಾಡಿಕೊಂಡು ಇದ್ದಾಗ್ಯೂ ಹೆಂಡತಿ ಸತ್ತವರೂ ಗಂಡ ಸತ್ತವರೂ ಬೇಕಾದಹಾಗೆ ಇರುತ್ತಾರೆ. ಜ್ಯೋತಿಶ್ಶಾಸ್ತ್ರವು ನಿಶ್ಚಯವಾದದ್ದಾದಪಕ್ಷದಲ್ಲಿ ತಮ್ಮ ಮನೇವಿಷಯಕ್ಕಾಗಿ ಇವರು ಚನ್ನಾಗಿ ಆಲೋಚಿಸಲಿಲ್ಲವೆ? ಅದು ಸುಳ್ಳಾಗಿದ್ದಪಕ್ಷದಲ್ಲಿ ಅವರೆ ಅಪ್ರಮಾಣವಾದ ಮಾತುಗಳನ್ನು ನಂಬುವ ನಮ್ಮ ಅಜ್ಞಾನವು ಎಂಥಾದ್ದು? ನಮ್ಮಜನಗಳಿಗೆಲ್ಲಾ ಈ ಅಜ್ಞಾನವು ತಪ್ಪಿದರೆ ಮುಂಸೆ ಮದುವೆ ಮಾಡಿಕೊಳ್ಳತಕ್ಕ ಸ್ತ್ರೀ ಪುರುಷರಿಗೆ ಎಷ್ಟೋ ಸುಖವುಂಟಾಗುವದು. ಈ ಜ್ಯೋತಿಶ್ಶಾಸ್ತ್ರವನ್ನು ನಾನೂ ಬಹಳವಾಗಿ ಪರಿ

ಕಾದಹಾಲು ಕಹಿಯಾದೀತೆ ?

ಶೀಲಿಸಿ ನೋಡಿದೆನು. ಇದು ಶುದ್ಧವಾಗಿ ಅಬದ್ಧವಾಗಿಯೂ ಲೋಕಕಂಟಕವಾಗಿಯೂ ಇದೆಯೆಂದು ನನಗೆ ಗೊತ್ತಾಯಿತು.

ನಮ್ಮದೇಶದ ವಿದ್ವಾಂಸರೆಲ್ಲರೂ ಸಂದಿಗ್ಧವಾದ ಜ್ಯೋತಿಷ್ಕರ ಮಾತುಗಳನ್ನು ನಂಬಿದೆ ಅದರಲ್ಲಿ ಹೇಳಿರುವದು ನಿಜವೋ ಸುಳ್ಳೋ ಎಂದು ಪರೀಕ್ಷೆ ಮಾಡುವದಕ್ಕೆ ಉಪಕ್ರಮಿಸಿದರೆ ಇವರೆಲ್ಲರೂ ಲೋಕಕ್ಕೆ ಬಹಳ ಉಪಕಾರ ಮಾಡಿದಹಾಗೆ ಆಗುವದು. ದೇಶಾಂತರಗಳಲ್ಲಿರತಕ್ಕ ವಿದ್ವಾಂಸರೆಲ್ಲರೂ ವಿಧ ವಿಧವಾದ ಶಾಸ್ತ್ರಗಳನ್ನು ಕಲ್ಪಿಸಿ ಲೋಕೋಪಕಾರವಾದ ಅನೇಕ ಗ್ರಂಥಗಳನ್ನು ಬರೆದು ತಾವು ಯಶಸ್ಸನ್ನೂ ಸಂಪತ್ತನ್ನೂ ಸಂಪಾದಿಸುವದು ಮಾತ್ರವೇ ಅಲ್ಲದೆ ತಮ್ಮದೇಶಿಯರೆಲ್ಲರನ್ನೂ ತಮ್ಮಂತೆಯೇ ಮಾಡಿಕೊಳ್ಳುತ್ತಾ ಇದ್ದಾರೆ. ನಮ್ಮದೇಶದ ವಿದ್ವಾಂಸರು ಇಂಥಾ ಮಹತ್ಕಾರ್ಯಗಳನ್ನು ಮಾಡಲಿಲ್ಲವಲ್ಲಾ ಎಂದು ನಾನು ವ್ಯಸನಪಡುವದಿಲ್ಲ. ಲೋಕದಲ್ಲಿ ಸಕಲರಿಗೂ ದುಃಖವನ್ನೂ ನಾನಾವಿಧವಾದ ಹಿಂಸೆಗಳನ್ನೂ ಉಂಟುಮಾಡತಕ್ಕಂಥಾ ಬಹುಕಾಲದಿಂದಲೂ ಆಚರಣೆಯಲ್ಲಿರತಕ್ಕಂಥಾ ಪಂಚಾಂಗದವರ ಮಾತುಗಳು ನಿಜವೋ ಸುಳ್ಳೋ ಎಂಬದಾಗಿ ಪರೀಕ್ಷೆ ಮಾಡದೆ " ಕೋಣ ಈಯಿತು ಅಂದರೆ ಕೊಟ್ಟಿಗೆಯಲ್ಲಿ ಕಟ್ಟು " ಎಂಬ ಗಾದೆಗೆ ಸರಿಯಾಗಿ ಇವರು ಸುಳ್ಳುಮಾತುಗಳನ್ನೆಲ್ಲಾ ನಂಬಿ ತಾವೂ ಕೆಡುವರು. ಈ ವಿದ್ವಾಂಸರೇ ಹೀಗೆ ಕೆಡುವಾಗ್ಯೆ ವಿದ್ಯೆಯಿಲ್ಲದ ಮೂಢರ ಅವಸ್ಥೆಯನ್ನು ಹೇಳತಕ್ಕದ್ದೇನಿದೆ. ಈ ರೀತಿಯಲ್ಲಿ ಬಬ್ಬ ಹಿಂದೂ ವಿದ್ವಾಂಸರು ಬಂದಾನೊಂದು ಮದರಾಸು ಪತ್ರಿಕೆಗೆ ಬರೆದು ಇದ್ದಾರೆ.

ಹೈದರಾಬಾದು ಲಾಟರಿಯಲ್ಲಿ ಕಾಳಹಸ್ತೀ ಮಹಾರಾಜರವರ ದಿವಾನರಿಗೆ ಮೊದಲನೇ ಪ್ರೈಜ್ ೬೦,೦೦೦ ರೂಪಾಯಿ ಬಂತು. ಇವರು ಬಹಳ ಘನತೆಯನ್ನು ಹೊಂದಿದವರು. ಕಳೆದ ಕ್ಷಾಮ ಕಾಲದಲ್ಲಿ ಅನೇಕ ಜನರಿಗೆ ಅನ್ನವಸ್ತ್ರಗಳನ್ನು ಕೊಟ್ಟು ಸಂರಕ್ಷಣೆ ಮಾಡಿದರು. ಇವರಿಗೆ ಈ ಪ್ರೈಜ್ ಬಂದದ್ದಕ್ಕಾಗಿ ಸಕಲರೂ ಸಂತೋಷಿಸುತ್ತಾರೆ.

ರಂಗೂನ ಪಟ್ಟಣದಲ್ಲಿ ವ್ಯಾಪಾರವೇ ನಡೆಯುವದಿಲ್ಲ. ಪ್ರತಿಯೊಂದು ಗಡಂಗೂ ದವಸದಿಂದ ತುಂಬಿ ಇದೆ. ಯಾವದವಸಕ್ಕೂ ಗಿರಾಕಿಗಳೇ ಇಲ್ಲ. ವ್ಯಾಪಾರನಡಿಯುವದಿಲ್ಲವೆಂದು ವರ್ತಕರೆಲ್ಲರೂ ಬಹಳವಾಗಿ ದುಃಖಿಸುತ್ತಾರೆ. ಹೀಗೆ ಧಾನ್ಯಹೆಚ್ಚಿ ಕೊಳ್ಳುವವರಿಲ್ಲದೆ ದುಃಖಿಸುವ ಕಾಲವು ಇದುವರಿಗೂ ಯಾವಾಗಲೂ ಬಂದಿರಲಿಲ್ಲವೆಂದು ಬರಮಾ ದೇಶದ ಬಂದು ಪತ್ರಿಕೆಯು ತಿಳಿಸುತ್ತದೆ.

ಕಾಡಿನಲ್ಲಿ ತಿರುಗಿ ಕಟ್ಟಿಗೆಯಿಲ್ಲ ಅಂದಹಾಗೆ.

ಹುಚ್ಚರ ಆಸ್ಪತ್ರಿಗಳು ಎಲ್ಲೆಲ್ಲಿಯೂ ಇವೆ. ಅವುಗಳಲ್ಲಿ ವೈದ್ಯರು ವಿಧವಿಧವಾದ ಚಿಕಿತ್ಸೆಗಳನ್ನು ಮಾಡಿ ಔಷಧಗಳನ್ನು ಕಳೆದುಕೊಳ್ಳುವದೇ ಹೊರ್ತು ಪ್ರಾಯಶಃ ಹುಚ್ಚರಿಗೆ ಹುಚ್ಚು ಬಿಡುವದು ಅಪೂರ್ವವಾಗಿ ಇತ್ತು. ಸರ್ಜ್ಜಮೇಜರ್ ಹೆಚ್. ಡಿ. ಕುಕ್ ಸಾಹೇಬರವರು ಹುಚ್ಚು ಹಿಡಿಯುವದಕ್ಕೆ ಕಾರಣವೇನು ಎಂದು ಬಹುದಿವಸದಿಂದ ಆಲೋಚಿಸುತ್ತಿದ್ದರು. ಒಂದುದಿನ ಹಟಾತ್ತಾಗಿ ಒಬ್ಬ ಹುಚ್ಚನನ್ನು ಮಾತನಾಡಿಸುವದಕ್ಕೆ ಆತನ ಹೆಂಡತಿಯು ಆಸ್ಪತ್ರೆಗೆ ಬಂದಳು. ಅನಂತರದಲ್ಲಿ ಅವನಿಗೆ ಹುಚ್ಚು ಸ್ವಲ್ಪ ಕಡಿಮೆಯಾಯಿತು. ಆಕೆಯು ಹೀಗೆ ಮೂರು ನಾಲ್ಕು ದಿನ ಬರುವಾಗ್ಯೆ ಇವನ ಹುಚ್ಚು ಚೆನ್ನಾಗಿ ವಾಸಿಯಾಯಿತು. ೫ ವರ್ಷಗಳಿಂದಲೂ ಬಹಳ ಹುಚ್ಚನಾಗಿದ್ದ ಇವನಿಗೆ ಇಷ್ಟು ಬೇಗ ಗುಣವಾಗುವದಕ್ಕೆ ಕಾರಣವೇನೆಂದು ವಿಚಾರಿಸುವಲ್ಲಿ ಇವನಿಗೂ ಇವನ ಹೆಂಡತಿಗೂ ಕೆಲವು ಮನಃಕಷಾಯಗಳಿದ್ದವೆಂಬದಾಗಿಯೂ, ಆಕೆಯು ಅನೇಕ ದೃಷ್ಟಾಂತ ಪೂರ್ವಕವಾಗಿ ಇವನ ಮನಃಕಷಾಯಗಳನ್ನು ನಿವಾರಣೆ ಮಾಡಿದಳೆಂಬದಾಗಿಯೂ, ಇದರಿಂದ ಕೂಡಲೆ ಇವನಿಗೆ ಹುಚ್ಚು ಬಿಟ್ಟಿತು ಎಂಬದಾಗಿಯೂ ಗೊತ್ತಾಯಿತು. ಇದನ್ನೂ ಇನ್ನೂ ಅನೇಕ ಹುಚ್ಚರ ವಿದ್ಯಮಾನಗಳಲ್ಲಾ ಪರೀಕ್ಷಿಸಿ ಡಾಕ್ಟರ್ ಕುಕ್ ಸಾಹೇಬರು ಬರೆದಿರುವದು ಏನಂದರೆ :—

ಈ ಸಂಗತಿಗಳು ನನಗೆ ಮೊದಲೇ ತಿಳಿದಿದ್ದರೆ ಅವನ ಹೆಂಡತಿಯನ್ನು ಕರೆಸಿ ಅವನ ಹುಚ್ಚಿಗೆ ತಕ್ಕ ಚಿಕಿತ್ಸೆಯನ್ನು ಮಾಡಿಸುತ್ತಿದ್ದೆನು. ಇದರ ಪೂರ್ವೋತ್ತರ ಸಂದರ್ಭಗಳು ತಿಳಿಯದೆ ಇದ್ದದರಿಂದ ಅವನು ಇಷ್ಟು ದಿನ ಹುಚ್ಚನಾಗಿಯೇ ಇರಬೇಕಾಯಿತು. ಹೀಗೆಯೇ ಅನೇಕ ಹುಚ್ಚರ ಹುಚ್ಚನ್ನು ಅವರಿಗೆ ಹುಚ್ಚು ಹಿಡಿಯುವದಕ್ಕೆ ಮುಂಚಿನ ಸಂದರ್ಭಗಳು ತಿಳಿದರೆ ವಾಸಿಮಾಡ ಬಹುದು. ಹುಚ್ಚು ಹಿಡಿಯುವದಕ್ಕೆ ಲಕ್ಷಾಂತರ ಕಾರಣಗಳುಂಟು. ಅವುಗಳು ತಿಳಿಯದೆ ಅದನ್ನು ಪರಿಹಾರ ಮಾಡುವದಕ್ಕೆ ಆಗುವದಿಲ್ಲ. ನಾನು ೬೦೦ ಜನ ಹುಚ್ಚರ ಪೂರ್ವಾಪರಗಳನ್ನು ವಿಚಾರಿಸಿ ಗೊತ್ತು ಮಾಡಿ ಚಿಕಿತ್ಸೆಗಳಿಂದ ಅವುಗಳನ್ನು ನಿವಾರಣೆ ಮಾಡಿದೆನು. ಇದರಲ್ಲಿ ೩೭ ಜನಗಳಿಗೆ ನಿಷಾ ಬರತಕ್ಕ ಪದಾರ್ಥಗಳನ್ನು ಮಿತಿಮೀರಿ ತೆಗದು ಕೊಂಡದ್ದರಿಂದಲೂ, ೧೫ ಜನಕ್ಕೆ ಅನ್ನಕ್ಕೆ ಗತಿಯಿಲ್ಲದ್ದರಿಂದಲೂ, ೪ ಮಂದಿಗೆ ಅಲ್ಪ ಭೋಜನದಿಂದಲೂ, ೧೪ ಮಂದಿಗೆ ಅತ್ಯಂತ ದುಃಖದಿಂದಲೂ, ೯ ಮಂದಿಗೆ ಆಸ್ತಿನಾಶವಾದದ್ದರಿಂದಲೂ, ೯ ಮಂದಿಗೆ ಭಯದಿಂದಲೂ, ೬ ಮಂದಿಗೆ ಮತ ಸಿದ್ಧಾಂತಗಳನ್ನು ಓದಿದ್ದರಿಂದಲೂ, ೬ ಮಂದಿಗೆ ಸ್ತ್ರೀಪುರುಷವ್ಯಾಮೋಹದಿಂದಲೂ, ೪ ಮಂದಿಗೆ ಗೃಹಚ್ಛಿದ್ರಗಳಿಂದಲೂ, ೪ ಮಂದಿಗೆ ಗಂಡಹೆಂಡರ ಅಗಲಿಕೆಯಿಂದಲೂ, ಇಬ್ಬರಿಗೆ ಭಗ್ನಮನೋರಥದಿಂದಲೂ, ಮತಭ್ರಂಶ, ಕಾರಾಗೃಹಪ್ರಾಪ್ತಿ, ಅವಮಾನ, ಅಮಿತವಾಗಿ ಓದುವದು, ಇವುಗಳಿಂದ ಒಬ್ಬೊಬ್ಬನಿಗೂ ಹುಚ್ಚು ಹಿಡಿದು ಇತ್ತು. ಇಲಾ

ಕಾಡುಕೋಳಿಗೆ ಮಕರಸಂಕ್ರಾಂತಿಯೆ?

ಯಿತಿಯಲ್ಲಿ ಪ್ರಬಲವಾದ ಸರಕಾರದ ಉದ್ಯೋಗಸ್ಥರಿಗೆ ನಿರಂತರವಾಗಿ ಸರಕಾರದ ಕೆಲಸಗಳನ್ನು ನೋಡುವದರಿಂದಲೂ ಹುಚ್ಚು ಹಿಡಿಯುವದುಂಟು.

ಲಂಕಾಪಟ್ಟಣದ ಗವರ್ನರ್ ಸಾಹೇಬರು ಒಬ್ಬರಿಗೂ ತಿಳಿಯದಹಾಗೆ ತಮ್ಮ ದೇಶದ ಉತ್ತರಭಾಗಕ್ಕೆ ಹೋದರು. ಅದು ಬಹಳ ದರಿದ್ರರಾದ ಜನಗಳಿಂದ ತುಂಬಿ ಇತ್ತು. ಜನಗಳು ತಿನ್ನುವದಕ್ಕಿಲ್ಲದೆ ಕ್ಷಯರೋಗದವರಹಾಗೆ ಕಾಣುತ್ತಿದ್ದರು. ತನ್ನ ಕೈ ಕೆಳಗಿನ ಅಧಿಕಾರಿಗಳೆಲ್ಲಾ ಸಕಲ ಪ್ರಜೆಗಳೂ ಕ್ಷೇಮವಾಗಿ ಇದ್ದಾರೆ ಎಂದು ಹೇಳುತ್ತಿದ್ದದ್ದನ್ನು ಅಬದ್ಧವೆಂದು ಗೊತ್ತುಮಾಡಿಕೊಂಡು ಪ್ರಜೆಗಳ ಕ್ಷೇಮಾರ್ಥವಾಗಿ ಅನೇಕ ಹೊಸ ಏರ್ಪಾಡುಗಳನ್ನು ಮಾಡುತ್ತಾ ಇದ್ದಾರೆ. ರಾಜ್ಯಭಾರಮಾಡುವವರು ಹೀಗೆ ನಡೆದು ಕೊಂಡರೆ ಪ್ರಜೆಗಳಿಗೂ ತಮಗೂ ಕ್ಷೇಮವುಂಟು.

ಬೊಂಬಾಯಿಯಲ್ಲಿ ನೇಟೀವ್ ಜನಗಳ ಅಭಿವೃದ್ಧಿಗೋಸ್ಕರ ಒಂದು ಸಮಾಜವನ್ನು ಏರ್ಪಡಿಸಿ ಇದ್ದಾರೆ. ಇದಕ್ಕೆ ಅನೇಕಜನ ಲಕ್ಷಾಧಿಕಾರಿಗಳು ಸೇರಿ ಇದ್ದಾರೆ. ಆನರೆಬಲ್ ಸರ್ ಜಾಮಸೇಟ್ ಜಿಜಿ ಭಾಯಿಯವರು ಈ ಸಭೆಗೆ ಮುಖ್ಯಸ್ಥರಾಗಿ ಇದ್ದಾರೆ.

ಅಮೆರಿಕಾಖಂಡದಲ್ಲಿ ವರ್ತಮಾನಪತ್ರಿಕೆಗಳು ಒಂದು ವರ್ಷಕ್ಕೆ ೨೪೦೦೦,೦೦೦,೦೦೦ ಪ್ರತಿಗಳೂ, ಆಸ್ಟ್ರೇಲಿಯಾದಲ್ಲಿ ೧೧೨,೦೦೦,೦೦೦ ಪ್ರತಿಗಳೂ, ಯೂರೋಪ್ ಖಂಡದಲ್ಲಿ ೩೩೦೦,೦೦೦,೦೦೦ ಪ್ರತಿಗಳೂ ಖರ್ಚಾಗುತ್ತವೆ. ಇದರಿಂದ ಓದತಕ್ಕವರು ಯೂರೋಪ್ ನಲ್ಲಿಯೂ ಅಮೆರಿಕಾದಲ್ಲಿಯೂ ಬಹಳ ಜನಗಳಿದ್ದಾರೆಂದು ಗೊತ್ತಾಗುತ್ತೆ.

ಹೈದರಾಬಾದ್ ಪ್ರೈಮಿನಿಸ್ಟರು ನವಾಬ್ ಸಾಲಾರ್‌ಜಂಗರವರು ಕೆಲವು ರಾಜಕಾರ್ಯಾರ್ಥವಾಗಿ ಕಲ್ಕತ್ತೆಗೆ ಹೋಗಿ ಗವರ್ನರವರ ಭೇಟಿ ತೆಗೆದುಕೊಂಡರು.

ಈಗಿನ ಗವರ್ನರ್ ಜನರಲ್‌ರಾದ ಲಾರ್ಡ್ ಡಫರೀನ್ ಸಾಹೇಬರೂ ಇವರ ಪತ್ನಿಯರೂ ಬರಕ್ಕಪೂರ್‌ನಲ್ಲಿ ಬಂದು ಹಿಂದೂ ದೇವಾಲಯದ ಬಾಗಲಿಗೆ ಹೋಗಿ ಆದೇವಾಲಯದ ಮಹಾಜನಗಳ ಆಜ್ಞಾನುಸಾರವಾಗಿ ತಮ್ಮ ಮೋಜಾಗಳನ್ನು ಬಾಗಲಲ್ಲಿಯೇ ಕಳೆದುಬಿಟ್ಟು ಒಳಕ್ಕೆ ಪ್ರವೇಶಮಾಡಿ ಮಹಾದೇವ ಅನ್ನಪೂರ್ಣೆಯರ ಪ್ರಥಿಮೆಗಳನ್ನು ನೋಡಿದರು. ಅದರಲ್ಲಿ ಮಹಾದೇವನ ಪ್ರಥಿಮೆಯು ಅನ್ನಪೂರ್ಣೆಯ ಕಡೆಗೆ ತಿರುಗಿ ಕೊಂಡು ಕೇಳುವಹಾಗೆ ಇತ್ತು. ಅದನ್ನು ಕಂಡು 'ಈತನು ಯಾರು? ಆಕೆಯನ್ನು ಏನು ಕೇಳುತ್ತಾನೆ?' ಎಂಬದಾಗಿ ಡಫರೀನ್ ಸಾಹೇಬರವರು ಆ ದೇವಸ್ಥಾನದ ಮಹಾ

ಕಳ್ಳಹೊನ್ನಿಗೆ ದೊಡ್ಡ ಮುದ್ರೆ.

ಜನಗಳಲ್ಲಿ ಬಬ್ಬರನ್ನು ಕೇಳಿದರು. ಅದಕ್ಕೆ ಅತನು " ಅಯ್ಯಾ, ವರವನ್ನು ಕೆಳತಕ್ಕ ಈ ಮಹಾದೇವನು, ದೇವಾದಿ ದೇವನು ಮತ್ತು ಜಗದೀಶ್ವರನು. ಈಕೆಯು ಲೋಕವೂ ತೆಯಾಗಿಯೂ ಈತನಿಗೆ ಪತ್ನಿಯಾಗಿಯೂ ಇರತಕ್ಕ ಹೆಂಡತಿಯು. ಈತನು ಈಕೆಯನ್ನು ಈ ಪ್ರಪಂಚದ ಜನರಿಗೆಲ್ಲಾ ಕ್ಷೇಮಕೊಡು ಎಂದು ಪ್ರಾರ್ಥಿಸುತ್ತಾ ಇದ್ದಾನೆ " ಎಂದು ಹೇಳಿದನು. ಈ ಮಾತನ್ನು ಕೇಳಿ ಲಾರ್ಡ್ ಡಫರಿನ್ ಸಾಹೇಬರ ಹೆಂಡತಿಯು ಅತ್ಯಂತ ಸಂತೋಷಪಟ್ಟು ತನ್ನ ಗಂಡನ ಮುಖವನ್ನು ನೋಡಿ ' ಲೋಕದಲ್ಲಿ ಸ್ತ್ರೀಯರ ಶಕ್ತಿಯು ಹ್ಯಾಗೆ ಇದೆಯೋ ತಿಳಿದುಕೋ ' ಎಂದು ಹೇಳಿದಳು.

ಜಪಾನ್‌ನಲ್ಲಿ ಅನೇಕದ ಚಿಕ್ಕ ವಯಸ್ಸಿನ ಬಬ್ಬಿ ಸ್ತ್ರೀಯು ಬಂದು ವರ್ತಮಾನ ಪತ್ರಿಕೆಯನ್ನು ಬರೆಯುತ್ತಾಳೆ. ಅದು ಬಹಳ ಪ್ರಚಾರವಾಗಿ ಇದೆ. ಈಕೆಯು ತನ್ನ ಭಾಷೆಯಲ್ಲಿಯೂ ಇಂಗ್ಲಿಷ್ ಭಾಷೆಯಲ್ಲಿಯೂ ಬಹಳ ವಿದ್ವತ್ತನ್ನು ಸಂಪಾದಿಸಿ ಇದ್ದಾಳೆ.

ಹೈದರಾಬಾದಿನ ನಿಜಾಮರವರು ಪರಿವಾರ ಸಮೇತವಾಗಿ ಇಲಾಯಿತಿಗೆ ಹೋಗಬೇಕೆಂದು ಇದ್ದಾರೆ.

ಇಲಾಯಿತಿಯಲ್ಲಿ ಗಂಡಸರೇ ಮಾಡುತ್ತಿದ್ದ ಅನೇಕ ಕೆಲಸಗಳನ್ನು ಹೆಂಗಸರೂ ಮಾಡುವದಕ್ಕೆ ಉಪಕ್ರಮಿಸಿ ಇದ್ದಾರೆ. ೪೪೩ ಮಂದಿ ಹೆಂಗಸರು ಕಬ್ಬಿಣದ ಚಕ್ಕಟ್ಟಿಕೆಗಳನ್ನು ಹಿಡಿದು ಕಮ್ಮಾರರಂತೆ ಕಬ್ಬಿಣವನ್ನು ಸಾಗಬಡಿಯುತ್ತಾರೆ; ೯೧೪ ಮಂದಿ ಕಬ್ಬಿಣದ ಮೊಳೆಗಳನ್ನು ಮಾಡುತ್ತಾರೆ; ೧೦೫೯ ಮಂದಿ ಬುಕ್ಕುಗಳಿಗೆ ಬೈಂಡು ಮಾಡುತ್ತಾರೆ; ೨೩೦ ಮಂದಿ ಪ್ರಿಂಟರ್‌ಗಳಾಗಿ ಇದ್ದಾರೆ; ೧೦೪೫ ಮಂದಿ ಉಪಾಧ್ಯಾಯಿನಿಯರಾಗಿ ಇದ್ದಾರೆ; ೫೧೬ ಮಂದಿ ಪ್ರೀಚರುಗಳಾಗಿ ಇದ್ದಾರೆ; ೪೦೬ ಮಂದಿ ಮುತ್ಸದ್ದಿಗಳಾಗಿ ಇದ್ದಾರೆ; ೧೧೪೦ ಮಂದಿ ಚಿತ್ರಗಾರರಾಗಿ ಇದ್ದಾರೆ; ೧೦೦೦ ಮಂದಿ ವಿದ್ಯಾರ್ಥಿಗಳಾಗಿ ಇದ್ದಾರೆ; ೬೪ ಮಂದಿ ಕೆತ್ತನೆಕೆಲಸದವರಾಗಿ ಇದ್ದಾರೆ; ೪೯೧೦ ಮಂದಿ ವೈದ್ಯಶಾಸ್ತ್ರದಲ್ಲಿ ನಿಪುಣರಾಗಿ ರೋಗಿಗಳಿಗೆ ಔಷಧ ಕೊಡುತ್ತಾರೆ, ಮತ್ತು ವ್ರಣವೈದ್ಯವನ್ನು ಮಾಡುತ್ತಾರೆ; ೪೫೨ ಮಂದಿ ಹೊಸದಾಗಿ ಗ್ರಂಥಗಳನ್ನು ಬರೆಯುತ್ತಲೂ, ಅಚ್ಚು ಹಾಕಿಸುತ್ತಲೂ ಇದ್ದಾರೆ. ಹೀಗೆಯೇ ಅನೇಕರು ಇನ್ನೂ ನಾನಾವಿಧವಾದ ಕೆಲಸಗಳನ್ನೆಲ್ಲಾ ಮಾಡುತ್ತಾರೆ.

೯. ತಂತ್ರೀವರ್ತಮಾನ್ಯ ಸಂಗ್ರಹ.

ಜನವರಿ ೩೧.—ತಂಜಾವೂರಿನ ರಾಜನ ಮಗಳು ೪ಡಬು ಎದ್ದುಸತ್ತಳು.

ಕಳ್ಳ ಹೊಕ್ಕವನೆಗೆ ಎಣ್ಣೆದಂಡ.

ಫೆಬ್ರುಅರಿ ೯.—ಲಂಡನ್ ಪಟ್ಟಣದಲ್ಲಿ ದೊಡ್ಡದೊಡ್ಡ ಕಟ್ಟಣಗಳನ್ನು ಸುರಂಗ ಹಾಕಿ ಕೆಡವುವದಕ್ಕೋಸ್ಕರ ಕೆಲವರು ತುಂಟರು ಪ್ರಯತ್ನ ಮಾಡುತ್ತಾರೆಂದು ತಿಳಿದು ಇಂಗ್ಲಂಡಿನಲ್ಲಿರುವ ಬ್ಯಾಂಕಿನವರೂ ಸರ್ವಸ್ವುಪ್ರದರ್ಶನ ಶಾಲಾಧಿಕಾರಿಗಳೂ ಇನ್ನೂ ದೊಡ್ಡ ಕಟ್ಟಣಗಳುಳ್ಳವರೆಲ್ಲರೂ ಜಾಗರೂಕರಾಗಿ ಇದ್ದಾರೆ. ಡಾರ್ಬಿ ಎಂಬಪಟ್ಟಣದಲ್ಲಿ ಸುರಂಗದ ತೋಟುವನ್ನು ಇಟ್ಟುಕೊಂಡಿದ್ದ ಬಬ್ಬ ತುಂಟನನ್ನು ಹಿಡಿದು ಕೈದಿನಲ್ಲಿಟ್ಟರು. ಸರಕಾರದವರು ಇವರನ್ನೆಲ್ಲಾ ಹಿಡಿದು ಬಹಳವಾಗಿ ಶಿಕ್ಷಿಸಬೇಕೆಂದು ಇದ್ದಾರೆ.

ಫೆಬ್ರುಅರಿ ೫.—ಮುಸಲ್ಮಾನರಲ್ಲಿ ಅವರ ಮತಸ್ಥಾಪಕನಾದ ಮಹಮ್ಮದ್ ಎಂಬಾ ತನೇ ದೇವರಿಂದ ನಿಯುಕ್ತನಾದ ಮೋಕ್ಷಗುರುವೆಂದು ನಂಬಿ ಆತನು ಮಕ್ಕಾದಿಂದ ಮದೀನಾಕ್ಕೆ ಓಡಿಹೋದಂದಿನಿಂದ ಆತನ ಶಕವನ್ನು ಎಣಿಸುತ್ತಾರೆ. ಅನೇಕತುರುಕರು ಇನ್ನೊಬ್ಬ ಮಹಾಪುರುಷನು ತಮ್ಮಲ್ಲಿ ಹುಟ್ಟಿ ತಮ್ಮ ಮತವನ್ನು ಉದ್ಧಾರಮಾಡುವ ನೆಂದು ತಿಳಿದು ಇದ್ದರು. ಈಗ ಆಫ್ರಿಕಾಕ್ಕೆ ಸೇರಿದ ಸೋಡಾನ್ ಪಟ್ಟಣದ ತುರುಕರಲ್ಲಿ ಮಹಡಿ ಎಂಬುವ ನೊಬ್ಬನು ತನ್ನ ಜನಗಳಿಗೆಲ್ಲಾ ತಾನು ದೇವರಿಂದ ನಿಯುಕ್ತನಾಗಿ ಬಂದವನೆಂದು ಹೇಳಿ ಮುಸಲ್ಮಾನರ ಪ್ರಪಂಚವನ್ನು ಉದ್ಧಾರಮಾಡತಕ್ಕದ್ದೇ ತಮ್ಮ ಕೆಲಸವೆಂದು ಎಲ್ಲರಿಗೂ ಉತ್ಸಾಹವನ್ನುಂಟುಮಾಡಿ ಈಜಿಪ್ಟ್ ದೇಶದ ಧೊರೆಯು ಮುಸ ಲ್ಮಾನನಾಗಿದ್ದರೂ ಇಂಗ್ಲೀಷ್ ಜನರ ಪಕ್ಷಕ್ಕೆ ಸೇರಿ ಇರುವರಿಂದ ಆತನಮೇಲೆ ದ್ವೇಷವಿಟ್ಟು ಆತನಿಗೆ ಅನೇಕ ತೊಂದರೆಗಳನ್ನು ಮಾಡುತ್ತಿದ್ದನು. ಇದನ್ನು ಬಂದೋಬಸ್ತುಮಾಡು ವದಕ್ಕೋಸ್ಕರ ಚೀನಾ ಮುಂತಾದ ಅನೇಕದೇಶಗಳಲ್ಲಿ ಅತ್ಯಂತ ಪ್ರಖ್ಯಾತಿಯನ್ನು ಹೊಂ ದಿದ ಜನರಲ್ ಗಾರ್ಡ್ನ್ ಎಂಬಾತನನ್ನು ಇಂಗ್ಲೀಷ್ ಸರಕಾರದವರು ಕಳುಹಿಸಿಕೊಟ್ಟರು. ಈತನು ತನ್ನ ಜೊತೆಯಲ್ಲಿ ಇಂಗ್ಲೀಷ್ ಸೈನ್ಯವನ್ನು ತೆಗೆದು ಕೊಳ್ಳದೆ ತುರುಕರಲ್ಲಿಯೇ ಸ್ನೇಹಮಾಡಿಕೊಂಡು ಅವರಲ್ಲಿಯೇ ತಾನು ಸೇನಾನಾಯಕನಾಗಿ ಕಾರ್ಟೂಂ ಎಂಬ ಪಟ್ಟಣಕ್ಕೆ ಹೋಗಿ ಅಲ್ಲಿ ಮಹಡಿ ಎಂಬುವನ ಮೇಲೆ ಯುದ್ಧಮಾಡುತ್ತಿದ್ದನು. ಜನವರೀ ತಿಂಗಳು ೨೬ನೇ ತಾರೀಖಿನಲ್ಲಿ ಜನರ್ ಗಾರ್ಡ್ನ್‌ಗೆ ಆಪ್ತನಾಗಿದ್ದ ಫರಾಗ್ ಪಾಳ್ಯಾ ಎಂಬು ವನು ಶತ್ರುಪಕ್ಷದವರ ಪ್ರೇರಣೆಗೆ ಒಳಗಾಗಿ ತನ್ನ ಕೋಟೇಬಾಗಲನ್ನು ತೆಗೆದುಬಿಟ್ಟನು. ಗಾರ್ಡ್ನ್ ಈ ವರ್ತಮಾನವನ್ನು ತಿಳಿದು ಮಿಕ್ಕಾದ ಸೈನ್ಯವನ್ನು ಸೇರಿಸಿಕೊಂಡು ಯುದ್ಧ ಮಾಡುವದಕ್ಕೆ ಈಚಿಗೆ ಬರುವದರೊಳಗಾಗಿ ಶತ್ರುಪಕ್ಷದವರು ಮೇಲೆ ಬಿದ್ದು ಈತನನ್ನೂ ಈತನಿಗೆ ಆಪ್ತರಾದ ಅನೇಕಭೃತ್ಯರನ್ನೂ ಕೊಂದು ಹಾಕಿದರು. ಈತನು ಇಲಾಯಿತಿ ಯಲ್ಲಿ ಬಹಳ ಪ್ರಸಿದ್ಧನು. ಈತನಿಗೆ ಉಂಟಾದ ಈ ಅಕಾಲ ಮರಣಕ್ಕಾಗಿ ಇಲಾಯಿ ತಿಯಲ್ಲಿ ಸಕಲರೂ ದುಃಖಿಸುತ್ತಾರೆ. ಈ ಅಕೃತ್ಯವಾಡುವದಕ್ಕೆ ಕಾರಣಭೂತರಾದವ

ಕಾಡಲ್ಲಿ ಹೊಂಬಾಳೆ ಬಯಸಿದಹಾಗೆ.

ರನ್ನು ಶಿಕ್ಷಿಸುವದಕ್ಕೋಸ್ಕರ ಪೂರ್ವದಲ್ಲಿ ಅರಬ್ಬೀ ಪಾಳ್ಟಾನನ್ನು ಹಿಡಿದ ಉಲ್ಸು ಸಾಹೇ ಬರವರು ನೇಮಿಸಲ್ಪಟ್ಟು ಇದ್ದಾರೆ. ಇದಕ್ಕಾಗಿ ಇಲಾಯಿತಿಯಿಂದಲೂ ನಮ್ಮ ಹಿಂದೂ ದೇಶದಿಂದಲೂ ಸೈನ್ಯಗಳು ಹೊರಡುತ್ತಿವೆ. ಬಂಗಾಳಾ ಕ್ಯಾವಲ್ರಿಯಲ್ಲಿ ಒಂದು ರೆಜಿಮೆಂಟೂ, ಇಫೆಂಟ್ರಿಯಲ್ಲಿ ಎರಡೂ, ಬೊಂಬಾಯಿ ಇಫೆಂಟ್ರಿಯಲ್ಲಿ ೨ನೇದೂ, ಇವುಗಳೆಲ್ಲಾ ಕರ್ನಲ್ ಹಡ್ಸ್ಕ್ ಸಾಹೇಬರ ಕೈಕೆಳಗೆ ಹೊರಡುವವು. ಫೆಬ್ರುಅರೀ ತಾರೀಖು ೧೯ರಲ್ಲಿ ಜನರಲ್ ಅರಲ್ ಸಾಹೇಬರೂ ಕರ್ನಲ್ ಬ್ಯಾರ್ಕ್‌ಬರಿ ಸಾಹೇಬರೂ, ಕಾಬ್ರಿಕಾಯುದ್ಧದಲ್ಲಿ ಶತ್ರುಗಳನ್ನು ಸೋಲಿಸಿದರು. ಆದರೆ ಜನರಲ್ ಅರಲ್ ಸಾಹೇಬರು ಸತ್ತು ಹೋದರು. ಅವರ ಕೆಲಸವನ್ನು ಕರ್ನಲ್ ಬ್ಯಾರ್ಕ್‌ಬರಿ ಯವರು ತೆಗೆದುಕೊಂಡರು. ಲಂಡ್ಕ ಪಟ್ಟಣದಿಂದ ಸರ್‌ಜರಲ್ಡ್ ಜರ್ಡಂ ಸಾಹೇಬರೂ, ಸರ್ ಜಿ. ಆರ್. ಗ್ರೀವ್ಸ್ ಸಾಹೇಬರೂ, ಜನರಲ್ ಫ್ರೀಮ್ಯಾಂಟಲ್ ಸಾಹೇಬರೂ ಸೈನ್ಯಗಳೊಡನೆ ಈಜಿಪ್ಟ್‌ಗೆ ಹೊರಟು ಇದ್ದಾರೆ. ಮದರಾಸಿನಿಂದ ೧೨ನೇ ನೇಟಿವ್ ಇಫೆಂಟ್ರಿಯು ಹೊರಡುವದು. ಸೋಡಾ ದೇಶದಲ್ಲಿ ಗಾರ್ಡ್ನರ್ ಸಾಹೇಬರ ಮರಣದಲ್ಲಿ ಸೇರಿದ್ದವರನ್ನು ದಂಡಿಸುವದಕ್ಕೂ ಅಲ್ಲಿ ಕ್ರಮವಾದ ರಾಜ್ಯಭಾರವನ್ನು ಏರ್ಪಾಡುಮಾಡುವದಕ್ಕೂ ಇಂಗ್ಲೀಷ್ ಜನಗಳಿಗೆ ಬೇಕಾದ ಸಹಾಯವನ್ನು ಮಾಡುತ್ತೇವೆಂದು ಇಟಲೀ ದೇಶದ ಸರಕಾರದವರು ಒಪ್ಪಿಕೊಂಡು ಇದ್ದಾರೆ.

ಫೆಬ್ರುಅರಿ ೧೦.—ಬಳ್ಳಾರಿಯಲ್ಲಿ ೧೨–೧೩ ವಯಸ್ಸುಳ್ಳ ಇಬ್ಬರು ಹುಡಗಿಯರಿಗೆ ಕಾಸ್ಟ್ರೀಕ್ತವಾಗಿ ದ್ವಿತೀಯವಿವಾಹವು ಈದಿನ ನಡೆಯಿತು. ಅವರಿಬ್ಬರೂ ದೇಶಸ್ಥ ಬ್ರಾಹ್ಮಣರು. ಈ ವಿವಾಹೋತ್ಸವವು ನಡೆಯತಕ್ಕ ಕಾಲದಲ್ಲಿ ಆವೂರಿನ ದೊಡ್ಡಮನುಷ್ಯರೆಲ್ಲರೂ ಬಂದಿದ್ದರು.

ಫೆಬ್ರುಅರಿ ೧೪.—ಫ್ರೆಂಚ್ ಜನರು ಆಫ್‌ಘಾನಿಸ್ಥಾನದ ಹೀರಾಟ್ ಪಟ್ಟಣ ತೆಗೆದುಕೊಂಡರೆಂಬ ವರ್ತಮಾನವಿದೆ.

ಫೆಬ್ರುಅರಿ ೧೬.—ಮಹಡಿ ಎಂಬುವನ ಪಕ್ಷದವರನ್ನು ಶಿಕ್ಷಿಸುವದಕ್ಕೆ ಆಸ್ಟ್ರೇಲಿಯಾ ದೇಶದಿಂದ ಇಂಗ್ಲೀಷ್ ಜನರಿಗೆ ಸಹಾಯಮಾಡುವದಕ್ಕೋಸ್ಕರ ಬಂದು ರೆಜಿಮೆಂಟ್ ಹೊರಡುವದರಲ್ಲಿದೆ. ಇಂಡಿಯಾ ದೇಶದ ಸೈನ್ಯಗಳು ಈಜಿಪ್ಟ್‌ಕಡೆಗೆ ಹೋಗುವದಕ್ಕೋಸ್ಕರ ೨೩ನೇ ಹೊಗೇ ಹಡಗುಗಳನ್ನು ನೇಮಕಮಾಡಿ ಇದ್ದಾರೆ. ಇಂಡಿಯಾದಿಂದ ಸೋಡಾನಿಗೆ ಯುದ್ಧಕ್ಕೆ ಹೋಗತಕ್ಕವರ ಹೆಚ್ಚು ಖರ್ಚುಗಳನ್ನೆಲ್ಲಾ ಇಲಾಯಿತೀ ಸರಕಾರದವರೇ ಕೊಡುವಂತೆ ನೇಮಕವಾಗಿ ಇದೆ.

ಕಳ್ಳರಲ್ಲಿ ಕಡುಕಳ್ಳರು ಹೊಕ್ಕ ಹಾಗೆ.

೧೦. ಕರೆನ್ಸಿ ಪೌಂಡ್ಸ್.

ಚೆನ್ನರಾಯಪಟ್ಟಣದ ತಾಲ್ಲೂಕು ಹಿರೀಸಾವೇಗ್ರಾಮದಲ್ಲಿರುವ ಶಾಂತವೀರಶಟ್ಟರ ರುದ್ರಣ್ಣನವರು ಶಿಥಿಲವಾಗಿ ಹೋಗಿದ್ದ ರಾಮೇಶ್ವರನ ದೇವಸ್ಥಾನವನ್ನು ೪೫೦ ರೂಪಾಯಿ ವರಿಗೂ ಮುಟ್ಟಿಸಿ ಜೀರ್ಣೋದ್ಧಾರ ಮಾಡಿರುತ್ತಾರೆ. ಇದಲ್ಲದೆ ಚಿಕ್ಕಬೀದಿ ನಿಂಗಣ್ಣನವರು, ನಂಜಣ್ಣನವರು, ಮೇಸ್ತ್ರೀ ಪುಟ್ಟಣ್ಣನವರು, ಬಸವಾಚಾರಿಯವರು, ಗಂಗಾಚಾರಿಯವರು, ಈ ಜನರೆಲ್ಲರೂ ಸೇರಿ ಬಸವಣ್ಣ, ವಿನಾಯಕ, ರುದ್ರದೇವರು, ಆಂಜನೇಯ, ಚನ್ನಕೇಶ್ವರ ಈ ದೇವಸ್ಥಾನಗಳನ್ನು, ೧೬೦, ೬೦, ೧೦೦, ೧೫೦, ೧೦೦, ರೂಪಾಯಿಗಳನ್ನು ಮುಟ್ಟಿಸಿ ರಿಪೇರೀ ಮಾಡಿಸಿರುತ್ತಾರೆ.. ಇದಕ್ಕಾಗಿ ನಾನು ಪೂರ್ಣ ಸಂತುಷ್ಟನಾಗಿ ಇದ್ದೇನೆ. ಇವುಗಳಲ್ಲೆಲ್ಲಾ ಭೂರಿಯಾದ ಚೌಡೇಶ್ವರೀ ದೇವಸ್ಥಾನವನ್ನು ೧೦೦೦ ರೂಪಾಯಿ ವರಿಗೂ ಮುಟ್ಟಿಸಿ ಮಾಡಿಸುವ ಪುಣ್ಯಾತ್ಮರಿಗೆ ಬಹಳ ಕೀರ್ತಿ ಬರುವದು.

ತಮ್ಮ ವಿಧೇಯನಾದ, ಹಿರೀಸಾವೆ ಎಂ. ವೆಂಕಟನರಸಯ್ಯ.

೧೧. ಒಗಟೆಗಳು.

ಈನೇ ಸಂಚಿಕೆಯಲ್ಲಿನ ಒಗಟೆಗಳಿಗೆ ಉತ್ತರ.

(೧.) ಪಾಂಥರು, ವಿರಹಿಗಳು, ಅವರಿಗೆ ಶತ್ರು ಮನ್ಮಥನು. ಅವನಿಗೆ ಶತ್ರು ಹರನು. ಅವನ ಅಂಗನೆ ಗಂಗೆ. ಅವಳ ಮಗ ಭೀಷ್ಮ. ಅವನ ವಿಭು ದುರ್ಯೋಧನ. ಅವನ ಭೃತ್ಯ ಕರ್ಣನು. ಅವನ ಪರ್ಮಹರ್ತಾ ಇಂದ್ರನು. ಅವನ ಮಗ ವಾಲಿ. ತತ್ಪತ್ನೀ ತಾರೆ. ಅವಳೊಡಹುಟ್ಟಿದ್ದು ಕೌಸ್ತುಭ. ಅದನ್ನು ಧರಿಸಿದವ ಕೃಷ್ಣನು. ಅವನ ಭಗಿನಿ ಸುಭದ್ರೆ. ತತ್ಪತಿ ಅರ್ಜುನ. ಅವನ ಮಗ ಅಭಿಮನ್ಯು. ಅವನ ಸ್ತ್ರೀ ಉತ್ತರೆ. ಅವಳ ತಂದೆ ವಿರಾಟನು. ಅವನ ಮಗ ಉತ್ತರ. ಅವನ ಮೂವ ಕೀಚಕ. ಅವನ ವೈರಿ ಭೀಮನು. ಅವರ ತಂದೆ ವಾಯು. ಅವನ ಮಗ ಹನುಮಂತ. ಅವನ ಒಡೆಯ ಸುಗ್ರೀವ. ಅವನ ಒಡೆಯ ರಾಮನು. ಅವನ ಹೆಂಡತಿ ಜಾನಕಿ. ಆಕೆಯ ತಾಯಿ ಭೂಮಿ. ಅದನ್ನು ಧರಿಸಿದ್ದು ಪರ್ವತ. ಅದರ ರಾಜ ಹಿಮವಂತ. ಅವನ ಮಗ ಮೈನಾಕ. ಅವನ ಮಿತ್ರ ಸಮುದ್ರ. ಅವನ ಪುತ್ರಿ ಲಕ್ಷ್ಮಿ. ಆಕೆಯ ಕಟಾಕ್ಷವು ನಮಗೆ ಇರಲಿ.

(೨.) ಹನ್ನೊಂದನೇ ವರುಷದವ ಈಶ್ವರನು. ಅವನ ನೆತ್ತಿಯನ್ನೇರಿದವ ಚಂದ್ರನು. ಅವನ ಸೋದರ ಸೂರ್ಯನು. ಅವನ ಮಿತ್ರ ತಾವರೆ. ಅವರಲ್ಲಿ ಜನಿಸಿದವ ಬ್ರಹ್ಮನು. ಆತನ ಪತ್ನಿಯಾದ ಸರಸ್ವತಿಯು ನಮ್ಮ ನಾಲಿಗೆಯ ತುದಿಯಲ್ಲಿ ಇರಲಿ.

(೩.) ದಾಳಿಂಬೇಹಣ್ಣು. (೪.) 1-ವೀ, 2-ರ, 3-ಮು, 4-ಕಟಕಂ, 5-ಪಿತಾ, 6-ವೀರಮೆರ್ಕಟಕಂಪಿತಾ.

ಅಂತಬೋಧಿನಿ.

ಸಂಪುಟ ೨.] ಏಪ್ರಿಲ್ ೧೮೮೫. [ಸಂಚಿಕೆ ೪.

೧. ವೈದ್ಯಶಾಸ್ತ್ರ.

ಚಳೀಜ್ವರದಲ್ಲಿ ೨—೩ ವಿಧಗಳುಂಟು. (೧) ಪ್ರತಿದಿನದಲ್ಲಿಯೂ ಚಳಿ ಬಂದು ಅನಂತರ ಜ್ವರ ಬಂದು ನಿಂತುಹೋಗುವದು. (೨) ಬಂದು ದಿನ ಬಿಟ್ಟು ಪುನಃ ಬರುವದು. (೩) ಎರಡು ದಿನ ಬಿಟ್ಟು ಬರುವದು. ಈ ಪ್ರತಿಯೊಂದರಲ್ಲಿಯೂ ಮೊದಲು ಚಳಿ ಬರುವದು, ಆ ಮೇಲೆ ಜ್ವರ ಬರುವದು, ಅನಂತರದಲ್ಲಿ ಮೈಯೆಲ್ಲಾ ಬೆವರುವದು. ಚಳಿ ಬಂದಕಾಲದಲ್ಲಿ ಶರೀರವೆಲ್ಲಾ ಬೆಳ್ಳಗಾಗುವದು; ಉಸುರು ಬಿಡುವದು ವೇಗವಾಗುವದು; ಅತ್ಯಂತ ಚಳಿಯಿಂದ ಶರೀರವು ಕಂಪಿಸುವದು; ಅನಂತರದಲ್ಲಿ ಕ್ರಮೇಣ ಶಾಖವು ಹೆಚ್ಚಾಗುವದು. ಇದನ್ನು ಜ್ವರವೆನ್ನುತ್ತಾರೆ. ಜ್ವರವು ಬಹಳವಾಗುವದರಿಂದ ತಲೆನೋಯುವದು; ಮತ್ತು ಬರುವದು; ನಾಡಿಯು ಬಹು ವೇಗವಾಗಿ ನಡೆಯುವದು; ದಾಹ ಹೆಚ್ಚುವದು; ಅನಂತರದಲ್ಲಿ ಶರೀರವೆಲ್ಲಾ ಬೆವರುವದು. ಇದೇ ಜ್ವರವು ಬಿಟ್ಟದ್ದಕ್ಕೆ ಗುರುತು. ಸಾಧಾರಣವಾಗಿ ಈ ರೋಗದ ಉಲ್ಬಣವು ೮ ಘಂಟೆಗಳವರಿಗೂ ಇರುವದು.

ಈ ವಿಧವಾದ ಜ್ವರವು ಬರುವದಕ್ಕೆ ದೌರ್ಬಲ್ಯವು ಮೊದಲನೇ ಕಾರಣ. ಆದರೆ ಬಚ್ಚಲು ಮುಂತಾದವುಗಳಲ್ಲಿ ನಿಂತ ಕಶ್ಮಲವಾದ ನೀರಿನಲ್ಲಿ ಸೊಪ್ಪುಸೆದೆ ಮುಂತಾದವುಗಳು ಕೊಳೆತು ಅದರಿಂದ ವಿಷಮಯವಾದ ಬಂದು-ಹಬೆಯು ಮೇಲಕ್ಕೆ ಎದ್ದು, ಗಾಳಿಯಲ್ಲಿ ಸೇರಿ, ಅದನ್ನು ಉಚ್ಛ್ವಾಸವಾಯುವಿನೊಡನೆ ಸೇದಿಕೊಳ್ಳುವವರ ರಕ್ತಕ್ಕೆ ಸೇರಿ ಅದನ್ನು ಕೆಡಿಸುವದರಿಂದಲೂ, ಅನ್ನಕೋಶಕ್ಕೂ ಕರುಳಿಗೂ ಬಾಧಕರವಾದ ವಸ್ತುಗಳನ್ನು ಭುಜಿಸುವರಿಂದಲೂ ಈ ಜ್ವರವು ಬರುವದು.

ಚಳೀಜ್ವರವು ಪ್ರಬಲವಾದ ರೋಗವಲ್ಲ, ಅಂದರೆ ಇದು ಸುಲಭವಾದ ಚಿಕಿತ್ಸೆಗಳಿಂದ ಗುಣವಾಗುವದು. ಚಳೀಜ್ವರ ಬಂದಾಗ ರೋಗಿ

ಯನ್ನು ಶಾಖವಾದ ಹಾಸಿಗೆಯಲ್ಲಿ ಮಲಗಿಸಿ ಶಾಖವಾದ ಹೊದಿಕೆಯನ್ನೇ ಹೊದ್ದಿಸಬೇಕು. ಗಂಜಿ ಮುಂತಾದವುಗಳನ್ನು ಉಗುರು ಬೆಚ್ಚಗೆಮಾಡಿ ಕೊಡುವದು ಉತ್ತಮ. ಜ್ವರವು ಹೆಚ್ಚಾಯಿತೆಂಬದಾಗಿ ಗಾಬರಿಪಡುವದರಿಂದ ಪ್ರಯೋಜನವಿಲ್ಲ. ಅವಿವೇಕವಾದ ಚಿಕಿತ್ಸೆಗಳೇನೂ ಮಾಡದೆ ಇದ್ದರೆ ಜ್ವರವು ತನ್ನಷ್ಟಕ್ಕೆತಾನೇ ಗುಣವಾಗುವದು. ಇದಕ್ಕೆ ಕ್ವಿನ್ಯೈನ್ ಮತ್ತು ಪಾಷಾಗಳೆರಡೂ ಪರಮೌಷಧಗಳು. ಪಾಷಾಣಕ್ಕಿಂತಲೂ ಕ್ವಿನ್ಯೈನ್ ಉತ್ತಮವಾದದ್ದು. ಯಾಕಂದರೆ, ಪಾಷಾಣವು ರೋಗಗಳನ್ನು ಗುಣ ಮಾಡಿದರೂ ಶರೀರಕ್ಕೆ ಬಾಧಕವೆನ್ನುಂಟುಮಾಡುವದು. ಕ್ವಿನ್ಯೈನ್ ಹಾಗಲ್ಲದೆ ರೋಗಗಳನ್ನು ಹಿಡಿಯುತ್ತದೆ ಮತ್ತು ಶರೀರಕ್ಕೆ ಶಕ್ತಿಯನ್ನು ಕೊಡುತ್ತದೆ. ಕ್ವಿನ್ಯೈನ್ ಹೆಚ್ಚಾಗಿ ತೆಗೆದುಕೊಂಡರೆ ಕಿವಿಯಲ್ಲಿ ಬಂದು ವಿಧವಾದ ಶಬ್ದವು ಕೇಳಬರುವದು; ಕಿವಿಯು ಮುಚ್ಚಿಕೊಂಡು ಹೋಗುವದು; ತಲೆ ತಿರುಗುವದು. ಆದರೆ ಇವುಗಳಿಂದ ಬಾಧಕವೇನೂ ಇಲ್ಲ. ಸ್ವಲ್ಪ ಹೊತ್ತಿನೊಳಗಾಗಿ ಇವೆಲ್ಲಾ ನಿಂತುಹೋಗುವವು. ಗಂಧಕದೊಡನೆ ಸೇರಿದ ಕ್ವಿನ್ಯೈನ್ ಗುಳಿಗೆಗಳನ್ನು ಜ್ವರ ಬಿಟ್ಟುರತಕ್ಕ ಕಾಲದಲ್ಲಿ ೩ ಘಂಟೆಗೆ ಬಂದುಸಾರಿ ಬಂದೊಂದು ಗುಳಿಗೆಯ ಪ್ರಕಾರ ೩—೪ ಗುಳಿಗೆಗಳನ್ನು ತೆಗೆದು ಕೊಳ್ಳುವದರೊಳಗಾಗಿ ಚಳೀಜ್ವರವು ನಿಂತು ಹೋಗುವದು. ಸಾಧಾರಣವಾಗಿ ೧ ಸಾರಿ ತೆಗದುಕೊಂಡರೇನೇ ನಿಂತುಹೋಗುವದುಂಟು. ಒಂದೊಂದು ಗುಳಿಗೆಯು ೪ ಅಥವಾ ೫ ಗುಲಗಂಜಿಯಷ್ಟಾದರೂ ಇರಬೇಕು. ಶೀತಪ್ರದೇಶಗಳಲ್ಲಿ ಸೊಪ್ಪು ಸೆದೆ ಮುಂತಾದವುಗಳು ಕೊಳೆತು ಈ ಜ್ವರವು ರೂಢಿಯಾಗಿ ಬರುವದಾದ್ದರಿಂದ ಅಲ್ಲಿ ವಾಸಮಾಡುವವರು ಈ ಕ್ವಿನ್ಯೈನನ್ನು ಹತ್ತರ ಇಟ್ಟುಕೊಂಡೇ ಇದ್ದರೆ ಬಳಿಕ್ಕೀದು.

ನಮ್ಮ ಜನಗಳಲ್ಲಿ ಅನೇಕರು ಕ್ವಿನ್ಯೈನ್ ತೆಗೆದುಕೊಳ್ಳುವದರಿಂದ ಜ್ವರವು ನಿಲ್ಲುವದಿಲ್ಲವೆಂತಲೂ, ಬಂದುವೇಳೆ ನಿಂತರೂ ಅಸ್ತಿಗತವಾಗಿರುವದೆಂತಲೂ, ಆದ್ದರಿಂದ ಕ್ವಿನ್ಯೈನ್ ತೆಗೆದು ಕೊಳ್ಳಕೂಡದೆಂತಲೂ ಹೇಳುತ್ತಾರೆ. ಇದು ಅನುಭವಸಿದ್ಧವಾದ ಮಾತಲ್ಲ. ಬಂದುವೇಳೆ ಈ ಕ್ವಿನ್ಯೈನ್

ಕಾಲ ತೋಚಿದ ಹಾವು ಕಚ್ಚಿದೆ ಬಿಡದು.

ಹೊಟ್ಟೆಯಲ್ಲಿ ನಿಂತರೂ ಅದು ಭೇದಿಕಾರಿಯಾದ್ದರಿಂದ ಶರೀರಕ್ಕೆ ಬಲಕೊಡುವದೇ ಹೊರ್ತು ಇದರಿಂದ ಅವಗುಣಗಳೇನೂ ಇಲ್ಲ. ಇದನ್ನು ತೆಗೆದು ಕೊಂಡಮೇಲೆ ಮಜ್ಜಿಗೆ ಹಾಕಿಕೊಂಡರೆ ವಿರೋಧಿಸುವದುಂಟು. ಆದರೆ ಮೊದಲಿನಿಂದಲೂ ಮಜ್ಜಿಗೆಯನ್ನು ಹಾಕಿಕೊಳ್ಳುತ್ತಿದ್ದರೆ ಯಾವಬಾಧೆಯೂ ಇಲ್ಲ. ಚಳೀ ಜ್ವರಕ್ಕೆ ಉತ್ತಮವಾದ ಔಷಧವು ಕ್ವಿನೈನೇ. ಯಾಕಂದರೆ, ಇದನ್ನು ತೆಗೆದುಕೊಳ್ಳುವದರಲ್ಲಿ ಸ್ವಲ್ಪ ಹೆಚ್ಚಾದರೂ ಕಡಿಮೆಯಾದರೂ ಬಾಧಕವಿರುವದಿಲ್ಲ. ಇದರಿಂದ ಪರಿಹಾರವಾಗದೆ ಇರತಕ್ಕ ಜ್ವರಕ್ಕೆ ಪಾಷಾಣಚಿಕಿತ್ಸೆಯನ್ನು ಮಾಡುವದುಂಟು. ಈ ಪಾಷಾಣವನ್ನು ತೆಗೆದು ಕೊಳ್ಳುವದರಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ ಪ್ರಮಾದ ಸಂಭವಿಸುವ ದಾದ್ದರಿಂದ ಈ ಚಿಕಿತ್ಸೆಯನ್ನು ಮಾಡಿಸಿಕೊಳ್ಳತಕ್ಕ ರೋಗಿಗಳು ತಮ್ಮ ಶರೀರಸ್ಥಿತಿಯನ್ನು ಚನ್ನಾಗಿ ತಿಳಿದು ಅನುಭವಶಾಲಿಗಳೂ ಸಮರ್ಥರೂ ಆದ ವೈದ್ಯರಿಂದ ಚಿಕಿತ್ಸೆಮಾಡಿಸಿಕೊಳ್ಳಬೇಕು. ತಾವು ಸ್ವಂತವಾಗಿ ಚಿಕಿತ್ಸೆ ಮಾಡಿಕೊಳ್ಳಕೂಡದು.

ಚಳೀಜ್ವರ ಬಂದವರಿಗೆ ಮೊದಲು ಭೇದೀ ಔಷಧಕೊಟ್ಟು ಆನಂತರದಲ್ಲಿ ಜಾಡರಹುಳದ ಪೊರೆಯನ್ನು ೧೦ ಗುಲಗಂಜಿಯ ತೂಕ ನೀರಿನಲ್ಲಿ ಕೊಟ್ಟರೆ ಜ್ವರವು ಹರಿಸುವದು. ಶುಂಠಿ ಮತ್ತು ಮೆಣಸಿನ ಕಷಾಯವಿಟ್ಟು ಅದನ್ನು ತೆಗೆದುಕೊಳ್ಳುತ್ತಿದ್ದರೆ ಜ್ವರವು ನಿಧಾನವಾಗಿ ಗುಣವಾಗುವದು. ರೋಗಿಗಳಿಗೆ ಅತ್ಯಂತ ಸಂತೋಷವಾಗತಕ್ಕ ಏನಾದರೂ ಬಂದು ಚಮತ್ಕಾರಮಾಡುವದರಿಂದಲೂ ಅನೇಕವೈದ್ಯರು ಜ್ವರವನ್ನು ಗುಣಮಾಡಿ ಇದ್ದಾರೆ. ರೋಗಿಗಳಿಗೆ ಆಗಾಗ್ಯೆ ಜೀರ್ಣಕ್ಕೆ ಸುಲಭಸಾಧ್ಯವಾಗಿರತಕ್ಕ ಆಹಾರವನ್ನು ಕೊಟ್ಟು ಪೋಷಿಸುತ್ತಾ ಇರಬೇಕು. ಕ್ವಿನೈನ್ ೭೦ ಗುಲಗಂಜಿಯ ತೂಕ, ಡೋರ್ಸ್‌ಪೌಡರ್ ೧೦ ಗುಲಗಂಜಿಯ ತೂಕ, ಆರಬ್ಬೀಗೋಂದು ೧೦ ಗುಲಗಂಜಿಯ ತೂಕ, ಸಬ್ ಕಾರ್ಬೊನೇಟ್ ಆಫ್ ಐರ್ನ್ ೧೦ ಗುಲಗಂಜಿಯ ತೂಕ, ಇವೆಲ್ಲಾ ಮಿಶ್ರಮಾಡಿ ೭೦ ಮಾತ್ರೆಗಳನ್ನು ಮಾಡಿ ಜ್ವರಬರುವದಕ್ಕೆ ಮುಂಚೆಯೇ ೭ ಘಂಟೆಗೆ ೧ ಸಾರಿ ಎರಡೆರಡು ಮಾತ್ರೆಗಳನ್ನೂ

ಕಾಲಿದ್ದವರು ಕಾಶಿಗೆ ಹೋದರೆ ನೀನೆಲ್ಲಿಗೆ ಹೋದಿ ಕುಂಟುವುದವ?

ಪ್ರಾತಃಕಾಲದಲ್ಲಿ ಬಂದನ್ನೂ ಸಾಯಂಕಾಲದಲ್ಲಿ ಬಂದನ್ನೂ ತೆಗೆದುಕೊಂಡರೆ ಜ್ವರವು ಪರಿಹರಿಸುವದು.

ಕೆಲವರಿಗೆ ಕೈಕಾಲುಗಳನ್ನು ಶೀತವಾದ ಗಾಳಿಗೆ ಬಿಟ್ಟುಕೊಂಡು ಇರುವದರಿಂದ ಚಳೀಜ್ವರ ಬರುವದು. ಇವರು ಯಾವಾಗಲೂ ಕೈಕಾಲುಗಳಿಗೆ ಚೀಲಗಳನ್ನು ಹಾಕಿ ಕೊಂಡಿರುವದು ಉತ್ತಮ. ಹಾಗಿದ್ದರೂ ಬಂದುವೇಳೆ ಬಂದಲ್ಲಿ ವಿಸ್ಕಿ ಎಂಬ ತೀಕ್ಷ್ಣವಾದ ಬಂದುವಿಧವಾದ ಬ್ರಾಂದಿಯನ್ನು ಮೋಜಾಗಳಿಗೆ ಹಾಕಿ ಅವುಗಳನ್ನು ಮೆಟ್ಟಿ ನಡೆಯುತ್ತಿದ್ದರೆ ವಾಸಿಯಾಗುವದು.

೨. ಆರೋಗ್ಯವಿಚಾರ.

ಆರೋಗ್ಯವಂತರಾಗಿ ಇರುವದಕ್ಕೋಸ್ಕರ ನಿರ್ಮಲವಾದ ನೀರಿನಲ್ಲಿ ರೋಮುಕೂಪಗಳಲ್ಲಿರತಕ್ಕ ಕಶ್ಮಲವೆಲ್ಲಾ ಹೋಗುವಂತೆ ತೊಳೆದುಕೊಂಡು ಸ್ನಾನಮಾಡಬೇಕು. ಮತ್ತು ಪ್ರತಿದಿವಸದಲ್ಲಿಯೂ ಬಗೆದು ನಿರ್ಮಲವಾಗಿರತಕ್ಕ ಬಟ್ಟೆಗಳನ್ನು ಉಡಬೇಕು. ಹಾಗಿಲ್ಲದೆ ಉಟ್ಟಬಟ್ಟೆಯನ್ನೇ ಪುನಃ ಉಡುವದರಿಂದ ನವ್ಯ ರೋಮುಕೂಪಗಳಿಂದ ಈಚಿಗೆ ಹೊರಟ ಕಶ್ಮಲವೆಲ್ಲಾ ಆ ಬಟ್ಟೆಗಳಿಗೆ ಅಂಟಿಕೊಂಡಿದ್ದು ಅವುಗಳನ್ನು ಉಟ್ಟುಕೂಡಲೆ ಪುನಃ ಶರೀರಕ್ಕೆ ಸೇರಿ ಅನಾರೋಗ್ಯವನ್ನು ಉಂಟುಮಾಡುವದು. ಇದಲ್ಲದೆ ಬಟ್ಟೆಗಳನ್ನು ಆಗಾಗ್ಗೆ ಬಗೆಯುತ್ತಿದ್ದರೆ ಅವು ಒಹುದಿನ ಬಾಳಿಕೆ ಬರುವವು. ಹಾಗೆ ಬಗೆಯದೆ ಇದ್ದರೆ ಬಟ್ಟೆಯ ಎಳೆಗಳ ಮಧ್ಯದಲ್ಲೆಲ್ಲಾ ಮಣ್ಣು ತುಂಬಿಕೊಂಡು ಶರೀರದ ಕಶ್ಮಲಗಳನ್ನು ಈಚಿಗೆ ಬಿಡದೆ ಬಾಧಕವನ್ನು ಉಂಟುಮಾಡುವದು.

"ತಲೆಯು ತಣ್ಣಗೂ ಕಾಲು ಬೆಚ್ಚಗೂ ಇರಬೇಕು" ಎಂಬುವದು ವೈದ್ಯಶಾಸ್ತ್ರದ ನಿಬಂಧನೆಯು, ಅಂದರೆ ಕೈಕಾಲುಗಳನ್ನು ಬಿಟ್ಟುಕೊಂಡಿರುವದರಿಂದಲೂ ಒದ್ದೇ ಮೋಜಾಗಳನ್ನು ಮೆಟ್ಟುವದರಿಂದಲೂ ಅವು ತಣ್ಣಗಾಗುವವು; ವಿಪರೀತ ವ್ಯಸನ ದುಃಖ ಸಂತೋಷಾದಿಗಳಿಂದಲೂ ಭಾರವಾದ

ಕಿಂಚಿತದಲ್ಲಿ ವಂಚನೆ ಏನು?

ಟೋಪಿ ರುಮಾಲುಗಳಿಂದಲೂ ತಲೆಯು ಶಾಖವುಳ್ಳದ್ದಾಗುವದು. ಈ ಎರಡೂ ಶರೀರಕ್ಕೆ ಬಾಧಕವನ್ನು ಉಂಟುಮಾಡುವವುಗಳು. ಮೋಜಾ ಗಳೂ ಜೋಡುಗಳೂ ವಿಸ್ತಾರವಾದ ಹಿಮ್ಮಡಿಗಳುಳ್ಳವುಗಳಾಗಿಯೂ ಕಾಲು ಕಡಿಯದೆ ಇರುವಷ್ಟು ಸಡಿಲವಾಗಿಯೂ ಇರಬೇಕು. ಮೋಜಾ ಗಳು ಅಥವಾ ಜೋಡುಗಳು ಅಕಸ್ಮಾತ್ತಾಗಿ ಒದ್ದೆಯಾದರೆ ಅವುಗಳನ್ನು ಹಾಕಿಕೊಂಡು ನಡಿಯುತ್ತಾ ಇರುವವರಿಗೂ ಅವುಗಳಿಂದ ಬಾಧಕವಾಗುವ ದಿಲ್ಲ. ಆದರೆ ಮನೆಗೆ ಬಂದಕೂಡಲೆ ಅವುಗಳನ್ನು ತೆಗೆದುಹಾಕಿ ಶಾಖ ಹುಟ್ಟುವವರಿಗೂ ಬಂದು ಬಟ್ಟೆಯಿಂದ ಕಾಲನ್ನು ಉಜ್ಜಬೇಕು ಅಥವಾ ಬಿಸಿಯಾಗುವವರಿಗೂ ಬೆಂಕಿಯಲ್ಲಿ ಕಾಸಿಕೊಳ್ಳಬೇಕು.

ಮಿತಿಮೀರಿ ಎತ್ತರವಾಗಿಯಾಗಲೀ ತಗ್ಗಾಗಿಯಾಗಲೀ ಇರತಕ್ಕ ಹಿಮ್ಮಡಿಗಳಿರುವ ಮೋಜಾಗಳನ್ನಾಗಲೀ ಜೋಡುಗಳನ್ನಾಗಲೀ ಹಾಕಿಕೊ ಳ್ಳುವದು ಶುದ್ಧ ಅಸಂಗತವು. ಅನೇಕ ವೈದ್ಯರು ಜೋಡುಗಳನ್ನು ಹಾಕಿ ಕೊಳ್ಳುವದರಿಂದ ಚರ್ಮವು ತೆಳುವಾಗುವದು ಎಂಬುದಾಗಿಯೂ, ಹಾಗೆ ತೆಳುವಾದ ಚರ್ಮವುಳ್ಳವರು ತಮ್ಮ ಕಾಲುಗಳನ್ನು ಗಾಳಿಗೆ ಬಿಟ್ಟುಕೊಂ ಡಿರುವದರಿಂದ ಅವರಿಗೆ ಶೀತವಾಗಿ ಆರೋಗ್ಯವು ತಪ್ಪುವದೆಂಬುದಾಗಿಯೂ ಬಾಲ್ಯಾರಭ್ಯ ಬರೀಕಾಲಿನಲ್ಲಿ ತಿರುಗಿ ಅಭ್ಯಾಸವಾಗಿರತಕ್ಕವರೆಲ್ಲಾ ಹಾಗೆಯೇ ಇರುವದರಿಂದ ಅವರಿಗೆ ಏನೂ ಬಾಧಕವಾಗುವದಿಲ್ಲವೆಂಬುವದಾಗಿಯೂ ಹೇಳುತ್ತಾರೆ. ಇದು ನಮ್ಮಲ್ಲಿಯೂ ಅನುಭವಸಿದ್ಧವಾಗಿಯೇ ಇದೆ.

ಬಣ್ಣಗಳನ್ನು ಅನೇಕ ವಿಷವುಯುವಾದ ಪದಾರ್ಥಗಳಿಂದ ಮಾಡು ತ್ತಾರೆ. ಬಣ್ಣಹಾಕಿದ ಬಟ್ಟೆಗಳನ್ನು ತೊಟ್ಟರೆ ಅದರಲ್ಲಿನ ವಿಷಪರಮಾ ಣುಗಳು ಶರೀರಕ್ಕೆ ಸೇರಿ ನಾನಾವಿಧವಾದ ರೋಗಗಳಿಗೆ ಆಸ್ಪದವಾಗುವದು.

೩. ಮಕ್ಕಳ ಪೋಷಣೆ.

ಹೊಕ್ಕಳಧಾರವು ಹಿಂದೆ ಹೇಳಿದ ದಿನಗಳೊಳಗಾಗಿ ಬಿದ್ದುಹೋಗದೆ ಇದ್ದರೆ ಅನೇಕ ಸ್ತ್ರೀಯರು ಅದು ಬಿದ್ದುಹೋಗತಕ್ಕ ಕಾಲವು ಇನ್ನೂ ಬರ

ಕಿಚ್ಚಿಗಂಜದವ ಬೂದಿಗಂಜಾನೆ ?

ಲ್ಲಿಲ್ಲವೆಂಬದಾಗಿ ತಿಳಿದುಕೊಳ್ಳದೆ ಅದನ್ನು ಬಲಾತ್ಕಾರದಿಂದ ಕಿತ್ತು ಹಾಕುವರು. ಇದರಿಂದ ಗಾಯವಾಗುವದು. ಹೀಗೆ ಗಾಯವಾದಾಗ್ಯೂ ಅಥವಾ ಕಾರಣಾಂತರಗಳಿಂದ ಆ ಧಾರವು ಅದಾಗಿ ಬಿದ್ದುಹೋಗುವದಕ್ಕೆ ಮುಂಚೆ ಕಿತ್ತು ಹೋದರೂ ಮಗುವಿಗೆ ನೋವಾಗಿ ಅಳುವದಕ್ಕೆ ಉಪಕ್ರಮಿಸುವದು. ಮಕ್ಕಳು ಹೀಗೆ ಅಳುವದಕ್ಕೆ ಉಪಕ್ರಮಿಸಿದರೆ ಬುದ್ಧಿಶಾಲಿಗಳಾದವರು ಹೊಕ್ಕಳು ಗಾಯವಾಗಿದೆ ಎಂದು ಪರೀಕ್ಷೆಮಾಡಿ ತಿಳಿದುಕೊಂಡು ತಕ್ಕ ಚಿಕಿತ್ಸೆಗಳನ್ನು ಮಾಡುವರು. ಈ ಹೊಕ್ಕಳ ಗಾಯಕ್ಕೆ ಶೀಘ್ರದಲ್ಲಿ ಚಿಕಿತ್ಸೆ ಮಾಡಿದರೇನೇ ಹೊತ್ತು ಇಲ್ಲದಿದ್ದರೆ ವಾಸಿಯಾಗುವದು ಕಷ್ಟ. ಹೀಗೆ ಯಾವದಾದರೂ ಇತರಕಾರಣಗಳಿಂದ ಹೊಕ್ಕಳು ಗಾಯವಾದರೆ ತಕ್ಷಣದಲ್ಲಿ ಕೀಲಿನ ಪ್ಲಾಸ್ತ್ರ (Pitch plaster) ಯನ್ನು ಹಾಕುವದರಿಂದ ಗಾಯವು ಶೀಘ್ರವಾಗಿ ಮಾಗುವದು. ಈ ಗಾಯವು ಒಹಳದಿವಸದವರಿಗೂ ತಿಳಿಯದೆ ಇದ್ದರೆ ಅನುಭವಶಾಲಿಯಾದ ವೈದ್ಯನು ಇದಕ್ಕೆ ಚಿಕಿತ್ಸೆಮಾಡಬೇಕಾಗಿ ಇರುತ್ತದೆ. ಕೆಲವರಿಗೆ ಹೊಕ್ಕಳು ಮುಂದಕ್ಕೆ ಹೊರಟಿಕೊಂಡಿರುವದು. ಇದನ್ನು ಚಿಕ್ಕಂದಿನಲ್ಲಿಯೇ ಬುದ್ಧಿವಂತನಾದ ವೈದ್ಯನಿಂದ ತೆಗೆದುಹಾಕಿಸದೆ ಇದ್ದರೆ ಅದು ಆಮೇಲೆ ಒಟ್ಟೆಗಳಿಗೆ ತಗಲಿಕೊಂಡು ತೊಂದರೆಯೆನ್ನುಂಟು ಮಾಡುವದಲ್ಲದೆ ಕೀತು ರಕ್ತಸೋರಿ ನಾನಾವಿಧವಾದ ಬಾಧಕಗಳನ್ನುಂಟು ಮಾಡುವದು.

ಮಕ್ಕಳು ಹುಟ್ಟಿದ ಕೂಡಲೆ ತೊಡೆಗಳಿಗೂ ಆಂಡೆಗಳಿಗೂ ಮಧ್ಯೆ ಇರುವ ಸಂಧಿಯಲ್ಲಿ ಗಾಯವಿರುವದುಂಟು. ಕೂಡಲೆ ಡಾಕ್ಟರನ್ನು ಕರೆಸಿ ಅದನ್ನು ತೋರಿಸಿದರೆ ಆತನು ಬಂದು ಬಟ್ಟೆಯನ್ನು ಅದಕ್ಕೆ ತಕ್ಕ ಹಾಗೆ ಕತ್ತರಿಸಿ ಪಟ್ಸವಾಡಿ ಹಾಕುವನು. ಅದನ್ನು ನಾವೇ ಕತ್ತರಿಸಿದರೆ ಅಷ್ಟು ಬಿಗಿ ಬರುವದಿಲ್ಲ. ಅದು ಸಂಪೂರ್ಣವಾಗಿ ವಾಸಿಯಾಗಿ ಆ ಪಟ್ಟಿಯು ಬಿದ್ದು ಹೋಗುವವರಿಗೂ ಅದನ್ನು ತೆಗೆಯಕೂಡದು. ಈ ಗಾಯವು ಬಾಲ್ಯದಲ್ಲಿಯೇ ವಾಸಿಯಾಗದೆ ಇದ್ದರೆ ಆಮೇಲೆ ವಾಸಿಯಾಗುವದು ಕಷ್ಟ.

ಕಿಟಿಕಿಯಿಂದ ನುಸುಳುವವ ಹೆಬ್ಬಾಗಿಲಿಂದ ಬಾರನೆ ?

ಎಳೇಮಕ್ಕಳಿಗೆ ಫ್ಲಾನಲ್ ಬಟ್ಟೆಯ ಕುಲಾವಿಗಳನ್ನು ಹಾಕುವ ರೂಢಿಯುಂಟು. ಹೀಗೆಮಾಡುವದರಿಂದ ತಲೆಗೆ ಶಾಖವು ಹೆಚ್ಚಾಗಿ ಕಣ್ಣು ಕೆರಳುವದು ಮುಂತಾದ ಕಣ್ಣಿಗೆ ಸಂಬಂಧಿಸಿದ ರೋಗಗಳು ಬರುವವು. ಹೊಟ್ಟೆ ನಡುಗಳ ಮೇಲೆ ಸಡಿಲವಾಗಿ ಫ್ಲಾನಲನ್ನು ಸುತ್ತಿದ್ದರೆ ಒಹಳ ಬಳ್ಳೀದು. ಯಾಕಂದರೆ, ಈ ಪ್ರದೇಶಗಳಿಗೆ ಶೀತಮುಚ್ಚಿಕೊಂಡರೆ ಪ್ರಾಣಕ್ಕೆ ಅಪಾಯಬರುವದು. ಅದನ್ನು ೩ತಿಂಗಳಾದಮೇಲೆ ಬಿಚ್ಚಬೇಕು. ಬಿಚ್ಚುವಾಗ್ಗೆ ಬಂದೇಸಾರಿ ಬಿಚ್ಚದೆ ಅದನ್ನು ಸ್ವಲ್ಪಸ್ವಲ್ಪವಾಗಿ ಹರಿದು ಬಂದು ತಿಂಗಳೊಳಗಾಗಿ ಮುಗಿಸಿಬಿಡಬೇಕು. ಹಾಗಿಲ್ಲದೆ ಬಂದೇಸಾರಿ ತೆಗದುಬಿಟ್ಟರೆ ಮೊಗುವಿಗೆ ಆಪ್ರದೇಶದಲ್ಲಿ ಗಾಯವಾಗುವದೂ ಏನಾದರೂ ರೋಗಬರುವದೂ ಉಂಟು. ಈ ಫ್ಲಾನಲನ್ನು ಮೂರತಿಂಗಳಿಗೆ ಮುಂಚೆ ತೆಗದುಹಾಕಿದರೇನೇ ಹೊರ್ತು ಹೆಚ್ಚಾಗಿ ಇಟ್ಟಿದ್ದು ತೆಗೆದರೆ ಬಾಧಕವಿಲ್ಲ. ಎಳೇಮಕ್ಕಳಿಗೆ ಕೆಮ್ಮುಲು ಬಂದಪಕ್ಷದಲ್ಲಿ ಮೇಲೆ ಹೇಳಿದಂತೆ ಹೊಟ್ಟೇಮೇಲಿನಿಂದ ತೊಡೆಗಳವರಿಗೂ ಫ್ಲಾನಲನ್ನು ಸುತ್ತುವದು ಬಳ್ಳೀದು.

ಮಕ್ಕಳು ಹಾಕಿಕೊಳ್ಳತಕ್ಕ ಬಟ್ಟೆಗಳು ತೂಕವಾಗಿ ಇರಬಾರದು; ಶಾಖವಾಗಿರಬೇಕು. ಕತ್ತಿನಿಂದ ಹಿಡಿದು ತೊಡೆಗಳವರಿಗೂ ಪಾದಗಳಿಗೂ ಶಾಖವಾಗಿರತಕ್ಕ ಬಟ್ಟೆಗಳನ್ನು ಹಾಕಿ ಇರಬೇಕು. ಮಕ್ಕಳಿಗೆ ಪ್ರತಿದಿನವೂ ನುಡಿಬಟ್ಟೆಗಳನ್ನು ಹಾಕಬೇಕು. ಕವಚ, ಕೋಟು ಮುಂತಾದವುಗಳನ್ನು ಹಾಕಿದರೆ ಅವು ಸಡಿಲವಾಗಿ ಇರಬೇಕು. ಬಿಗಿಯಾದ ಉಡುಪುಗಳನ್ನು ಹಾಕುವದರಿಂದ ಇವರ ರಕ್ತ ಸಂಚಾರಕ್ಕೆ ಅಡ್ಡಿಯಾಗಿ ಬೆಳವಣಿಗೆಯು ಕಡಿಮೆಯಾಗುವದು. ಹೊಟ್ಟೇ ಸವಿಾಪದಲ್ಲಿ ಬಿಗಿಯಾಗಿದ್ದರೆ ಅನ್ನ ಕೋಶದ ಕೆಲಸವು ಸರಿಯಾಗಿ ನಡಿಯದೆ ಅಜೀರ್ಣ ವಾಗುವದು. ಎದೇ ಸವಿಾಪದಲ್ಲಿ ಬಿಗುವಾಗಿದ್ದರೆ ಶ್ವಾಸಕೋಶ ಮತ್ತು ಹೃದಯಗಳ ಕೆಲಸವು ಸರಿಯಾಗಿ ನಡೆಯುವದಿಲ್ಲ. ನಡುವಿನಲ್ಲಿ ಬಿಗಿಯಾಗಿದ್ದರೆ ಮೂಲಕೋಶದ ಕೆಲಸಕ್ಕೆ ಅಡ್ಡಿಯಾಗುವದು. ಆದದರಿಂದ ಮೊಗುವಿನ ಬಟ್ಟೆಗಳು ಶಾಖವಾಗಿಯೂ ಒಹಳ ಭಾರವಿಲ್ಲದೆಯೂ ರಕ್ತ ಸಂಚಾರವನ್ನು ಅಡ್ಡಿ ಮಾಡ

ಕಿವುಡಯಜಮಾನನಿಗೆ ಮೂಗಬಂಟ.

ದಷ್ಟ ಸಡಿಲವಾಗಿಯೂ ಇರಬೇಕು. ಮಗುವಿಗೆ ಹಾಕತಕ್ಕ ಒಟ್ಟೆಗಳನ್ನು ಹಾಕುವದಕ್ಕೆ ಮುಂಚೆ ಗಾಳಿಯಲ್ಲಿ ತಗಲಿಹಾಕಿ ಇರಬೇಕು. ಬೆವರಿನಿಂದ ಮಲಿನವಾದ ಒಟ್ಟೆಗಳನ್ನು ಪುನಃ ಹಾಕಬಾರದು. ಮಕ್ಕಳಿಗೆ ಟೋಪಿಗಳನ್ನು ಹಾಕದೆ ಇರುವದು ಉತ್ತಮ. ಬಂದುವೇಳೆ ಹಾಕಿದರೂ ಅದು ಬಹಳ ಹಗುರವಾಗಿ ಇರಬೇಕು. ರಾತ್ರಿ ಮಲಗುವಾಗ ಮಕ್ಕಳಿಗೆ ಕುಲಾವಿಯನ್ನು ಹಾಕುವದು ಅನುಚಿತ. ಮಕ್ಕಳಿಗೆ ನಿರ್ಮಲವಾದ ಗಾಳಿಯು ಬಹಳ ಅವಶ್ಯಕವಾದದ್ದು. ತಂಗಾಳಿಯು ಬಹಳ ಬಲಕಾರಿಯಾದದ್ದಾದಕಾರಣ ಮಕ್ಕಳಿಗೆ ತಕ್ಕ ಉಡುಪುಗಳನ್ನು ಹಾಕಿ ಬೆಳಿಗ್ಯೆಯೂ ಸಾಯಂಕಾಲದಲ್ಲಿಯೂ ಆಚೆಗೆ ಕರೆದುಕೊಂಡು ಹೋಗುವದು ಉತ್ತಮ.

೪. ಮುದುವೆ.

ಸ್ತ್ರೀಯರನ್ನು ವರಿಸುವದರಲ್ಲಿ ಆಲೋಚನೆ ಮಾಡತಕ್ಕ ಅಂಶಗಳು.

ಪುರುಷರು ೨೮ ಅಥವಾ ೩೦ ವರ್ಷ ವಯಸ್ಸಾಗುವವರಿಗೂ ಮದುವೆಯ ವಿಷಯವನ್ನು ಕುರಿತು ಆಲೋಚನೆಯೇ ಮಾಡಕೂಡದು; ಗೃಹಸ್ಥಾಶ್ರಮಧರ್ಮದ ವಿಷಯವಾಗಿ ಯಾರಾದರೂ ಮಾತನಾಡುತ್ತಿದ್ದರೂ ಕೇಳಕೂಡದು; ಈ ವಿಷಯಗಳನ್ನು ವರ್ಣಿಸಿರತಕ್ಕ ಗ್ರಂಥಗಳನ್ನೂ ಓದಕೂಡದು. ಮೂವತ್ತು ವರ್ಷ ತುಂಬುವವರಿಗೂ ಆರೋಗ್ಯಕ್ಕೆ ಸಹಕಾರವಾದ ಈ ಧರ್ಮಗಳನ್ನು ಆಚರಿಸುತ್ತಾ ಬಂದರೆ ಅಂಥಾಜನಗಳು ದೃಢಕಾಯರಾಗುವರು. ಈ ಕಾಲವನ್ನೆಲ್ಲಾ ವಿದ್ಯಾಭ್ಯಾಸಂಗದಲ್ಲಿ ಕಳೆಯುವದರಿಂದ ಸ್ವತಂತ್ರವಾಗಿ ಜೀವನವನ್ನು ಮಾಡಿಕೊಳ್ಳುವದಕ್ಕೆ ತಕ್ಕ ಬುದ್ಧಿಯನ್ನು ಪಡೆಯುವರು. ಹೀಗೆ ಆರೋಗ್ಯ ಭಾಗ್ಯವನ್ನೂ ಬುದ್ಧಿ ಕೌಶಲ್ಯವನ್ನೂ ಹೊಂದಿದವರು ಮಾತ್ರವೇ ಗೃಹಸ್ಥಾಶ್ರಮಕ್ಕೆ ಯೋಗ್ಯರಾದವರು. ಹಾಗಲ್ಲದೆ ಅನೇಕ ರೋಗಪೀಡಿತರಾಗಿ ತಮ್ಮ ಜೀವನವನ್ನು ತೊವ್ವು ಸಂಪಾದಿಸಿಕೊಳ್ಳಲಾರದೆ ಇದ್ದಾಗ್ಯೆ ಮದುವೆ ಮಾಡಿಕೊಳ್ಳುವವರು

ಕುಂಟನಿಗೆ ಎಂಟು ಚೇಷ್ಟೆ, ಕುರುಡನಿಗೆ ಹದಿನಾರು ಚೇಷ್ಟೆ.

ಮಹಾ ಪಾತಕಿಗಳು. ಯಾಕಂದರೆ, ಇಂಥಾವರು ಮದುವೆ ಮಾಡಿಕೊಳ್ಳದೆ ಇದ್ದರೆ ತಮ್ಮಲ್ಲಿ ಇರತಕ್ಕ ಅನಾರೋಗ್ಯವೂ ದಾರಿದ್ರ್ಯವೂ ತಮ್ಮನ್ನು ಮಾತ್ರ ವೇಧಿಸುವದು; ಇವರು ಅವಿವೇಕದಿಂದ ಮದುವೆ ಮಾಡಿಕೊಂಡು ದೊಡ್ಡ ಕುಟುಂಬಿಗಳಾಗುವದರಿಂದ ಇವರ ರೋಗವೂ ದಾರಿದ್ರ್ಯವೂ ಬಹಳವಾಗಿ ಹೆಚ್ಚಿ ಬಬ್ಬರಿಗೋಸ್ಕರ ಹತ್ತು ಮಂದಿ ಹಿಂಸೆಪಡಬೇಕಾಗುವದು.

ವಿವಾಹಕ್ಕೆ ಯೋಗ್ಯವಾದ ಕಿಂನೇ ವಯಸ್ಸನ್ನು ಹೊಂದಿ ದೃಢ ಕಾಯನಾಗಿಯೂ ಸ್ವತಂತ್ರವಾಗಿ ಜೀವನವನ್ನು ಸಂಪಾದಿಸಿಕೊಳ್ಳುವದಕ್ಕೆ ಶಕ್ತನಾಗಿಯೂ ಇರುವವನು ತನಗೆ ಅನುರೂಪಳಾದ ಕನ್ಯೆಯನ್ನು ಹುಡುಕುವದರಲ್ಲಿ ಆರೋಗ್ಯವುಳ್ಳವಳನ್ನು ಹುಡಕಬೇಕು. ಅವಳ ತಾಯಿ ತಂದೆಗಳೂ ಆರೋಗ್ಯವುಳ್ಳವರಾಗಿರಬೇಕು. ಯಾಕಂದರೆ, ತಾಯಿತಂದೆಗಳಿಗಿರುವ ಅನೇಕ ರೋಗಗಳು ಮಕ್ಕಳಿಗೂ ಬರುವದುಂಟು. ಇದು ಬಾಲ್ಯದಲ್ಲಿ ತೋರದಿದ್ದರೂ ಅನಂತರದಲ್ಲಿ ಕ್ರಮೇಣ ತೋರುವದು. ಆದ ದರಿಂದ ತಾಯಿತಂದೆಗಳು ರೋಗಿಗಳಾಗಿ ಇದ್ದರೆ ಅಂಥಾವರ ಮಕ್ಕಳನ್ನು ಅವರು ಬಲಿಷ್ಠರೆಂದು ಕಾಣಬರುತ್ತಿದ್ದರೂ ಮದುವೆ ಮಾಡಿಕೊಳ್ಳುವದು ಅನುಚಿತ.

ಕೆಲವರು ಸ್ತ್ರೀಯರಿಗೆ ಇದ್ದಕ್ಕೆ ಇದ್ದಹಾಗೆ ಸ್ಮೃತಿ ತಪ್ಪುವದು. ಆಗ ಅವರಿಗೆ ಗರ್ಭಕೋಶದಿಂದ ಹೊಟ್ಟೇ ಮಾರ್ಗವಾಗಿ ಕತ್ತಿನವರಿಗೂ ಏನೋ ಬಂದು ಗುಂಡು ಉರುಳಿದಹಾಗೆಯೂ, ಯಾರೋ ಕತ್ತು ಕಿವಚು ವಹಾಗೆಯೂ ತೋರುವದು. ಅದು ಬಂದಾಗ ಇವರು ಸ್ವಲ್ಪ ಹೊತ್ತು ಅಳುತ್ತಲೂ ಸ್ವಲ್ಪ ಹೊತ್ತು ನಗುತ್ತಲೂ ಇರುವರು. ಅವರಿಗೆ ಶರೀರವು ಅದ್ಯಾಂತವೂ ಗಡಗಡನೆ ನಡುಗುವದು. ದೃಷ್ಟಿಯಲ್ಲಿ ವಿಕಾರ ಹುಟ್ಟಿ, ಸುತ್ತಲೂ ಇರುವ ಪದಾರ್ಥಗಳು ಏನೋ ವಿಚಿತ್ರವಾಗಿ ಕಾಣಬರುವವು. ಇದೆಲ್ಲಾ ಶರೀರದ ನರಗಳು ದುರ್ಬಲವಾಗುವದರಿಂದಲೂ ಜೀರ್ಣಶಕ್ತಿಯು ಕಡಿಮೆಯಾಗುವದರಿಂದಲೂ ಹುಟ್ಟುವ ಜಾಡ್ಯ. ಇದನ್ನು ಅನೇಕರು

ಕುಂಟನಿಗೆ ಸೊಂಟದಲ್ಲಿ ತ್ರಾಣ.

ಪಿಶಾಚವೆಂಬದಾಗಿ ಹೇಳಿಕೊಳ್ಳುತ್ತಾರೆ. ಇಂಥಾ ರೋಗದಿಂದ ಪೀಡಿತರಾದ ಸ್ತ್ರೀಯರನ್ನು ಮದುವೆ ಮಾಡಿಕೊಳ್ಳಕೂಡದು.

ಅನೇಕ ಸ್ತ್ರೀಯರಿಗೆ ಅನಾರೋಗ್ಯದಿಂದಲಾಗಲೀ ಬಟ್ಟೆಗಳನ್ನು ಬಿಗಿದು ಕಟ್ಟುವದರಿಂದಲಾಗಲೀ ನಡುವು ಕೃಶವಾಗಿರುವದು. ಇಂಥಾವರು ರೋಗಿಳಾಗಿ ಕ್ರಮೇಣ ಕ್ಷಯಿಸಿ ಅಕಾಲ ಮರಣವನ್ನು ಹೊಂದುವರು. ಇವರಿಗೆ ನಿಷ್ಕಲ್ಮಷವುಳ್ಳ ಅನುರಾಗವೂ ಯುಕ್ತಾಯುಕ್ತ ಪರಿಜ್ಞಾನವೂ ಇರುವದಿಲ್ಲ. ಇವರಿಗೆ ಹುಟ್ಟುವ ಮಕ್ಕಳೂಕೂಡ ರೋಗಿಗಳಾಗಿಯೂ ದುರ್ಬಲರಾಗಿಯೂ ಇರುವರು. ಇವರ ನಡವುಗಳಂತೆಯೇ ಇವರ ಬುದ್ಧಿಯೂ ದುರ್ಬಲವಾಗುವದು. ಅನೇಕರು ಕೃಶವಾದ ನಡವು ಸ್ತ್ರೀಯರಿಗೆ ಅಲಂಕಾರಪ್ರಾಯವೆಂಬದಾಗಿ ಹೇಳುವರು. ಆದರೆ ಇವರಿಗೆ ಸ್ವಲ್ಪವೂ ಬುದ್ಧಿಯಿರುವದಿಲ್ಲವೆಂದಾಗಿ ವ್ಯಕ್ತವಾಗುತ್ತದೆ. ಹ್ಯಾಗೆಂದರೆ, ಶರೀರದ ಯಾವ ಭಾಗಕ್ಕಾದರೂ ಬಂದುಧಾರವನ್ನು ಬಿಗಿದು ಬಿಟ್ಟರೆ ಆಭಾಗಕ್ಕೆ ರಕ್ತಸಂಚಾರವಿಲ್ಲದೆ ಕೆಲವುದಿನಗಳಲ್ಲಿ ಅಲ್ಲಿನ ನರಗಳು ರಕ್ತಚರ್ಮಗಳಿಲ್ಲಾ ಕೆಟ್ಟು ಹೋಗುವವು. ಹೀಗೆ ಸ್ತ್ರೀಯರು ವಸ್ತ್ರಗಳನ್ನು ಬಿಗಿದುಕಟ್ಟಿ ಡಾಬು ಮುಂತಾದವುಗಳನ್ನು ಹಾಕಿಕೊಳ್ಳುವದರಿಂದ ಆಭಾಗದಲ್ಲಿ ರಕ್ತಸಂಚಾರವು ಕಡಿಮೆಯಾಗಿ ನರಗಳಲ್ಲಿ ಶಕ್ತಿಯು ತಗ್ಗಿ ಗರ್ಭಕೋಶ ಮುಂತಾದವುಗಳಿಲ್ಲಾ ಬೆಳೆಯದೆ ಇರುವವು. ಇಂಥಾ ಬಂಧನೆಗಳಿಲ್ಲದೆ ಇರುವ ಶರೀರದ ಮೇಲಿನ ಭಾಗವೂ ಕೆಳಭಾಗವೂ ಬೆಳೆದು ಈ ನಡುವಿಗೆ ಆಗತಕ್ಕ ಪೋಷಣೆಯು ಅವುಗಳಿಗೆ ಆಗುವದು. ಹೀಗೆ ಪೋಷಣೆಯಿಲ್ಲದೆ ಸಣ್ಣಗಿರತಕ್ಕ ನಡುವನ್ನು ಕೆಲವರು ಅವಿವೇಕಿಗಳು ಶರೀರಕ್ಕೆ ಅಲಂಕಾರ ಪ್ರಾಯವಾದ್ದೆದು ಹೇಳುವರು. ಇದು ನಿಶ್ಚಯವೆಂದು ತಿಳಿದು ಅನೇಕ ಬುದ್ಧಿಹೀನರು ತಮ್ಮ ನಡವುಗಳನ್ನು ಕೃಶಮಾಡಿಕೊಳ್ಳುವರು. ಹೀಗೆ ಕೃಶವಾದ ನಡವುಳ್ಳವರಿಗೆ ಗರ್ಭಕೋಶವು ಬಹಳ ಚಿಕ್ಕದಾಗಿರುವದರಿಂದ ಅವರಿಗಾಗತಕ್ಕ ಮಕ್ಕಳೂ ಕೂಡ ಕ್ಷಯರೋಗಿಗಳಹಾಗೆ ಇರುವರು. ಆದದರಿಂದ ಕೃಶವಾದ ನಡುವುಳ್ಳ ಸ್ತ್ರೀಯರೂ ಮದುವೆ ಮಾಡಿಕೊಳ್ಳುವದಕ್ಕೆ ತಕ್ಕವರಲ್ಲ.

ಸಶೇಷ.

ಕುಚೋದ್ಯದ ಅರಸನಿಗೆ ಕುಲಗೇಡಿ ಪ್ರಧಾನಿ.

೫. ಚಂಚಲರಾಯರ ಉಪನ್ಯಾಸ.

ಮು॥ ರಾ॥ ರಾ॥ ಚಂಚಲರಾಯರು ಹೇಳಿದ ಉಪನ್ಯಾಸದ ಮೇಲೆ ಮೈಸೂರು ವಿದ್ವಾಂಸರೊಬ್ಬರು ಆಕ್ಷೇಪಣೆ ಮಾಡಿದರು. ಏನೆಂದರೆ:—

ಸ್ತ್ರೀಯರು ವಿದ್ಯಾವಂತರಾಗತಕ್ಕ ವಿಷಯದಲ್ಲಿ ಮು॥ ರಾ॥ ಚಂಚಲರಾಯರು ಬಾಲಕಿಯರಿಗೆ ಮತವಿಷಯಗಳನ್ನು ಬೋಧಿಸ ಬಾರದೆಂಬುದಾಗಿಯೂ, ನಾವು ನಾಗರಿಕರಾಗಿ ವೃದ್ಧಿಯಾಗುವದಕ್ಕೆ ನಮ್ಮ ಸ್ತ್ರೀಯರೇ ಪ್ರತಿಕೂಲರೆಂಬುದಾಗಿಯೂ, ನಮ್ಮ ದೇಶದ ವಿದ್ಯಾಭ್ಯಾಸವನ್ನು ಮಾಡುವದರಿಂದ ಸ್ತ್ರೀಯರ ಬುದ್ಧಿಯು ಪ್ರಚುರವಾಗುವದಿಲ್ಲವೆಂಬುದಾಗಿಯೂ, ದೇಶ ವಿದ್ಯೆಯನ್ನು ಮಾತ್ರವೇ ಕಲಿತ ಸ್ತ್ರೀಯರ ಸಂಭಾಷಣೆಯು ರುಚಿಸದು ಎಂಬುದಾಗಿಯೂ, ಇಂಗ್ಲೀಷ್ ಭಾಷೆಯನ್ನೂ ಶಾಸ್ತ್ರವನ್ನೂ ಕಲಿತರೇನೇ ಸ್ತ್ರೀಯರು ಪಂಡಿತರಾಗುವರೆಂಬುದಾಗಿಯೂ, ಇಂಗ್ಲೀಷ್ ಭಾಷೆಯ ಸಹಾಯದಿಂದಲೇ ಸಕಲ ದುರ್ಗುಣಗಳೂ ದುರಭಿಮಾನಗಳೂ ಹೋಗಿ ಬಳಿಕ್ಕೇ ಪಂಡಿತರಾಗುವರೆಂಬುದಾಗಿಯೂ, ವಿದ್ಯಾವಂತನಾದ ಪುರುಷನಿಗೆ ದೇಶವಿದ್ಯೆಯಲ್ಲಿ ಅಲ್ಪಜ್ಞಾನವನ್ನು ಪಡೆದ ಸ್ತ್ರೀಯರ ಸಹವಾಸವು ರುಚಿಸುವದಿಲ್ಲವಾದ್ದರಿಂದ ಅವರು ಅವಶ್ಯಕವಾಗಿ ಇಂಗ್ಲೀಷ್ ಕಲಿಯಬೇಕೆಂಬುದಾಗಿಯೂ, ನಮ್ಮ ದೇಶದ ಸ್ತ್ರೀಯರು ಪರದೇಶಸ್ತ್ರೀಯರೊಡನೆ ಸಂಭಾಷಣೆಯನ್ನೂ ಸಹವಾಸವನ್ನೂ ಮಾಡುವದರಿಂದ ಲೋಕವ್ಯವಹಾರಗಳನ್ನು ಚನ್ನಾಗಿ ತಿಳಿದು ಕೊಂಡು ಯುಕ್ತಾಯುಕ್ತ ವಿವೇಚನೆಯುಳ್ಳವರಾಗಿ ಸಕಲದುರಭಿಮಾನಗಳನ್ನೂ ಬಿಟ್ಟು ಬಳಿಕ್ಕೇ ಪ್ರವೀಣರಾಗುವರೆಂಬುದಾಗಿಯೂ ಹೇಳುತ್ತಾರೆ. ಪೂರ್ವದಲ್ಲಿ ನಮ್ಮ ದೇಶದ ಸ್ತ್ರೀಯರು ಬಹಳ ವಿದ್ಯಾವಂತರಾಗಿ ಇರಲಿಲ್ಲವೆ? ಸ್ತ್ರೀವಿದ್ಯಾವಿಷಯವಲ್ಲಿ ಅನ್ಯದೇಶದವರ ಏರ್ಪಾಡುಗಳಲ್ಲಿ ಏನೂ ನ್ಯೂನತೆ ಇಲ್ಲವೆ? ಅನಾದಿಯಾಗಿ ನಮ್ಮಲ್ಲಿ ಬಂದಿರತಕ್ಕ ಆಚಾರವ್ಯವಹಾರಗಳಿಗೆ ಸರಿಯಾದ ಏರ್ಪಾಡುಗಳಿಂದ ಸ್ತ್ರೀಯರಿಗೆ ವಿದ್ಯೆ ಕಲಿಸಬೇಕೇ ಹೊರತು ಅವುಗಳನ್ನು ಉಲ್ಲಂಘಿಸಿ ಯಾವಕೆಲಸವನ್ನೂ ಮಾಡಬಾರದು.

ಕುಜನರ ಸಂಗ ಅಭಿಮಾನ ಭಂಗ.

ಸ್ತ್ರೀಯರು ಇಂಗ್ಲೀಷನ್ನು ಕಲಿತುಕೊಳ್ಳದಿದ್ದರೆ ಅಂಥಾವರು ಗಂಡಂದಿರಿಗೆ ಅನುಕೂಲರಾಗಿರುವದಿಲ್ಲವೆಂಬದಾಗಿಯೂ, ಇವರಿಗೆ ಸಹೋದರ ಸಹೋದರಿಯರಲ್ಲಿ ಅಭಿಮಾನವೂ ಮಾತಾಪಿತೃಗಳಲ್ಲಿ ಭಕ್ತಿಯೂ ಇರುವದಿಲ್ಲವೆಂಬದಾಗಿಯೂ ಹೇಳುತ್ತಾರೆ. ಇವಲ್ಲದೆ ಪೂರ್ವಕಾಲದಲ್ಲಿ ಸ್ತ್ರೀಯರು ಬಹಳ ವಿದ್ಯಾವಂತರಾಗಿ ರಾಜ ತಂತ್ರಗಳಲ್ಲಿ ನಿಪುಣರಾಗಿ ಕವಿತ್ವಗಳನ್ನು ಮಾಡುತ್ತಲೂ ಗಂಡಂದಿರಿಗೆ ತಕ್ಕ ಆಲೋಚನೆಗಳನ್ನು ಹೇಳಿಕೊಡುತ್ತಲೂ ಇದ್ದರೆಂಬದಾಗಿ ಇವರೇ ಹೇಳಿ ಇದ್ದಾರೆ. ಇವರೆಲ್ಲಾ ಇಂಗ್ಲಿಷ್‌ವಿದ್ಯೆಯನ್ನೇ ಕಲಿತುಕೊಂಡು ಅಷ್ಟುಸ್ವವೀಣರಾಗಿ ಇದ್ದರೊ? ಇದೆಲ್ಲಾ ಶುದ್ಧವಾಗಿ ಭ್ರಾಂತಿಯು. ಲೋಕದಲ್ಲಿ ಸಕಲಜನಾಂಗಗಳ ಏಪರ್ಾಡುಗಳಲ್ಲಿಯೂ ಹೆಚ್ಚು ಕುಂದುಗಳು ಇದ್ದೇ ಇರುವವು. ಭಾರತ ಭಾಗವತ ರಾಮಾಯಣಗಳಲ್ಲಿ ಹೇಳದೇಇರತಕ್ಕ ವಿಷಯಗಳು ಎಲ್ಲಿತಾನೆ ಇವೆ? ಅವುಗಳನ್ನು ವ್ಯಾಸಂಗಮಾಡುವದರಿಂದ ದೇವಭಕ್ತಿಯೂ ರಾಜಭಕ್ತಿಯೂ ಪಾತಿವ್ರತ್ಯವೂ ಗುರುಹಿರಿಯರಲ್ಲಿ ಅಭಿಮಾನವೂ ಪರೋಪಕಾರಬುದ್ಧಿಯೂ ಯಾರಿಗೆತಾನೆ ಉಂಟಾಗಲಾರದು? ಇಂಗ್ಲೀಷ್ ಭಾಷೆಯನ್ನು ಉದರಪೋಷಣಾರ್ಥವಾಗಿ ಕಲಿಯುವರು. ಇಂಥಾ ಇಂಗ್ಲೀಷ್ ಭಾಷೆಯು ನಮ್ಮ ಮತಗ್ರಂಥಗಳಿಗೆ ಸಮಾನವೆಂದು ಚಂಚಲರಾಯರು ಹೇಳುವವಂತು ವಿಚಿತ್ರವಾಗಿದೆ.

ನಮ್ಮದೇಶದ ಸ್ತ್ರೀಯರು ಯೂರೋಪಿಯರ್ಾ ಹೆಂಗಸರೊಂದಿಗೆ ಸಂಭಾಷಿಸುತ್ತಾ ಅವರ ಸಹವಾಸದಲ್ಲಿ ಇದ್ದುಕೊಂಡಿರಬೇಕೆಂಬದಾಗಿಯೂ ಆ ಹೆಂಗಸರ ಹಾಗೆಯೇ ಇವರೂ ಚಂಡಿನ ಆಟ ಮುಂತಾದ ಆಟಗಳನ್ನು ಆಡಬೇಕೆಂಬದಾಗಿಯೂ ಇವರ ತಾತ್ಪರ್ಯವಿರಬಹುದು. ಆದರೆ ಲಂಗಾಗಳನ್ನು ಉಟ್ಟುಕೊಂಡು ಮೋಜಾಗಳನ್ನು ಹಾಕಿಕೊಂಡುಇವರಂತೆಯೇ ಇರುವದಕ್ಕೆ ದುರದೃಷ್ಟದಿಂದ ಇವರಿಗೆ ಉಪಪತ್ತಿಯಿಲ್ಲ. ನಮ್ಮ ಗಂಡಸರೆಲ್ಲಾ ಇಂಗ್ಲೀಷನ್ನು ಕಲಿತು ದಾನಧರ್ಮಗಳೆಲ್ಲಾ ಹಾಳಾದವು. ಹೆಂಗಸರು ಇಂಗ್ಲೀಷನ್ನು ಕಲಿತುಕೊಂಡು ಗಂಡಸರಂತೆಯೇ ಆದರೆ ಹೇಳತಕ್ಕದ್ದೇನು? ಸ್ತ್ರೀಯರು ಸಂಸ್ಕೃತ ಭಾಷೆಯನ್ನು ಚನ್ನಾಗಿ ಕಲಿತುಕೊಂಡು ಸಂಗೀ

ತವಲ್ಲಿಯೂ ಪ್ರವೀಣರಾದರೆ ಅಂಥಾ ಸ್ತ್ರೀಯರ ಗಂಡಂದಿರಿಗೆ ಅವರ ಸಹವಾಸವು ರುಚಿಸುವದಿಲ್ಲ ಎಂಬುವದು ಶುದ್ಧ ಅಸಂಗತವು.

ಇಗ್ಲೀಷನ್ನು ಓದಿದರೆ ದುರಭಿಮಾನವೂ ಮೂಢಭಕ್ತಿಯೂ ಹೋಗುವದಿಲ್ಲವೆಂದು ಚಂಚಲರಾಯರು ಹೇಳುತ್ತಾರೆ. ಇವುಗಳು ಇಂಗ್ಲೀಷಿನವರಲ್ಲಿ ಇಲ್ಲವೆಂಬುವದಕ್ಕೆ ಯಾವದೃಷ್ಟಾಂತಗಳನ್ನೂ ಕಾಣೆನು. ಮುಖ್ಯವಾಗಿ ನಮ್ಮ ಆಚಾರವ್ಯವಹಾರಗಳಿಗೆ ನ್ಯೂನತೆಬರುವಂಥಾ ಸ್ತ್ರೀವಿದ್ಯಾಭ್ಯಾಸದ ವಿಪರ್ಯಾಡುಗಳನ್ನು ನಾವು ಎಂದಿಗೂ ಮಾಡಕೂಡದು.

೪. ಕೊಳ್ಳೀದೆವ್ವ, ಉತ್ತರದ ಮುಂಬೆಳಗು, ನಕ್ಷತ್ರಪತನ.

ರಾತ್ರಿ ವೇಳೆಗಳಲ್ಲಿ ಜೌಗುನೆಲದಲ್ಲಿಯೂ ನಿಂತ ನೀರು ಇರತಕ್ಕ ಸ್ಥಳಗಳಲ್ಲಿಯೂ ಸೊಪ್ಪು ಸೆದೆ ಮುಂತಾದವುಗಳೂ ಶವಗಳೂಕೂಡ ಕೊಳೆತು ಅದರಿಂದ ರಂಜಕವು (Phosphorus) ಆವಿಯಾಗಿ ಹೊರಟು ಗಾಳಿಯಲ್ಲಿ ಸೇರುವದು. ಈ ಆವಿಯು ಹತ್ತಿಕೊಂಡು ಬಹಳ ಪ್ರಕಾಶವಾನವಾಗಿ ಉರಿಯುವದು. ಯೂರೋಪ್ ಖಂಡದವರು ರಾತ್ರಿಕಾಲದಲ್ಲಿ ಪ್ರಯಾಣ ಮಾಡುವಾಗ ಈ ಉರಿಯನ್ನು ನೋಡಿ ಇದು ನಿಜವಾದ ಉರಿ ಎಂದು ತಿಳಿದು ಕೊಂಡು ಆಪ್ರದೇಶಗಳಿಗೆ ಹೋಗಿ ಆಕೆಸರಿನಲ್ಲಿ ಸಿಕ್ಕಿ ಸತ್ತುಹೋಗುವರು. ನಮ್ಮ ದೇಶದವರಲ್ಲಿಯೂ ಅನೇಕರು ಇಂಥಾ ಬೆಳಕನ್ನು ಕಂಡು ಅದನ್ನು ಕೊಳ್ಳೀದೆವ್ವವೆಂದು ಕರೆಯುವರು.

ಯುದ್ಧರಂಗಗಳಲ್ಲಿ ಮೃತರಾದ ಜನಗಳನ್ನೆಲ್ಲಾ ದೊಡ್ಡಹಳ್ಳಗಳಲ್ಲಿ ಹಾಕಿ ಸ್ವಲ್ಪಮಟ್ಟಿಗೆ ಮಣ್ಣಿನಿಂದ ಮುಚ್ಚಿ ಇರುತ್ತಾರೆ. ಅಲ್ಲಿ ಶವಗಳೆಲ್ಲಾ ಕೊಳೆತು ಮೇಲೆ ಹೇಳಿದ ರಂಜಕದ ಪರಿಮಾಣಗಳು ವಿಶೇಷವಾಗಿ ಗಾಳಿಯಲ್ಲಿ ಸೇರಿ ರಾತ್ರಿಯೆಲ್ಲಾ ನಿರಂತರವಾಗಿ ಉರಿಯು ಕಾಣುವದರಿಂದ ಇವುಗಳನ್ನು ಪಿಶಾಚಿಗಳೆಂದು ತಿಳಿದುಕೊಳ್ಳುವದಕ್ಕೆ ಕಾರಣವಾಯಿತು. ಇವುಗಳನ್ನು ಕಂಡು ಭಯಪಡುವದರಿಂದಲೇ ಜನರಿಗೆ ಜ್ವರ ಬರುವದುಂಟು. ಈ ಜ್ವರಕ್ಕೆ ಆ ಭಯವನ್ನು ಹೋಗಲಾಡಿಸುವದೇ ಚಿಕಿತ್ಸೆ.

ಕುಣಿ ಅಗಿಸಿದರೆ ಋಣ ತೀರೀತೆ.

ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ೨೪ ಘಂಟೆಗಳಿಗೆ ಒಂದು ಸಾರಿ ಆತ್ಮಪ್ರದಕ್ಷಿಣೆ ಮಾಡುವದರಿಂದ ಸೂರ್ಯನಿಗೆ ಅಭಿಮುಖರಾಗಿರುವರಿಗೆ ಹಗಲೂ ಮತ್ತೊಂದು ಭಾಗದಲ್ಲಿರುವವರಿಗೆ ಕತ್ತಲೆಯೂ ಆಗುವವ್ವ. ಭೂಮಿಯ ವಿಷುವದ್ರೇಖೆಯು ಸೂರ್ಯನಿಗೆ ಸರಿಯಾಗಿ ಅಭಿಮುಖವಾದಾಗ ಸೂರ್ಯನ ಕಿರಣಗಳು ಉತ್ತರಗೋಳಕ್ಕೂ ದಕ್ಷಿಣಗೋಳಕ್ಕೂ ಸರಿಯಾಗಿ ಬೀಳುವದರಿಂದ ಹಗಲೂ ರಾತ್ರಿಯೂ ಸಮವಾಗಿಯೇ ಇರುವವು. ಮಾರ್ಚಿ ತಿಂಗಳು ೨೦ನೇ ತಾರೀಖಿನಲ್ಲಿಯೂ, ಸೆಪ್ಟಂಬರು ೨೦ರಲ್ಲಿಯೂ, ಈ ವಿಷುವದ್ರೇಖೆಯು ಸೂರ್ಯನಿಗೆ ಸರಿಯಾಗಿ ಅಭಿಮುಖವಾಗಿರುವದು. ಈ ದಿವಸಗಳಲ್ಲಿ ರಾತ್ರಿ ಹಗಲುಗಳು ಪ್ರತಿಯೊಂದೂ ೧೨ ಘಂಟೆಗಳ ಹೊತ್ತಿರುವದು. ಉತ್ತರ ಧ್ರುವದ ಬಳಿ ಇರುವ ೬ ತಿಂಗಳಿಗೆ ಮಾರ್ಚಿ ತಾರೀಖು ೨೧ರಿಂದ ಸೆಪ್ಟಂಬರ್ ೨೩ರವರಿಗೆ ಹಗಲಾಗಿರುವದು. ದಕ್ಷಿಣದ ಧ್ರುವದ ಬಳಿ ಇರುವವರಿಗೆ ಈ ಕಾಲವು ರಾತ್ರಿಯಾಗಿರುವದು. ಸೆಪ್ಟಂಬರ್ ೨೩ರಿಂದ ಮಾರ್ಚಿ ೨೧ರವರಿಗೆ ದಕ್ಷಿಣಧ್ರುವದಬಳಿ ಇರುವವರಿಗೆ ರಾತ್ರಿಯಾಗಿಯೂ ಉತ್ತರ ಧ್ರುವದಬಳಿ ಇರುವವರಿಗೆ ಹಗಲಾಗಿಯೂ ಇರುವದು. ಹೀಗೆ ಈ ಧ್ರುವಗಳಬಳಿ ಇರುವವರಿಗೆ ನಮ್ಮ ಒಂದು ವರ್ಷವು ಒಂದು ರಾತ್ರಿಯೂ ಒಂದು ಹಗಲೂ ಆಗುವದು. ವಿಷುವದ್ರೇಖೆಯಿಂದ ಧ್ರುವಗಳ ಬಳಿಗೆ ೭೦೦೦ ಮೈಲುಗಳಾಗುವದು. ವಿಷುವದ್ರೇಯಬಳಿ ಇರುವವರಿಗೆ ೧೨ ಘಂಟೆ ರಾತ್ರಿಯೂ ೧೨ ಘಂಟೆ ಹಗಲೂ ಆಗಿರುವವು. ಈ ರೇಖೆಯು ಉತ್ತರಕ್ಕೂ ದಕ್ಷಿಣಕ್ಕೂ ಹೋಗುತ್ತಾ ಹೋಗುತ್ತಾ ಉತ್ತರದಲ್ಲಿರುವವರಿಗೆ ಉತ್ತರಾಯಣದಲ್ಲಿ ಹಗಲು ಹೆಚ್ಚುವದು, ರಾತ್ರಿ ಕಡಿಮೆಯಾಗುವದು; ದಕ್ಷಿಣದಲ್ಲಿರುವರಿಗೆ ರಾತ್ರಿಹೆಚ್ಚುವದು, ಮತ್ತು ಹಗಲುಕಡಿಮೆಯಾಗುವದು. ಈ ವಿಷುವದ್ರೇಖೆಯ ಉತ್ತರ ದಕ್ಷಿಣದಲ್ಲಿ ೬೨—೭೦ ಮೈಲು ದೂರದಲ್ಲಿರುವವರಿಗೆ ದೀರ್ಘವಾದ ಹಗಲು ಒಂದು ತಿಂಗಳಕಾಲ ಇರುವದು, ೪,೯೦೦ ಮೈಲು ದೂರದಲ್ಲಿರುವವರಿಗೆ ಎರಡು ತಿಂಗಳಕಾಲ ವಿರುವದು; ೫,೬೦೦ ಮೈಲು ದೂರದಲ್ಲಿರುವವರಿಗೆ ೪ ತಿಂಗಳಕಾಲ ಇರುವದು.

ಕುತ್ತಿಗೆ ಕುಯ್ಯುವ ಊರಲ್ಲಿ ಸುಲಿದುಬಿಟ್ಟಿದ್ದೇ ಗುಣ.

ಈ ಧೃವಗಳಲ್ಲಿ ಸೂರ್ಯರಶ್ಮಿಯು ೬ ತಿಂಗಳಕಾಲ ಇರುವದಿಲ್ಲ. ಆದರೆ ಕ್ಷಿತಿಜದ ಮೇಲೆ ನಮ್ಮದೇಶಗಳಲ್ಲಿ ಸೂರ್ಯೋದಯವಾಗುವದಕ್ಕೆ ಸ್ವಲ್ಪಮುಂಚೆ ಆಕಾಶವು ಚಿತ್ರವಿಚಿತ್ರವಾದ ಬಣ್ಣಗಳಿಂದ ಹ್ಯಾಗೆ ಮನೋಹರವಾಗಿರುತ್ತದೋ ಹಾಗೆಯೇ ಆ ಧೃವಗಳ ಬಳಿ ಇರುವದು. ಈಬೆಳಕು ಆಕಾಶದಲ್ಲಿ ವಿದ್ಯುಚ್ಛಕ್ತಿಯಿಂದ ಉಂಟಾಗುವದೆಂದು ಅನೇಕ ವಿದ್ವಾಂಸರು ಹೇಳುತ್ತಾರೆ. ಈ ತೇಜಸ್ಸು ಮಿಂಚಿನಂತೆ ಅತ್ಯಂತ ಚಾಂಚಲ್ಯವುಳ್ಳದ್ದಾಗಿರುವದು. ಇದು ಸ್ವಲ್ಪಹೊತ್ತಿನೊಳಗಾಗಿ ಚಿತ್ರ ವಿಚಿತ್ರವಾದ ಬಣ್ಣಗಳಿಂದ ನಾನಾವಿಧ ಆಕಾರಗಳಾಗಿ ಕಾಣಿಸುವದು. ಇದು ಬಂದುಮೇಳೆ ಕೆಂಪಾಗಿಯೂ, ಪ್ರತಿಕ್ಷಣದಲ್ಲಿಯೇ ಹೊಂಬಣ್ಣವಾಗಿಯೂ, ಮತ್ತೊಂದು ಕ್ಷಣಕ್ಕೆ ರಕ್ತದಷ್ಟು ಕೆಂಪಾಗಿಯೂ, ಅನಂತರದಲ್ಲಿ ಇಂದ್ರಚಾಪದಂತೆ ವಿಧವಿಧವಾದ ಬಣ್ಣಗಳಿಂದ ಯುಕ್ತವಾಗಿಯೂ ಇರುವದು. ಇದರ ಕಾಂತಿಯು ಭೂಮಿಯ ಮೇಲೆಲ್ಲಾ ಹರಡಿಕೊಂಡಿರುವಾಗ ಭೂಮಿಯ ಮೇಲಿರುವ ಪರ್ವತ ವೃಕ್ಷಾದಿ ಸಕಲವಸ್ತುಗಳೂ ಬಹಳ ರಮಣೀಯವಾಗಿರುತ್ತವೆ. ಈ ಬೆಳಕು ಮೊದಲು ಉತ್ತರದಿಕ್ಕಿನಲ್ಲಿ ಆಕಾಶದಲ್ಲಿ ಉದಯಿಸಿ ಹಾಗೆಯೇ ಆಕಾಶವನ್ನೆಲ್ಲಾ ಹರಡಿಕೊಳ್ಳುವದು. ಪೂರ್ವಕಾಲದಲ್ಲಿ ಇಂಥಾ ಬೆಳಕು ಕಾಣಿಸಿದರೆ ಲೋಕಕ್ಕೆ ಹಾನಿ ಎಂದು ಎಣಿಸಿ ಇದ್ದರು. ಈಗ ಅಂಥಾ ಮೌಢ್ಯವು ಇರುವಂತೆ ಕಾಣುವದಿಲ್ಲ.

ಈ ಬ್ರಹ್ಮಾಂಡದಲ್ಲಿ ಸಮಸ್ತ ನಕ್ಷತ್ರಗಳೂ ಗ್ರಹಗಳೂ ಸಹ ಆಕಾಶದಲ್ಲಿ ಸಂಚರಿಸುವವುಗಳಾಗಿವೆ. ಇದರಲ್ಲಿ ತೇಜೋಮಯವಾದ ನಕ್ಷತ್ರಗಳಿಗೆ ಸೂರ್ಯರೆಂಬಪಾಗಿಯೂ ಸೂರ್ಯನ ತೇಜಸ್ಸಿನಿಂದ ಕಾಂತಿಯನ್ನು ಹೊಂದತಕ್ಕ ನಕ್ಷತ್ರಗಳಿಗೆ ಗ್ರಹಗಳೆಂಬದಾಗಿಯೂ ಹೆಸರು. ನಮ್ಮ ಭೂಮಿಯೇ ಮುಂತಾದ ಗ್ರಹಗಳೂ ಈ ಗ್ರಹಗಳನ್ನು ಅನುಸರಿಸಿ ಹೋಗತಕ್ಕ ಚಂದ್ರರೂ ಸ್ವಕೀಯವಾದ ತೇಜಸ್ಸು ಇಲ್ಲದವುಗಳು ಅಂದರೆ ಸೂರ್ಯನಿಂದ ಬೆಳಕನ್ನು ಹೊಂದತಕ್ಕವುಗಳು. ಇವುಗಳ ಸುತ್ತಲೂ ಚಿಕ್ಕಚಿಕ್ಕ ಗ್ರಹಗಳು ಸುತ್ತುತ್ತಾ ಇದ್ದು ಬಂದೊಂದುಕಾಲದಲ್ಲಿ

ಕುಲಸತ್ತು ಮೂರು ತಿಂಗಳಾಯಿತು ತೊಗಲ ಪದ ನೋಡು.

ಬಂದಾನೊಂದು ನಕ್ಷತ್ರ ಅಥವಾ ಗ್ರಹದ ಆಕರ್ಷಣಶಕ್ತಿಯು ಹೆಚ್ಚಿದರೆ ಅದರ ಮೇಲೆ ಬಿದ್ದು ಅಲ್ಲಿಯೇ ಐಕ್ಯವಾಗುತ್ತವೆ. ರಾತ್ರಿಕಾಲದಲ್ಲಿ ನಮ್ಮ ಭೂಮಿಯಕಡೆಗೆ ನಕ್ಷತ್ರಗಳು ಬಿಳತಕ್ಕದ್ದನ್ನು ಎಲ್ಲರೂ ನೋಡಿ ಇದ್ದಾರೆ. ಈ ನಕ್ಷತ್ರಗಳು ಭೂಮಿಯ ಆಕರ್ಷಣಶಕ್ತಿಯಿಂದ ಬಹುದೂರದಿಂದ ಅದರ ಕಡೆಗೆ ಎಳೆಯಲ್ಪಟ್ಟು ಭೂಮಿಗೆ ಸಂಬಧಿಸಿದ ವಾಯುಮಂಡಲಕ್ಕೆ ತಗಲಿದ ಕೂಡಲೆ ಘರ್ಷಣೆಯಿಂದ ಉರಿಯುವದಕ್ಕೆ ಉಪಕ್ರಮವಾಗುತ್ತವೆ. ಹೀಗೆ ಉರಿಯುತ್ತಾ ಭೂಮಿಯಕಡೆಗೆ ಬಿಳತಕ್ಕ ನಕ್ಷತ್ರವನ್ನು ನೋಡಿ ಕೆಲವರು ಮೂಢರಾದ ಜನರು ಪುಣ್ಯವಂತರಾದ ಜನರು ಅಂತರಿಕ್ಷದಲ್ಲಿ ಸ್ವರ್ಗಾನುಭವ ಮಾಡಿಕೊಂಡಿರುತ್ತಾರೆಂಬದಾಗಿಯೂ ತಮ್ಮ ಪುಣ್ಯಾನುಭವ ಕಾಲವು ತೀರಿದ ಕೂಡಲೆ ಭೂಮಿಗೆ ಬೀಳುವರೆಂಬದಾಗಿಯೂ ವಿಚಿತ್ರವಾದ ಕಥೆಗಳನ್ನು ಕಲ್ಪಿಸಿಕೊಂಡು ಇದ್ದಾರೆ. ಸೂರ್ಯಸಿದ್ಧಾಂತವೇ ಮುಂತಾದ ಗ್ರಂಥಗಳು ಪ್ರಚಾರವಾಗುತ್ತಾ ಬಂದರೆ ಇಂಥಾವರ ಮೌಢ್ಯವು ತೊಲಗುವದು.

೭. ಮೈಸೂರು ಶ್ರೀಮನ್ಮಹಾರಾಣಿಯವರ ಬಾಲಿಕಾಪಾಠಶಾಲೆ.

ಮೈಸೂರು ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯು ಬಾಲಕಿಯರಿಗೆ ಇನಾಮು ಕೊಡುವದಕ್ಕೋಸ್ಕರ ಜಗನ್ಮೋಹನ ಅರಮನೆಯಲ್ಲಿ ವಿದ್ವತ್ಸಭೆಯು ಸೇರಿ ಇತ್ತು. ಶ್ರೀಮನ್ಮಹಾರಾಜ ಚಾಮರಾಜ ಬಡೆಯರ್ ಬಹದ್ದರ್ ಕೆ. ಜಿ. ಸಿ. ಎಸ್. ಐ. ಅವರು ಆಗ್ರಾಸನವನ್ನು ವಹಿಸಿ ಇದ್ದರು. ಇವರ ಬಲಗಡೆಯಲ್ಲಿ ಮೆ|| ಡಬ್ಲ್ಯಿಯು. ಎ. ಪೋರ್ಟರುಸಾಹೇಬರವರೂ ಎಡಗಡೆಯಲ್ಲಿ ಮಾನ್ಯ ರಾಜಾ ದಿವಾನ್ ಕೆ. ಶೇಷಾದ್ರಿಅಯ್ಯನವರೂ ಕುಳಿತು ಇದ್ದರು. ಈ ಸಭೆಗೆ ಈ ಸಂಸ್ಥಾನದ ನೇಟೀವ್ ಮತ್ತು ಯೂರೋಪಿಯರ್ ಅಧಿಕಾರಸ್ಥರೂ ಅನೇಕ ಯೂರೋಪಿಯರ್ ದೊರೆಸಾನಿಗಳೂ ಅನೇಕ ನೇಟೀವ್ ದೊಡ್ಡಮನುಷ್ಯರ ಮನೆ ಹೆಂಗಸರೂ ಬಂದಿದ್ದರು.

ಈ ಸಭಾಸ್ಥಾನದ ಮಧ್ಯದಲ್ಲಿ ಬಂದು ಸರಸ್ವತೀ ಪಠವನ್ನು ಕಟ್ಟಿದ್ದರು. ಇದನ್ನು ಸ್ವಲ್ಪ ದೂರದಿಂದ ನೋಡಿದರೆ ಯಾವಳೋ ಬಬ್ಬು

ಕುರುಡ ಕಂಡರಿಯ, ಕಿವುಡ ಕೇಳ್ದರಿಯ.

ಸ್ತ್ರೀಯು ವೀಣೆಯನ್ನು ನುಡಿಸುತ್ತಾ ನಿಂತಿರುವಂತೆ ಕಾಣಿಸುತ್ತಾ ಇತ್ತೀ ಹೊರ್ತು ಚಿತ್ರ ಪಠವೆಂದು ತಿಳಿಯುತ್ತಿರಲಿಲ್ಲ. ಸಕಲರೂ ಈ ಪಠವನ್ನು ನೋಡಿ ಅದನ್ನು ಬರೆದ ಅನಂತಶಯನದ ಚಿತ್ರಗಾರನನ್ನು ಬಹಳವಾಗಿ ಕೊಂಡಾಡಿದರು.

ಪ್ರಾತಃಕಾಲ ೮ ಘಂಟೆಗೆ ಸರಿಯಾಗಿ ಶ್ರೀಮನ್ಮಹಾರಾಜರವರು ಸಭಾ ಪ್ರವೇಶಮಾಡಿ ಪೀಠವನ್ನು ಅಲಂಕರಿಸಿದ ಕೂಡಲೆ ಸಂಸ್ಕೃತ ಕನ್ನಡ ತೆಲಗು ಮುಂತಾದ ಭಾಷೆಗಳಲ್ಲಿ ಬಾಲಕಿಯರು ಕೆಲವು ಕೃತಿಗಳನ್ನು ಹೇಳಿದರು. ಕೆಲವರು ಬಾಲಕಿಯರು ವೀಣೆ, ಪಿಯಾನೊ ಮುಂತಾದವುಗಳನ್ನು ನುಡಿಸಿದರು. ಸ್ತ್ರೀವಿದ್ಯಾಭ್ಯಾಸದ ಪ್ರಾಮುಖ್ಯದ ವಿಷಯದಲ್ಲಿ ತಾಯಿಗೂ ಮಗಳಿಗೂ ನಡೆದ ಬಂದು ಸಂವಾದವನ್ನು ಇಬ್ಬರು ಬಾಲಕಿಯರು ಹೇಳಿದರು. ಅನಂತರದಲ್ಲಿ ಈ ಪಾಠಶಾಲೆಯ ಸೂಪರಿಂಟೆಂ ಡೆಂಟರಾದ ಮು॥ ರಾ॥ ಡಿ. ಸುಬ್ಬಯ್ಯನವರು ಈ ಪಾಠಶಾಲೆಯ ಅಭಿವೃದ್ಧಿಯ ರಿಪೋರ್ಟನ್ನು ಓದಿದರು. ಅನಂತರದಲ್ಲಿ ಮಹಾರಾಜರವರು ಪರೀಕ್ಷೆಯಲ್ಲಿ ತೇರ್ಗಡೆಯಾದ ಬಾಲಕಿಯರಿಗೆ ಇನಾಮುಗಳನ್ನು ಕೊಟ್ಟರು. ಕೂಡಲೆ ಮಿ॥ ಪೋರ್ಟರ್ ಸಾಹೇಬರವರು ಸಭೆಯವರನ್ನು ಕುರಿತು ಹೇಳಿದ್ದೇನಂದರೆ:—

ನಮ್ಮ ಶ್ರೀಮನ್ಮಹಾರಾಜರವರು ಬಾಲಿಕಾವಿದ್ಯಾಭ್ಯಾಸದ ವಿಷಯದಲ್ಲಿ ಅತ್ಯಂತ ಆದರವುಳ್ಳವರಾಗಿ ಇದ್ದಾರೆ. ಈದಿವಸದ ಉತ್ಸವವು ಸಕಲರಿಗೂ ಸಂತೋಷಪ್ರದವಾದದ್ದು. ಆದರೆ ಮುಖ್ಯವಾಗಿ ನಮ್ಮ ಮಹಾರಾಜರವರೂ ಈ ಪಾಠಶಾಲೆಯ ಮ್ಯಾನೇಜರುಗಳೂ ಈ ಸಂತೋಷಕ್ಕೆ ಪಾತ್ರರಾಗಿ ಇರುತ್ತಾರೆ. ಬಾಲಿಕಾವಿದ್ಯಾಭ್ಯಾಸವು ಈ ಸಂಸ್ಥಾನಕ್ಕೆ ಹೊಸದು. ಸ್ತ್ರೀವಿದ್ಯಾಭ್ಯಾಸ ಪಕ್ಷಪಾತವುಳ್ಳವರೂಕೂಡ ಇವರು ವಿದ್ಯಾವ್ಯಾಸಂಗ ಮಾಡಿದರೆ ಮನೇಕೆಲಸಗಳನ್ನು ಉಪೇಕ್ಷೆಮಾಡುತ್ತಾರೆಂದು ತಿಳಿದು ಕೊಂಡು ಇದ್ದಾರೆ. ಆದಾಗ್ಯೂ ಇಷ್ಟುಮಂದಿ ಬಾಲಕಿಯರು ಸಂಗೀತ ಸಾಹಿತ್ಯಗಳಲ್ಲಿ ಮೂರಿರತಕ್ಕ ಅಭ್ಯಾಸವನ್ನು ನೋಡಿದರೆ ಬಹಳ ಸಂತೋಷ

ವಾಗುತ್ತದೆ. ಈ ಪಾಠಶಾಲೆಯಲ್ಲಿ ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ಮಾಡಿ ಸುವದರಿಂದ ತಮ್ಮ ಮಕ್ಕಳು ವಿವೇಕಶಾಲಿಗಳೂ ಸಕಲಗುಣಸಂಪನ್ನರೂ ಬಳ್ಳೀಪತಿವ್ರತೆಯರೂ ಆಗುತ್ತಾರೆಂದು ಅಲ್ಲಿನಡಿಯತಕ್ಕ ಪಾಠ ಪ್ರವಚನ ಗಳಿಂದಎಲ್ಲರೂ ತಿಳಿದುಕೊಂಡು ಇದ್ದಾರೆ. ಈ ಬಾಲಿಕಾ ವಿದ್ಯಾಭ್ಯಾಸದ ವಿಷಯದಲ್ಲಿ ಶ್ರೀಮನ್ಮಹಾರಾಜರವರು ಮಾಡಿರತಕ್ಕ ಉಪಕಾರವು ನಿಮ್ಮೆಲ್ಲ ರಿಗೂ ತಿಳಿದೇ ಇದೆ. ತಮ್ಮ ಸ್ವಂತಆರಮನೆಗೆ ಸಮಾನವಾದ ಒಂಗಲಿಯನ್ನು ಈ ಪಾಠಶಾಲೆಗೆ ಬಿಟ್ಟುಕೊಟ್ಟಿರುವದಲ್ಲದೆ ಈವರ್ಷ ಜನಾನಾಪಾಠಶಾಲೆಗೋಸ್ಕರ ಬಹಳದ್ರವ್ಯವನ್ನು ವೆಚ್ಚಮಾಡಿ ಮತ್ತೊಂದು ಒಂಗಲಿಯನ್ನು ಕಟ್ಟಿಸಿ ಕೊಡುತ್ತಾ ಇದ್ದಾರೆ. ಪರೋಪಕಾರದಲ್ಲಿ ಆಸಕ್ತಿಯುಳ್ಳ ನಮ್ಮ ಮಹಾ ರಾಜರವರ ಬಳಿಯಲ್ಲಿರತಕ್ಕ ಅಧಿಕಾರಿಗಳೂ ಕೂಡ ಇವರ ಹಾಗೆಯೇ ಪರೋಪಕಾರಬುದ್ಧಿಯುಳ್ಳವರಾಗಿ ಇದ್ದಾರೆ. ಈ ಸ್ತ್ರೀವಿದ್ಯಾಭ್ಯಾಸದ ವಿಷಯದಲ್ಲಿ ಮು" ರಾ" ಎ. ನರಸಿಂಹಅಯ್ಯಂಗಾರ್ಯರವರು ಪಡತಕ್ಕ ಶ್ರಮವು ನಿಮ್ಮೆಲ್ಲರಿಗೂ ತಿಳಿದೇ ಇರುವದು. ಇವರು ಅಹೋರಾತ್ರಿಗಳಲ್ಲಿಯೂ ಈ ಪಾಠಶಾಲೆಯ ಅಭಿವೃದ್ಧಿಗೋಸ್ಕರ ಪಡತಕ್ಕ ಶ್ರಮಕ್ಕೆ ಸ್ತ್ರೀಯರು ಪುರುಷರಂತೆಯೇ ವಿದ್ಯಾವಂತರಾಗುವದೇ ಫಲವೇ ಹೊರ್ತು ಇನ್ಯಾವದೂ ಅನುರೂಪವಾದ ಫಲವು ಆಗಲಾರದು. ಈ ಪಾಠಶಾಲೆಯಲ್ಲಿ ಇವರು ಮಾಡಿರತಕ್ಕ ಏರ್ಪಾಡುಗಳನ್ನು ನೋಡಿದರೆ ನಮ್ಮ ಮಹಾರಾಜರವರಿಗೂ ಮು" ರಾ" ಎ. ನರಸಿಂಹಅಯ್ಯಂಗಾರ್ಯರಿಗೂ ಈ ಫಲವು ಸುಲಭವಾಗಿ ದೊರೆ ಯುವಂತೆ ತೋರುತ್ತದೆ. ಇವರು ತಮ್ಮ ಶ್ರುತಿ ಸ್ಮೃತಿಗಳಲ್ಲಿಯೂ ಶಾಸ್ತ್ರ ಪುರಾಣೇತಿಹಾಸಾದಿಗಳಲ್ಲಿಯೂ ಇರತಕ್ಕ ಸಾರವನ್ನೆಲ್ಲಾ ಬೇರೆಬೇರೆಗ್ರಂಥ ಗಳನ್ನಾಗಿ ಕಲ್ಪಿಸಿ ಅವುಗಳನ್ನು ಪಾಠ ಹೇಳಿಸುತ್ತಾರೆ. ಇದರಿಂದ ಅನಾದಿಯಾಗಿ ಬಂದಿರತಕ್ಕ ಆಚಾರವ್ಯವಹಾರಗಳಿಗೆ ಯಾವಲೋಪವೂ ಬರುವದಿಲ್ಲ. ಇದರ ಜೊತೆಯಲ್ಲಿಯೇ ವೈದ್ಯಶಾಸ್ತ್ರ ಆರೋಗ್ಯಸೂತ್ರಗಳೇ ಮೊದಲಾದ ಅನೇಕ ವಿಷಯಗಳನ್ನು ಅನೇಕ ಉದ್ಗ್ರಂಥಗಳಿಂದ ಸಂಗ್ರಹಿಸಿ ಬೇರೆಬೇರೆ ಪುಸ್ತಕಗಳನ್ನು ದೇಶಭಾಷೆಯಲ್ಲಿ ಬರೆಸಿ ಅವುಗಳನ್ನು ಹೇಳಿ

ಸುತ್ತಾರೆ. ಇದರಿಂದ ಸ್ವದೇಶಗ್ರಂಥಗಳಲ್ಲಿರುವ ವಿಷಯಗಳು ತಿಳಿಯುವದು ಮಾತ್ರವಲ್ಲದೆ ಅನ್ಯದೇಶದ ಗ್ರಂಥಸಾರಾಂಶಗಳೂ ತಿಳಿದಹಾಗೆ ಆಗುತ್ತದೆ. ಇಮುವರಿಗೂ ಸ್ತ್ರೀಯರು ವಿದ್ಯಾಭ್ಯಾಸವನ್ನು ಮಾಡಿದರೆ ಬಹಳ ಪಾತಕವೆಂದು ತಿಳಿದುಕೊಂಡು ಇದ್ದರು. ವಿದ್ಯಾಭ್ಯಾಸದಿಂದ ಉಂಟಾಗತಕ್ಕ ಸಂತೋಷವನ್ನು ಅನುಭವಿಸಿದಮೇಲೆ ಸ್ತ್ರೀಯರು ಎಷ್ಟು ಪ್ರತಿಬಂಧಕಗಳು ಬಂದರೂ ವಿದ್ಯೆಯನ್ನು ಗಳಿಸದೆ ಬಿಡುವದಿಲ್ಲ. ಇದಕ್ಕೆ ಒಂದು ದೃಷ್ಟಾಂತವುಂಟು. ಅಮೆರಿಕಾಖಂಡದಲ್ಲಿ ಒಬ್ಬ ಗಡಿಯಾರಮಾಡುವವನು ಅನೇಕ ಗಡಿಯಾರಗಳನ್ನು ತೆಗೆದುಕೊಂಡು ಅವುಗಳನ್ನು ಮಾರುವದಕ್ಕೋಸ್ಕರ ಪಟ್ಟಣ ಪಟ್ಟಣಕ್ಕೆ ಹೋದಾಗ್ಯೂ ಆಪಟ್ಟಣದವರು ಯಾರೂ ಇವನ ಗಡಿಯಾರಗಳನ್ನು ಕೊಳ್ಳಲಿಲ್ಲ. ಇದಕ್ಕೆ ಅವನು ಒಂದು ಉಪಾಯವನ್ನು ಮಾಡಿದನು. ಏನೆಂದರೆ: ಎಲ್ಲರ ಮನೆಗಳಿಗೂ ಹೋಗಿ ಆ ಮನೆಯ ಯಜಮಾನನನ್ನು ಕರೆದು ಒಂದು ಗಡಿಯಾರವನ್ನು ಆತನಿಗೆ ಕೊಟ್ಟು "ಇದನ್ನು ನೀನು ಇಟ್ಟುಕೊಂಡಿರು. ಇನ್ನು ೨ ತಿಂಗಳು ಬಿಟ್ಟುಕೊಂಡು ನಾನು ಬರುತ್ತೇನೆ. ಆಗ ನನ್ನ ಗಡಿಯಾರವನ್ನು ನನಿಗೆ ಕೊಡು. ಅದುವರಿಗೂ ನೀನು ಅದನ್ನು ಉಪಯೋಗಿಸಿಕೊಳ್ಳಬಹುದು" ಎಂದು ಹೇಳಿ ಎಲ್ಲರಿಗೂ ಒಂದೊಂದು ಗಡಿಯಾರವನ್ನು ಕೊಟ್ಟು ಹೊರಟು ಹೋದನು. ಎರಡು ತಿಂಗಳಾದಮೇಲೆ ಪುನಹ ಬಂದು ತನ್ನ ಗಡಿಯಾರಗಳನ್ನು ಕೇಳಲಾಗಿ ಮೂರುಪಾಲು ಜನರೆಲ್ಲರೂ ಅದರ ಪ್ರಯೋಜನವನ್ನು ತಿಳಿದುಕೊಂಡು ಅವುಗಳನ್ನು ತಮ್ಮಲ್ಲಿಯೇ ಇಟ್ಟುಕೊಂಡು ಅವುಗಳ ಬೆಲೆಯನ್ನು ಅವನಿಗೆ ಕೊಟ್ಟು ಕಳುಹಿಸಿದರು. ಹೀಗೆಯೇ ಈಗ ನಾವು ಸುಮ್ಮನೆ ವಿದ್ಯೆ ಕಲಿಸುತ್ತಾ ಇದ್ದಾಗ್ಯೂ ಬಾಲಕಿಯರು ವಿದ್ಯೆ ಕಲಿಯುವದು ಬಹಳ ಕಷ್ಟವಾಗಿದೆ. ವಿದ್ಯಾವಂತರಾಗುವದರಿಂದ ತಮಗೆ ಆಗತಕ್ಕ ಪ್ರಯೋಜನಗಳೆಲ್ಲಾ ಗೊತ್ತಾದ ಕೂಡಲೆ ಎಷ್ಟು ಧನವ್ಯಯವನ್ನಾದರೂ ಮಾಡಿ ವಿದ್ಯೆಯನ್ನು ಕಲಿಯುದೆ ಬಿಡರು. ಸ್ತ್ರೀಯರು ವಿದ್ಯಾವಂತರಾದರೆ ಮನೇ ಕೆಲಸಗಳನ್ನು ಬಿಟ್ಟು ಓದುತ್ತಲೂ ಬರೆಯುತ್ತಲೂ ಕಾಲಹರಣ ಮಾಡುತ್ತಾ

ರೆಂಬುದಾಗಿಯೂ ಅವಿಧೇಯರಾಗುವರೆಂಬದಾಗಿಯೂ ಜನರು ನಾನಾವಿಧವಾಗಿ ಭಯಪಡುವರು. ಹೀಗೆ ಯೋಚಿಸುವದು ಬಹಳ ಅವಿವೇಕ. ಯಾಕಂದರೆ, ವಿದ್ಯಾವಂತಳಾದ ಸ್ತ್ರೀಯು ಕಷ್ಟ್ಯನಾದಕೆ ಲಸವನ್ನು ಮಾಡುವದರಿಂದ ದೇಹಕ್ಕೆ ಆರೋಗ್ಯವೆಂದು ತಿಳಿದುಕೊಳ್ಳುವಳು; ಅದರಿಂದಲೇ ನಿರಕ್ಷರ ಕುಕ್ಷಿಗಳಾದ ಹೆಂಗಸರಿಗಿಂತ ಹೆಚ್ಚಾಗಿ ಆದರದಿಂದ ಕೆಲಸ ಮಾಡುವಳು.. ಲೋಕದಲ್ಲಿ ಅವಿಧೇಯರಾಗುವವರು ಮೂಢರೇ ಹೊರ್ತು ಲೋಕವ್ಯವಹಾರವನ್ನು ತಿಳಿದ ವಿದ್ಯಾವಂತರಲ್ಲ. ಸ್ತ್ರೀಯರು ವಿದ್ಯಾವಂತರಾದರೆ ಬಂದುವೇಳೆ ಮನೆಯಲ್ಲಿ ಕಲಹಗಳು ಬಂದಾಗ್ಯೂ ತಾರತಮ್ಯವನ್ನು ಯೋಚಿಸಿ ಮನಃಕಷಾಯಗಳನ್ನು ತಪ್ಪಿಸಿಕೊಳ್ಳುವರು. ಇದಲ್ಲದೆ ಮೂಢರಾದ ಸ್ತ್ರೀಯರಿಗೆ ಮನೇಕೆಲಸ ಮಾಡತಕ್ಕ ಕಾಲದಲ್ಲಿ ವಿನಹಾ ಮಿಕ್ಕ ಕಾಲಗಳಲ್ಲಿ ವಿದ್ಯಾವಿಹೀನರಾದಕಾರಣ ಸತ್ಕಾರ್ಯಗಳಲ್ಲಿ ಪ್ರವೇಶಿಸುವದಕ್ಕೆ ತಿಳಿಯದೆ ಲೋಕದಲ್ಲಿರತಕ್ಕ ದುರ್ಜನರ ಪ್ರಸ್ತಾಪಗಳನ್ನು ಮಾಡುತ್ತಾ ಪರಸ್ಪರ ನಿಂದೆಗಳಲ್ಲಿ ಕಾಲಹರಣ ಮಾಡುವರು. ಸ್ತ್ರೀಯರು ವಿದ್ಯಾವಂತರಾದರೆ ಸಾಮಾನ್ಯ ಜನರಂತೆ ಗೃಹಕೃತ್ಯಗಳನ್ನು ನೆರವೇರಿಸಿಕೊಂಡು ಮಕ್ಕಳಿಗೆ ವಿದ್ಯಾಬುದ್ಧಿಗಳನ್ನು ಹೇಳಿಕೊಂಡು ಪುರಾಣಾದಿಗಳನ್ನೆಲ್ಲಾ ಓದಿ ಅದರಿಂದ ತಾವು ಸನ್ಮಾರ್ಗಪ್ರವರ್ತಕರಾಗುವದಲ್ಲದೆ ಅನೇಕರಿಗೆ ಆ ಮಾರ್ಗವನ್ನು ಬೋಧಿಸುತ್ತಾ ವೃತ್ತಾಂತಪತ್ರಿಕೆಗಳನ್ನು ಓದಿ ಲೋಕವ್ಯವಹಾರಗಳನ್ನೆಲ್ಲಾ ತಾವು ತಿಳಿದುಕೊಂಡು ಇತರರಿಗೂ ಹೇಳುತ್ತಾ ಸದ್ವ್ಯಾಪಾರನಿರತರಾಗಿ ಇರುವರು. ಇದಲ್ಲದೆ ಸ್ತ್ರೀಯರು ವಿದ್ಯಾವಂತರಾದರೆ ಗೃಹಕೃತ್ಯಕ್ಕೆ ಬೇಕಾದ ವೆಚ್ಚಗಳನ್ನೆಲ್ಲಾ ಇವರೇ ಮಾಡಿಕೊಳ್ಳಬಹುದು. ಇದರಿಂದ ಪುರುಷರಿಗೆ ಎಷ್ಟೋ ವಿಶ್ರಾಂತಿಯುಂಟಾಗುವದು. ಇವರು ವಿವೇಕಿಗಳಾದರು ಎಂದು ಗೊತ್ತಾದರೆ ಪುರುಷರು ತಮ್ಮ ಮನೇ ಕೆಲಸಗಳನ್ನೆಲ್ಲಾ ಇವರಿಗೇ ಒಪ್ಪಿಸುವರು. ಅನೇಕರು ಸ್ತ್ರೀಯರಿಗೆ ಇಂಗ್ಲೀಷ್‌ವಿದ್ಯಾಭ್ಯಾಸವನ್ನು ವಿಶೇಷವಾಗಿ ಮಾಡಿಸಬೇಕೆಂದು ಹೇಳುತ್ತಾರೆ. ಬಾಲಕಿಯರು ಬಹಳ ವಯಸ್ಸಾಗುವವರಿಗೂ ಓದುವದಿಲ್ಲ. 'ಅವರು ಅನ್ಯ

ಕುಲಪ್ರಮಾಣ ನಾಲಿಗೆ, ಜಲಪ್ರಮಾಣ ತಾವರೆ.

ಭಾಷೆಯನ್ನು ತಿಳಿದುಕೊಳ್ಳುವದಕ್ಕೆ ಬಹಳ ಕಾಲ ಬೇಕಾಗಿರುವದು. ಸ್ವಭಾಷೆಯಾದರೆ ಕಲಿಯುವದಕ್ಕೆ ಅವರಿಗೆ ಸುಲಭವಾಗಿರುವದು. ಈ ದೇ ಶದ ಸ್ತ್ರೀಯರು ಯಾವಯಾವ ವಿಷಯಗಳನ್ನು ಕಲಿಯಬೇಕೋ ಅಂಥಾ ವಿಷಯಗಳನ್ನು ಸ್ವಭಾಷೆಯಲ್ಲಿಯೇ ಬರೆಸಿ ಕಲಿಸಿದರೆ ಅವರು ಪಾಠಶಾಲೆ ಯನ್ನು ಬಿಡುವದರೊಳಗಾಗಿಯೇ ತಕ್ಕಷ್ಟು ಪಾಂಡಿತ್ಯವನ್ನು ಹೊಂದ ಬಹುದು. ಹಾಗಿಲ್ಲದೆ ಇಂಗ್ಲೀಷನ್ನು ಕಲಿಸುವದಕ್ಕೆ ಉಪಕ್ರಮಿಸಿ ದರೆ ಅದರಲ್ಲಿ ತಕ್ಕಷ್ಟು ಜ್ಞಾನ ಬರುವದರಲ್ಲಿಯೇ ಇವರು ಪಾಠಶಾಲೆ ಯನ್ನು ಬಿಡಬೇಕಾಗುವದು. ಇದನ್ನೆಲ್ಲಾ ಆಲೋಚಿಸಿಯೇ ಈ ಪಾಠಶಾ ಲೆಯ ಮ್ಯಾನೇಜರುಗಳು ಸ್ವಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿಸುವದಕ್ಕೆ ಉಪಕ್ರಮಿಸಿ ಇದ್ದಾರೆ. ಇದಲ್ಲದೆ ಸ್ತ್ರೀಯರಿಗೆ ಇಂಗ್ಲೀಷು ವಿದ್ಯಾಭ್ಯಾಸ ಮಾಡಿಸಬೇಕಾದರೆ ಅವರ ಗಂಡಂದಿರು ಆ ವಿದ್ಯೆಯನ್ನು ತಿಳಿದವರಾಗಿರ ಬೇಕು. ಹಾಗಿಲ್ಲದಿದ್ದರೆ ಪರಸ್ಪರಾನುರಾಗಲೋಪಕ್ಕೆ ಆಸ್ಪದವಾಗು ವದು. ಆದದರಿಂದ ಈ ಮ್ಯಾನೇಜರುಗಳು ಬಾಲಕಿಯರಿಗೆ ಸ್ವಲ್ಪ ಇಂಗ್ಲೀ ಷನ್ನು ಹೇಳಿಸಿರುತ್ತಾರೆ. ಅವರು ಮುಂದಕ್ಕೆ ಇಂಗ್ಲೀಷ್ ಓದಿದ ಗಂಡಂ ದಿರನ್ನು ಮದುವೆಮಾಡಿಕೊಂಡರೆ ಅವನ್ನು ವೃದ್ಧಿಪಡಿಸಿಕೊಳ್ಳುವದಕ್ಕೆ ಇದು ಸಾಧಕವಾಗಿದೆ. ಮುಖ್ಯವಾಗಿ ಈ ಪಾಠಶಾಲೆಯ ಮ್ಯಾನೇಜರುಗಳು ಲೌಕಿಕ ವೈದಿಕ ಸಂಪ್ರದಾಯಗಳೆರಡನ್ನೂ ಅತಿಕ್ರಮಿಸದೆ ಸಕಲರಿಗೂ ಸಮ್ಮತವಾಗಿರುವಂತೆ ವಿದ್ಯಾಭ್ಯಾಸ ಮಾಡಿಸುತ್ತಾ ಇದ್ದಾರೆ. ಶ್ರೀಮನ್ಮ ಹಾರಾಜರವರು ಈಕೆಲಸದಲ್ಲಿ ಇವರನ್ನು ಪ್ರೋತ್ಸಾಹಗೊಳಿಸುತ್ತಾ ಇದ್ದಾರೆ. ಬಾಲಕಿಯರೆಲ್ಲರೂ ವಿದ್ಯೆಯನ್ನು ಕಲಿತುಕೊಂಡು ಗೃಹಕೃತ್ಯಗಳಲ್ಲಿ ನಿರತ ರಾಗಿಯೂ ತಮ್ಮ ಆಚಾರವ್ಯವಹಾರಗಳನ್ನು ಸ್ವಲ್ಪವೂ ವಿಾರಿ ನಡೆಯದ ವರಾಗಿಯೂ ಪತಿವ್ರತೆಯರಾಗಿಯೂ ಗುರು ಹಿರಿಯರಲ್ಲಿ ಭಕ್ತಿಯುಳ್ಳವರಾ ಗಿಯೂ ತಾವು ವಿದ್ಯಾವಂತರಾದಹಾಗೆಲ್ಲಾ ತಮ್ಮ ಸ್ತ್ರೀಪ್ರಪಂಚ ವನ್ನು ಉದ್ಧಾರ ಮಾಡತಕ್ಕವರೂ ಆದರೆ ನಮ್ಮ ಶ್ರೀಮನ್ಮಹಾರಾಜರ ವರು, ನರಸಿಂಹಯ್ಯಂಗಾರ್ಯರು ಮತ್ತು ಇದೇ ರೀತಿಯಲ್ಲಿ ಈ ದೇಶದ

ಕುರುಬನ ಮುಂದೆ ತೋಳ ಕಾದಹಾಗೆ.

ರೆಂಬುದಾಗಿಯೂ ಅವಿಧೇಯರಾಗುವರೆಂಬುದಾಗಿಯೂ ಜನರು ನಾನಾವಿಧವಾಗಿ ಭಯಪಡುವರು. ಹೀಗೆ ಯೋಚಿಸುವದು ಬಹಳ ಅವಿವೇಕ. ಯಾಕಂದರೆ, ವಿದ್ಯಾವಂತಳಾದ ಸ್ತ್ರೀಯು ಕಷ್ಟವಾದಕೆಲಸವನ್ನು ಮಾಡುವದರಿಂದ ದೇಹಕ್ಕೆ ಆರೋಗ್ಯವೆಂದು ತಿಳಿದುಕೊಳ್ಳುವಳು; ಅದರಿಂದಲೇ ನಿರಕ್ಷರ ಕುಕ್ಷಿಗಳಾದ ಹೆಂಗಸರಿಗಿಂತ ಹೆಚ್ಚಾದ ಆದರದಿಂದ ಕೆಲಸ ಮಾಡುವಳು. ಲೋಕದಲ್ಲಿ ಅವಿಧೇಯರಾಗುವವರು ಮೂಢರೇ ಹೊರ್ತು ಲೋಕವ್ಯವಹಾರವನ್ನು ತಿಳಿದ ವಿದ್ಯಾವಂತರಲ್ಲ. ಸ್ತ್ರೀಯರು ವಿದ್ಯಾವಂತರಾದರೆ ಬಂದುಹೇಳಿ ಮನೆಯಲ್ಲಿ ಕಲಹಗಳು ಬಂದಾಗ್ಯೂ ತಾರತಮ್ಯವನ್ನು ಯೋಚಿಸಿ ಮನಃಕಷಾಯಗಳನ್ನು ತಪ್ಪಿಸಿಕೊಳ್ಳುವರು. ಇದಲ್ಲದೆ ಮೂಢರಾದ ಸ್ತ್ರೀಯರಿಗೆ ಮನೇಕೆಲಸ ಮಾಡತಕ್ಕ ಕಾಲದಲ್ಲಿ ವಿನಹಾ ಮಿಕ್ಕ ಕಾಲಗಳಲ್ಲಿ ವಿದ್ಯಾವಿಹೀನರಾಪಕಾರಣ ಸತ್ಕಾರ್ಯಗಳಲ್ಲಿ ಪ್ರವೇಶಿಸುವದಕ್ಕೆ ತಿಳಿಯದೆ ಲೋಕದಲ್ಲಿರತಕ್ಕ ದುರ್ಜನರ ಪ್ರಸಂಗಗಳನ್ನು ಮಾಡುತ್ತಾ ಪರಸ್ಪರ ನಿಂದೆಗಳಲ್ಲಿ ಕಾಲಹರಣ ಮಾಡುವರು. ಸ್ತ್ರೀಯರು ವಿದ್ಯಾವಂತರಾದರೆ ಸಾಮಾನ್ಯ ಜನರಂತೆ ಗೃಹಕೃತ್ಯಗಳನ್ನು ನೆರವೇರಿಸಿಕೊಂಡು ಮಕ್ಕಳಿಗೆ ವಿದ್ಯಾಬುದ್ಧಿಗಳನ್ನು ಹೇಳಿಕೊಂಡು ಪುರಾಣಾದಿಗಳನ್ನೆಲ್ಲಾ ಓದಿ ಅದರಿಂದ ತಾವು ಸನ್ಮಾರ್ಗಪ್ರವರ್ತಕರಾಗುವದಲ್ಲದೆ ಅನೇಕರಿಗೆ ಆ ಮಾರ್ಗವನ್ನು ಬೋಧಿಸುತ್ತಾ ವೃತ್ತಾಂತಪತ್ರಿಕೆಗಳನ್ನು ಓದಿ ಲೋಕವ್ಯವಹಾರಗಳನ್ನೆಲ್ಲಾ ತಾವು ತಿಳಿದುಕೊಂಡು ಇತರರಿಗೂ ಹೇಳುತ್ತಾ ಸದ್ವ್ಯಾಪಾರನಿರತರಾಗಿ ಇರುವರು. ಇದಲ್ಲದೆ ಸ್ತ್ರೀಯರು ವಿದ್ಯಾವಂತರಾದರೆ ಗೃಹಕೃತ್ಯಕ್ಕೆ ಬೇಕಾದ ವೆಚ್ಚಗಳನ್ನೆಲ್ಲಾ ಇವರೇ ಮಾಡಿಕೊಳ್ಳಬಹುದು. ಇದರಿಂದ ಪುರುಷರಿಗೆ ಎಷ್ಟೋ ವಿಶ್ರಾಂತಿಯುಂಟಾಗುವದು. ಇವರು ವಿವೇಕಿಗಳಾದರು ಎಂದು ಗೊತ್ತಾದರೆ ಪುರುಷರು ತಮ್ಮ ಮನೇಕೆಲಸಗಳನ್ನೆಲ್ಲಾ ಇವರಿಗೇ ಒಪ್ಪಿಸುವರು. ಅನೇಕರು ಸ್ತ್ರೀಯರಿಗೆ ಇಂಗ್ಲೀಷ್‌ವಿದ್ಯಾಭ್ಯಾಸವನ್ನು ವಿಶೇಷವಾಗಿ ಮಾಡಿಸಬೇಕೆಂದು ಹೇಳುತ್ತಾರೆ. ಬಾಲಕಿಯರು ಬಹಳ ವಯಸ್ಸಾಗುವವರಿಗೂ ಓದುವದಿಲ್ಲ. ಆವರು ಅನ್ಯ

ಕೂಲಪ್ರಮಾಣ ನಾಲಿಗೆ, ಜಲಪ್ರಮಾಣ ತಾವರೆ.

ಭಾಷೆಯನ್ನು ತಿಳಿದುಕೊಳ್ಳುವದಕ್ಕೆ ಬಹಳ ಕಾಲ ಬೇಕಾಗಿರುವದು. ಸ್ವಭಾಷೆಯಾದರೆ ಕಲಿಯುವದಕ್ಕೆ ಅವರಿಗೆ ಸುಲಭವಾಗಿರುವದು. ಈ ದೇ ಶದ ಸ್ತ್ರೀಯರು ಯಾವಯಾವ ವಿಷಯಗಳನ್ನು ಕಲಿಯಬೇಕೋ ಅಂಥಾ ವಿಷಯಗಳನ್ನು ಸ್ವಭಾಷೆಯಲ್ಲಿಯೇ ಬರೆಸಿ ಕಲಿಸಿದರೆ ಅವರು ಪಾಠಶಾಲೆ ಯನ್ನು ಬಿಡುವದರೊಳಗಾಗಿಯೇ ತಕ್ಕಷ್ಟು ಪಾಂಡಿತ್ಯವನ್ನು ಹೊಂದ ಬಹುದು. ಹಾಗಿಲ್ಲದೆ ಇಂಗ್ಲೀಷನ್ನು ಕಲಿಸುವದಕ್ಕೆ ಉಪಕ್ರಮಿಸಿ ದರೆ ಅದರಲ್ಲಿ ತಕ್ಕಷ್ಟು ಜ್ಞಾನ ಬರುವದರಲ್ಲಿಯೇ ಇವರು ಪಾಠಶಾಲೆ ಯನ್ನು ಬಿಡಬೇಕಾಗುವದು. ಇದನ್ನೆಲ್ಲಾ ಆಲೋಚಿಸಿಯೇ ಈ ಪಾಠಶಾ ಲೆಯ ಮ್ಯಾನೇಜರುಗಳು ಸ್ವಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿಸುವದಕ್ಕೆ ಉಪಕ್ರಮಿಸಿ ಇದ್ದಾರೆ. ಇದಲ್ಲದೆ ಸ್ತ್ರೀಯರಿಗೆ ಇಂಗ್ಲೀಷು ವಿದ್ಯಾಭ್ಯಾಸ ಮಾಡಿಸಬೇಕಾದರೆ ಅವರ ಗಂಡಂದಿರು ಆ ವಿದ್ಯೆಯನ್ನು ತಿಳಿದವರಾಗಿರ ಬೇಕು. ಹಾಗಿಲ್ಲದಿದ್ದರೆ ಪರಸ್ಪರಾನುರಾಗಲೋಪಕ್ಕೆ ಆಸ್ಪದವಾಗು ವದು. ಆದದರಿಂದ ಈ ಮ್ಯಾನೇಜರುಗಳು ಬಾಲಕಿಯರಿಗೆ ಸ್ವಲ್ಪ ಇಂಗ್ಲೀ ಷನ್ನು ಹೇಳಿಸಿರುತ್ತಾರೆ. ಅವರು ಮುಂದಕ್ಕೆ ಇಂಗ್ಲೀಷ್ ಓದಿದ ಗಂಡಂ ದಿರನ್ನು ಮದುವೆಮಾಡಿಕೊಂಡರೆ ಅದನ್ನು ವೃದ್ಧಿಪಡಿಸಿಕೊಳ್ಳುವದಕ್ಕೆ ಇದು ಸಾಧಕವಾಗಿದೆ. ಮುಖ್ಯವಾಗಿ ಈ ಪಾಠಶಾಲೆಯ ಮ್ಯಾನೇಜರುಗಳು ಲೌಕಿಕ ವೈದಿಕ ಸಂಪ್ರದಾಯಗಳೆರಡನ್ನೂ ಅತಿಕ್ರಮಿಸದೆ ಸಕಲರಿಗೂ ಸಮ್ಮತವಾಗಿರುವಂತೆ ವಿದ್ಯಾಭ್ಯಾಸ ಮಾಡಿಸುತ್ತಾ ಇದ್ದಾರೆ. ಶ್ರೀಮನ್ಮ ಹಾರಾಜರವರು ಈಕೆಲಸದಲ್ಲಿ ಇವರನ್ನು ಪ್ರೋತ್ಸಾಹಗೊಳಿಸುತ್ತಾ ಇದ್ದಾರೆ. ಬಾಲಕಿಯರೆಲ್ಲರೂ ವಿದ್ಯೆಯನ್ನು ಕಲಿತುಕೊಂಡು ಗೃಹಕೃತ್ಯಗಳಲ್ಲಿ ನಿರತ ರಾಗಿಯೂ ತಮ್ಮ ಆಚಾರವ್ಯವಹಾರಗಳನ್ನು ಸ್ವಲ್ಪವೂ ಮೀರಿ ನಡೆಯದ ವರಾಗಿಯೂ ಪತಿವ್ರತೆಯರಾಗಿಯೂ ಗುರು ಹಿರಿಯರಲ್ಲಿ ಭಕ್ತಿಯುಳ್ಳವರಾ ಗಿಯೂ ತಾವು ವಿದ್ಯಾವಂತರಾದಹಾಗೆಲ್ಲಾ ತಮ್ಮ ಸ್ತ್ರೀಪ್ರಪಂಚ ವನ್ನು ಉದ್ಧಾರ ಮಾಡತಕ್ಕವರೂ ಆದರೆ ನಮ್ಮ ಶ್ರೀಮನ್ಮಹಾರಾಜರ ವರು, ನರಸಿಂಹಯ್ಯಂಗಾರ್ಯರು ಮತ್ತು ಇದೇ ರೀತಿಯಲ್ಲಿ ಈ ದೇಶದ

ಕುಳವಾರು ಇಲ್ಲದ ಊರಿಗೆ ತಳವಾರ ಏನು ಮಾಡಾನು ?

ಇತರ ಭಾಗಗಳಲ್ಲಿ ಕಷ್ಟಪಡತಕ್ಕವರ ಪ್ರಯತ್ನಗಳು ಸಫಲವಾಗುವ ವೆಂದು ನಾನು ಯೋಚಿಸುತ್ತೇನೆ.

೭. ಮೈಸೂರಿನಲ್ಲಿ ಕರ್ಣಾಟಕಭಾಷಾಭಿವೃದ್ಧಿ.

ಈ ಊರಿನಲ್ಲಿ ಕರ್ಣಾಟಕಭಾಷೆಯಲ್ಲಿ ಗ್ರಂಥಗಳನ್ನು ಬರೆಯುವೆದು ಬಹಳ ಅಪೂರ್ವವಾಗಿ ಇತ್ತು. ಮು" ರಾ" ಬಿ. ಮಲ್ಲಪ್ಪನವರು ನಾಗವರ್ಮ ಕವಿಯ ಕಾವ್ಯಾವಲೋಕನದಲ್ಲಿ ಅರ್ಥಾಲಂಕಾರಕ್ಕೆ ಟೀಕು ಬರೆದು ಅಚ್ಚು ಹಾಕಿಸಿದರು. ಕೂಡಲೆ ಮು" ರಾ" ಎಂ. ಬಿ. ಶ್ರೀನಿವಾಸಯ್ಯಂಗಾರ್ಯರವರೂ, ಮು" ರಾ" ಎಂ. ಎಸ್. ಪುಟ್ಟಣ್ಣನವರೂ, ಜಯಸಿಂಹರಾಜಚರಿತ್ರೆಯನ್ನೂ ಚರಿತ್ರದರ್ಪಣವನ್ನೂ ಬರೆದರು. ಅನಂತರದಲ್ಲಿ ಮು" ರಾ" ಆರ್. ರಘುನಾಥರಾಯರವರು ಆರೋಗ್ಯಮಾರ್ಗದರ್ಶಿನಿಯನ್ನು ಬರೆದರು. ಈಚಿಗೆ ಪುನಃ ಮು" ರಾ" ಎಂ. ಎಸ್ ಪುಟ್ಟಣ್ಣನವರೂ, ಮು" ರಾ" ಎಂ. ಬಿ. ಶ್ರೀನಿವಾಸಯ್ಯಂಗಾರ್ಯರೂ ಪುರಾಣಗಳಿಂದ ಅನೇಕ ಇತಿಹಾಸಗಳನ್ನು ಸಂಗ್ರಹಿಸಿ ನೀತಿಚಿಂತಾಮಣಿ ಯೆಂಬ ನೀತಿಬೋಧಕವಾದ ಒಂದು ಗ್ರಂಥವನ್ನು ಬರೆದರು. ನಮ್ಮ ಪೂರ್ವದ ಮಹಾರಾಜರಾದ ಕೃಷ್ಣರಾಜ ಒಡೆಯರವರು ಬರೆಸಿ ಇಟ್ಟಿದ್ದ ಕನ್ನಡ ವಚನರೂಪವಾದ ಮಹಾಭಾರತವು ಮು" ರಾ" ಅಯ್ಯಾಶಾಸ್ತ್ರಿಗಳಿಂದಲೂ, ಮು" ರಾ" ಭೀಮಾಚಾರ್ಯರಿಂದಲೂ, ಅರಮನೆಗೋಸ್ಕರ ಪರಿಶೋಧಿಸಲ್ಪಟ್ಟು ಒಂದೊಂದು ಪರ್ವವಾಗಿ ಅಚ್ಚಾಗುತ್ತಾ ಇದೆ. ಮು" ರಾ" ಪಂಡಿತ ಶೇಷಾಚಾರ್ಯರವರು ಸಂಸ್ಕೃತ ಬಾಲಬೋಧಿನಿ, ಪ್ರಥಮ ದ್ವಿತೀಯ ಪುಸ್ತಕಗಳನ್ನು ಕನ್ನಡಾರ್ಥ ಸಮೇತವಾಗಿ ಬರೆದು ಇದ್ದಾರೆ. ಇವುಗಳೆಲ್ಲಾ ಇವರಿಗೆ ಮು" ರಾ" ರಂಗಾಚಾರ್ಯರು ಬಹಳವಾಗಿ ಸಹಾಯ ಮಾಡಿ ಇದ್ದಾರೆ. ಇದಲ್ಲದೆ ಮು" ರಾ" ಬಸವಪ್ಪಶಾಸ್ತ್ರಿಗಳು ಶಾಕುಂತಲ, ಉತ್ತರರಾಮಚರಿತ್ರೆ, ಸಾವಿತ್ರೀಚರಿತ್ರೆ, ಯೆಂಬ ಗ್ರಂಥಗಳನ್ನು ಬರೆದು ಇದ್ದಾರೆ. ಮು" ರಾ" ಜಯಾಚಾರ್ಯರು

ಕೂಗಿ ಹೇಳಿದರೆ ತೂಗುವ ತ್ರಾಸು ಕೇಳುತ್ತದೊ ?

ಚಂಡಕೌಶಿಕವೆಂಬ ಹರಿಶ್ಚಂದ್ರನಾಟಕವನ್ನೂ ಚಂದ್ರಹಾಸನಚರಿತ್ರೆಯನ್ನೂ ಬರೆದು ಇದ್ದಾರೆ. ಮು|ರಾ|ಅಯ್ಯಾಶಾಸ್ತ್ರಿಗಳು ವಿಕ್ರಮೋರ್ವಶಿಯ ಪ್ರತಾಪಸಿಂಹಚರಿತ್ರೆ ಇವುಗಳನ್ನು ಬರೆದು ಇದ್ದಾರೆ. ಮು|| ರಾ|| ಸುಬ್ಬಾಶಾಸ್ತ್ರಿಗಳು ಮೂಳವಿಕಾಗ್ನಿಮಿತ್ರವೆಂಬ ನಾಟಕವನ್ನು ಬರೆದು ಇದ್ದಾರೆ. ಈಗ ಮು|| ರಾ ಆರ್. ರಘುನಾಥರಾಯರವರು ಈಸೂಪನ ನೀತಿ ಕಥೆಗಳನ್ನು ಭಾಷಾಂತರವನ್ನಾಡಿ ನೀತಿರತ್ನಾಕರವೆಂಬ ಹೆಸರಿಟ್ಟು ಬಂದು ಗ್ರಂಥವನ್ನು ಬರೆದು ಇದ್ದಾರೆ. ಇದರಲ್ಲಿ ಇರತಕಕಥೆಗಳಿಲ್ಲಾ ಅತ್ಯಂತ ಚಮತ್ಕಾರವಾದವುಗಳು. ಇದು ಈ ಲೋಕದಲ್ಲಿರುವ ಸಮಸ್ತ ಭಾಷೆಗಳಲ್ಲಿಯೂ ಭಾಷಾಂತರವಾಗಿಯಿಡೆ. ಈ ಗ್ರಂಥವನ್ನು ಕನ್ನಡದಲ್ಲಿ ಇಷ್ಟುಮಟ್ಟಿಗೆಯಾರೂ ಬರೆದು ಇರಲಿಲ್ಲ. ಇವರೂ ಮು|| ರಾ| ಜಯಾಚಾರ್ಯರೂ ಸೇರಿ ಪಾಕಶಾಸ್ತ್ರವೆಂಬ ಬಂದು ಗ್ರಂಥವನ್ನು ಬರೆಯುತ್ತಾ ಇದ್ದಾರೆ. ಇದು ಇನ್ನು ಸ್ವಲ್ಪ ದಿನಗಳಲ್ಲಿಯೇ ಅಚ್ಚಾಗಬಹುದು. ಮು|| ರಾ|| ಮಲ್ಲಪ್ಪನವರೂ ಮು ರಾ ಭೀಮಾಚಾರ್ಯರು ಮು|ರಾ|| ಅಯ್ಯಾಶಾಸ್ತ್ರಿಗಳು ಸಹಸೇರಿ ಶಬ್ದಾನುಶಾಸನವೆಂಬ ಕನ್ನಡವ್ಯಾಕರಣವನ್ನು ಪರಿಶೋಧಿಸುತ್ತಾ ಇದ್ದಾರೆ. ಇನ್ನೂ ಅನೇಕ ವಿದ್ವಾಂಸರು ಅನೇಕ ಗ್ರಂಥಗಳನ್ನು ಬರೆಯುವದಕ್ಕೆ ಉಪಕ್ರಮಿಸಿ ಇದ್ದಾರೆ. ಈ ಪ್ರಯತ್ನಗಳಿಗೆಲ್ಲಾ ಮುಖ್ಯವಾಗಿ ಮು ರಾ| ಎ. ನರಸಿಂಹಯ್ಯಂಗಾರ್ಯರು ಪ್ರೋತ್ಸಾಹಕರು. ಹೀಗೆಯೇ ಕರ್ಣಾಟಕಭಾಷೆಯು ವೃದ್ಧಿಯಾಗುತ್ತಿದ್ದರೆ ಈಭಾಷೆಯು ತೆಲಗು ಮತ್ತು ತಮಿಳಭಾಷೆಗಳಷ್ಟು ಪ್ರಚಾರಕ್ಕೆ ಬರಬಹುದು. ಮು ರಾ|| ಆರ್. ರಘುನಾಥರಾಯರ ನೀತಿರತ್ನಾಕರದಲ್ಲಿ ಬಂದುಕಥೆಯನ್ನು ಇಲ್ಲಿ ಹಾಕಿ ಇದ್ದೇವೆ.

ಗೌಡನೂ ಅವನ ಮಗನೂ ನಾಡುತಟ್ಟ್ಯು.

ಒಬ್ಬಾನೊಬ್ಬ ಗೌಡನೂ ಅವನ ಮಗನೂ ಬಂದು ನಾಡುತಟ್ಟ್ಯನ್ನು ತಮ್ಮ ನೆರೇ ಊರಿನ ಸಂತೆಯಲ್ಲಿ ಮಾರಬೇಕೆಂದು ಹೊಡೆದುಕೊಂಡು ಹೋಗುತ್ತಿದ್ದರು. ಚೆಲ್ಲಾಟವನ್ನಾಡಿಕೊಂಡು ನಗುತ್ತಾ ಸಂತೆಯಿಂದ ಹಿಂತಿರುಗಿ ಬರುತ್ತಿದ್ದ ಪ್ರಾಯದ ಹುಡಿಗಿಯರು ಕೆಲವರು ಕುದುರೆಯನ್ನು ಮುಂದಿಬಿಟ್ಟುಕೊಂಡು ನಡೆದುಹೋಗುತ್ತಿದ್ದ ಆ ತಂದೆಮಕ್ಕಳನ್ನು ನೋಡಿ

ಕೂಸು ಕಾಸು ಹೋಲದು, ಜೋಗುಳ ಮುಗಿಲು ಮುಟ್ಟಿತು.

ಚಪ್ಪಾಳೆಹೊಡೆದು ನಗುತ್ತಾ—"ಅಲ್ಲಿ ನೋಡಿ, ಅಲ್ಲಿ ನೋಡಿ! ಇಂಥಾ ದಡ್ಡರನ್ನು ನೀನೆಲ್ಲಿಯಾದರೂ ನೋಡಿದ್ದೆಯಾ? ಕುದುರೆಯಮೇಲೆ ಕೂತು ಸವಾರಿಮಾಡಿಕೊಂಡು ಹೋಗುವದಕ್ಕೆ ಬದಲಾಗಿ ಆ ದಡ್ಡರು ಕುದುರೆಯನ್ನು ಮುಂದೆ ಬಿಟ್ಟುಕೊಂಡು, ನಿಟ್ಟುಸುರನ್ನು ಬಿಡುತ್ತಾ ಕಾಲನ್ನು ಎಳೆದೆಳೆದುಹಾಕಿಕೊಂಡು ಹೋಗುತ್ತಾರೆ!" ಎಂದು ಪರಸ್ಪರವಾಗಿ ಹೇಳಿಕೊಂಡರು. ಗೌಡನು ಅವರ ಮಾತನ್ನು ಕೇಳಿ, ಅವರು ಹೇಳಿದಂತೆ ಮಾಡಬೇಕೆಂದು, ತನ್ನ ಮಗನನ್ನು ಕುದುರೆಯ ಮೇಲೆ ಕೂಡಿಸಿ ಮಗ್ಗುಲಲ್ಲಿ ತಾನು ನಡೆದುಕೊಂಡು ಹೋದನು. ಹೀಗೆ ಸ್ವಲ್ಪದೂರ ಹೋಗುವಷ್ಟರಲ್ಲಿಯೇ, ಬಂದು ಮರದಕೆಳಗೆ ಕೂತು ಬಹಳ ಶ್ರದ್ಧೆಯಿಂದ ಪ್ರಸಂಗಿಸುತ್ತಾ ಇದ್ದ ಮುದುಕರಲ್ಲಿ ಬಬ್ಬನು ಆ ತಂದೆಮಕ್ಕಳನ್ನು ನೋಡಿ,—"ಅಲ್ಲಿ ನೋಡಿ! ನಾನು ಹೇಳುತ್ತಿದ್ದದ್ದು ದೃಷ್ಟಾಂತಕ್ಕೆ ಬಂತೆ? ಈ ಕಲಿಯುಗದಲ್ಲಿ ಮುಪ್ಪಿಗೆ ಮರ್ಯಾದೆ ಎಲ್ಲಿ ಬಂತು? ಧಾಂಡಿಗನಾದ ತಾನು ಕುದುರೆಯಮೇಲೆ ಕೂತು, ತನ್ನ ಮುದುಕ ತಂದೆಯನ್ನು ನಡೆಸಿಕೊಂಡು ಹೋಗುವದನ್ನು ನೋಡಿ!—ಥು! ಧಾಂಡಿಗ! ನಿನಗೇನು ಕೇಡು ಬಂತು? ನಿನ್ನ ತಂದೆಯನ್ನು ಕುದುರೆಯ ಮೇಲೆ ಕೂರಿಸಿ ನೀನು ನಡೆದುಕೊಂಡು ಹೋಗಬಾರದೆ?" ಎಂದು ಬೈದನು. ಗೌಡನು ಆ ಮಾತನ್ನು ಕೇಳಿ, ತನ್ನ ಮಗನನ್ನು ಇಳಿಸಿ, ತಾನು ಕುದುರೆಯಮೇಲೆ ಕೂತುಕೊಂಡನು. ಹೀಗೆ ಹೋಗುತ್ತಿರುವಾಗ್ಗೆ ಎದುರಿಗೆ ಮುಕ್ಕಳನ್ನು ಸಂಗಡ ಕರೆದುಕೊಂಡು ಬರುತ್ತಿದ್ದ ಕೆಲವರು ಹೆಂಗಸರು ಗೌಡನನ್ನು ನೋಡಿ,—"ಗುಡಾಣದಂತೆ ಹೊಟ್ಟೆಯನ್ನು ಮಾಡಿಕೊಂಡಿರುವ ನಿನಗೇನೋ ಕೇಡು ಬಂತು? ನೀನು ಕುದುರೆಯಮೇಲೆ ಹೇರಿಕೊಂಡು, ನಡೆಯಲಾರದೆ ಬಳಲುತ್ತಾ ಬರುವ ಆ ಮಗುವನ್ನು ಕುದುರೆಯ ಜೊತೆಯಲ್ಲಿ ಓಡಿಸುತ್ತೀಯಲ್ಲಾ!" ಎಂದು ಬೈದರು. ಗೌಡನು ಈ ಮಾತನ್ನು ಕೇಳಿದಕೂಡಲೆ ತನ್ನ ಮಗನನ್ನು ಕುದುರೆಯಮೇಲೆ ತನ್ನ ಹಿಂಮಗಡೆಯಲ್ಲಿ ಕೂಡಿಸಿಕೊಂಡನು. ಸ್ವಲ್ಪದೂರ ಬರುವಷ್ಟರಲ್ಲಿಯೇ ಊರು ಸವಿಾಪವಾಯಿತು. ದಾರಿಯಲ್ಲಿ ಹೋಗುತ್ತಿದ್ದ

ಕೇಡುಗಾಲಕ್ಕೆ ಬುದ್ಧಿಯಿಲ್ಲ, ಮರಣಕಾಲಕ್ಕೆ ಮದ್ದಿಲ್ಲ.

ಪಟ್ಟಣವಾಸಿಯು ಅವರನ್ನು ನೋಡಿ,—" ಏನಯ್ಯಾ ಗೌಡ, ಆ ಕುದುರೆ ನಿನ್ನದಲ್ಲವಷ್ಟೆ ? " ಎಂದು ಕೇಳಲು, ಗೌಡನು—" ಅದ್ಯಾಕೆ ಸಾಮಿ ಹಿಂಗೆ ಹೇಳ್ತೀರಿ ? ವರಸಕ್ಕೆ ಮುಂಚೆ ಇಪ್ಪತ್ತು ರುಪಾಯಿ ಕೊಟ್ಟು ಕೊಂಡು ಕೊಳ್ಳಿಲ್ವಾ ? " ಎಂದು ಉತ್ತರಕೊಡಲು, ಪಟ್ಟಣವಾಸಿಯು—" ಹಾಗೊ! ನೀವಿಬ್ಬರೂ ಅದರ ಮೇಲೆ ಹೇರಿಕೊಂಡು ಬರುವದನ್ನು ನೋಡಿದರೆ ಹಾಗೆ ತೋರಲಿಲ್ಲ ! ನಿಮಗೇನು ಕೇಡುಬಂದಿರುವದು ? ಆ ತಟ್ಟುವಿನ ಮೇಲೆ ನೀವಿಬ್ಬರೂ ಹೇರಿಕೊಂಡು ಒರುವದಕ್ಕೆ ಬದಲಾಗಿ ದಾಂಡಿಗರಾದ ನೀವಿಬ್ಬರೂ ಅದನ್ನು ಹೊತ್ತುಕೊಂಡು ಹೋದರೆ ಬಿಪ್ಪೀತು ! " ಎಂದು ಹೇಳಿದನು. " ಅದ್ಯಾಕೆಸಾಮಿ, ಹಾಗೂ ಆಗಲಿ ಬಿಡಿ ! " ಎಂದು ಗೌಡನು ಹೇಳಿ, ಬಂದು ಬೊಂಬನ್ನು ತೆಗೆದುಕೊಂಡು, ಆ ತಟ್ಟುವಿನ ನಾಲ್ಕು ಕಾಲುಗಳನ್ನೂ ಕೂಡಿಸಿ ಕಟ್ಟಿ, ಆ ಬೊಂಬಿನ ಮಧ್ಯಕ್ಕೆ ತಟ್ಟುವನ್ನು ನೇತುಹಾಕಿ, ಇತ್ತಲಾಗೊಬ್ಬ ಅತ್ತಲಾಗೊಬ್ಬ ಹೊತ್ತುಕೊಂಡು ಊರಿನ ಸವಿಾಪದಲ್ಲಿದ್ದ ಬಂದು ನದಿಯ ಸೇತುವೆಯಮೇಲೆ ಹೋಗುತ್ತಿದ್ದರು. ಈ ವಿನೋದಕರವಾದ ನೋಟವನ್ನು ನೋಡುವದಕ್ಕೆ ಜನರ ಗುಂಪುಗಳೇ ಬಂದವು. ಬದ್ದಾಡುತ್ತಿದ್ದ ಆ ತಟ್ಟು ಈ ಗದ್ದಲವನ್ನು ಸಹಿಸಲಾರದೆ ಕಾಲನ್ನು ಝಾಡಿಸಿ ಬದ್ದ ಹಗ್ಗವನ್ನು ಕಿತ್ತುಹಾಕಿತು. ನದಿಯೊಳಕ್ಕೆ ಮೊಗಚಿಕೊಂಡು ತೇಲಿಹೋದ ಕುದುರೆಯನ್ನು ನೋಡಿ ನೋಡಿ, ನಿಟ್ಟುಸುರನ್ನು ಬಿಟ್ಟು—" ನಾನೆಂಥಾ ದಡ್ಡ ! ಲೋಕವನ್ನೆಲ್ಲಾ ಮೆಚ್ಚಿಸುವದಕ್ಕೆಹೋಗಿ, ಯಾರನ್ನೂ ಮೆಚ್ಚಿಸದೆ ಇದ್ದದ್ದೂ ಸಾಲದೆ, ಕುದುರೆಯನ್ನೂ ಕಳಿದುಕೊಂಡದ್ದಾಯಿತು ! " ಎಂದಂದುಕೊಂಡು ವ್ಯಸನಪಡುತ್ತಾ ಗೌಡನು ಊರಿಗೆ ಹೋದನು.

೯. ಜ್ಯೋತಿಷ.

ಅಮಾವಾಸ್ಯೆಯದಿನ ರಾತ್ರಿಕಾಲದಲ್ಲಿ ಆಕಾಶವನ್ನು ನೋಡಿದರೆ ಆಕಾಶವೆಲ್ಲಾ ನಕ್ಷತ್ರಮಯವಾಗಿಯೇ ಕಾಣಿಬರುವದು. ಹೀಗೆ ಅಗಣಿತಗಳಾದ

ಕೆರದ ಅಳತೆಗೆ ಕಾಲು ಕುಯಿಸಿದ ಹಾಗೆ.

ನಕ್ಷತ್ರಗಳ ನಾಮ ರೂಪಗಳನ್ನೆಲ್ಲಾ ವಿವರಿಸುವದರಿಂದ ಸ್ವಲ್ಪವೂ ಪ್ರಯೋಜನವಿಲ್ಲವಾದಕಾರಣ ಗ್ರಹಗತಿಗಳ ಸವಿಾಪಸ್ಥಗಳಾಗಿ ಸಕಲ ವ್ಯವಹಾರಗಳಿಗೂ ಸಾಧಕಗಳಾಗಿರುವ ನಕ್ಷತ್ರಗಳ ನಾಮರೂಪಗಳನ್ನು ಮಾತ್ರ ಕೆಳಗೆ ವಿವರಿಸುವೆವು.

೧. ಈಗ ಸೂರ್ಯಾಸ್ತಮಯವಾದ ಕೂಡಲೆ ಪಶ್ಚಿಮದಿಕ್ಕಿನಲ್ಲಿ ಕುದುರೆಯ ಮುಖದಂತೆ ಕಾಣಬರುವ ಮೂರು ನಕ್ಷತ್ರಗಳಿಗೆ ಅಶ್ವಿನಿ ಯೆಂದು ಹೆಸರು.

೨. ಇದಕ್ಕೆ ಪೂರ್ವದಿಕ್ಕಿನಲ್ಲಿ ತ್ರಿಭುಜ ಅಂದರೆ ಮುಕ್ಕೋಣದಂತೆ ಇರುವ ಮೂರು ನಕ್ಷತ್ರಗಳ ಸಮುದಾಯಕ್ಕೆ ಭರಣಿಯೆಂದು ಹೆಸರು.

೩ ಡಿಟೋ ಕ್ಷೌರಕನ ಕತ್ತಿಯಂತೆ ಇರುವ ಆರು ಸಣ್ಣ ನಕ್ಷತ್ರಗಳ ಗುಂಪಿಗೆ ಕೃತ್ತಿಕೆಯೆಂದು ಹೆಸರು.

೪. ಡಿಟೋ ಬಂಡಿಯಂತೆ ಇರುವ ಐದು ನಕ್ಷತ್ರಗಳ ಗುಂಪಿಗೆ ರೋಹಿಣಿ ಯೆಂದು ಹೆಸರು.

೫. ಡಿಟೋ ತಲೆಯಂತಿರುವ ಮೂರು ನಕ್ಷತ್ರಗಳಿಗೆ ಮೃಗಶಿರವೆಂದು ಹೆಸರು.

೬. ಡಿಟೋ ಹವಳದ ಬಣ್ಣವುಳ್ಳದಾಗಿ ಥಳಗುಟ್ಟುವ ನಕ್ಷತ್ರಕ್ಕೆ ಆರಿದ್ರೆ ಯೆಂದು ಹೆಸರು.

೭. ಡಿಟೋ ಕುಲಾಲಚಕ್ರದಂತಿರುವ ಐದು ನಕ್ಷತ್ರಗಳ ಗುಂಪಿಗೆ ಪುನರ್ವಸುಯೆಂದು ಹೆಸರು.

೮. ಡಿಟೋ ಹಲ್ಲಿಯಂತಿರುವ ಮೂರು ನಕ್ಷತ್ರಗಳ ಗಣಕ್ಕೆ ಪುಷ್ಯ ವೆಂದು ಹೆಸರು.

೯. ಡಿಟೋ ಹಾವಿನಂತಿರುವ ಆರುನಕ್ಷತ್ರಗಳ ಸಮುದಾಯಕ್ಕೆ ಆಶ್ಲೇಷೆ ಯೆಂದು ಹೆಸರು.

೧೦. ಡಿಟೋ ಪಲ್ಲಕ್ಕಿಯಂತಿರುವ ಐದು ನಕ್ಷತ್ರಗಳಿಗೆ ಮಖೆಯೆಂದು ಹೆಸರು.

೧೧-೧೨. ಡಿಟೋ ಕಣ್ಣುಗಳಂತಿರುವ ಎರಡೆರಡು ನಕ್ಷತ್ರಗಳಿಗೆ ಪುಬ್ಬೆ ಮತ್ತು ಉತ್ತರೆಯೆಂದು ಹೆಸರು.

೧೩. ಡಿಟೋ ಕೈಬೆರಳುಗಳಂತಿರುವ ಐದು ನಕ್ಷತ್ರಗಳಿಗೆ ಹಸ್ತವೆಂದುಹೆಸರು.

೧೪. ಡಿಟೋ ಮುತ್ತಿನಮಣಿಯಂತೆ ಮಿನುಗುವದಕ್ಕೆ ಚಿತ್ತೆಯೆಂದು ಹೆಸರು.

೧೫. ಡಿಟೋ ಮಾಣಿಕ್ಯದಂತೆ ಮಿರುಗುವ ನಕ್ಷತ್ರಕ್ಕೆ ಸ್ವಾತಿಯೆಂದು ಹೆಸರು.

ಕೆಟ್ಟ ಅಡಿಗೆ ಅಟ್ಟುವಳೀ ಜಾಣೆ.

೧೬. ಇದಕ್ಕೆ ಪೂರ್ವದಿಕ್ಕಿನಲ್ಲಿ ಕುಲಾಲಚಕ್ರದಂತಿರುವ ಐದು ನಕ್ಷತ್ರಗಳಿಗೆ ವಿಶಾಖೆ ಯೆಂದು ಹೆಸರು.

೧೩-೧೪. ಡಿಟೋ ಅಂಗುಲಿಯಂತೆ ಛತ್ರಿಯೊಲಿರುವ ಮೂರು ನಕ್ಷತ್ರಗಳ ಮೇಲಿನ ಭಾಗಕ್ಕೆ ಅನೋರಾಧೆ ಯೆಂತಲೂ ಕೆಳಗಿನ ಭಾಗಕ್ಕೆ ಜೇಷ್ಠೆ ಯೆಂತಲೂ ಹೆಸರು.

೧೯. ಡಿಟೋ ಹಾರುವ ಸಿಂಹದಂತಿರುವ ಐದು ನಕ್ಷತ್ರಗಳಿಗೆ ಮೂಲ ಎಂದು ಹೆಸರು.

೨೦-೨೧. ಡಿಟೋ ಚೌಕದಂತಿರುವ ನಾಲ್ಕು ನಕ್ಷತ್ರಗಳಲ್ಲಿ ಮೇಲಿನೆರಡಕ್ಕೆ ಪೂರ್ವಾಷಾಢ ವೆಂತಲೂ ಕೆಳಗಿನ ಭಾಗದಲ್ಲಿರುವ ಎರಡಕ್ಕೆ ಉತ್ತರಾಷಾಢ ವೆಂತಲೂ ಹೆಸರು.

೨೨. ಡಿಟೋ ಮಿಾನಿನಂತಿರುವ ಮೂರು ನಕ್ಷತ್ರಗಳಿಗೆ ಶ್ರವಣವೆಂದು ಹೆಸರು.

೨೩. ಡಿಟೋ ತಲೆಯಂತಿರುವ ಮೂರು ನಕ್ಷತ್ರಗಳ ಗುಂಪಿಗೆ ಧನಿಷ್ಠೆ ಯೆಂದು ಹೆಸರು.

೨೪. ಡಿಟೋ ಪುಷ್ಪ ಗುಚ್ಛದಂತಿರುವ ನೂರು ನಕ್ಷತ್ರಗಳಿಗೆ ಶತಭಿಷೆ ಎಂದು ಹೆಸರು.

೨೫-೨೬. ಡಿಟೋ ಮುಂಚಕದಕಾಲುಗಳಂತಿರುವ ನಾಲ್ಕು ನಕ್ಷತ್ರಗಳಲ್ಲಿ ಮೇಲಿನೆರಡಕ್ಕೆ ಪೂರ್ವಾಭಾದ್ರ ವೆಂತಲೂ ಕೆಳಗಿನ ಭಾಗದಲ್ಲಿರುವ ಎರಡಕ್ಕೆ ಉತ್ತರಾಭಾದ್ರವೆಂತಲೂ ಹೆಸರು.

೨೭. ಡಿಟೋ ಮಿಾನಿನಂತಿರುವ ಮೂರು ನಕ್ಷತ್ರಗಳ ಗುಂಪಿಗೆ ರೇವತಿ ಎಂದು ಹೆಸರು. (ವರರುಚಿ.)

ಇದಕ್ಕೆ ಪೂರ್ವದಲ್ಲಿ ನೋಡಲು ಪುನಃ ಅಶ್ವಿನಿಯೇ ಕಾಣಬರುವದು. ಮೇಲಿಹೇಳಲ್ಪಟ್ಟ ನಕ್ಷತ್ರಗಳೆಲ್ಲಾ ಕ್ರಾಂತಿಮಂಡಲಪರಿಧಿ ಸಮಿಾಪಸ್ಥಗಳಾಗಿ ಇರುವವು. ಇವುಗಳಲ್ಲದೆ ಸರಿಯಾಗಿ ಉತ್ತರದಕಡೆ ನಮ್ಮ ಕ್ಷಿತಿಜದಿಂದ ಮೇಲಕ್ಕೆ ೧೦ ಭಾಗಗಳ ದೂರದಲ್ಲಿರುವ ನಕ್ಷತ್ರಕ್ಕೆ ಧ್ರುವನಕ್ಷತ್ರವೆಂದು ಹೆಸರು. ಇದಕ್ಕೆ ದಕ್ಷಿಣದಲ್ಲಿ ಸ್ವಲ್ಪದೂರದಲ್ಲಿ ನೇಗಲಿನಂತಿರುವ ಏಳು ನಕ್ಷತ್ರಗಳನ್ನು ಸಪ್ತರ್ಷಿಗಳೆಂದು ಹೇಳುವರು. ಪೂರ್ವದಲ್ಲಿ ಹೇಳಿರುವ ಪ್ರಕಾರ ಸಕಲಪರಿಧಿಗಳೂ ೧೦ ವಿಭಾಗಗಳಾಗಿ ಮಾಡಲ್ಪಟ್ಟು ಪ್ರತಿವಿಭಾಗವೂ ರಾಶಿಯೆಂದು ವ್ಯವಹರಿಸಲ್ಪಡುವದಷ್ಟೆ. ಆದ್ದರಿಂದ ಅಶ್ವಿನ್ಯಾದಿ

ಕೋಡು ಬರುವಕಾಲಕ್ಕೆ ಕೂಡುವದು ದುರ್ಬುದ್ಧಿ.

೨೭ ನಕ್ಷತ್ರಗಳನ್ನು ೧೮ರಿಂದ ಭಾಗಿಸಲು ಬಂದ ೮। ನಕ್ಷತ್ರಗಳು ಒಂದು ರಾಶಿಯಾಗುವದು. ಹ್ಯಾಗೆಂದರೆ ಪರಿಧಿಯನ್ನು ಸಮನಾಗಿ ಮೂರು ವಿಭಾಗಗಳನ್ನಾಗಿ ಮಾಡಿದರೆ ಅಶ್ವಿನ್ಯಾದಿ ಆಶ್ಲೇಷಾಂತ ಸ್ವಲ್ಪ ಕಡಿಮೆಯಾಗಿ ಮೊದಲನೇ ಭಾಗವಾಗುವದು. ಮಖಾದಿ ಜ್ಯೇಷ್ಠಾಂತ ೯ನೇ ಭಾಗಕ್ಕಿಂತಲೂ ಸ್ವಲ್ಪ ಹೆಚ್ಚಾಗಿಯೂ ಮೂಲಾದಿ ರೇವತ್ಯಂತ ಮೂರನೇ ಭಾಗಕ್ಕೆ ಸ್ವಲ್ಪ ಕಡಿಮೆಯಾಗಿಯೂ ಇರುವವು. ಅಶ್ವಿನಿ, ಭರಣಿ, ಕೃತ್ತಿಕೆಯಲ್ಲಿ ಕಾಲುಭಾಗ ಸೇರಲು ಮೇಷರಾಶಿ; ಕೃತ್ತಿಕೆಯಲ್ಲಿ ಉಳಿದ ಮೂರುಭಾಗ, ರೋಹಿಣಿ, ಮೃಗಶಿರದಲ್ಲಿ ಅರ್ಧಭಾಗ ಸೇರಲು ವೃಷಭರಾಶಿ; ಮೃಗಶಿರದಲ್ಲಿನ ಉಳಿದ ಅರ್ಧಭಾಗ, ಆರಿದ್ರ, ಪುನರ್ವಸುವಿನಲ್ಲಿ ಮೂರು ಭಾಗ ಸೇರಲು ಮಿಥುನರಾಶಿ; ಪುನರ್ವಸುವಿನಲ್ಲಿ ಉಳಿದ ಕಾಲುಭಾಗ, ಪುಷ್ಯಮಿ, ಆಶ್ಲೇಷೆ ಸೇರಲು ಕರ್ಕಾಟಕ ರಾಶಿ; ಮಖಿ, ಪುಬ್ಬಿ, ಉತ್ತರೆಯಲ್ಲಿ ಕಾಲುಭಾಗ ಸೇರಲು ಸಿಂಹರಾಶಿ; ಉತ್ತರೆಯಲ್ಲಿ ಉಳಿದ ಮೂರು ಭಾಗ ಹಸ್ತ, ಚಿತ್ತೆಯಲ್ಲಿ ಅರ್ಧ ಸೇರಲು ಕನ್ಯಾರಾಶಿ; ಚಿತ್ತೆಯಲ್ಲಿ ಉಳಿದ ಅರ್ಧ ಸ್ವಾತಿ, ವಿಶಾಖೆಯಲ್ಲಿ ಮೂರುಪಾಲು ಸೇರಲು ತುಲಾರಾಶಿ; ವಿಶಾಖೆಯಲ್ಲಿ ಉಳಿದ ಕಾಲುಪಾಲು, ಅನೋರಾಧ, ಜ್ಯೇಷ್ಠ ಸೇರಲು ವೃಶ್ಚಿಕರಾಶಿ; ಮೂಲ, ಪೂರ್ವಾಷಾಢ, ಉತ್ತರಾಷಾಢದಲ್ಲಿ ಕಾಲುಭಾಗ ಸೇರಲು ಧನಸ್ಸು ರಾಶಿ, ಉತ್ತರಾಷಾಢೆಯಲ್ಲಿ ಉಳಿದ ಮೂರು ಭಾಗ, ಶ್ರವಣ, ಧನಿಷ್ಠೆಯಲ್ಲಿ ಅರ್ಧಸೇರಲು ಮಕರರಾಶಿ; ಧನಿಷ್ಟೆಯಲ್ಲುಳಿದರ್ಧ, ಶತಭಿಷೆ, ಪೂರ್ವಾಭಾದ್ರೆಯಲ್ಲಿ ಮುಕ್ಕಾಲು ಭಾಗ ಸೇರಲು ಕುಂಭರಾಶಿ; ಪೂರ್ವಾಭಾದ್ರದಲ್ಲಿ ಉಳಿದ ಕಾಲುಭಾಗ, ಉತ್ತರಾಭಾದ್ರ, ರೇವತಿ ಸೇರಲು ಮೀನರಾಶಿ.

ಕೋ॥ ಕಂ" ವೆಂ॥

೧೦. ಮೈಸೂರು ಗೆಜೆಟ್ ಸಂಗ್ರಹ.

ಮೊರ್ಚಿ ತಾ॥ ೩.—ಬೆಂಗಳೂರು ಡಿಸ್ಟ್ರಿಕ್ಟ್ ಅಫೀಷಿಯೇಟಿಂಗ್ ಡಿಸ್ಟ್ರಿಕ್ಟ್ ಕಮ್ಮಿಷನರ್ ಮೆ॥ ಇ. ಸಿ. ಷಣ್ಮುಗವೇಲು ಪಿಳ್ಳೈಯವರು, ಕಬ್ಬುಅರಿ ಎಂಟರಲ್ಲಿ ಡಿಸ್ಟ್ರಿಕ್ಟ್ ಕಮ್ಮಿಷನರ್

ಪೇಡುಗಾಲಕ್ಕೆ ನಾಯಿ ಹೊಟ್ಟೆ ಇಕ್ಕಿತು.

ಮೆ॥ ಎಲ್. ರಿಕ್ಕೆಟ್ಸ್‌ಸಾಹೇಬರಿಗೆ ಡಿಸ್ಟ್ರಿಕ್ಟ್ ಆಫೀಸ್ ಮತ್ತು ಟ್ರೆಜರಿ ಚಾರ್ಜ್ಜನ್ನು ಒಪ್ಪಿಸಿದರು. ಚಾಮರಾಜನಗರದ ಆಮಲ್ದಾರರು ಮಹಾಬಲರಾಯರವರಿಗೆ ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ೧ ತಿಂಗಳು ಪ್ರಿವಿಲೀಜ್ ರಜಾ ಕೊಟ್ಟಿದೆ. ಇವರ ಗೈರ್‌ಹಾಜರಿಯಲ್ಲಿ ಆ ತಾಲ್ಲೂಕು ಶಿರಸ್ತೇದಾರರು ವೆಂಕಟರಾಯರು ಕೆಲಸ ನೋಡತಕ್ಕದ್ದು. ಮೈಸೂರು ಪಬ್ಲಿಕ್‌ವರ್ಕ್ಸ್ ಇಲಾಖೆ ಲೋಕಲ್ ಏಬ್ಬಂದಿಗೆ ಸೇರಿದ ೧ನೇ ಗ್ರೇಡ್ ಅ॥ ಇಂಜನಿಯರ್ ಸಯ್ಯದ್ ಇಸುಫ್‌ಸಾಹೇಬರಿಗೆ ಮಾಹೆ ಮಜಕೂರು ೫ನೇ ಮುಕ್ತಂ ಲಾಗಾಯಿತು ರಾಜೀನಾಮೆ ಕೊಡುವದಕ್ಕೆ ಅಪ್ಪಣೆ ಕೊಟ್ಟಿದೆ.

ಮಾರ್ಚಿ ತಾ॥ ೭.—ಚಿಕ್ಕಮಗಳೂರು ಅ॥ ಕ॥ ಮತ್ತು ೨ನೇ ಕ್ಲಾಸ್ ಮಾಜಿ ಸ್ಟೈಪೆಂಡ್ ಮೆ॥ ನಾಗೇಶರಾಯರಿಗೆ ವಿಚಾರಣೆಬಗ್ಯೆಕಮ್ಮಿಟ್ ಮಾಡುವ ಅಧಿಕಾರ ಕೊಟ್ಟಿದೆ. ತುಮಕೂರು ಡಿ॥ ತುರವೇಕೆರೆ ಡೆಪ್ಯೂಟಿ ಅಮಲ್ದಾರ್ ನೈಜಾಮುದ್ದಿನ್ ಅಲ್ಲೀಖಾರವರು ೧೮೮೫ನೇಯಿಸವಿ ಜನವರಿ ೧೫ರಲ್ಲಿ ಕೆಲಸದ ಮೇಲೆ ವಾಪಸು ಬಂದಿರುವದರಿಂದ ಇವರಿಗೆ ಕೊಟ್ಟಿದ್ದ ಪ್ರಿವಿಲೀಜ್ ರಜಾದ ಬೈಕಿ ನಿಂತಭಾಗವನ್ನು ರದ್ದು ಮಾಡಿದೆ. ೨ನೇ ಗ್ರೇಡ್ ಅ॥ ಇಂ॥ ಮೆ॥ ಡಿ. ಸೀತಾರಾಮರಾಯರು ಎಗ್ಸಿಕ್ಯೂಟಿವ್ ಇಂಜಿನಿಯರ್ ಮೆ॥ ಆರ್. ಟಿ. ಸ್ಕಾಲ್ಡ್‌ವೆಲ್‌ರವರಿಂದ ಬೆಂಗಳೂರು ಡಿವಿಜ್ಞ ಚಾರ್ಜ್ಜು ತೆಗೆದುಕೊಂಡ ಮಾಹೆ ಮಜಕೂರು ೫ರ ಲಾಗಾಯಿತು ಎಗ್ಸಿಕೂಟಿವ್ ಇಂಜಿನಿಯರ್ ಕೆಲಸ ಆಕ್ಟಿಂಗ್ ನೋಡುವಂತೆ ನೇಮಕ ವಾಗಿದೆ. ಮೆ॥ ಆರ್. ಟಿ. ಸ್ಕಾಲ್ಡ್‌ವೆಲ್‌ರವರನ್ನು ಮಾಹೆಮಜಕೂರು ೫ರಿಂದ ವಿಶಾಖಾಪಟ್ಟಣದ ಪ್ಯಾಲೆಸ್ ಡಿವಿಜ್ಞ ಚಾರ್ಜ್ಜಿಗೆ ನೇಮಕ ಮಾಡಿ ಇದೆ.

ಮಾರ್ಚಿ ತಾ॥ ೧೩.—ಬೆಂಗಳೂರು ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲ್ ಮೆ॥ ಜೆ. ಕುಕ್, ಎಂ. ಎ. ಅವರಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಇಲಾಯತಿಗೆ ಹೋಗಿಬರುವದಕ್ಕೋಸ್ಕರ ಈ ಏಪ್ರಿಲ್ ೧೦ರಿಂದ ೬ ತಿಂಗಳ ರಜಾಕೊಟ್ಟಿದೆ.

ಮಾರ್ಚಿ ತಾ॥ ೧೩.—ಚಿಕ್ಕಬಳ್ಳಾಪುರದ ಮುನಸೀಫರು ಮೆ॥ ಜೆ. ಟಿ. ವಾಂಡರ್ ಲೋವ್ಹರವರನ್ನು ಚಿಕ್ಕಮಗಳೂರಿಗೆ ವರ್ಗಾಯಿಸಿದೆ. ಮೈಸೂರು ರೆವಿನ್ಯು ಸರ್ವೆ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ॥ ಎಫ್. ಬಿ. ಕ್ಲಾರ್ಕ್‌ಸಾಹೆಬರಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಮಾರ್ಚಿ ೧೦ರಿಂದ ೩ ತಿಂಗಳ ರಜಾಕೊಟ್ಟಿದೆ.

ಮಾರ್ಚಿ ತಾರೀಖು ೧೦ರವರಿಗಿನ ಕಾಲಸ್ಥಿತಿಯ ರಿಪೋರ್ಟು.

ಬೆಂಗಳೂರು ಡಿಸ್ಟ್ರಿಕ್ಟ್.—ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್‌ಗಳಲ್ಲಿ ೧೪ ಸೆಂಟ್‌ಗಳೂ ಬೆಂಗಳೂರಲ್ಲಿ ೧೫ ಸೆಂಟ್‌ಗಳೂ ಮಳೆಬಿತ್ತು. ಮೂರು ತಾಲ್ಲೂಕುಗಳಲ್ಲಿ ಸ್ವಲ್ಪಮಳೆ

ಕೆರೇಮುಂದೆ ಅರವಟ್ಟಿಗೆಯಿ ?

ಬಿತ್ತು. ನೀರಿಲ್ಲದೆ ಪೈರು ಬಣಗುತ್ತಿದೆ. ಕೆಲವುಕಡೆ ಜ್ವರವು ತಲೆಯೆತ್ತಿಕೊಂಡಿದೆ. ದನಗಳಿಗೆ ಕೆಲವುಕಡೆ ತೆವ್ಲುರೋಗ. ರೂಪಾಯಿ ೧ಕ್ಕೆ ದುಯ್ಯಂ ಅಕ್ಕಿ ೯॥ ಸೇರು, ರಾಗಿ ೨೫॥ ಸೇರು, ಹುರಳಿ ೧೯ ಸೇರು.

ಕೊಲಾರ ಡಿಸ್ಟ್ರಿಕ್ಟ್.—ಕೋಲಾರದಲ್ಲಿ ೨೧ ಸೆಂಟ್ ಮಳೆ ಬಿತ್ತು. ಚಿಕ್ಕಬಳ್ಳಾಪುರ, ಗುಡಿಬಂಡೆ, ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಚೆನ್ನಾಗಿ ಮಳೆಯಾಯಿತು. ಚಿಕ್ಕಬಳ್ಳಾಪುರದ ಕೆಲವು ಕೆರೆಗಳಿಗೆ ಬಂದು ವಾರಕ್ಕಾಗುವಷ್ಟು ನೀರುಬಂತು. ಕಬ್ಬು ಕಡಲೆಗಳ ಬೆಳೆಆಯಿತು. ಕೆಲವುಕಡೆ ಕುಡಿಯುವನೀರು ಸಾಲದು. ವಾಂತಿಭೇದಿಯು ಹೆಚ್ಚಿದೆ. ಹುಲ್ಲು ನೀರಿಲ್ಲದೆ ದನಗಳು ಚೆನ್ನಾಗಿಲ್ಲ. ರೂಪಾಯಿ ೧ಕ್ಕೆ ದುಯ್ಯಂ ಅಕ್ಕಿ ೯—೧೦ಸೇರು ರಾಗಿ ೨೦—೩೦ ಸೇರು.

ತುಮಕೂರು ಡಿಸ್ಟ್ರಿಕ್ಟ್.—ಕೆಲವು ತಾಲ್ಲೂಕುಗಳಲ್ಲಿ ಸ್ವಲ್ಪಮಳೆ ಬಿತ್ತು. ಕಡಲೆ ಬಿತ್ತ, ಸೋಸಿರಾಗಿ, ಗೋಧಿ, ಇವುಗಳ ಪೈರು ಬಣಗುತ್ತಾ ಇದೆ. ದನಗಳು ಮೇವಿಲ್ಲದೆ ಕೃಶವಾಗಿವೆ. ಚಿಕ್ಕನಾಯಕನಹಳ್ಳಿಯಲ್ಲಿಯೂ, ಹಾನಗಲ್‌ನಲ್ಲಿಯೂ ದನಗಳು ಎಲೆಗಳನ್ನು ತಿಂದು ಜೀವಿಸುತ್ತಿವೆ. ರೂಪಾಯಿ ೧ಕ್ಕೆ ದುಯ್ಯಂ ಅಕ್ಕಿ ೧೦—೧೩ ಸೇರು, ರಾಗಿ ೨೦—೩೦ ಸೇರು, ಹುರಳಿ ೧೩—೨೪ ಸೇರು.

ಮೈಸೂರು ಡಿಸ್ಟ್ರಿಕ್ಟ್.—ಮೈಸೂರಿನಲ್ಲಿ ೩ ಸೆಂಟ್ ಮಳೆಬಿತ್ತು. ತಾಲ್ಲೂಕುಗಳಲ್ಲಿ ಸ್ವಲ್ಪ ಮಳೆಯಾಯಿತು. ಪೈರು ಚೆನ್ನಾಗಿದೆ. ಕೆಲವುಕಡೆ ತುವರೆ, ಜೋಳ, ಕಡಲೆ ಬಿತ್ತ ಇವುಗಳ ಬೆಳೆ ಆಯಿತು. ನಾಗಮಂಗಲದಲ್ಲಿ ಜ್ವರ. ಶ್ರೀರಂಗಪಟ್ಟಣದ ತಾಲ್ಲೂಕಿನಲ್ಲಿ ವಾಂತಿಭೇದಿ. ಎರಡು ತಾಲ್ಲೂಕುಗಳಲ್ಲಿ ದನಗಳಿಗೆ ತೆವ್ಲುರೋಗ. ಕುಡಿಯುವ ನೀರು ಸಾಲದು. ಕೆರೆ ಬಾವಿಗಳು ಬಣಗುತ್ತಿವೆ. ರೂಪಾಯಿ ೧ಕ್ಕೆ ದುಯ್ಯಂ ಅಕ್ಕಿ ೧೦—೧೩ ಸೇರು, ರಾಗಿ ೨೦—೨೫ ಸೇರು, ಹುರಳಿ ೧೪—೨೪ ಸೇರು.

ಶಿವಮೊಗ್ಗಾ ಡಿಸ್ಟ್ರಿಕ್ಟ್.—ಶಿವಮೊಗ್ಗೆಯಲ್ಲಿ ೬೪ ಸೆಂಟ್ ಮಳೆಬಿತ್ತು. ಕಾರು ಬಿತ್ತವೂ ಕಬ್ಬೂಚೆನ್ನಾಗಿವೆ. ದಾವಣಗೆರೆಯಲ್ಲಿ ಸಿಡುಬಿನರೋಗ. ಶಿವಮೊಗ್ಗಾ ಮತ್ತು ಹೊನ್ನಳ್ಳಿ ತಾಲ್ಲೂಕುಗಳಲ್ಲಿ ಕೆಲವರು ವಾಂತಿಭೇದಿಯಿಂದ ಸತ್ತರು. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ದಾವಣಗೆರೆ ತಾಲ್ಲೂಕಿನಲ್ಲಿ ಹುಲ್ಲೂ ನೀರೂ ಸಾಲದು. ರೂಪಾಯಿ ೧ಕ್ಕೆ ಅಕ್ಕಿ ೧೦॥—೧೬ ಸೇರು, ರಾಗಿ ೨೦—೩೦ ಸೇರು, ಜೋಳ ೨೪—೩೦ ಸೇರು.

ಕಡೂರು ಡಿಸ್ಟ್ರಿಕ್ಟ್.—ಚಿಕ್ಕಮಗಳೂರಲ್ಲಿ ೩ ಸೆಂಟ್ ಮಳೆ ಆಯಿತು. ಪೈರು ಚೆನ್ನಾಗಿದೆ. ಅಡಿಕೆ,ಗೋಧಿ, ಕಬ್ಬು, ಕಡಲೆ,ಮೆಣಸು, ಹರಳು, ಇವುಗಳು ಬೆಳೆ ಆಯಿತು. ಮದ್ದಗಿರಿ ತಾಲ್ಲೂಕಿನಲ್ಲಿ ಸಿಡುಬಿನರೋಗ, ಇನ್ನು ಕೆಲವು ಕಡೆಜ್ವರ. ದನಗಳಿಗೆ ನಾಶ್ಯ. ರೂಪಾಯಿ ೧ಕ್ಕೆ ಅಕ್ಕಿ ೧೦—೨೦ ಸೇರು, ರಾಗಿ ೨೫—೩೬ ಸೇರು.

ಕೆಮ್ಮಿನಿಂದ ಹೂಸು ಮರಸಿದ.

೧೧. ವೃತ್ತಾಂತ ಸಂಗ್ರಹ.

ಇಲಾಯಿತಿಯೇ ಮುಂತಾದ ಯೂರೊಪ್ ಖಂಡದಲ್ಲಿರುವ ಚೆನ್ನಾಗಿ ರಾಜ್ಯ ಪರಿಪಾಲನೆ ನಡೆಯುತ್ತಿರುವ ದೇಶಗಳಲ್ಲಿ ಪ್ರಜಾಪ್ರತಿನಿಧಿಗಳ ಸಭೆಗಳು ಇರುವವು. ಈ ಸಭೆಗಳಿಗೆ ಸಮಸ್ತ ತುಕಡಿಗಳು ತಾಲ್ಲೂಕುಗಳು ಮುಂತಾದ ಪ್ರದೇಶಗಳಿಂದ ಆಯಾಯಾ ಸ್ಥಳದ ಜನರೆಲ್ಲರೂ ಸಭೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸುವದಕ್ಕೊಸ್ಕರ ತಮಗೆ ಪ್ರತಿನಿಧಿಯಾಗಿ ವಿದ್ಯಾವಂತರಾಗಿಯೂ ಧರ್ಮಸೂಕ್ಷ್ಮಗಳನ್ನು ತಿಳಿದವರಾಗಿಯೂ ಐಶ್ವರ್ಯವಂತರಾಗಿಯೂ ಇರತಕ್ಕ ಜನಗಳನ್ನು ಕೂಡಿಹಾಕಿ ಕಳುಹಿಸುವರು. ಹೀಗೆ ಕಳುಹಿಸಲ್ಪಟ್ಟ ಪ್ರತಿನಿಧಿಗಳೆಲ್ಲಾ ಸೇರಿದರೆ ಇದಕ್ಕೆ ಪ್ರಜಾಪ್ರತಿನಿಧಿಗಳ ಸಭೆಯೆಂದು ಹೆಸರು. ಈ ಸಭೆಗೆ ಸೇರಿದವರೆಲ್ಲರೂ ತಮ್ಮನ್ನು ಕಳುಹಿಸಿದವರ ಕ್ಷೇಮಕ್ಕೆ ಅನುಕೂಲವಾದ ಪ್ರಸ್ತಾಪಗಳನ್ನು ಸಭೆಯಲ್ಲಿ ಮಾಡಿ ತಕ್ಕ ಏರ್ಪಾಡುಗಳನ್ನು ಮಾಡಿಸುವದುಮಾತ್ರವೇ ಅಲ್ಲದೆ ರಾಜತಂತ್ರದಲ್ಲಿ ಸಮಸ್ತ ಏರ್ಪಾಡುಗಳನ್ನೂ ತಾವೆಲ್ಲರೂ ಸೇರಿ ಮಾಡುವರು. ಕಂದಾಯ ಮುಂತಾದವುಗಳ ವಸೂಲಾತಿಯು ಇವರ ಅನುಮತಿಯ ಮೇಲೆಯೇ ನಡೆಯುವದು. ರಾಜ್ಯಭಾರ ಮಾಡುವದಕ್ಕೆ ನೇಮಕವಾಗಿರುವ ಅಧಿಕಾರಿಗಳೆಲ್ಲರೂ ತಾವು ಮಾಡತಕ್ಕ ಕೆಲಸಗಳಿಗೆಲ್ಲಾ ಈ ಪ್ರತಿನಿಧಿಗಳಿಗೆ ಜಬಾಬುದಾರರಾಗಿರುವರು. ಇದಲ್ಲದೆ ರಾಜ್ಯಪರಿಪಾಲನೆಗಾಗಿ ಸಕಲ ನ್ಯಾಯನಿಬಂಧನೆಗಳನ್ನೂ ಮಾಡತಕ್ಕವರೇ ಇವರು. ರಾಜ್ಯಭಾರದಲ್ಲಿ ಯಾವ ಅಕ್ರಮಗಳು ನಡೆದರೂ ಅವುಗಳನ್ನು ವಿಚಾರಣೆ ಮಾಡುವ ಶಕ್ತಿಯು ಇವರಿಗೆ ಉಂಟು. ಈ ಸಭೆಯಲ್ಲಿ ಸರಕಾರದ ಉದ್ಯೋಗಸ್ಥರು ಯಾರೂ ಇರುವದಿಲ್ಲ, ಇವರೆಲ್ಲಾ ಶ್ರೇತರಾದ ಕಾರಣದಿಂದಲೂ ಸರಕಾರದವರು ತಾವು ಮಾಡತಕ್ಕ ಕಾರ್ಯಗಳಿಗೂ ಇವರೇ ಜಬಾಬುದಾರರಾಗಿರಬೇಕಾದ ಕಾರಣದಿಂದಲೂ ಸರಕಾರದವರು ತಾವು ಮಾಡತಕ್ಕ ರಾಜ್ಯಭಾರದಲ್ಲಿ ಬಹಳವಾಗಿ ಧರ್ಮದಲ್ಲಿ ದೃಷ್ಟಿ ಇಡುವರು. ಹೀಗಿರುವದರಿಂದ ಸಕಲ ಪ್ರಜೆಗಳಿಗೂ ಸುಖ ವುಂಟಾಗುವದು. ನಮ್ಮ ಇಂಡಿಯಾದೇಶದಲ್ಲಿ ಇಂಥಾ ಪ್ರತಿನಿಧಿಗಳ ಸಭೆಯು ಇಲ್ಲ. ಗವರ್ನರ್ ಜನರಲ್, ಗವರ್ನರುಗಳು, ಲೆಫ್ಟ್ಯಾನೆಂಟ್ ಗವರ್ನರು. ಗಳು ಇವರ ಸವಿಾಪದಲ್ಲಿ ಕೌನ್ಸಿಲ್‌ಗಳು ಎಂಬದಾಗಿ ಹೆಸರಿಗೆವಾತ್ರ ಕೆಲವು ಸಭೆಗಳಿವೆ. ಅವುಗಳಲ್ಲಿ ಯೂರೋಪ್ ಅಧಿಕಾರಸ್ಥರು ಬಲವೇ ಹೊರ್ತು ಶ್ರೇತರು ಇರುವದು ಅಪೂರ್ವ. ಆದದರಿಂದಲೇ ಇವರು ತಮ್ಮ ಇಷ್ಟಾನುಸಾರವಾಗಿ ನಿಬಂಧನೆಗಳನ್ನು ಮಾಡುತ್ತಾರೆ. ಆ ನಿಬಂಧನೆಗಳು ಆಚರಣೆಗೆ ಬಂದಕೂಡಲೆ ತಮ್ಮ ಉದ್ದೇಶವು ಭಗ್ನವಾಯಿತೆಂದು ತಿಳಿದು ಕೊಂಡು ಆ ನಿಬಂಧನೆಗಳನ್ನು ಪುನಃ ಬದಲಾಯಿಸುತ್ತಾರೆ. ಇದರಿಂದ ತಮಗೆ ಕಷ್ಟ ತಪ್ಪುವದಿಲ್ಲ. ಇವರು ನಿರಂತರವಾಗಿ ನಿಬಂಧನೆಗಳನ್ನು ಬದಲಾಯಿಸುತ್ತಲೇ ಇರುವದರಿಂದ ಜನಗಳಿಗೆ ಹಿಂಸೆಯು ತಪ್ಪುವದಿಲ್ಲ. ಈ ಸಭೆಗಳಲ್ಲಿ ಸಮಸ್ತ ಕೈಗಾರಿಕೆಗಳೂ

ಕೆಟ್ಟ ಮುಂಡೆ ಕುಲಾಸೇರಳು.

ತಿಳಿದು ವಿದ್ಯಾವಂತರೂ ಆಗಿರುವ ನೇಟಿವ್ ಜನಗಳು ಪ್ರತಿನಿಧಿಗಳಾಗಿದ್ದರೆ ಈನಿರಂತರವಾದ ಬದಲಾವಣೆಗಳಿಗೆ ಆಸ್ಪದವಿರಲಾರದು. ಆದದರಿಂದ ಸರಕಾರದವರು ಈವಿಷಯಗಳನ್ನೆಲ್ಲಾ ಆಲೋಚಿಸಿ ಯೋಗ್ಯತೆಯಿಲ್ಲದೆ ಐಶ್ವರ್ಯಬಲದಿಂದಲೂ ಶಿಫಾರಸ್‌ನಿಂದಲೂ ಸೇರಿ ಇರ ತಕ್ಕ ಜನಗಳನ್ನು ತೆಗೆದುಹಾಕಿ ಯೋಗ್ಯರಾಗಿಯೂ ಲೋಕೋಪಕಾರದೃಷ್ಟಿಯ ಳ್ಳವ ರಾಗಿಯೂ ಇರುವ ಜನಗಳನ್ನು ಪ್ರತಿನಿಧಿಗಳಾಗಿ ತೆಗೆದುಕೊಂಡು ಈ ಸಭೆಗಳಲ್ಲಿ ಸರಕಾದ ಉದ್ಯೋಗಸ್ಥರನ್ನು ಕಡಿಮೆ ಮಾಡಿದರೆ ರೈತರಿಗೆ ಅನೇಕ ಸಂಕಟಗಳು ತಪ್ಪುವವು.

ನೇಟಿವ್ ಥೊರೆಗಳ ಬಳಿಯಲ್ಲಿರತಕ್ಕ ಸೈನ್ಯಗಳು ಅಲಂಕಾರಾರ್ಥವಾಗಿ ಮಾತ್ರವೇ ಎಂದು ಅನೇಕರು ತಿಳಿದುಕೊಂಡಿದ್ದಾರೆ. ಈ ಸೈನ್ಯಗಳು ನೇಟಿವ್ ಥೊರೆಗಳಿಗೂ ಈ ಸೈ ನ್ಯವನ್ನು ಇಟ್ಟುಕೊಳ್ಳುವಂತೆ ಸ್ವತಂತ್ರ ಕೊಟ್ಟಿರುವ ಇಂಗ್ಲೀಷ್ ಸರಕಾರಕ್ಕೂ ಉಪಯೋಗಕರವಾದವುಗಳು. ೭೪–೭೫–೭೬ನೇ ಇಸವಿಗಳಲ್ಲಿ ಇಂಗ್ಲೀಷಿನವರಿಗೂ ಕಾಬೂಲಿನವರಿಗೂ ಯುದ್ಧವಾದಾಗ ಅನೇಕ ನೇಟಿವ್ ಥೊರೆಗಳು ಬಹಳ ದ್ರವ್ಯವನ್ನೂ ತಮ್ಮ ಸೈನ್ಯವನ್ನೂ ಇಂಗ್ಲೀಷಿನವರಿಗೆ ಕೊಟ್ಟರು. ಅನೇಕರು ಯೂರೋಪಿನವರು ನೇಟಿವ್ ಥೊರೆಗಳಿಗೆ ಸೈನ್ಯವನ್ನು ಇಟ್ಟುಕೊಳ್ಳುವದಕ್ಕೆ ಅಧಿಕಾರ ಕೊಟ್ಟರೆ ಬಂದುವೇಳೆ ತಮಗೆ ವಿಪತ್ತು ಬಂದೀತೋ ಏನೋ ಎಂದು ಭಯಪಡುತ್ತಾರೆ. ಈ ಶಂಕೆಯು ನಿಷ್ಕಾರಣವಾ ದದ್ದು. ಇಂಗ್ಲೀಷ್ ಸರಕಾದವರು ಸಮಸ್ತ ಥೊರೆಗಳಿಗೂ ಸೈನ್ಯಗಳನ್ನು ಇಟ್ಟು ಕೊಳ್ಳತಕ್ಕ ಅಧಿಕಾರವನ್ನು ತಪ್ಪಿಸಿದ್ದೇ ಆದರೆ ಈ ಥೊರೆಗಳೆಲ್ಲರೂ, ಈವತ್ತು ಸೈನ್ಯ ವನ್ನು ಕಿತ್ತುಕೊಂಡವರು ನಾಳೆ ರಾಜ್ಯವನ್ನು ಕಿತ್ತುಕೊಳ್ಳುತ್ತಾರೆಂದು ಹೆದರಿಕೊಳ್ಳುವರು. ಇಂಗ್ಲೀಷ್ ರಾಜ್ಯಭಾರದಲ್ಲಿ ವಿಶ್ವಾಸವು ಕಡಮೆಯಾಗುವದು. ಹೀಗೆ ಇವರ ಅನುರಾಗವು ಕಡಿಮೆಯಾಗುವದರಿಂದ ಇಂಗ್ಲೀಷ್ ರಾಜ್ಯಭಾರಕ್ಕೆ ಕುಂದಕವೇಹೊರ್ತು ಇವರ ವಿಶ್ವಾಸ ವನ್ನು ಸಂಪಾದಿಸಿಕೊಂಡು ಸೈನ್ಯಗಳನ್ನು ಇಟ್ಟುಕೊಳ್ಳುವದಕ್ಕೆ ಅವರಿಗೆ ಅಧಿಕಾರಗಳನ್ನು ಕೊಡುವದರಿಂದ ಯಾವ ಬಾಧಕವೂ ಬರಲಾರದು. ಮುಖ್ಯವಾಗಿ ಇಂಗ್ಲೀಷ್‌ನವರು ಸತ್ಯದಿಂದ ರಾಜ್ಯಭಾನಮಾಡುವವರಿಗೂ ಇವರ ರಾಜ್ಯಭಾರಕ್ಕೆ ಯಾವ ಲೋಪವೂ ಬರು ವದಿಲ್ಲ. ಇವರು ಸತ್ಯವಂತರೆಂದು ತಿಳಿದು ಇವರ ರಾಜ್ಯಭಾರವೇ ಇಲ್ಲಿ ನೆಲೆಗೊಂಡಿರಲಿ ಎಂಬ ಅಭಿಪ್ರಾಯದಿಂದಲ್ಲವೆ ಹಿಂದೂರಾಜನು ಕಾಬೂಲ್‌ಯುದ್ಧದಲ್ಲಿ ದ್ರವ್ಯ ಸಹಾಯ ವನ್ನೂ ಸೈನ್ಯಸಹಾಯವನ್ನೂ ಮಾಡಿದರು.—ಕರ್ನಾಟಕಪತ್ರಿಕೆ.

ಮಾ॥ ರಾ॥ ಚಿತ್ತೂರು ಪಿಂಗಳಿವರಾಯರವರ ಮಕ್ಕಳು ಕನ್ಯೆಯರಾಗಿರುವಾ ಗಲೇ ವಿಧವೆಯರಾದರು. ಇವರಿಗೆ ಬಳ್ಳಾರಿಯಲ್ಲಿ ಪುನರ್ವಿವಾಹವಾಯಿತು. ಕಡಪಾ

ಕೊಂದ ಪಾಪ ತಿಂದು ಪರಿಹಾರ.

ದಲ್ಲಿ ಇರುವ ಮಹಾಜನಗಳೆಲ್ಲಾ ಇವರನ್ನು ಕರೆಯಿಸಿಕೊಂಡು ಬಹಿರಂಗವಾಗಿ ಉತ್ಸವ ಮಾಡಬೇಕೆಂದು ನಿಷ್ಕರ್ಷೆ ಮಾಡಿ, ಇವರು ಬಂದ ಕೂಡಲೆ ಇವರನ್ನು ಬಂದು ಛತ್ರದಲ್ಲಿ ಇಳಿಸಿ, ದಂಪತಿಗಳನ್ನು ಎರಡು ಬಗ್ಗೀಗಾಡಿಗಳಲ್ಲಿ ಕೂರಿಸಿ, ಪಂಡಿತ ಭಾಷ್ಯಕಾರಾಚಾರ್ಲರು, ಕುಪ್ಪಯ್ಯನವರು, ದೊರಸಾಮಯ್ಯಂಗಾರ್ಯರು ಮೊದಲಾದ ಅನೇಕ ದೊಡ್ಡ ಮನುಷ್ಯರು ಆ ಉತ್ಸವದ ಜೊತೆಯಲ್ಲಿ ಸೇರಿಕೊಂಡು ಹೋದರು. ಉತ್ಸವವು ತೀರಿ ಪುನಃ ಮನೆಗೆ ಬಂದಕೂಡಲೆ ಔತನವೂ ನರ್ತನವೂ ಆದವು. ಅನಂತರದಲ್ಲಿ ಭಾಷ್ಯಕಾಚಾರ್ಯರು ಬಾಲಿಕಾ ವಿಧವೆಯರಿಗೆ ಪುನರ್ವಿವಾಹ ವಾಗಬಹುದೆಂದು ತೆಲುಗು ಭಾಷೆಯಲ್ಲಿ ಉಪನ್ಯಾಸ ಮಾಡಿದರು. ಇವರು ಈ ದೇಶದಲ್ಲೆಲ್ಲಾ ಅದ್ವಿತೀಯ ಪಾಂಡಿತ್ಯ ವುಳ್ಳವರೆಂದು ಪ್ರಖ್ಯಾತರಾಗಿರುವದರಿಂದ ಇವರು ಹೇಳುವ ಮಾತುಗಳನ್ನು ಕೇಳುವ ಕುತೂಹಲದಿಂದ ಅನೇಕರು ಸೇರಿದ್ದರು. ಅವರ ತಾತ್ಪರ್ಯವೇನೆಂದರೆ :—

ವಿಧವೆಯರಿಗೆ ಪುನರ್ವಿವಾಹ ಮಾಡುವದಕ್ಕೆ ಉಪಕ್ರಮವಾದದ್ದು ಈಗ ಅಲ್ಲ. ೧೮೫೬ನೇ ಇಸವಿಯಿಂದಲೂ ಈ ಪ್ರಸ್ತಾಪವು ಅಲ್ಲಲ್ಲಿ ನಡೆಯುತ್ತಲೇ ಇದೆ. ಪೂರ್ವದಲ್ಲಿ ಬಾಲಿಕಾವಿವಾಹವು ನಡೆಯುತ್ತಿರಲಿಲ್ಲ. ಸ್ತ್ರೀಯರು ತಮಗೆ ತಾರತಮ್ಯಜ್ಞಾನ ಬಂದ ಮೇಲೆ ಮದುವೆ ಮಾಡಿಕೊಳ್ಳುತ್ತಿದ್ದರು. ದಮಯಂತಿಯೇ ಮೊದಲಾದ ಅನೇಕ ಸ್ತ್ರೀಯರು ತಮ್ಮ ಪತಿಗಳನ್ನು ತಾವೇ ವರಿಸಿದರು. ವಿಧವೆಯು ಪುನಃ ವಿವಾಹ ಮಾಡಿಕೊಂಡರೆ ಮೊದಲಸೇ ಪತಿಯ ಉತ್ತರಕ್ರಿಯಾದಿಗಳಿಗೆ ಏನು ಗತಿ ಎಂಬದಾಗಿ ಜನರು ಬಂದು ಭಯವನ್ನು ಕಲ್ಪಿಸಿಕೊಳ್ಳುವರು. ಬಾಲಿಕಾವಿವಾಹವಾದ ಮೇಲೆ ಪ್ರಸ್ತಾವಾಗುವದಕ್ಕೆ ಮುಂಚೆ ಗಂಡ ಸತ್ತರೆ ಆಕೆಯನ್ನು ಕನ್ಯೆಯೆಂದೇ ಗಣಿಸಬೇಕು. ನಿಷೇಕವಾದಮೇಲೆ ಗಂಡನು ಸತ್ತರೆ ಆಕೆಯನ್ನು ವಿಧವೆಯನ್ನಬಹುದು. ಪೂರ್ವದಲ್ಲಿ ಇಲ್ಲದಿದ್ದ ಆಚಾರಗಳನ್ನೆಲ್ಲಾ ಈಗ ಕಲ್ಪಿಸಿಕೊಂಡು ಸ್ತ್ರೀಯರಿಗೆ ತಾರತಮ್ಯಜ್ಞಾನ ಬರುವದಕ್ಕೆ ಮುಂಚೆಯೇ ಮದುವೆ ಮಾಡಿ ಅವರ ಗಂಡಂದಿರು ನಿಷೇಕವಾಗುವದಕ್ಕೆ ಮುಂಚೆ ಮೃತರಾದರೂ ಅವರು ಯಾವಜ್ಜೀವವೂ ಸಂನ್ಯಾಸಿಗಳಂತೆ ಇರಬೇಕೆಂದು ವಿಧಿಸುವದು ಅನುಚಿತ. ನಿಷೇಕವಾಗುವದಕ್ಕೆ ಮುಂಚೆ ಪತಿಯು ಮೃತನಾದರೆ ಪುನಃ ಮದುವೆಮಾಡಿಕೊಳ್ಳುವದಕ್ಕೆ ಶ್ರುತಿಗಳು ಪ್ರತಿಕೂಲವಾಗಿ ಇಲ್ಲ. ಬಾಲಿಕೆಯರಿಗೆ ವಿವಾಹ ಮಾಡಬೇಕೆಂದು ಯಾವ ಶ್ರುತಿಯಲ್ಲಿಯೂ ಹೇಳಿ ಇಲ್ಲ. ತಾರತಮ್ಯಜ್ಞಾನ ಬರುವಕಾಲವೇ ಮದುವೆ ಮಾಡುವದಕ್ಕೆ ತಕ್ಕ ಕಾಲವೆಂದು ಈ ಶ್ರುತಿಗಳಿಂದಲೇ ತಿಳಿಯುವರುತ್ತದೆ. ಸ್ಮೃತಿಗಳಲ್ಲಿಯೂಕೂಡ ಪತಿಯು ಬದುಕಿ ಇರುವಾಗಲೇ ಕೆಲವು ಸಂದರ್ಭಗಳಲ್ಲಿ ಬೇರೇ ಗಂಡನನ್ನು ಮದುವೆ ಮಾಡಿಕೊಳ್ಳ ಬಹುದೆಂದು ಹೇಳಿದೆ. ಹೀಗಿರುವಲ್ಲಿ ಗಂಡನು ಸತ್ತಮೇಲೆ ಬೇರೊಬ್ಬನನ್ನು ಯಾತಕ್ಕೆ ಮದುವೆ ಮಾಡಿಕೊಳ್ಳಕೂಡದೋ ತಿಳಿಯದು. ಕೆಲವು ಕುತರ್ಕಿಗಳು ವಿಧವೆಯರು ಬೇರೇ

ಕೊಂಡಹಾಗೆ ಮಾರಿದರೆ ಉಂಡ ಊಟಕ್ಕೆ ಮಾರ್ಗವೇನು ?

ಮದುವೆ ಮಾಡಿಕೊಂಡರೆ ಸತ್ತವನಿಗೆ ಶ್ರಾದ್ಧ ಮಾಡುವವರು ಯಾರು ಎಂದು ಕೇಳುತ್ತಾರೆ. ಈಗ ಅನೇಕರು ಹೆಂಡತಿ ಸತ್ತವರು ಬೇರೇ ಮದುವೆ ಮಾಡಿಕೊಂಡು ಇರುತ್ತಾರೆ. ಇವರು ಸತ್ತ ಹೆಂಡತಿಯರಿಗೆ ಶ್ರಾದ್ಧ ಮಾಡುವದಿಲ್ಲವೆ ? ಹಾಗೆಯೇ ಸ್ತ್ರೀಯರೂ ಯಾತಕ್ಕೆ ಮಾಡ ಕೂಡದೋ ತಿಳಿಯದು. ಪುರಾಣಗಳಲ್ಲಿ ಕೆಲವು ವಚನಗಳು ಪುನರ್ವಿವಾಹಗಳಿಗೆ ಪ್ರತಿ ಕೂಲಗಳಾಗಿ ಇವೆ. ಅನೇಕರು ಇವು ಶ್ರುತಿಸ್ಮೃತಿಗಳಿಗೆ ಸಮಾನವಾದವುಗಳೆಂದು ತಿಳಿದು ಕೊಂಡು ಕುತರ್ಕವನ್ನು ಮಾಡುವರೇಹೊರ್ತು, ಈಶ್ವರನು ತಾನು ಸೃಷ್ಟಿ ಮಾಡಿದ ಸ್ತ್ರೀ ಪುರುಷರಲ್ಲಿ ಪುರುಷಪಕ್ಷಪಾತಿಯಾಗಿಯೂ ಸ್ತ್ರೀಯರಿಗೆ ಪ್ರತಿಕೂಲನಾಗಿಯೂ ವಿಧಿಗಳನ್ನು ಕಲ್ಪಿಸಿ ಇರಲಾರನೆಂಬದಾಗಿಯೂ ಈಗ ಇರತಕ್ಕ ನಿಷೇಧವಚನಗ ಳೆಲ್ಲಾ ದುರ್ಜನರು ಈ ಪುರಾಣಗಳಲ್ಲಿ ಸೇರಿಸಿದ ವಚನಗಳೆಂಬದಾಗಿಯೂ ಗಂಡಸರೂ ನಂಬುವದಿಲ್ಲ. ನಿರಕ್ಷರಕುಕ್ಷಿಗಳಾದ ಸ್ತ್ರೀಯರು ನಂಬುವದಕ್ಕೆ ಹೆದರಿಕೊಳ್ಳುತ್ತಾರೆ. ದ್ವಿತೀಯ ವಿವಾಹವು ಕೂಡದು ಎಂದು ಹೇಳತಕ್ಕವರು ಈ ಪುನರ್ವಿವಾಹ ನಿಷೇಧವನ್ನು ಕುರಿತು ಯಾವಯಾವ ಗ್ರಂಥಗಳಲ್ಲಿ ಹೇಳಿದೆಯೋ ಆ ಗ್ರಂಥಗಳಲ್ಲಿ ಹೇಳಿರತಕ್ಕ ಇತರ ವಚನಗಳನ್ನೂ ಅನುಸರಿಸಿ ನಡೆಯುತ್ತಾರೆಯೋ ? ಅಥವಾ ಹಾಗೆ ನಡೆಯದೆ ಇರತಕ್ಕವರನ್ನು ದಂಡಿಸುತ್ತಾರೆಯೋ ? ಈ ಯುಗದಲ್ಲಿ ಸಂನ್ಯಾಸ ಯಾಗ ಮುಂತಾದವುಗಳಿಗೆ ಪುರಾಣವಲ್ಲಿ ನಿಷೇಧವನ್ನು ಹೇಳಿ ಇದೆ. ಈ ವಿಧಿಯನ್ನು ಉಲ್ಲಂಘಿಸಿ ಆಶ್ರಮವನ್ನು ತೆಗೆದುಕೊಳ್ಳುವವರಿಗೂ ಯಾಗವನ್ನು ಮಾಡುವವರಿಗೂ ಇವರು ಯಾವ ಶಿಕ್ಷೆಯನ್ನು ಮಾಡುತ್ತಾರೆ ? ನಿತ್ಯಕರ್ಮಾನುಷ್ಠಾನಗಳ ವಿಷಯದಲ್ಲಿ ಹೇಳಿರತಕ್ಕ ವಚನಗಳನ್ನೆಲ್ಲಾ ಉಲ್ಲಂಘಿಸಿ ಬಹಿರಂಗದಲ್ಲಿ ಶ್ರೌತ್ರಿಯರಂತೆ ವೇಷಧಾರಿಗಳಾಗಿ ಅಂತರಂಗದಲ್ಲಿ ವಿಧವಾಸವೂ ಗಮವನ್ನು ಮಾಡಿಕೊಂಡು ಇರತಕ್ಕ ಚಂಡಾಲರಿಗೆಲ್ಲಾ ಏನು ಶಿಕ್ಷೆ ಮಾಡಿ ಇದ್ದಾರೆ ? ಗಂಡಸು ಹೆಂಡತಿ ಸತ್ತರೆ ತನ್ನ ಇಚ್ಛಾನುಸಾರವಾಗಿ ಪುನರ್ವಿವಾಹವನ್ನು ಮಾಡಿಕೊಳ್ಳು ವನು ; ಹೆಂಗಸು ವಿಧವೆಯಾದರೆ ಅವಳಿಗೆ ಬಂದು ಸಂನ್ಯಾಸಾಶ್ರಮವನ್ನು ಏರ್ಪಡಿಸುವನು. ವಿಚಿತ್ರಧರ್ಮ !. ವಿಚಿತ್ರಶಾಸ್ತ್ರಗಳು !

ಈ ಮಹಾ ಪಂಡಿತರು ಕೋಟ್ಯಂತರ ಶಿಶು ಹತ್ಯಗಳನ್ನೂ ಅಸಂಖ್ಯಾತವಾದ ಗರ್ಭ ಸ್ರಾವಗಳನ್ನೂ ಪ್ರತ್ಯಕ್ಷವಾಗಿ ನೋಡುತ್ತಿದ್ದಾಗ್ಯೂ ಇವುಗಳನ್ನೆಲ್ಲಾ ನೋಡುತ್ತಾ ಸುಮ್ಮನೆ ಇದ್ದಾರೆಯೇ ಹೊರ್ತು ಶ್ರುತಿಸ್ಮೃತಿಗಳನ್ನು ನಿಷ್ಪಕ್ಷಪಾತವಾಗಿ ಪರೀಕ್ಷಿಸಿ ಲೋಕಕ್ಕೆ ಹಿತ ವನ್ನು ಉಂಟುಮಾಡತಕ್ಕ ಯೋಚನೆಯು ಇವರಿಗೆ ಇಲ್ಲ.

ಮದರಾಸಿನಲ್ಲಿ ತಿರುವಳಕ್ಕೇಣಿಯಲ್ಲಿ ಇರತಕ್ಕ ಹೈಕೋರ್ಟುವಕೀಲರಾದ ಮು|| ರಾ|| ಟಿ. ಸದಾಶಿವಯ್ಯರ್ ಬಿ. ಎ., ಬಿ. ಎಲ್. ರವರು ಬಳ್ಳಾರಿಯಲ್ಲಿ ಪುನರ್ವಿವಾಹ ಮಾಡಿಕೊಂಡ

ಕೈಲಿದ್ದ ಕಲ್ಲು ಕೊಡಿ, ಮನೆಗೆ ಬಂದರೆ ಬೆಲ್ಲಾ ಕೊಟ್ಟೀಯ ?

ದಂಪತಿಗಳಿಗೆ ಔತನ ಮಾಡಿದರು. ಈ ಔತನಕ್ಕೆ ಬಿ. ಎ. ಪರೀಕ್ಷೆಯನ್ನು ಕೊಟ್ಟ ಕೆಲವರು ಬ್ರಾಹ್ಮಣ ವಿದ್ವಾಂಸರು ಹೋಗಿ ಇದ್ದರಂತೆ.

ಮದರಾಸು ಗವರ್ನರ್ ಸಾಹೇಬರವರು ಕಾಮ್ರ್ಸಿಕಲ್ ಸಾಹೇಬರವರ ಜಾಡಿ ಮಾತುಗಳನ್ನು ಕೇಳಿಕೊಂಡು ಮದರಾಸು ಸಿವಿಲ್ ಸರ್ವಿಸಿಗೆ ಸೇರಿದ ಮೆ॥ ಜರ್ಜಾವಾಲಿಸ್ ಸಾಹೇಬರನ್ನು ಅವರ ಕೆಲಸದಿಂದ ನಿವರ್ತಿಸಮಾಡಿ ಅವರಿಗೆ ೪೦೦ ಪೌಂಡುಗಳು ಪೆರ್ಷನ್ ಬರುವದಕ್ಕೆ ಹಕ್ಕು ಇದ್ದರೂ ೪೫೦ ಪೌಂಡು ಮಾಡಿದರು. ವಾಲಿಸ್ ಸಾಹೇಬರು ಸೀಮೆಗೆ ಹೋಗಿ ಸ್ಟೇಟ್ ಸೆಕ್ರೆಟರಿಯವರಿಗೆ ಈ ಅನ್ಯಾಯವನ್ನು ತಿಳಿಸಿ ತಮಗೆ ಬರತಕ್ಕ ೪೦೦ ಪೌಂಡ್ ಪೆರ್ಷನನ್ನೇ ಪಡೆದರು. ಹೀಗೆ ಇಂಗ್ಲೀಷ್ ರಾಜ್ಯಭಾರದಲ್ಲಿ ದುರ್ಜನರಾದವರು ಅನ್ಯಾಯ ಮಾಡಿದರೂ ಉಪಪನ್ನರಾಗಿಯೂ ಸಹಸಿಗಳಾಗಿಯೂ ಇರುವವರಿಗೆ ನ್ಯಾಯವು ದೊರೆಯುವದು.

ಜನರಲ್‌ಬ್ಯಾರ್ಕ್‌ಬರಿ ಲಾರ್ಡ್‌ಅುಲ್ಸ್ಲಿ ಎಂಬುವರು ಅಬುಹ್ಯಾಮಿಡ್ ಮತ್ತು ಕಾರ್ಟಿ ಎಂಬಸ್ಥಳಗಳಲ್ಲಿ ಸೈನ್ಯಸಮೇತರಾಗಿ ಇದ್ದಾರೆ. ಜೇಸಿಗೆಯ ವೇಗವು ಸ್ವಲ್ಪಕಡಿಮೆಯಾ ದಮೇಲೆ ಕಾರ್ಟೂಂ ಪಟ್ಟಣವನ್ನು ಒಟ್ಟಿಗೆ ಪ್ರವೇಶಿಸುತ್ತಾರೆ.

ದಕ್ಷಿಣ ಹಿಂದೂಸ್ಥಾನದ ಪಶ್ಚಿಮಭಾಗದಲ್ಲಿರುವ ಮಲಬಾರ್‌ನಲ್ಲಿ ಮಾಪಿಳ್ಳೆಗಳೆಂಬ ದಾಗಿ ಬಂದುಜಾತಿ ತುರುಕರಿದ್ದಾರೆ. ಒಬ್ಬಾನೊಬ್ಬ ಬ್ರಾಹ್ಮಣನು ಇವರ ಮತಕ್ಕೆ ಸೇರಿ ಇದ್ದು ಕೆಲವು ದಿನಗಳನಂತರ ಪುನಃ ಸ್ವಜಾತಿಗೆ ಸೇರಿದನು. ಇದಕ್ಕಾಗಿ ಆ ಮಾಪಿಳ್ಳೆಗಳಿಗೆ ಕೋಪ ಬಂದು ಆ ಬ್ರಾಹ್ಮಣನನ್ನು ಕೊಲ್ಲಬೇಕೆಂದು ಅಟ್ಟಿಕೊಂಡು ಹೋದರು. ಆಗ ಅವನು ಹೆದರಿಕೊಂಡು ಬಂದು ದೇವಾಲಯದ ಬಳಕ್ಕೆ ಹೋಗಿ ಅವಿತುಕೊಂಡನು. ಹಿಂದೆಯೇ ತುರುಕರೆಲ್ಲರೂ ಬಳಕ್ಕೆ ನುಗ್ಗಿ ಬಳಗೆಲ್ಲಾ ಅಶುದ್ಧಿ ಮಾಡಿದರು ಇಷ್ಟರಲ್ಲಿ ಈ ಸಮಾಚಾರವು ಪೋಲೀಸಿಗೆ ತಿಳದು ಪೋಲೀಸಿನವರು ಗುಡೀಬಾಗಲನ್ನು ಒಡೆದು ಬಳಕ್ಕೆ ನುಗ್ಗಿ ಅಲ್ಲಿದ್ದ ಮಾಪಿಳ್ಳೆಗಳನ್ನೆಲ್ಲಾ ಹಿಡಿದು ಅವರಿಂದ ಗುಡಿಯ ಸಂಪ್ರೋಕ್ಷಣಾರ್ಥವಾಗಿ ೨ ಲಕ್ಷ ರೂಪಾಯನ್ನು ತೆರಿಸಿದರು.

ಹೈದರಾಬಾದಿನಲ್ಲಿ ಯಾರೋ ಕೆಲವರು ಕಳ್ಳರು ಬಂದು ಪಾಲಕಿಯಲ್ಲಿ ಕೆಲವು ತಟ್ಟೆಗಳನ್ನು ಇಟ್ಟು, ಅವುಗಳ ತುಂಬಾ ಕಲ್ಲು ತುಂಬಿ, ಮೇಲೆ ಪಟ್ಟವಸ್ತ್ರಗಳನ್ನು ಹೊದ್ದಿಸಿ, ಅದನ್ನು ಹೊತ್ತುಕೊಂಡು, ಬೆಳಿಗ್ಯೆ ನಾಲ್ಕುಘಂಟೆಯಲ್ಲಿ ಐಶ್ವರ್ಯವಂತರೂ ಮಾನಿಷ್ಠರೂ ಆದ ಸ್ತ್ರೀಯರಿರುವ ಬಂದಾನೊಂದು ಮನೆಗೆ ಹೋಗಿ, ಜಂಭವಾಗಿ ಬಾಗಿಲನ್ನು ತೆರೆದು

ಕೈಲಾಸದವರು ಬಲ್ಲರು, ವೈಕುಂಠದವರು ಬಲ್ಲರು.

ಕೊಂಡು ಬಳಕ್ಕೆ ನುಗ್ಗಿ, ಅಲ್ಲಿದ್ದವರೆಲ್ಲರನ್ನೂ ಕಂಬಕ್ಕೆ ಕಟ್ಟುಹಾಕಿ, ಸಮಸ್ತದ್ರವ್ಯವನ್ನೂ ಬಡವೇವಸ್ತುಗಳನ್ನೂ ತಾವು ತಂದ ತಟ್ಟೆಗಳಲ್ಲಿ ತುಂಬಿಕೊಂಡು, ಅವುಗಳಲ್ಲಿದ್ದ ಕಲ್ಲುಗಳನ್ನೆಲ್ಲಾ ಬಿಸಟು, ಪೂರ್ವದಂತೆ ಮೇಲೆ ಗುಬುರು ಹಾಕಿ, ದೊಡ್ಡ ಮನುಷ್ಯರ ಕಡೆಯವರಂತೆ ಬಾಗಲನ್ನು ತೆಗೆದುಕೊಂಡು, ಪಾಲಕ್ಕಿಯನ್ನು ಹೊತ್ತುಕೊಂಡು ಹೊರಟು ಹೋದರು. ಇವರೀಗ ಕಲಿಯುಗದ ಕಳ್ಳರು!

ಇಲಾಯಿತಿಯಲ್ಲಿ ಈಗ ಚತುರಂಗವನ್ನಾಡುವವರಲ್ಲಿ ಮಿಸ್ಟರ್ ಬ್ಲ್ಯಾಕ್‌ಬರ್ನ್ ಎಂಬುವನು ಬಹಳ ಸಮರ್ಥನು. ಈತನನ್ನು ಆಡಿ ಸೋಲಿಸಬೇಕೆಂದು ಆಸ್ಟ್ರೇಲಿಯಾ ಖಂಡದ ನಿವಾಸಿಗಳಾದ ಫ್ಲೆಮಿಂಗ್, ಎಸ್ಲಿಂಗ್, ವಿಟ್ಕ್, ಲೌಗ್ರಾಮ್, ಸ್ಟೀವರ್ಟ್, ಲ್ಯಾಂಡಿಲಸ್, ಲಷ್, ಹ್ಯಾಮೆಲ್ ಎಂಬ ಎಂಟು ಜನರು ಇಲಾಯಿತಿಗೆ ಹೋದರು. ಬ್ಲ್ಯಾಕ್‌ಬರ್ನ್ ಎಂಬಾತನು ಕಣ್ಣು ಕಟ್ಟಿಕೊಂಡು ಆಡಿ ಇವರನ್ನು ಸೋಲಿಸುತ್ತೇನೆಂದು ಹೇಳಿದನು. ಜನವರಿ ೮ನೇ ತಾರೀಖಿನಲ್ಲಿ ಆಟಕ್ಕೆ ಮೊದಲಾಯಿತು. ಈತನು ಕಣ್ಣು ಕಟ್ಟಿಕೊಂಡು ಅವರನ್ನು ತಪ್ಪದೆ ೫೫ ಆಟಗಳು ಮಾತುಮಾಡಿದನು, ೫ ಆಟಗಳಲ್ಲಿ ಬುರುಜಾಯಿತು. ಆಡಿದ್ದು ಎಂಟೇ ಆಟಗಳು.

ಪ್ರಯಾಗದಲ್ಲಿ ಇಬ್ಬರು ಯೂರೋಪಿಯನರು ತಮ್ಮ ಮತವನ್ನು ಬಿಟ್ಟು ಮುಸಲ್ಮಾನ್ ಮತಕ್ಕೆ ಸೇರಿ ಮುಸಲ್ಮಾನರ ಸಿದ್ಧಾಂತವನ್ನು ಬೀದಿಗಳಲ್ಲೆಲ್ಲಾ ಸಾರುವದಕ್ಕೆ ಉಪಕ್ರಮಿಸಿ ಇದ್ದಾರೆ.

ಈ ಪ್ರಪಂಚದಲ್ಲೆಲ್ಲಾ ಅತ್ಯಂತ ವಿಸ್ತಾರವಾದ ದೇಶಗಳನ್ನು ಪಡೆದು ಇರತಕ್ಕವರು ಇಂಗ್ಲೀಷಿನವರು ಮತ್ತು ರಷ್ಯಾದವರು. ಇವರ ನಡೆನುಡಿಗಳಲ್ಲಿಯೂ ರಾಜ್ಯಭಾರಗಳಲ್ಲಿಯೂ ಬಹಳ ತಾರತಮ್ಯಗಳುಂಟು. ಇಂಗ್ಲೀಷಿನವರ ದೇಶಗಳು ಈ ಭೂಮಂಡಲದ ಸಮಸ್ತ ಭಾಗಗಳಲ್ಲಿಯೂ ಇವೆ, ಅಂದರೆ ಇವರಿಗೆ ಅಮೆರಿಕಾ ಖಂಡದಲ್ಲಿ ಕೆಲವು ಪ್ರದೇಶಗಳೂ ಯೂರೋಪ್, ಏಷ್ಯಾ, ಆಸ್ಟ್ರೇಲಿಯ, ಆಫ್ರಿಕಾಖಂಡಗಳಲ್ಲಿ ಕೆಲವು ಪ್ರದೇಶಗಳೂ ಸೇರಿ ಇವೆ. ಇದರಿಂದ ದ್ರವ್ಯಸಂಪಾದನೆಯು ವಿಶೇಷವಾಗಿ ಇದ್ದಾಗ್ಯೂ ದೇಶದೇಶಗಳಿಗೆ ಪರಸ್ಪರದೂರವು ಬಹಳವಾಗಿರುವದರಿಂದ ಸಮಯಾಂತರಗಳಲ್ಲಿ ಒಂದುದೇಶದಿಂದ ಮತ್ತೊಂದು ದೇಶಕ್ಕೆ ಹೋಗಬೇಕಾದರೆ ಬಹಳ ಅನಾನುಕೂಲಗಳುಂಟು. ರಷ್ಯಾದೇಶದವರಿಗೆ ಯೂರೋಪ್‌ಖಂಡದಲ್ಲಿ ಅರ್ಧಭಾಗವೂ ಏಷ್ಯಾದಲ್ಲಿ ಸುಮಾರು ಮೂರರಲ್ಲಿ ಒಂದು ಭಾಗವೂ ಸೇರಿ ಇವೆ. ಇವರಿಗೆ ತಮ್ಮ ದೇಶಗಳೆಲ್ಲಾ ಒಂದೇಕಡೆ ಇರುವದರಿಂದ ಮೇಲೆ ಹೇಳಿದ ಅನುಪಪತ್ತಿಗಳು ಕಡಿಮೆ. ಆದರೆ ಲೋಕದಲ್ಲಿ ದ್ರವ್ಯಸಹಾಯವು ಇಂಗ್ಲೀಷ್

ಕೈತೋರಿಸಿ ಅವಲಕ್ಷಣ ಅನ್ನಿಸಿಕೊಂಡಹಾಗೆ.

ಜನರಿಗಿರುವಂತೆ ಇನ್ನ್ಯಾರಿಗೂ ಇಲ್ಲ. ಇವರಿಗೆ ಯಾವ ನಿಮಿಷದಲ್ಲಿ ಬೇಕಾದರೂ ಲಕ್ಷಾಂತರಸೈನ್ಯಗಳನ್ನು ನೇಮಕ ಮಾಡುವ ಉಪಪತ್ತಿಯುಂಟು. ಇಂಗ್ಲೀಷ್‌ನವರು ಉಪಪನ್ನರಾಗುವದಕ್ಕೆ ಅವರು ಇಂಡಿಯಾದೇಶದ ವ್ಯಾಪಾರ ಮಾಡುವದರಿಂದ ಎಂಬುವದೂ ಒಂದು ಕಾರಣ. ಬಹು ಕಾಲದಿಂದ ರಷ್ಯ್ಯಾಜನಗಳು ಇಂಡಿಯಾ ದೇಶವನ್ನು ಆಕ್ರಮಿಸಬೇಕೆಂದು ಪ್ರಯತ್ನ ಮಾಡುತ್ತಲೇ ಇದ್ದಾರೆ. ಇವರು ಈಗ ಸೈನ್ಯವನ್ನು ಆಫಘಾನಿಸ್ಥಾನದ ಹೀರತ್ ಪಟ್ಟಣದ ಸಮೀಪಕ್ಕೆ ತೆಗೆದುಕೊಂಡು ಬಂದು ಇದ್ದಾರೆ. ಆಫ್ರಿಕಾದಲ್ಲಿರುವ ಸೂಡಾನಿನಲ್ಲಿ ಮಹಡಿ ಎಂಬುವನೂ ಅವನ ಕಡೆ ತುರುಕರೂ ಜನರಲ್‌ಗಾರ್ಡ್ನರ್‌ಸಾಹೇಬರನ್ನು ಕೊಂದದ್ದಕ್ಕೋಸ್ಕರ ಇಂಗ್ಲೀಷ್‌ಸೈನ್ಯಗಳು ಅವರನ್ನು ಶಿಕ್ಷಿಸುವ ಉದ್ದಿಶ್ಯವಾಗಿ ಸೂಡಾನಿನ ಕಡೆಗೆ ಹೋಗುತ್ತಲಿವೆ. ಈ ಸಮಯದಲ್ಲಿ ಹೀರತ್ ಪಟ್ಟಣವನ್ನು ತೆಗೆದುಕೊಂಡರೆ ಇಂಡಿಯಾಕ್ಕೆ ಪ್ರವೇಶಮಾಡುವದು ಸುಲಭವೆಂದು ತಿಳಿದುಕೊಂಡು ರಷ್ಯಾದವರು ಸೈನ್ಯಗಳೊಡನೆ ಹಿರತ್ ಬಳಿಗೆ ಬರುತ್ತಾ ಇದ್ದಾರೆ. ಇಂಗ್ಲೀಷ್ ಸರಕಾರದವರಿಗೂ ರಷ್ಯಾ ಸರಕಾರದವರಿಗೂ ಕಾಗದ ಪತ್ರಗಳು ನಡೆಯುತ್ತಾ ಇವೆ. ರಷ್ಯಾದವರು ಹೀರತ್‌ಪಟ್ಟಣವನ್ನು ತೆಗೆದುಕೊಳ್ಳುವದೇ ನಿಶ್ಚಯವಾದಲ್ಲಿ ಯುದ್ಧವು ಪ್ರಾರಂಭಿಸುವಂತೆ ತೋರುತ್ತದೆ.

ಪೂರ್ವದಲ್ಲಿ ಅನೇಕರು ಸಿಡುಬು ಎದ್ದು ಸಾಯುತ್ತಿದ್ದರು. ಸಿಡುಬು ಹಾಕುವಡಕ್ಕೆ ಪ್ರಾರಂಭಿಸಿದಮೇಲೆ ಈ ಪ್ರಾಣಭಯವು ನಿಂತಿತು. ಹೀಗೆಯೇ ದನಗಳಿಗಗೂ ಬಾಲದಲ್ಲಿ ಶಸ್ತ್ರದಿಂದ ಕುತ್ತಿ ಅದಕ್ಕೆ ಏನೋ ಒಂದುವಿಧವಾದ ರಸವನ್ನು ಸುರಿದರೆ ಅವುಗಳಿಗೆ ಕಾಲು ಬಾಯಿಜ್ವರಗಳು ಬರಲಾರವು. ಈ ವಿಷಯವನ್ನು ಸ್ವಿಡ್ಜರ್‌ಲ್ಯಾಂಡ್ ದೇಶದಲ್ಲಿ ಪ್ಯಾಸ್ಟಿಯರ್ ಎಂಬ ಪಂಡಿತನು ಪರೀಕ್ಷಿಸಿಗೊತ್ತು ಮಾಡಿರುತ್ತಾನೆ. ಆ ದೇಶದಲ್ಲಿ ಈ ರೋಗವು ತಗಲಿದರೆ ಒಳ್ಳಿಂ ಕಾಲ್ನಡೆಗಳು ಸಾಯುತ್ತಿದ್ದವು. ಕಳೆದ ೧೮೮೪ನೇ ಯಿಸವಿಯಲ್ಲಿ ಸ್ಟ್ರಾಬೆಲ್ ಎಂಬಾತನು ಮೇಲ್ಕಂಡ ರೀತಿಯಲ್ಲಿ ದನಗಳಿಗೆ ಸಿಡುಬು ಹಾಕಲು ಎಲ್ಲವೂ ಜೀವಿಸಿ ಎರಡು ಮಾತ್ರ ಸತ್ತುಹೋದವು. ಈ ಎರಡೂ ಅತನು ಶಸ್ತ್ರ ಹಾಕುವಾಗ ಬಹಳ ರಕ್ತ ಸುರಿದದ್ದರಿಂದಲೂ ಬಿಸಿಲಿನ ವೇಗದಿಂದಲೂ ಸತ್ತವು. ಸಿಡುಬು ಹಾಕುವಾಗ ಶಸ್ತ್ರವು ಮೂಳೆಗಳಿಗೆ ತಗಲದಂತೆ ಬಾಲದಲ್ಲಿ ಬಿಸಲಿಲ್ಲದ ವೇಳೆಯಲ್ಲಿ ಹಾಕಬೇಕು.

ಇಂಗ್ಲೀಷ್‌ಸರಕಾರದವರು ಜನರಲ್‌ಗಾರ್ಡ್ನರ್ ಸಾಹೇಬರು ಮಾಡಿದ ಉಪಕಾರಕ್ಕಾಗಿ ಅವರ ಹೆಂಡತಿಗೆ ೨ ಲಕ್ಷ ರೂಪಾಯಿ ಕಳುಹಿಸಿದರು.

ಹೈದರಾಬಾದ್ ನಿಜಾಮರವರು ತಮ್ಮ ರೆಸಿಡೆಂಟರ ಮೂಲಕವಾಗಿ ಇಂಗ್ಲೀಷ್‌ಸರಕಾರದವರಿಗೆ ಬರೆದಿರುವದೇನೆಂದರೆ :— "ರಷ್ಯ್ಯಾ ಜನಗಳು ತಾವು ಇಂಡಿಯಾದೇಶಕ್ಕೆ ಬಂದ ಕೂಡಲೆ ಇಂಗ್ಲೀಷ್‌ದವಲತ್ತಿಗೆ ಪ್ರತಿಕೂಲರಾಗಿ ಇರುವವರಲ್ಲಿ ಯಾರೂ ತಮ್ಮ ಪಕ್ಷಕ್ಕೆ ಬರುವ

ಕೇಳುವವರಿಗೆ ಬುದ್ಧಿ, ಹೇಳುವವರಿಗೆ ಸುದ್ದಿ.

ವದಿಲ್ಲವೆಂದು ತಿಳಿಯುವಹಾಗೆ ಮಾಡುವದು ಎಲ್ಲರಿಗೂ ಉತ್ತಮವಾದದ್ದು. ಪಂಜಾಬಿನಲ್ಲಿರುವ ರಾವಲ್‌ಪಿಂಡಿ ಎಂಬ ಸ್ಥಳದಲ್ಲಿ ಈ ವುದ್ದೇಶವಾಗಿ ಆಗತಕ್ಕ ಸಭೆಗೆ ನಮ್ಮ ಮಂತ್ರಿಗಳ ಸಹೋದರರನ್ನು ನಮಗೆ ಪ್ರತಿನಿಧಿಯಾಗಿ ಕಳುಹಿಸ ಬೇಕೆಂದು ಇದ್ದೇವೆ. ನಮ್ಮ ಇಂಡಿಯಾದೇಶದ ಎಲ್ಲಾ ಸಂಸ್ಥಾನಗಳಿಂದಲೂ ಹೀಗೆ ಪ್ರತಿನಿಧಿಗಳು ಹೋಗಿ, ಬಂದುವೇಳೆ ರಷ್ಯಾದವರಿಗೂ ಇಂಗ್ಲಿಷ್‌ನವರಿಗೂ ಕಲಹ ಪ್ರಾಪ್ತವಾದರೆ ಇಂಗ್ಲಿಷ್ ನವರಕಡೆ ಸೇರುವ ದಾಗಿ ವಿಚಾರಮಾಡಿಕೊಂಡರೆ, ಹೀಗೆ ಎಲ್ಲರೂ ಬಗ್ಗಟ್ಟಾದದ್ದನ್ನು ನೋಡಿ ರಷ್ಯಾದವರು ಹೆದರಿಕೊಂಡು ತಮ್ಮ ಪ್ರಯತ್ನವನ್ನು ಬಿಡುವರು. ಇದರಿಂದ ಮುಂದೆ ಆಗತಕ್ಕ ಪ್ರಾಣಹಾನಿಯೂ ಅನೇಕ ಹಿಂಸೆಗಳೂ ತಪ್ಪುವವು" ಇದಕ್ಕೆ ಆ ಮಂತ್ರಿಗಳ ಸಹೋದರರನ್ನು ಕಳುಹಿಸುವಂತೆ ಗವರ್ನರ್‌ಜನರಲ್‌ರವರು ಅಪ್ಪಣೆ ಕೊಟ್ಟರು.

೧೦. ತಂತ್ರೀವರ್ತಮಾನಸಂಗ್ರಹ.

ಮಾರ್ಚಿ ತಾ॥ ೭.—ಲಾರ್ಡ್ ಉಲ್ಸ್ಲಿ ಸಾಹೇಬರು ಈ ತಿಂಗಳು ಮುಗಿಯುವದರೊಳಗಾಗಿ ಸೈನ್ಯವನ್ನು ತೆಗೆದುಕೊಂಡು ಹೋಗುತ್ತಾರೆ.

ಬಂಗಾಳಾ ಸೈನ್ಯದಪೈಕಿ ೯ನೇ ಬಂಗಾಳಾ ಕ್ಯಾವಲರಿಯೂ ೭ನೇ ಬಂಗಾಳಾ ಇನ್‌ಫೆಂಟ್ರಿಯೂ ಈಜಿಪ್ಟಿಗೆ ಹೋಗಿ ಸೇರಿದವು.

ಮಾರ್ಚಿ ತಾ॥ ೯.—ಇಂಗ್ಲೀಷ್ ಸರಕಾರದವರು ರಷ್ಯಾ ಅಧಿಕಾರಸ್ಥರಿಗೆ ಆಫ್ಘಾನಿಸ್ತಾನಿನ ಸರಹದ್ದಿನಿಂದ ನಿಮ್ಮ ಸೈನ್ಯವನ್ನು ತೆಗೆದುಕೊಂಡು ಹೋಗಬೇಕು ಎಂದು ಬರೆದು ಕಳುಹಿಸಿದರು. ಆದರೆ ರಷ್ಯರ್ಜನರ ನಡತೆಗಳನ್ನು ನೋಡಿದರೆ ಯುದ್ಧವಾದ ಹೊರತು ಅವರು ಹಿಂತಿರುಗುವಂತೆ ತಿಳಿಯುವದಿಲ್ಲ. ರಷ್ಯರ್ಜನಗಳ ಮೇಲೆ ಯುದ್ಧ ಮಾಡುತ್ತೇವೆಂದು ತುರ್ಕೀದೇಶದವರು ಒಪ್ಪಿ ಇದ್ದಾರೆ. ಇಂಗ್ಲೀಷ್ ದೇಶಕ್ಕೂ ರಷ್ಯಾ ದೇಶಕ್ಕೂ ಸರಹದ್ದುಗಳನ್ನು ಗೊತ್ತುಮಾಡಿ ಇದ್ದಾರೆ.

ಮಾರ್ಚಿ ತಾ॥ ೧೦.—ರಷ್ಯಾದವರಿಗೂ ಇಂಗ್ಲೀಷ್‌ನವರಿಗೂ ಯುದ್ಧವಾಗುವ ಹಾಗೆ ಇತ್ತು. ಇವರಿಬ್ಬರಿಗೂ ರಾಜೆ ಆಯಿತು. ಹೊಸದಾಗಿ ೧೫೦೦೦ ಇಂಗ್ಲಿಷ್‌ಜನಗಳನ್ನು ನೇಮಕ ಮಾಡಿಕೊಳ್ಳುವಂತೆ ಪಾರ್ಲಿಮೆಂಟಿನವರು ಅಪ್ಪಣೆ ಕೊಟ್ಟರು.

ಮಹಡಿ ಎಂಬುವನ ಸೈನ್ಯದವರಿಗೆ ತಿಂಡಿಯಿಲ್ಲದೆ ಬಹಳ ಕ್ಷಾಮಬಂದಿದೆ. ಇದಕ್ಕಾಗಿ ಸೈನ್ಯದಜನಗಳಿಗೆಲ್ಲಾ ಅವನಲ್ಲಿ ಅನುರಾಗ ಕಡಿಮೆಯಾಗಿ ಇದೆ.

ಕೇಳದ ಕಿವಿ ಊರಿಗೆ ಮಾರಿಯು-ತಂದಿತು.

ಮಾರ್ಚಿ ತಾ॥ ೧೧.—ರಷ್ಯಾದವರು ಹೀರಾತಿನ ಕಡೆಗೆ ಬರುವವರಾಗಿ ಇದ್ದಾರೆ. ಅಫಘಾನಿನವರು ಅವರನ್ನು ಓಡಿಸುವದಕ್ಕೆ ಸನ್ನಾಹ ಮಾಡುತ್ತಾ ಇದ್ದಾರೆ.

ಇಂಗ್ಲಿಷ್‌ಸರಕಾರದವರು ಸರ್ ಪೀಟರ್‌ಲಮ್ಸ್ಡೆ ಎಂಬುವರನ್ನು ಬಂದು ದೊಡ್ಡ ಸೈನ್ಯ ದೊಡನೆ ಹೀರತಿಗೆ ಉತ್ತರದಲ್ಲಿ ಸುಮಾರು ೨೦೦ ಮೈಲು ದೂರದಲ್ಲಿ ನಿಲ್ಲಿಸಿ ಇದ್ದಾರೆ. ಕಾಬೂಲ್ ಅಮೀರರು ಯುದ್ಧವಾದೀತೋ ಏನೋ ಎಂದು ಯೋಚಿಸಿ ಹೀರತ್ ಪಟ್ಟಣವನ್ನು ಸರಿಮಾಡಿಸುತ್ತಾರೆ. ನಿಮ್ಮ ಸೈನ್ಯಗಳನ್ನು ತೆಗೆದುಕೊಂಡು ಹೀರಾತಿನಿಂದ ಹೋದರೆ ಸರಿ; ಹಾಗಿಲ್ಲದಿದ್ದರೆ ಕಾಬೂಲ್ ಅಮೀರರ ಸಮ್ಮತಿಯಿಂದ ಆ ಪಟ್ಟಣವನ್ನು ತೆಗೆದುಕೊಂಡು ಅಲ್ಲಿ ನಮ್ಮ ಸೈನ್ಯಗಳನ್ನೇ ಇಡುತ್ತೇವೆಂಬುವಾಗಿ ಇಂಗ್ಲಿಷ್ ಸರಕಾರದವರು ರಷ್ಯಾ ಚಕ್ರವರ್ತಿಗೆ ಬರೆದು ಇದ್ದಾರೆ.

ಫ್ರೆಂಚರಿಗೂ ಚೀನಾದವರಿಗೂ ಇನ್ನೂ ಯುದ್ಧವಾಗುತ್ತಾಲೇ ಇದೆ. ಕೀಲಂಗ್ ಪಟ್ಟಣವನ್ನು ತೆಗೆದುಕೊಳ್ಳಬೇಕೆಂದು ಫ್ರೆಂಚರು ೫ ದಿನಗಳಿಂದ ಯುದ್ಧ ಮಾಡಿ ಈ ದಿನ ಅದನ್ನು ತೆಗೆದುಕೊಂಡರು. ಇದರಲ್ಲಿ ೪೦ ಜನ ಸತ್ತರು ಮತ್ತು ೧೦೦ ಮಂದಿಗೆ ಗಾಯ ವಾಯಿತು.

ಮಾರ್ಚಿ ತಾ॥ ೧೨.—ಹೀರಾತಿನಲ್ಲಿ ಅನೇಕರು ದೊಡ್ಡ ಮನುಷ್ಯರು ನೀವು ಬಂದು ಹೀರತ್ ಪಟ್ಟಣವನ್ನು ಆಕ್ರಮಿಸಿಕೊಳ್ಳಿ ಎಂದು ರಷ್ಯಾದೇಶದವರಿಗೆ ಹೇಳಿಕೊಡುತ್ತಿದ್ದಾರೆ.

ಮಾರ್ಚಿ ತಾ॥ ೧೩.—ರಷ್ಯಾದೇಶದವರು ರಷ್ಯಜನಗಳ ಪಕ್ಷವಾಗಿ ಇದ್ದಾರೆ. ಬೊಂಬಾಯಿಯಲ್ಲಿ ಅನೇಕರು ದೊಡ್ಡ ಮನುಷ್ಯರು ಸಭೆಸೇರಿ ರಷ್ಯಾಜನಗಳು ಹಿಂದೂ ದೇಶಕ್ಕೆ ಪ್ರವೇಶಮಾಡಿದರೆ ನಾವು ಸಹಾಯ ಮಾಡುತ್ತೇವೆಂದು ಗವರ್ನರ್‌ಅವರಿಗೆ ತಿಳಿಸಿದರು. ಗವರ್ನರವರು ಇದನ್ನು ಸ್ಟೇಟ್‌ಸೆಕ್ರಿಟೆರಿಯವರಿಗೆ ರಿಪೋರ್ಟ್ ಮಾಡಿರುತ್ತಾರೆ.

ಮಾರ್ಚಿ ತಾ॥ ೧೪.—ಲಾರ್ಡ್‌ಡಫರೀನ್ ಸಾಹೇಬರವರು ರಷ್ಯಾದೇಶದೊಂದಿಗೆ ಯುದ್ಧ ಪ್ರಾಪ್ತವಾದೀತೆಂದು ತಕ್ಕ ಸನ್ನಾಹಗಳನ್ನೆಲ್ಲಾ ಮಾಡುತ್ತಾ ಇದ್ದಾರೆ.

ಮಹಡಿ ಯೆಂಬುವನು ಸೈನ್ಯಸಮೇತನಾಗಿ ಕಾಬೂಲ್ ಪಟ್ಟಣಬಿಟ್ಟು ವೆಂಟಮಾ ಎಂಬ ಸ್ಥಳಕ್ಕೆ ಹೋಗುತ್ತಾ ಇದ್ದಾನೆ. ಅವನ ಸೈನ್ಯವು ದಿನೇದಿನೇ ವೃದ್ಧಿಯಾಗುತ್ತಾಲೇ ಇದೆ.

ರಷ್ಯಾ ಸೈನ್ಯವು ಜಲ್‌ಫಿಕಲ್ ಎಂಬ ಸ್ಥಳದವರಿಗೂ ಬಂದು ಇದೆ.

ಕೊಂಕಣಸುತ್ತಿ ಮೈಲಾರಕ್ಕೆ ಹೋದ.

ಮಾರ್ಚಿ ತಾ॥ ೧೫.—ಜನರಲ್‌ಗಾರ್ಡ್‌ನರ್ ಸಾಹೇಬರ ಜ್ಞಾಪಕಾರ್ಥವಾಗಿ ಈಜಿಪ್ಟ್ ದೇಶದಲ್ಲಿ ಒಂದು ವೈದ್ಯಶಾಲೆಯನ್ನು ಕಟ್ಟಿಸಬೇಕೆಂದು ಇದ್ದಾರೆ.

ಮಾರ್ಚಿ ತಾ॥ ೧೬.—ಈಜಿಪ್ಟ್‌ದೇಶದಲ್ಲಿ ಜೇಬರ್‌ಪಾಚ್ಚಾ ಎಂಬುವರನ್ನು ಇಂಗ್ಲಿಷ್ ಸರಕಾರದವರು ಹಿಡಿದು ಖೈದಿನಲ್ಲಿಟ್ಟರು. ಇವರು ಮಹಡಿಯೊಡನೆ ಪಿತೂರಿಮಾಡಿದರೆಂಬ ಗುಮಾನಿಗೆ ಆಸ್ಪದರಾಗಿ ಇದ್ದಾರೆ. ಇವರನ್ನು ಹಿಡಿದು ಐರಿಸ್ ಎಂಬ ಹಡಗಿನಲ್ಲಿ ಹಾಕಿ ಸೈಪ್ರಸ್ ದ್ವೀಪಕ್ಕೆ ಕಳುಹಿಸಿಬಿಟ್ಟರು. ಇದು ಬಹಳ ಅಕ್ರಮವೆಂದು ಈಜಿಪ್ಟ್ ದೇಶದ ಪಾಚ್ಚಾಗಳೆಲ್ಲಾ ಕೋಪಿಸಿಕೊಂಡು ಇದ್ದಾರೆ.

ಮಾರ್ಚಿ ತಾ॥ ೧೮.—ರಷ್ಯಾದೇಶದ ಸರಹದ್ದಿನ ವಿಷಯದಲ್ಲಿ ಒಡಂಬಡಿಕೆಗಳು ನಡೆಯುತ್ತಾ ಇವೆ. ಈ ಸರಹದ್ದು ಗೊತ್ತಾಗುವವರಿಗೂ ಇಂಗ್ಲಿಷರೂ ರಷ್ಯಾದವರೂ ತಾವಿರತಕ್ಕ ಸ್ಥಳವನ್ನು ಬಿಟ್ಟು ಮುಂದರಿಸಕೂಡದೆಂದು ನಿಬಂಧನೆ ಮಾಡಿಕೊಂಡು ಇದ್ದಾರೆ.

ಬೊಂಬಾಯಿಯಲ್ಲಿ ಆಫಘಾನಿ ಸ್ಥಾನದ ಕೊರಕಲುಗಳಲ್ಲಿಯೂ ಕೂಡ ಹೋಗಬಹುದಾದಷ್ಟು ಬಲವಾದಂಥಾ ಗಾಡಿಳು ತಯಾರಾಗುತ್ತಾ ಇವೆ.

*೧೩. ಒಗಟೆಗಳು.

(೧) ಇಂದೀವರಾಕ್ಷಿ ಯದಿ ಪೃಚ್ಛಸಿ ಸಾಧುವಾಕ್ಯಂ । ವಕ್ಷ್ಯಾಮಿ ತೇ ಕಃ[1]ಮನುಷ್ಯ[2] ಸುರೇ[3]ಶ್ವರಾಣಾಂ[4] ॥ ಅಂಭೋಧಿರಾಮು ಹೃದಯಾಂಬುಜ ಭಾಸ್ಕರಾಣಾಂ[5] ಆದ್ಯಾಕ್ಷರಾಣಿ ಮಮ ವಲ್ಲಭ ನಾಮಧೇಯಂ ॥

(೨) ಕೃಷ್ಣಮುಖೀ ನ ತು ಮಾರ್ಜಾಲೀ ದ್ವಿಜಿಹ್ವಾ ನ ತು ಸರ್ಪಿಣೀ । ಪಂಚಭರ್ತಾ ನ ಪಾಂಚಾಲೀ ಯೋಜಾನಾತಿ ಸ ಪಂಡಿತಃ ॥

(೩) ವೇದಪುರುಷನ ಸುತನ ಸುತನ ಸ । ಹೋದರನ ಮೊಮ್ಮಗನ ಮಗನ ತ । ಲೋದರಿಯ ಮಾತುಲನ ನಾವನ ಸಮರಭೂಮಿಯಲೀ ॥ ಕಾದಿ ಗೆಲದವನಣ್ಣನವ್ವೆಯ। ನಾದಿನಿಯ ಜಠರದಲಿ ಜನಿಸಿದ । ಆದಿಮೂರುತಿ ಸಲಹು ಗದುಗಿನ ವೀರನಾರಾಯಣ॥

*ಸರ್ಜಾಪುರದ ಸ್ಕೂಲ್ ಅ॥ ಮಾ॥ ರಾಮಸ್ವಾಮಯ್ಯಂಗಾರ್ಯರು ಕಳುಹಿಸಿದವುಗಳು.

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं वाग्भूषणम् भूषणम् ॥

(भर्तृहरिः)

ಸಂಪುಟ ೧೬.	ಅಗಷ್ಟ ೧೯೧೧.	ಸಂಚಿಕೆ ೧.

ವಾಗ್ಭೂಷಣದ ವರ್ಷಾರಂಭವು.

ಈಶಕೃಪೆಯಿಂದ ವಾಗ್ಭೂಷಣಕ್ಕೆ ೧೫ ವರ್ಷಗಳು ತುಂಬಿ ಈ ಸಂಚಿಕೆಯಿಂದ ಅದರ ೧೬ನೇ ವರ್ಷವು ಪ್ರಾರಂಭವಾಯಿತು. ಮುಂಬೈ ಕರ್ನಾಟಕದಲ್ಲಿ ಕನ್ನಡ ಭಾಷಾಶೇವೆಯನ್ನು ಕಳೆದ ೧೫ ವರ್ಷಗಳಿಂದ ಮಾಡುತ್ತಿರುವ ತಿಳಿಗನ್ನಡ ಮಾಸ ಪತ್ರಿಕೆಯು ಇದೊಂದೇ ಎಂದು ಧಾರಾಳವಾಗಿ ಹೇಳಬಹುದು. ಕನ್ನಡ ಭಾಷೆಯಲ್ಲಿ ಪ್ರಾಚೀನ ಕವೀಶ್ವರರ ಅತ್ಯುತ್ತಮವಾದ ಕಾವ್ಯ, ನಾಟಕ, ಚಂಪೂ, ಅಲಂಕಾರ, ಛಂದಸ್ಸು ಇವೇ ಮೊದಲಾದ ಅನೇಕ ಉದ್ಗ್ರಂಥಗಳು ಬೇಕಾದಷ್ಟು ವಿಪುಲವಾಗಿದ್ದಾಗ್ಯೂ ನಮ್ಮ ದೇಶದ ಸದ್ಯದ ಪರಿಸ್ಥಿತಿಗೆ ಅನುರೂಪವಾದ ಐತಿಹಾಸಿಕ, ಸಾಮಾಜಿಕ, ನೈತಿಕ ವಿದ್ಯಾವಿಷಯಕ ಹಾಗು ಶಾಸ್ತ್ರೀಯ ಗ್ರಂಥಗಳ ಅಕ್ಷಮ್ಯವಾದ ಅಭಾವವು ಈ ಭಾಷೆಯಲ್ಲಿ ಹೇಳಿಕೂಡದಷ್ಟು ಇದ್ದದ್ದನ್ನು ಕಂಡು, ಆ ಕೊರತೆಯನ್ನು ಸಾಧ್ಯವಿದ್ದಮಟ್ಟಿಗೆ ದೂರಮಾಡಬೇಕೆಂಬ ಉದ್ದೇಶದಿಂದ ಕರ್ನಾಟಕ ವಿದ್ಯಾವರ್ಧಕ ಸಂಘದವರು ಮೇಲೆ ಕಾಣಿಸಿದ ವಿಷಯದ ಸಂಬಂಧದಿಂದ ಇಂಗ್ಲೀಷು ಇಲ್ಲವೆ ಇತರ ದೇಶಭಾಷೆಗಳಲ್ಲಿರುವ ಗ್ರಂಥಗಳ ಸಹಾಯದಿಂದಾಗಲಿ ಆ ತರದ ಗ್ರಂಥಗಳ ಭಾಷಾಂತರ ಮಾಡಿಯಾಗಲಿ ಕನ್ನಡ ಭಾಷೆಯಲ್ಲಿ ಆ ತರದ ಗ್ರಂಥಗಳನ್ನು ಬಹುಮಾನಕೊಟ್ಟು ಬರೆಯಿಸಿ ವಾಗ್ಭೂಷಣವೆಂಬ ತಮ್ಮ ಮಾಸ ಪುಸ್ತಕದಲ್ಲಿ ಪುಸ್ತಕಗಳ ರೂಪದಿಂದ ಪ್ರಕಟಿಸಲು ಯತ್ನಿಸಹತ್ತಿದರು. ಕಳೆದ ಹದಿನಾಲ್ಕು ವರ್ಷಗಳ ವರೆಗೆ ವಿದ್ಯಾವರ್ಧಕ ಸಂಘದ ಈ ಪ್ರಯತ್ನದಿಂದ ಸುಮಾ

ರು ೫೦ ಕ್ಕಿಂತ ಹೆಚು ಗ್ರಂಥಗಳು ಕನ್ನಡ ಭಾಷೆಯ ಪುಸ್ತಕ ಭಾಂಡಾರಕ್ಕೆ ಜೋಡಿಸಲ್ಪಟ್ಟಿವು.

ಈ ಮಾಸಪತ್ರಿಕೆಯಲ್ಲಿ ೩-೪ ಗ್ರಂಥಗಳನ್ನು ಒಮ್ಮೆಲೆ ಪ್ರಾರಂಭಿಸಿ, ಕ್ರಮವಾಗಿ ಸ್ವಲ್ಪ ಸ್ವಲ್ಪಭಾಗವನ್ನು ಮುದ್ರಿಸಿ, ಹಲವು ವರ್ಷಗಳ ಮೇಲೆ ಎಲ್ಲ ಗ್ರಂಥಗಳನ್ನು ಮುಗಿಸುವ ಉದ್ದೇಶವು ಸ್ತುತ್ಯವಿದ್ದರೂ ಆ ಪದ್ಧತಿಯಿಂದ ವಾಚಕ ವರ್ಗದ ತೃಪ್ತಿಯಾಗಲಿಲ್ಲವೆಂಬದಕ್ಕೆ ಈ ಮಾಸಪತ್ರಿಕೆಯ ಂಚದಾದಾರರ ಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತ ಕಡೆಗೆ ೧೫೦ಕ್ಕೆ ಬಂದದ್ದೇ ನಿದರ್ಶನವು. ಹೋದ ವರ್ಷ ವಾಗ್ಭೂಷಣದ ಖಾತೆಗೆ ಆದಾಯಕ್ಕಿಂತ ವ್ಯಯವು ಹೆಚ್ಚಾದದ್ದು ಮ್ಯಾನೇಜಿಂಗ್ ಕಮಿಟಿಯ ಮುಂದೆ ವಿಚಾರಣೆಗಾಗಿ ಬಂದದರಿಂದ ಕೆಲವು ಸಭಾಸದರ ಮತದಂತೆ ಈ ವಾಗ್ಭೂಷಣದಲ್ಲಿ ಹಲವು ಮಹತ್ವವುಳ್ಳ ಸುಧಾರಣೆಗಳನ್ನು ಮಾಡುವದು ಅವಶ್ಯವಿದ್ದಂತೆ ತೋರಿದ್ದರಿಂದ ಕಮಿಟಿಯವರು ಈ ಮಾಸಪತ್ರಿಕೆಯ ಪುಟಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದೂ, ಅವುಗಳಲ್ಲಿ ಕೆಲವು ಪುಟಗಳನ್ನು ಗ್ರಂಥಗಳ ಸಲುವಾಗಿ ಕಾದಿಟ್ಟು, ಉಳಿದ ದೊಡ್ಡ ಭಾಗವನ್ನು ಐತಿಹಾಸಿಕ, ಶಾಸ್ತ್ರೀಯ, ವಿನೋದ ಮೊದಲಾದ ಪ್ರಚಲಿತ ವಿಷಯಗಳಿಗೆ ಉಪಯೋಗಿಸಿಕೊಳ್ಳಿಬೇಕೆಂದೂ, ಗೊತ್ತುಪಡಿಸಿದರು. ಈ ರೀತಿಯಿಂದ ಅವಶ್ಯವಾದ ಸುಧಾರಣೆಗಳನ್ನು ಮಾಡಲು ಚಂದಾದಾರರ ಸಂಖ್ಯೆಯು ೧೫೦ ರಿಂದ ೫೫೦ರ ವರೆಗೆ ಏರಿತು. ಅವರಿಂದ ಬಂದ ಚಂದಾ ಹಣದಿಂದ ಪತ್ರಿಕೆಯನ್ನು ಮುದ್ರಿಸುವ ಖರ್ಚು ಹಾಗು ಲೇಖಕರಿಗೆ ಕಿಂಚಿತ್ ಬಹುಮಾನವನ್ನು ಕೊಡುವದು ಮಾತ್ರ ಆಯಿತು. ಇದಕ್ಕೂ ಹೆಚ್ಚಿನ ಸುಧಾರಣೆಯನ್ನು ಮಾಡುವದಕ್ಕೆ ದ್ರವ್ಯಾನುಕೂಲತೆಯು ಆಗಲಿಲ್ಲ. ಲೇಖಕರು ತಮ್ಮ ಅಮೌಲ್ಯವಾದ ವೇಳೆಯನ್ನು ವೆಚ್ಚಮಾಡಿ ಶ್ರಮಬಟ್ಟು ಬರೆದ ಲೇಖಗಳಿಗೆ ಯೋಗ್ಯವಾದ ಬಹುಮಾನವು ದೊರೆಯಲಿಲ್ಲೆಂದು ನಾವು ಒಪ್ಪಿಕೊಳ್ಳಬೇಕು.

ವಾಗ್ಭೂಷಣದ ಅಂತಿಮ ಉದ್ದೇಶವು ಮುಂಬಯಿ ಕರ್ನಾಟಕದ ಗ್ರಂಥಸ್ಥ ಭಾಷೆಯು ಮೈಸೂರು ಸೀಮೆಯ ಗ್ರಂಥಸ್ಥ ಕನ್ನಡ ಭಾಷೆಯು ಯಥಾಶಕ್ತಿ ಒಂಡೇ ಆಗುವಂತೆ ಮಾಡಬೇಕೆಂಬದು. ಇದು ಕಷ್ಟಸಾಧ್ಯವಿದ್ದಾಗ್ಯೂ ಈ ಮಾಸಪತ್ರಿಕೆಯ ದ್ವಾರದಿಂದ ಈ ನಮ್ಮ ಕರ್ಣಾಟಕದಲ್ಲಿರುವ ಹಾಗು ಮೈಸೂರು ಸೀಮೆಯ ವಿದ್ವಾಂಸರ ಲೇಖಗಳು ಪ್ರಕಟಿಸಲ್ಪಟ್ಟವೆ. ಕಾಲಾಂತರದಲ್ಲಿ ಮುಂಬಯಿ ಕರ್ಣಾಟಕದ ಕನ್ನಡ ಭಾಷೆ ಹಾಗು ಮೈಸೂರ ಕನ್ನಡ ಭಾಷೆಯು ಒಂದರಗೂಡೊಂದು ಬೆರೆತುಕೊಳ್ಳಬಹುದೆಂಬ ಬಗ್ಗೆ ತುಂಬಾ ನಂಬಿಗೆಯಿದೆ. ಈ ಸ್ತುತ್ಯವಾದ ಕೆಲಸವನ್ನು ನೆರವೇರಿಸುವದಕ್ಕೆ ಕನ್ನಡ ಭಾಷೆಯು ಮಾತೃಭೂಮಿಯಾದ ಮೈಸೂ

ರು ಸೀಮೆಯ ವಿದ್ವಾಂಸರು ನಮಗೆ ಬೇಕಾದ ಸಹಾಯವನ್ನು ತಪ್ಪದೆ ಮಾಡುವ ರೆಂದು ತುಂಬಾ ನಂಬಿದ್ದೇನೆ.

ಕಳೆದ ವರ್ಷದ ಹನ್ನೆರಡು ಸಂಚಿಕೆಗಳಲ್ಲಿ ಗಣಿತ, ಜ್ಯೋತಿಷ, ಇತಿಹಾಸ, ಭೌತಿಕಶಾಸ್ತ್ರ, ಕಾದಂಬರಿ, ಮೊದಲಾದ ವಿಷಯಗಳ ಮೇಲೆ ಲೇಖಗಳನ್ನು ಬಹುಶ: ಧಾರವಾಡ ಟ್ರೇನಿಂಗ ಕಾಲೇಜಿನ ಶಿಕ್ಷಕವರ್ಗದವರೇ ಪ್ರಾಮುಖ್ಯವಾಗಿ ಕಳುಹಿಸಿದರೆನ್ನುವದಕ್ಕೆ ಅಡ್ಡಿ ಇಲ್ಲ. ಇವರಲ್ಲದೆ ಹೊರಗಿನ ೩-೪ ಸಭ್ಯಗೃಹಸ್ಥರು ಹಲವು ಲೇಖಗಳನ್ನು ಕಳುಹಿದರು. ಆದರೆ ಮೈಸೂರು ಸೀಮೆಯಿಂದ ಒಂದು ಲೇಖವಾದರೂ ಬಾರದಿದ್ದದ್ದು ಸಖೇದಾಶ್ಚರ್ಯದ ಸಂಗತಿಯು. ಇದಕ್ಕಾಗಿ ನಾವು ನಮ್ಮ ಮೈಸೂರು ಬಾಂಧವರಿಗೆ ಯಾವ ರೀತಿಯಿಂದಲೂ ದೋಷಕೊಡುವದಿಲ್ಲ. ಭಾಷಾಸೇವೆಯನ್ನು ಯಥಾಯೋಗ್ಯವಾಗಿ ಮಾಡುವದು ಪ್ರತಿಯೊಬ್ಬ ಸುಶಿಕ್ಷಿತನ ಆದ್ಯ ಕರ್ತವ್ಯವಾದದರಿಂದ ಈ ವರ್ಷದಲ್ಲಾದರೂ ಮೈಸೂರು ಸೀಮೆಯ ಲೇಖಕರು ತಮ್ಮ ಲೇಖಗಳನ್ನು ಕಳುಹುವರೆಂದು ಆಶಿಸುತ್ತೇವೆ.

ವಾರ್ಷಿಕಶುಲ್ಕದಲ್ಲಿ ಇನ್ನೂ ಹೆಚ್ಚಿನ ಸುಧಾರಣೆಗಳಾಗಬೇಕೆಂದೂ ಹಲವು ಚಿತ್ರಗಳನ್ನು ಕೊಡಬೇಕೆಂದೂ ನಮ್ಮ ಮಿತ್ರಮಂಡಲದಲ್ಲಿ ಹಲವರು ಸೂಚಿಸುವರು. ಈ ಎಲ್ಲ ಸುಧಾರಣೆಗೆ ಹಣದ ಅನುಕೂಲತೆಯೇ ಮುಖ್ಯಾಧಾರವಾದದರಿಂದ ಆ ಅನುಕೂಲತೆಯು ಹೆಚ್ಚಾದಂತೆ ಹೆಚ್ಚು ಸುಧಾರಣೆಯನ್ನು ಮಾಡಲು ನಮ್ಮ ಒಪ್ಪಿಗೆಯುಂಟು. ಸನ್ಮಾನನೀಯರಾದ ನಮ್ಮ ಚಂದಾದಾರರು ವಾರ್ಷಿಕಶುಲ್ಕದಲ್ಲಿ ತಮಗೆ ಕಂಡುಬರುವ ನ್ಯೂನತೆಗಳನ್ನು ನಮಗೆ ಕಾಲಕಾಲಕ್ಕೆ ತಿಳಿಸಿ ಅವುಗಳನ್ನು ತೆಗೆದು ಹಾಕುವ ಉಪಾಯಗಳನ್ನು ಸೂಚಿಸಿದರೆ ಅವರಿಗೆ ನಾವು ತುಂಬಾ ಕೃತಜ್ಞರಾಗುವೆವು. ಹಾಗು ಚಂದಾದಾರರು ಭಾಷಾಸೇವೆಯ ಮಹತ್ವವನ್ನು ತಮ್ಮ ಮಿತ್ರಮಂಡಲಕ್ಕೆ ಅರುಹಿ ದ್ರವ್ಯದ್ವಾರದಿಂದ ಈ ಪತ್ರಿಕೆಗೆ ತಕ್ಕ ಸಹಾಯ ಮಾಡುವಂತೆ ಅವರ ಮನವೊಲಿಸಿ ನಮಗೆ ಬೇಕಾದ ದ್ರವ್ಯಸಹಾಯವನ್ನು ಒದಗಿಸಿಕೊಟ್ಟರೆ ವಾರ್ಷಿಕಶುಲ್ಕದ ಚಂದಾ ಹಣವನ್ನು ಅಂಚೆಯ ವೆಚ್ಚ ಸೇರಿ ಬರಿ ಒಂದೂವರೆ ರೂಪಾಯಿ ಮಾಡಬೇಕೆಂದು ನಮ್ಮ ಇಚ್ಛೆಯಿದೆ. ವಾರ್ಷಿಕಶುಲ್ಕದಿಂದ ಯಾವತರದ ದ್ರವ್ಯ ಲಾಭವನ್ನು ಮಾಡಿಕೊಳ್ಳುವ ಇಚ್ಛೆಯು ಸಂಘದ ಸಭಾಸದರಿಗೆ ಎಷ್ಟುಮಾತ್ರವೂ ಇರುವದಿಲ್ಲ.

ಈ ವರ್ಷದ ಅತಿ ಮಹತ್ವದ ಸಂಗತಿಯೆಂದರೆ ಆನರೆಬಲ್ ಶ್ರಾರ್ಪ ಡಾಯರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಮುಂಬಯಿ ಇಲಾಖೆ, ಇವರಿಂದ ವಾರ್ಷಿಕಶುಲ್ಕಕ್ಕೆ ದೊರೆತ ಆಶ್ರಯವು. ಕನ್ನಡ ಶಾಲೆಯ ಮಾಸ್ತರರು ಓದತಕ್ಕ ವಿಷಯಗಳು ಈ ಮಾಸಪತ್ರಿಕೆಯಲ್ಲಿ ಬರುತ್ತವೆಂದೂ ಅರಾಜಕ ವಿಷಯಗಳಿಗೆ ಇದರಲ್ಲಿ ಆಸ್ಪದ

ವಿಲ್ಲದ್ದರಿಂದ ತಿಳುವಳಿಕೆಯುಳ್ಳ ಹುಡುಗರ ಕೈಯಲ್ಲಿ ಬೀಳಲಿಕ್ಕೆ ಇದು ಯೋಗ್ಯ ವಿರುವದೆಂದೂ ಸರಕಾರದ ಅಭಿಪ್ರಾಯವಾದದ್ದು ವಾಗ್ಭೂಷಣಕ್ಕೆ ಭೂಷಣವೇ ಸರಿ. ಮೆಹರ್ಬಾನ ಡೈರೇಕ್ಟರ ಸಾಹೇಬರವರ ಆಶ್ರಯವನ್ನು ದೊರಕಿಸುವ ವಿಷಯದಲ್ಲಿ ಮೆಹರ್ಬಾನ ಎಜ್ಯುಕೇಶನಲ್ ಇನಸ್ಪೆಕ್ಟರರು ಹಾಗೂ ಅವರ ಡಿಪೂಟಿ ಇನಸ್ಪೆಕ್ಟರರು ಮಾಡಿದ ಸಹಾಯಕ್ಕಾಗಿ ಅವರ ಉಪಕಾರವನ್ನು ಮನ್ನಿಸುವೆವು.

ಕಳೆದ ವರ್ಷದಲ್ಲಿ ಲೇಖಗಳನ್ನು ಬರೆದು, ತಾವು ಚಂದಾದಾರರಾಗಿ ಇಲ್ಲವೆ ಹೆಚ್ಚಿಗೆ ಚಂದಾದಾರರನ್ನು ಕೂಡಿಸಿಕೊಟ್ಟು, ಕಾಲಕಾಲಕ್ಕೆ ನಮಗೆ ವಾಗ್ಭೂಷಣದ ಸುಧಾರಣೆಯ ಬಗ್ಗೆ ಯೋಗ್ಯವಾದ ಸೂಚನೆಗಳನ್ನು ಮಾಡಿ, ಇಲ್ಲವೆ ಬೇರೆ ರೀತಿಯಿಂದ ಸಹಾಯಮಾಡಿದ ನಮ್ಮ ಮಿತ್ರವೃಂದಕ್ಕೆ ನಾವು ಋಣಿಗಳಾಗಿರುವೆವು. ನಡೆಯುವ ವರ್ಷದಲ್ಲಾದರೂ ಈ ಸಭ್ಯಗೃಹಸ್ಥರಿಂದ ನಮಗೆ ತಕ್ಕ ಸಹಾಯವು ದೊರೆಯುವದೆಂದು ನಾವು ತುಂಬಾ ನಂಬಿದ್ದೇವೆ.

ಎಡಿಟರ್ಸ್.

ಪ್ರಾಥಮಿಕ ಶಾಲೆಗಳ ಸುಧಾರಣೆ.

ಮುಂಬಯಿ ಇಲಾಖೆಯ ಸದ್ಯದ ಗವರ್ನರರಾದ ಸರ ಜಾರ್ಜ ಕ್ಲಾರ್ಕ ದೊರೆಗಳ ಅಡಳಿತವು ಈ ಇಲಾಖೆಯ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುವದೆಂದು ಧಾರಾಳವಾಗಿ ಹೇಳಬಹುದು. ಇವರು ವಿಧಿಸುತ್ತಿರುವ ಬಹುಮುಖವಾದ ಸುಧಾರಣೆಗಳಲ್ಲಿ, ಎಲ್ಲ ತರಗತಿಗಳಿಗೆ ಸಂಬಂಧಿಸುವ ಶಿಕ್ಷಣ ವಿಷಯಕ ಸುಧಾರಣೆಯು ಪ್ರಜೆಗಳ ದೃಷ್ಟಿಯಿಂದ ಅತಿ ಮಹತ್ವವಾದದ್ದಿರುವದು. ಯಾಕೆಂದರೆ, ಬಹುಜನರಲ್ಲಿ ಶಿಕ್ಷಣಪ್ರಸಾರವಾಗುವದೇ ಜನಾಂಗದ ಪ್ರಗತಿಯ ನಿಜವಾದ ಕುರುಹು. ಮೇಲಾಗಿ, ಹಿಂದುಸ್ತಾನವು ಇಂಗ್ಲೀಷರ ಪ್ರಭುತ್ವಕ್ಕೆ ಒಳಗಾದಂದಿನಿಂದ ಹಿಂದೂ ಜನರಿಗೆ ದೊರೆತ ಲಾಭಗಳಲ್ಲಿ ಪಾಶ್ಚಾತ್ಯಕ್ರಮವನ್ನು ಅನುಸರಿಸಿ ಸರಕಾರದವರು ವಿಧಿಸಿರುವ ಶಿಕ್ಷಣವು ಮೇಲಾದದ್ದಿರುವದೆಂದು ಪ್ರತಿಯೊಬ್ಬ ಸುಶಿಕ್ಷಿತನು ಒಪ್ಪಿಕೊಳ್ಳುವನು. ಕ್ಲಾರ್ಕ ಪ್ರಭುಗಳು ವಿದ್ಯಾಪಕ್ಷಪಾತಿಗಳೂ ಪ್ರಜಾಹಿತನಿರತರೂ ಇರುವರು. ಈ ವಿಷಯವನ್ನು ಮನಮುಟ್ಟಿ ವಿಮರ್ಶಿಸಿ ತಕ್ಕ ಸುಧಾರಣೆಗಳನ್ನು ಕೈಕೊಂಡದ್ದರಿಂದ ಇವರಿಗೆ ನಾವು ಬಹಳ ಆಭಾರಿಯಾಗಿರುವೆವು. ಇನ್ನು, ಪ್ರಾಥಮಿಕ ಶಿಕ್ಷಣವು ಈ ಶತಮಾನದಲ್ಲಿ ಪ್ರತಿಷ್ಠೆಯನ್ನು ಪಡೆದಿರುವದಷ್ಟೇ. ಇವರು ಇತ್ತಲಾಗಿ ಈ ವಿಷಯವನ್ನು ಪರಿಶೀಲಿಸಿ, ಇದರಲ್ಲಿ ಅವಶ್ಯವಾದ ಯಾವ ಸುಧಾರಣೆಗಳನ್ನು ಮಾಡಬೇಕೆಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿ, ತಮ್ಮ

ಅಲೋಚನೆಗಳು ಜನರಿಗೆ—ಮುಖ್ಯವಾಗಿ ವಿದ್ಯಾಪ್ರಸರಣೆಯಲ್ಲಿ. ಪ್ರತ್ಯಕ್ಷವಾಗಿ ತೊಡಗಿದ ಅನುಭವಿಕರಿಗೆ—ಎಷ್ಟುಮಟ್ಟಿಗೆ ಗ್ರಾಹ್ಯವಿರುವವೆಂಬದನ್ನು ಅರಿತುಕೊಳ್ಳಬೇಕೆಂಬ ಉದ್ದೇಶದಿಂದ, ಇಲಾಖೆಯು ಬೇರೆ ಬೇರೆ ಭಾಗಗಳಲ್ಲಿ ಸಭೆಗಳನ್ನು ಸೇರಿಸಿ, ಸರಕಾರದ ಸದಿಚ್ಛೆಗೆ ಜನರ ಬೆಂಬಲವನ್ನು ಕೋರಿರುವರು. ತದನುಸಾರವಾಗಿ, ದಕ್ಷಿಣಭಾಗಕ್ಕೆ ಸೇರಿದ ಸಭೆಯು ಅಗಷ್ಟ ತಿಂಗಳ ೨೩, ೨೪ನೆಯ ತಾರೀಖುಗಳ ದಿವಸ, ಈ ಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರಾದ ಮೆ॥ ರಾ. ಬಾ. ಕರಂದೀಕರ ಬಿ. ಎ ಇವರ ಅಧ್ಯಕ್ಷತೆಯಲ್ಲಿ, ಧಾರವಾಡ ಟ್ರೇನಿಂಗ್ ಕಾಲೇಜದ ಮಂದಿರದಲ್ಲಿ ನೆರೆದಿತ್ತು. ಸಭೆಯಲ್ಲಿ ಧಾರವಾಡ ಪಟ್ಟಣದ ಎಲ್ಲ ಶಿಕ್ಷಣಾಲಯಗಳಿಗೆ ಮುಖ್ಯಾಧಿಕಾರಸ್ಥರು ಇದ್ದರು. ಧಾರವಾಡ, ಬೆಳಗಾವ, ಬಿಜಾಪೂರ ಜಿಲ್ಹೆಗಳ ಡೆಪ್ಯೂಟಿ ಇನ್ಸಪೆಕ್ಟರರೂ ಅವರ ಅನುಭವಿಕರಾದ ಅಸಿಸ್ಟಂಟರೂ ಬಂದಿದ್ದರು. ಸರಕಾರದ ಅಧಿಕಾರಸ್ಥರಲ್ಲದಿದ್ದರೂ ವಿದ್ಯಾಭಿವೃದ್ಧಿಯಲ್ಲಿಯೇ ನಿರತರಾಗಿ ಈ ಪ್ರಾಂತದ ಇತಿಹಾಸದಲ್ಲಿ ಹೆಸರಾಗಿರುವ ಅನರೇಬಲ್ ರಾವಬಹಾದುರ ರೊದ್ದ, ಹಾಗೂ ನಾಲ್ಕು ಜಿಲ್ಹೆಗಳ ಮುನ್ಸಿಪಾಲಿಟಿ, ಲೋಕಲ್‌ಬೋರ್ಡುಗಳಲ್ಲಿ ಶಿಕ್ಷಣದ ಕೆಲಸದಲ್ಲಿ ತೊಡಗಿರುವ ಸದ್ಗೃಹಸ್ಥರೂ, ಅನುಭವಿಕರಾದ ಶಾಲಾಧ್ಯಾಪಕರೂ, ಇನ್ಸಪೆಕ್ಟರರವರ ಆಮಂತ್ರಣವನ್ನು ಸ್ವೀಕರಿಸಿ ಸಭೆಗೆ ಬಂದಿದ್ದರು. ಯುರೋಪೀಯರಲ್ಲಿ ಧಾರವಾಡದ ಟಾನರ ದೊರೆಗಳೂ, ಗದಗಿನ ಅರ್ನಸ್ಟರೂ ಇದ್ದರು. ಒಟ್ಟಿಗೆ, ದೂರದೂರದಿಂದ ಶ್ರಮವನ್ನು ಲಕ್ಷಿಸದೆ ಬಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಈ ಸಭಾಸದರ ಉತ್ಸಾಹವು ಅಭಿನಂದನೀಯವಾದದ್ದಿರುವದು. ಇನ್ನು ಸರಕಾರದವರು ಪ್ರಕಟಿಸಿದ ಸುಧಾರಣೆಗಳನ್ನೂ, ಆ ಬಗ್ಗೆ ಈ ಸಭೆಯವರು ವಿವಾದಾಂತರದಲ್ಲಿ ಏರ್ಪಡಿಸಿದ ತಮ್ಮ ಠರಾವುಗಳನ್ನೂ ಇಲ್ಲಿ ಕೊಡುವೆವು.

ಸುಮಾರು ೧೫ ವರ್ಷಗಳ ಪೂರ್ವದಲ್ಲಿ ಸದ್ಯದಲ್ಲಿರುವ ರೂರಲ್ (ಹಳ್ಳಿಯ) ಶಾಲೆಗಳ ಅಭ್ಯಾಸಕ್ರಮವನ್ನು ಸರಕಾರದವರು ಜನಮತವನ್ನನುಸರಿಸಿ ಏರ್ಪಡಿಸಿದ್ದರು. ಆದರೆ ಆ ಅಭ್ಯಾಸಕ್ರಮದಿಂದ ಆಗತಕ್ಕ ಪರಿಣಾಮಗಳು ಆಗಲಿಲ್ಲ. ಆದ್ದರಿಂದ ಅವುಗಳಲ್ಲಿರುವ ದೋಷಗಳನ್ನು ದೂರಮಾಡಿ, ಒಕ್ಕಲಿಗರ ಹುಡುಗರಿಗೆ ನಿಜವಾದ ಓದುಬರಹಗಣಿತಗಳ ಜ್ಞಾನವು ತಕ್ಕಮಟ್ಟಿಗಾದರೂ ಆಗುವಂತೆ ಅಭ್ಯಾಸಕ್ರಮವನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿ, ಸದ್ಯದ ಗವರ್ನರ ದೊರೆಗಳು ಸುಮಾರು ಎರಡು ವರುಷಗಳ ಹಿಂದೆ ಶಿಕ್ಷಣಖಾತೆಯ ಡಿರೆಕ್ಟರ ಸಾಹೇಬರವರಿಗೆ ಈ ಬಗ್ಗೆ ರಿಪೋರ್ಟು ಮಾಡಲಿಕ್ಕೆ ಆಜ್ಞಾಪಿಸಿದರು. ಹಾಗು ಅವರ ರಿಪೋರ್ಟನ್ನು ಅಭಿಪ್ರಾಯಾರ್ಥವಾಗಿ ಇಲಾಖೆಯ ಕಮಿಶನರರ ಕಡೆಗೂ, ಅವರ ಮುಖಾಂತರವಾಗಿ ಕಲೆಕ್ಟರರ ಕಡೆಗೂ ಕಳುಹಿಸಿ, ಅವರಿಂದ ಬರೆದು ಬಂದ ಸಂಗತಿಗಳನ್ನೆಲ್ಲ

ವಿಲ್ಲದ್ದರಿಂದ ತಿಳುವಳಿಕೆಯುಳ್ಳ ಹುಡುಗರ ಕೈಯಲ್ಲಿ ಬೀಳಲಿಕ್ಕೆ ಇದು ಯೋಗ್ಯ ವಿರುವದೆಂದೂ ಸರಕಾರದ ಅಭಿಪ್ರಾಯವಾದದ್ದು ವಾಗ್ಭೂಷಣಕ್ಕೆ ಭೂಷಣವೇ ಸರಿ. ಮೆಹರ್ಬಾನ ಡೈರೇಕ್ಟರ ಸಾಹೇಬರವರ ಆಶ್ರಯವನ್ನು ದೊರಕಿಸುವ ವಿಷಯದಲ್ಲಿ ಮೆಹರ್ಬಾನ ಎಜ್ಯುಕೇಶನಲ್ ಇನಸ್ಪೆಕ್ಟರರು ಹಾಗೂ ಅವರ ಡಿಪೂಟಿ ಇನಸ್ಪೆಕ್ಟರರು ಮಾಡಿದ ಸಹಾಯಕ್ಕಾಗಿ ಅವರ ಉಪಕಾರವನ್ನು ಮನ್ನಿಸುವೆವು.

ಕಳೆದ ವರ್ಷದಲ್ಲಿ ಲೇಖಗಳನ್ನು ಬರೆದು, ತಾವು ಚಂದಾದಾರರಾಗಿ ಇಲ್ಲವೆ ಹೆಚ್ಚಿಗೆ ಚಂದಾದಾರರನ್ನು ಕೂಡಿಸಿಕೊಟ್ಟು, ಕಾಲಕಾಲಕ್ಕೆ ನಮಗೆ ವಾಗ್ಭೂಷಣದ ಸುಧಾರಣೆಯ ಬಗ್ಗೆ ಯೋಗ್ಯವಾದ ಸೂಚನೆಗಳನ್ನು ಮಾಡಿ, ಇಲ್ಲವೆ ಬೇರೆ ರೀತಿಯಿಂದ ಸಹಾಯಮಾಡಿದ ನಮ್ಮ ಮಿತ್ರವೃಂದಕ್ಕೆ ನಾವು ಋಣಿಗಳಾಗಿರುವೆವು. ನಡೆಯುವ ವರ್ಷದಲ್ಲಾದರೂ ಈ ಸಭ್ಯಗ್ಗಹಸ್ಥರಿಂದ ನಮಗೆ ತಕ್ಕ ಸಹಾಯವು ದೊರೆಯುವದೆಂದು ನಾವು ತುಂಬಾ ನಂಬಿದ್ದೇವೆ.

ಎಡಿಟರ್ಸ್.

ಪ್ರಾಥಮಿಕ ಶಾಲೆಗಳ ಸುಧಾರಣೆ.

ಮುಂಬಯಿ ಇಲಾಖೆಯ ಸದ್ಯದ ಗವರ್ನರರಾದ ಸರ ಜಾರ್ಜ ಕ್ಲಾರ್ಕ ದೊರೆಗಳ ಅಡಳಿತವು ಈ ಇಲಾಖೆಯ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುವದೆಂದು ಧಾರಾಳವಾಗಿ ಹೇಳಬಹುದು. ಇವರು ಏರ್ಪಡಿಸುತ್ತಿರುವ ಬಹುಮುಖವಾದ ಸುಧಾರಣೆಗಳಲ್ಲಿ, ಎಲ್ಲ ತರಗತಿಗಳಿಗೆ ಸಂಬಂಧಿಸುವ ಶಿಕ್ಷಣ ವಿಷಯಕ ಸುಧಾರಣೆಯು ಪ್ರಜೆಗಳ ದೃಷ್ಟಿಯಿಂದ ಅತಿ ಮಹತ್ವವಾದದ್ದಿರುವದು. ಯಾಕೆಂದರೆ, ಬಹು ಜನರಲ್ಲಿ ಶಿಕ್ಷಣಪ್ರಸಾರವಾಗುವದೇ ಜನಾಂಗದ ಪ್ರಗತಿಯ ನಿಜವಾದ ಕುರುಹು. ಮೇಲಾಗಿ, ಹಿಂದುಸ್ತಾನವು ಇಂಗ್ಲೀಷರ ಪ್ರಭುತ್ವಕ್ಕೆ ಒಳಗಾದಂದಿನಿಂದ ಹಿಂದೂ ಜನರಿಗೆ ದೊರೆತ ಲಾಭಗಳಲ್ಲಿ ಪಾಶ್ಚಾತ್ಯಕ್ರಮವನ್ನು ಅನುಸರಿಸಿ ಸರಕಾರದವರು ಏರ್ಪಡಿಸಿರುವ ಶಿಕ್ಷಣವು ಮೇಲಾದದ್ದಿರುವದೆಂದು ಪ್ರತಿಯೊಬ್ಬ ಸುಶಿಕ್ಷಿತನು ಒಪ್ಪಿಕೊಳ್ಳುವನು. ಕ್ಲಾರ್ಕ ಪ್ರಭುಗಳು ವಿದ್ಯಾಪಕ್ಷಪಾತಿಗಳೂ ಪ್ರಜಾಹಿತನಿರತರೂ ಇರುವರು. ಈ ವಿಷಯವನ್ನು ಮನಮುಟ್ಟಿ ವಿಮರ್ಶಿಸಿ ತಕ್ಕ ಸುಧಾರಣೆಗಳನ್ನು ಕೈಕೊಂಡದ್ದರಿಂದ ಇವರಿಗೆ ನಾವು ಬಹಳ ಆಭಾರಿಯಾಗಿರುವೆವು. ಇನ್ನು, ಪ್ರಾಥಮಿಕ ಶಿಕ್ಷಣವು ಈ ಶತಮಾನದಲ್ಲಿ ಪ್ರತಿಷ್ಠೆಯನ್ನು ಪಡೆದಿರುವದಷ್ಟೇ. ಇವರು ಇತ್ತಲಾಗಿ ಈ ವಿಷಯವನ್ನು ಪರಿಶೀಲಿಸಿ, ಇದರಲ್ಲಿ ಅವಶ್ಯವಾದ ಯಾವ ಸುಧಾರಣೆಗಳನ್ನು ಮಾಡಬೇಕೆಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿ, ತಮ್ಮ

ಆಲೋಚನೆಗಳು ಜನರಿಗೆ—ಮುಖ್ಯವಾಗಿ ವಿದ್ಯಾಪ್ರಸರಣೆಯಲ್ಲಿ. ಪ್ರತ್ಯಕ್ಷವಾಗಿ ತೊಡಗಿದ ಅನುಭವಿಕರಿಗೆ—ಎಷ್ಟು ಮಟ್ಟಿಗೆ ಗ್ರಾಹ್ಯವಿರುವವೆಂಬದನ್ನು ಅರಿತುಕೊಳ್ಳಬೇಕೆಂಬ ಉದ್ದೇಶದಿಂದ, ಇಲಾಖೆಯ ಬೇರೆ ಬೇರೆ ಭಾಗಗಳಲ್ಲಿ ಸಭೆಗಳನ್ನು ನೆರಿಸಿ, ಸರಕಾರದ ಸದಿಚ್ಛೆಗೆ ಜನರ ಬೆಂಬಲವನ್ನು ಕೋರಿರುವರು. ತದನುಸಾರವಾಗಿ, ದಕ್ಷಿಣಭಾಗಕ್ಕೆ ಸೇರಿದ ಸಭೆಯು ಅಗಷ್ಟ ತಿಂಗಳ ೨೩, ೨೪ನೆಯ ತಾರೀಖುಗಳ ದಿವಸ, ಈ ಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರಾದ ಮೆ॥ ರಾ. ಬಾ. ಕರಂದೀಕರ ಬಿ. ಎ ಇವರ ಅಧ್ಯಕ್ಷತೆಯಲ್ಲಿ, ಧಾರವಾಡ ಟ್ರೇನಿಂಗ ಕಾಲೇಜದ ಮಂದಿರದಲ್ಲಿ ನೆರೆದಿತ್ತು. ಸಭೆಯಲ್ಲಿ ಧಾರವಾಡ ಪಟ್ಟಣದ ಎಲ್ಲ ಶಿಕ್ಷಣಾಲಯಗಳ ಮುಖ್ಯಾಧಿಕಾರಸ್ಥರು ಇದ್ದರು. ಧಾರವಾಡ, ಬೆಳಗಾವ, ಬಿಜಾಪೂರ ಜಿಲ್ಹೆಗಳ ಡೆಪ್ಯೂಟಿ ಇನ್ಸಪೆಕ್ಟರರೂ ಅವರ ಅನುಭವಿಕರಾದ ಅಸಿಸ್ಟಂಟರೂ ಬಂದಿದ್ದರು. ಸರಕಾರದ ಅಧಿಕಾರಸ್ಥರಲ್ಲದಿದ್ದರೂ ವಿದ್ಯಾಭಿವೃದ್ಧಿಯಲ್ಲಿಯೇ ನಿರತರಾಗಿ ಈ ಪ್ರಾಂತದ ಇತಿಹಾಸದಲ್ಲಿ ಹೆಸರಾಗಿರುವ ಅನರೇಬಲ್ ರಾವಬಹಾದುರ ರೊದ್ದ, ಹಾಗೂ ನಾಲ್ಕು ಜಿಲ್ಹೆಗಳ ಮುನ್ಸಿವಾಲಿಟಿ, ಲೋಕಲ್‌ಬೋರ್ಡುಗಳಲ್ಲಿ ಶಿಕ್ಷಣದ ಕೆಲಸದಲ್ಲಿ ತೊಡಗಿರುವ ಸದ್ಗೃಹಸ್ಥರೂ, ಅನುಭವಿಕರಾದ ಶಾಲಾಧ್ಯಾಪಕರೂ, ಇನ್ಸಪೆಕ್ಟರರವರ ಆಮಂತ್ರಣವನ್ನು ಸ್ವೀಕರಿಸಿ ಸಭೆಗೆ ಬಂದಿದ್ದರು. ಯುರೋಪೀಯರಲ್ಲಿ ಧಾರವಾಡದ ಟಾನರ ದೊರೆಗಳೂ, ಗದಗಿನ ಅರ್ನಿಸ್ಟರೂ ಇದ್ದರು. ಒಟ್ಟಿಗೆ, ದೂರದೂರದಿಂದ ಶ್ರಮವನ್ನು ಲಕ್ಷಿಸದೆ ಬಂದು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ಈ ಸಭಾಸದರ ಉತ್ಸಾಹವು ಅಭಿನಂದನೀಯವಾದದ್ದಿರುವದು. ಇನ್ನು ಸರಕಾರದವರು ಪ್ರಕಟಿಸಿದ ಸುಧಾರಣೆಗಳನ್ನೂ, ಆ ಬಗ್ಗೆ ಈ ಸಭೆಯವರು ವಿವಾದಾಂತರದಲ್ಲಿ ಏರ್ಪಡಿಸಿದ ತಮ್ಮ ಠರಾವುಗಳನ್ನೂ ಇಲ್ಲಿ ಕೊಡುವೆವು.

ಸುಮಾರು ೧೫ ವರ್ಷಗಳ ಪೂರ್ವದಲ್ಲಿ ಸದ್ಯದಲ್ಲಿರುವ ರೂರಲ್ (ಹಳ್ಳಿಯ) ಶಾಲೆಗಳ ಅಭ್ಯಾಸಕ್ರಮವನ್ನು ಸರಕಾರದವರು ಜನಮತವನ್ನನುಸರಿಸಿ ಏರ್ಪಡಿಸಿದ್ದರು. ಆದರೆ ಆ ಅಭ್ಯಾಸಕ್ರಮದಿಂದ ಆಗತಕ್ಕ ಪರಿಣಾಮಗಳು ಆಗಲಿಲ್ಲ. ಅದ್ದರಿಂದ ಅವುಗಳಲ್ಲಿರುವ ದೋಷಗಳನ್ನು ದೂರಮಾಡಿ, ಒಕ್ಕಲಿಗರ ಹುಡುಗರಿಗೆ ನಿಜವಾದ ಓದುಬರಹಗಣಿತಗಳ ಜ್ಞಾನವು ತಕ್ಕಮಟ್ಟಿಗಾದರೂ ಆಗುವಂತೆ ಅಭ್ಯಾಸಕ್ರಮವನ್ನು ಏರ್ಪಡಿಸಬೇಕೆಂದು ನಿಶ್ಚಯಿಸಿ, ಸದ್ಯದ ಗವರ್ನರ ದೊರೆಗಳು ಸುಮಾರು ಎರಡು ವರುಷಗಳ ಹಿಂದೆ ಶಿಕ್ಷಣಖಾತೆಯ ಡಿರೆಕ್ಟರ ಸಾಹೇಬರವರಿಗೆ ಈ ಬಗ್ಗೆ ರಿಪೋರ್ಟು ಮಾಡಲಿಕ್ಕೆ ಆಜ್ಞಾಪಿಸಿದರು. ಹಾಗು ಅವರ ರಿಪೋರ್ಟನ್ನು ಅಭಿಪ್ರಾಯಾರ್ಥವಾಗಿ ಇಲಾಖೆಯ ಕಮಿಶನರರ ಕಡೆಗೂ, ಅವರ ಮುಖಾಂತರವಾಗಿ ಕಲೆಕ್ಟರರ ಕಡೆಗೂ ಕಳುಹಿಸಿ, ಅವರಿಂದ ಬರೆದು ಬಂದ ಸಂಗತಿಗಳನ್ನೆಲ್ಲ

ಪರ್ಯಾಲೋಚಿಸಿ, ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿ, ಜನರ ಮುಂದಿಟ್ಟು, ಅವರ ಅನುಮೋದನವನ್ನು ಪಡೆಯಲಿಚ್ಛಿಸಿದರು. ಇದರಿಂದ ಸರ ಕಾರದವರು ಪ್ರಕಟಿಸಿದ ಸೂಚನೆಗಳು ಅನುಭವದಿಂದಲೂ ವಿಚಾರದಿಂದಲೂ ತುಂಬಿರುವವೆಂಬದನ್ನು ಬಿಡಿಸಿ ಹೇಳಲವಶ್ಯವಿಲ್ಲ. ಸರಕಾರದವರ ಸೂಚನೆಗಳನ್ನು ಇಲ್ಲಿ ಸಂಕ್ಷಿಪ್ತದಲ್ಲಿ ಕೊಡುತ್ತೇವೆ.

ಸದ್ಯದಲ್ಲಿರುವ ಲೋಕಲ್‌ಬೋರ್ಡ ಪ್ರಾಥಮಿಕ ಶಾಲೆಗಳಲ್ಲಿ ಹಳ್ಳಿಯ ಶಾಲೆಗಳೆಂದೂ (Rural Schools), ಪೂರ್ಣಪ್ರಾಥಮಿಕ ಶಾಲೆಗಳೆಂದೂ (Full primary schools) ಎರಡು ವಿಭಾಗಗಳನ್ನು ಮಾಡಬೇಕು. ಹಳ್ಳಿಗಳ ಶಾಲೆಗಳಲ್ಲಿ ಕಲಿಯುವ ಹುಡುಗರು ಬಹಳವಾಗಿ ಒಕ್ಕಲಿಗರ ಹುಡುಗರೇ ಇರುವದರಿಂದಲೂ, ಅವರಿಗೆ ಬೇಕಾಗುವ ವಿದ್ಯೆಯು ತಕ್ಕಮಟ್ಟಿಗೆ ಓದುಬರಹಗಣಿತಗಳ ಜ್ಞಾನವಾದ್ದರಿಂದಲೂ, ಊರುಗಳಲ್ಲಿರುವ ಒಕ್ಕಲಿಗರಲ್ಲದವರ ಮಕ್ಕಳಿಗೆ ಅವಶ್ಯವಾದ ಜ್ಞಾನವು ಇದಕ್ಕಿಂತ ಹೆಚ್ಚಿನದಿರುವದರಿಂದಲೂ ಈ ವಿಭಾಗಗಳನ್ನು ಮಾಡುವದು ಅವಶ್ಯವಿದೆ. ದೊಡ್ಡ ಹಳ್ಳಿಗಳಲ್ಲಿಯೂ ಊರುಗಳಲ್ಲಿಯೂ ಪೂರ್ಣ ಪ್ರಾಥಮಿಕ ಶಾಲೆಗಳನ್ನಿಡಬಹುದು. ಯಾವ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳಿರಬೇಕೆಂಬದನ್ನೂ, ಎಲ್ಲಿ ಹಳ್ಳಿಯ ಶಾಲೆಗಳಿರಬೇಕೆಂಬದನ್ನೂ, ಡಿಸ್ಟ್ರಿಕ್ಟ ಅಧಿಕಾರಸ್ಥರ ಹಾಗೂ ಜನರ ಅಭಿಪ್ರಾಯಗಳನ್ನು ಪಡೆದು ಡಿರೆಕ್ಟರ ಸಾಹೇಬರು ನಿರ್ಣಯಿಸತಕ್ಕದ್ದು. ಸಣ್ಣ ಹಳ್ಳಿಗಳಲ್ಲಿ ಅಭ್ಯಾಸವನ್ನು ಮುಗಿಸಿದ ಹುಡುಗರು ಪೂರ್ಣ ಪ್ರಾಥಮಿಕ ಶಾಲೆಗಳಿಗೆ ಹೋಗಲಿಚ್ಛಿಸಿ ಬಡತನದ ಮೂಲಕ ವಿದ್ಯೆಕಲಿಯುವದನ್ನೇ ಬಿಡುವಂತಿದ್ದರೆ, ಸರಕಾರದವರು ಮುಖ್ಯವಾಗಿ ಒಕ್ಕಲಿಗರ ವರ್ಗಕ್ಕೆ ಸೇರಿದ ಇಂಥ ಹುಡುಗರಿಗೆ ಸ್ಕಾಲರಶಿಪ್ಪುಗಳನ್ನು ಕೊಡುವರು.

ಮುಖ್ಯವಾಗಿ ಸದ್ಯದ ಹಳ್ಳಿಗಳ ಶಾಲೆಗಳ ಅಭ್ಯಾಸಕ್ರಮವು ೬ ವರ್ಷಗಳವರೆಗೆ ನಡೆಯುವದರಿಂದಲೂ, ಇವುಗಳಲ್ಲಿ ಕಲಿಯುವ ಹುಡುಗರ ಅಗತ್ಯಕ್ಕಿಂತ ಹೆಚ್ಚು ವಿಷಯಗಳನ್ನು ಬಹಳಕಾಲದ ವರೆಗೆ ಇವುಗಳಲ್ಲಿ ಕಲಿಸುವದರಿಂದಲೂ, ಹುಡುಗರಿಗೆ ಓದುಬರಹಗಣಿತಗಳ ಜ್ಞಾನವು ಸಹ ತಕ್ಕಮಟ್ಟಿಗೆ ಆಗುವದಿಲ್ಲವೆಂದು ಕಂಡುಬಂದಿದೆ. ಆದ್ದರಿಂದ ಈ ಶಾಲೆಗಳ ಅಭ್ಯಾಸಕ್ರಮವು ನಾಲ್ಕು ವರ್ಷಗಳವರಿಗೆ ಮಾತ್ರ ನಡೆಯುವಂತೆಯೂ, ವಿಷಯಗಳು ಅತ್ಯವಶ್ಯವಾದವು ಮಾತ್ರ ಇರುವಂತೆಯೂ ಅಭ್ಯಾಸಕ್ರಮವನ್ನು ಏರ್ಪಡಿಸತಕ್ಕದ್ದು. ಎರಡೂ ಬಗೆಯ ಶಾಲೆಗಳ ಮೊದಲಿನ ನಾಲ್ಕು ವರ್ಷದ ಅಭ್ಯಾಸಕ್ರಮವು ಆದಮಟ್ಟಿಗೆ ಒಂದೇ ಆದರೆ, ಹಳ್ಳಿಯ ಶಾಲೆಯ ಶಿಕ್ಷಣವನ್ನು ಮುಗಿಸಿ, ಪೂರ್ಣ ಪ್ರಾಥಮಿಕ ಶಾಲೆಗಳಿಗೆ ಹೋಗಲೆಳಸುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವದು. ಪ್ರಾಥಮಿಕ ಶಾಲೆಗಳಲ್ಲಿ

ಕಲಿಸುವ ಇತಿಹಾಸ, ಭೂಗೋಲ ಮೊದಲಾದ ವಿಷಯಗಳ ಭಾಗಗಳನ್ನು ತಿದ್ದಬೇಕಾಗಿದೆ. ಗಾವಠೀ ಶಾಲೆಗಳಿಗೆ (Indigenous schools) ಉತ್ತೇಜನವನ್ನು ಕೊಡುವ ಉದ್ದೇಶವದೆ. ಆದರೆ ಊರವರು ಸ್ವಂತ ಪ್ರಯತ್ನದಿಂದ ವಿದ್ಯಾಪಕ್ಷಪಾತಿಗಳಾಗಿ ತಮ್ಮ ಹಳ್ಳಿಗಳಲ್ಲಿ ಏರ್ಪಡಿಸಿದ ಶಾಲೆಗಳು ಮಾತ್ರ ಈ ವರ್ಗದಲ್ಲಿ ಸೇರಿಸಲ್ಪಡುವವು. ಇವೆಲ್ಲ ಸೂಚನೆಗಳನ್ನು ಭಾಗದ ಸಭೆಗಳ ಮುಂದಿಟ್ಟು, ಆ ಸಭೆಗಳ ಅಭಿಪ್ರಾಯಗಳನ್ನು ಡಿರೆಕ್ಟರ ಸಾಹೇಬರು ತಮ್ಮ ಸೂಚನೆಗಳೊಡನೆ ಕಳಿಸಬೇಕೆಂದು ಸರಕಾರದವರು ಇದೇ ವರ್ಷದ ಜೂನ ತಿಂಗಳಲ್ಲಿ ಪ್ರಕಟಿಸಿದರು. ಇನ್ನು ದಕ್ಷಿಣಭಾಗದ ಸಭೆಯ ಅಭಿಪ್ರಾಯಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಡುತ್ತೇವೆ.

ಹಳ್ಳಿಯ ಶಾಲೆಗಳ ಹಡುಗರು ಬಹುಶ: ೭-೧೧ ವರ್ಷದವರಿರುವರೆಂದಿಟ್ಟುಕೊಂಡು ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾದ ರಾ. ರಾ. ವಿ. ಜಿ. ಜೋಶಿ, ಬಿ. ಎ. ಇವರು ಈ ನಾಲ್ಕು ವರ್ಷಗಳ ವಿಷಯಕ್ರಮವನ್ನು ಏರ್ಪಡಿಸಿ ಸಭಿಕರಿಗೆ ಹೇಳಿದರು. ಸದ್ಯದ ವಿಷಯಕ್ರಮದಲ್ಲಿರುವ ಕಿಂಡರಗಾರ್ಟನ್, ವಸ್ತುಪಾಠ, ಡ್ರಾಯಿಂಗ, ಡ್ರಿಲ್, ತಾಲೀಮುಗಳನ್ನೂ, ಇಂಗ್ಲೀಷ ಭಾರ ಅಳತೆಗಳ ಕೊಷ್ಟಕಗಳನ್ನೂ, ಅಪೂರ್ಣಾಂಕ, ಪಂಚರಾಶಿಕಗಳನ್ನೂ ೩ನೇ ೪ನೇ ಕ್ರಮಿಕ ಪುಸ್ತಕಗಳಲ್ಲಿರುವ ಶಾಸ್ತ್ರೀಯ ಪಾಠಗಳನ್ನೂ ಬಿಟ್ಟು, ಕೃಷಿಯ ಕೆಲವು ಪಾಠಗಳನ್ನೂ, ಹಳ್ಳಿಯಲ್ಲಿರುವ ರಜಿಸ್ತರುಗಳನ್ನು ತಿಳಿದುಕೊಳ್ಳುವ ಜ್ಞಾನವನ್ನೂ ಸೇರಿಸಿ, ಇವರು ಹೊಸ ವಿಷಯಕ್ರಮವನ್ನು ಸೂಚಿಸಿದರು. ಪ್ರಾಥಮಿಕ ಶಾಲೆಗಳ ವಿಷಯಕ್ರಮಕ್ಕೂ ಹಳ್ಳಿಯ ಶಾಲೆಗಳ ವಿಷಯಕ್ರಮಕ್ಕೂ ವ್ಯತ್ಯಾಸವುಂಟಾದರೆ ಹಳ್ಳಿಯ ಜನರು ಪ್ರಾಥಮಿಕ ಶಾಲೆಗಳ ವಿಷಯಗಳನ್ನೇ ಕಲಿಸಲಾರಂಭಿಸುವರೆಂದೂ, ಜೋಶಿಯವರು ಸೂಚಿಸಿದ ವಿಷಯಕ್ರಮವು ಎಲ್ಲ ಪ್ರಾಥಮಿಕ ಶಾಲೆಗಳಿಲ್ಲಿಯೂ ಇರಬೇಕೆಂದೂ, ಇಲ್ಲವಾದರೆ ಹಳ್ಳಿಯಲ್ಲಿ ಕಲಿತ ಹುಡುಗರಿಗೆ ಊರ ಶಾಲೆಗಳಿಗೆ ಹೋಗುವದು ಕಟ್ಟಾಗುವದೆಂದೂ ರಾವಬಹದ್ದೂರ ರೊದ್ದರವರ ಉಪಸೂಚನೆಯಾಯಿತು. ಆದರೆ ಸಭೆಯವರ ಅಭಿಪ್ರಾಯವು ಇವರಿಗೆ ಅನುಕೂಲವಾಗಲಿಲ್ಲ. ಕೆಲವರು ನೀತಿಯನ್ನೂ, ಕೆಲವರು ಆರೋಗ್ಯಶಾಸ್ತ್ರವನ್ನೂ ಕಲಿಸಬೇಕೆಂದು ಸೂಚಿಸಿದರು. ಆದರೆ ಬಹು ವಿಷಯಗಳನ್ನು ಕಲಿಸಲಿಚ್ಛಿಸಿದ್ದರಿಂದಲೇ, ಈ ಶಾಲೆಗಳ ಶಿಕ್ಷಣವು ನಿಷ್ಫಲವಾಗಿರುವದೆಂಬದನ್ನು ಲಕ್ಷಕ್ಕೆ ತರಬೇಕೆಂದು ಕರಂದೀಕರ ಸಾಹೇಬರವರು ಸಮಯೋಚಿತವಾಗಿ ಸೂಚಿಸಿದ್ದರಿಂದ, ಈ ಸೂಚನೆಗಳೂ ಪಾಸಾಗಲಿಲ್ಲ. ಪ್ರಿನ್ಸಿಪಾಲ ಸಾಹೇಬರವರ ಸೂಚನೆಯು, ಕೆಲವು ಸಣ್ಣ ಪುಟ್ಟ ವ್ಯತ್ಯಾಸಗಳೊಡನೆ ಪಾಸಾಯಿತು. ಮುಂದೆ ಪ್ರಿನ್ಸಿಪಾಲರು ೫, ೬, ೭ನೇ ಇಯತ್ತೆಗಳ ಇತಿಹಾಸ ಭೂಗೋಲ ವಿಷಯಗಳ ಅಭ್ಯಾಸಕ್ರಮದಲ್ಲಿ ಕೆಲವು ಹೆಚ್ಚು ಕಡಿಮೆಗಳನ್ನು ಮಾಡಿ ಒಂದು ಸೂಚನೆಯನ್ನು ಸಭೆಯ ಮುಂದೆ ತಂದರು. ಅದೂ ಪಾಸಾಯಿತು.

ಮುಸಲ್ಮಾನ ಶಾಲೆಗಳ ಡೆಪ್ಯೂಟಿ ಇನ್ಸಪೆಕ್ಟರರಾದ ಪಠಾಣಸಾಹೇಬರು ಹಳ್ಳಿಯ ಹಾಗು ಊರ ಶಾಲೆಗಳು ಇರತಕ್ಕ ಸ್ಥಳಗಳನ್ನು ನಿರ್ಣಯಿಸುವ ಪ್ರಶ್ನೆಯ ಬಗ್ಗೆ ಸಭೆಯ ಮುಂದೆ ಕೆಲವು ಸೂಚನೆಗಳನ್ನಿಟ್ಟರು. ದಕ್ಷಿಣಭಾಗದ ಕನ್ನಡ ಜಿಲ್ಲೆಗಳ ಪ್ರಾಕೃತಿಕ ಸ್ವರೂಪವೂ, ಹಳ್ಳಿಗಳ ಸ್ಥಾನಗಳೂ ಬೇರೆ ಬೇರೆ ಜಿಲ್ಲೆಗಳಲ್ಲಿ ಬೇರೆ ಬೇರೆ ಇರುವದರಿಂದ ಧಾರವಾಡ, ಬೆಳಗಾವ ಜಿಲ್ಲೆಗಳಲ್ಲಿ ೫೦೦ ಕ್ಕಿಂತ ಹೆಚ್ಚು, ಬಿಜಾಪುರ ಜಿಲ್ಲೆಯಲ್ಲಿ ೩೦೦೦ ಕ್ಕಿಂತ ಹೆಚ್ಚು, ಹಾಗೂ ಕಾರವಾರ ಜಿಲ್ಲೆಯಲ್ಲಿ ೧೫೦೦ ಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಹಳ್ಳಿಗಳಲ್ಲಿ ಪೂರ್ಣ ಪ್ರಾಥಮಿಕ ಶಾಲೆಗಳಿರಬೇಕೆಂದು ಇವರ ಸೂಚನೆಯಿತ್ತು. ಆದರೆ ರಾವಬಹದ್ದೂರ ರೊದ್ದ ಸಾಹೇಬರು ಈ ಸಂಖ್ಯಾತ್ಮಕ ವಿಭಾಗವನ್ನು ಬಲವಾಗಿ ನಿಷೇಧಿಸಿ, ಇದರಿಂದ ಪ್ರಾಥಮಿಕ ಶಾಲೆಗಳ ಸಂಖ್ಯೆಯು ಬಹಳ ಕಡಿಮೆಯಾಗಿ ವಿದ್ಯಾಭಿವೃದ್ಧಿಯು ಕುಂಠಿತವಾಗುವದೆಂದು ಪ್ರತಿಪಾದಿಸಿದ್ದರಿಂದಲೂ, ಪ್ರಿನ್ಸಿಪಾಲ ಜೋಶೀ ಸಾಹೇಬರು ಸರಕಾರದ ಸದುದ್ದೇಶವನ್ನು ಕೊಂಡಾಡಿದಾಗ್ಯೂ, ಒಕ್ಕಲಿಗರಲ್ಲದ ಬಡಜನರ ವಿದ್ಯಾಭಿವೃದ್ಧಿಗೆ ಈ ವಿಭಾಗದಿಂದ ಒಳ್ಳೇ ತಡೆಯಾಗುವದೆಂದು ಅಭಿಪ್ರಾಯಪಟ್ಟದ್ದರಿಂದಲೂ ಪಠಾಣಸಾಹೇಬರು ತಮ್ಮ ಸೂಚನೆಗಳನ್ನು ತಿರುಗಿ ತೆಗೆದುಕೊಂಡರು. ಈ ಬಗ್ಗೆ ರೊದ್ದಸಾಹೇಬರು ಮಾಡಿದ ಸೂಚನೆಗಳೇ ಸಭೆಗೆ ಸಮ್ಮತವಾದವು. ಅವು ಯಾವವೆಂದರೆ (೧) ೬೦ ಅಥವಾ ಹೆಚ್ಚು ವಿದ್ಯಾರ್ಥಿಗಳನ್ನು ಶಾಲೆಗೆ ಕಳಿಸುವ ಪ್ರತಿಯೊಂದು ಹಳ್ಳಿಯಲ್ಲಿ ಒಂದು ಪ್ರಾಥಮಿಕ ಶಾಲೆಯು ಇರಲಿಕ್ಕೇ ಬೇಕು. (೨). ಪ್ರತಿಯೊಂದು ಹಳ್ಳಿಯ ಶಾಲೆಯ (Rural Schools) ಮೂರು ಮೈಲಿನ ಅಂತರದ ಒಳಿಗೆ ಒಂದು ಪ್ರಾಥಮಿಕ ಶಾಲೆಯು ಇರಲಿಕ್ಕೇ ಬೇಕು.

ಮುಂದೆ ಧಾರವಾಡ ಜಿಲ್ಲೆಯ ಡೆಪ್ಯುಟಿ ಇನ್ಸಪೆಕ್ಟರರಾದ ರಾ. ರಾ. ಕೃ. ಬಾ. ಬೆಂಡಿಗೇರಿ. ಬಿ. ಎ. ಇವರು ಸ್ಕಾಲರಶಿಪುಗಳನ್ನು ಕುರಿತು ಸೂಚಿಸಿದರು. ನೂರು ಹುಡುಗರ ಹಳ್ಳಿಯ ಶಾಲೆಗೆ ಅಥವಾ ಶಾಲೆಗಳ ಸಮೂಹಕ್ಕೆ ೩ ರೂಪಾಯಿಯ, ೩ ವರ್ಷಗಳ ವರೆಗೆ ನಡೆಯುವ ೬ ಸ್ಕಾಲರಶಿಪ್ಪುಗಳಿರಬೇಕೆಂದೂ, ಇವುಗಳಲ್ಲಿ ೩, ಒಕ್ಕಲಿಗರ ಹುಡುಗರಿಗೂ ೩, ಜಾತ್ಯನುಸಾರವಾಗಿ ಇತರ ಜಾತಿಗಳ ಹುಡುಗರಿಗೂ ಇರಬೇಕೆಂದು ಇವರು ಅಭಿಪ್ರಾಯಪಟ್ಟರು. ಈ ಹಣವು ಅತ್ಯಲ್ಪವಾಗಿ ತೋರಿದ್ದರಿಂದಲೂ, ಇಂಥ ಸ್ಕಾಲರಶಿಪ್ಪುಗಳಿಂದ ಎಲ್ಲ ಜಾತಿಗಳ ವಿದ್ಯಾರ್ಥಿಗಳಿಗೆ ನಿಜವಾದ ಸಹಾಯವಾಗಲಾರದೆಂದು ತೋರಿದ್ದರಿಂದಲೂ ಈ ಹಣವನ್ನು ಶಾಲೆಗಳ ಸುಧಾರಣೆಗೆ ಉಪಯೋಗಿಸುವದೇ ಮೇಲಾದದ್ದೆಂದು ಸಭೆಗೆ ತೋರಿತು.

ಅನಂತರದಲ್ಲಿ ಅಧ್ಯಕ್ಷರು ಯೋಗ್ಯ ಶಬ್ದಗಳಿಂದ ಸಭಿಕರ ಆಭಾರವನ್ನು ಮನ್ನಿಸಿ, ಸರಕಾರದವರು ನೆರೆಸಿದ ಈ ಸಭೆಯು ಉದಾಹರಣಪಸ್ಸೇ ತೆಗೆದುಕೊಂಡು,

ಸರಕಾರದವರಿಗೆ ತಮ್ಮ ಅಭಿಪ್ರಾಯಗಳ ಚರ್ಚೆಯು ಸಮ್ಮತವಲ್ಲೆಂಬ ಜನರ ವೃಥಾಕಲ್ಪನೆಯನ್ನು ಸಮರ್ಪಕವಾಗಿ ನಿಷೇಧಿಸಿದರು. ಮೆ. ಕರಂದೀಕರ ಸಾಹೇಬರವರು ಆಂದದ್ದು, "..... ನಮ್ಮ ಚಕ್ರವರ್ತಿಗಳು ಈ ವರುಷ ಹಿಂದುಸ್ತಾನಕ್ಕೆ ಬಂದು ಪ್ರಜೆಗಳ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಅವಲೋಕಿಸುವರೆಂಬ ಆಶ್ವಾಸನವು ಅಭಿನಂದನೀಯವಾದದ್ದೇ ಸರಿ. ಈ ಸಂಗತಿಯು ನಮ್ಮ ಬಾದಶಹರ ಪ್ರಜಾವಾತ್ಸಲ್ಯಕ್ಕೆ ಸಾಕ್ಷಿಯಾಗಿದೆ. ಇಂಗ್ಲಂಡದ ಪ್ರಿನ್ಸಆಫ್ ವೇಲ್ಸರು ಈ ದೇಶಕ್ಕೆ ಕೆಲವು ಸಾರಿ ಬಂದು ಹೋಗಿರುವರು. ಆದರೆ ಹಿಂದುಸ್ತಾನದ ಚಕ್ರವರ್ತಿಗಳು ಈ ದೇಶಕ್ಕೆ ಬರುವದು ಇದೇ ಮೊದಲು. ಆದ್ದರಿಂದ ನಮ್ಮ ದೇಶದ ಇತಿಹಾಸದಲ್ಲಿ ಈ ವರುಷವು ಸ್ಮರಣೀಯವಾದದ್ದಾಗುವದು. ಇಂಥ ಸಚ್ಚಕ್ರವರ್ತಿಗಳ ಆಳಿಕೆಯು ಬಹುಕಾಲ ನಡೆಯಲೆಂದೂ, ಆ ಅವಧಿಯಲ್ಲಿ ಇಂಥ ಅನೇಕ ಸಭೆಗಳಾಗಿ ಸರಕಾರದ ಯೋಗ್ಯ ಯೋಚನೆಗಳಿಗೆ ಸಭಿಕರು ತಮ್ಮ ಅಭಿಪ್ರಾಯಗಳ ಬೆಂಬಲವನ್ನು ಒಮ್ಮನಸಿನಿಂದ ಕೊಡಲೆಂದೂ, ದೇವರು ನಮ್ಮ ಪ್ರಭುಗಳಿಗೆ ಆಯುರಾರೋಗ್ಯಗಳನ್ನು ದಯಪಾಲಿಸಲೆಂದೂ ಬೇಡಿಕೊಳ್ಳುವದು ನಮ್ಮ ಕರ್ತವ್ಯವಿದೆ." ಈ ಪತ್ರಿಕೆಯ ದ್ವಾರದಿಂದ ನಾವೂ ಇದೇ ಕೋರಿಕೆಯನ್ನು ಪ್ರಕಟಿಸುತ್ತೇವೆ.

ಸಹಕಾರಿ ಪತ್ತಿನ ಸಂಘಗಳು.

ನಮ್ಮ ದೇಶದಲ್ಲಿ ಒಕ್ಕಲತನದಿಂದ ಉಪಜೀವಿಸುವವರ ಸಂಖ್ಯೆಯು ಬಹಳ. ನೂರಕ್ಕೆ ೬೦ ಜನರು ಹೊಲದಿಂದ ಚರಿತಾರ್ಥಸಾಗಿಸುವವರಿರುತ್ತಾರೆ. ಆದರೆ ಈ ಜನರಲ್ಲಿ ದಾರಿದ್ರ್ಯವು ಮಿತಿಮೀರಿ ಬೆಳೆದಿರುವದರಿಂದ, ಅವರ ಸ್ಥಿತಿಯು ಅತ್ಯಂತ ಶೋಚನೀಯವಾಗಿರುತ್ತದೆ. ರೈತರಲ್ಲಿ, ಈಗ ಮೊದಲಿನಂತೆ ಕಾಳಿನ ಸಂಗ್ರಹವಿರುವದಿಲ್ಲ. ಅವರಿಗೆ ಒಕ್ಕಲತನದಲ್ಲಿ ಸುಧಾರಣೆಯನ್ನು ಹ್ಯಾಗೆ ಮಾಡಬೇಕೆಂಬದರ ಜ್ಞಾನವಿರುವದಿಲ್ಲ. ಹೀಗಾಗುವದರಿಂದ ಅವರು ಯಾವಾಗಲೂ ಸಾಲದಲ್ಲಿ ಮುಳುಗಿರುತ್ತಾರೆ. ಬಂಗಾಲ ಚೆಂಬರ ಆಫ಼ ಕಾಮರ್ಸದ ಅಧ್ಯಕ್ಷರಾದ ಸರ್. ಹ್ಯಾಮಿಲ್ಟನ್ನ ಎಂಬವರು ರೈತರ ಸ್ಥಿತಿಯ ಸಂಬಂಧದಿಂದ ಬರೆದದ್ದೇನೆಂದರೆ, ಇಲ್ಲಿಯ ರೈತರಿಗೆ ಅಗ್ಗವಾಗಿ ಸಾಮಾನುಗಳನ್ನು ಕೊಳ್ಳಲಿಕ್ಕೂ ತುಟ್ಟಿಯಾಗಿ ತಮ್ಮ ಕಾಳುಗಳನ್ನು ಮಾರಲಿಕ್ಕೂ ತಕ್ಕ ಅನಕೂಲತೆಗಳಿರುವದಿಲ್ಲ; ಇದರಿಂದ ಅವರಿಗೆ ಇಮ್ಮಡಿ ಹಾನಿಯಾಗುತ್ತದೆ. ಕಾಳುಗಳನ್ನು ಸಂಗ್ರಹಮಾಡಿ, ಧಾರಣೆ ಏರಿದಾಗ ಅವುಗಳನ್ನು ಮಾರಿದರೆ ರೈತರಿಗೆ ಲಾಭವಾಗುವದು. ಆದರೆ ಸಾವಕಾರರ ತಗಾದಿ, ಸರಕಾರದ ಹಪ್ತೆಕೊಡುವ ಅವಧಿ, ಇವೇ ಮೊದಲಾದ ಕಾರಣಗಳಿಂದ ರೈತರು ತಮ್ಮ ಕಾಳು

ಕಡಿಗಳನ್ನು ಮುಂಚಿತವಾಗಿಯೇ ಅಗ್ಗಧಾರಣೆಗೆ ವ್ಯಾಪಾರಸ್ಥರಿಗೆ ಮಾರಬೇಕಾಗುವದು. ಆದ್ದರಿಂದ ಅವರಿಗೆ ತಕ್ಕಷ್ಟು ಲಾಭವು ದೊರಕುವದಿಲ್ಲ. ಇದಲ್ಲದೆ, ಈಗಿನ ದಿವಸದಲ್ಲಿ ಪ್ರಪಂಚಕ್ಕೆ ಅವಶ್ಯವಾಗಿ ಬೇಕಾಗುವ ಪದಾರ್ಥಗಳ ಧಾರಣೆಯು ಮಿತಿಮೀರಿ ಏರಿರುವದರಿಂದ ಅವರಿಗೆ ಆ ಪದಾರ್ಥಗಳನ್ನು ತುಟ್ಟಿಯಾಗಿ ಕೊಳ್ಳಬೇಕಾಗುತ್ತದೆ. ಇಂಥ ದಾರಿದ್ರ್ಯದಲ್ಲಿ ಅವರಿಗೆ ತಮ್ಮ ಹೊಟ್ಟೆಯನ್ನು ಸಾಗಿಸಿಕೊಳ್ಳುವದೇ ಕಠಿಣವಾಗಿರುವದರಿಂದ, ಧನಸಂಗ್ರಹವು ಅಸಾಧ್ಯವಾಗಿರುವದು. ಮಕ್ಕಳಿಂದ ವಿದ್ಯಾಭ್ಯಾಸ ಮಾಡಿಸುವದು ಅವರಿಂದ ಆಗಲಾರದೆಂದು ಬೇರೆ ಹೇಳುವ ಅವಶ್ಯವಿಲ್ಲ. ವಸ್ತುತಃ ನಮ್ಮಲ್ಲಿಯ ರೈತರು ನಿರ್ವ್ಯಸನಿಗಳೂ ಮಿತವ್ಯಯಿಗಳೂ ಇರುತ್ತಾರೆ. ಅವರಿಗೆ, ಸ್ವಂತ ಅಜ್ಞಾನದ ಮೂಲಕ ಹಾಗು ಅನ್ಯ ಅಪರಿಹಾರ್ಯವಾದ ಕಾರಣಗಳಿಂದ ಈ ಬಗೆಯ ದುಃಸ್ಥಿತಿಯು ಪ್ರಾಪ್ತವಾಗಿರುತ್ತದೆ.

ಈ ದುಃಸ್ಥಿತಿಯನ್ನು ತುಸುಮಟ್ಟಿಗಾದರೂ ದೂರಮಾಡುವದಕ್ಕೆ ಸರಕಾರದವರು ಅನೇಕ ಉಪಾಯಗಳನ್ನು ಯೋಚಿಸಹತ್ತಿದ್ದಾರೆ. ಬೇಸಾಯಕ್ರಮವನ್ನು ಸುಧಾರಿಸುವದಕ್ಕೆ ಹೊಸತರದ ರೆಂಟಿ, ಕುಂಟಿಗಳನ್ನು ರೂಢಿಯಲ್ಲಿ ತರಲಿಕ್ಕೆ ಪ್ರೋತ್ಸಾಹನ ಕೊಡಹತ್ತಿದ್ದಾರೆ. ಅವರಿಗೆ ಶಿಕ್ಷಣವನ್ನು ಕೊಡುವದಕ್ಕೆ ಯಾವ ಅನುಕೂಲತೆಗಳನ್ನು ಮಾಡಿಕೊಡಬೇಕೆಂಬಬಗ್ಗೆ ಸಹ ಈಗ ವಿಚಾರವು ನಡೆದಿರುತ್ತದೆ. ಆದರೆ ಇವು ಫಲದ್ರೂಪವಾಗಲು ಕಾಲಾವಧಿ ಬೇಕು. ಒಕ್ಕಲಿಗರ ಋಣವಿಮೋಚನ ಕಾಯದೆಯಿಂದ ರೈತರಿಗೆ ಲಾಭವಾದಂತೆ ತೋರಿದರೂ ಅದು ಕ್ಷಣಿಕವಿರುತ್ತದೆ. ಯಾಕಂದರೆ, ಮುಂದೆ ಸಾವಕಾರರು ತಮ್ಮ ಹಣದ ಬಂದೋಬಸ್ತಿಗಾಗಿ ಹೆಚ್ಚು ಕಠೋರವಾದ ಕರಾರುಗಳನ್ನು ಮಾಡಿಕೊಳ್ಳುವದು ಸಹಜವದೆ. ಆದದರಿಂದ ಆ ಕಾಯದೆಯಿಂದಲೂ ರೈತರ ಸ್ಥಿತಿಯು ಸುಧಾರಿಸಲಾರದು. ಆದರೆ ಇತ್ತಿತ್ತ ಸರಕಾರದವರು ರೈತರ ಸ್ಥಿತಿಯನ್ನು ಸುಧಾರಿಸುವದರ ದೆಸೆಯಿಂದ ಹೊಸದೊಂದು ಉಪಾಯವನ್ನು ರೂಢಿಯಲ್ಲಿ ತರಲಿಕ್ಕೆ ಪ್ರಯತ್ನಿಸುತ್ತಿದ್ದಾರೆ. ಅದು ಯಾವದೆಂದರೆ, ಸಹಕಾರಿ ಪತ್ತಿನ ಸಂಘಗಳನ್ನು ಸ್ಥಾಪಿಸುವದು.

ಸಹಕಾರಿ ಪತ್ತಿನ ಸಂಘಗಳೆಂದರೇನು, ಅವುಗಳಿಂದ ರೈತರ ಸ್ಥಿತಿಯು ಎಷ್ಟರ ಮಟ್ಟಿಗೆ ಸುಧಾರಿಸುತ್ತದೆ; ಇವೇ ಮೊದಲಾದ ಸಂಗತಿಗಳನ್ನು ಕುರಿತು ವಿಚಾರ ಮಾಡುವದು ಅವಶ್ಯವದೆ.

ಪುರಾತನಕಾಲದ ಹಿಂದೂ ಸಮಾಜದಲ್ಲಿ ಸಮಾಹಿಕಕುಟುಂಬ ವ್ಯವಸ್ಥೆಯೂ ಗ್ರಾಮಸಂಸ್ಥೆಗಳೂ ಪ್ರಚಾರದಲ್ಲಿದ್ದವು. ಪ್ರೇಮವೇ ಸಮಾಜದ ಮೂಲಾಧಾರವಾಗಿತ್ತು. ಆದರೆ ಈಗ ಆ ಸ್ಥಿತಿಯು ಬದಲಾಗಿದೆ. ಆ ಬಗೆಯ ಪುರಾತನ ಸಂಸ್ಥೆಗಳನ್ನು ಪುನಃ ಉದ್ಧಾರಮಾಡುವದೇ ನಮ್ಮ ಜನರ ದುಃಸ್ಥಿತಿಯನ್ನು ಹೋಗಲಾಡಿಸಲಿಕ್ಕೆ ಮುಖ್ಯ ಉಪಾಯವೆಂದು ನಮ್ಮ ಗ್ರಹಿಕೆಯುದೆ. ಆದರೆ ಆ ವಿಷಯವನ್ನು ಬಿಟ್ಟು-

ಕೊಟ್ಟು ಸದ್ಯಕ್ಕೆ ಈ ಸಹಕಾರಿಪತ್ತಿನ ಸಂಘಗಳಿಂದ ಯಾವಬಗೆಯ ಲಾಭಗಳಾಗುತ್ತವೆಂಬದನ್ನಷ್ಟೇ ನೋಡುವಾ.

ಒಬ್ಬರಿಗೊಬ್ಬರು ಸಹಾಯ ಮಾಡುವದೇ ಈ ಸಂಘಗಳ ಮುಖ್ಯ ಉದ್ದೇಶವು. ಹಲವು ಜನರು ಕೂಡಿ ಒಂದು ಸಂಘವನ್ನು ಸ್ಥಾಪಿಸಿ, ಅದಕ್ಕೆ ಬೇಕಾಗುವ ಬಂಡವಲವನ್ನು ತಾವೇ ಕೊಟ್ಟು, ತಮ್ಮೊಳಗೆ ಯಾರಿಗಾದರೂ ಹಣದ ಕೊರತೆಯಾದರೆ ತಾವೇ ಸಾಲಕೊಟ್ಟು ಅದರಿಂದಾಗುವ ಲಾಭವನ್ನು ತಾವೇ ಹಂಚಿಕೊಳ್ಳುವದೇ ಇಂಥ ಸಂಘಗಳ ಮುಖ್ಯ ಕಾರ್ಯಗಳು. ತಮಗೆ ಸಾಲಬೇಕಾದರೆ ಸಹಕಾರಿಪತ್ತಿನ ಮೇಲೆ ಹಣ ತರುವದಕ್ಕೆ ಅವರಿಗೆ ಹೆಚ್ಚಿಗೆ ಅನಕೂಲವಾಗುತ್ತದೆ. ವ್ಯಕ್ತಿಶಃ ಅಶಕ್ಯವಾದ ಕಾರ್ಯಗಳು ಈ ಸಂಘಗಳಿಂದ ಸುಲಭವಾಗಿ ಜರಗುತ್ತವೆ. ಪರಸ್ಪರರಲ್ಲಿ ಪ್ರೇಮಾಭಿವೃದ್ಧಿಯಾಗುತ್ತದೆ. ಪ್ರಾಮಾಣಿಕತನದಿಂದ ನಡೆಯುವ ಅಭ್ಯಾಸವಾಗುತ್ತದೆ. ಒಬ್ಬನೇ ಸಾಲ ಕೇಳಹೋದರೆ ಹೆಚ್ಚು ಬಡ್ಡಿ ಬೀಳುವ ಸಂಭವವದೆ. ಆದರೆ ಅನೇಕ ಜನರು ಕೂಡಿ ಸಾಲ ಕೇಳಿದರೆ ಅವರು ಬಹಳ ಬಡ್ಡಿ ಕೊಡಬೇಕಾಗುವದಿಲ್ಲ. ಸಾಹುಕಾರರೂ ಹೆಚ್ಚಿನ ಬಡ್ಡಿಯನ್ನು ಕೇಳುವದಿಲ್ಲ. ಯಾಕಂದರೆ ವ್ಯಕ್ತಿಗೆ ಸಾಲಕೊಡುವದಕ್ಕಿಂತ ಇಂಥ ಸಂಘಗಳಿಗೆ ಸಾಲಕೊಟ್ಟರೆ ತಮ್ಮ ಹಣವು ಸುರಕ್ಷಿತವಾಗಿ ತಿರುಗಿ ದೊರಕುತ್ತದೆಂಬ ಭರವಸವುಂಟಾಗುತ್ತದೆ. ಈ ಮೇರೆಗೆ ಈ ಸಂಘಗಳಿಂದ ಅನೇಕ ಲಾಭಗಳುಂಟಾಗುತ್ತವೆ. ಇನ್ನು ಇಂಥ ಸಂಘಗಳು ಊರ್ಜಿತಾವಸ್ಥೆಯನ್ನು ಹೊಂದುವದಕ್ಕೆ ಕೆಲವು ಸಂಗತಿಗಳ ಅವಶ್ಯಕತೆಯಿರುತ್ತದೆ. ಸಂಘಗಳ ಚಾಲಕರು ಪ್ರಾಮಾಣಿಕರಿರಬೇಕು; ಉದ್ಯೋಗಿಗಳಿರಬೇಕು; ಧೂರ್ತರಿರಬೇಕು; ಇಲ್ಲದಿದ್ದರೆ ಇಂಥ ಸಂಘಗಳಿಗೆ ಹಾನಿಯು ತಟ್ಟುವದು. ಅವರು ಪ್ರತಿಯೊಂದು ಕೆಲಸದಲ್ಲಿ ನಿರ್ದಾಕ್ಷಿಣ್ಯದಿಂದ ವರ್ತಿಸುವವರಿಲ್ಲದಿದ್ದರೆ ಜನರ ವಿಶ್ವಾಸವು ಹಾರಿಹೋಗುವದು. ನಿಃಪಕ್ಷಪಾತದಿಂದ ನಡೆಯುವ ಚಾಲಕರಿರದಿದ್ದರೆ ಇಂಥ ಸಂಘಗಳಿಂದ ಬಡಜನರಿಗೆ ಹೆಚ್ಚಿಗೆ ಹಾನಿಯಾಗುತ್ತದೆ. ಯಾಕಂದರೆ ಈ ಜನರು ಚಾಲಕರ ಮೇಲೆ ಕೇವಲ ವಿಶ್ವಾಸವಿಟ್ಟಿರುತ್ತಾರೆ.

ಈ ಸಂಘಗಳು ಒಮ್ಮೆ ಜನರ ವಿಶ್ವಾಸವನ್ನು ಸಂಪಾದಿಸಿಕೊಂಡವೆಂದರೆ, ಮುಂದೆ ಅವು ಕೈಕೊಂಡ ಕಾರ್ಯಗಳು ಸುಲಭವಾಗಿ ಜರುಗಹತ್ತುತ್ತವೆ. ಇಂಥ ಸಂಘಗಳು ಬೇಕಾದಷ್ಟು ಬಂಡವಲು ಕೂಡಿಸುವದು ಸುಸಾಧ್ಯವು. ಇಂಥ ಸಂಘಗಳು ವ್ಯಾಪಾರ ಮಾಡಬಹುದು. ಬಡ್ಡೀ ವ್ಯವಹಾರ ಮಾಡಬಹುದು. ಈ ಸಂಘಗಳಲ್ಲಿ ಮೆಂಬರರಾದವರಿಗೆ ಮಾತ್ರ ಸಾಲ ದೊರೆಯುತ್ತದೆ. ಮಿಕ್ಕವರಿಗೆ ಈ ಸಂಘಗಳು ಸಾಲವನ್ನು ಕೊಡುವದಿಲ್ಲ. ಸಾರಾಂಶ, ತಮ್ಮ ಹಣವು ತಮ್ಮ ಕೈಯಲ್ಲಿಯೇ ಇರುತ್ತದೆ.

ಇದುವರೆಗೆ ನಾವು ಸಾಮಾನ್ಯ ವಾಚಕರ ದೆಸೆಯಿಂದ, ಇಂಥ ಸಂಘಗಳ ಸಾಮಾನ್ಯ ಸ್ವರೂಪವನ್ನು ವಿವೇಚಿಸಿದೆವು.

ಇಂಥ ಸಂಘಗಳು ಪ್ರಚಲಿತವಾಗಿ ರೈತಜನರ ಹಾಗು ಮಿಕ್ಕವರ ದುಃಸ್ಥಿತಿಯು ದೂರಾಗಬೇಕೆಂಬ ಉದ್ದೇಶದಿಂದ ಸರಕಾರದವರು ಈ ಸಂಘಗಳಿಗೆ ಕೆಲವು ಸೌಕರ್ಯಗಳನ್ನು ಕೊಟ್ಟಿರುತ್ತಾರೆ. ೧೯೦೪ ನೇ ಇಸ್ವಿಯಲ್ಲಿ ಒಂದು ಕಾಯದೆಯನ್ನು ಮಾಡಿ, ಸರಕಾರದವರು ಇಂಥ ಸಂಸ್ಥೆಗಳನ್ನು ಸ್ಥಾಪಿಸುವವರಿಗೆ ಉತ್ತೇಜನಕೊಡುವದರ ದೆಸೆಯಿಂದ, ತಮ್ಮ ಖಜೀನೆಯಿಂದ ಸಾಲಕೊಡಹತ್ತಿದ್ದಾರೆ. ಜನರು ತಾವಾಗಿ ಕೂಡಿಸಿರುವಷ್ಟೇ ಹಣವನ್ನು ಸರಕಾರದವರಾದರೂ ಸಾಲವಾಗಿ ಕೊಡುತ್ತಾರೆ. ಈ ಹಣಕ್ಕೆ ಅವರು ಮೂರು ವರ್ಷಗಳ ವರೆಗೆ ಬಡ್ಡಿಯನ್ನು ತೆಗೆದು ಕೊಳ್ಳುವದಿಲ್ಲ. ಮುಂದೆ ಸಹ ನೂರಕ್ಕೆ ವರ್ಷಕ್ಕೆ ನಾಲ್ಕೇ ರೂಪಾಯಿ ಬಡ್ಡಿ ತೆಗೆದು ಕೊಳ್ಳಬೇಕೆಂದು ಗೊತ್ತುಮಾಡಿದ್ದಾರೆ. ಸಂಘದವರು ತೆಗೆದುಕೊಳ್ಳುವ ಬಡ್ಡಿಯುದರವನ್ನು ಗೊತ್ತುಪಡಿಸುವ ಅಧಿಕಾರವನ್ನು ಸರಕಾರದವರು ಸಂಘಗಳಿಗೆ ಕೊಟ್ಟಿರುವರು. ಈ ಮೇರೆಗೆ ಸರಕಾರದವರು ಅನೇಕ ಸವಲತ್ತುಗಳನ್ನು ಕೊಟ್ಟಿರುವದರಿಂದ ಕಳೆದ ನಾಲ್ಕೈಂಟು ವರ್ಷಗಳಲ್ಲಿ ಇಂಥ ಸಂಘಗಳು ಈ ದೇಶದಲ್ಲೆಲ್ಲ ಸ್ಥಾಪಿಸಲ್ಪಟ್ಟಿವೆ. ಈ ಸಂಘಗಳು ಬರಿಸಿಕೊಂಡ ದಸ್ತುವೈಜುಗಳಿಗೆ ಸ್ಟ್ಯಾಂಪು ಬೇಕಾಗುವದಿಲ್ಲ. ಅವು ನೊಂದಣಿ ಮಾಡಲ್ಪಟ್ಟರೆ, ಅವುಗಳಿಗೆ ನೊಂದಣೀ ಫೀ ಬೀಳುವದಿಲ್ಲ. ಈ ಸಂಘಗಳ ಉತ್ಪನ್ನಕ್ಕೆ ಪ್ರಾಪ್ತಿಯ ಮೇಲಿನ ಕರವನ್ನು (Income tax) ಕೊಡಬೇಕಾಗುವದಿಲ್ಲ. ಈ ಸಂಘಗಳ ಲೆಖ್ಖಪತ್ರಗಳನ್ನು ಸರಕಾರದ ಅಧಿಕಾರಸ್ಥರು ತಪಾಸಮಾಡುವರು. ಈ ಸಂಘಗಳಲ್ಲಿ ಎರಡು ತರಹಗಳಿರುವವು. ಹಳ್ಳಿಯ (Rural) ಸಂಘಗಳಲ್ಲಿ ಕನಿಷ್ಟ ೪/೫ ಜನರು ಒಕ್ಕಲತನದಿಂದ ಉಪಜೀವಿಸುವವರಿರಬೇಕೆಂದೂ ಪಟ್ಟಣಗಳಲ್ಲಿಯು (Urban) ಸಂಘಗಳಲ್ಲಿ ಕನಿಷ್ಟ ೪/೫ ಜನರು ಒಕ್ಕಲತನದ ಹೊರ್ತು ಬೇರೆ ಉದ್ಯೋಗದಿಂದ ಜೀವಿಸುವವರಿರಬೇಕೆಂದೂ ನಿರ್ಬಂಧವಿರುವದು. ಸಾರಾಂಶ ಈ ಸಂಘಗಳಿಂದ ಬಡಜನರ ಅಡಚಣಿಗಳು ತಕ್ಕಮಟ್ಟಿಗೆ ದೂರಾಗಬಹುದೆಂದು ಸರಕಾರದ ನಂಬಿಕೆಯಿದೆ. ಈ ಸಂಘಗಳ ಬಗ್ಗೆ ಸರಕಾರದವರ ೧೯೦೯-೧೦ ನೇ ಇಸ್ವಿಯ ರಿಪೋರ್ಟಿನಲ್ಲಿ ಬರೆದಿರುವದೇನಂದರೆ—ಇಂಥ ಸಂಘಗಳ ಸಂಖ್ಯೆಯು ೩೪೯೮ ಇರುತ್ತದೆ. ಇವುಗಳಲ್ಲಿ ೨೩೧೦೦೦ ಜನರು ಮೆಂಬರಿರುತ್ತಾರೆ; ಒಟ್ಟು ಬಂಡವಲು ೧೨೪೦೦೦೦೦೦ ರೂಪಾಯಿ ಇರುತ್ತದೆ. ಒಕ್ಕಲಿಗರ ಕಾಯದೆಯನ್ನು (Agricultural Relief) ಈ ಸಂಘಗಳಿಗೆ ಹಚ್ಚಬಾರದೆಂದು ಸರಕಾರದವರು ನಿಯಮ ಮಾಡತಕ್ಕವರಿದ್ದಾರೆ. ಈ ತರದ ಎಲ್ಲ ಅನುಕೂಲತೆಗಳಿರಲು, ಈ ಸಂಘಗಳ ಯಥಾಯೋಗ್ಯವಾದ ಉಪಯೋಗವನ್ನು ನಮ್ಮ ಜನರು ಮಾಡಿಕೊಂಡರೆ ಇವುಗಳಿಂದ ಲಾಭವಾಗದಿರದೆಂದು ನಿರ್ವಿವಾದವಾಗಿ ಹೇಳಬಹುದು.

V. B. Alur B. A. L. L. B.

ರಾತ್ರಿಯೆ ನೆಲ್ಲನ ಪದ್ಯಂಗಳು.

ಶ್ರೀಮದ್ಗಿರಿಜೆಯ ಪತಿತಾಂ ।
ಸೋಮಾರ್ದಟ ಭೂಷಿತೋತ್ತಮಾಂಗಂ ಕೃಪೆಯಿಂ ॥
ಭೀಮಂ ತ್ರಿಪುರ ವಿರಾಮಂ ।
ಪ್ರೇಮದ ಕೃತಿಗೀಯಲೀಗ ಶುಭಮನಳುಂಬಂ ॥ ೧ ॥

ಸುರುಚಿರ ಮಧುರಾನಗರದೆ ।
ವರಸೂಳೆಕೇರಿಯ ಸೊಬಗಿನ ಪರಿಜಗದೊಳ್ ॥
ತಿರೆಯಾಣ್ಮನೋರ್ವನರಿವನು ।
ವೊರೆವೆಂ ತಿಳಿವನಿತು ಬುಧರೆ ಪೊರೆವುದುದಯದಿಂ ॥ ೨ ॥

ಬಲ್ಲವರೆಸುತಮೆ ಅರಿಕೆಯ ।
ನಿಲ್ಲದೆ ನಾಮಾಡಿಕೊಂಬೆ ವಿಶಯದೆ ನಿಶಯಾ ॥
ನಲ್ಲನ ಪದ್ಯಾರ್ಥಂಗಳ ।
ನೆಲ್ಲವನರುಹುವುದೆನಗೆ ವಿಭುದತತಿ ಮುದದಿಂ ॥ ೩ ॥

ಹೊತ್ತದು ಮೂಡಲುಬಾಗಿಲಿ ।
ಸೊತ್ತಿನ ಜಗಲಿಯಲಿ ಕುಳಿತು ನಿಶೆಯೊಳ್ತನ್ನಾ ॥
ಹತ್ತಿರೆ ಸಾರಿದ ವಿಟರಗು ।
ಣೋತ್ತರಗಳನುಸಿರುತಿರ್ದರತಿ ಸಂತಸದಿಂ ॥ ೪ ॥

ಅಲ್ಲಿಹ ಚದುರೆಯದೋರ್ವಳು ।
ವುಲ್ಲಾಸದಿ ತಂಗಿಯ ಮೊಗನೋಡುತಮೆಂದಳ್ ॥
ಪುಲ್ಲಾಬ್ಜಾಕ್ಷಿಯೆ ಪೇಳೆಲೆ ।
ನಲ್ಲಂ ಬಂದಿರ್ದನಾರು ನಿಶೆಯೊಳ್ಕ್ರಮಣೀ ॥ ೫ ॥

ಅಮಾತನಾಲಿಸಿಯಣುಗೆ ।
ಪ್ರೇಮದೊಳಿಂತೆಂದಳಾಗ ತಿಳುಹುವೆನಕ್ಕಾ ॥
ನೇಮನದೆ ನೇಹದಾಳಿತ ।
ಮಾಮಹಿಮನ ಚರಿತೆಯನಿತ ಕೇಳ್ವುದು ಮುದದಿಂ ॥ ೬ ॥

ನಾಗೈಯಣುಗನ ಮಾವನ ।
ರಾಗದಿ ಪೊತ್ತವನ ಸುತನ ಕೈಯೊಳಗಿಹನಂ ॥

ಸಾಗಿಪನ ಹಗೆಯ ಭೃತ್ಯನ।
ರಾಗವ ನೆರೆ ಪೋಲ್ದನಕ್ಕ ರಾತ್ರಿಯನೆಲ್ಲಂ ॥ ೬ ॥

ಬೆಟ್ಟದ ಮಗಳಣುಗನ ನಡು।
ಹೊಟ್ಟೆಯ ಕಟ್ಟಿದನ ಹಗೆಯ ಹೆಗಲೇರಿಹನಾ ॥
ಪಟ್ಟದರಸಿಯೊಯ್ದವನೊಡ।
ಹುಟ್ಟಿದನಂ ಪೋಲ್ದನಕ್ಕ ರಾತ್ರಿಯ ನಲ್ಲಂ ॥ ೮ ॥

(ಸಶೇಷ.)

ಪತ್ರವ್ಯವಹಾರ.

——:oo:——

ಮೆ. ರಾ. ರಾ. ವಾಗ್ಭೂಷಣ ಮಾಸಿಕ ಪತ್ರಕದ ಎಡಿಟರರವರಿಗೆ:—

ವಿ. ವಿ. ಕಳೆದ ಸಂಚಿಕೆಯಲ್ಲಿ ಪ್ರಸಿದ್ಧವಾದ ಸಮಸ್ಯೆಯನ್ನು ಯಥಾಮತಿ ಪೂರಯಿಸಿ ಕೆಳಗೆ ಬರೆದು ಕಳುಹಿಸಿದ್ದೇನೆ. ಯೋಗ್ಯ ಕಂಡರೆ ಸ್ಥಳ ದೊರೆಯುವ ದೆಂದು ಆಶಿಸುತ್ತೇನೆ.

ಸಖನೇ ಸೌಹೃದಭಾವ ಮೆಂತಿದಯ್। ಈ ಪದ್ಯಾಂಶದ ಅರ್ಥವು ಪ್ರಸಂಗ ಭೇದದಿಂದ ಭಿನ್ನ ಭಿನ್ನವಾಗಬಹುದು. ಇದರ ಅನ್ವೆಯವು " ಸಖನೇ ಇದು ಸೌಹೃ ದಭಾವಂ ಎಂತಯ್ " ಎಂದಾಗುವದು. ಈ ವಾಕ್ಯದಲ್ಲಿ ಇದು ಎಂಬದು ಸೌಹೃದ ಭಾವದ ಸರ್ವನಾಮಕ ವಿಶೇಷಣವೆಂದು ತಿಳಿದರೆ ಇದರ ಅರ್ಥವು " ಗೆಳೆಯನೇ ಈ ಗೆಳೆತನವು ಹೇಗೈ? ಅಂದರೆ ನಾನು ಮೇಲೆ ಹೇಳಿದ ಗೆಳೆತನದ ಮಾದರಿಯು ಹೇಗಿದೆ ನೋಡು " ಎಂದಾಗುವದು. ಇಲ್ಲಿ ಒಬ್ಬನು ಇನ್ನೊಬ್ಬನಿಗೆ ಈ ಮೇರೆಗೆ ಪ್ರಶ್ನ ಮಾಡಬೇಕಾದರೆ ಅವನು ತಾನು ಹೇಳುವ ಮಾದರಿಯು ಸರ್ವೋತ್ಕೃಷ್ಟವಾ ಗಲಿ, ಆತ್ಯಾಶ್ಚರ್ಯಕರವಾಗಲಿ, ಅಸಂಗತವಾಗಲಿ ಇರುವದೆಂಬದನ್ನು ಸೂಚಿ ಸಿದಂತಾಗುವದು.

ಮತ್ತು ಇದು ಎಂಬದು ಸರ್ವನಾಮಕ ವಿಶೇಷಣವೆಂದು ತಿಳಿಯದೆ ಸ್ವತಂತ್ರ ಪದವೆಂದು ತಿಳಿದರೆ " ಇದು ಸೌಹೃದಭಾವಂ ಎಂತಯ್= ಇದು ಗೆಳೆತನವೆ ಹೇಗೈ? ಅಲ್ಲ! ಅಲ್ಲ! ಎಂದು ಅಸಂಗತತೆಯನ್ನೇ ಸೂಚಿಸಿದಂತಾಗುವದು.

ಆದ್ದರಿಂದ ಸರ್ವೋತ್ಕೃಷ್ಟವಾದ, ಆಶ್ಚರ್ಯಕರವಾದ ಮತ್ತು ಅಸಂಗತೆ ವಾದ ಸೌಹೃದಭಾವದ ಮೂರೂ ವಿಧದ ಮಾದರಿಗಳನ್ನು ತೋರಿಸುವ ಮೂರು ಸಮಸ್ಯಾಪೂರಕ ಶ್ಲೋಕಗಳನ್ನು ಕೆಳಗೆ ಬರೆದಿದ್ದೇನೆ.

(೧). ಶಿಖಿಯಿಂ ವಾರಿ ತೊಲಂಗೆ ಕ್ಷೀರಮುಂ।
ಪ್ರಖರ ಜ್ವಾಲೆಯೊಲ್ಮೆದೆ ಪಾರ್ವ್ಯದೈ॥
ಸಖರೊಳ್ ಪ್ರೇಮದ ಸೀಮೆ ತೋರ್ವುದಯ್।
ಸಖನೇ ಸೌಹೃದ ಭಾವಮೆಂತಿದಯ್॥೧॥

(೨). ಸುಖದಂ ಶೀತಕರಂ ಧರಿತ್ರಿಯೊಳ್।
ಸಖನಾ ಕರ್ಕಶಚಂದ್ರಕಾಂತಕೆ॥
ಸುಖದಂ ತೀಕ್ಷ್ಣಕರಂ ನವಾಬ್ಜಕೆ।
ಸಖನೇ ಸೌಹೃದಭಾವ ಮೆಂತಿದಯ್॥೨॥

(೩). ಸಖರಾವೆಂದಭಿಮಾನಿಪರ್ ಜನರ್।
ಸುಖದೊಳ್ ಸಖ್ಯವನೆಯ್ದೆ ತೋರುತಂ॥
ಅಕಟಾ! ದುಃಖದೆ ಮಾತನಾಡಿಸರ್।
ಸಖನೇ ಸೌಹೃದ ಭಾವಮೆಂತಿದಯ್॥೩॥

ಪತ್ರವಿಸ್ತಾರಕ್ಕೆ ಕ್ಷಮೆ ಇರಲಿ! ಇತಿ ವಿ. ವಿ.

ಹೆಬ್ಬಳ್ಳಿ. } ಹನುಮಪ್ಪ ರಾಮಪ್ಪ ಕಾಲವಾಡ.
ತಾ॥ ೩೦-೮-೧೯೧೯ } ಅ॥ ಮಾಸ್ತರ.

[ಮೊದಲನೆಯ ಶ್ಲೋಕದಲ್ಲಿರುವ ಮೂರನೆಯ ಚರಣವು ಕೊನೆಯ ಚರಣದಂತೆ ಅರ್ಥಾಂತರ ನ್ಯಾಸವಾಗಿದೆ. ಒಂದೇ ಶ್ಲೋಕದಲ್ಲಿ ಎರಡು ಅರ್ಥಾಂತರ ನ್ಯಾಸಗಳಿರುವದು ಸಾಧುವಲ್ಲ. ೩ನೆಯ ಹಾಗು ಮೂರನೆಯ ಶ್ಲೋಕಗಳು ಗ್ರಾಹ್ಯವಾಗಿವೆ.
(ಎಡಿಟರ ವಾಗ್ಭೂಷಣ).

ವಿನೋದ.

ತಂದೆ (ಮಗನಿಗೆ)—ಶಾಮೂ, ನೀನು ಈ ಹೊತ್ತು ಮಾಡಿದ ಎಲ್ಲ ಕೆಟ್ಟ ಕೆಲಸಗಳು ನನಗೆ ಗೊತ್ತಾಗಿವೆ. ಅದರಿಂದ ನಿನ್ನನ್ನು ಥಳಿಸುವವನಿದ್ದೇನೆ.

ಮಗ—ಅಪ್ಪಾ ಸುಳ್ಳು ಹೇಳಬೇಡ. ನಾನು ನಿನ್ನ ಪಾಕೀಟು ಮುಚ್ಚಿಯಿಟ್ಟದ್ದು ನಿನಗೆ ಎಲ್ಲಿ ಗೊತ್ತಾಗಿದೆ?

* * * * * *

ಒಬ್ಬ ಕಾಲೇಜದ ವಿದ್ಯಾರ್ಥಿಯು ಹ್ಯಾಗೋ ಸರ್ಟಿಫಿಕೀಟು ಪಡೆದು ಊರಿಗೆ ಹೋಗುವಾಗ ಮಾಸ್ತರರಿಗೆ ಭೆಟ್ಟಿಯಾಗಿ "ನಾನು ನಿಮ್ಮ ದೆಶೆಯಿಂದ ಏನು ಮಾಡಲಿ"

ಎಂದು ಕೇಳುತ್ತಿದ್ದೆನು. ಒಬ್ಬ ಮಾಸ್ತರನು—ನನಗೆ ಇಂಥ ಮಾಸ್ತರರು ಕಲಿಸಿದರೆಂದು ಮಾತ್ರ ಯಾರಿಗೂ ಹೇಳಿದ್ದರೆ ನಮ್ಮ ಮೇಲೆ ನಿನ್ನ ಉಪಕಾರವು ಬಹಳ ಆಗುವ ದೆಂದು ಹೇಳಿದನು.

* * * * * *

ತಂದೆ—ಭೀಮೂ, ನೀನು ಈ ಕನ್ನಡಿ ಬಡದಿಯೋ?

ಮಗ—ಇಲ್ಲ ಅಪ್ಪಾ! ನಾನು ಈ ಚಂಡು ಬಗೆದೆನು. ಆದು ಕನ್ನಡಿಗೆ ಬಡಿಯಲು ಕನ್ನಡಿ ಒಡೆಯಿತ್ತು. ಇದರಲ್ಲಿ ನನ್ನದೇನು ತಪ್ಪೋ ಅಪ್ಪಾ!!

* * * * * *

ಸೀಜನ್ ಟಿಕೀಟು ಕೊಂಡು ಪ್ರತಿದಿನ ಧಾರವಾಡದಿಂದ ಹುಬ್ಬಳ್ಳಿಗೆ ಹುಬ್ಬಳ್ಳಿಯಿಂದ ಧಾರವಾಡಕ್ಕೆ ಓಡಾಡುವ ಗುಂಡೇರಾಯರ ಮಾರಿಯ ಗುರ್ತು ಟಿಕೀಟು ಕಲೆಕ್ಟರರಿಗೆ ಚನ್ನಾಗಿ ಆಗಿತ್ತು. ಆದ್ದರಿಂದ ಅವರು ಗುಂಡೇರಾಯರಿಗೆ ಟಿಕೀಟು ತೋರಿಸೆಂದು ಕೇಳು ತ್ತಿದ್ದಿಲ್ಲ. ಒಂದು ದಿವಸ ಹುಬ್ಬಳ್ಳಿ ಸ್ಟೇಶನದ ಟಿಕೀಟ ಕಲೆಕ್ಟರನು ಬದಲಾಗಿ ಹೊಸಬ ನೊಬ್ಬನು ಬಂದನು. ಅವನು "ಟಿಕೆಟ, ಟಿಕೆಟ" ಎಂದು ಬದರುತ್ತ ಉಳಿದವರ ಟಿಕೀಟು ಚಕ್ಕವಾಡಿ ಗುಂಡೇರಾಯರಿಗೆ "ಟಿಕೆಟ, ಟಿಕೆಟ" ಎಂದು ಕೇಳಿದನು. ಆಗ ಗುಂಡೇ ರಾಯರು ಟಿಕೀಟು ಯಾತಕ್ಕೆ ಬೇಕು. ನನ್ನ ಮಾರಿಯೇ ಟಿಕೀಟು ಎಂದರು.

ಟಿಕೀಟ ಕಲೆಕ್ಟರನು—ಬಳ್ಳೀದು ನನ್ನ ಕೆಲಸವು ಟಿಕೀಟು ಕತ್ತರಿಸುವದಿರುವದು ಎಂದು ಹೇಳಿ ಕೈಯೊಳಗಿನ ಆಯುಧದಿಂದ ರಾಯರ ಕಿವಿ ಕತ್ತರಿಸಿದನು!

* * * * * *

ಅಬಾರಾಯರ ಮನೆಗೆ ತೆಲಂಗಿ ಬ್ರಾಹ್ಮಣನೊಬ್ಬನು ದೇಶಾವರಕ್ಕೆ ಬರಲು, ರಾಯರು ಸಿಟ್ಟಿಗೆದ್ದು ನಿಮ್ಮನ್ನು ಯಾರು ಕರೆದರು? ಎಂದು ಕೇಳಿದರು.

ಬ್ರಾ—ನಿನ್ನ ಹೆಸರು ಕರೆಯಿತು ಮಹಾರಾಜಾ!

ರಾಯರು—ಹಾಗೆಂದರೇನು?

ಬ್ರಾ—ಹಾಗೆಂದರೆ ಹೀಗೆ—ಆ ಅಂದರೆ ಬಾ, ಬಾ ಅಂದರೆ ಬಾ, ರಾ ಅಂದರೆ ಬಾ, ಯಾ ಅಂದರೆ ಬಾ!! ಉತ್ತರವು ರಾಯರ ಮನಸಿಗೆ ಬಂದು ಅವರು ಬ್ರಾಹ್ಮಣನಿಗೆ ಕೈಲಾ ದಷ್ಟು ಮುಟ್ಟಿಸಿಕೊಟ್ಟರು.

* * * * * *

ಭೀಮರಾಯರು ಕಳೆದ ಕನ್ಯಾಗತದಲ್ಲಿ ಕೃಷ್ಣಾನದಿಯ ಸ್ನಾನಕ್ಕಾಗಿ ಸೀತಿ ಮನೆಗೆ ಹೋಗಿ ತಿರುಗಿ ಬಂದ ಮೇಲೆ, ಅವರ ಚಿರಂಜೀವಿ ಸುಂದರಿ—ಅಪ್ಪಾ ನಿನ್ನ ಮೀಸಿ ಏನಾದವೋ?

ಭೀಮರಾಯ—ಸುಂದರೀ ನಾನು ಸೀತಿ ಮನಿಗೆ ಹೋಗಿದ್ದೆ, ಆದ್ದರಿಂದ ಮೀಸಿ ಹೋದವು.

ಸುಂದರಿ—ಹಾಗಾದರೆ, ಅಣ್ಣನೂ ನಿನ್ನ ಸಂಗಡ ಹೋಗಿದ್ದನಲ್ಲ!

ಪೂರ್ಣಯ್ಯನು.

ಪ್ರಿಯವಾಚಕರೇ, ಕತ್ತಲೆಯಿಲ್ಲದಿದ್ದರೆ ಬೆಳಕಿನ ಮಹತ್ವವು ನಮಗೆ ಗೊತ್ತಾಗುತ್ತಿದ್ದಿಲ್ಲ. ಅದರಂತೆ ಮಹತ್ಸಂಕಟಗಳು ಪ್ರಾಪ್ತವಾಗದಿದ್ದರೆ ಮನುಷ್ಯನಲ್ಲಿ ಅಂತರ್ಭೂತವಾದ ವಿವೇಕ, ಸಮಯೋಚಿತ ಧೈರ್ಯ, ಬುದ್ಧಿವೈಭವ, ಅಸದೃಶ ಕರ್ತೃತ್ವಶಕ್ತಿ ಇತ್ಯಾದಿ ಸದ್ಗುಣಗಳು ಪ್ರಕಟವಾಗುವದಿಲ್ಲ. ರಾಜ್ಯಕ್ರಾಂತಿಯು ಮಹತ್ಸಂಕಟಗಳಲ್ಲಿ ಒಂದಾಗಿರುವದು. ರಾಜ್ಯಕ್ರಾಂತಿಯಾಗುವದರಿಂದ ಸಿಂಹಾಸನಾರೂಢನಾದ ಅರಸನು ಪದಚ್ಯುತನಾಗಿ ಬಿಕ್ಷುಕ ವೃತ್ತಿಯನ್ನು ಕೈಕೊಳ್ಳುವನು. ಬಿಕ್ಷುಕನು ಅರಸನಾಗುವನು. ಧನಿಕನು ದರಿದ್ರನಾಗುವನು. ದರಿದ್ರನು ಧನಿಕನಾಗುವನು. ಉಪ್ಪರಿಗೆಯು ನೆಲಸಮವಾಗುವದು. ತಿಪ್ಪೆಯು ಉಪ್ಪರಗೆಯಾಗುವದು. ಹೀಗೆ ಅನೇಕಾನೇಕ ಅದಲುಬದಲುಗಳಾಗುವವು. ಈ ಸಂಧಿಯಲ್ಲಿ ನಿಜವಾದ ಕರ್ತೃತ್ವಶಕ್ತಿಯುಳ್ಳ ಜನರು ತಮ್ಮ ಬುದ್ಧಿಸಾಮರ್ಥ್ಯ, ವ್ಯಾಮಾಣಿಕತನ, ಸ್ವಾಮಿಭಕ್ತಿ ಮುಂತಾದವುಗಳ ಯೋಗದಿಂದ ಮುಂದೆಬಂದು ಇತಿಹಾಸ ಪ್ರಸಿದ್ಧರಾಗುವರು. ೧೯ನೇ ಶತಕದ ಆರಂಭದಲ್ಲಿ ಪ್ರಜಾಹಿತಚಿಂತಕರಾದ ಆಂಗ್ಲಪ್ರಭುಗಳ ಅಮಲು ಈ ದೇಶದಲ್ಲಿ ತುಸು ತುಸು ಕೂಡ್ರುತ್ತ ನಡೆದಿತ್ತು. ಆಗ್ಗೆ ಸ್ವಾಮಿನಿಷ್ಟರೂ, ರಾಜಕಾರ್ಯಧುರಂದರರೂ, ಬುದ್ಧಿವೈಭವ ಸಂಪನ್ನರೂ ಆದ ಅನೇಕ ಮಹಾಮಹಾ ಪುರುಷರು ಆಗಿಹೋದರು. ಅವರಲ್ಲಿ ಪೂರ್ಣಯ್ಯನು ಒಬ್ಬನಾಗಿರುವನು. ಅವನು ಬುದ್ಧಿಸಾಮರ್ಥ್ಯದಿಂದ ಪಾಶ್ಚಿಮಾತ್ಯ ಪ್ರಸಿದ್ಧ ರಾಜ್ಯಚಾಲಕರಾದ ರೋಜಬರಿ, ಗ್ಲಾಡ್ಡಸ್ಟನ್ನ ಮೊದಲಾದವರಿಗೂ, ಪೂರ್ವಾತ್ಯ ಧುರಂದರ ರಾಜ್ಯಕಾರಭಾರಿಗಳಾದ ವಿಠ್ಠಲ ಸುಂದರ, ಸಖಾರಾಮ ಬಾಪು, ಇವರೇ ಮುಂತಾದ ಮಹನೀಯರಿಗೂ, ಸರಿಯಾದವನೆಂದು ಹೇಳಿದರೆ ಅತ್ಯುಕ್ತಿಯಾಗದು. ಈತನು ಕರ್ನಾಟಕದವನು; ಕನ್ನಡ ಭಾಷಾಭಿಮಾನಿಯು; ಇದಲ್ಲದೆ ಕನ್ನಡ ಭಾಷೆಗೆ ತವರುಮನೆಯಾದ ಮೈಸೂರು ಸಂಸ್ಥಾನದ ಮುಖ್ಯ ಕಾರಭಾರಿಯಾಗಿ ಕರ್ನಾಟಕದ ಜನರ ಮೇಲೆ ಅನಂತಾನಂತ ಮಹದುಪಕಾರಗಳನ್ನು ಮಾಡಿರುವನು. ಈಂಥ ಪುರುಷಶ್ರೇಷ್ಠನ ಚರಿತ್ರೆಯನ್ನು ಇಲ್ಲಿಯವರೆಗೆ ಯಾರೂ ಬರೆಯಲಿಲ್ಲವೆಂಬದು ಅತ್ಯಂತ ಶೋಚನೀಯವಾದ ಸಂಗತಿಯಲ್ಲವೇ? ಈಗಾದರೂ ನಮಗೆ ಸಾಗ್ರಚರಿತ್ರೆಯನ್ನು ಬರೆಯುವದಕ್ಕೆ ಸಾಕಷ್ಟು ಸಾಧನಗಳು ದೊರೆತಿಲ್ಲ. ಆದರೂ "Some thing is better than nothing" "ನಾಸ್ತಿಗಿಂತ ಸ್ವಲ್ಪಾಸ್ತಿಯುತ್ತಮ" ಎಂಬಂತೆ ಉಪಲಬ್ಧವಾದ ಮಟ್ಟಿಗೆ ಆತನ ಸಂಕ್ಷಿಪ್ತ ಚರಿತ್ರೆಯನ್ನು ಬರೆದು ವಾಚಕವರ್ಗಕ್ಕೆ ವಿನೀತಿಭಾವದಿಂದ ಸಮರ್ಪಿಸುತ್ತೇವೆ. ಇಂಥ ಮಹಾತ್ಮರ ಸಾಗ್ರಚರಿತ್ರೆಯು

ಪ್ರಕಟವಾದ ದಿವಸವೇ ಕನ್ನಡಿಗರ ಸುದಿವಸವು. ಪೂರ್ಣಯ್ಯನು ಬ್ರಾಹ್ಮಣನು; ಈಗ ಮದ್ರಾಸ ಇಲಾಖೆಗೆ ಸೇರಿದ ಕೋಯಿಮತ್ತೂರು, ಅತನ ಮೂಲ ವಸತಿ ಸ್ಥಾನವು. ಅವನು ಕಾರಣಪರತ್ವದಿಂದ ಅದನ್ನು ಬಿಟ್ಟು ಶ್ರೀರಂಗಪಟ್ಟಣಕ್ಕೆ ಬಂದನು. ಅವನು ಬಡವನಾದುದರಿಂದ ಉಪಜೀವನ ಸಾಧನವನ್ನು ಹುಡುಕುವದೇ ಅವನ ಮುಖ್ಯ ಕೆಲಸವಾಗಿತ್ತು. ಅತ್ತಿತ್ತ ಸ್ವಲ್ಪ ಪ್ರಯತ್ನ ಮಾಡುವಷ್ಟರಲ್ಲಿ ಅನ್ನ ದಾನಿಶೆಟ್ಟಿಯೆಂಬ ಸಾಹುಕಾರನು ಸಿಕ್ಕನು; ಅವನಲ್ಲಿ ಪೂರ್ಣಯ್ಯನು ಮುತ್ಸದ್ದಿಯಾಗಿ ನಿಂತನು. ಅಲ್ಲಿ ಅವನಿಗೆ ತಿಂಗಳೊಂದಕ್ಕೆ ಎರಡು ವರಹ ವೇತನವು ಸಿಗುತಿತ್ತು. ಎರಡು ವರಹವೆಂದರೆ ಹೆಚ್ಚು ಕಡಿಮೆ ಈಗಿನ ೮ ರೂಪಾಯಿಗಳಿಗೆ ಸರಿಯು. ಅವನು ಲೆಖ್ಖಪತ್ರಗಳಲ್ಲಿ ಒಳ್ಳೇ ಕುಶಲನಿದ್ದನು. ತನಗೆ ಸ್ವಲ್ಪ ಸಂಬಳವು ಸಿಗುತ್ತಿದ್ದರೂ ಅವನು ಪ್ರಾಮಾಣಿಕತನವನ್ನು ಬಿಡದೆ ತನ್ನ ಕರ್ತವ್ಯಕರ್ಮವನ್ನು ಮಾಡುತ್ತ ತನ್ನ ಯಜಮಾನನ ವಿಶ್ವಾಸ ಪ್ರೇಮಗಳಿಗೆ ಪಾತ್ರನಾದನು. ಆಗ್ಗೆ ಮೈಸೂರ ಸಂಸ್ಥಾನದಲ್ಲಿ ಹೈದರನ ಕಾಲವು. ಅವನು ಮೊದಲು ಬಡ ಶಿಪಾಯಿಯಾಗಿದ್ದರೂ, ತನ್ನ ಕರ್ತೃತ್ವಶಕ್ತಿ, ಭುಜಪರಾಕ್ರಮಗಳ ಯೋಗದಿಂದ ಸ್ವಲ್ಪು ದಿವಸಗಳಲ್ಲಿ ತಾನೇ ಆ ಸಂಸ್ಥಾನದ ಒಡೆಯನಾಗಿದ್ದನು. ಪೂರ್ಣಯ್ಯನ ಬುದ್ಧಿಚಾತುರ್ಯ, ಕರ್ತವ್ಯ ತತ್ಪರತೆ, ಪ್ರಾಮಾಣಿಕತನ ಮುತ್ಸದ್ದಿತನ ಇವೆಲ್ಲವುಗಳ ಕೀರ್ತಿಯು ಹೈದರ ಅಲ್ಲಿಯ ಕಿವಿವರೆಗೆ ಹೋಗಲು, ಅವನು ಪೂರ್ಣಯ್ಯನನ್ನು ಕರೆಸಿ ಸನ್ಮಾನಮಾಡಿ ಅತನಿಗೆ ತನ್ನ ದರಬಾರದಲ್ಲಿ ಯೋಗ್ಯ ಉದ್ಯೋಗವನ್ನು ಕೊಟ್ಟನು. ಪೂರ್ಣಯ್ಯನು ಅಲ್ಲಿ ವಿಶ್ವಾಸದಿಂದಲೂ, ಪ್ರಾಮಾಣಿಕತನದಿಂದಲೂ, ವಿವೇಕದಿಂದಲೂ ತನ್ನೆ ಕೆಲಸವನ್ನು ಮಾಡುತ್ತ ಸ್ವಲ್ಪ ದಿವಸಗಳಲ್ಲಿ ಹೈದರನ ಸಂಪೂರ್ಣ ಪ್ರೀತಿಗೆ ಪಾತ್ರನಾದನು. ಹೈದರನು ಪೂರ್ಣಯ್ಯನನ್ನು ಯಾವಾಗಲೂ ಕರೆಸಿಕೊಂಡು ಅವನಿಗೆ ಅತ್ಯಂತ ವಿಶ್ವಾಸದ, ರಹಸ್ಯದ ಮತ್ತು ಮಹತ್ವದ ಕೆಲಸಗಳನ್ನು ಹೇಳುತ್ತಿದ್ದನು. ಅವನು ಅವುಗಳನ್ನು ಯಥಾಯೋಗ್ಯ ನೆರವೇರಿಸಿ ಪ್ರಭುಪ್ರೀತಿಯನ್ನು ಪಡೆಯುತ್ತಿದ್ದನು. ಅನ್ಯಮುತ್ಸದ್ದಿಗಳಿಂದಾಗದ ಕೆಲಸಗಳನ್ನು ಪೂರ್ಣಯ್ಯನು ತನ್ನ ಬುದ್ಧಿಕೌಶಲ್ಯ, ಕಾಲೋಚಿತ ವಿಚಾರ, ದೀರ್ಘಪರಿಶ್ರಮಗಳ ಪ್ರಭಾವದಿಂದ ಬಹು ಸುಲಭವಾಗಿ ಸ್ವಲ್ಪಕಾಲದಲ್ಲಿ ಜರುಗಿಸುತ್ತಿದ್ದನು. ಅವನ ಚಟುವಟಿಕೆ, ಕಾರ್ಯಕ್ರಮಗಳನ್ನು ಕಂಡು ಹೈದರನು ಹಿರಿಹಿರಿ ಹಿಗ್ಗುವನು. ಬರುಬರುತ್ತ ಪೂರ್ಣಯ್ಯನ ಯೋಗ್ಯತೆಯು ಹೆಚ್ಚಲು ಹೈದರನು ಅವನನ್ನು ದಪ್ತರ ಇಲಾಖಾ ಬಕ್ಷಿಯ ಉದ್ಯೋಗಕ್ಕೆ ನೇಮಿಸಿದನು. ಅಲ್ಲಿಂದ ಅವನು ಹೈದರನ ಅಂತ್ಯದ ವರೆಗೆ ಅದೇ ಕೆಲಸದ ಮೇಲೆ ಇದ್ದನು. ಈತನು ಉದ್ಯೋಗವನ್ನು ವಹಿಸಿದ ಮೊದಲ್ಗೊಂಡು ಹೈದರನ ಮರಣಾವಧಿ ಕಾರ್ಯಗಳನ್ನು ಅತ್ಯಂತ ತೃಪ್ತಿಕರವಾಗಿ ನೆರವೇರಿಸುತ್ತ, ಸತ್ಯಸಂಧನಾಗಿಯೂ, ಅವನ ಸಂಪೂರ್ಣ ವಿಶ್ವಾಸಕ್ಕೆ ಪಾತ್ರನಾಗಿಯೂ, ರಾಜಕಾರ್ಯ ಧುರಂಧರನಾಗಿಯೂ,

ಇದ್ದನು. ಹೈದರನು ಇಂಗ್ಲೀಷರೊಡನೆ ಯುದ್ಧದಲ್ಲಿ ತೊಡಗಿದಾಗ್ಗೆ ಅವನು ಕಾಲಿಗೆ ಅರಸುಹುಣ್ಣು ಆದ ನೆವದಿಂದ ನರಸಿಂಗರಾಯನ ಪೇಟೆಯಲ್ಲಿ ಸತ್ತನು. (೭ ದಿಶಂಬರ ೧೭೮೨ ಇಸವಿ). ಆಗ್ಗೆ ಟೀಪು ಪಾಣಿಯಾಣಿಯೆಂಬಲ್ಲಿದ್ದನು. ಅವೆರಡು ಸ್ಥಳಗಳ ನೆಡುವೆ ನೂರಾರು ಮೈಲು ಅಂತರವಿರುವ ಮೂಲಕ ಟೀಪೂಸುಲ್ತಾನನು ಹೊರಟು ಬರುವದು ಸುಲಭ ಸಾಧ್ಯವಿದ್ದಿಲ್ಲ. ಇದಲ್ಲದೆ ಹೈದರನ ದಂಡಿನ ಆಗಿನ ಸ್ಥಿತಿಯು ವಿಲಕ್ಷಣವಾಗಿತ್ತು. ಸರದಾರರಲ್ಲಿ ಒಕ್ಕಟ್ಟು ಇದ್ದಿಲ್ಲ. ಅವರಿಗೆ ತಮ್ಮ ಸುಲ್ತಾನನು ಸತ್ತ ಸುದ್ದಿಯು ಗೊತ್ತಾದರೆ ಅವರು ಪರಿಯುಚ್ಚಿದ ಹಾವಿನಂತೆ ಗೊಂದಲವೆಬ್ಬಿಸುವರೆಂತಲೂ, ಇಲ್ಲವೆ ಬಂಡಾಯ ಹೂಡುವರೆಂತಲೂ ಪೂರ್ಣಯ್ಯನಿಗೆ ಸಂಪೂರ್ಣ ಗೊತ್ತು ಇತ್ತು. ಹೀಗಾಗಲು ಕಾರಣವೇನಂದರೆ:— ಹೈದರನು ಮೈಸೂರ ಸಂಸ್ಥಾನಕ್ಕೆ ಯೋಗ್ಯ ವಾರಸದಾರನಲ್ಲ. ಅವನು ಅಲ್ಲಿಯ ಹಿಂದೂ ಅರಸನನ್ನು ಪಟ್ಟದಿಂದ ತಳ್ಳಿ ಅರಸೊತ್ತಿಗೆಯನ್ನು ಅಪಹರಿಸಿದ್ದನು. ಅದರಿಂದ ಸರದಾರರಲ್ಲಿ ಪರಸ್ಪರ ಮತ್ಸರವು ಮುಂಚಿನಿಂದ ಇದ್ದೇ ಇತ್ತು. ಅವರು ಹೈದರ ಅಲ್ಲಿಯನ್ನು ಹೊತ್ತುಸಾಧಿಸಿ ಪದಚ್ಯುತವಾಡುವ ಗುಪ್ತ ಮಸಲತ್ತು ನಡೆಸಿದ್ದರು. ಇದೆಲ್ಲ ಪೂರ್ಣಯ್ಯನಿಗೆ ಕರ್ಣೋಪಕರ್ಣ ತಿಳಿದಿತ್ತು. ಆಗ ಪೂರ್ಣಯ್ಯನು, ಕೃಷ್ಣರಾವ ತೋಷಿಖಾನೆ, ಶಾಮಯ್ಯಾ ಅಂಚೆ, ವೀರಸಾದಕ ಬಕ್ಷಿ ಇವರೇ ಮೊದಲಾದ ಪ್ರಮುಖಜನರನ್ನು ಕೂಡಿಸಿ, ಹೈದರನು ಸತ್ತ ಸುದ್ದಿಯನ್ನು ಹೊರಗೆಡವಿದರೆ ದಂಡಿನ ಕಟ್ಟು ಉಳಿಯಲಿಕ್ಕಿಲ್ಲವೆಂದು ಸೂಚಿಸಿ, ಸಾರಣಿ ಸವಾರನನ್ನು ಟೀಪುವಿನ ಬಳಿಗೆ ಕಳುಹಿ ಹೈದರನ ಪ್ರೇತವನ್ನು ಒಂದು ಸಂದುಕದಲ್ಲಿ ಸುಗಂಧ ದ್ರವ್ಯಗಳೊಂದಿಗೆ ಇಟ್ಟು ಅದಕ್ಕೆ ಮೋಹರು ಮಾಡಿ, ಅದನ್ನು ಕೋಲಾರಕ್ಕೆ ಗೌಪ್ಯದಿಂದ ಕಳಿಸಿ, ತಾನೊಬ್ಬನೇ ದಿನಾಲು ಹೈದರನ ಡೇರೆಗೆ ಹೋಗಿ ಅಪ್ಪಣೆ ಪಡೆದಂತೆ ಮಾಡಿ ರಾಜ್ಯಕಾರಭಾರವನ್ನು ಸಾಗಿಸುತ್ತ ಅವನು ಸತ್ತ ಸುದ್ದಿಯನ್ನು ದಂಡಿನ ಜನರಿಗೆ ತಿಳಿಯಗೊಡಲಿಲ್ಲ. * ಹೀಗೆ ಮಾಡುತ್ತ ಪೂರ್ಣಯ್ಯನು ದಂಡಿನೊಡನೆ ಶ್ರೀರಂಗಪಟ್ಟಣದ ಹಾದೀ ಹಿಡಿದನು. ಈ ಮೇರೆಗೆ ೨೧ ದಿವಸಗಳ ವರೆಗೆ ಪ್ರವಾಸ ಕ್ರಮವು ನಡೆದಿತ್ತು. ಅಷ್ಟರಲ್ಲಿ ಟೀಪು ಸುಲ್ತಾನನು ಪಾಣಿಯಾಣಿಯಿಂದ ಬಂದು ಕೂಡಿಕೊಂಡನು. ಆಗ ಪೂರ್ಣಯ್ಯನು ಹೈದರನು ಸತ್ತ ಸುದ್ದಿಯನ್ನು ಪ್ರಕಟಮಾಡಿ ಟೀಪುವಿನನ್ನು ಗಾದಿಯ ಮೇಲೆ ಕೂಡ್ರಿಸಿ ಆತನೇ ಮೈಸೂರ ರಾಜ್ಯದ ಸುಲ್ತಾನನೆಂದು ಪ್ರಸಿದ್ಧಗೊಳಿಸಿ ಸ್ವಾಮಿಭಕ್ತಿಯ ಪರಮಾವಧಿಯನ್ನು ತೋರಿಸಿ

ಟೀಪ್ಪಃ— ಆದರೂ ಮಹ್ಮದ ಅಮೀರನೆಂಬುವನೊಬ್ಬ ೪೦೦೦ ಸಾವಿರ ಕುದುರೆಯ ಸವಾರರ ಮೇಲಾಧಿಕಾರಿಯು ಈ ಗುಪ್ತ ಸುದ್ದಿಯನ್ನು ತಿಳಿಕೊಂಡು ಹೈದರನ ಎರಡನೆಯ ಮಗನಾದ ಕರೀಮ ಸಾಹೇಬನಿಗೆ ಪಟ್ಟಗಟ್ಟಬೇಕೆಂದು ವ್ಯರ್ಥ ಪ್ರಯತ್ನ ಮಾಡಿ ಕಡೆಗೆ ಸಾವನದುರ್ಗದಲ್ಲಿ ನೆರೆಯಾಳಾದನು.

ಕೃತಾರ್ಥನಾದನು. ಮುಂದೆ ಯಾವ ಗೊಂದಲವು ಬಾರದೆ ರಾಜ್ಯದಾಡಳಿತೆಯು ಸಾಗಹತ್ತಿತು. ಮೇಲೆ ಹೇಳಿದಂತೆ ದಂಡಿನ ಸ್ಥಿತಿಯು ವಿಲಕ್ಷಣವಿದ್ದು ಬೊಕ್ಕಸದಲ್ಲಿ ೩ ಕೋಟಿ ರೂಪಾಯಿ ರೋಕ್ಕ ಇದ್ದರೂ ಪೂರ್ಣಯ್ಯನು ಯಾವ ಮನೋವಿಕಾರ ಗಳಿಗೂ ಅನುವುಗೊಡದೆ ಕೇವಲ ಕರ್ತವ್ಯಕರ್ಮದ ಮೇಲೆ ದೃಷ್ಟಿಯನ್ನಿಟ್ಟು ರಾಜನಿಷ್ಠೆಯಿಂದ ನಡೆದು ಆ ದುರ್ಧರ ಪ್ರಸಂಗದೊಳಗಿಂದ ಪಾರುಬಿದ್ದನು. ಈ ಬಗ್ಗೆ ಇತಿಹಾಸಕಾರರು ಅತನನ್ನು ಬಗೆಬಗೆಯಿಂದ ಹೊಗಳಿರುತ್ತಾರೆ. ಅಗ್ಗೆ ದಂಡಿನಲ್ಲಿ ಒಡಕು ಹುಟ್ಟಿಸಿ ಸರದಾರರ ಸಹಾಯದಿಂದ ಮೈಸೂರಿನ ಅರಸೊತ್ತಿಗೆ ಯನ್ನು ತನ್ನ ಮನಬಂದ ಪ್ರಕಾರ ವ್ಯವಸ್ಥೆ ಮಾಡುವದೂ, ಇಲ್ಲವೆ ಭಂಡಾರದಲ್ಲಿ ಇದ್ದ ದ್ರವ್ಯಸಂಚಯವನ್ನು ಎತ್ತಿ ಹಾಕುವದೂ, ಇಲ್ಲವೆ ಎರಡನೆಯ ತರದ ಉಪ ದ್ವ್ಯಾಪವನ್ನು ಎಬ್ಬಿಸಿ ಸ್ವಾರ್ಥವನ್ನು ಸಾಧಿಸುವದೂ ಪೂರ್ಣಯ್ಯನ ಕೈಯಲ್ಲಿ ಇದ್ದೇ ಇತ್ತು. ಆದರೆ ಅತನು ಅಂಥ ಕುಹಕ ವಿಚಾರಗಳಿಗೆ ಆಸ್ಪದ ಕೊಡದೆ ಹೈದ ರನ ಮರಣದಿಂದ ಉಂಟಾದ ರಾಜ್ಯಕ್ರಾಂತಿಯನ್ನು ತನ್ನ ಬುದ್ಧಿಚಾತುರ್ಯ, ಸ್ವಾಮಿ ಭಕ್ತಿ, ಮನೋನಿಗ್ರಹ, ಧೃಡನಿಶ್ಚಯ, ಕಾಲೋಚಿತಧೈರ್ಯ, ಮುಂತಾದವುಗಳ ಯೋಗದಿಂದ ಶಾಂತಗೊಳಿಸಿದನು. ಆ ಬಿಕ್ಕಟ್ಟಿನ ಪ್ರಸಂಗದಲ್ಲಿ ಪೂರ್ಣಯ್ಯನು ಹೈದರನ ಅಭಿಮಾನವನ್ನು ಹಿಡಿಯದಿದ್ದರೆ ಟೀಪುವಿಗೆ ಮೈಸೂರ ಒಡೆತನವು ಸಿಗುತ್ತಿದ್ದಿಲ್ಲ; ಇಷ್ಟೇ ಅಲ್ಲ, ಆ ಸಂಸ್ಥಾನದ ಸದ್ಯದ ಇತಿಹಾಸವು ಕೂಡ ಬೇರೆ ತರದ್ದಾಗುತಿತ್ತು.

ಪೂರ್ಣಯ್ಯನು ಹೈದರ ಅಲ್ಲಿಯ ಕಾಲದಲ್ಲಿ ಅನೇಕಾನೇಕ ಮಹತ್ಕೃತ್ಯಗ ಳನ್ನು ಮಾಡಿ ಒಡೆಯನ ಒಲುಮೆಯನ್ನು ಗಳಿಸಿಕೊಂಡು ಜನಮೆಚ್ಚಿಕೆಯನ್ನು ಪಡೆ ದನು; ಮುಂದೆ ಹೈದರನು ಮರಣಹೊಂದಿದ ಒಳಿಕ ಟೀಪೂ ಸುಲ್ತಾನನಿಗೆ ಕೇವಲ ಪೂರ್ಣಯ್ಯನ ಸಹಾಯದಿಂದಲೇ ಅರಸೊತ್ತಿಗೆಯು ಅನಾಯಾಸವಾಗಿ ಸಿಕ್ಕಿತು. ಇದರ ಮೇಲಿಂದ ನೋಡಲ್ಕು ಅತನ ಕರ್ತೃತ್ವಶಕ್ತಿ. ಸಮಯೋಚಿತಯುಕ್ತಿ, ರಾಜ ಭಕ್ತಿ ಮುಂತಾದವುಗಳು ಲೋಕೋತ್ತರವಾದವುಗಳೆಂದು ಪ್ರಾಂಜಲಬುದ್ಧಿಯಿಂದ ಒಪ್ಪಬೇಕಾಗುತ್ತದೆ.

ಮುಂದೆ ಇದೇ ಪೂರ್ಣಯ್ಯನು ಆಂಗ್ಲ ಸಾರ್ವಭೌಮರ ವಿಶಾಲ ಛತ್ರದ ಮಹದಾಶ್ರಯದಲ್ಲಿ ಹೊಂದಿ ಅಲ್ಲಿಯೂ ರಾಜಸನ್ಮಾನ, ಜನಮೆಚ್ಚಿಕೆಗಳನ್ನು ಪಡೆದು ದಿಗಂತ ಕೀರ್ತಿಯನ್ನು ಹೊಂದಿದನು. ಅದರ ಸಂಕ್ಷಿಪ್ತ ವರ್ಣನೆಯನ್ನು ಕೆಳಗೆ ಕೊಟ್ಟಿರುವೆವು.

ಇ. ಸ. ೧೭೯೨ ರಲ್ಲಿ ಟೀಪುಸುಲ್ತಾನನು ಇಂಗ್ಲೀಷ, ಮರಾಠಾ, ನಿಜಾಮರೊ ಡನೆ ಶಸ್ತ್ರ ಹಿಡಿದು ಸೋತು ತನ್ನ ಅರ್ಧರಾಜ್ಯವನ್ನು ಅವರಿಗೆ ಕೊಟ್ಟು ಬಡಂಬಡಿ

ಕೆಯನ್ನು ಮಾಡಿಕೊಂಡನು. ಆದರೆ ಆತನು ಮಹಾಕಪಟಿಯು. ಇಂಗ್ಲೀಷರ ಹೆಚ್ಚಳವನ್ನು ಅವನು ಸೈರಿಸುತ್ತಿದ್ದಿಲ್ಲ. ಅವರನ್ನು ಈ ದೇಶದಿಂದ ಹೊರಗೆ ಹಾಕ ಬೇಕೆಂಬ ಹುಚ್ಚು ಅವನ ಮನಸ್ಸಿನಲ್ಲಿ ಸೇರಿತು. ಈ ದುಷ್ಟ ವಿಚಾರವು ಪ್ರಬಲವಾಗ ಹತ್ತಿದ್ದರಿಂದ ಆತನಿಗೆ ಊಟ, ನಿದ್ರೆಗಳು ಸಹ ಬೇಸರವಾದವು. ಅವನಿಗೆ ಇಂಗ್ಲೀಷರ ದ್ವೇಷವೆಂಬ ಹುಚ್ಚು ಹಿಡಿದುದರಿಂದ ಪೂರ್ಣಯ್ಯನಂಥಹ ಜಾಣರೂ, ಸುವಿಚಾರಿ ಗಳೂ, ಯಥಾರ್ಥಜ್ಞರೂ ಆದ ಮಂತ್ರಿಗಳು ಬೇಡಾದರು. ಆದ್ದರಿಂದ ಅವನು ಪೂರ್ಣಯ್ಯನ ಸದುಪದೇಶಗಳಿಗೆ ಕಿವಿಗೊಡದೆ ಕೀಳುಜನರ ಸಂಗತಿಯನ್ನು ಹಿಡಿದು ಕೆಟ್ಟನು. ಇಂಗ್ಲೀಷರ ನಾಶಾರ್ಥ ಟೀಪುಸುಲ್ತಾನನು ಫ್ರೆಂಚರೊಡನೆ ಗೌಪ್ಯವಾಗಿ ಒಪ್ಪಂದ ಮಾಡಿಕೊಂಡು ಪುನಃ ಇಂಗ್ಲೀಷರೊಡನೆ ಶಸ್ತ್ರಹಿಡಿದನು. ಉಭಯದಳದವರು ಯುದ್ಧ ಸಿದ್ಧತೆಯನ್ನು ಮಾಡಿಕೊಂಡು ಕಾಳಗಕ್ಕೆ ಅಣಿಯಾ ದರು. ಇಂಗ್ಲೀಷ, ನಿಜಾಮರ ಸರದಾರರು ಶ್ರೀರಂಗಪಟ್ಟಣದ ಮೇಲೆ ಸಾಗಿಬಂದು ಇ. ಸ. ೧೭೯೯ ರಲ್ಲಿ ಅದಕ್ಕೆ ಮುತ್ತಿಗೆ ಹಾಕಿದರು. ಎರಡೂ ಕಡೆಯ ಜನರು ಜೀವದ ಹಂಗುದೊರೆದು ಕಾದಿದರು. ಸುಲ್ತಾನನ ಜನರು ಪೂರಾ ಪರಾಭವಹೊಂದಿ ದರು. ಟೀಪು ನೈರಿಗಳೊಡನೆ ಪರಾಕ್ರಮದಿಂದ ಹೋರಾಡಿ ಕಡೆಗೆ ಸಮರಭೂಮಿ ಯಲ್ಲಿ ಬಿದ್ದು ಹತನಾದನು ಈ ಪ್ರಕಾರ 'ದೀಪಪತಂಗ' ನ್ಯಾಯದಂತೆ ಟೀಪುವಿನ ಹಾಡು ಮುಗಿದ ಬಳಿಕ, ಎಲ್ಲ ದೇಶಕೋಶವು ಹಗೆಗಳ ಕೈಸೇರಿತು. ಆಗ ಇಂಗ್ಲೀ ಷರು ಕಾನಡಾ ಕೋಯಿಮತ್ತೂರ, ಪಾಯನಾಡ ಪ್ರಾಂತಗಳನ್ನು ತಮಗೆ ಇಟ್ಟು ಕೊಂಡು ನಿಜಾಮನಿಗೆ ಆತನ ರಾಜ್ಯದ ಸರಹದ್ದಿಗಿರುವ ಪ್ರದೇಶಗಳನ್ನು ಕೊಟ್ಟು, ಮಿಕ್ಕ ಸ್ವಲ್ಪ ರಾಜ್ಯವನ್ನು ಮೈಸೂರ ಸಂಸ್ಥಾನದ ಮೂಲ ಹಿಂದೂ ಅರಸರ ವಂಶ ಜನಾದ ಒಬ್ಬ ಹುಡುಗನಿಗೆ ಕೊಟ್ಟು ಆತನಿಗೆ ಪಟ್ಟಗಟ್ಟಿದರು. ಇದರ ಮೇಲಿಂದ ಇಂಗ್ಲೀಷರ ಉದಾರಬುದ್ಧಿ, ರಾಜಕುಶಲತೆಗಳು ವ್ಯಕ್ತವಾಗುವವು. ಹೀಗೆ ಮೈಸೂರ ಪ್ರಾಂತದ ಹಿಂದೂರಾಜ್ಯವು ಉದಾರರಾದ ಇಂಗ್ಲೀಷರ ವರದ ಹಸ್ತದಿಂದ ಪುನ ರುಜ್ಜೀವನವಾಯಿತು. ಇಂಗ್ಲೀಷರು ಪಟ್ಟಕ್ಕೆ ಕೂಡ್ರಿಸಿದ ಹುಡುಗನ ಹೆಸರು ಕೃಷ್ಣರಾವ ಯದುವೀರನು. ಆತನ ತಂದೆಯ ಹೆಸರು ಚಾಮರಾಜನು. ಆಗ್ಗೆ ಅವನು ಐದು ವರುಷದವನಿದ್ದನು.

ಈ ಪ್ರಕಾರ ಹಿಂದೂರಾಜ್ಯದ ಜೀರ್ಣೋದ್ಧಾರವಾಗಿ ಕೃಷ್ಣರಾಜ ಯದುವೀ ರನು ಮೈಸೂರ ಸಂಸ್ಥಾನದ ಒಡೆಯನಾದನು. ಆತನು ಅಲ್ಪವಯಸ್ಕನಿದ್ದು ಆತನಲ್ಲಿ ರಾಜ್ಯಕಾರಭಾರವನ್ನು ಸಾಗಿಸುವ ಸಾಮರ್ಥ್ಯವಿರದ್ದರಿಂದ ಮೈಸೂರು ರಾಜ್ಯದ ಸರ್ವಭಾರವು ಇಂಗ್ಲೀಷರ ಮೇಲೆಯೇ ಬಿತ್ತು. ಆಗ ಅವರು "ಯಾರಿಗೆ ಮಂತ್ರಿ ಪದವನ್ನು ಕೊಡಬೇಕು." ಎಂದು ವಿಚಾರ ಮಾಡತೊಡಗಿದರು; ಆಗಿನ ಕಾಲಕ್ಕೆ

ಬುದ್ಧಿವೈಭವ ಸಂಪನ್ನರಾದ ಜನರು ಸಿಗುವದು ದುರ್ಲಭವೆನಿಸಿತು. ಯಾಕಂದರೆ ದೇಶದಲ್ಲಿ ಅಗಾಗ್ಗೆ ಕೊಲೆಸುಲಿಗೆಗಳು ನಡೆಯುತ್ತಿದ್ದದರಿಂದ ಈಗಿನಂತೆ ಶಾಂತತೆಯು ಇದ್ದಿಲ್ಲ; ಆದರಿಂದ ಶಿಕ್ಷಣಪ್ರಸಾರಕ್ಕೆ ಅಸ್ಪದವಿದ್ದಿಲ್ಲ. ಕಲಿತ ಜನರೇ ತುಸು. ಎಲ್ಲರೂ ಹುಂಬರು. ಎದೆಯನ್ನು ಸೀಳಿ ನೋಡಿದರೂ ಆಗಿನ ಜನರಲ್ಲಿ ಎರಡು ಅಕ್ಷರಗಳು ಹೊರಡುತ್ತಿದ್ದಿಲ್ಲ. ಇದು ಅಲ್ಲದೆ ಎಲ್ಲವೂ ಹೊಸಬಿಸಿ ಇದ್ದು ಇಂಗ್ಲೀಷರಿಗೆ ಆ ನಾಡಿನ ಪೂರ್ಣಪರಿಚಯವಿದ್ದಿಲ್ಲ. ಹೀಗಾಗಿ ಆಗ್ಗೆ "ಏನು ವ್ಯವಸ್ಥೆಯನ್ನು ಮಾಡಬೇಕು; ಯಾರನ್ನು ಪ್ರಧಾನಪಟ್ಟಕ್ಕೆ ಕೂಡ್ರಿಸಬೇಕು; ದೇಶದಲ್ಲಿ ಸ್ವಾಸ್ಥತೆಯು ಹ್ಯಾಗೆ ನೆಲಗೊಳ್ಳುವದು." ಎಂದು ಇಂಗ್ಲೀಷ ರಾಜ್ಯಚಾಲಕರು ಚಿಂತಿಸಿದರು. ಆಗ್ಗೆ ಆ ಭಾಗದ ಇಂಗ್ಲೀಷ ಕಮಿಶನರನು ಜನರಲ್ ವೆಲಸ್ಲಿ (ಇವನೇ ಮುಂದೆ ಡ್ಯೂಕ ಆಫ ವೆಲಿಂಗಟನ್ನನೆಂದು ಹೆಸರಾದನು.) ಯು ಇದ್ದನು. ಇದು ಅಲ್ಲದೆ ಅದೇ ಹೊಸದಾಗಿ ರಾಜ್ಯಕ್ರಾಂತಿಯು ಹುಟ್ಟಿದ್ದರಿಂದ "ಯಾವ ಮನುಷ್ಯನು ಯಾರ ಪಕ್ಷದವನು? ಯಾವನ ರಾಜನಿಷ್ಠೆಯು ಎಷ್ಟರ ಮಟ್ಟಿಗಿರುವದು? ಹೊಸದಾಗಿ ಅರಸನಾದ ಕೃಷ್ಣರಾಜ ಯದುವೀರನ ಅಭಿಮಾನವು ಜನರಲ್ಲಿ ಅದೆಯೋ ಇಲ್ಲವೋ?" ಇವೇ ಮೊದಲಾದ ಸಂಗತಿಗಳನ್ನು ಕಂಡು ಹಿಡಿಯುವದು ಆ ವೆಲ್ಲಸ್ಲಿಗೆ ಕಡುಕಷ್ಟವೆನಿಸಿತು. ಹೀಗೆ ಅತನು ಗೂಢವಿಚಾರದಲ್ಲಿ ಬಿದ್ದು ನಾಲ್ಕೂಕಡೆಯಿಂದ ವಿಹಿತಾವಿಹಿತ ವಿಚಾರಮಾಡಿ ನೋಡಲು, ಪೂರ್ಣಯ್ಯನು ಮೈಸೂರ ರಾಜ್ಯಶಕಟದ ಸಾರಥಿಯಾಗಲು ಸಮರ್ಥನೆಂತಲೂ, ಅತನ ಹೊರತು ಮಿಕ್ಕವರು ಯೋಗ್ಯರಲ್ಲವೆಂತಲೂ ಅತನಿಗೆ ತಿಳಿದುಬಂತು. ಅತನ ಈ ಅಭಿಪ್ರಾಯವನ್ನು ಉಳಿದ ಇಂಗ್ಲೀಷ ಅಧಿಕಾರಸ್ಥರು ಪುಷ್ಟೀಕರಿಸಿದರು.

ವಾಚಕರೇ, ವಾಸ್ತವಿಕ ತಿಳಿದು ನೋಡಿದರೆ, ಹೈದರನು ಮೈಸೂರ ಹಿಂದೂ ಅರಸನನ್ನು ಪಟ್ಟದಿಂದ ತಳ್ಳಿ ತಾನೇ ರಾಜನಾಗಿ ತಾನೂ ತನ್ನ ಮಗನಾದ ಟೀಪುಸುಲ್ತಾನನೂ ಬಲ್ಲ ರಾಜ್ಯವಾಳಿದರು. ಅವರಿಬ್ಬರು ಅಲ್ಲಿಯ ಅರಸನನ್ನೂ ಅವರ ಬಳಗದವರನ್ನೂ ಪರಿಪರಿಯಿಂದ ಪೀಡಿಸಿದ್ದರು. ಪೂರ್ಣಯ್ಯನು ಆ ತಂದೆ ಮಕ್ಕಳ ಆಶ್ರಯದಿಂದ ಬೆಳಕಿಗೆ ಬಂದು ಅವರೊಡನೆ ರಾಜನಿಷ್ಠೆಯಿಂದ ನಡಕೊಂಡಿದ್ದನು; ಈಗ ಟೀಪುಸುಲ್ತಾನನ ಇತಿಶ್ರೀಯಾಗಿ ಮೈಸೂರಿನ ರಾಜ್ಯಪದವು ಮತ್ತೆ ಮೂಲ ಹಿಂದೂ ರಾಜವಂಶಜನಾದ ಯದುವೀರ ಕೃಷ್ಣರಾಯನ ಕೈಸೇರಿತ್ತು. ಆದರಿಂದ ಆ ಕಾಲಕ್ಕೆ "ಪೂರ್ಣಯ್ಯನ ಒಲವು ಯಾರಕಡೆಗೆ ಇರಬಹುದು" ಎಂಬದನ್ನು ನಿರ್ಧರಿಸುವದು ಬಹು ದುಸ್ತರವಾಗಿತ್ತು. ಆದರೆ ನಾರಾನಾರ ವಿಚಾರ ಮಾಡಿ ನೋಡಲು, "ಪೂರ್ಣಯ್ಯನು ಪಕ್ಷಾಭಿಮಾನಿಯುಲ್ಲ, ಅತನು ಸತ್ಯಾಭಿಮಾನಿಯು; ಹಿಂದೂ ರಾಜ್ಯದ ಅಭಿಮಾನವು ಅತನಲ್ಲಿ ಸಂಪೂರ್ಣವುಂಟು; ಅವನು ವಿಶ್ವಾಸಿಕ ಸೇವಕನು." ಎಂದು ಮನವರಿಕೆಯಾಯಿತು ಆದರಿಂದ ಆಗಿನ ಇಂಗ್ಲೀಷ ಅಧಿ

ಕಾರಿಗಳು ಸರ್ವಾಧಿಪತಿಯ ಸಮ್ಮತಿಯಿಂದ ಬಾಲರಾಜನಾದ ಶ್ರೀಕೃಷ್ಣರಾಜ ಯದುವೀರನ ಮುಖ್ಯ ಮಂತ್ರಿಪ್ರಭುತ್ವವನ್ನು ಪೂರ್ಣಯ್ಯನಿಗೊಪ್ಪಿಸಿ ಕೃತಾರ್ಥರಾದರು.

ಆಗಿನ ದೇಶ-ಕಾಲ-ಸ್ಥಿತಿಗಳನ್ನು ಪರ್ಯಾಲೋಚಿಸಿದರೆ, ಪೂರ್ಣಯ್ಯನಂಥ ಪುರುಷಶ್ರೇಷ್ಠನಿಗೆ ದಿವಾಣಗಿರಿಯನ್ನು ಕೊಟ್ಟದ್ದು ವಿಹಿತವೇ ಸರಿ. ಯಾಕಂದರೆ ಆಗ್ಗೆ ಶಿಕ್ಷಣ-ಸೌಕರ್ಯವಿರದಿದ್ದರೂ ಆತನು ಸ್ವಂತಪರಿಶ್ರಮದಿಂದ ಕನ್ನಡ, ಪಾರಸಿ, ಉರ್ದು, ಮರಾಠಾ ಭಾಷೆಗಳಲ್ಲಿ ತಕ್ಕಷ್ಟು ಪಾಂಡಿತ್ಯವನ್ನು ಹೊಂದಿದ್ದನು. ಅದರೆ ಆತನಿಗೆ ದೊರೆತ ಅನುಭವವು ಮುಸನ್ಮಾನರ ಕಾಲಕೀರ್ದಿಯಲ್ಲಿ ನಡಿಯುತ್ತಿದ್ದ ಹುಂಬ ರಾಜ್ಯದಾಡಳತೆಯ ಸಾರವೆಂದರೂ ಅಡ್ಡಿ ಇಲ್ಲ. ಇಂಗ್ಲೀಷರ ಪರಿಚಯವಂತೂ ಮೂಲತ: ಇದ್ದಿಲ್ಲ. ಅಂದಬಳಿಕ ಇಂಗ್ಲೀಷರ ಜಾಣತನದ ರಾಜ್ಯಕಾರಭಾರದ ಅಭಿರುಚಿಯು ಅಲ್ಲಿಯವರೆಗೆ ಪೂರ್ಣಯ್ಯನಿಗೆ ಇದ್ದಿಲ್ಲವೆಂಬದು ಒಡೆದು ಕಾಣುತ್ತದೆ. ಅದರೆ ಮುಂದೆ ಬರಬರುತ್ತ ಪೂರ್ಣಯ್ಯನ ರಾಜ್ಯಕಾರಭಾರ ಕ್ರಮವು ಇಂಗ್ಲೀಷ ಅಧಿಕಾರಸ್ಥರ ಮನಸ್ಸಿಗೆ ಬಂದು ಅವರಲ್ಲಿ ಆತನ ವಿಷಯವಾಗಿ ಆದರಬುದ್ಧಿಯು ಉತ್ಪನ್ನವಾಯಿತು. ಆತನ ಪ್ರತಿನಿಧಿಪ್ರಭುತ್ವದ ಇತಿಹಾಸವು ಸ್ವಲ್ಪಮಟ್ಟಿಗೆ ದೊರೆತದರಿಂದ ಅದನ್ನೇ ಇಲ್ಲಿ ವರ್ಣಿಸುವೆವು.

ಶ್ರೀಕೃಷ್ಣರಾಜನ ಬಾಲ್ಯವು ಕಳೆಯುವ ವರೆಗೆ ಪೂರ್ಣಯ್ಯನೇ ಮುಖ್ಯ ದಿವಾಣನಾಗಿದ್ದನು. ಇಂಗ್ಲೀಷ ಮೇಲಾಧಿಕಾರಿಗಳು ಮೇಲ್ವಿಚಾರಣೆಯನ್ನೇ ಮಾಡುತ್ತಿದ್ದರು. ದಿವಾಣ ಪೂರ್ಣಯ್ಯನಿಗೆ ಮೈಸೂರ ದೇಶದ ಜನರ ಆಚಾರ-ವಿಚಾರಗಳು ಚನ್ನಾಗಿ ಮುಂದಟಾಗಿದ್ದವು; ಜನರ ಯೋಗ್ಯತೆಯನ್ನು ಕಂಡು ಹಿಡಿಯುವಲ್ಲಿ ಆತನು ಕಡು ಕುಶಲನು; ಕಾಲೋಚಿತ ಉಪಾಯಗಳನ್ನು ಕೈಕೊಂಡು ದೇಶದ ಹಿತವನ್ನು ಸಾಧಿಸುವದರಲ್ಲಿ ಆತನು ಒಳ್ಳೇ ನಿಪುಣನಾಗಿದ್ದನು. ಅಲ್ಲಿಯ ಜನರು ಇಂಥ ಮಹಾನುಭಾವರಿಗೆ ಮಂತ್ರಿತ್ವವಾದ್ದು ತಮ್ಮ ದೇಶದ ಪುಣ್ಯೋದಯವೆಂದು ಅನ್ನಹತ್ತಿದರು. ಹೀಗೆ ಅವನು ಜನಮೆಚ್ಚಿಕೆಯನ್ನು ಹೊಂದಿ ೧೮೧೩ನೇ ಇಸ್ವಿಯ ವರೆಗೆ ಪ್ರತಿನಿಧಿಯಾಗಿದ್ದು ರಾಜ್ಯದಲ್ಲಿ ಅನೇಕ ತಿದ್ದುಪಾಡುಗಳನ್ನು ಮಾಡಿ ಪ್ರಜೆಗಳಿಗೆ ನಾನಾವಿಧದಲ್ಲಿ ಸೌಖ್ಯವನ್ನು ಕಲ್ಪಿಸಿದನು.

ಪೂರ್ಣಯ್ಯನು ಅಧಿಕಾರವನ್ನು ವಹಿಸಿದ ಬಳಿಕ ಧೊಂಡೋಜಿವಾಘನೆಂಬ ಪುಂಡನು ಕೊಲೆಸುಲಗೆಗಳನ್ನು ಮಾಡಹತ್ತಿದನು. ಈತನನ್ನು ಟೀಪು ಸೆರೆಮನೆಯಲ್ಲಿಟ್ಟಿದ್ದನು. ಇಂಗ್ಲೀಷರು ಶ್ರೀರಂಗಪಟ್ಟಣವನ್ನು ಸ್ವಾಧೀನ ಮಾಡಿಕೊಂಡ ದಿವಸ ಅವರು ಅಲ್ಲಿಯ ಸೆರೆಯಾಳುಗಳ ದೀನ ದೆಶೆಯನ್ನು ಕಂಡು ಕೆಲವರನ್ನು ಬಿಡುಗಡೆ ಮಾಡಿದರು. ಅವರೊಳಗೆ ಈ ಪುಂಡನೂ ಇದ್ದನು. ಅವನ ಉರುವಣೆಗಿಯು ಹೆಚ್ಚಾ

ಗಲು ಪೂರ್ಣಯ್ಯನು ಇಂಗ್ಲೀಷರ ಒಂದು ಪಲಟಣವನ್ನು ಕಳಿಸಲು ಆ ಪುಂಡ ನು ಅದನ್ನು ಎದುರಿಸಿ ಸೋತನು. ಕಡೆಗೆ ಅವನು ಮೈಸೂರ ಎಲ್ಲೆಯನ್ನು ಬಿಟ್ಟು ಕರ್ನಾಟಕವನ್ನು ಹೊಕ್ಕನು. ಅಲ್ಲಿ ಅವನು ಪೇಶವೆಯರ ಪ್ರಖ್ಯಾತ ಬ್ರಾಹ್ಮಣ ಸರದಾರನಾದ ಬಾಪು ಗೋಖಲೆಯೊಡನೆ ಕಾದಿ ಮಡಿದನು. ಇಷ್ಟರಲ್ಲಿ ಐಗೂರ ಪಾಳಯಗಾರನಾದ ವೆಂಕಟಾದ್ರಿ ನಾಯಕನು ಹೈದರ ಟೀಪೂಸುಲ್ತಾನರ ಆಳಿಕೆ ಯಲ್ಲಿ ಕಪ್ಪಕಾಣಿಗೆಗಳನ್ನು ಸಲ್ಲಿಸುತ್ತಿದ್ದರೂ, ಟೀಪೂವಿನ ತರುವಾಯ ಸ್ವತಂತ್ರ ನಾಗಬೇಕೆಂದು ದಂಡುಕಟ್ಟಿ ಬಂಡಾಯ ಹೂಡಿದನು. ಅವನು ಯದುವೀರ ಕೃಷ್ಣರಾಜನ ಪ್ರಭುತ್ವವನ್ನು ಮನ್ನಿಸಲಿಲ್ಲ. ಅವನು ಸ್ವತಂತ್ರನಾಗಬೇಕೆಂದು ಮಾ ಡಿದ ಪ್ರಯತ್ನಗಳು ಸಫಲವಾಗಲಿಲ್ಲ. ಕಡೆಗೆ ಅವನು ಜನರಲ್ಲಿ ವೆಲ್ಲಸ್ಲಿಯ ಕೈಗೆ ಸಿಕ್ಕು ಸೆರೆಯಾಳಾದನು. ಬಳಿಕ ಪೂರ್ಣಯ್ಯನು ತುಂಟನೂ, ಸ್ವಾಮಿಗೆ ಕೇಡುಬಗೆದ ವನೂ ಆದ ವೆಂಕಟಾದ್ರಿ ನಾಯಕನನ್ನು ಒಂದು ಗಿಡಕ್ಕೆ ನೇಣುಹಾಕಿಸಿ ಕೊಲ್ಲಿ ಸಿದನು; ಮತ್ತು ಐಗೂರ ಸೀಮೆಯನ್ನು ಮೈಸೂರ ರಾಜ್ಯಕ್ಕೆ ಸೇರಿಸಿಕೊಂಡನು.

ಹೀಗೆ ಅನೇಕ ಪಾಳಯಗಾರರು ಎದ್ದುಕೂತು ಸ್ವತಂತ್ರರಾಗುವ ಎತ್ತುಗ ಡೆಯಲ್ಲಿದ್ದರು. ಅವರು ಕೊಲೆಸುಲಿಗೆಗಳನ್ನು ಪ್ರಾರಂಭಿಸಿದರು; ದೇಶದಲ್ಲಿ ಬಂಡಾ ಯದ ಲಕ್ಷಣಗಳು ತೋರಿದವು; ಈ ಪುಂಡುಗಾರರ ಹಾವಳಿಯಿಂದ ಜನರು ಬೇಸತ್ತರು. ಇದೆಲ್ಲವನ್ನು ಕಂಡು ಪೂರ್ಣಯ್ಯನು ಬಹಳ ಯುಕ್ತಿಯಿಂದ ಆ ಜನರ ತುಂಟುತನವನ್ನು ಹೋಗಲಾಡಿಸಿ ದೇಶದಲ್ಲಿ ಶಾಂತತೆಯನ್ನು ನೆಲಗೊಳಿಸಿದನು.

ಮೊಟ್ಟಮೊದಲು ಆತನು ರೈತರ ಹಿತಚಿಂತನೆಯನ್ನು ಮಾಡಲೆಳಸಿ, ಅಲ್ಲಿಯ ವರೆಗೆ ಅವರ ಕಡೆಯಿಂದ ಬರತಕ್ಕ ಕಂದಾಯದ ಹಣವು ಅಗಣಿತವಿದ್ದುದರಿಂದ ಮೊದಲು ಅದನ್ನು ಮಾಫು ಮಾಡಿದನು. ಆದರಿಂದ ಅಗ್ಗೆ ಕಳವು, ಸುಲಿಗೆಗಳಿಂದ ಬಡವೆರಾದ ರೈತ ಜನರಿಗೆ ತುಂಬಾ ಹರುಷವಾಯಿತು. ಬಳಿಕ ಪೂರ್ಣಯ್ಯನು ಅದುಮುಂದೆ ಹಿಂದೂಶಾಸ್ತ್ರದ ಪ್ರಕಾರ, ಕಂದಾಯ, ಸುಂಕ ಮೊದಲಾದವುಗ ಳನ್ನು ತೆಗೆದುಕೊಳ್ಳುವದರಲ್ಲಿ ಬರುವದೆಂಬ ಆಶ್ವಾಸನಪತ್ರಿಕೆಯನ್ನು ಪ್ರಕಟಗೊ ಳಿಸಿದನು. ಅದರಿಂದ ಕೆಲವೆಡೆಗಳಲ್ಲಿ ಕ್ಷುಬ್ಧರಾದ ರೈತಜನರು ಶಾಂತರಾದರು. ಟೀಪುಸುಲ್ತಾನನು ಹಣದಾಶೆಯಿಂದ ಹೆಚ್ಚಿಸಿದ ಕಂದಾಯದ ದರವನ್ನು ತೆಗೆದು ರೈತರಿಗೆ ಅನುಕೂಲವಾದ ದರವನ್ನು ಗೊತ್ತುಪಡಿಸಿದನು. ಅದರಿಂದ ಮುಂದೆ ಪ್ರತಿವರುಷ ಮಹಸೂಲ ತೊಂದರೆಯಿಲ್ಲದೆ ವಸೂಲ ಬರಹತ್ತಿತು. ಹೀಗೆ ಕಂದಾಯವನ್ನು ಕ್ಲುಪ್ತಪಡಿಸಿ ರೈತರಿಗೆ ಅವರವರ ಹೊಲಗಳ ಮೇಲೆ ವಂಶ ಪರಂಪರವಾದ ಬಾಧ್ಯತೆಯುಂಟೆಂದು ಪೂರ್ಣಯ್ಯನು ಪ್ರಸಿದ್ಧಗೊಳಿಸಿದನು.

B. A. Kulkarni.

(ಸಶೇಷ.)

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं वाग्भूषणम् भूषणम् ॥

(भर्तृहरिः)

ಸಂಪುಟ ೧೬.	ಸಪ್ಟೆಂಬರ ೧೯೧೧.	ಸಂಚಿಕೆ ೩.

ಹೈದರಾಬಾದ ನಿಜಾಮರಾದ
"ಮೀರ ಮಹಬೂಬ ಅಲ್ಲೀಖಾನ" ರವರ
ಶೋಚನೀಯವಾದ ಮರಣವು.

ಇಡೀ ಹಿಂದುಸ್ತಾನದ ಜನರಿಗೆ ದುಃಖದಾಯಕವಾದ ಈ ಸಂಗತಿಯು ಅಗಷ್ಟ ತಿಂಗಳ ೨೯ ನೇ ತಾರೀಖಿನ ದಿವಸ ಹಗಲು ಹನ್ನೆರಡೂವರೆ ಘಂಟೆಗೆ ಹೈದರಾಬಾದಿನಲ್ಲಿ ಸಂಭವಿಸಿತು. ನಿಜಾಮರ ಮನೆತನದ ಮೇಲೆ ಇಂಥ ದುಃಖದಾಯಕ ಪ್ರಸಂಗವು ಅಕಾಲಿಕವಾಗಿ ಒದಗಬಹುದೆಂಬದು ಯಾರ ಕನಸುಮನಸುಗಳಲ್ಲಿ ಸಹ ಇದ್ದಿಲ್ಲ. ಶಹಾಬಜಂಗ ಬಹದ್ದೂರ ಮಿನಿಸ್ಟರ ಅಫ ಪೋಲಿಸ ಇವರು ಯುವರಾಜರಾದ ಉಸ್ಮನ್ ಅಲ್ಲೀಖಾನರನ್ನು ಅದೇ ದಿವಸ ಮಧ್ಯಾನ್ಹ ಮೂರು ಘಂಟೆಗೆ ಪಟ್ಟದ ಮೇಲೆ ಕುಳ್ಳಿರಿಸಿ ಮೆರವಣಿಗೆ ಹೊರಡಿಸುವದಕ್ಕಿಂತ ಮೊದಲು ನಿಜಾಮರು ಮರಣಹೊಂದಿದ ಸುದ್ದಿಯನ್ನು ಹೈದರಾಬಾದದ ನಿವಾಸಿಗಳು ನಂಬಿರಲಿಲ್ಲ. ನಿಜಾಮರು ಪಾರ್ಶ್ವವಾಯವಿನಿಂದ ಪರಲೋಕವಾಸಿಗಳಾದ ಸಂಗತಿಯು, ಕೆಲವು ಮೇಲ್ತರದ ಅಧಿಕಾರಿಗಳಿಗೆ ಮಾತ್ರ ಗೊತ್ತಾಗಿತ್ತು. ಪ್ರೀತಿ ನಿಷ್ಪಕ್ಷಪಾತಗಳಿಂದ ಪ್ರಜಾಕ್ಷೇಮಕ್ಕೂ ದೇಶೋದ್ಧಾರಕ್ಕೂ ಸತತ ಪ್ರಯತ್ನಿಸಿದ ಈ ಮಹಾನುಭಾವರ ಆತ್ಮಕ್ಕೆ ದೇವರು ಪರಲೋಕದಲ್ಲಿ ಅಕ್ಷಯ ಸುಖಶಾಂತಿಗಳನ್ನು ಕೊಡಲೆಂದು ಸಚ್ಚಿದಾನಂದ ಸ್ವರೂಪನಾದ ಪರಮೇಶ್ವರನನ್ನು ಪ್ರಾರ್ಥಿಸುವೆವು.

ಬ್ರಿಟಿಶ್ ಸಾಮ್ರಾಜ್ಯದ ಛತ್ರದ ಕೆಳಗೆ ಇರುವ ಅನೇಕ ಮಾಂಡಲಿಕ ಭೂಪಾಲರಲ್ಲಿ ಹೈದರಾಬಾದದ ನಿಜಾಮರು ಘನತೆಯಿಂದಲೂ ರಾಜ್ಯದ ವಿಸ್ತಾರದಿಂದಲೂ

ಅಗ್ರಗಣ್ಯರೆಂದು ಹೇಳಬಹುದು. ಪರಚಕ್ರದ ಭೀತಿಯಿಂದ ಹಿಂದುಸ್ತಾನವನ್ನು ತಪ್ಪಿಸಿ ರಾಜ್ಯದಲ್ಲಿ ಸುಖಶಾಂತಿಗಳನ್ನುಂಟುಮಾಡಲಿಕ್ಕೆ ಬ್ರಿಟಿಶ್ ಸರಕಾರಕ್ಕೆ ಹೈದರಾಬಾದಿನ ನಿಜಾಮರಂಥ ಬಲಿಷ್ಠ ರಾಜರ ಸಹಾಯವು ಅತ್ಯವಶ್ಯವಾದದ್ದೆಂದು ಬೇರೆ ಹೇಳುವ ಕಾರಣವಿಲ್ಲ. ಅಂಥ ಪ್ರಸಂಗಗಳು ಬ್ರಿಟಿಶ್ ಸಾಮ್ರಾಜ್ಯದ ಮೇಲೆ ಒದಗಿದಾಗ ಗತಿಸಿದ ನಿಜಾಮರು ಕಾಲಕಾಲಕ್ಕೆ ಅವಶ್ಯಬಿದ್ದ ಸಹಾಯವನ್ನು ಮಾಡಲಿಕ್ಕೆ ಎಂದೂ ಹಿಂದೆ ಮುಂದೆ ನೋಡಲಿಲ್ಲ. ರಶಿಯನ್ನರು ಹಿಂದುಸ್ತಾನವನ್ನು ಒಳಸುಗ್ಗಿ ತಮ್ಮ ಅಧಿಪತ್ಯವನ್ನು ಈ ದೇಶದ ಮೇಲೆ ಕುಳ್ಳಿರಿಸಬೇಕೆಂದು ಯತ್ನಿಸಿದಾಗ ನಿಜಾಮರು ಸನ್ ೧೮೮೫ ರಲ್ಲಿ ಆಗಿನ **ಗವ್ಹರ್ನರ ಜನರಲ್ಲರಾದ ಡಫರಿನ್ನ** ರವರಿಗೆ ಕಳುಹಿಸಿದ ಪತ್ರದಲ್ಲಿ ಬರೆದದ್ದೇನಂದರೆ:— ಅನ್ಯ ದೇಶೀಯರು ತಮ್ಮ ಸೈನ್ಯಡೊಡನೆ ಹಿಂದುಸ್ತಾನದಲ್ಲಿ ಒಳಸುಗ್ಗದಂತೆ ಮಾಡಬೇಕಾದರೆ, ಸರಹದ್ದಿನ ಸೀಮೆಯಲ್ಲಿ ಸಾಕಷ್ಟು ಸೈನ್ಯವನ್ನು ಇಡಬೇಕಾಗುವದು. ಈ ಸೈನ್ಯದ ಖರ್ಚನ್ನು ಬರೆ ಹಿಂದುಸ್ತಾನ ಸರಕಾರದ ಮೇಲೆ ಹಾಕುವದು ಕೇವಲ ಅನ್ಯಾಯವು. ಈ ಸಂಗತಿಯು ಹಿಂದುಸ್ತಾನದೊಳಗಿನ ಮಾಂಡಲಿಕ ಅರಸರಿಗೆ ವಿದಿತವಾಗಿದೆ. ಹಾಗು ಅವರು ಸರಹದ್ದನ್ನು ಭದ್ರಪಡಿಸುವದಕ್ಕೆ ಯಥಾಶಕ್ತಿ ದ್ರವ್ಯದ್ವಾರ ಸಹಾಯ ಮಾಡೇ ಮಾಡುವರು. ಆ ಕೆಲಸಕ್ಕಾಗಿ, ನಾವು ಪ್ರತಿವರ್ಷ ೨೦ ಲಕ್ಷ ರೂಪಾಯಿಗಳಂತೆ ಮೂರು ವರುಷಗಳ ವರೆಗೆ ಕೊಡುವೆವು. ಇದರಿಂದ ಸರಹದ್ದಿನ ಸೀಮೆಯಲ್ಲಿರುವ ಸೈನ್ಯವನ್ನು ಹೆಚ್ಚಿಸಲಿಕ್ಕೆ ಅನುಕೂಲವಾಗುವದು. ಯುದ್ಧದ ಪ್ರಸಂಗವಿಲ್ಲದಾಗ ಇಷ್ಟೇ ಹಣವನ್ನು ಕೊಡಲಿಚ್ಛಿಸುವೆವು. ಪ್ರಸಂಗ ಬಂದಾಗ ಶಸ್ತ್ರಪಾಣಿಗಳಾಗಿ ಹಗೆಗಳೊಡನೆ ಕಾದಲಿಕ್ಕೆ ಸಿದ್ಧರಾಗಿರುವೆವು. ನಿಜಾಮರು ಹೀಗೆ ಹೇಳಿದ್ದರ ಪರಿಣಾಮವು ಇತರ ರಾಜರ ಮನಸ್ಸಿನ ಮೇಲೆ ಆಗಿ ಅವರು ಸಹ ಹಿಂದುಸ್ತಾನದ ಭದ್ರತೆಗಾಗಿ ಯಥಾಶಕ್ತಿ ದ್ರವ್ಯದ್ವಾರದಿಂದ ಸಹಾಯ ಮಾಡಲೊಪ್ಪಿದರು. ಈ ಹಣದಿಂದ ಹಿಂದುಸ್ತಾನ ಸರಕಾರದವರಿಗೆ "**ಇಂಪೀರಿಯಲ್ ಸರ್ವೀಸ್ ಟ್ರೂಪ್ಸ**" ಎಂಬ ಅಭಿಧಾನವುಳ್ಳ ಸೈನ್ಯವನ್ನು ಹೊಸದಾಗಿ ನಿರ್ಮಿಸಿ ಹಿಂದುಸ್ತಾನದ ಸೈನ್ಯದ ಸಂಖ್ಯೆಯನ್ನು ಬೆಳೆಸಲಿಕ್ಕೆ ಅನುಕೂಲವಾಯಿತು. ಇಂಗ್ಲೀಷರಿಗೂ ಬೋರ ಜನರಿಗೂ ಯುದ್ಧ ನಡೆದಾಗ ಗತಿಸಿದ ನಿಜಾಮರು ದಕ್ಷಿಣ ಆಫ್ರಿಕಕ್ಕೆ ತಮ್ಮ ಸೈನ್ಯದ ಕೆಲವು ಭಾಗವನ್ನು ಕಳುಹಿಸುವ ಇಚ್ಛೆಯನ್ನು ವ್ಯಕ್ತಪಡಿಸಿದರು. "**ಲಾರ್ಡ ಮಿಂಟೋ**" ಇವರ ಆಳಿಕೆಯಲ್ಲಿ ಹಿಂದುಸ್ತಾನದ ಹಲವು ಕಡೆಯಲ್ಲಿ ತಲೆದೋರಿದ ಅರಾಜಕತೆಯ ಚಿಹ್ನಗಳನ್ನು ಅಡಗಿಸುವದಕ್ಕೆ ಏನು ಉಪಾಯ ಮಾಡಬೇಕೆಂದು ಇತರ ಮಾಂಡಲಿಕ ರಾಜರನ್ನು ಕೇಳಿದಂತೆ ನಿಜಾಮರಿಗೂ ಕೇಳಿದಾಗ ಅವರು ಶ್ರುತಪಡಿಸಿದ್ದೇನಂದರೆ, ಹಿಂದುಸ್ತಾನದ ಕೋಟ್ಯವಧಿ ಪ್ರಜೆಗಳಲ್ಲಿ ಬ್ರಿಟಿಶ್ ಸಾಮ್ರಾಜ್ಯದ ವಿಷಯವಾಗಿ ದ್ವೇಷಭಾವವುಳ್ಳ ಜನರ ಸಂಖ್ಯೆಯು ತೀರ ಸಣ್ಣದಿದ್ದರೂ

ಸರಕಾರದವರು ಅದನ್ನು ದುರ್ಲಕ್ಷಿಸಿದರೆ, ಈ ಅರಾಜಕ ಜನರ ಅರಾಜಕ ತತ್ವಗಳು ಸ್ಪರ್ಶಜನ್ಯ ರೋಗದಂತೆ ಹಬ್ಬಿ ಇತರರ ಮನಸ್ಸನ್ನು ಕಲುಷಿತವಾಗಿ ಮಾಡಬಹುದು. ಆದ್ದರಿಂದ ಈ ಅರಾಜಕತೆಯ ಚಿಹ್ನಗಳನ್ನು ಕ್ರೂರತನದಿಂದಲೇ ಅಡಗಿಸತಕ್ಕದ್ದು.

ನಿಜಾಮ "**ಮೀರಮಹಬೂಬ ಅಲ್ಲೀಖಾನ**" ಇವರು ಇ. ಸ. ೧೮೬೬ ನೇ ಅಗಷ್ಟ ೧೪ ನೇ ತಾರೀಖಿನ ದಿವಸ ಹುಟ್ಟಿದರು. ಇವರ ತಂದೆಯಾದ "**ಅಫಜುಲ ಉದ್ದೌಲಾ**" ಇವರು ಇ. ಸ. ೧೮೮೯ ರಲ್ಲಿ ತೀರಿದ್ದರಿಂದ ಗತಿಸಿದ ಮೀರಮಹಬೂಬರವರು ಮೂರು ವರುಷದವರಿರುವಾಗಲೇ ಪಟ್ಟವೇರಬೇಕಾಯಿತು. ನಿಜಾಮರು ಅಲ್ಪ ವಯಸ್ಕರಾಗಿದ್ದಾಗ ರಾಜ್ಯಕಾರಭಾರವನ್ನು "**ಸರಸಾಲರ ಜಂಗ**" ಎಂಬ ದಕ್ಷರಾದ ದಿವಾನರು ನಡೆಯಿಸುತ್ತಿದ್ದರು. ಇವರು ಇ. ಸ. ೧೯೧೯ ರಲ್ಲಿ ತೀರಿಕೊಳ್ಳಲು ರಾಜ್ಯಕಾರಭಾರವನ್ನು ನಡೆಸಲಿಕ್ಕೆ ಒಂದು ಮಂತ್ರಿಮಂಡಲವು ನಿಯಮಿಸಲ್ಪಟ್ಟಿತು. ಅದರಿಂದ ರಾಜ್ಯಕಾರಭಾರವು ಸುಯಂತ್ರಿತವಾಗಿ ನಡೆಯಲಿಲ್ಲ. ಇ. ಸ. ೧೯೧೯ ರಲ್ಲಿ ಅಂದರೆ ಲಾರ್ಡ ರಿಪ್ಪನ್ನರವರ ಆಳಿಕೆಯ ಕಡೆಯ ಭಾಗದಲ್ಲಿ ನಿಜಾಮರಿಗೆ ಪೂರ್ಣ ಅಧಿಕಾರವು ದೊರೆಯಿತು. ಅಧಿಕಾರವನ್ನು ಕೈಕೊಂಡ ಕೂಡಲೇ ನಿಜಾಮರು ಪರಲೋಕವಾಸಿ "ಸರಸಾಲರಜಂಗ" ಇವರ ಚಿರಂಜೀವರಾದ "**ಮೀರಲಿಯಾಕಅಲ್ಲಿ**" ಎಂಬವರನ್ನು ಮಂತ್ರಿಗಳಾಗಿ ನೇಮಿಸಿದರು. ಮತ್ತು ಒಂದು ಜಾಹೀರನಾಮೆಯನ್ನು ಪ್ರಕಟಿಸಿದರು. ಅದರ ಆಶಯವೇನೆಂದರೆ, ನಮ್ಮ ಪ್ರಜೆಗಳು ಸುಖಶಾಂತಿಯಿಂದಿದ್ದುಕೊಂಡು, ವಿದ್ಯಾ, ಕಲಾಕೌಶಲ್ಯ, ಸೂಪತ್ತು ಮೊದಲಾದವುಗಳ ಅಭಿವೃದ್ಧಿಯನ್ನು ಮಾಡುತ್ತಿರುವದನ್ನು ನೋಡುವದರಿಂದ ನಮಗಾಗುವಷ್ಟು ಆನಂದವು ಅನ್ಯ ವಿಧದಿಂದ ಎಂದೂ ಆಗಲಾರದು.

ಪರಲೋಕವಾಸಿಗಳಾದ ನಿಜಾಮರ ಆಳಿಕೆಯಲ್ಲಿ ಹೈದರಾಬಾದದಲ್ಲಿ ಅನೇಕ ಸುಧಾರಣೆಗಳಾದವು. ಇವರ ಆಳಿಕೆಯಲ್ಲಿ ಸರ ಸಾಲರಜಂಗ, ಸೆಮ್ಸ ಉಲ್ ಉಮರಾ, ಸರ ಅಸ್ಮಾನ್ ಜಹಾ, ಸರ ಕರ್ಸೆಡ್ ಜಹಾ, ಮೊದಲಾದ ಮುತ್ಸದ್ದಿಗಳ ಸಹಾಯವು ಇವರಿಗೆ ದೊರೆತಿತ್ತು. ಹೈದರಾಬಾದ ಸಂಸ್ಥಾನದಲ್ಲಿ ಮುಸಲ್ಮಾನ ಸರದಾರರ ಪ್ರಾಬಲ್ಯವಿದ್ದಾಗ್ಯೂ, ಅವರಿಂದ ಇತರ ಜಾತಿಯವರಿಗೆ ಪೀಡೆಯಾಗಗೊಡದಂತೆ, ರಾಜ್ಯಕಾರಭಾರದಲ್ಲಿ ಸಮತೋಲನ ಉಳಿಯುವಂತೆ, ಜಾತಿ–ಮತಗಳ ದ್ವೇಷ ಉಳಿಯದಂತೆ, ಹಿಂದೂ ಮುಸಲ್ಮಾನ ಪಾರ್ಸೀ ಯುರೋಪಿಯನ್ ಮುಂತಾದ ಎಲ್ಲ ಮತಸ್ಥರನ್ನು ರಾಜ್ಯಕಾರಭಾರದಲ್ಲಿ ಸೇರಿಸಿಕೊಂಡು, ಅವರಲ್ಲಿ ನಂಬಿಗೆಯನ್ನಿಟ್ಟು ಕೆಲಸ ತೆಗೆದುಕೊಳ್ಳುತ್ತಿದ್ದರು. ಇದರಿಂದ ರಾಜ್ಯದಲ್ಲಿ ಒಡಕು ಇಲ್ಲದಂತಾಯಿತು. ಇವರು "**ಕೇಸನ್‌ವ್ಹೋಕರ**" ಎಂಬ ಯುರೋಪಿಯನ್ನ ಆಧಿಕಾರಿಯನ್ನು ಘಡಣವೀಸ ಕೆ

ಲಸಕ್ಕೆ ನೇಮಿಸಿದ್ದರು. ಇದರಿಂದ ಒಂಭತ್ತು ವರುಷಗಳಲ್ಲಿ ಖಜಾನೆಯಲ್ಲಿರುವ ಹಣವು ನಾಲ್ಕು ಪಟ್ಟು ಹೆಚ್ಚಾಯಿತು. ವೋಕರರ ಕೈಕೆಳಗೆ " ಹೈದರೀ " ಎಂಬ ಉಪಪ ಡಣವೀಸರಿದ್ದರು. ರಾಜಾ " ಚಂದೂಲಾಲ " ಎಂಬವರು ಇಪ್ಪತ್ತೈದು ವರುಷಗ ಳ ವರೆಗೆ ಮಂತ್ರಿಗಳಾಗಿದ್ದರು. ಸಂಸ್ಥಾನದ ಕಾಗದ ಪತ್ರಗಳನ್ನು ಕಾಪಾಡುವದಕ್ಕಾ ಗಿ ಇಬ್ಬರು ಹಿಂದೂ ಅಧಿಕಾರಿಗಳು ನೇಮಿಸಲ್ಪಟ್ಟಿದ್ದರು. ರೇವಿನ್ಯೂ ಅಡಳತೆಯನ್ನು ಇಬ್ಬರು ಫಾರ್ಸೀ ಗೃಹಸ್ಥರು ಸುಭೇದಾರರಾಗಿ ನೋಡುತ್ತಿದ್ದರು. ನಿಜಾಮರು ಸ್ವತಃ ಸುನೀ ಪಂಥಕ್ಕೆ ಸೇರಿದವರಾಗಿದ್ದರೂ ಇವರ ಸರಕಾರದ ಮೇಲ್ತರದ ಅಧಿಕಾರಿಗಳ ಲ್ಲಿ ಸಿಯಾ, ಅರೆಬ್ಬೀ ಹಾಗೂ ಇತರ ಮಹಮ್ಮದೀಯರು ಇದ್ದರು.

ಈ ಪ್ರಕಾರ ಜಾತಿ, ಮತ ವರ್ಣಗಳ ಭೇದವನ್ನಿಡದೆ ಎಲ್ಲ ಪ್ರಜೆಗಳಿನ್ನು ಅನುರಾ ಗದಿಂದ ನಡೆಸಿಕೊಂಡು, ಅವರಲ್ಲಿ ಭರವಸೆಯನ್ನಿಟ್ಟು ರಾಜ್ಯಕಾರಭಾರವನ್ನು ನಿಜಾ ಮರು ಮಾಡಿದ್ದರಿಂದ ಇವರ ಪ್ರಜೆಗಳೆಲ್ಲರು ಸಂತುಷ್ಟಚಿತ್ತರಾಗಿಯೂ, ರಾಜನಿಷ್ಠ ರಾಗಿಯೂ ಇದ್ದರೆಂದು ಬೇರೆ ಹೇಳುವ ಅವಶ್ಯಕತೆಯಿಲ್ಲ. ನಿಜಾಮರು ಈ ಪ್ರಕಾರ ತಮ್ಮ ಪ್ರಜೆಗಳನ್ನು ಅನುರಾಗದಿಂದ ಪಾಲಿಸಿದ್ದರಿಂದ ಇವರ ಪ್ರಜೆಗಳು ಹಿಂದುಗಳೇ ಇರಲಿ, ಮುಸಲ್ಮಾನರೇ ಇರಲಿ, ಅವರೆಲ್ಲರು ದೃಢವಾದ ರಾಜಭಕ್ತಿಯುಳ್ಳವರಾಗಿದ್ದ ರು. ಇವರ ಮರಣದ ಸುದ್ದಿಯನ್ನು ಕೇಳಿದ ಕೂಡಲೆ ಪ್ರಜೆಗಳ ಹೃದಯಕ್ಕೆ ಸಿಡಿಲು ಬಡಿದಂತಾಯಿತು. ಈ ಅಮಂಗಲ ವಾರ್ತೆಯನ್ನು ಕೇಳಿದ ಕೂಡಲೆ ಎಲ್ಲ ಕಚೇರಿಗ ಳು ಬಂದು ಮಾಡಲ್ಪಟ್ಟವು. ಹಿಂದೂ ಮುಸಲ್ಮಾನ ವ್ಯಾಪಾರಿಗಳು ತಮ್ಮ ಅಂಗಡಿ ಗಳನ್ನು ಮುಚ್ಚಿದರು. ಯುರೋಪಿಯನ್ ವ್ಯಾಪಾರಸ್ಥರು ದುಃಖ ಸೂಚಕವಾದ ಕ ಪ್ಪೇ ವಸ್ತ್ರಗಳನ್ನು ತಮ್ಮ ಅಂಗಡಿಗಳಿಗೆ ಮುಚ್ಚಿದರು.

ಮೀರಮಹಬೂಬರವರ ಶವವನ್ನು ಮಕ್ಕಾ ಮದೀದೆಯಲ್ಲಿ ಅವರ ತಂದೆಯ ವರ ಗೋರಿಯ ಹತ್ತರ ಕಟ್ಟಿದ ಮತ್ತೊಂದು ಗೋರಿಯಲ್ಲಿ ಹುಗಿದರು. ದೇವರು ಈ ಮಹಾತ್ಮರ ಆತ್ಮಕ್ಕೆ ಶಾಂತಿಯನ್ನೀಯಲಿ. ಹಾಗು ಅವರ ಗಾದಿಗೆ ಬಂದ ಉಸ್ಮಾನ ಅಲ್ಲಿಖಾನ ನಿಜಾಮರಿಗೆ ತಮ್ಮ ಹಿರಿಯರ ಅನುಕರಣ ಮಾಡಲಿಕ್ಕೆ ಬುದ್ಧಿಯನ್ನು ಕೊಡಲೆಂದು ಪರಮೇಶ್ವರನನ್ನು ಪ್ರಾರ್ಥಿಸಿ ಈ ಲೇಖನವನ್ನು ಮುಗಿಸುವೆವು.

ಮನೋರಮೆ.

ಪಂಸತಕಾಲದಲ್ಲಿಯು ರಾತ್ರಿಯು ೧೨ ಘಂಟೆಯು ಸಮಯವು. ರಜನೀನಾಥನು ತನ್ನ ಶಾಂತಕಿರಣಗಳಿಂದ ಭೂದೇವಿಯನ್ನು ಆಚ್ಛಾದಿಸಿದ್ದರಿಂದುಂಟಾದ ಕಾಂತಿಯು ಜನಮನ ಆಲ್ಹಾದಕರನಾದ ಮಂದಮಾರುತನಿಂದ ಹೆಚ್ಚು ಆನಂದ ಮಯವಾಗಿ ಮಾಡಲ್ಪಟ್ಟಿತ್ತು.

ಇಂಥ ಮಧ್ಯರಾತ್ರಿಯಲ್ಲಿ ನಮ್ಮ ಕಥಾನಾಯಿಕೆಯು ತನ್ನ ಪ್ರತಿದಿವಸದ ವಸ್ತ್ರಾಲಂಕಾರಗಳನ್ನು ಬದಿಗಿಟ್ಟು ಸಾಧಾರಣ ಸ್ಥಿತಿಯ ಜನರಂತೆ ಬಟ್ಟೆಗಳನ್ನು ಧರಿಸಿ ಎಡಬಲ ನೋಡುತ್ತ ತನ್ನ ಕೋಣೆಯೊಳಗಿಂದ ಮೆಲ್ಲನೆ ಸಪ್ಪಳವಾಗದಂತೆ ಹೊರಬಿದ್ದು, ಮನೆಯು ಹೊರಬಾಗಿಲನ್ನು ಸಹ ದಾಟಿ ಮಾರ್ಗಕ್ರಮಣ ಮಾಡ ಹತ್ತಿದಳು. ೧೩-೧೪ ವರ್ಷದ ಈ ಸುಂದರಿಯು ಇಂಥ ಮಧ್ಯರಾತ್ರಿಯಲ್ಲಿ ಮನೆ ಯೊಳಗಿಂದ ಏಕಾಕಿನಿಯಾಗಿ ಹೋಗುವದೆಂದರೆ, ಸಾಧಾರಣ ವಿಚಾರಮಾಡುವ ವರಿಗೆ, ಇವಳು ಅನಾಚಾರಳಿದ್ದಳೆಂದು ಕಲ್ಪನೆಯಾಗಬಹುದು. ಆದಕೆ ವಸ್ತುಸ್ಥಿತಿ ಯು ಬೇರೆಯಾಗಿತ್ತು.

ಹಿಂದಕ್ಕೆ ರಾಧಾನಗರದಲ್ಲಿ ಕೃಷ್ಣರಾಯನೆಂಬ ಶ್ರೀಮಂತ ಗೃಹಸ್ಥನಿದ್ದನು. ಚಿಕ್ಕವನಿರುವಾಗಲೇ ತಂದೆತಾಯಿಗಳು ತೀರಿಕೊಂಡದ್ದರಿಂದ ಸಂಸಾರದ ಯಾವತ್ತು ಭಾರವು ಅನನುಭವಿಕನಾದ ಕೃಷ್ಣನ ಮೇಲೆ ದುರ್ದೈವದಿಂದ ಬೀಳಲು, ಊರೊಳ ಗಿನ ನಾಲ್ಕು ಪ್ರತಿಷ್ಠಿತ ಜನರ ಅನುಮತಿಯಿಂದ ತನ್ನ ಹೊಲಮನೆಯನ್ನು ಸಾಗಿಸಿ ಅವನು ಕಾಲಹರಣ ಮಾಡಬೇಕಾಯಿತು. ಮನೆಯೊಳಗಿನ ತಾಯಿಯ ನೀತಿ ಶಿಕ್ಷ ಣದಿಂದಲೋ, ಮನಸ್ಸಿನ ಸ್ವಾಭಾವಿಕ ಚಾತುರ್ಯದಿಂದಲೋ ಅವನು ಶ್ರೀಮಂತರ ತರುಣರಂತೆ ನೀತಿಭ್ರಷ್ಟನಾಗಲಿಲ್ಲ. ಕುಲಕಲಂಕವೆಂಬ ಅಭಿಧಾನಕ್ಕೆ ಪಾತ್ರನೂ ಆಗಲಿಲ್ಲ. ಸಾರಾಂಶ, ವಿನಯಾದಿ ಸದ್ಗುಣಗಳಿಂದ ಮಂಡಿತನಾದ ನಮ್ಮ ಕೃಷ್ಣರಾ ಯನು ಶುಕ್ಲಪಕ್ಷದ ಚಂದ್ರಮನಂತೆ ಬೆಳೆಯುತ್ತ ಬೆಳೆಯುತ್ತ ೨೩ನೇ ವರ್ಷದ ತಾರುಣ್ಯ ದಶೆಗೆ ಬಂದನು. ತಾರುಣ್ಯದ ಭರ, ಸಂಪತ್ತಿನ ಬಲವು, ಅದರೊಳಗೆ ಆಚರಣಶೀಲನು. ಇಂಥ ತರುಣನಿಗೆ ತಮ್ಮ ಕನ್ಯಾರತ್ನವನ್ನು ಸ್ವಸಂತೋಷದಿಂದ ಅರ್ಪಣ ಮಾಡಿ ಯಾರು ಕೃತಕೃತ್ಯರಾಗಲಿಕ್ಕಿಲ್ಲ? ನೆರೆಯ ಗ್ರಾಮದಲ್ಲಿ ವಾಸಿಸುವ ರಾಮರಾಯ ನೆಂಬವನು ತನ್ನ ಮಗಳಾದ ಕೃಷ್ಣೆಯನ್ನು ಅತ್ಯಾದರಪೂರ್ವಕ ಸಮರ್ಪಿಸಿ ಮನಸ್ಸಿ ನೊಳಗೆ "ನಾನು ಧನ್ಯನಾದೆ" ಎಂದು ತಿಳಕೊಂಡು ಸುಖಿಯಾಗಿದ್ದನು. ತನ್ನ ಮನೆಯಲ್ಲಿ ಕೃಷ್ಣರಾಯನ ಹೆಂಡತಿಯು ಹೆಸರು ಕೃಷ್ಣೆಯಂದಿದ್ದರೂ ನಮ್ಮ ದೇಶದ ಪದ್ಧತಿಯಂತೆ, ನಾವು ಗಂಡು ಪಕ್ಷದವರಾದ ಕಾರಣ ಅವಳನ್ನು ಅತ್ತೆಯ ಮನೆಯ

" ರಾಧಾ " ಎಂಬ ಹೆಸರಿನಿಂದಲೇ ಕರೆಯೋಣ. ಈ ರಾಧಾಕೃಷ್ಣರ ಪೂರ್ವ ಜನ್ಮದ ಪುಣ್ಯದಿಂದಲೋ, ಪರಮೇಶ್ವರನ ಮೇಲಿನ ಧೃಢಭಕ್ತಿಯ ಫಲವನ್ನು ಈ ಜನ್ಮದಲ್ಲಿಯೇ ಉಪಭೋಗಿಸಲೆಂಬ ಕಾರಣದಿಂದಲೋ, ಅಪರಿಗೆ ಮನೋರಮೆ ಯುಂಬ ಒಂದು ಕನ್ಯಾರತ್ನವು ಜನಸಿತು. ಹೆಣ್ಣು ಮಕ್ಕಳು ದೊಡ್ಡವರಾದ ಕೂಡಲೆ ತಂದೆ ತಾಯಿಗಳಿಗೆ ಮಗಳ ವಿಯೋಗದ ಭಾವವು ಅಸಹ್ಯವಾಗುವದು. ಪರಮ ಜ್ಞಾನಿ ಯೆನಿಸುವ ಕಣ್ವನಂಥ ಋಷಿವರ್ಯನು ಕೂಡ ಮಗಳವಿಯೋಗದಿಂದ ತುಸು ಹೊತ್ತು ಶೋಕಮಾಡುತ್ತಿರಲು, ರಾಧಾ ಕೃಷ್ಣರಂಥ ಪ್ರಾಕೃತರ ಸ್ಥಿತಿಯು ಈ ವೇಳೆಯಲ್ಲಿ ಏನಾಗಿರಬಹುದೆಂಬುವದನ್ನು ವಾಚಕರೇ ವಿಚಾರ ಮಾಡಬಹುದು. ರಾಧಾ ಕೃಷ್ಣರ ಸಮ್ಮತಿಯಿಂದ ಮನೋರಮೆಯ ಮದುವೆಯು ನಿಶ್ಚಯವಾಯಿತು. ಅಳಿಯನ ಹೆಸರು ಮನ್ಮೋಹನನು. ಇವನು ಸಕ್ಕುಲೋತ್ಪನ್ನನಿದ್ದನಲ್ಲದೆ ಸದ್ಗುಣಿಯೂ ವ್ಯವಹಾರದಕ್ಷನೂ ಆಗಿದ್ದನು. ಸಮೀಪವರ್ತಿಯಾದ್ದರಿಂದಲೂ ಸ್ವಭಾವ, ಆಚರಣೆ ಗಳು ಕೇಳಿಗೊತ್ತಿದ್ದರಿಂದಲೂ ಮನೋರಮೆಯು ಈ ಗುಣವಂತನನ್ನೇ ಮನಸ್ಸಿ ನಿಂದ ವರಿಸಿ ಬಿಟ್ಟಿದ್ದಳು. ಬಾಹ್ಯೋಪಚಾರದಿಂದ ಲಗ್ನಕಾರ್ಯವು ಸಾಂಗವಾಗು ವದೊಂದೇ ಉಳಿದಿತ್ತು. ಅಷ್ಟರಲ್ಲಿ ಒಂದು ಅಮಂಗಲಕರವಾದ ಸಂಗತಿಯು ಸಂಘಟಿಸಿತು. ಆಕಸ್ಮಿಕವಾಗಿ ವಿಷಮಜ್ವರ ಪ್ರವೇಶದಿಂದ ರಾಧಾಬಾಯಿಯು ಇಹ ಲೋಕದ ಯಾತ್ರೆಯನ್ನು ತೀರಿಸಿ ಆತ್ಮಸುಖದ ಸ್ವಾದವನ್ನು ಪರಲೋಕದಲ್ಲಿ ಅನು ಭವಿಸುವದಕ್ಕಾಗಿ ಹೊರಟು ಹೋದಳು. ಆ ಪುಣ್ಯವತಿಯ ಸೌಶೀಲ್ಯವನ್ನೂ ಪುಣ್ಯಾ ಆಚರಣೆಯನ್ನೂ ಸ್ಮರಣಮಾಡುತ್ತ ಆಕೆಯ ಪತಿಯಾದರೂ ಪ್ರಿಯಪತ್ನಿಯ ವಿಯೋ ಗದ ದುಃಖವನ್ನು ತಾಳಲಾರದೆ ಅವಳನ್ನೇ ಹುಡಕಲಿಕ್ಕೆ ಹೊರಟವನಂತೆ ಪರ ಲೋಕವನ್ನು ಕುರಿತು ತೆರಳಿದನು. ತರುವಾಯ ಲಗ್ನದ ವಿಚಾರವು ನಿಂತೇಹೋ ಯಿತು. ಮೊದಲು ವಚನಕೊಟ್ಟವನು ಈಗ ತಿರಸ್ಕಾರದಿಂದ ಅದರ ವಿಚಾರವನ್ನೇ ಬಿಟ್ಟ ಬಿಟ್ಟನು. ಇಂಥ ಪ್ರಸಂಗದಲ್ಲಿ ೧೩-೧೪ ವರ್ಷದ ಈ ಯೌವನ ಸಂಪನ್ನೆಯಾದ ಕುಮಾರಿಯು ಯಾವ ಮಾರ್ಗವನ್ನು ಅನುಸರಿಸಬೇಕು? ತಂದೆತಾಯಿಗಳು ಪರಲೋ ಕವಾಸಿಗಳಾದರು. ಆಪ್ತೇಷ್ಟರಂತೂ ಯಾರೂ ಇಲ್ಲ. ಆ ಭವ್ಯವಾದ ಮನೆಯೊಳಗೆ ಈ ದಶೆಯಲ್ಲಿ ಒಬ್ಬಳೇ ಇರುವದು ಅವಳ ಜೀವಕ್ಕೆ ಬೇಸರವಾಗಿತ್ತು. ತಂದೆಯ ಸುವ್ಯವಸ್ಥೆಯಿಂದ ಮನೆಯಲ್ಲಿ ನಾಲ್ಕು ವಿಶ್ವಾಸಪಾತ್ರರಾದ ಸೇವಕರು ಮಾತ್ರ ಇದ್ದರು. ಇಂಥ ಸ್ಥಿತಿಯಲ್ಲಿ ಅವಳು ಮನೆಯನ್ನು ಬಿಟ್ಟು ಹೊರಬಿದ್ದಳು.

ರಾಧಾನಗರದ ಸುತ್ತಲು ಅರಣ್ಯವು ಹಬ್ಬಿದ್ದರೂ, ಊರು ಬಹು ರಮಣೀ ಯವಾಗಿತ್ತು. ಆ ಊರಿಗೆ ಅನೇಕ ಉಪವನಗಳಿದ್ದವಲ್ಲದೇ ಅದರ ಸಮೀಪದಲ್ಲಿಯೇ ಒಂದು ಸುಂದರವಾದ ಕೆರೆಯಿತ್ತು. ಆ ಕೆರೆಯ ಮೇಲೆ ಲಕ್ಷ್ಮೀ-ನಾರಾಯಣನ

ದೇವಾಲಯವಿತ್ತು. ಇದರಿಂದ ಅದಕ್ಕೆ ಒಂದು ತರದ ಶೋಭೆಯುಂಟಾಗಿತ್ತು. ತನ್ನ ಅಪರಿಹಾರ್ಯವಾದ ಸಂಕಟವನ್ನು ಪರಮೇಶ್ವರನೇ ನಿವಾರಣ ಮಾಡಬೇಕಲ್ಲದೆ ಸಾಧಾರಣ ಜನರ ಕಡೆಯಿಂದಾಗುವವಿಲ್ಲೆಂದು ಮನಗಂಡು, ಮನೋರಮೆಯು ಆ ರಾತ್ರಿಯಲ್ಲಿ ದೇವಾಲಯವನ್ನು ಸೇರಿ ಭಕ್ತವತ್ಸಲನಾದ ಪರಮೇಶ್ವರನನ್ನು ದೀನ ವಾಣಿಯಿಂದ ಬೇಡಿಕೊಳ್ಳಬೇಕೆಂದು ಮನಸಾಸಂಕಲ್ಪಮಾಡಿ, ಮನೆಯಿಂದ ಹೊರಟು ಏಕಾಕಿನಿಯಾಗಿ ಮಾರ್ಗಕ್ರಮಣ ಮಾಡಹತ್ತಿದಳು. ಆ ದೇವಾಲಯದ ಸಮೀಪಕ್ಕೆ ಬರುತ್ತಲೇ ಒಂದು ಮನೋವೇಧಕ ಸಂಗತಿಯು ಸಂಭವಿಸಿತು.

"ದೈವಗತಿಯು ವಿಚಿತ್ರವಾಗಿರುತ್ತದೆ"; ಸಂಕಟಗಳು ಒಂದರ ಹಿಂದೊಂದು ಬರಲಾರಂಭಿಸಿದರೆ ಮನುಷ್ಯನ ಮನಸ್ಸು ನಿರಾಶೆಗೆ ಒಳಗಾಗುತ್ತದೆ. ಎಂಥ ವಿಚಾರಿಯಾದ ಮನುಷ್ಯನು ಕೂಡ ಕೆಲಕಾಲ ಸಾಮಾನ್ಯನಂತೆ ನಡೆಯಲಾರಂಭಿಸುತ್ತಾನೆ. ಇಂಥ ಪ್ರಸಂಗದಲ್ಲಿ ಅನುಭವವಿಲ್ಲದ ಅನಾಥೆಯಾದ ಈ ಅಬಲೆಯಂತೂ ಅರಹುಗೆಟ್ಟು ಅಜ್ಞರಂತೆ ನಡೆಯುವದು ಆಶ್ಚರ್ಯದ ಮಾತಲ್ಲ.

ಆ ಸಮಯದಲ್ಲಿ ಅದೇ ದಾರಿಯಿಂದ ಒಬ್ಬ ಕಟಕರವನು ರಾಧಾನಗರಕ್ಕೆ ಹೋಗುತ್ತಿದ್ದನು. ಮಧ್ಯರಾತ್ರಿಯಲ್ಲಿ ಏಕಾಕಿನಿಯಾಗಿರುವ ಈ ಯೌವನ ಸಂಪನ್ನೆಯಾದ ಬಾಲಿಕೆಯನ್ನು ನೋಡಿ ಅವನ ಮನಸ್ಸು ದುರಾಶೆಗಳಿಗೆ ಒಳಗಾಯಿತು. ಹೇಳಿಕೇಳಿ ಕಟಕರವನೇ, ಅವನಲ್ಲಿ ದಯದ ಅಂಕುರವು ಅವನ ಕಠೋರವಾದ ಕೃತಿಗೆ ಯೋಗ್ಯವಾಗಿಯೇ ಒಪ್ಪುತ್ತಿತ್ತು. "ಸರ್ವಾಂಗವನ್ನು ಅರ್ಪಿಸುವೆನು, ದಾಸಾನುದಾಸನಾಗಿ ಜನ್ಮವಿರುವ ವರೆಗೂ ಅಂಕಿತನಾಗಿ ನಡೆಯುವೆನು." ಮುಂತಾದ ಸವಿನುಡಿಗಳಿಂದ ಆ ಅಧಮನು ಬೇಡಿಕೊಂಡರೂ, ಆ ಭಗವದ್ಭಕ್ತಳ ರಣಾಂಗಣದಲ್ಲಿ ಯುದ್ಧಕುಶಲತೆಯನ್ನು ತೋರಿಸುವ ಸಲುವಾಗಿ ಸ್ಥಿರನಾಗಿ ನಿಂತಿರುವ ವೀರನಂತೆ ಧೈರ್ಯಾಸ್ತ್ರವನ್ನು ಧರಿಸಿ, ನೀತಿಯನ್ನು ನುಂಗುವ ಹೇಡಿಯು ತಾನಲ್ಲೆಂದು ಆ ಕಾಮಾಂಧನಿಗೆ ತಿಳಿಸಿ ಅವನ ಮಾರ್ಗವನ್ನೇ ಬಿಟ್ಟುಬಿಟ್ಟಳು. ಧೈರ್ಯದ ಮಾತಿಗೆ ಅವನು ಅಂಜಲಿಲ್ಲ. ಅಥವಾ ತನ್ನ ದುಷ್ಟಕಲ್ಪನೆಯನ್ನು ಸಿದ್ಧಿಸುವದಕ್ಕೋಸ್ಕರ ಕಠೋರ ಪ್ರಯತ್ನಮಾಡುವಲ್ಲಿ ಹೇಸಿಕೆಯು ಅವನಲ್ಲಿ ಉಂಟಾಗಲಿಲ್ಲ. ಮೈಮೇಲೆ ಬಂದು ಒಲಾತ್ಕಾರದಿಂದ ವಶಮಾಡಿಕೊಳ್ಳುವ ಪ್ರಯತ್ನವನ್ನು ಮಾಡುತ್ತಾನೆಂಬ ಮನವರಿಕೆಯಾದ ಕೂಡಲೇ, ಸೀರೆಯ ಸೆರಗಿನಿಂದ ಟೊಂಕಕ್ಕೆ ಕಟ್ಟಿದ ಒಂದು ಶಸ್ತ್ರವನ್ನು ತೆಗೆದು, ಆ ವೀರಶಿರೋಮಣಿಯು ಪತಿವ್ರತಾದೇವಿಯು ಎಷ್ಟು ಕ್ರೂರಳಿರುತ್ತಾಳೆಂಬದನ್ನು ಸಿದ್ಧಮಾಡುವದಕ್ಕಾಗಿ ಅವನ ರುಂಡವನ್ನು ದಂಡದಿಂದ ಬೇರೆಮಾಡಿ ಅತ್ತ ಚಲ್ಲಿ ದೇವನ್ಯಾಸವನ್ನು ಪ್ರವೇಶಿಸಿದಳು. ಮೈಯೆಲ್ಲ ರಕ್ತವಾದದ್ದರಿಂದ ಭಯಂಕರ ಸ್ವರೂಪಿಯಾದ ಮನೋರಮೆಯು ನೋಡುವವ

ರಿಗೆ ಸಾಕ್ಷಾತ್ ಕಾಲಿಕಾದೇವಿಯಂತೆ ತೋರುತ್ತಿದ್ದಳು. ಆ ಸತ್ವಗುಣ ಸಂಪನ್ನೆಯಾದ ಬಾಲಿಕೆಯು ದೇವರ ಮುಂದೆ ವೀರಾಸನವನ್ನು ಹಾಕಿ ಅತಿ ನಮ್ರತೆಯಿಂದ ಕೈಗಳನ್ನು ಮುಗಿದು, " ಪರಮೇಶ್ವರನೇ ತಂದೆತಾಯಿಗಳಿಲ್ಲದ ಈ ಅನಾಥ ಬಾಲಿಕೆಯನ್ನು ಇಂಥ ವಿಪರೀತ ಸ್ಥಿತಿಯೊಳಗೆ ನೂಕುವರೇ? ದಯಾಘನನೇ, ನೀನು ನನ್ನನ್ನು ಸಂರಕ್ಷಿಸದೆ ಉಪೇಕ್ಷೆಯನ್ನು ಮಾಡಿ ಬಿಟ್ಟೆಯಂದರೆ ಯಾರನ್ನು ಮೊರೆ ಹೋಗಲಿ? ಪರದೇಶಿಗಳನ್ನು ಸಂರಕ್ಷಿಸುವನೆಂಬ ಬಿರುದುಳ್ಳ ಹೇ ಅನಾಥ ರಕ್ಷಕಾ ! ನನ್ನನ್ನು ಯೋಗ್ಯಸ್ಥಾನದಲ್ಲಿರಿಸಿ ನನ್ನ ಆಯುಷ್ಯದ ಚಿತ್ರವಿಚಿತ್ರವಾದ ಇಮಾರತಿಯ ಬುಡವನ್ನು ನೈತಿಕ ತತ್ವಗಳ ಆಧಾರದಿಂದ ರಚಿಸಿ ಅದಕ್ಕೆ ಪ್ರೌಢಾಲಂಕಾರಗಳನ್ನು ಇಡಿಸುವವನು ನೀನೇ; ಇಲ್ಲವೇ, ಅದರೊಳಗೆ ನಿರ್ಜೀವದ ಕಳೆಯನ್ನು ತುಂಬಿ ಸಂಸಾರದಲ್ಲಿ ದುರ್ಲೌಕಿಕದ ಹೆಸರಿಗೆ ಪಾತ್ರನಾಗಿ ಮಾಡಲು ಸಮರ್ಥನು ನೀನೇ. ಈ ರೀತಿಯಲ್ಲಿ ಕುಡುಗೋಲನ್ನೂ ಕುಂಬಳಕಾಯಿಯನ್ನೂ ನಿನ್ನ ಕೈಯಲ್ಲಿ ಕೊಟ್ಟಿರುವೆನು. ನನ್ನನ್ನು ನೀತಿಭ್ರಷ್ಟಳನ್ನಾಗಿ ಮಾಡಬೇಡ. ಸತಿಗೆ ಪತಿಯೇ ಭೂಷಣವೆಂದು ನಾನಂತೂ ತಿಳಿದು ನಡೆಯುವೆನು. ಅನ್ಯ ಸ್ತ್ರೀಯರಂತೆ ನನಗೆ ಮೌಲ್ಯವಾದ ವಸ್ತ್ರಾಭರಣಗಳು ಬೇಡ; ಅಥವಾ ಬಾಹ್ಯ ಶ್ರೀಮಂತಿಕೆಯಿಂದ ಮೆರೆಯುವ ವ್ಯಸನಾಧೀನನಾದ ಪತಿಯೂ ಬೇಡ. ಒಟ್ಟಿಗೆ, ಸದ್ಗುಣಿಯಾದ ಗಂಡನ ಕೈಯಿಂದ ನನಗೆ ಪ್ರೇಮದ ಮಂಗಳಸೂತ್ರವನ್ನು ಕಟ್ಟಿಸಿದರೆ ನಾನು ಕೃತಕೃತ್ಯಳಾಗುವೆನು. ಸೀತೆ, ದಮಯಂತಿ, ಮಂಡೋದರಿ ಮುಂತಾದ ಪತಿವ್ರತಾ ಸ್ತ್ರೀರತ್ನಗಳ ಆಚರಣೆಯನ್ನು ಯಾವಾಗಲೂ ಮುಂದೆ ಇಟ್ಟುಕೊಂಡು ಅವರ ಅನುಕರಣದ ಅಭ್ಯಾಸವನ್ನು ಎಂಥ ಪತಿಯ ಕೈಯಿಂದ ಪ್ರಾರಂಭಿಸುವೆ? ದೀನಬಂಧೋ, ಸ್ತ್ರೀ ಸ್ವಾತಂತ್ರ್ಯದ ಅರ್ಥವನ್ನು ವಿಪರ್ಯಾಸ ಮಾಡಲಿಕ್ಕೆ ಬುದ್ಧಿ ಕೊಟ್ಟು " ಪತಿವ್ರತಾ " ಶಬ್ದದ ವಿಡಂಬನೆಯನ್ನು ಇನ್ನು ಎಷ್ಟು ದಿವಸಗಳ ವರೆಗೆ ಸಾಗಿಸುವೆ? ಇನ್ನೆಷ್ಟು ನಮ್ಮಲ್ಲಿ ಅನಾಚಾರ ಬೆಳೆಯುವದುಳಿದಿದೆಯೆಂದು ಮಾರ್ಗ ಪ್ರತೀಕ್ಷಿಸುವೆ? ಪತಿಗೆ ವಿಧೇಯರಾಗಿ ನಡೆಯತಕ್ಕ ನಾವು, ಈಗ ಸಮಾನ ಹಕ್ಕುಗಳ ಜಾಳಿಗೆಯ ಕೆಳಗೆ ವಿಷಯಗಳನ್ನು ಎಳೆದು ಸ್ತ್ರೀ ಸ್ವಾತಂತ್ರ್ಯದೊಳಗೆ ಮಗ್ನರಾಗಿದ್ದೇವೆ. ಪತಿಯು ಪರಊರಿಗೆ ಹೋಗಲು ಚಾತಕ ಪಕ್ಷಿಯಂತೆ ದಾರಿಯನ್ನು ನಿರೀಕ್ಷಿಸುವ ನಾವು ಈಗ ಒಳ್ಳೇ ಶೃಂಗಾರವೇಷದಿಂದ ನಟಿಸಲಿಕ್ಕೆ ಪ್ರಾರಂಭಿಸಿದ್ದೇವೆ. ಸಾರಾಂಶ, " ಸುಧಾರಣೆ "ಯೆಂಬ ಅತಿ ಮನೋಹರವಾದ ಶಬ್ದದ ಮರೆಗೆ ಮನಸ್ಸಿಗೆ ಬಂದದ್ದನ್ನು ಮಾಡಲಿಕ್ಕೆ ಸಿದ್ಧರಾಗಿದ್ದೇವೆ. ಆದ್ದರಿಂದ ಪರಮೇಶ್ವರಾ! ಎಲ್ಲ ಸಂಕಟವನ್ನು ಕೇಳಿ, ಸ್ತ್ರೀ ಜಾತಿಯ ಮರ್ಯಾದೆಯನ್ನು ಕಾಯುವ ಸಮರ್ಥನು ನೀನೇ ಇರುವೆ! " ಈ ಪ್ರಕಾರ ನಾವೋಚ್ಚಾರದ ಗರ್ಜನೆಯು; ಆ ಗರ್ಜನೆಯೊಳಗೆ ತನಗೆ ಯಾವತರದ ಪತಿಯು ಬೇಕೆಂಬ ಅಭಿಪ್ರಾಯವು; ಈ ಅಭಿಪ್ರಾಯದಲ್ಲಿ

ಪಾತಿವ್ರತ್ಯವೆಂದರೆ ಸ್ತ್ರೀದಾಸ್ಯವಲ್ಲೆಂಬ ಅವಳ ದಿವ್ಯವಿಚಾರಗಳು; ಆ ವಿಚಾರಗಳನ್ನು ಹಿಂಬಾಲಿಸಿದ ಅವಳ ಸಾಮಾಜಿಕಸುಧಾರಣೆಯ ಕಲ್ಪನೆಗಳು; ಆ ಕಲ್ಪನೆಗಳನ್ನು ಯೋಗ್ಯ ಮರ್ಯಾದೆಯಿಂದ ಕಾಯ್ದುಕೊಳ್ಳುವ ಚಾತುರ್ಯ; ಇವೆಲ್ಲವುಗಳಿಂದ ಮನೋರಮೆಯು ಬಹು ತೇಜಃಪುಂಜಳಾಗಿ ಗೋಚರವಾಗುತ್ತಿದ್ದಳು. ಈ ರೀತಿಯಿಂದ ದೇವರ ಸ್ತವನಮಾಡುತ್ತ ಮಾಡುತ್ತ ನಿದ್ರಾವಶಳಾದಳು. ಅವಳ ಅನುಪಮ ಭಕ್ತಿಯನ್ನು ನೋಡಿ, ಪರಮೇಶ್ವರನು, ಮನೋರಮೆಯ ತಂದೆತಾಯಿಗಳು ಮೊದಲು ನಿಶ್ಚಯಿಸಿದ ಮನುಷ್ಯನೆ—ಮನೋಹರನ ಮನಸ್ಸಿನೊಳಗೆ ಪ್ರೇರಣೆಯನ್ನು ಹುಟ್ಟಿಸುವ ಸಲುವಾಗಿ ಸ್ವಪ್ನದಲ್ಲಿ ಬಂದು "ಆ ಸದ್ಗುಣಾಲಂಕೃತಳಾದ ಮನೋರಮೆಯನ್ನು ವರಿಸುವದು ನಿನ್ನ ಕರ್ತವ್ಯವದೆ." ಎಂದು ಹೇಳಿ ಅದೃಶ್ಯನಾದನು. ಇತ್ತ ಪರಮೇಶ್ವರನ ವಾದಾರವಿಂದದ ಭಜನೆಯನ್ನು ಮಾಡಿ ಮಾಡಿ ನಿದ್ರಾವಶಳಾದ ಮನೋರಮೆಯಾದರೂ "ನಿನ್ನ ಇಚ್ಛಿತ ಕಾರ್ಯವು ಕೂಡಲೇ ಇಲ್ಲಿಯೇ ಸಫಲವಾಗುವದು." ಎಂದು ಯಾರೋ ಅನ್ನುವದನ್ನು ಕೇಳಿ ಎಚ್ಚೆತ್ತಳು. ಇಬ್ಬರ ಅಂತಃಕರಣಗಳು ಒಂದಾಗುವ ಸುಸಮಯವು ಪರಮೇಶ್ವರನ ಅಗಾಧ ಶಕ್ತಿಯಿಂದ ಪ್ರಾಪ್ತವಾದದ್ದು ನಮ್ಮ ವಧೂವರರಿಗೆ ಇನ್ನೂ ಗೊತ್ತಾಗಿದ್ದಿಲ್ಲ. ಮನೋಹರನು ಪ್ರತಿದಿವಸ ಇನ್ನೂ ಬಂದು ತಾನು ರಾತ್ರಿ ಇರುವಾಗಲೇ ದೇವರ ದರ್ಶನವನ್ನು ತಕ್ಕೊಂಡು ಹೋಗುತ್ತಿದ್ದನು. ದೇವಾಲಯವನ್ನು ಪ್ರವೇಶಿಸುವದಕ್ಕಿಂತ ಮೊದಲು ಅವನಿಗೆ ದೀನವಾಣಿಯಿಂದ ಈಶ ಸ್ತುತಿಯನ್ನು ಮಾಡುವ ಮಧುರವಾದ ಸ್ವರವು ಕೇಳಿಸಿತು. ದೇವರ ದರ್ಶನಕ್ಕೆ ಆತುರನಾದ ಅವನು ಈ ಚಮತ್ಕಾರವನ್ನು ನೋಡಬೇಕೆಂದು ಮನೋರಮೆಗೆ ಗೊತ್ತಿಲ್ಲದೆ ಅವಳ ಹಿಂದೆ ಹೋಗಿ ನಿಂತನು. ದೇವರ ವಿಚಾರಗಳಲ್ಲಿ ಮಗ್ನಳಾದ ಆ ಭಕ್ತಳಿಗೆ ತನ್ನ ದೈವವು ತನ್ನ ಹಿಂದೆ ನಿಂತದೆಯಂಬ ವಿಚಾರವು ಹ್ಯಾಗೆ ಬರಬೇಕು? "ಹೇ ಸ್ನೇಹ ಶೂನ್ಯವಾದ ನಿರ್ದಯ ದೈವವೇ, ಇಂಥ ದುರವಸ್ಥೆಯಲ್ಲಿ ನನ್ನನ್ನು ತಂದು ಬಿಟ್ಟಿಯಾ? ನಾರಾಯಣಾ ನಿನಗೆ ಕಡೆಯ ಪ್ರಣಾಮವು." ಎಂದು ಬಳಿಯಲ್ಲಿದ್ದ ಶಸ್ತ್ರಕ್ಕೆ ತನ್ನ ದೇಹದ ಆಹುತಿಯನ್ನು ಕೊಡಬೇಕೆನ್ನುವಷ್ಟರಲ್ಲಿ ಮನೋಹರನು ಅದನ್ನು ಕಸಕೊಂಡು ಮುಂದೆ ಬಂದು ನಿಂತನು.

ಮುಂದೆ ವಿಧಿಪೂರ್ವಕ ವಿವಾಹವಾಗಿ ಆ ದಂಪತಿಗಳು ಸನ್ಮಾನನೀಯವಾದ ಆಚರಣೆಯಿಂದ ನಡೆದು ಅಲೌಕಿಕ ಕೀರ್ತಿಯನ್ನು ಹೊಂದಿದರೆಂಬ ಸಂಗತಿಯನ್ನು ಬೇರೆ ಹೇಳುವ ಕಾರಣವಿಲ್ಲ.

ಇದರಿಂದ "ಬಿತ್ತಿದ್ದನ್ನು ಬೆಳಕೋ" ಎಂಬ ಗಾದೆಯ ಮಾತು ಸ್ಮರಣಕ್ಕೆ ಬಾರದಿರದು. ಗೃಹಶಿಕ್ಷಣದ ಯೋಗದಿಂದ ಆ ಸಾಧ್ವಿಯ ಮನಸ್ಸು ವಿಸ್ತೃತವಾಗಿತ್ತು. ಕಡೆಗೆ ಅವಳಿಗೆ ಮಧುರ ಫಲವೇ ದೊರೆತಿತು. ದುಷ್ಕರ್ಮಕ್ಕೆ ಶಿಕ್ಷೆ ತಪ್ಪದೆಂಬ ಸಂ

ಗತಿಯಾದರೂ ಮೇಲಿನ ಸಂಗತಿಯಿಂದ ಸಿದ್ಧವಾಗುತ್ತದೆ. ಆದ್ದರಿಂದ ನೀತಿ–ಧರ್ಮ ಗಳ ಅಮೌಲಿಕ ತತ್ವಗಳ ವಿಚಾರವನ್ನು ಗೃಹಶಿಕ್ಷಣದಲ್ಲಿ ಹೊಂದಿ ಎಲ್ಲರೂ ನಾಗರಿಕರಾಗಲೆಂದು ಕೋರುತ್ತೇವೆ.

G. B. Hukeri.

ದೈವುಳ್ಳತನವೂ ಬಡತನವೂ.

ಸಂಪತ್ತು ಮತ್ತು ವಿಪತ್ತು ಅಥವಾ ದೈವುಳ್ಳತನ ಮತ್ತು ಬಡತನ ಎಂಬ ವಿಷಯಗಳ ಮೇಲೆ ಈ ವರೆಗೆ ಅನೇಕರು ಅನೇಕ ಲೇಖಗಳನ್ನು ಬರೆದಿರುವರು. ಆದರೆ ಬಹುಶ: ಎಲ್ಲರೂ ಸಂಪತ್ತು ಇಹಲೋಕದ ಸರ್ವಸುಖಗಳಿಗೆ ಸಾಧನವೂ, ವಿಪತ್ತು ಯಾವತ್ತು ದು:ಖಗಳ ಮತ್ತು ಕ್ಲೇಶದ ಆಗರವೂ ಎಂದು ಪ್ರತಿವಾದಿಸಿರುವರು!

ಆದರೆ ಸೂಕ್ಷ್ಮವಿಚಾರ ಮಾಡಿದರೆ ಮೇಲಿನ ವಿಧಾನವು ನಿಜವಾದದ್ದಲ್ಲೆಂದು ಕಂಡುಬರುವದು. ನಾವು ಯಾರಿಗೆ ಶ್ರೀಮಂತರೆಂದೆನ್ನುತ್ತೇವೋ ಅವರು ಅನೇಕ ಸಂಗತಿಗಳಲ್ಲಿ ಅತ್ಯಂತ ಬಡವರಿರುತ್ತಾರೆ; ನಾವು ಯಾರನ್ನು ಬಡವರೆಂದೆಣಿಸುತ್ತೇವೊ ಅವರು ಕೆಲವು ವಿಷಯಗಳಲ್ಲಿ ಒಳ್ಳೇ ಶ್ರೀಮಂತರಿರುತ್ತಾರೆ. ಸರ್ವಸಾಧಾರಣವಾಗಿ ಒಬ್ಬಾನೊಬ್ಬ ಮನುಷ್ಯನ ದೈವುಳ್ಳತನವನ್ನು ಅಥವಾ ಬಡತನವನ್ನು ಅವನಲ್ಲಿರುವ ದುಡ್ಡಿನ ಮೇಲಿಂದ ಗೊತ್ತು ಮಾಡುತ್ತಾರೆ; ಆದರೆ ಈ ಪರಿಮಾಣವು ತಪ್ಪು. ಮನುಷ್ಯರ ದೈವುಳ್ಳತನವು ಅಥವಾ ಬಡತನವು ಅವರ ಆದಾಯ ವ್ಯಯಗಳ ಮೇಲೆ ಅವಲಂಬಿಸಿರುವದಿಲ್ಲ; ಆದರೆ ಅವರಲ್ಲಿರುವ ಕರ್ತೃತ್ವಶಕ್ತಿ, ಇಚ್ಛೆ ಮುಂತಾದವುಗಳ ಮೇಲೆ ಅವಲಂಬಿಸಿರುತ್ತದೆ. ಯಾವ ಮನುಷ್ಯನಿಗೆ ಅವನ ಯೋಗ್ಯವಾದ ಇಚ್ಛೆಗಳನ್ನು ಪೂರೈಸುವದಕ್ಕೂ, ಅವನ ಅವಶ್ಯವಾದ ವ್ಯಯಕ್ಕೂ ಸಾಕಷ್ಟು ಆದಾಯವಿರುವದಿಲ್ಲವೊ ಅವನು ಬಡವನೆಂದು ನಿರ್ವಿವಾದವಾಗಿ ಹೇಳಬಹುದು. ಅದೇ ಮೇರೆಗೆ ಯಾವನ ಇಚ್ಛೆಯು ಕಡಿಮೆ ಇರುವದೊ ಮತ್ತು ಯಾವನಿಗೆ ಅವಶ್ಯವಾದ ವ್ಯಯವನ್ನು ಮಾಡಿಕೊಂಡು ಸ್ವಲ್ಪಾದರು ಹಣವನ್ನು ಸಂಗ್ರಹ ಮಾಡಲಿಕ್ಕಾಗುವದೊ ಅವನು ಜನರ ದೃಷ್ಟಿಯಿಂದ ಬಡವನಿದ್ದರೂ, ಶ್ರೀಮಂತನೆಂದು ನಿಷ್ಕರ್ಷವಾಗಿ ಹೇಳಬಹುದು. ಅಂದ ಮೇಲೆ ತಿಂಗಳೊಂದಕ್ಕೆ ಒಂದು ಸಾವಿರ ರೂಪಾಯಿಗಳನ್ನು ಗಳಿಸುವಂಥ, ಆದರೆ ಹತ್ತನೆಯ ತಾರೀಖು ಆದ ಕೂಡಲೆ ಮುಂದಿನ ತಿಂಗಳ ಮೊದಲನೆಯ ತಾರೀಖಿನ

ಪೂರ್ವಾನುಭವವನ್ನು ಚಾತಕಪಕ್ಷಿಯಂತೆ ಮಾಡುವಂಥ ರಾವಸಾಹೇಬರು ಬಡವರೆಂದೂ, ಮತ್ತು ಅವರ ಮನೆಯಲ್ಲಿಯೇ ಇದ್ದದ್ದುಬಿದ್ದದ್ದನ್ನೂ, ತಂಗಳನ್ನವನ್ನೂ ತಿಂದು, ಜೀವನ ಮಾಡಿಕೊಂಡು, ತನಗೆ ತಿಂಗಳೊಂದಕ್ಕೆ ಸಿಕ್ಕುವ ಸಂಬಳದಲ್ಲಿ ಎರಡೇ ರೂಪಾಯಿಗಳನ್ನು ಸಂಗ್ರಹದಲ್ಲಿಡುವಂಥ ಹಣಮನು ಶ್ರೀಮಂತನೆಂದೂ ಸ್ಪಷ್ಟವಾಗಿ ಹೇಳಬಹುದು!

ಮೇಲೆ ಹೇಳಿದಂತೆ ದೈನ್ಯಭೀತನ ಮತ್ತು ಬಡತನಗಳ ಕಲ್ಪನೆಯು ಹ್ಯಾಗೆ ಭ್ರಮಮೂಲಕವಾಗಿರುವದೋ ಅದೇ ಬಗೆಯ ಇನ್ನೊಂದು ಭ್ರಾಮಕವಾದ ಕಲ್ಪನೆಯು ಕೆಲವರಲ್ಲಿ ವಾಸಮಾಡಿಕೊಂಡಿರುವದು. ಒಬ್ಬನಲ್ಲಿ ಬಹಳ ಸಂಪತ್ತು ಇದ್ದರೆ, ಅಥವಾ ಅವನು ಅನೇಕ ವೈಭವಗಳನ್ನು ಭೋಗಿಸುತ್ತಿದ್ದರೆ ನಾವು ಅವನಿಗೆ ಶ್ರೀಮಂತನೆಂದೆನ್ನುತ್ತೇವೆ. ಆದರೆ ಈ ಶ್ರೀಮಂತಿಕೆಯು ಗೌಣವಾದದ್ದು. ಪವಿತ್ರವಾದ ಅಂತಃಕರಣ, ನಿರ್ಮಲವಾದ ವರ್ತನ, ಶ್ರೇಷ್ಠವಾದ ಬುದ್ಧಿಮತ್ತೆ ಮುಂತಾದ ಗುಣಗಳಿಂದ ಮಂಡಿತನಾದ ಮನುಷ್ಯನು ಹ್ಯಾಗೆ ಶ್ರೀಮಂತನೆಂಬ ಪದವಿಗೆ ಶೋಭಿಸುತ್ತಾನೊ, ಹಾಗೆ ಮುಂಜಾವಿನಿಂದ ಸಂಜೆಯ ವರೆಗೆ ದುಡ್ಡು, ದುಡ್ಡು ಎಂದು ಕನಕರಿಸುವಂಥ, ಈ ಜಗತ್ತಿನಲ್ಲಿ ದುಡ್ಡೇ ದೊಡ್ಡಪ್ಪನೆಂದು ತಿಳಿದು ನಡೆಯುವಂಥ ಮನುಷ್ಯನು ಆ ಪದವಿಗೆ ಒಪ್ಪುವದಿಲ್ಲ. ಇಂಥ ಶ್ರೀಮಂತ ಜನರ ದ್ರವ್ಯಮದದಿಂದಲೂ, ಸುಖೋಪಭೋಗಗಳ ಅನಿವಾರ ಇಚ್ಛೆಯಿಂದಲೂ ಅನೇಕ ಅನರ್ಥಕಾರಕ ಪ್ರಸಂಗಗಳೊದಗಿದ್ದನ್ನು ನಾವು ಅನೇಕಾವರ್ತಿ ನೋಡುತ್ತೇವೆ. ಮನುಷ್ಯನ ಹತ್ತರ ದುಡ್ಡು ಇತ್ತೆಂದರೆ ಅವನು ಉದ್ಯೋಗವ್ಯವಸಾಯದ ಕಡೆಗೆ ಮನಸು ಹಚ್ಚುವದಿಲ್ಲ. ವ್ಯಸನಗಳಲ್ಲಿಯೂ, ಸುಖೋಪಭೋಗದಲ್ಲಿಯೂ ಕಾಲ ಕಳೆಯುವದರ ಕಡೆಗೇ ಅವನು ಹೆಚ್ಚೆಚ್ಚು ಪ್ರವರ್ತಿಸುತ್ತಾನೆ. ಕಡೆಗೆ ಅವನು ಕೇಡಿಗೊಳಗಾಗುತ್ತಾನೆ. ಆದದರಿಂದ ದ್ರವ್ಯದ ಬಗ್ಗೆ ಅತಿ ಲೋಭವು ಒಳ್ಳೇದಲ್ಲ.

ವ್ಯಕ್ತಿಯ ಸ್ಥಿತಿಯೇ ರಾಷ್ಟ್ರದ ಸ್ಥಿತಿಯು. ರಾಷ್ಟ್ರವೆಂದರೆ ವ್ಯಕ್ತಿ ಸಮುದಾಯವು. ಪ್ರತಿಯೊಂದು ಬಲಿಷ್ಠವಾದ ರಾಷ್ಟ್ರದ ಇತಿಹಾಸದಲ್ಲಿ ಕೆಡಗಾಲದ ಸಮಯಕ್ಕೆ ಒಂದು ವಿಲಕ್ಷಣವಾದ ಸ್ಥಿತಿಯುಂಟಾಗುತ್ತದೆ. ಅದೇನೆಂದರೆ ರಾಷ್ಟ್ರದೊಳಗಿನ ಪ್ರಮುಖ ವ್ಯಕ್ತಿಗೆ, ವಿಶೇಷತಃ ಸರದಾರ, ಮಾನಕರಿ ಮುಂತಾದವರಿಗೆ ಸಂಪತ್ತೇ ಸರ್ವಸ್ವವು, ದ್ರವ್ಯಾರ್ಜನವೇ ಇತಿ ಕರ್ತವ್ಯವು, ಎಂದು ತೋರಹತ್ತುತ್ತದೆ; ಬರಬರುತ್ತ ಅವರು ತಮ್ಮ ಮುಂಚಿನ ಉದಾತ್ತವಾದ ವಿಚಾರಗಳಿಂದ ಚ್ಯುತರಾಗುತ್ತಾರೆ; ಮತ್ತು ತಮ್ಮ ರಾಷ್ಟ್ರದ, ತಮ್ಮ ಸರ್ವಸ್ವದ, ತಮ್ಮ ವಿಮಲವಾದ ಕೀರ್ತಿಯ ಹಾನಿಯನ್ನು ಮಾಡಿಕೊಳ್ಳುತ್ತಾರೆ. ಜಗತ್ತಿನಲ್ಲಿ ಅತಿ ಬಲಾಢ್ಯವಾದದ್ದೂ, ವೈಭವಶಾಲಿಯಾದದ್ದೂ ಎಂದು ಹೆಸರುವಾಸಿಯಾದ ರೋಮನ್ ರಾಷ್ಟ್ರವು

ಇವೇ ಅವಗುಣಗಳಿಂದ ಮಣ್ಣುಪಾಲಾಗಿ ಹೋಯಿತು. ಮತ್ತು ಯಾವ ರಾಷ್ಟ್ರಗಳು ಸಂಪತ್ತಿನ ಮದದಿಂದ ಮತ್ತವಾಗಿ ಸ್ವೈರವರ್ತನ ಮಾಡುತ್ತವೊ ಅಂಥ ರಾಷ್ಟ್ರಗಳ ಸ್ಥಿತಿಯಾದರು ರೋಮನ ರಾಷ್ಟ್ರದ ಸ್ಥಿತಿಯಂತೆಯೇ ಆಗುವದೆಂದು ಇತಿಹಾಸವು ಸಾರಿಹೇಳುತ್ತದೆ.

ಈ ಜಗತ್ತಿನಲ್ಲಿ ಮಾನಮಾನ್ಯತೆಗೂ, ವೈಭವಕ್ಕೂ ದ್ರವ್ಯವೇ ಕಾರಣವಿರುವದೆಂದು ಒಮ್ಮೆ ಯಾವದಾದರೊಂದು ಸಮಾಜದ ಅಥವಾ ರಾಷ್ಟ್ರದ ತಿಳುವಳಿಕೆಯಾಯಿತೆಂದರೆ ಆ ಸಮಾಜದಲ್ಲಿ ಅಥವಾ ರಾಷ್ಟ್ರದಲ್ಲಿ ಸದ್ಗುಣಗಳ ವರ್ಚಸ್ವವು ಕಡಿಮೆಯಾಗುತ್ತ ಹೋಗುತ್ತದೆ; ಮತ್ತು ಒಡತನವು ಒಂದು ಬಸೆಯಿಂದ ಮಾನಖಿಂಡನೆಗೆ ಸಾಧನವಿರುವದೆಂದು ಸಮಾಜವು ತಿಳುಕೊಳ್ಳುತ್ತದೆ. ಅದದರಿಂದ ಏನಕೇನ ಪ್ರಕಾರದಿಂದ ನ್ಯಾಯದಿಂದಾಗಲಿ, ಅನ್ಯಾಯದಿಂದಾಗಲಿ ದ್ರವ್ಯಾರ್ಜನದ ಹೊರತು ಬೇರೆ ಹವ್ಯಾಸವೇ ಇಲ್ಲದಂತಾಗುತ್ತದೆ. ಇಂಥ ಸ್ಥಿತಿಯಲ್ಲಿ ನಿರುಪದ್ರವಿಯಾದ ವರ್ತನಕ್ರಮವು ಹೇಡಿತನದ ಅಥವಾ ಅಪೌರುಷ್ಯದ ದ್ಯೋತಕವಾಗುತ್ತದೆ; ದುಡ್ಡು ಗಳಿಸುವದಕ್ಕಾಗಿ ಅಧಿಕಾರದ ದುರುಪಯೋಗವಾಗಹತ್ತುತ್ತದೆ; ತರುಣ ಜನರಲ್ಲಿ ದುಂದುಗಾರಿಕೆಯೂ, ಚೈನವೂ, ಲೋಭವೂ, ಗರ್ವವೂ ಮನೆ ಮಾಡುತ್ತವೆ; ಅವರು ವಿಶೇಷ ಶ್ರಮವಿಲ್ಲದೆ ಸಿಕ್ಕ ಸಂಪತ್ತನ್ನು ನೀರಿನಂತೆ ವೆಚ್ಚ ಮಾಡುತ್ತಾರೆ; ಅರ್ಥಾತ್ ಅವರ ಹತ್ತಿರಿದ್ದ ದ್ರವ್ಯಸಂಚಯವು ತೀವ್ರವೇ ಸಂಪುಷ್ಟಕ್ಕೆ ಬರುತ್ತದೆ; ಆದರೆ ಅಪರಿಗೆ ಜನ್ಮದಾರಭ್ಯ ದುಂದುಗಾರಿಕೆಯು, ಸುಖೋಪಭೋಗದ ಇಚ್ಛೆಯು ಅನಿವಾರ್ಯವಾದದ್ದರಿಂದ ಅವರು ತಮ್ಮಲ್ಲಿಯ ದ್ರವ್ಯವು ಅಳಿದು ಹೋಯಿತೆಂದರೆ, ಪರರ ದ್ರವ್ಯಕ್ಕೆ ಕಿವಿಜೋತುಕೊಂಡು ಕುಳಿತುಕೊಳ್ಳುವರು; ನಾಚಿಕೆಯನ್ನೂ, ವಿನಯವನ್ನೂ, ಸೌಜನ್ಯವನ್ನೂ, ಮಾನಮಾನ್ಯತೆಯನ್ನೂ ಅವರು ಒಂದು ಗಂಟಿನಲ್ಲಿ ಕಟ್ಟಿ ಒತ್ತಟ್ಟಿಗಿಟ್ಟು ಬಿಡುತ್ತಾರೆ; ಯೋಗ್ಯಾಯೋಗ್ಯತೆಗಳನ್ನೂ, ನ್ಯಾಯಾನ್ಯಾಯಗಳನ್ನೂ, ಧರ್ಮಾಧರ್ಮಗಳನ್ನೂ ಅವರು ಲೆಕ್ಕಿಸುವದಿಲ್ಲ; ಕಟ್ಟಕಡೆಗೆ ಈ ನರಪಶುಗಳು ತಾಳಗೆಟ್ಟು ಭೂಮಾತೆಗೆ ಅಸಹ್ಯವಾದ ಪೀಡೆಯನ್ನು ಕೊಡಹತ್ತುವರು; ಇಂದ್ರಿಯಗಳನ್ನು ತೃಪ್ತಿ ಪಡಿಸುವದಕ್ಕಾಗಿ ಅವರು ಬಗೆಬಗೆಯ ವಿಷಯವಾಸನೆಗಳಲ್ಲಿ ನಿಮಗ್ನರಾಗುತ್ತಾರೆ. ಆದರೆ ಹೀಗೆ ಮಾಡುವದರಿಂದ ಅವರ ವಿಷಯವಾಸನೆಯು ತೃಪ್ತಿಯಾಗುವದಂತೂ ಇಲ್ಲವೇ ಇಲ್ಲ; ಇದಕ್ಕೆ ವಿಪರೀತವಾಗಿ ಅದು ಉತ್ತರೋತ್ತರ ಪ್ರಬಲವಾಗುತ್ತ ನಡೆಯುತ್ತದೆ; ಕಟ್ಟಕಡೆಗೆ ಈ ನರಾಧಮರು ಪಾಪಪಂಕದಲ್ಲಿ ತಲೆತನಕ ಸಿಕ್ಕುಬೀಳುವರು. ವಿಷಯಸೇವನೆ ಮಾಡಿ ಮಾಡಿದ ಹಾಗೆ ವಿಷಯವಾಸನೆಯು ಹೆಚ್ಚೆಚ್ಚಾಗುತ್ತದೆ; ಅಗ್ನಿಯಲ್ಲಿ ಕಾಷ್ಠಗಳನ್ನು ಹಾಕಿದರೆ ಅದು ಪ್ರಜ್ವಲಿಸದೆ ಇದ್ದೀತೆ?

ಈ ಬಗೆಯ ಅನಿವಾರವಾದ ದ್ರವ್ಯತೃಷ್ಣೆಯೂ, ತದನುಷಂಗಿಕವಾದ ದ್ರವ್ಯ ಮದವೂ ರೋಮನ ಜನರಲ್ಲಿ ಮೊದಲನೆಯ ಶತಕದ ಆರಂಭಕ್ಕೆ ತಲೆದೋರಿದ್ದರಿಂದ ಅವರ ರಾಷ್ಟ್ರರೂಪಿಯಾದ ಚಂದ್ರನು ಮೆಲ್ಲ ಮೆಲ್ಲನೆ ಕಳೆಗುಂದುತ್ತ ನಡೆದನು; ಕಡೆಗೆ ಆ ಬಲಿಷ್ಠವಾದ ರಾಷ್ಟ್ರವು ನಾಮಶೇಷವಾಯಿತು. ಅವರ ವಿಷಯ ಸೇವನೆಯೂ ಇಂದ್ರಿಯಗಳನ್ನು ತೃಪ್ತಿ ಪಡಿಸಬೇಕೆಂಬ ಅವರ ಅನಿವಾರವಾದ ಇಚ್ಛೆಯೂ, ಬಹಿರಂಗದಲ್ಲಿ ಜನಲಜ್ಜೆ ಮನಲಜ್ಜೆಯನ್ನು ಬಿಟ್ಟು ಮಾಡುವ ಅವರ ವ್ಯಭಿಚಾರವೂ, ಅವರ ಮೈಗಳ್ಳತನವೂ, ಶಿಖರಕ್ಕೆ ಹೋದವು; ಸ್ತ್ರೀ ಪುರುಷರು ಲಜ್ಜಾದೇವಿಯನ್ನೂ ನೀತಿಯನ್ನೂ ಧರ್ಮವನ್ನೂ ಪಾಪಪುಣ್ಯಗಳನ್ನೂ ಒಂದು ಬದಿಗೆ ದೂಡಿಬಿಟ್ಟರು; ತೃಷ್ಣೆಯ ನಿವಾರಣಾರ್ಥ ಬಗೆಬಗೆಯ ಉಪಾಯಗಳನ್ನು ಯೋಚಿಸಹತ್ತಿದರು. ತಮ್ಮ ಸ್ನೇಹಿತರ ವರ್ತನದಿಂದ ಅವರು ನಿದ್ರಾದೇವಿಯ ಸ್ವಾಭಾವಿಕ ಕೃಪೆಗೆ ಎರವಾದರು; ಅರ್ಥಾತ್ ನಿದ್ರೆಯ ಸುಖಕರವಾದಂಥ ಆಹ್ಲಾದಜನಕವಾದಂಥ ಸಮಾಗಮಕ್ಕೆ ಎರವಾದದರಿಂದ ಅವರು ಅನೇಕ ಮಾದಕ ಪದಾರ್ಥಗಳ ಸೇವನದಿಂದ ನಿದ್ರಾದೇವಿಯನ್ನು ಆರಾಧಿಸತೊಡಗಿದರು; ಕ್ಷುಧೆಯಾದಾಗ ಏನೂ ತಿನ್ನದೆ, ಹಸಿವು ಇಲ್ಲದಾಗ ಆ ವಿಚಾರದಿಂದ ಅವೇಳೆಯಲ್ಲಿ ಜಡವಾದಂಥ, ಅಪಚನೀಯವಾದಂಥ ಪದಾರ್ಥಗಳನ್ನು ತಿಂದು ರೋಗಗಳಿಂದ ಪೀಡಿತರಾದರು. ಮೇಲೆ ವಿವರಿಸಿದಂಥ ಮತ್ತು ಇನ್ನೂ ಅನೇಕ ದುರ್ಗುಣಗಳ ದಾಸರಾಗಿ ತರುಣ ಜನರು ತಮ್ಮ ಹಿರಿಯರು ಗಳಿಸಿಟ್ಟ ಹಣವನ್ನು ಹಾಳು ಮಾಡಿ ಕಳವು, ಕೊಲೆಸುಲಿಗೆ ಮುಂತಾದ ಅನನ್ವಿತ ಕೃತ್ಯಗಳನ್ನು ಮಾಡತೊಡಗಿದರು. ಕಟ್ಟ ಕಡೆಗೆ ಅವರು ಅಧೋಗತಿಯನ್ನು ಹೊಂದಿದರು. ಓದಲಿಕ್ಕೆ ಬಲ್ಲವರು ಇಂಥ ನರಾಧಮರ ನಾಯಕನಾದ "ಕ್ಯಾಟಿಲಿನ್" ಎಂಬವನ ಚರಿತ್ರವನ್ನು ರೋಮುದೇಶದ ಇತಿಹಾಸದೊಳಗಿನ "Conspiracy of Catiline" (ಕ್ಯಾಟಿಲಿನನ ಒಳಸಂಚು) ಎಂಬ ಪ್ರಕರಣವನ್ನು ಅವಶ್ಯವಾಗಿ ಓದಿ ನೋಡಬೇಕು.

ಸೌಮ್ಯಸ್ವರೂಪಳೂ, ಉಜ್ವಲಳೂ, ಸುಖದಾಯಕಳೂ, ಆದ ಲಕ್ಷ್ಮಿಯ ಯಥಾರ್ಥ ವರ್ಣನೆಯನ್ನು ಮಾಡುವದರಲ್ಲಿ ಅನೇಕರ ಮತಿಯು ಕುಂಠಿತವಾಗಿ ಹೋಗಿರಲು, ನಾವು ಮಾತ್ರ ಲಕ್ಷ್ಮಿಯು ಕೃಷ್ಣ ಸ್ವರೂಪಳೂ, ಕುರೂಪಿಯೂ, ಅನರ್ಥಕಾರಕಳೂ, ಇರುವಳೆಂದು ಮೇಲೆ ವರ್ಣಿಸಿದ್ದು ನೋಡಿ ವಾಗ್ಭೂಷಣದ ವಾಚಕರು ವಿಸ್ಮಯಪಡಬಹುದು. ಇದೇ ಮೇರೆಗೆ ಲಕ್ಷ್ಮಿಯ ಹಿರಿಯ ಅಕ್ಕನ ಅಂದರೆ ಬಡತನದ ಸಮರ್ಥನ ಮಾಡಿದ್ದು ಕಂಡು ವಾಚಕರು ರೋಷಗೊಳ್ಳಬಹುದು. ಆದರೆ ನಾವು ಈ ವರೆಗೆ ಮೇಲೆ ಹೇಳಿದ್ದು ಮತ್ತು ಮುಂದೆ ಹೇಳತಕ್ಕದ್ದು ಕೇವಲ ಸ್ವಕಪೋಲಕಲ್ಪಿತವಲ್ಲ; ಅವುಗಳಿಗೆ ಇತಿಹಾಸದ ಬೆಂಬಲವುಂಟು. ಇತಿಹಾಸದ

ಸಹಾಯದಿಂದಲೇ ನಾವು ಲಕ್ಷ್ಮಿಯು ಅನರ್ಥೋತ್ಪಾದಕಳೂ, ಜ್ಯೇಷ್ಠಾ ಲಕ್ಷ್ಮಿಯು ಕೀರ್ತಿಮಂದಿರದ ಅಂತ:ಪುರವನ್ನು ಪ್ರವೇಶ ಮಾಡತಕ್ಕವಳೂ ಇರುವರೆಂದು ತೋರಿಸುವದಕ್ಕೆ ಪ್ರಯತ್ನ ಮಾಡುತ್ತಿರುವೆವು.

ಯಾವದಾದರೊಂದು ಸಮಾಜದ ಅಥವಾ ರಾಷ್ಟ್ರದ ಜನರು ಸರ್ವಸಂಪತ್ಸಮೃದ್ಧಿಗಳಿಂದ ಮತ್ತರಾಗಿ ಸುಖೋಪಗಗಳಲ್ಲಿಯೂ, ದುಂದುಗಾರಿಕೆಯಲ್ಲಿಯೂ, ಹೊರಳಾಡುತ್ತಿರುವ ಕಾಲವು ಆ ಸಮಾಜದ ಅಥವಾ ಆ ರಾಷ್ಟ್ರದ ಅಭ್ಯುದಯದ ಕಾಲವಲ್ಲ. ಆದರೆ ಸಮಾಜದೊಳಗಿನ ಅಥವಾ ರಾಷ್ಟ್ರದೊಳಗಿನ ಪ್ರತಿಯೊಂದು ವ್ಯಕ್ತಿಯು ಸ್ವಾವಲಂಬಿಯಾಗಿ, ಸ್ವಕರ್ತವ್ಯವನ್ನು ಮಾಡುವದರಲ್ಲಿ ತೊಡಗಿರುವ ಕಾಲವೇ ಅಭ್ಯುದಯದ ಕಾಲವು. ಸ್ವಾವಲಂಬನದ ನಿಜವಾದ ಬೆಲೆಯನ್ನು ತಿಳುಕೊಂಡು ರಾಷ್ಟ್ರದೊಳಗಿನ ಪ್ರತಿಯೊಂದು ವ್ಯಕ್ತಿಯು ತನ್ನ ಉದ್ಯೋಗ ವ್ಯವಸಾಯವನ್ನು ಮಾಡಹತ್ತಿದರೆ ಮಾತ್ರ, ಆ ರಾಷ್ಟ್ರವು ಉನ್ನತಸ್ಥಿತಿಯನ್ನು ಹೊಂದುತ್ತದೆ. ಕೇವಲ ದ್ರವ್ಯಲಾಲಸೆಯಿಂದ ರಾಷ್ಟ್ರಕ್ಕೆ ಉನ್ನತ ಸ್ಥಿತಿಯು ಪ್ರಾಪ್ತವಾಗುವದಿಲ್ಲ. ಜಪಾನದಂಥ ಚಿಕ್ಕ ರಾಷ್ಟ್ರವು ಅತ್ಯಲ್ಪಕಾಲದಲ್ಲಿ ದಿಗಂತಕೀರ್ತಿಯನ್ನು ಸಂಪಾದಿಸಲಿಕ್ಕೆ ಸ್ವಾವಲಂಬನ ಮತ್ತು ಸ್ವಕರ್ತವ್ಯದಕ್ಷತೆ ಇವೇ ಕಾರಣಗಳು.

ಈ ಜಗತೀತಲದ ಮೇಲೆ ಆಗಿ ಹೋದ ದೊಡ್ಡ ದೊಡ್ಡ ಜ್ಞಾನಿಗಳೂ, ತತ್ವವಿದರೂ ಬಹುಶ: ಬಡಸ್ಥಿತಿಯಲ್ಲಿದ್ದರೆಂದು ಇತಿಹಾಸವು ಹೇಳುತ್ತದೆ. ಒಬ್ಬ ಮಹಾಪುರುಷನು ಅಂದು ತೋರಿಸಿದ್ದೇನಂದರೆ " ಬಡತನವು ತತ್ವಜ್ಞಾನದ ತೊತ್ತು " ಅದು ಮಿತದಿಂದ ನಡೆಯುವದಕ್ಕೂ, ಮಿತಾಹಾರ ಮಾಡುವದಕ್ಕೂ ಅಲ್ಪಸಂತೋಷಾದಿ ಗುಣಗಳನ್ನು ಕಲಿಸುವಂಥ, ಒಳ್ಳೇ ಕೆಲಸವನ್ನು ಮಾಡಿಸುವಂಥ, ಉದ್ದಾಮತನವನ್ನು ಹೋಗಲಾಡಿಸುವಂಥ, ಸತ್ಯ ಮತ್ತು ಹಿತೋಪದೇಶವನ್ನು ಹೇಳುವಂಥ ಮಿತ್ರನಾಗಿರುತ್ತದೆ. ಅದು ಯಾರಿಗೂ ಗರ್ವಮದದಿಂದ ಮತ್ತರಾಗಗೊಡುವದಿಲ್ಲ; ಅಧಿಕಾರಬಲದಿಂದ ಭ್ರಷ್ಟರಾಗಗೊಡುವದಿಲ್ಲ; ಸತ್ತೆಯ ಜೋರಿನಿಂದ ಒತ್ತಾಯ ಮಾಡಗೊಡುವದಿಲ್ಲ; ಯಾರ ಉಪಮರ್ದವನ್ನು ಮಾಡಗೊಡುವದಿಲ್ಲ. ಯಾಕೆಂದರೆ ಅದು ಯಾವಾಗಲೂ ಆಶೆ, ತೃಷ್ಣೆ ಮುಂತಾದ ವಿಕಾರಗಳಿಂದ ಮುಕ್ತವಾಗಿರುತ್ತದೆ. ಈ ಹೊತ್ತಿನವರೆಗೆ ಜಗತ್ತಿನಲ್ಲಿ ಅನನ್ವಿತ ಕೃತ್ಯಗಳನ್ನು ಮಾಡಿ ಇತಿಹಾಸದಲ್ಲಿ ಪ್ರಸಿದ್ಧಿಗೆ ಬಂದವರ ಹೆಸರುಗಳನ್ನು ಬೇಕಾದರೆ ಓದಿ ನೋಡಿರಿ; ಇಂಥ ಭಯಂಕರವಾದಂಥ, ಅಸಹ್ಯವಾದಂಥ, ಘೋರವಾದಂಥ ಕೃತ್ಯವನ್ನು ಇಂಥ ಬಡ ಮನುಷ್ಯನು ಮಾಡಿದನೆಂದು ನಿಮಗೆ ಕ್ವಚಿತವಾಗಿ ಕಂಡುಬರುವದು. ಅದೇ ಮೇರೆಗೆ ಪೃಥ್ವಿಯಲ್ಲಿ ಪ್ರಸಿದ್ಧಿ

ಯನ್ನು ಪಡೆದಂಥ, ತಮ್ಮ ಅಲೌಕಿಕ ಗುಣಗಳಿಂದ ಭೂಮಾತೆಗೆ ಲಲಾಮಭೂತ ರಾದಂಥ ಮಹಾಭಾಗರ ಪಟ್ಟಿಯಲ್ಲಿ ಲಕ್ಷ್ಮೀಪುತ್ರರ ಹೆಸರು ಕ್ವಚಿತವಾಗಿ ಕಂಡು ಬರುವದು. ಹಿರಿಯ ಅಕ್ಕನ ವರಪ್ರದಾನ ಪಡೆದಂಥ ಜನರ ಹೆಸರುಗಳೇ ಆ ಪಟ್ಟಿಯು ಲ್ಲಿದ್ದದ್ದು ನಿಮಗೆ ತೋರಿಬರುವದು.

ಹುಡುಗನ ಭಾವೀ ದೊಡ್ಡಿಸ್ತನವು ತೊಟ್ಟಿಲಲ್ಲಿಯೇ ನಿದರ್ಶನಕ್ಕೆ ಬರುತ್ತ ದೆಂದು ಹೇಳುತ್ತಾರೆ; ಇದು ಯಥಾರ್ಥವಿದ್ದಂತೆ ತೋರುತ್ತದೆ. ಈ ಹೊತ್ತಿನ ವರೆಗೆ ಆಗಿ ಹೋದ ಅಲೌಕಿಕ ಪುರುಷರೆಲ್ಲರು ಬಹುಶಃ ಬಡತನದಲ್ಲಿಯೇ ಬೆಳೆದ ವರೆಂದು ಇತಿಹಾಸವು ಹೇಳುತ್ತದೆ. ಅವರ ಗುಣಗಳೆಲ್ಲ ತೊಟ್ಟಿಲಲ್ಲಿಯೇ ಕಂಡು ಬರಹತ್ತಿದ್ದವು; ಮತ್ತು ದಾರಿದ್ರ್ಯ ಮಾತೆಯೇ ತನ್ನ ಈ ಮಕ್ಕಳ ಗುಣಪೋಷಣೆ ಯನ್ನು ಒಳ್ಳೇ ಆಸ್ಥೆಯಿಂದ ಮಾಡಿದಳೆಂಬದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಸಾರಾಂಶ, ಬಡತನವೇ ದೊಡ್ಡ ದೊಡ್ಡ ರಾಷ್ಟ್ರಗಳ ಸಂಸ್ಥಾಪನೆಯನ್ನು ಮಾಡಿರುವದು; ಬಡತನವೇ ಜನರನ್ನು ದುರ್ಗುಣದಿಂದ ದೂರಿಡುವದು; ಬಡತ ನವೇ ಸದ್ಗುಣಗಳನ್ನು ವೃದ್ಧಿಂಗತ ಮಾಡುವದು; ಯಶ ಪ್ರಾಪ್ತಿಯು ಬಡತನದಿಂದಲೇ ಪ್ರಾಪ್ತವಾಗುವದು. ತುಕಾರಾಮ ರಾಮದಾಸ ಮುಂತಾದವರ ಮನಸಿನಲ್ಲಿ ಭಕ್ತಿ, ವೈರಾಗ್ಯ ಸಾಧುತ್ವಗಳನ್ನು ಹುಟ್ಟಿಸುವದಕ್ಕೂ, ಜ್ಞಾನ ದೇವ ಶಂಕರಾಚಾರ್ಯ ಮೊದಲಾದವರಲ್ಲಿ ಬಾಲ್ಯದಲ್ಲಿಯೇ ಜ್ಞಾನಾಂಕುರವನ್ನು ಊರುವದಕ್ಕೂ, ರಾಮ ಶಾಸ್ತ್ರಿ, ಆರಿಸ್ಟಾಯುಡೀಸ ಇತ್ಯಾದಿಕರ ಅಂತಃಕರಣದಲ್ಲಿ ಅಚಲನ್ಯಾಯ ಬುದ್ಧಿ ಯನ್ನು ಹುಟ್ಟಿಸಲಿಕ್ಕೂ, ಸಾಕ್ರೇಟೀಸ, ಹೋಮರ, ಶಿಕ್ಷಪೀಯರ ಸ್ಪೆನ್ಸರ ಮುಂತಾ ದವರ ಹೃತ್ಪಟಲದಲ್ಲಿ ಜ್ಞಾನವನ್ನೂ, ಕವಿತ್ವ ಶಕ್ತಿಯನ್ನೂ ಪ್ರೇರಿಸುವದಕ್ಕೂ ಬಡತನವೇ ಕಾರಣವು! ಈ ಬಡತನದ ದಾರಿದ್ರ್ಯ ಮಾತೆಯ ವರ್ಣನೆಯನ್ನು ಎಷ್ಟು ಮಾಡಿದರೂ ಸಾಲದು!

ಮಾನವ ಪ್ರಾಣಿಯು ಈಶ್ವರಾಂಶನಾಗಿರುತ್ತಾನೆ. ಮನುಷ್ಯನಿಗೆ " ನರನು ಹೋಗಿ ನಾರಾಯಣನಾಗಲಿಕ್ಕೆ " ಒಂದು ವೇಳೆ ಬರದಿದ್ದರೂ, ದೇವರ ಸಾಮೀಪ್ಯ ವನ್ನಾದರು ಸಾಧಿಸುವಷ್ಟು ಶಕ್ತಿಯು ಅವನಲ್ಲುಂಟು; ಮತ್ತು ಈ ಸಾಮೀಪ್ಯ ಮೋಕ್ಷ ವನ್ನು ಸಾಧಿಸಿಕೊಳ್ಳಲಿಕ್ಕೆ ಬಡತನವೇ ವಿಶೇಷ ಸಹಾಯಕಾರಿಯಾಗಿರುತ್ತದೆ. ಯಾವ ಮನುಷ್ಯನ ಬೇಡಿಕೆಗಳು (Demands) ತುಸು ಇರುತ್ತವೊ ಅವನು ಸುಖಿಯೂ, ಯಾವನ ಬೇಡಿಕೆಗಳು ಬಹಳಿರುತ್ತವೊ ಅವನು ದುಃಖಿಯೂ ಇರು ತ್ತಾನೆಂದು ನಿರ್ವಿವಾದವಾಗಿ ಹೇಳಬಹುದು. ಬಡಮನುಷ್ಯನ ಬೇಡಿಕೆಗಳು ಅಷ್ಟ ಕ್ಕಷ್ಟೇ ಇರುವದರಿಂದ ಅವುಗಳನ್ನು ಅವನು ನಿರಾಯಾಸವಾಗಿ ಪೂರೈಸಿಕೊಂಡು

ಆನಂದಭರಿತನಾಗಿರುತ್ತಾನೆ; ಶ್ರೀಮಂತ ಮನುಷ್ಯನ ಬೇಡಿಕೆಗಳು ಅಳತೆತಪ್ಪಿ ಇರುವದರಿಂದ ಅವುಗಳನ್ನೆಲ್ಲ ಪೂರೈಸಿಕೊಳ್ಳುವದು ಅಸಾಧ್ಯವಾದದರಿಂದ ಅವನು ಕಡೆಗೂ ದುಃಖಸಮುದ್ರದಲ್ಲಿಯೇ ಮುಳುಗಿರುತ್ತಾನೆ. ದೇವರಿಗೆ ಏನೂ ಬೇಕಾಗುವದಿಲ್ಲ; ಆದದರಿಂದಲೆ ಅವನು ಸರ್ವಸಂಪನ್ನನೆಂದು ಕರೆಯಲ್ಪಡುತ್ತಾನೆ! ಒಂದಾನೊಂದು ಸಮಯದಲ್ಲಿ ಶ್ರೀ ಕೃಷ್ಣನು ಕುಂತೀದೇವಿಯನ್ನು ಕುರಿತು "ನಿನಗೇನು ಇಷ್ಟವದೆಯೋ ಅದನ್ನು ನನಗೆ ಹೇಳು; ನಾನು ಅದನ್ನು ಪೂರೈಸಿಕೊಡುವೆನು." ಎಂದು ಹೇಳಿದನು. ಆಗ ಜ್ಞಾನವೈರಾಗ್ಯ ಸಂಪನ್ನಳಾದ ಕುಂತೀದೇವಿಯು "ಕರುಣಾಳುವಾದ ಪ್ರಭುವೆ, ನನಗೇನೂ ಬೇಕಾಗಿಲ್ಲ; ನನಗೆ ಈಗೇನು ಕಡಿಮೆಯಾಗಿದೆ? ಸಮರ್ಥರಾದ ಮಕ್ಕಳು ಐವರುಂಟು; ಸುಶೀಲಳಾದ ಸೊಸೆ ಇರುವಳು. ಇನ್ನು ಏನಾದರು ಬೇಡೆಂದು ಅನ್ನುತ್ತಿಯೆಂದ ಮೇಲೆ ನಾನು ಬೇಡುವದೇನಂದರೆ ನನಗೆ ಸದಾಸರ್ವದಾ ಬಡತನವಿರಲಿ. ಅಂದರೆ ನಿನ್ನ ಧ್ಯಾನವು ತಪ್ಪದೆ ನನಗೆ ಆಗುತ್ತಿರುವದು." ಎಂದು ಬೇಡಿಕೊಂಡಳು. ಮನುಷ್ಯನು ತನಗೆ ಅವಶ್ಯವಾದ ವಸ್ತುಗಳನ್ನು (Demands) ಕಡಿಮೆ ಮಾಡುತ್ತ ಹೋದಹಾಗೆ ಅವನು ಹೆಚ್ಚೆಚ್ಚು ದೇವರ ಸಮೀಪಕ್ಕೆ ಹೋಗುತ್ತಾನೆ. ಸಾರಾಂಶ ಸರ್ವೇಶ್ವರನ ಸಾನ್ನಿಧ್ಯಕ್ಕೆ ಸುಲಭವಾದ ಸಾಧನವು ಬಡತನವೇ ಇರುವದು. ಈ ಸಿದ್ಧಾಂತಕ್ಕೆ ಪುಷ್ಟಿಯನ್ನು ಕೊಡುವಂಥ ಏಸೂಕ್ರಿಸ್ತನ ಕೆಳಗೆ ಕೊಟ್ಟ ವಚನವು ಎಷ್ಟು ಯಥಾರ್ಥವಾಗುವದು ನೋಡಿರಿ!

"Blessed be ye poor; for yours is the Kingdom of God"

"ಬಡವರೇ ನೀವೇ ಧನ್ಯರು. ಯಾಕೆಂದರೆ ದೇವರ ರಾಜ್ಯವು ನಿಮ್ಮದೆ." ಒಟ್ಟಿನ ಮೇಲಿಂದ ಬಡತನ ಬಂದ ಬಗ್ಗೆ ಬೈಯುತ್ತ ಕೂತುಕೊಳ್ಳದೆ ಅಥವಾ ಸೊಟ್ಟ ಮೋರೆಯನ್ನು ಮಾಡಿ ವ್ಯರ್ಥ ಚಿಂತಿಸದೆ, ಬಡತನವನ್ನು ಕೊಟ್ಟ ಬಗ್ಗೆ ದೇವರ ಉಪಕಾರವನ್ನು ನೆನಸಿ, ಪ್ರತಿಯೊಬ್ಬ ಮನುಷ್ಯನು ತನ್ನ ಕರ್ತವ್ಯವನ್ನು ಉತ್ಕೃಷ್ಟವಾದ ರೀತಿಯಿಂದ ಮಾಡಿದರೆ ಜಗತ್ತಿನ ಕಲ್ಯಾಣವು ಎಷ್ಟಾದೀತು ನೋಡಿರಿ!

ಕವಿಯು ಹೇಳಿದಂತೆ:—

ಬಡವನ ದೂಷಿಸಬಾರದು।
ನಡತೆಯಿರಲ್, ಯಮನ ಬಳಿಯೊಳಿಲ್ಲವು ಬಡವಂ ॥
ನಡತೆಯುದಿಲ್ಲದ ಧನಿಯುಂ।
ಕಡು ಬಡವನು ತಾನೆಯನಿಸಿಕೊಳ್ವನು ಜಗದೊಳ್ ॥

(ಮೃಚ್ಛಕಟಿಕ ಪ್ರಕರಣಂ).

ಜೀವಾಜಿ ವಿಷ್ಣು ಗೋಖ.

ಪೂರ್ಣಯ್ಯನು.

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಆಗ ರೈತಜನರಿಗೆ ಭೂಮಿಯನ್ನು ಸಾಗುಮಾಡುವದಕ್ಕೆ ಅಕ್ಕರೆ ಹುಟ್ಟಿದರಿಂದ ಬೀಜಗಾಣದೆ ಪಡಬಿದ್ದ ಎಷ್ಟೋ ಜಮೀನಗಳು ಸಾಗು ಆದವು. ವಸೂಲಿಯ ಕೆಲಸದ ಬಗ್ಗೆ ತಕ್ಕ ಉದ್ಯೋಗಸ್ಥರನ್ನು ನೇಮಿಸಿ ಮೊದಲಿನಿಂದ ನಡೆದುಬಂದ ಗುತ್ತಿಗೆಯ ಪದ್ಧತಿಯನ್ನು ತೆಗೆದು ಹಾಕಿದನು. ಅದರಿಂದ ಗುತ್ತಿಗೆದಾರರು ಸ್ವಾರ್ಥ ಲೋಲುಪರಾಗಿ ಪ್ರಜೆಗಳಿಗೂ ಸರಕಾರಕ್ಕೂ ಉಂಟುಮಾಡುತ್ತಿದ್ದ ನಷ್ಟವು ಇಲ್ಲದಂತಾಯಿತು. ಹೀಗೆ ದೇಶಸುಧಾರಣೆಯ ಮೂಲ ವ್ಯವಸಾಯವಾದ ಒಕ್ಕಲ ತನವನ್ನು ಪೂರ್ಣಯ್ಯನು ಅಭಿವೃದ್ಧಿಗೊಳಿಸಿ ರಾಜಬೊಕ್ಕಸದಲ್ಲಿ ಧನಸಂಚಯ ವನ್ನು ಹೆಚ್ಚು ಮಾಡಿದನು; ಮತ್ತು ರೈತಜನರಲ್ಲಿಯೂ ಧನಸಂಪತ್ತು ಹೆಚ್ಚಿತು.

ಇನ್ನು ಪುಂಡಗಾರರ ಹಾವಳಿಯನ್ನು ಅಡಗಿಸಿ ಜನರ ಸುರಕ್ಷಿತೆಯನ್ನು ಕಾಯ್ದುಕೊಳ್ಳುವದು ಅತ್ಯವಶ್ಯಕವಾಗಿತ್ತು. ಟೀಪುಸುಲ್ತಾನನು ಸತ್ತಬಳಿಕ ಆತನ ಪದರಿನಲ್ಲಿದ್ದ ಜನರು ಕೊಲೆಸುಲಿಗೆಗಳನ್ನು ಮಾಡಲುಪಕ್ರಮಿಸಿದ್ದರು. ಪೂರ್ಣ ಯ್ಯನು ಅವರಲ್ಲಿ ಅನೇಕರಿಗೆ ಅವರವರ ಯೋಗ್ಯತೆಗೆ ತಕ್ಕ ವೇತನೆಗಳನ್ನು ಕಲ್ಪಿಸಿ ಅವರನ್ನು ಸರಕಾರದ ಉದ್ಯೋಗಗಳಲ್ಲಿ ತೊಡಕಿಸಿದನು. ಹೀಗಾದದರಿಂದ ಅವರೆ ಲ್ಲರು ಸಂತುಷ್ಟರಾದರು. ಹಿಂದಿನ ಸರದಾರರ ವಂಶಜರಲ್ಲಿ ಕೆಲವರನ್ನು ಆರಿಸಿ ಅವ ರಿಗೆ ದರಬಾರದಲ್ಲಿ ಕೆಲಸಕೊಟ್ಟನು. ಟೀಪೂವಿನ ಸೈನ್ಯದ ಜನರಿಗೆ ಅವರವರ ಯೋಗ್ಯತಾನುಸಾರವಾದ ಶಿಪಾಯಿ, ಸವಾರರು ಮೊದಲಾದ ಉದ್ಯೋಗಗಳನ್ನು ಕೊಟ್ಟು ಪೂರ್ಣಯ್ಯನು ಅವರನ್ನು ಸಮಾಧಾನಪಡಿಸಿ, ಅವರು ಮೈಸೂರಲ್ಲಿ ಇರುವಂತೆ ಕಟ್ಟುಮಾಡಿದನು. ಹೀಗೆ ಆ ಜನರ ಹಾವಳಿಯು ತಪ್ಪಿ ಹೋಯಿತು. ಅವರಲ್ಲಿ ಕೆಲಕೆಲವರನ್ನು ಗ್ರಾಮ ಮತ್ತು ದುರ್ಗಗಳ ಕಾವಲಿಗೆ ನೇಮಿಸಿದನು. ಕೆಲವು ಪ್ರತಿಷ್ಠಿತ ಸರದಾರಮನೆತನದ ಜನರಿಗೆ ಕೆಲಕೆಲವು ಜಮೀನುಗಳನ್ನು ಇನಾಮು ಹಚ್ಚಿಕೊಟ್ಟನು. ಆ ಜನರೆಲ್ಲರು ಸಂತುಷ್ಟರಾಗಿ ತಮ್ಮ ಕೆಲಸ ಗಳನ್ನು ಆಸಕ್ತಿಯಿಂದ ಮಾಡತೊಡಗಿದರು; ಅವರಲ್ಲಿ ಯದುವೀರ ರಾಜನ ಅಭಿಮಾನವು ಕ್ರಮಶ: ಹುಟ್ಟಹತ್ತಿತು. ಹೀಗೆ ಪೂರ್ಣಯ್ಯನು ಪಾಳಯಗಾರರ ಪುಂಡತನವನ್ನು ಅಡಗಿಸಿ, ಕಂದಾಚಾರಾದ ಕೆಲಸ ಮೊದಲಾದವುಗಳಲ್ಲಿ ಟೀಪುವಿನ ಸೈನಿಕರನ್ನು ಹಂಚಿ ಹಾಕಿ, ದೇಶದ ಮತ್ತು ಜನರ ಭದ್ರತೆಯ ಬಗ್ಗೆ ಬೇರೆ ಒಂದು

ಬಲವಾದ ಸೈನ್ಯವನ್ನು ನಿರ್ಮಿಸಿ, ಸೀಮೆಯಲ್ಲಿ ಪ್ರಜೆಗಳಿಗಾಗುವ ಕಷ್ಟನಷ್ಟಗಳನ್ನು ಅದಷ್ಟು ಹೋಗಲಾಡಿಸಿ ಪ್ರಜಾರಂಜಕನಾಗಿ ಅವರ ಅನುರಾಗಕ್ಕೆ ಪಾತ್ರನಾದನು.

ಪೂರ್ಣಯ್ಯನು ದೇಶದ ಆಡಳಿತೆಗಳಲ್ಲಿ, ರಾಜಬೊಕ್ಕಸ, ಕಂದಾಯ, ದಂಡು, ನ್ಯಾಯಸಭೆ, ಕಂದಾಚಾರ, ಜಿಲ್ಲರಬಾಬು, ಹೀಗೆ ೬ ವಿಭಾಗಗಳನ್ನು ಮಾಡಿದನು. ಹಿಂದು ಮುಸಲ್ಮಾನರಿಗೆ ಸರಿಯಾಗಿ ನ್ಯಾಯವು ಮುಟ್ಟಬೇಕೆಂದು ಅತನು ಆ ಆ ಧರ್ಮಶಾಸ್ತ್ರವನ್ನು ಬಲ್ಲ ಪಂಡಿತರನ್ನು ನ್ಯಾಯಾಧೀಶರ ಕೆಲಸಕ್ಕೆ ನೇಮಿಸಿದನು. ಈ ನ್ಯಾಯಾಧೀಶರು ಪೂರ್ಣಯ್ಯನು ೧೮೦೫ ರಲ್ಲಿ ಸ್ಥಾಪಿಸಿದ ' ಅದಾಲತ್ತ ' ಎಂಬ ನ್ಯಾಯಸಭೆಯಲ್ಲಿ ಕೆಲಸಮಾಡುತ್ತಿದ್ದರು. ಇದಲ್ಲದೆ ಬೆಂಗಳೂರ, ಬಿದನೂರ, ಮತ್ತು ಚಿತ್ರದುರ್ಗ ಈ ಮೂರು ಸ್ಥಳಗಳಲ್ಲಿ ಅತನು ಸುಭೇದಾರರನ್ನು ನೇಮಿಸಿದನು. ಅವರ ಕೈಕೆಳಗೆ ಕೆಲವು ತಾಲೂಕುಗಳು ಕೊಡಲ್ಪಟ್ಟವು. ಅಲ್ಲಿಯ ಅಧಿಕಾರಿಗಳಿಗೆ ಅಮಲದಾರರೆಂಬ ಹೆಸರು. ಪೂರ್ಣಯ್ಯನು ಪಂಚಾಯಿತ ಪದ್ಧತಿಯನ್ನು ಪ್ರಚಾರಗೊಳಿಸಿದ್ದರಿಂದ ಆ ಸುಭೇದಾರರೂ ಅಮಲದಾರರೂ ಆ ಪಂಚಾಯಿತರ ಸಹಾಯದಿಂದ ದಿವಾಣಿ ಮತ್ತು ಫವಜದಾರಿ ಕೆಲಸಗಳನ್ನು ತೀರಿಸುತ್ತಿದ್ದರು. ಅವರ ಅಧಿಕಾರಕ್ಕೆ ಮೀರಿದ ನ್ಯಾಯಗಳನ್ನು ಆಸ್ಥಾನದ ನ್ಯಾಯಾಧೀಶರು ನೋಡಿಕೊಳ್ಳುತ್ತಿದ್ದರು. ಅವರಿಗೆ ಬಗೆಹರಿಯದ ದೊಡ್ಡ ದೊಡ್ಡ ವ್ಯಾಜ್ಯಗಳನ್ನು ಪೂರ್ಣಯ್ಯನು ರಿತಿಪೆಂಟರನ್ನು ಕೇಳಿಯೂ, ಇಲ್ಲವೇ ತಾನೇ ಸ್ವತಃ ವಿಚಾರಮಾಡಿಯೂ, ತೀರಿಸುತ್ತಿದ್ದನು. ಸುಭೇದಾರ, ಅಮಲದಾರರ ಹುಕುಮಿನ ಮೇಲೆ ಆಗುಪ ಅಪೀಲುಗಳನ್ನು ದಿವಾಣನಾದ ಪೂರ್ಣಯ್ಯನು ತಾನೇ ವಿಚಾರಮಾಡುತ್ತಿದ್ದನು. ಅತನು ಆಗಾಗ್ಗೆ ದೇಶಸಂಚಾರಕ್ಕೆ ಹೊರಟು ಪ್ರಜೆಗಳ ಸುಖದುಃಖಗಳನ್ನು ತಿಳಕೊಳ್ಳುತ್ತಿದ್ದನು.

ಟೀಪುವಿನ ಕಾಲದಲ್ಲಿ ತಪ್ಪಿಹೋದ ದೇವಸ್ಥಾನ ವರ್ತಾಶನ ಮೊದಲಾದ ಸಾರ್ವಿಕ ನೇಮಣೂಕಗಳನ್ನು ಪೂರ್ಣಯ್ಯನು ಹಿಂದಕ್ಕೆ ಕೊಟ್ಟು, ಮುಸಲ್ಮಾನರ ಮಕಾನುಗಳಿಗೆ ನಡೆಯುವ ಮಾನ ಮರ್ಯಾದೆಗಳನ್ನು ಯಥಾ ಪ್ರಕಾರ ನಡೆಸುತ್ತ ಹಿಂದುಮುಸಲ್ಮಾನರಿಗೆ ಸರಿಯಾಗಿ ಬೇಕಾದವನೆನಿಸಿಕೊಂಡನು. ಅನೇಕ ಕೆರೆ, ಕಾಲುವೆ, ಮಾರ್ಗ, ಧರ್ಮಶಾಲೆಗಳನ್ನು ಕಟ್ಟಿಸಿ ಪ್ರಜಾಕಲ್ಯಾಣವನ್ನುಂಟು ಮಾಡಿದನು. ಅಸಂಖ್ಯ ದೇವಾಲಯಗಳ ಜೀರ್ಣೋದ್ಧಾರ ಮಾಡಿದನು. ಟೀಪು ಹಾಳುಗೆಡವಿದ ಮೈಸೂರ ಕೋಟೆಯನ್ನು ಪುನಃ ಕಟ್ಟಿಸಿದನು. ಕೋಟೆಯಲ್ಲಿ ಒಂದು ಹೊಸ ಅರಮನೆಯನ್ನು ಕಟ್ಟಿಸಿದನು. ೧೮೮೯ನೆಯ ಇಸವಿಯಲ್ಲಿ ಮೊಗಲ ಬಾದಶಹನಾದ ಔರಂಗಜೇಬನು ಆಗಿನ ಮೈಸೂರ ಧೊರೆಯಾದ ಚಿಕ್ಕದೇವರಾಜನಿಂದ ಒಂದ ಕಪ್ಪುಕಾಣಿಕೆಗಳನ್ನು ಸ್ವೀಕರಿಸಿ, ಅದಕ್ಕೆ ಪ್ರತಿಯಾಗಿ ಚಿಕ್ಕದೇವರಾಜನಿಗೆ 'ರಾಜಾ

ಜಗದೇವ' ಎಂಬ ಬಿರುದನ್ನು ಕೊಟ್ಟದ್ದಲ್ಲದೆ, ಒಂದು ಜಂತದ ದಿವ್ಯಸಿಂಹಾಸನವನ್ನೂ, ನಗಾರಿ ನೌಬತ್ತುಗಳನ್ನೂ ಕೊಟ್ಟಿದ್ದನು. ಪೂರ್ಣಯ್ಯನು ಈ ಸಿಂಹಾಸನಕ್ಕೆ ಮೇಲುಗಡೆ ಚಿನ್ನದ ತಗಡು ಕೂಡ್ರಿಸಿ ರತ್ನಖಚಿತವಾಗಿ ಮಾಡಿದನು.* ರಾಜಧಾನಿಯಲ್ಲಿ ಕಾವೇರಿಯ ನೀರು ತರಬೇಕೆಂದು ಕಾಲುವೆಯನ್ನು ತೆಗೆಸಿದನು. ಅದರೆ ನೀರು ಹತ್ತಲಿಲ್ಲ. ಪ್ರವಾಸಿಕರ ಸೌಕರ್ಯಕ್ಕಾಗಿ ಪೂರ್ಣಯ್ಯನು ಅಸಂಖ್ಯ ಸ್ಥಳಗಳಲ್ಲಿ ಅನ್ನಛತ್ರಗಳನ್ನು ಇಡಿಸಿದನು. ಅವುಗಳಲ್ಲಿ ಇನ್ನೂ ಕೆಲವು ನಡೆದಿರುವವು. ಇಂಗ್ಲೀಷ ಜನರ ಅನುಕೂಲತೆಗಾಗಿ ಅನೇಕ ಬಂಗಲೆಗಳನ್ನು ಕಟ್ಟಿಸಿದನು. ಈ ಪ್ರಕಾರ ಮೈಸೂರ ಪ್ರಾಂತದ ಪ್ರಥಮ ಪ್ರತಿನಿಧಿಯಾದ ಪೂರ್ಣಯ್ಯನು ದೇಶ ಕಲ್ಯಾಣದ ಸಲುವಾಗಿ ತನ್ನ ತನುಮನ-ಧನಗಳನ್ನು ವೆಚ್ಚಮಾಡಿ ಅನೇಕಾನೇಕ ಮಹತ್ಕೃತ್ಯಗಳನ್ನು ಮಾಡಿ ಆಂಗ್ಲ ಪ್ರಭುಗಳ ಪ್ರೀತಿ ವಿಶ್ವಾಸಗಳಿಗೂ, ಜನಮೆಚ್ಚಿಕೆಗೂ ಪಾತ್ರನಾದನು.

ಇ. ಸ. ೧೮೦೯ರಲ್ಲಿ ಶ್ರೀರಂಗಪಟ್ಟಣದಲ್ಲಿದ್ದ ಸೈನ್ಯದ ಕೆಲವು ಜನರು ಮದ್ರಾಸ ಸರಕಾರದವರ ಮೇಲೆ ತಿರುಗಿಬಿದ್ದು ದೊಂಬೆ ಎಬ್ಬಿಸಿದರು. ಆಗ ರೆಸಿಡೆಂಟನ ಅಭಿಪ್ರಾಯ ತಕ್ಕೊಂಡು ಪೂರ್ಣಯ್ಯನು ಕೆಲವು ದಂಡು ಕಳುಹಿ ಆ ದಂಗೆಯನ್ನು ಮುರಿದನು.

ಜನರಲ್ಲ ವೆಲಸ್ಲಿಯು ಮೈಸೂರ ಭಾಗದ ಮುಖ್ಯ ಮುಖ್ಯಾಧಿಕಾರಿಯಾಗಿದ್ದನೆಂದು ಹಿಂದೆ ಹೇಳಿದ್ದೇವೆ. ಅತನು ಕಡು ನಿಕಟಸ್ವಭಾವದವನು. ಕೆಲಸ ಮಾಡುವಲ್ಲಿ ಒಳ್ಳೇ ದಕ್ಷನು. ಅತನ ಮೆಚ್ಚಿಕೆಯನ್ನು ಪಡೆಯುವದೆಂದರೆ ಪ್ರತ್ಯಕ್ಷ ಕಾಳಸರ್ಪದ ಹೆಡೆಯೊಳಗಿರುವ ಮಣಿಯನ್ನು ಹೊರಗೆ ತಂದಂತಾಗುತ್ತಿತ್ತು. ಹೀಗೆ ಅತನ ದರ್ಪ ವಿಶೇಷವಾಗಿತ್ತು. ಅತನು ಆಗಿನ ಮೈಸೂರ ರೆಸಿಡೆಂಟನಾದ ಕರ್ನಲ ಕ್ಲೋಜನಿಗೆ ಪೂರ್ಣಯ್ಯನ ವಿಷಯವಾಗಿ ಬರೆದ ಒಂದು ಪತ್ರದಲ್ಲಿ "ಮೈಸೂರ ಸಂಸ್ಥಾನವು ನಿಮ್ಮ ಮೇಲ್ವಿಚಾರಣೆಗೆ ಒಳಪಟ್ಟಿರುವದು. ಅಲ್ಲಿಯ ಮುಖ್ಯ ದಿವಾಣನಾದ ಪೂರ್ಣಯ್ಯನು ರಾಜನೀತಿಯ ಕ್ರಮವನ್ನು ಹಿಡಿದು ಕಾರಭಾರ ಸಾಗಿಸುತ್ತಿರುವನು. ಅವನ ಬುದ್ಧಿ ಚಾತುರ್ಯ, ರಾಜ್ಯವ್ಯವಸ್ಥೆ ಮೊದಲಾದವುಗಳ ಯೋಗದಿಂದ ಮೈಸೂರ ದೇಶದಲ್ಲಿ ಉದ್ಯೋಗವು ಬೆಳೆದು ಧನಸಂಪತ್ತು ಹೆಚ್ಚುತ್ತಿರುವದು; ಜನರಕ್ಷಣೆಯುಂತೂ ಉತ್ತಮ ರೀತಿಯಿಂದ ನಡೆದಿರುವದು. ದೇಶದಲ್ಲಿ ನೋಡಿದತ್ತೆಲ್ಲ ಸುಖ ಸಮಾಧಾನಗಳು ನೆಲಗೊಂಡಿರುವವು. ಪೂರ್ಣಯ್ಯನ ಈ ಕಾರ್ಯಕ್ರಮವು ಅತ್ಯಂತ ಅಭಿನಂದನೀಯವಾದದ್ದು." ಎಂದು ಬರೆದಿರುವನು. ಇದೇ ವೆಲ್ಲಸ್ಲಿಯು

* ಈಗ ನವರಾತ್ರಿಯ ಉತ್ಸವದಲ್ಲಿ ಅದೇ ಸಿಂಹಾಸನದ ಮೇಲೆ ಶ್ರೀಮನ್ಮಹಾರಾಜರವರು ಕೂತುಕೊಳ್ಳುವರು.

ಇ. ಸ. ಗಿಲಂಜ ರಲ್ಲಿ ಇಲ್ಲಿಯ ಉದ್ಯೋಗವನ್ನು ಬಿಟ್ಟು ಸ್ವದೇಶಕ್ಕೆ ತೆರಳಿದನು. ಆಗ ಅವನು ಸ್ವತ: ಪೂರ್ಣಯ್ಯನಿಗೆ ಒಂದು ಪತ್ರವನ್ನು ಬರೆದಿರುವನು. ಅದರ ತಾತ್ಪರ್ಯವೇನೆಂದರೆ— " ದಿವಾಣಸಾಹೇಬ, ನನ್ನ ಮೇಲೆ ನಿಮ್ಮ ಉಪಕಾರ ಬಹಳವಾಗಿರುವದು; ಅದನ್ನು ನಾನು ಎಂದೂ ಮರೆಯಲಾರೆನು. ನೀವು ಮಾಡಿದ ಸಾರ್ವಜನಿಕ ಕಲ್ಯಾಣ, ರಾಜ್ಯವ್ಯವಸ್ಥೆಗಳನ್ನು ಕಂಡು ನನಗೆ ನಿಮ್ಮ ಬಗ್ಗೆ ವಿಶುದ್ಧವಾದ ಆದರ ಬುದ್ಧಿಯು ಹುಟ್ಟಿರುವದು. ಇದರಂತೆ ನೀವು ಲೋಕಹಿತವನ್ನು ಮಾಡಬೇಕೆಂದು ನಾನು ಬಯಸುವೆನು. ನಾನು ಎಲ್ಲಿ ಇದ್ದರೂ, ನಿಮ್ಮ ಸತ್ಕೃತ್ಯಗಳ ಸ್ತುತಿಯನ್ನು ಮಾಡದೆ ಬಿಡೆನು; ಮತ್ತು ನಿಮ್ಮ ಉಪಯೋಗಕ್ಕೆ ಬೀಳಲು ನಾನು ಅನುಮಾನಿಸೆನು. ಇದನ್ನು ನೀವು ಖಂಡಿತವಾಗಿ ತಿಳಕೊಳ್ಳರಿ. ಇವೆರಡು ದೃಷ್ಟಾಂತಗಳ ಮೇಲಿಂದ ಇತಿಹಾಸ ಪ್ರಸಿದ್ಧನಾದ ಡ್ಯೂಕ ಆಫ ವೆಲ್ಲಿಂಗಟನ್ನನ ಅಭಿಪ್ರಾಯವು ಪೂರ್ಣಯ್ಯನ ವಿಷಯವಾಗಿ ಯಾವ ಪ್ರಕಾರವಿತ್ತೆಂಬದು ಸ್ಪಷ್ಟವದೆ. ಪೂರ್ಣಯ್ಯನ ಕಾಲಕೆರ್ದಿಯಲ್ಲಿ ಹಿಂದೂಸ್ತಾನದ ಸರ್ವಾಧಿಪತಿಯು ಲಾರ್ಡ ಮಾರ್ನಿಂಗಟನ (ಮಾರ್ಕ್ವಿಸ ವೆಲಸ್ಲಿ)ನು ಇದ್ದನು. ಈ ಧೊರೆಯು ವೆಲ್ಲಿಂಗಟನ್ನನ ಅಣ್ಣನು. ಅತನು ಸಹ ಒಂದು ಕಡೆಯಲ್ಲಿ. " ಮೈಸೂರ ದಿವಾಣನಾದ ಪೂರ್ಣಯ್ಯನು ತನ್ನ ಕರ್ತವ್ಯ ಕರ್ಮವನ್ನು ಉತ್ತಮ ರೀತಿಯಿಂದ ಜರಗಿಸುತ್ತಿರುವನೆಂದು ಹೇಳಲು ನನಗೆ ತುಂಬಾ ಆನಂದವಾಗುತ್ತದೆ. ನನ್ನ ಮನೋಬಯಕೆಯಂತೆ ಮೈಸೂರ ಮೂಲ ಹಿಂದೂ ಅರಸರ ವಂಶಜನಾದ ಕೃಷ್ಣರಾಜನಿಗೆ ರಾಜ್ಯಪದವಿಯು ದೊರೆತಿರುವದು. ಪೂರ್ಣಯ್ಯನು ನನ್ನ ಮನೋಬಯಕೆಯನ್ನೇ ಮೇಲುಪಂಕ್ತಿಯಾಗಿಟ್ಟುಕೊಂಡು, ಪ್ರಾಮಾಣಿಕತನ, ಕರ್ತವ್ಯದಕ್ಷತೆ, ರಾಷ್ಟ್ರಹಿತ-ವಿಚಾರ ಇವೇ ಮೊದಲಾದವುಗಳ ಯೋಗದಿಂದ ಮೈಸೂರ ಸಂಸ್ಥಾನವನ್ನು ಉನ್ನತಾವಸ್ಥೆಗೆ ತರುತ್ತಿರುವನು. ನಾವು ಮಹಾರಾಷ್ಟ್ರರೊಡನೆ ಯುದ್ಧದಲ್ಲಿ ತೊಡಗಿರಲು ಆಗಿನ ಕಠಿಣ ಪ್ರಸಂಗದಲ್ಲಿ ಮೈಸೂರ ಕಡೆಯಿಂದ ಆಗಾಗ್ಗೆ ಧಾನ್ಯ ಸಂಗ್ರಹವು ಪುರುವತೆಯಾಗಿ ಕಾಲಕ್ಕೆ ದೊರೆತ ತಕ್ಕ ಸಹಾಯವು ಪೂರ್ಣಯ್ಯನ ಚಾತುರ್ಯ ಮತ್ತು ಕರ್ತವ್ಯ ದಕ್ಷತೆಗಳ ಪ್ರತಿಫಲವೆಂದರೆ ಅತಿಶಯೋಕ್ತಿಯಾಗದು. ನಾನು ಈತನನ್ನು ದಿವಾಣಗಿರಿಯ ಪದವಿಗೆ ನೇಮಿಸುವ ಮೊದಲು ಎಣಿಸಿದ್ದಕಿಂತ ಹೆಚ್ಚು ಸತ್ಕೃತ್ಯಗಳನ್ನು ಪೂರ್ಣಯ್ಯನು ಮಾಡಿ ತೋರಿಸಿರುವನು. ಇಂಥ ಪುರುಷಶ್ರೇಷ್ಠನ ಗುಣಾನುವಾದವನ್ನು ಮಾಡುವದು ನನ್ನ ಕರ್ತವ್ಯವೆಂದು ತಿಳಿಯುವೆನು. " ಎಂದು ಉದ್ಗಾರಗಳನ್ನು ಹೊರಗೆಡವಿರುವನು.

ಹೀಗೆ ಪೂರ್ಣಯ್ಯನು ಆಂಗ್ಲ ಸಾರ್ವಭೌಮರ ರಾಜ್ಯಧೋರಣವನ್ನು ಅನುಸರಿಸಿ ಅದರಂತೆ ಮೈಸೂರ ರಾಜ್ಯದಲ್ಲಿ ಅಸಂಖ್ಯ ತಿದ್ದುಪಡೆಗಳನ್ನು ಮಾಡಿ ಅನೇಕ

ಇಂಗ್ಲೀಷ ಅಧಿಕಾರಿಗಳ ಮೆಚ್ಚಿಕೆಯನ್ನು ಪಡೆದನು. ಆತನು ಜನರಲ್ಲ ವೆಲಸ್ಲಿಯ ಜ್ಞಾಪಕಾರ್ಥವಾಗಿ ಕಾವೇರಿ ನದಿಯ ಉತ್ತರ ಪಾರ್ಶ್ವದಲ್ಲಿ ಒಂದು ಸೇತುವೆಯನ್ನೂ, ರೆಶಿಡೆಂಟ ಕ್ಲೋಜ ಸಾಹೇಬನ ಸ್ಮಾರಕವೆಂದು ಕ್ಲೋಜಪೇಟ ಎಂಬ ಊರನ್ನೂ ನಿರ್ಮಾಣ ಮಾಡಿದನು. ಇಂಗ್ಲೀಷ ಮಹಾರಾಷ್ಟ್ರರಿಗೆ ನಡೆದ ಯುದ್ಧದಲ್ಲಿ ಪೂರ್ಣಯ್ಯನು ಇಂಗ್ಲೀಷರಿಗೆ ಚನ್ನಾಗಿ ಸಹಾಯ ಮಾಡಿದ್ದರಿಂದ ಅವರು ಅವನ ಬುದ್ಧಿ ಚಾತುರ್ಯ, ಕರ್ತೃತ್ವ ಶಕ್ತಿ, ಮತ್ತೂ ರಾಜನಿಷ್ಠೆಗಳಿಗೆ ಮೆಚ್ಚಿ ಎಳಂದೂರನ್ನು ಜಹಗೀರಾಗಿ ಕೊಡಿಸಿದರು.

ಈ ಮೇರೆಗೆ ಪೂರ್ಣಯ್ಯನು ಜನರಿಗೂ, ಪ್ರಭುಗಳಿಗೂ, ಆಂಗ್ಲ ಸಾರ್ವಭೌಮರಿಗೂ ಬೇಕಾಗಿ ೧೮೧೧ ನೇ ಇಸ್ವಿಯ ವರೆಗೆ ದಿವಾಣಗಿರಿಯನ್ನು ನೋಡಿದನು. ಅಷ್ಟರಲ್ಲಿ ಕೃಷ್ಣರಾಜನು ವಯಸ್ಸಿಗೆ ಬಂದುದರಿಂದ ಆತನು ತಾನೇ ದವಲತ್ತು ಮಾಡಬೇಕೆಂದು ಅಪೇಕ್ಷಿಸಿದನು. ಆಗ ಪೂರ್ಣಯ್ಯನು ಕೆಲಸದಲ್ಲಿರುವದಕ್ಕೆ ಇಷ್ಟ ಪಡದೆ ಶ್ರೀರಂಗಪಟ್ಟಣಕ್ಕೆ ಹೋಗಿ ನಿಂತನು. ಆದರೆ ಮುಂಡೆ ಆತನು ಬಹಳ ಕಾಲ ಬದುಕಲಿಲ್ಲ. ೧೮೧೩ನೆಯ ಇಸವಿ ಮಾರ್ಚ್ತಿಂಗಳಲ್ಲಿ ಈ ಮಂತ್ರಿಸೂರ್ಯನು ಅಸ್ತಂಗತನಾದನು.

ಕೆಲವು ಮತ್ಸರಬುದ್ಧಿಯ ಜನರು ಪೂರ್ಣಯ್ಯನು ಮಹಾ ಕೃಪಣನೆಂದು ಅನ್ನುವರು. ಇದು ನಿರಾಧಾರವಾದದ್ದು. ಆತನು ಮಿತಿಯಾಗಿ ವೆಚ್ಚಮಾಡತಕ್ಕವನೆಂಬ ಸಂಗತಿಯು ಮಾತ್ರ ನಿಜವು. ಆದರೆ ಆತನು ಅವಶ್ಯವೆನಿಸಿದ ಕೆಲಸಕ್ಕೆ ಹಣ ವೆಚ್ಚ ಮಾಡಲಿಕ್ಕೆ ಎಂದೂ ಹಿಂದುಮುಂದೆ ನೋಡಲಿಲ್ಲ. ಅವನು ೧೧ ವರುಷ ರಾಜ್ಯಕಾರಭಾರವನ್ನು ಮಾಡಿದ್ದು ಆ ಅವಧಿಯಲ್ಲಿ ಆತನು ಮಾರ್ಗ, ಕೆರೆ, ಕಾಲುವೆ, ದೇವಾಲಯ, ಧರ್ಮಶಾಲೆ, ಇತ್ಯಾದಿ ಸಾರ್ವಜನಿಕ ಕೃತ್ಯಗಳಲ್ಲಿ ಹೆಚ್ಚುಕಡಿಮೆ ೭೭ ಲಕ್ಷ ರೂಪಾಯಿಗಳನ್ನು ವೆಚ ಮಾಡಿದನು. ಆತನು ಕೆಲಸ ಬಿಡುವಾಗ್ಗೆ ಸಂಸ್ಥಾನಕ್ಕೆ ಒಂದು ಕಾಸು ಸಹ ಸಾಲವಿದ್ದಿಲ್ಲ; ಆದರೆ ಮೈಸೂರ ಪ್ರಾಂತದಲ್ಲಿ ಶಾಂತಿ, ಸಂತುಷ್ಟಿ ಮತ್ತು ಪುಷ್ಟಿಗಳ ಸಮೃದ್ಧಿಯಿದ್ದು ಬೊಕ್ಕಸದಲ್ಲಿ 2½ ಕೋಟಿ ರೋಪು ರೂಪಾಯಿಗಳಿದ್ದವು.

ಈ ಮಹಾನುಭಾವನ ಗುಣಗಳು ಬಹಳ ಶ್ಲಾಘನೀಯವಾದವುಗಳು. ಈತಗೆ ಮೇಧಾಶಕ್ತಿಯು ಚನ್ನಾಗಿ ಇತ್ತು; ಇಂಗಿತಜ್ಞನೂ, ವಿಚಾರಶೀಲನೂ ಆದುದರಿಂದ ಪೂರ್ಣಯ್ಯನು ಕ್ರೂರನೂ, ಮತದ್ವೇಷಿಯೂ ಆದ ಟೀಪುವಿನ ಅನುಗ್ರಹಕ್ಕೆ ಕೂಡ ಪಾತ್ರನಾಗಿ ಅವನ ಕಾಲದಲ್ಲಿಯೇ ಒಳ್ಳೇ ಘನತೆಯನ್ನು ಹೊಂದಿದ್ದನು. ಹೈದರ, ಟೀಪೂಸುಲ್ತಾನರಿಗೆ ಆತನು ಎಂದೂ ಅಹಿತವನ್ನು ಬಯಸಲಿಲ್ಲ. ಅವರೊಡನೆ ಆತನು ಭಕ್ತಿ-ವಿಶ್ವಾಸಗಳಿಂದ ನಡೆದು ಅವರ ಮೇಲೆ ಅನಂತಾನಂತ ಮಹದು

ಪಕಾರಗಳನ್ನು ಮಾಡಿದನು. ಅದರಂತೆ ಕೃಷ್ಣರಾಜನು ಒಡೆಯನಾದ ಮೇಲೆ ಮೈಸೂರ ರಾಜ್ಯದ ಆಡಳತೆಯನ್ನು ಬಹಳ ವಿತರಣೆಯಿಂದ ನಡೆಸುತ್ತ ಇಂಗ್ಲೀಷ ಅಧಿಕಾರಸ್ಥರ ಅನುರಾಗಕ್ಕೆ ಪಾತ್ರನಾಗಿ ಪ್ರಖ್ಯಾತಿಯನ್ನು ಹೊಂದಿದನು. ಆತನು ತನ್ನ ಬುದ್ಧಿಚಾತುರ್ಯ, ಬರಹಮರ್ಮ, ರಾಜಕಾರ್ಯ, ಕುಶಲತೆ, ಇವೇ ಮೊದ ಲಾದವುಗಳಿಂದ ಪ್ರಖ್ಯಾತ ಪ್ರಧಾನರೆನಿಸಿದ ವಿಟ್ಟಿ ಮತ್ತು ನಾನಾಘಡಣವೀಸರಿಗೆ ಸರಿಯಾದವನೆನಿಸಿಕೊಂಡನು. ಆತನು ಮಾಡಿದ ಉಪಕಾರಗಳನ್ನು ಮೈಸೂರ ನಾಡಿನ ಜನರು ಇನ್ನೂ ಮರೆತಿಲ್ಲ. ಆತನು ಅಜರಾಮರ ಕೀರ್ತಿಯನ್ನು ಹೊಂದಿ ರುವದರಿಂದ ಈಗ್ಯೂ ಆತನ ಹೆಸರು ಅಬಾಲವೃದ್ಧರಿಗೆ ಗೊತ್ತುಂಟು.

ಈ ಪೂರ್ಣಯ್ಯನ ಮರಿಮಕ್ಕಳಾದ ಶ್ರೀಕೃಷ್ಣಮೂರ್ತಿಯೆಂಬ ಮಹನೀ ಯರು ಕೆಲವು ವರುಷದ ಹಿಂದೆ ಮೈಸೂರ ಸಂಸ್ಥಾನದ ದಿವಾಣಗಿರಿಯನ್ನು ಕೆಲವು ಕಾಲಮಾಡಿ ಪ್ರಸಿದ್ಧಿಯನ್ನು ಹೊಂದಿರುವರು; ಅವರೇ ಈಗ ಎಳಂದೂರಿನ ಜಹಗೀ ರನ್ನು ಉಪಭೋಗಿಸುತ್ತಿರುವರು.

ವಾಚಕರೇ, ಇಂಥ ಮಂತ್ರಿಸೂರ್ಯರು ಪುನ: ಪುನ: ಹುಟ್ಟಿ ದೇಶೋದ್ಧಾರ ವನ್ನು ಮಾಡಬೇಕೆಂದೂ, ಆಂಗ್ಲ ಸಾರ್ವಭೌಮರ ವರದ ಹಸ್ತದಿಂದ ಪುನರು ಜ್ಜೀವನವಾಗಿ ಪೂರ್ಣಯ್ಯನ ಅಲೌಕಿಕ ಬುದ್ಧಿಚಾತುರ್ಯ, ಪ್ರಾಮಾಣಿಕತನ ಮೊದಲಾದವುಗಳ ಯೋಗದಿಂದ ಘನತೆಯನ್ನು ಹೊಂದಿದ ದಕ್ಷಿಣನಾಡಿನಲ್ಲಿ ಒಂದೇಒಂದಾದ ಮೈಸೂರ ಹಿಂದೂರಾಜ್ಯವು ಉತ್ತರೋತ್ತರ ಉತ್ಕರ್ಷವನ್ನು ಹೊಂದಲೆಂದೂ, ಪ್ರಸ್ತುತಕ್ಕೆ ಆ ನಾಡಿನ ಅರಸರಾದ ಶ್ರೀ ಕೃಷ್ಣರಾಜ ಒಡೆಯ ರವರು ದೀರ್ಘಕಾಲ ಪ್ರಜಾರಂಜಕರಾಗಿ ರಾಜ್ಯವಾಳಬೇಕೆಂದೂ, ಜಗನ್ನಿ ಯಾಮಕನನ್ನು ಅನನ್ಯಭಾವದಿಂದ ಬೇಡಿಕೊಂಡು ಈ ಚಿಕ್ಕ ಚರಿತ್ರೆಯನ್ನು ಮುಗಿಸುತ್ತೇವೆ.

B. A. Kulkarni.

ವಿನೋದ.

ಬಗಲಲ್ಲಿ ವರ್ತಮಾನಪತ್ರದ ಒಂದು ದೊಡ್ಡ ಪೆಂಡೆಯನ್ನು ಇಟ್ಟುಕೊಂಡ ಹಾದಿಗುಂಟ ಮಾರುತ್ತ ಹೋಗುವ ಒಬ್ಬ ಹುಡುಗನನ್ನು ಒಬ್ಬ ಸಭ್ಯ ಗೃಹಸ್ಥನ ಕಂಡು, ಕನಿಕರಬಟ್ಟು—ತಮ್ಮಾ ಈ ವರ್ತಮಾನ ಪತ್ರಗಳಿಂದ ನಿನಗೆ ತ್ರಾಸವಾಗ ವದಿಲ್ಲವೊ? ಎಂದು ಕೇಳಿದನು. ಅದಕ್ಕೆ ಆ ಹುಡುಗನು ರಾಯರೇ, ನಾನು ಆ ಗಳಲ್ಲಿ ಒಂದನ್ನಾದರೂ ಓದುವದಿಲ್ಲಾದ್ದರಿಂದ ನನಗೆ ಅವುಗಳಿಂದ ಏನೂ ತ್ರಾ ವಾಗುವದಿಲ್ಲ.

ಮಹಾಕವಿ ಶ್ರೀಪಂಪನು.

"ಪಸರಿಪಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ"

(ನಾಗಾರ್ಜುನ. ೧೩೩೧ ಇ.)

ಕನ್ನಡದಲ್ಲಿ ಸುಮಾರು ಆರನೆಯ ಶತಮಾನಕ್ಕಿಂತ ಮುಂಚೆಯೇ ಗ್ರಂಥರಚನೆಗೆ ಆರಂಭವಾಗಿರಬೇಕೆಂಬದು ನಿರ್ವಿವಾದವಾದದ್ದು. ಯಾಕಂದರೆ ಕನ್ನಡದಲ್ಲಿ 'ಚೂಡಾಮಣಿ' ಎಂಬ ತತ್ವಾರ್ಥ ಮಹಾಶಾಸ್ತ್ರವನ್ನು ಬರೆದ **ಶ್ರೀವರ್ಧದೇವ**ನೆಂಬ ಜೈನಕವಿಯು ಸಂಸ್ಕೃತದ ದಶಕುಮಾರ ಚರಿತವನ್ನು ಬರೆದ **ದಂಡಿ**ಗಿಂತ ಮುಂಚೆ ಆಗಿ ಹೋದನೆಂಬದು ಆ ದಂಡಿಯು ಮಾಡಿದ

"जन्होः कन्यां जटाग्रेण बभार परमेश्वरः।
श्रीवर्धदेवः सन्धत्ते जिह्वाग्रेण सरस्वतीम्॥"

ಪರಮೇಶ್ವರನು ಜಡೆಯಲ್ಲಿ ಜಾಹ್ನವಿಯನ್ನು ಧರಿಸಿದನು. ಶ್ರೀವರ್ಧದೇವನು ನಾಲಿಗೆಯ ತುದಿಯಲ್ಲಿ ಸರಸ್ವತಿ (ಗದಿ, ವಿದ್ಯಾದೇವಿ) ಯನ್ನು ಧರಿಸುತ್ತಾನೆ.

ಎಂಬ ಸ್ತುತಿಪದ್ಯದಿಂದ ತಿಳಿದುಬರುತ್ತದೆ. ದಂಡಿಯು ಆರನೆಯ ಶತಮಾನಕ್ಕಿಂತ ಬಹಳ ಮುಂಚೆ ಆಗಿಹೋದನೆಂಬದು ಪ್ರಸಿದ್ಧವಾದ ಸಂಗತಿಯು. ಈ ಶ್ರೀವರ್ಧದೇವನಿಗಿಂತ ಮುಂಚೆಯೆ **ಸಮಂತಭದ್ರ** (ಕ್ರಿ. ಶ. ೧೩೮.) **ಪೂಜ್ಯಪಾದ** (ಕ್ರಿ. ಶ. ೪೭೦) ಮೊದಲಾದ ಕವಿಗಳು ಆಗಿಹೋದರೆಂದು ತಿಳಿಯುತ್ತದೆ. ಕನ್ನಡದಲ್ಲಿ ಇಷ್ಟು ಪ್ರಾಚೀನ ಕಾಲದಲ್ಲಿಯೇ ಗ್ರಂಥರಚನೆಗೆ ಆರಂಭವಾಗಿದ್ದರೂ ಆ ಕಾಲದ ಗ್ರಂಥವೊಂದೂ ಈಗ ಉಪಲಬ್ಧವಾಗದಿರುವದಕ್ಕೆ ವಿಷಾದಿಸಬೇಕಾಗಿದೆ. ಆದಿಪಂಪನ ವರೆಗೆ ಸಂದಕಾಲವು (ಸು. ೧೦ ನೆಯ ಶತಮಾನ) ಬಹುತರ ಕನ್ನಡ ಕವಿತೆಯ ಆದಿಕಾಲವೆಂದು ಹೇಳಬಹುದು. ಆದಿಪಂಪನಿಗಿಂತ ಮುಂಚಿನ ಕವಿಗಳ ಗ್ರಂಥಗಳಲ್ಲಿ **ನೃಪತುಂಗ**ರಚಿತವಾದ (ಸು. ೮೧೪-೮೭೭) ಕವಿರಾಜಮಾರ್ಗವೆಂಬ ಗ್ರಂಥವು ಉಪಲಬ್ಧವಾಗಿದೆ. ಇದು ಸಾಹಿತ್ಯಗ್ರಂಥವು. ಇದರಲ್ಲಿ ದೋಷಾಸ್ಪವರ್ಣನ, ಶಬ್ದಾಲಂಕಾರ, ಅರ್ಥಾಲಂಕಾರಗಳೆಂಬ ವಿಷಯಗಳು ಬಂದಿವೆ. ಗ್ರಂಥದ ಶೈಲಿಯೂ ಪ್ರೌಢವಾಗಿದೆ. ಎಲ್ಲ ಭಾಷೆಗಳಲ್ಲಿ ಸಾಹಿತ್ಯ ಗ್ರಂಥಗಳುಂಟಾದ ಕಾಲದಲ್ಲಿ ಆಯಾ ಭಾಷೆಗಳಲ್ಲಿ ಗ್ರಂಥಗಳು ವಿಪುಲವಾಗಿದ್ದವೆಂದೂ ಭಾಷೆಯು ಪೂರ್ಣಾವಸ್ಥೆಯನ್ನು ಹೊಂದಿತ್ತೆಂದೂ ತಿಳಿದುಬರುತ್ತದೆ. ಇದರಿಂದ ಕನ್ನಡದಲ್ಲಿಯೂ ನೃಪತುಂಗನ ಕಾಲಕ್ಕೆ ಮುಂಚೆಯೆ ಗ್ರಂಥಗಳು ವಿಪುಲವಾಗಿರಬೇಕೆಂದು ತೋರುತ್ತದೆ. ಆ ಪ್ರಾಚೀನ ಗ್ರಂಥಕರ್ತೃಗಳಲ್ಲಿ ನಾಗಾರ್ಜುನ, ವಿಮಲ, ಜಯಬಂಧು ಮೊದ

ಲಾದವರು ಹೆಸರಾಗಿದ್ದರು. ಶಾಸನಗಳನ್ನು ನೋಡಿದರೆ ಇವರು ಪ್ರಸಿದ್ಧ ಕವಿಗಳಾ
ಗಿದ್ದರೆಂದು ತಿಳಿಯುವದು. ಅವರ ಗ್ರಂಥಗಳು ಉಪಲಬ್ಧವಿಲ್ಲದ್ದರಿಂದ ಅವರ
ಕಾವ್ಯಗಳ ರಸಾಸ್ವಾದವು ನಮಗೆ ದುರ್ಲಭವಾಗಿದೆ. ನೃಪತುಂಗನಿಂದೀಚೆಗೆ ಆಗಿ
ಹೋದ ಶ್ರೇಷ್ಠಕವಿಗಳಲ್ಲಿ ಪಂಪನೇ ಆದ್ಯನು.

ಎಲ್ಲ ಭಾಷೆಗಳಲ್ಲಿ ಬಹುತರ ಆದಿಕಾಲದಲ್ಲಿ ಪದ್ಯರಚನೆಯು ಆರಂಭವಾಗಿರ
ಬೇಕು. ನಾಗರಿಕತೆಯು ನೆಲೆಗೊಳ್ಳುವ ಪೂರ್ವದಲ್ಲಿ ಹಳ್ಳಿವಾಡದವರು ಮಾಡುವ
ಲಾವಣಿ ಪದಗಳಂಥ ಪದ್ಯಗಳು ಮೊದಲಿಗೆ ಹುಟ್ಟಿರಬಹುದು. ಬಳಿಕ ನಾಗರಿ
ಕತೆಯು ತಲೆದೋರಿದಾಗ ಅವಕ್ಕೇ ಒಂದು ವಿಶಿಷ್ಟ ಸ್ವರೂಪವು ಬಂದು ಗ್ರಂಥಗಳ
ರೂಪದಿಂದ ಜೈಲಿಗೆ ಬಂದಿರಬೇಕು. ಪಂಪನ ಗ್ರಂಥಗಳನ್ನು ನೋಡಿದರೆ ಅವು
ಕನ್ನಡಭಾಷೆಯ ಇಷ್ಟೊಂದು ಬಾಲ್ಯದಶೆಯಲ್ಲಿ ರಚಿತವಾದವೆಂದು ಹೇಳಲಾಗುವ
ದಿಲ್ಲ. ಅವು ಕೇವಲ ಪದ್ಯರೂಪವಾಗಿರದೆ ಚಂಪೂರೂಪವಾಗಿವೆ. ಶೈಲಿಯೂ
ಪ್ರೌಢವಾಗಿದೆ. ಇದರಿಂದ ಕನ್ನಡ ಭಾಷೆಯಲ್ಲಿ ಗ್ರಂಥರಚನೆಗೆ ಆರಂಭವಾ
ಎಷ್ಟೋ ಶತಕಗಳಾದ ಮೇಲೆ ಪಂಪನ ಗ್ರಂಥಗಳು ಹುಟ್ಟಿರಬೇಕೆಂಬದು ಸ್ಪಷ್ಟ
ವದೆ. ಆಂದರೆ ಈ ಕಾಲದಲ್ಲಿ ಜನರಿಗೆ ಕೇವಲ ಪದ್ಯಗ್ರಂಥಗಳಿಗಿಂತ ಗದ್ಯಪದ್ಯ
ಮಿಶ್ರವಾದ ಚಂಪೂಗ್ರಂಥಗಳು ಪ್ರಿಯವಾಗಿದ್ದವು. ಈ ಸಂಗತಿಯನ್ನು ಭೋಜರಾ
ಜನು (ಸು. ೧೦ ಶ.) ತನ್ನ ಗ್ರಂಥದಲ್ಲಿ— "**गद्यानुबंधरसमिश्रितपद्यबन्धै**
र्विद्वद्भिरेव वाद्यकलया कलितेवगीतिः" ಎಂಬ ಪದ್ಯಭಾಗದಲ್ಲಿ ಕಂಠೋ
ಕ್ತವಾಗಿ ಹೇಳಿದ್ದಾನೆ. ಮೇಲೆ ಹೇಳಿದಂತೆ ಪಂಪನ ಕಾವ್ಯಗಳು ಚಂಪೂಗ್ರಂಥಗ
ನಿರ್ಮಾಣಕಾಲದಲ್ಲಿ ಇಲ್ಲವೆ ಗ್ರಂಥರಚನೆಯು ಮಧ್ಯಕಾಲದಲ್ಲಿ ರಚಿತವಾಗಿದ್ದರ
ಅವನ ಶೈಲಿಯಲ್ಲಿರುವ ಸರಳತೆ, ಶಬ್ದಾಲಂಕಾರ, ಶ್ಲೇಷ, ಪರಿಸಂಖ್ಯೆ ಮೊದಲಾ
ಕೃತ್ರಿಮ ಅಲಂಕಾರಗಳಿಲ್ಲದೆ ಸುಲಭವಾಗುವಂತೆ ಸ್ವಾಭಾವಿಕವಾಗಿ ರಚಿಸಿ
ರೀತಿ, ಮೊದಲಾದವನ್ನು ನೋಡಿದರೆ ಸಂಸ್ಕೃತಭಾಷೆಯಲ್ಲಿ ಕಾಲಿದಾಸನ ಕವಿತೆಯು
ಹೇಗೆ ಆದಿಕಾಲದ ಕವಿತೆಯೆಂದು ಹೇಳಲ್ಪಡುವದೋ ಹಾಗೆಯೇ ಪಂಪನ ಕವಿತೆಯು
ಕನ್ನಡದಲ್ಲಿ ಆದಿಕಾಲದ ಕವಿತೆಯೆಂದು ಹೇಳಬಹುದಾಗಿದೆ.

ಮೇಲೆ ಭೋಜರಾಜನ ವಾಕ್ಯದಲ್ಲಿ ಹೇಳಿದ ಗದ್ಯಕ್ಕೂ ಪದ್ಯಕ್ಕೂ ಹೆಚ್ಚು
ವ್ಯತ್ಯಾಸವಿಲ್ಲ. ಪದ್ಯವು ಛಂದಸ್ಸಿನ ನಿಯಮಗಳುಳ್ಳದ್ದಾಗಿರುವದು; ಗದ್ಯಕ್ಕೆ ಆ ನಿಯ
ಮಗಳು ಇಲ್ಲವೆಂಬುದಿಷ್ಟೇ; ಕಲ್ಪನಾಪ್ರಪಂಚವು ಎರಡರಲ್ಲಿಯೂ ಸಮಾನವೇ.
ಈ ತರದ ಗದ್ಯಪದ್ಯಗಳೆರಡಕ್ಕೂ ಕಾವ್ಯವೆಂಬ ಹೆಸರು ಸಲ್ಲುವದು. ಈ ಪ್ರಕಾರ
ಕಲ್ಪನಾಸೃಷ್ಟಿ ಪ್ರಧಾನವಾದ ಗದ್ಯವೇ ಆಗಲಿ, ಪದ್ಯವೇ ಆಗಲಿ, ಚಂಪೂ ಗ್ರಂಥವೇ
ಆಗಲಿ ಅವು ಉಂಟಾದ ಕಾಲವು ಗ್ರಂಥರಚನೆಯ ಆರಂಭಕಾಲವೆಂದು ಹೇಳಬಹುದು.

(ಸಶೇಷ).

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वला: ।
न स्नानं न विलेपनं न कुसुमं नालंकृता मूर्धजा: ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं वाग्भूषणम् भूषणम् ॥

(भर्तृहरिः)

ಸಂಪುಟ ೧೬.	ಅಕ್ಟೋಬರ ೧೯೧೧.	ಸಂಚಿಕೆ ೩.

ವಿಜಯೋದಶಮಿ. (ಆಶ್ವಿನ ಶುಕ್ಲ ೧೦.)

ಈ ಹಬ್ಬವು ಆರ್ಯಜನರ ಹಬ್ಬಗಳಲ್ಲಿ ಬಹಳ ಶ್ರೇಷ್ಠವಾದದ್ದು. ಇದರ ಉತ್ಪತ್ತಿಯ ವಿಷಯದಲ್ಲಿ ಜನರಲ್ಲಿ ಬೇರೆ ಬೇರೆ ಮತಗಳಿರುವವು.

(೧). ಪಾಂಡವರು ಅಜ್ಞಾತವಾಸಕ್ಕೆ ವಿರಾಟನಗರಿಗೆ ಹೋದಾಗ ತಮ್ಮ ಶಸ್ತ್ರಾಸ್ತ್ರಗಳನ್ನು ಸಮೀಪದ ಅಡವಿಯಲ್ಲಿದ್ದ ಒಂದು ಬನ್ನಿಯ ಮರದಲ್ಲಿಟ್ಟಿದ್ದರು. ಅಜ್ಞಾತವಾಸದ ಅವಧಿಯು ಮುಗಿಯಲು ಅರ್ಜುನನು ಶತ್ರುಗಳ ಮೇಲೆ ಬೀಳುವದ ಕ್ಕಾಗಿ ಆಶ್ವಿನ ಶುಕ್ಲ ದಶಮಿಯ ದಿವಸ ಆ ಬನ್ನಿಯ ಮರವನ್ನು ಪೂಜಿಸಿ ಅದರೊಳಗಿನ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಹೊರಟು ವಿಜಯವನ್ನು ಸಂಪಾದಿಸಿದನು. ಇದೇ ದಶಮಿಯ ಮುಹೂರ್ತದಲ್ಲಿ ಸೂರ್ಯವಂಶದಲ್ಲಿ ಪ್ರಸಿದ್ಧನಾದ ರಘುರಾಜನು ದಿಗ್ವಿಜಯಕ್ಕೂ ಶ್ರೀರಾಮಚಂದ್ರನು ರಾವಣ ಸಂಹಾರಕ್ಕೂ ಹೊರಟಿದ್ದರು.

(೨). ಪೂರ್ವದಲ್ಲಿ ಮಹಿಷಾಸುರನೆಂಬ ದೈತ್ಯನು ಭೂಮಿಯಲ್ಲಿ ಬಹಳ ಕ್ರೂರ ಕೃತ್ಯಗಳನ್ನು ನಡೆಸಿದ್ದನು. ಅದರಿಂದ ಸಜ್ಜನರಿಗೆಲ್ಲ ಬಹಳ ಕಷ್ಟಕಾಲವು ಒದಗಿತ್ತು. ಆ ಕಾಲದಲ್ಲಿ ಪರಮೇಶ್ವರನ ಅಂಶದಿಂದ ಅಷ್ಟಭುಜ ದೇವಿಯು ಅವತರಿಸಿ ಆ ದೈತ್ಯನೊಡನೆ ಒಂಬತ್ತು ದಿವಸ ಯುದ್ಧಮಾಡಿ ಹತ್ತನೆಯ ದಿವಸ—ಆಶ್ವಿನ ಶುಕ್ಲ ದಶಮಿಯ ದಿವಸ—ವಿಜಯವನ್ನು ಪಡೆದಳು.

ಹೀಗೆ ಈ ತಿಥಿಯು ವಿಜಯವನ್ನು ಕೊಡುವದಾದ್ದರಿಂದ ಇದಕ್ಕೆ "ವಿಜಯಾದಶಮಿ" ಎಂಬ ಹೆಸರುಂಟಾಯಿತು. ಈ ಒಳ್ಳೇ ಮುಹೂರ್ತದ ಅನುಕೂಲತೆ

ಯಿಂದ ರಾವಣ ಮಹಿಷಾಸುರರಂಥ ಲೋಕಕಂಟಕರ ವಧೆಮಾಡಿ ದೇಶದ ಕಲ್ಯಾಣವಾಡ್ದರಿಂದ ಈ ತಿಥಿಯು ಆನಂದದ ಮತ್ತು ಉತ್ಸವದ ದಿವಸವಾಗಿರಬಹುದು. ಈ ದಶಮಿಯ ದಿವಸ ಪ್ರಯಾಣಮಾಡಿ ಅರ್ಜುನ ಶ್ರೀರಾಮಚಂದ್ರ ಮೊದಲಾದ ವೀರರು ಜಯವನ್ನು ಸಂಪಾದಿಸಿದ್ದರಿಂದ ಪ್ರಯಾಣಕ್ಕೂ ಯಾವದೊಂದು ಕಾರ್ಯದ ಆರಂಭಕ್ಕೂ ಇದೊಂದು ಪ್ರಶಸ್ತ ಮುಹೂರ್ತವೆನಿಸಿದೆ.

ಇವಲ್ಲದೆ ಇದರ ಉತ್ಪತ್ತಿಯ ವಿಷಯದಲ್ಲಿ ಇನ್ನೂ ಒಂದು ಮತವುಂಟು.

(೩) ವಿಜಯಾ, ಎಂಬ ಹೆಸರಿನ ದೇವಿಯ ಪೂಜೆಗೆ ಉಕ್ತವಾದ ದಶಮಿ ವಿಜಯಾದಶಮಿ, ಎಂದು ಈ ಹೆಸರು ಅನ್ವರ್ಥವಾಗಿರುವದು. ಪದ್ಮಾಸುರನನ್ನು ಕೊಂದ ದೇವಿಯ ಹೆಸರು ವಿಜಯೆ, ಈಕೆಗೆ " ಅಪರಾಜಿತೆ " ಎಂದೂ ಅನ್ನುವರು.

विजित्य पद्मनामानं दैत्यराजं महाबलम् ।
विजया तेन सा देवी लोके चैवापराजिता ॥
दशम्यां च (आश्विन शु.) नरैः सम्यक्पूजनीयापराजिता ॥
ऐशानीं दिशमाश्रित्यापराह्णे प्रयत्नतः ॥

ಎಂಬ ಶ್ಲೋಕಗಳಲ್ಲಿ ಈ ಉತ್ಪತ್ತಿಯು ಕಂಡುಬರುವದು. ಇದರ ಉತ್ಪತ್ತಿಯು ಹೇಗೇ ಇರಲಿ, ಈ ಹಬ್ಬವು ಬರುವ ಕಾಲವು, ಅಂದರೆ ಶರದೃತುವಿನ ಆರಂಭವು. ಉತ್ಸವಕ್ಕೆ ಒಳ್ಳೇ ಸಮಯವು. ವರ್ಷರ್ತುವಿನಲ್ಲಿ ಸಂತತವಾದ ಮಳೆಯಿಂದ ಭೂಮಿಯೂ, ಆಕಾಶವೂ, ಹೊಳೆ-ಹಳ್ಳಗಳೂ ಹೊಲಗಳೂ ಮಲಿನವಾಗಿ ಹೋಗುವವು. ಸ್ಥಳಬಿಟ್ಟು ಕದಲಲಿಕ್ಕೂ ಆಗದ್ದರಿಂದ ಆಲಸ್ಯದಿಂದ ಜನರ ಮನಸ್ಸು ಮಲಿನವಾಗುವದು. ಮುಂದೆ ಶರದೃತುವು ಬರಲು ಮೋಡಗಳಿಲ್ಲದೆ ಆಕಾಶವು ನೀಲವರ್ಣದಿಂದ ಶೋಭಿಸುವದು. ಹೊಳೆ-ಹಳ್ಳ ಮೊದಲಾದ ಜಲಾಶಯಗಳೂ ಸ್ವಚ್ಛವಾಗುವವು. ಬಕ್ಕಲಿಗರು ಹೊಲಗಳಲ್ಲಿ ಕೆಲಸ ಮಾಡುವದರಿಂದ ಅವು ಬೆಳೆಗಳಿಂದ ಕಂಗೊಳಿಸುವವು. ಬಹುತರ ದುರ್ದಿನಗಳು ಹೋಗಿ ಸ್ವಚ್ಛದಿನಗಳು ಆರಂಭವಾಗುವವು. ಇದರಿಂದ ವರ್ಷಕಾಲದಲ್ಲಿ ಬೇಸರುಗೊಂಡಿದ್ದ ಜನರ ಮನಸ್ಸು ಒಂದು ಪ್ರಕಾರದ ಉತ್ಸಾಹದಿಂದ ಉತ್ಸವದಲ್ಲಿ ತೊಡಗುವದು ಸ್ವಾಭಾವಿಕವಾಗಿದೆ.

ಈ ಪ್ರಕಾರ ಉತ್ಸವದಲ್ಲಿ ಆಸಕ್ತವಾದ ನಮ್ಮ ಪೂರ್ವಜರ ಮನಸ್ಸು ಆ ಉತ್ಸವಕ್ಕೆ ಧಾರ್ಮಿಕ ಸ್ವರೂಪವನ್ನು ಕೊಡುವದರ ಕಡೆಗೆ ತಿರುಗಿತೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಶರದೃತುವಿನ ಆರಂಭದಲ್ಲಿ ಒಂಭತ್ತು ದಿವಸ ದೇವಿಯನ್ನು ಆರಾಧಿಸುವ ಪರಿಪಾಠವುಂಟಾಯಿತು. ಈ ಒಂಭತ್ತು ದಿವಸಗಳಿಗೆ " ಶಾರದಾನವರಾತ್ರ " ಎಂಬ ರೂಢಿಯಿದೆ. ಈ ನವರಾತ್ರಿಯಲ್ಲಿ ಉತ್ತರ-ಹಿಂದುಸ್ತಾನದಲ್ಲಿ ವಿಶೇಷವಾಗಿ ಬಂಗಾಲದಲ್ಲಿ ಸಿಂಹಾರೂಢ ಕಾಲಿಯ ಮೂರ್ತಿಯನ್ನು ಮನೆ ಮನೆಗಳಲ್ಲಿ

ಸ್ಥಾಪಿಸಿ ವೈಭವದಿಂದ ಪೂಜಿಸುವರು. ಈ ಶರದೃತುವಿನಲ್ಲಿ ಸೂರ್ಯನು ಸಿಂಹರಾಶಿಯಿಂದ ಕನ್ಯಾರಾಶಿಗೆ ಹೋಗುತ್ತಿರುವನು. ಆದ್ದರಿಂದ ಈ ಆರಾಧನೆಯ ಪ್ರಕಾರವು ಜ್ಯೋತಿಷದ ಕಲ್ಪನೆಯಿರಬಹುದೋ ಎಂಬುದು ವಿಚಾರಣೀಯವಾಗಿದೆ.

ಈ ಶರತ್ಕಾಲದಲ್ಲಿ ಬೆಳೆಗಳು ಬಹುತರ ಭೂಮಿಯಲ್ಲಿ ಬೆಳೆದು ನಿಂತಿರುವದರಿಂದ ಅವು ಚನ್ನಾಗಿ ಬರಬೇಕೆಂದು ಧಾನ್ಯಾದಿ ಸಂಪತ್ತಿಯನ್ನು ಕೊಡುವ್ಹೆದೇವಿಯನ್ನು ಆರಾಧಿಸುವ ರೂಢಿ ಬಂದಿರಬಹುದು. ಈ ನವರಾತ್ರದಲ್ಲಿ ದಕ್ಷಿಣದೇಶದಲ್ಲಿ ಬಹುತರ ದುರ್ಗೆಯನ್ನು ಆರಾಧಿಸುವರು. ಇತ್ತಿತ್ತ ' ವೇಂಕಟೇಶ ' ಮೊದಲಾದ ತಮ್ಮ ತಮ್ಮ ಇಷ್ಟ ದೇವತೆಯನ್ನು ಆರಾಧಿಸುತ್ತಿರುವರು. ಜಪ, ಹೋಮ, ಪಾರಾಯಣ, ಪುರಾಣ ಮೊದಲಾದ ಧರ್ಮಕೃತ್ಯಗಳು ಈ ದಿವಸಗಳಲ್ಲಿ ವಿಶೇಷವಾಗಿ ನಡೆಯುವವು. ನವರಾತ್ರದಲ್ಲಿ ಮಾಡುವ ಪೂಜೆ ಮೊದಲಾದ್ದನ್ನು ಹತ್ತನೆಯ ದಿವಸ-ದಶಮಿಯ ದಿವಸ–ವಿಜೃಂಭಣೆಯಿಂದ ಮುಗಿಸುವರು.

ಈ ವಿಜಯಾ ದಶಮಿಯಲ್ಲಿ ಅಪರಾಹ್ಣ (೩ ರಿಂದ ೪ ಘ.) ಕಾಲದಲ್ಲಿ ಅಪರಾಜಿತಾ ದೇವಿಯ ಪೂಜನ, ಸರಸ್ವತೀ ವಿಸರ್ಜನ, ದಶಮಿ ಪೂಜನ, ಕ್ಷತ್ರಿಯ ವೀರರಿಗೆ ಸೀಮೋಲ್ಲಂಘನ ಇವು ಶಾಸ್ತ್ರೋಕ್ತ ಕರ್ಮಗಳಾಗಿರುವವು.

ಈ ದಿನ ಅಪರಾಹ್ಣಕಾಲದಲ್ಲಿ ಐಶಾನೀ ದಿಕ್ಕಿನಲ್ಲಿ ಅಪರಾಜಿತಾ ದೇವಿಯನ್ನು ಪೂಜಿಸಬೇಕೆಂದಿರುವದು. ಅಪರಾಜಿತಾ ಪೂಜೆಯಾದ ಬಳಿಕ ಶಮಿ ಪೂಜೆಯನ್ನು ಮಾಡತಕ್ಕದ್ದಿರುವದು. ಆದ್ದರಿಂದ ಐಶಾನೀ ದಿಕ್ಕಿಗೆ ಶಮಿಯಿದ್ದಲ್ಲಿಗೆ ಹೋಗಿ ದೇವೀ ಪೂಜೆಯನ್ನೂ ಶಮಿ ಪೂಜೆಯನ್ನೂ ತೀರಿಸಿಕೊಂಡು ಬರುವರು.

ಆಶ್ವಿನ ಶುಕ್ಲಪಕ್ಷದಲ್ಲಿ ಮೂಲ ನಕ್ಷತ್ರವಿದ್ದ ದಿವಸ ಸರಸ್ವತಿಯನ್ನು ಸ್ಥಾಪಿಸಿ ಪೂಜಿಸಬೇಕೆಂದಿರುವದು. ಈ ಪೂಜೆಯು ನವರಾತ್ರದಲ್ಲಿ ಬರುವದು. ಶ್ರವಣ ನಕ್ಷತ್ರದಲ್ಲಿ ಆ ಪೂಜೆಯನ್ನು ಮುಗಿಸಿ ವಿಸರ್ಜನೆ ಮಾಡತಕ್ಕದ್ದಿರುವದು. ಈ ವಿಸರ್ಜನವು ಬಹುತರ ದಶಮಿಯ ದಿನ ಆಗುವದು.

ಈದೇ ಆಶ್ವಿನ ಶುಕ್ಲ ನವಮಿಯ ದಿವಸ ' ಉಚ್ಚೈಃಶ್ರವ ' ವೆಂಬ ಇಂದ್ರಾಶ್ವವನ್ನು ಪೂಜಿಸಬೇಕೆಂದು ಶಾಸ್ತ್ರವಿರುವದು. ಆದರೆ ಈಗ ನವಮಿಯನ್ನು ಬಿಟ್ಟು ಬಹುತರ ದಶಮಿಯ ದಿವಸವೇ ಮನೆಯಲ್ಲಿ ಕುದುರೆಯಿದ್ದವರು ತಮ್ಮ ಕುದುರೆಯನ್ನು ಯಥಾಶಕ್ತಿ ಶೃಂಗರಿಸಿ ಮೆರೆಯಿಸುವದುಂಟು.

ಈ ವಿಜಯಾ ದಶಮಿಯಲ್ಲಿ ಮಾಡತಕ್ಕ ಮತ್ತೊಂದು ಮಹತ್ಕಾರ್ಯವೆಂದರೆ, ಸೀಮೋಲ್ಲಂಘನವು, ಪೂರ್ವಕಾಲದಲ್ಲಿ ರಾಜರು ಪರರಾಜ್ಯವನ್ನು ಜಯಿಸುವದಕ್ಕಾಗಿ ಈ ಮುಹೂರ್ತದಲ್ಲಿ ತಮ್ಮ ಚತುರಂಗ ಸೈನ್ಯದೊಡನೆ ತಮ್ಮ ರಾಜ್ಯದ ಸೀಮೆ

ಯನ್ನು ವಿೂರಿ ಶತ್ರುಗಳ ಸೀಮೆಯನ್ನು ಪ್ರವೇಶಿಸುತ್ತಿದ್ದರು. ಈ ಪ್ರಕಾರ ತಮ್ಮ ಸೀಮೆಯನ್ನು ಉಲ್ಲಂಘಿಸಿ ಹೋಗುವದೇ ಸೀಮೋಲ್ಲಂಘನವು.

ಮಹಾರಾಷ್ಟ್ರ ದೇಶದಲ್ಲಿ ಈ ದಿನ ಬನ್ನಿಯ ಮತ್ತು ಆರಿಯ ಸೊಪ್ಪನ್ನು ಕೆಲವೆಡೆ ಜೋಳದ ಎಲೆಗಳನ್ನು ಸಹ ಬೆಳ್ಳಿಬಂಗಾರವೆಂದು ಒಬ್ಬರಿಗೊಬ್ಬರು ಕೊಟ್ಟು ನಮಸ್ಕರಿಸುವ ಪದ್ಧತಿಯುಂಟು. ಈ ಪದ್ಧತಿ ದಕ್ಷಿಣದೇಶದಲ್ಲಿಲ್ಲ. ಇದಕ್ಕೆ ಶಾಸ್ತ್ರಾಧಾರವೇನೂ ಇಲ್ಲ. ಆದರೆ ಹಿಂದಿನ ಕಾಲದಲ್ಲಿ ಸೀಮೋಲ್ಲಂಘನ ಮಾಡಿದ ಕ್ಷತ್ರಿಯ ವೀರರು ತಿರುಗಿ ಊರಿಗೆ ಬಂದಬಳಿಕ ತಾವು ಸುಲಿಗೆಯಲ್ಲಿ ತಂದ ಬಂಗಾರ ಬೆಳ್ಳಿಗಳಲ್ಲಿ ಕೆಲಕೆಲವು ಭಾಗವನ್ನು ದೇವರೆದುರಿಗೂ, ಗುರುಹಿರಿಯರ ಎದುರಿಗೂ ಇಟ್ಟು ನಮಸ್ಕರಿಸುತ್ತಿದ್ದರು. ಈ ಪದ್ಧತಿಯು ಪೇಶ್ವೆಯವರ ಕಾಲದಲ್ಲಿಯೂ ಇತ್ತಂತೆ. ಬನ್ನಿಯ ಸೊಪ್ಪನ್ನು ಕೊಟ್ಟು ನಮಸ್ಕರಿಸುವ ಈಗಿನ ಪದ್ಧತಿಯು ಕೇವಲ ಅದರ ಅನುಕರಣವಾಗಿರಬಹುದು. ಆದರೂ ಮಹಾರಾಷ್ಟ್ರದಲ್ಲಿ ರೂಢವಾದ ಈ ಪದ್ಧತಿಯು ಸಾಮಾಜಿಕ ದೃಷ್ಟಿಯಿಂದ ಲಾಭಕರವಾಗಿದೆಯೆಂದು ಹೇಳಬಹುದು. ಯಾಕಂದರೆ—ಇದರಿಂದ ಸಣ್ಣವರಲ್ಲಿ ದೊಡ್ಡವರಲ್ಲಿ ಪೂಜ್ಯಭಾವವೂ, ಒರಿಗೆಯವರಲ್ಲಿ ಪರಸ್ಪರ ಸ್ನೇಹವೂ ಹೆಚ್ಚಾಗುವವು. ಅಲ್ಪಕಾರಣದಿಂದ ವೈಮನಸ್ಯವುಂಟಾದವರು ಈ ನಿಮಿತ್ತದಿಂದ ತಮ್ಮ ವೈಮನಸ್ಯವನ್ನು ಬಿಟ್ಟು ಕೂಡಿಕೊಳ್ಳುವರು.

ಈ ಹಬ್ಬವು ಕೇವಲ ಧರ್ಮಾಚರಣೆಯ ಸಲುವಾಗಿಯೇ ಇರದೆ ರಾಜಕೀಯವಾಗಿಯೂ ಇತ್ತು. ಪೂರ್ವಕಾಲದಲ್ಲಿ ರಾಜರು ಈ ದಿವಸ ತಮ್ಮ ಚತುರಂಗ ಸೇನೆಯನ್ನು ತೆಗೆದುಕೊಂಡು ಶತ್ರುರಾಜ್ಯಕ್ಕೆ ಹೋಗುತ್ತಿದ್ದುದರಿಂದ ಇದರ ಹಿಂದಿನ ದಿವಸ–ನವಮಿಯ ದಿವಸ–ದಂಡನ್ನು ಸಜ್ಜುಮಾಡುತ್ತಿದ್ದರು. ಆ ದಿವಸ ದಂಡಾಳುಗಳು ಒರೆಯಲ್ಲಿಟ್ಟ ತಮ್ಮ ಆಯುಧಗಳನ್ನು ಹೊರಗೆ ತೆಗೆದು ಅವುಗಳನ್ನು ಪೂಜಿಸುತ್ತಿದ್ದರು. ಈಗ ಜನರು ಕುಡಗೋಲು, ಕುರುಪೆ ಮೊದಲಾದ ಆಯುಧಗಳನ್ನಾದರೂ "ಖಂಡೆಯ ಪೂಜೆ"–(ಖಡ್ಗಪೂಜಾ) ಎಂದು ಇನ್ನೂ ಹಿಂದಿನ ಪದ್ಧತಿಯನ್ನು ಪೂರ್ಣವಾಗಿ ಮರೆಯದೆ ಪೂಜಿಸುತ್ತಿರುವರು.

ಈ ದಿನ ಮಾಡಬೇಕಾದ ಕಾರ್ಯಗಳಲ್ಲಿ ಸೀಮೋಲ್ಲಂಘನವು ಪೂರ್ವಕಾಲದಲ್ಲಿ ಬಹಳ ಮಹತ್ವದ್ದಾಗಿತ್ತು. ಈ ಕಾಲದಲ್ಲಿ—ಘನತೆಹೊಂದಿದ ಇಂಗ್ಲಿಷ್ ಸರಕಾರದ ಶಾಂತತಾಯುಕ್ತ ಸಾಮ್ರಾಜ್ಯಕಾಲದಲ್ಲಿ ಇಲ್ಲಿಯ ಜನರಿಗೆ ಈ ತರದ ಸೀಮೋಲ್ಲಂಘನದ ಆವಶ್ಯಕತೆಯು ಉಳಿದಿಲ್ಲ. ಪೂರ್ವಕಾಲದಲ್ಲಿ ಪರದೇಶವನ್ನು ಜಯಿಸುವ ಉದ್ದೇಶದಿಂದ ಸೀಮೆಯ ಉಲ್ಲಂಘನ ಮಾಡುತ್ತಿದ್ದರೂ ಈ ಕಾಲದಲ್ಲಿ ನಮ್ಮವರು ಆ ಅಲ್ಪವಾದ ಉದ್ದೇಶವನ್ನು ಬಿಟ್ಟು ಬೇರೆ ಮಹತ್ವದ ಉದ್ದೇಶಗಳಿಂದ ಆವಶ್ಯವಾಗಿ ಸೀಮೋಲ್ಲಂಘನವನ್ನು ಮಾಡತಕ್ಕದ್ದಿರುವದು. ಪರದೇಶವನ್ನು ವ

ಮಾಡಿಕೊಳ್ಳುವದನ್ನು ಬಿಟ್ಟು ನಾವು ಈಗ ಪರದೇಶದವರ ಉತ್ತಮೋತ್ತಮ ಗುಣಗಳನ್ನು ವಶಮಾಡಿಕೊಳ್ಳತಕ್ಕದ್ದಿರುವದು. ಪರದೇಶಗಳಲ್ಲಿಯು ಜ್ಞಾನಭಾಂಡಾರವನ್ನು ತರುವದಕ್ಕಾಗಿ ನಮ್ಮ ದೇಶದ ವಿದ್ವದ್ವೀರರು ಈ ವಿಜಯುವ ದಶಮಿಯ ಸುಮುಹೂರ್ತದಲ್ಲಿ ಯಾಕೆ ಸೀಮೋಲ್ಲಂಘನ ಮಾಡಬಾರದು? ಈ ಜ್ಞಾನಸಂಪಾದನೆಯ ಉದ್ದೇಶದಿಂದ ದೇಶದ ಸೀಮೆಯೊಂದನ್ನಲ್ಲದೆ ನಮ್ಮ ದೇಶದಲ್ಲಿ ಪರಮ ಸೀಮೆಯನ್ನು ಹೊಂದಿದ ಇನ್ನೂ ಹಲವು ವಿಷಯಗಳಲ್ಲಿ ಸೀಮೋಲ್ಲಂಘನ ಮಾಡತಕ್ಕದ್ದಿರುವದಲ್ಲವೇ? ಪರಸ್ಪರ ದ್ವೇಷ, ಜಾತಿಮತ್ಸರ, ಆಲಸ್ಯ ಮೊದಲಾದ ಅನೇಕ ದುರ್ಗುಣಗಳ ಸೀಮೆಯನ್ನು ಉಲ್ಲಂಘಿಸುವ ಕಾರ್ಯವನ್ನು ನಾವು ಯಾಕೆ ಮಾಡಬಾರದು? ಪ್ರತಿಯೊಬ್ಬನು ತನ್ನ ಜ್ಞಾನದಲ್ಲಿ ತಾನು ಮಾಡುವ ಉದ್ಯೋಗದಲ್ಲಿ ಇದುವರೆಗೆ ಎಷ್ಟು ಸೀಮೆಯನ್ನು ಉಲ್ಲಂಘಿಸಿದ್ದೇನೆ, ಇನ್ನು ಮುಂದಿನ ವರ್ಷದಲ್ಲಿ ಎಷ್ಟು ಸೀಮೆಯನ್ನು ಉಲ್ಲಂಘಿಸಬೇಕು. ಎಂಬದನ್ನು ಈ ಸುಮುಹೂರ್ತದಲ್ಲಿ ನಿಷ್ಕರ್ಷಿಸಿಕೊಂಡರೆ ಎಷ್ಟು ಪ್ರಯೋಜನವಾಗಬಹುದು?

ಆದ್ದರಿಂದ ಈ ಪ್ರಕಾರದ ಸೀಮೋಲ್ಲಂಘನ ಮಾಡುವ ಬುದ್ಧಿಯನ್ನು ಪರಮೇಶ್ವರನು ನಮ್ಮ ದೇಶಬಾಂಧವರಿಗೆ ಕೊಡಲಿ, ಎಂದು ಪ್ರಾರ್ಥಿಸುವ.

M. P. Pujar.

ಆ ಸಂಗತಿಯನ್ನು ಎಂದೂ ಮರೆಯಲಾರೆ!

ಮಾವನವರಿಗೆ ಪೆನ್‌ಶನವಾದ ಬಳಿಕ ನಾವು ಬೆಂಗಳೂರಿಗೆ ಬಂದ ವರ್ಷದ ದೀಪಾವಳಿಯಲ್ಲಿಯೇ ನಡೆದ ಸಂಗತಿ. ಅದಕ್ಕೆ ಐದಾರು ವರ್ಷಗಳಾದರೂ ಅದರ ನೆನಪಾದರೆ ನನ್ನ ಮೈಮೇಲೆ ಮುಳ್ಳೇಳುತ್ತವೆ. ದೀಪಾವಳಿಗೆ ಏಳೆಂಟು ದಿವಸಗಳು ಮಾತ್ರ ಉಳಿದಿದ್ದವು. ಅತ್ತಿಗೆಯವರು ಹಬ್ಬಕ್ಕೆ ತವರುಮನೆಗೆ ಬಂದು ೩-೪ ವರ್ಷಗಳಾಗಿದ್ದವು. ಆ ದೀಪಾವಳಿಗೆ ಬರುವವರಿದ್ದರು. ಅದರಿಂದ ಮನೆಯಲ್ಲಿ ನಡೆದಿದ್ದ ಗಡಿಬಿಡಿಯನ್ನು ಎಷ್ಟೆಂದು ಹೇಳಲಿ! ಚಿಕ್ಕ ಹುಡುಗರು "ಅಕ್ಕ ಬರುವಳು" "ಅಕ್ಕ ಬರುವಳು" ಎಂದು ಕುಣಿದಾಡುತ್ತಿದ್ದರು. "ನಮ್ಮ ಸುಂದರಿಗೆ ಜಿಲೇಬಿ ಮೇಲೆ ಬಹು ಪ್ರೀತಿ, ಮಂಡಿಗೆಯ ಮೇಲೆ ಅವಳ ಪ್ರಾಣ, ಸುಂದರಿಗೆ ಅದು ಸೇರುತ್ತದೆ, ಇದು ಸೇರುತ್ತದೆ." ಎಂದು ಅತ್ತೆಯವರು ಹೇಳುವದು ಕಡೆತನಕ ಮುಗಿಯಲೇ ಇಲ್ಲ ಅತ್ತೆಯ ಮನೆಯಿಂದ ಮಗಳು ತವರುಮನೆಗೆ ಬರುವಳೆಂದರೆ ತಾಯಿಗೆ ಹಿಡಿಯಲಾರದಷ್ಟು ಆನಂದ. ಅದರಲ್ಲಿ ಜಹಗೀರದಾರರ ಮನೆಗೆ ಬಿದ್ದವಳು, ಎಷ್ಟೋ ದಿವಸಗಳಾದ ಮೇಲೆ ಬರುವವಳು. ನಮ್ಮ ಅತ್ತೆಯವರ ಆನಂದಕ್ಕೆ ವಾರ

ವಿಲ್ಲದಾಯಿತು. ನೆರೆಹೊರೆಯ ಹೆಂಗಸರ ಕೂಡ "ನಮ್ಮ ಸುಂದರಿಗೆ ಮೈತುಂಬ ವಸ್ತ ಇಟ್ಟಿದ್ದಾರೆ, ಸುಂದರಿಯು ಕಸೂತಿಯನ್ನು ಎಷ್ಟು ಚನ್ನಾಗಿ ತೆಗೆಯುತ್ತಾಳೆ! ಸುಂದರಿ ಎಷ್ಟು ಜಾಣೆ! ಗಂಡನ್ನಂತೂ ಕೈಯಲ್ಲೇ ಇಟ್ಟುಕೊಂಡಿರುವಳು." ಈ ರೀತಿಯಲ್ಲಿ ಸುಂದರಿಯನ್ನು ಹೊಗಳಲಿಕ್ಕೆ ಅವರಿಗೆ ಹೊತ್ತೇ ನಾಲುತ್ತಿದ್ದಿಲ್ಲ.

ಅತ್ತೆಯವರು ಸುಂದರಾ ಅತ್ತಿಗೆಯವರ ಗುಣಗಳನ್ನು ಬೆಳಿಸಿ ಹೇಳುತ್ತಿದ್ದರೆಂದಲ್ಲ. ಅತ್ತಿಗೆಯವರ ಗುಣಗಳೇ ಹಾಗಿದ್ದವು. ಅತ್ತಿಗೆಯವರ ಅತ್ತೆಮಾವಂದರಿಗೂ ಆಕೆಯ ಮೇಲೆ ಪ್ರಾಣ. ಅದರಲ್ಲಿ ಆಶ್ಚರ್ಯವೇನೂ ಇರಲಿಲ್ಲ. ಅತ್ತಿಗೆಯವರ ಸಂಸಾರ ವ್ಯವಸ್ಥೆಯನ್ನು ನಾನು ನಾನು ಎನ್ನುವ ನಾಲ್ಕು ದೊಡ್ಡ ಹೆಂಗಸರು ನೋಡಿ ಕಲಿಯುವಂತಿತ್ತು. ಅವರಿಗೆ ಬಾರದಿದ್ದ ಕೆಲಸವೇ ಇರಲಿಲ್ಲ. ವಸ್ತ ಹೆಣಿಯುವದು, ಕಸೂತಿ ತೆಗೆಯುವದು, ಮಣಿ ಹಾಕುವದು ಬೇಕಾದ ಕೆಲಸ ಬರುತ್ತಿತ್ತು. ಅವರು ಸಾಮಾನುಗಳನ್ನು ಮಾಡುತ್ತಿರುವಾಗ, ನೋಡುತ್ತ ಸುಮ್ಮನೆ ಕೂಡಬೇಕೆಂದೆನಿಸುತ್ತಿತ್ತು. ಮಧುರವಾದ ಕಂಠವಿರುವದರಿಂದ ಅವರ ಹಾಡುಗಳನ್ನು ದಿನಾಲು ನಾಲ್ಕು ಘಳಿಗೆ ಕೇಳಬೇಕೆನಿಸುತ್ತಿತ್ತು. ಮೇಲಾಗಿ, ಅವರು ಸ್ವಭಾವ, ನಡತೆ, ಕೆಲಸಮಾಡುವ ಪದ್ಧತಿ, ಮಾತುಕಥೆಗಳಲ್ಲಿ ಬಹು ಮರ್ಯಾದಸ್ಥರು. ತವರುಮನೆಗೆ ಬಂದರೂ ಏನಾದರೂ ಕೆಲಸಮಾಡಬೇಕೆಂದು ಅವರು ನನ್ನ ಕಣ್ಣುತಪ್ಪಿಸಿ ಕೆಲಸಮಾಡುತ್ತಿದ್ದರು. ಅವರಿಗೆ ಓದಲಿಕ್ಕೂ ಬರಿಯಲಿಕ್ಕೂ ಚನ್ನಾಗಿ ಬರುತ್ತಿದ್ದವು. ನೆರೆಹೊರೆಯ ಹುಡಿಗಿಯರು ಅವರ ಬಳಿಗೆ ಬಂದು ಕಲಿಯುವಾಗ ಅವರು ಎಷ್ಟು ಆದರದಿಂದ ಕಲಿಸುತ್ತಿದ್ದರು! ಹೆಂಗಸರಿಗೆ ವಸ್ತವೆಂದರೆ ಪ್ರಾಣವಷ್ಟೇ. ನಮ್ಮಲ್ಲಿಂತೂ ವಸ್ತಗಳಿಂದ ತಮ್ಮ ಶ್ರೀಮಂತಿಕೆಯನ್ನು ಮೆರೆಸದ ಹೆಂಗಸರು ಅಪರೂಪ. ಅತ್ತಿಗೆಯವರಿಗೆ ಮಾತ್ರ ಇದು ಸೇರುತ್ತಿದ್ದಿಲ್ಲ. ನಾನು ಅವರಿಗೆ ಮೇಲಿಂದಮೇಲೆ "ಇದೇನಿದೀ, ಅತ್ತಿಗೆ? ದೇವರ ದಯೆಯಿಂದ ನಿಮಗೆ ಮೈತುಂಬ ಹಾಕುವಷ್ಟು ವಸ್ತಗಳಿದ್ದರೂ ನೀವು ಅವುಗಳನ್ನು ಹೊರಗೆ ಸಹ ತೆಗೆಯುವದಿಲ್ಲ? ಪೆಟ್ಟಿಗೆಯಲ್ಲಿಟ್ಟು ಅವುಗಳ ಪೂಜೆಯಾಗಬೇಕಾಗಿದೆಯೋ?" ಅಂದರೆ "ಅಲ್ಲ, ಕಮಲೀ, ವಸ್ತಗಳನ್ನಿಟ್ಟುಕೊಂಡು ಮೆರೆಯುವದು ಏನು ದೊಡ್ಡಸ್ತಿಕೆ? ವಸ್ತಗಳನ್ನಿಟ್ಟುಕೊಂಡು ತಿರುಗಾಡುವದಕ್ಕಿಂತ, ಬಡಪರಂತೆ ಬಾಳಿ, ಸದ್ಗುಣವತಿಯರ ಸಹವಾಸದಲ್ಲಿ ಕಾಲಕಳೆಯುವದು ನನಗೆ ಮೇಲಾದ ಸುಖವೆನಿಸುತ್ತದೆ; ವಸ್ತಗಳನ್ನಿಟ್ಟುಕೊಂಡ ಮಾತ್ರಕ್ಕೆ ಸುಖವಾಗುತ್ತಿದ್ದರೆ, ನಾನು ಇಲ್ಲಿ ಇರುವ ವರೆಗೆ ನೀನೇ ನನ್ನ ವಸ್ತಗಳನ್ನೆಲ್ಲ ಹಾಕಿಕೊಂಡಿರು" ಎನ್ನುತ್ತಿದ್ದರು. ವಾಸ್ತವಿಕವಾಗಿ ನನಗೇನೂ ವಸ್ತಗಳು ಕಡಿಮೆಯಿರಲಿಲ್ಲ. ಆದರೂ ಎಷ್ಟಾದರೂ ಹೆಂಗಸರಿಗೆ ವಸ್ತದ ಹುಚ್ಚು ಕಡಿಮೆಯಾಗುವದಿಲ್ಲ. ನನಗಾದರೂ ಚಿಕ್ಕಂದಿನಿಂದ ವಸ್ತದ ಮೇಲೆ ಬಹಳ ಪ್ರೀತಿ. ಆದ್ದರಿಂದ ಆಗಾಗ ನಾನು ಅತ್ತಿಗೆಯವರ ವಸ್ತಗಳನ್ನು ಇಟ್ಟುಕೊಳ್ಳುತ್ತಿದ್ದೆ.

ಇರಲಿ, ಗೊತ್ತಾದಂತೆ ಆ ದಿವಸ ಸಾಯಂಕಾಲ ನಮ್ಮ ಅತ್ತಿಗೆಯವರು ಬೆಂಗಳೂರಿಗೆ ಬಂದರು. ನಮ್ಮ ಒಕ್ಕಲಗಿತ್ತಿಯಾದ ಭೀಮಕ್ಕನು ಅವರಿಗೆ ಭಕ್ಕರಿಯನ್ನು ನಿವಾಳಿಸಿ ಒಗೆದಳು. ಅತ್ತಿಗೆಯವರು ಒಳಗೆ ಬಂದಕೂಡಲೆ ಹುಡುಗರು "ಅಕ್ಕಾ, ಅಕ್ಕಾ" ಎಂದು ಕುಣಿದಾಡಲಾರಂಭಿಸಿದರು. ಅತ್ತಿಗೆಯವರು ಅವರನ್ನು ಮುದ್ದಿಟ್ಟುಕೊಂಡು ನಮ್ಮ ಮಾವನವರಿಗೂ ಅತ್ತೆಯವರಿಗೂ ನಮಸ್ಕರಿಸಿದರು. ಅವರು ಆಶೀರ್ವಾದ ಮಾಡಿ ಅತ್ತಿಗೆಯವರನ್ನು ಕೂಡಹೇಳಿ, ಕ್ಷೇಮ ಸಮಾಚಾರಗಳನ್ನು ಕೇಳಿ, ಆ ಕಡೆಯ ಸಂಗತಿಗಳ ಮಾತಿನಲ್ಲಿ ಮಗ್ನರಾದರು. ಹುಡುಗರು ಪಟಾಸು ಹಾರಿಸುವದರಲ್ಲಿ ತೊಡಗಿದರು. ಮರುದಿವಸ ಬೆಳಿಗ್ಗೆ ಎಲ್ಲರೂ ಎರಕೊಳ್ಳುವದಿತ್ತು. ನಾವು ಮನೆಕೆಲಸಗಳನ್ನು ಬೇಗನೆ ತೀರಿಸಿಕೊಂಡು, ಮುಚ್ಚಿಡುವದನ್ನೆಲ್ಲ ಮುಚ್ಚಿಟ್ಟು, ಹುಲಗಲಿಕ್ಕೆ ಹೋದೆವು.

ಮುಂಜಾನೆ ನಾಲ್ಕರಿಂದ ಎರಕೊಳ್ಳುವ ಗಡಿಬಿಡಿಯು ನಡೆದಿತ್ತು. ನಾನು ಷಳಾರಕ್ಕೆ ಎಲೆಗಳನ್ನು ಹಾಕಿ, ನೀರಿಗೆಂದು ಪುಷ್ಕರಿಣಿಗೆ ಹೋಗಲು ಬಿಂದಿಗೆ ತೆಗೆದುಕೊಂಡು ಹೊರಟೆ. ಇಷ್ಟರಲ್ಲಿ ಅತ್ತಿಗೆಯವರು "ಕಮಲೀ, ಈ ಚಂದ್ರಹಾರವನ್ನು ನನ್ನ ಪೆಟ್ಟಿಗೆಯಲ್ಲಿಡು" ಎಂದರು. ನಾನು ಪೆಟ್ಟಿಗೆಯ ಬೀಗದ ಕೈಯನ್ನು ಹುಡುಕ ತೊಡಗಿದೆನು. ಅದು ಬೇಗನೆ ಸಿಗಲಿಲ್ಲ. ನನ್ನ ಹುಚ್ಚು ಸ್ವಭಾವಕ್ಕೆ ತಕ್ಕ ಪ್ರಾಯಶ್ಚಿತ್ತವಾಗಬೇಕೆಂದೋ ಏನೋ, ಅತ್ತಿಗೆಯವರ ಚಂದ್ರಹಾರವನ್ನು ಹಾಕಿಕೊಂಡು ನೀರಿಗೆ ಹೋಗಬೇಕೆಂದು ನನಗೆ ದುರ್ಬುದ್ಧಿ ಹುಟ್ಟಿತು. ಚಂದ್ರಹಾರ ಏನೋ ಅತ್ತಿಗೆಯವರದು. ಅದನ್ನು ಹಾಕಿಕೊಂಡರೆ ಅದು ನನ್ನದಾಗುತ್ತಿತ್ತೇ? ಆದರೆ ನಾವು ಶ್ರೀಮಂತರು; ನಮ್ಮಲ್ಲಿ ಚಂದ್ರಹಾರದಂಥ ವಸ್ತಗಳಿವೆಯೆಂದು ಜನರಿಗೆಲ್ಲ ತಿಳಿಯಬೇಡವೇ? ಪುಷ್ಕರಣಿಗೆ ಬಂದ ಹೆಂಗಸರ ಮುಂದೆ ನಮ್ಮ ಶ್ರೀಮಂತಿಕೆಯನ್ನು ಮೆರಿಸಬೇಕೆಂದು ನಾನು ಅದನ್ನು ಕೊರಳಲ್ಲಿ ಹಾಕಿಕೊಂಡು ಹಾಗೆಯೇ ಹೊರಗೆ ಹೊರಡುವಷ್ಟರಲ್ಲಿ ಮಾವನವರು "ಕಮಲವ್ವ, ಇದು ಬೆಂಗಳೂರು ಕಂಡಿಯಾ; ಮೈಮೇಲೆ ವಸ್ತ ಹಾಕಿಕೊಂಡು ಪುಷ್ಕರಿಣಿಗೆ ಒಬ್ಬಂಟಿಗಳಾಗಿ ಹೋಗಬೇಡ. ತಂಜಾವರದ ಷೋದಾಗಳಂತೆ ಇಲ್ಲಿಯು ಮೋಸಗಾರರೂ ಮಹಾ ಶಕ್ಕರು. ಈಗ ಇರಲಿ ಹೋಗು, ನೀರು ತೆಗೆದುಕೊಂಡು ಬೇಗನೆ ಬಾ." ಎಂದರು. ನಾನು ಹೊರಗೆ ಹೋದಕೂಡಲೆ, ಒಬ್ಬ ಟೊಣಪನು ಮನೆಯೊಳಗೆ ಹಣಿಕಿ ಹಾಕಿ ತನ್ನ ಹಾದಿಹಿಡಿದು ಹೋಗಲಾರಂಭಿಸಿದನು. ಅವನು ಆ ಸಮಯದಲ್ಲಿ ನನ್ನ ಲಕ್ಷದಲ್ಲಿ ಸಹ ಬರಲಿಲ್ಲ. ನೆರಮನೆಯ ಸೀತಮ್ಮನು ಯಾವಾಗ ಬರುವಳೋ, ಅವಳಿಗೆ ನನ್ನ ಚಂದ್ರಹಾರವನ್ನು ಯಾವಾಗ ತೋರಿಸುವೆನೋ, ಚಂದ್ರಹಾರವು ಚೆನ್ನಾಗಿದೆಯಂದೂ, ಮುಖ್ಯವಾಗಿ ನನಗೆ ಅದು ಬಹಳ ಶೋಭಿಸುತ್ತದೆಂದೂ ಅವಳ ಬಾಯಿಂದ ಯಾವಾಗ ಕೇಳುವೆನೋ ಎಂದು ವಿಚಾರಮಗ್ನಳಾಗಿ ನಾನು ಪುಷ್ಕರಣಿಯ ಕಡೆಗೆ

ಹೋದೆನು. ಅಲ್ಲಿ ಬಂದಿದ್ದ ನಾಲ್ಕು ಹೆಂಗಸರ ಸ್ತುತಿಗಳನ್ನು ಕೇಳಿದ ಬಳಿಕಂತೂ ನನಗೆ ಸ್ವರ್ಗಸುಖವಾದಂತಾಯಿತು. ಬಹಳ ಹೊತ್ತಾಯಿತೆಂದು ನಾನು ಬಿಂದಿಗೆಯನ್ನು ಗಲಬರಿಸುವಷ್ಟರಲ್ಲಿ ನಮ್ಮ ಮಾವನವರಂತೆಯೇ ಪಂಜಿಯನ್ನುಟ್ಟುಕೊಂಡು, ನಾಮಗಳನ್ನೂ ಮುದ್ರೆಗಳನ್ನೂ ಹಾಕಿಕೊಂಡು, ಕೋಪದಿಂದ ಕೆಂಡದಂಥ ಕಣ್ಣುಗಳನ್ನು ಮಾಡಿಕೊಂಡು ಕಾಲುಗಳನ್ನಪ್ಪಳಿಸುತ್ತ ನನ್ನ ಕಡೆಗೆ ಬರುತ್ತಿದ್ದ ಒಬ್ಬ ಇಳಿವಯಸ್ಸಿನ ಮನುಷ್ಯನು ನನ್ನ ದೃಷ್ಟಿಗೆ ಬಿದ್ದನು. ನನಗೇನೂ ಸಂಬಂಧವಿಲ್ಲದಿದ್ದರೂ ಅವನು "ಏನೇ, ಏ, ಸಟವೀ, ವಸ್ತವಿಟ್ಟುಕೊಂಡು ಪುಷ್ಕರಣಿಗೆ ಹೋಗಬೇಡವೆಂದು ನಾನು ಒದರಿಕೊಳ್ಳಲಿಲ್ಲವೇ?" ಈ ಶಬ್ದಗಳು ಮಾತ್ರ ನನ್ನ ಕಿವಿಯಲ್ಲಿ ಬಿದ್ದವು. ಮುಂದೆ ಏನಾಯಿತೆಂಬದು ನನಗೆ ಗೊತ್ತಿಲ್ಲ. ನಾನು ಎಚ್ಚರ ದಪ್ಪಿದೆನು. ಅಲ್ಲಿದ್ದ ನಾಲ್ಕು ಹೆಂಗಸರಿಗೆ ಇದರ ಅರ್ಥವು ತಿಳಿಯಲಿಲ್ಲ. ಆ ವೃದ್ಧ ಬ್ರಾಹ್ಮಣನು ನನ್ನ ಕಕ್ಕನಾಗಲಿ ಯಾರಾದರೂ ಹಿರಿಯ ಸಂಬಂಧಿಕರಾಗಲಿ ಇರಬಹುದೆಂದು ಅವರು ಸುಮ್ಮನಿದ್ದರು. ಒಳ್ಳೇ ಸಮಾಚಾರಗಳಿಗಿಂತ ದುಷ್ಟ ವಾರ್ತೆಗಳು ತೀವ್ರವಾಗಿ ಹಬ್ಬುವವೆಂಬದು ಸುಳ್ಳಲ್ಲ. ಹಾಹಾ ಅನ್ನುವಷ್ಟರಲ್ಲಿ ಈ ಸಮಾಚಾರವು ಊರಲ್ಲೆಲ್ಲ ಹಬ್ಬಿತು. ನಾನು ಎಚ್ಚತ್ತಾಗ ನನ್ನ ಆನಂದವೆಲ್ಲ ಕನಸಿನಿಸಿತು. ನಾಲ್ಕೂ ಕಡೆಗೆ ಕತ್ತಲು ತುಂಬಿದಂತಿತ್ತು. ಸಾವಿರಾರು ವಿಚಾರಗಳು ಕಣ್ಣುಮುಂದೆ ಕಟ್ಟಿದಂತಾಗುತ್ತಿದ್ದವು. ಕಾಲುಜಾರಿ ಪುಷ್ಕರಿಣಿಯಲ್ಲಿ ಬಿದ್ದಿದ್ದರೆ ಎಷ್ಟು ಚೆನ್ನಾಗಿತ್ತು! ಈ ಸ್ಥಿತಿಯಲ್ಲಿ ಮನೆಯವರಿಗೆ ಮೋರೆಯನ್ನು ಏನೆಂದು ತೋರಿಸಲಿ! ದೇವರೇ ಈ ಜನ್ಮವಿರುವವರಿಗೂ ಇನ್ನೊಬ್ಬರ ವಸ್ತವನ್ನಿಟ್ಟುಕೊಂಡರೆ ನನ್ನಾಣೆ. ಇದೊಮ್ಮೆ ನನ್ನ ಸಂಕಟವನ್ನು ದೂರಮಾಡು; ಎಂದು ಎಷ್ಟು ಭಕ್ತಿಯಿಂದ ಬೇಡಿಕೊಂಡೆ! ನಾನು ಚೆನ್ನಾಗಿ ಎಚ್ಚತ್ತಿದ್ದೆನು. ನಾಲ್ಕೂ ಕಡೆಗೆ ಬೆಳಕು ಚೆನ್ನಾಗಿ ಕಾಣುತ್ತಿತ್ತು. ಆದರೆ ಮುಂದೆ ನಡೆಯುವ ಸಂಗತಿಗಳ ಭಯಂಕರವಾದ ಚಿತ್ರವು ನನ್ನ ಎದುರಿಗೆ ನಿಲ್ಲುತ್ತಿತ್ತು. ಇಷ್ಟರಲ್ಲಿ ಮತ್ತೆ ನಾನು ಸ್ಮೃತಿತಪ್ಪಿ ಬಿದ್ದೆನು. ನನ್ನನ್ನು ಮನೆಗೆ ತಂದು ಯಾರು ಯಾವಾಗ ಮುಟ್ಟಿಸಿದರೆಂಬದು ನನಗೆ ಗೊತ್ತಾಗಲಿಲ್ಲ. ನನ್ನ ಮಾತುಗಳಲ್ಲಿ ವಾಚಕರಿಗೆ ನಂಬಿಗೆ ಕೂಡಲಾರದು. ನಾನು ಅತಿಶಯೋಕ್ತಿಯಲ್ಲಿ ತೊಡಗಿರುವೆನೆಂದು ಅವರಿಗೆ ತೋರಬಹುದು. ಆದರೆ ನಮ್ಮ ಅತ್ತೆಯ ಮನೆಯಂಥ ಸ್ಥಿತಿಯಲ್ಲಿರುವ ಅನೇಕ ಹೆಂಗಸರಿಗೆ ನಾನು ಹೇಳುವದರಲ್ಲಿ ಎಳ್ಳಷ್ಟಾದರೂ ಅತಿಶಯೋಕ್ತಿಯಿಲ್ಲೆಂದು ಗೊತ್ತಾಗುವದು ಇರಲಿ; ಎಚ್ಚರಿಕೆಯಾದ ಕೂಡಲೆ, ಇನ್ನೇನು ಕಾದಿರುವದೋ ಎಂದು ನನ್ನ ಮೈಯೆಲ್ಲ ಬೆವರು ಬಿಟ್ಟಿತು. ಗಾತ್ರಗಳೆಲ್ಲ ನಡುಗಲಾರಂಭಿಸಿದವು. ಅತ್ತೆಯವರನ್ನೂ ಅತ್ತಿಗೆಯವರನ್ನೂ ನಾನು ಕಣ್ಣೆತ್ತಿ ನೋಡದಾದೆನು. ಅತ್ತೆಯವರ ವಾಗ್ವೃಷ್ಟಿಯಿಂದ ಆಕಾಶ ಪಾತಾಳಗಳು ಒಂದಾಗಿದ್ದವು. ಅತ್ತಿಗೆಯವರ ಮೋರೆಯ ಮೇಲೆ ಕಳೆಯೇ ಇದ್ದಿಲ್ಲ. ಮನೆಗೆ ಹೋದ

ಬಳಿಕ ಅತ್ತಿಮಾವಂದಿರು ಏನೆಂಬರೋ ಎಂದು ಅವರು ಗಾಬರಿಯಾಗಿದ್ದರು. ಆದರೆ ಶಾಂತಸ್ವಭಾವದವರೂ, ವಿಚಾರಿಗಳೂ ಆದ್ದರಿಂದ ಅವರು ಸುಮ್ಮನಿದ್ದರೆಂದು ತೋರುತ್ತದೆ. ಆದರೂ ಅವರು ಮನಸ್ಸಿನಲ್ಲಿ ಅಂಜಿಕೆಯಿಂದ ಬಳಲುತ್ತಿದ್ದರೆಂದು ಸ್ಪಷ್ಟವಾಗಿ ತೋರುತ್ತಿತ್ತು. ಮಾವನವರು ಪೋಲೀಸರಿಗೆ ಸಮಾಚಾರ ಹೇಳಲಿಕೆ ಹೋಗಿದ್ದರು. ಇದೇ ಅವರೂ ತಿರುಗಿ ಬಂದರು. ಮಧ್ಯಾಹ್ನ ೧೫-೧ ಹೊಡೆದಿತ್ತು. ಆದರೂ ಎಲ್ಲರೂ ಚಿಂತೆಯಲ್ಲಿ ಮುಳುಗಿದ್ದರಿಂದ ಬೆಳಿಗ್ಗೆ ನಾನು ಹಾಕಿದ ಫಳಾರದ ಎಲೆಗಳು ಹಾಗೇ ಉಳಿದಿದ್ದವು. ಹಾಗೂ ಹೀಗೂ ಒಪ್ಪತ್ತು ಊಟವಾಯಿತು. ನನ್ನ ಬಾಯಿಂದ ಮಾತೇ ಹೊರಡಲೊಲ್ಲವು. ಯೋರೆಯನ್ನಂತೂ ಯಾರಿಗೂ ತೋರಿಸ ದಾದೆನು. ಒಬ್ಬ ಕಳ್ಳನಂತೆ ನನ್ನ ಸ್ಥಿತಿಯಾಯಿತು.

ಆ ಹೊತ್ತು ಭಾವಬಿದಿಗೆ—ಒಂದೆರಡು ಪದಾರ್ಥಗಳು ಹೆಚ್ಚಾಗಿ ಆಗುವದೇ. ಅದರೊಳಗೂ ಅತ್ತಿಗೆಯವರ ಯಜಮಾನರು ಆ ಹೊತ್ತು ರಾತ್ರಿಯೇ ಬರುವವರಿದ್ದರು. ಹೀಗಿದ್ದ ಮೇಲೆ ಗಡಿಬಿಡಿಯನ್ನು ಹೇಳುವದೇನು? ಮನೆಯವರು ಏನೋ ಕೆಲಸಕ್ಕೆಂದು ಮೈಸೂರಿಗೆ ಹೋಗಿದ್ದರು. ಇದೇ ಸಾಯಂಕಾಲ ತಿರುಗಿ ಬರುವವರಿದ್ದರು. ಅಳಿಯ—ಅದರಲ್ಲಿಯೂ ಜಹಗೀರದಾರನಾದ ಅಳಿಯ—ಬರುವವನಿದ್ದನು. ಕೇಳುವ ದೇನು? ಅತ್ತೆಯವರು ಬೆಳಗಿನಿಂದ ಅಡಿಗೆಯ ಸಿದ್ಧತೆಯಲ್ಲಿ ತೊಡಗಿದ್ದರು. ಮುಂಜಾನೆ ಏಳೆಂಟು ಹೊಡೆದಾಗ ಮಾವನವರು ಏನೋ ತರಲಿಕ್ಕೆಂದು ಪೇಟೆಗೆ ಹೋಗಿದ್ದರು, ಅಡಿಗೆಯಾಯಿತು; ಆದರೆ ಮಾವನವರ ಪತ್ತೆಯೇ ಇಲ್ಲ. ಈಗ ಬಂದಾರು, ಇನ್ನೇರ್ಧಗಳಿಗೆಗೆ ಬಂದಾರು, ಎಂದು ನಾವೆಲ್ಲ ದಾರಿ ನೋಡುತ್ತ ಕುಳಿತೆವು. ಕಡೆಗೆ ಒಂದು ಗಂಟೆಯಾಯಿತು, ಎರಡಾಯಿತು; ಅವರ ಸುಳುವೇ ಇಲ್ಲ. ಹಾಗೇ ಮೂರೂ ಸಂಜೆಯಾಯಿತು. ಮನೆಗಳಲ್ಲೆಲ್ಲ ದೀಪ ಹಚ್ಚಿದರು. ಮೇಯಲಿಕ್ಕೆ ಹೋದ ದನಕರಗಳು ತಿರುಗಿ ಬಂದವು. ಹುಡುಗರು ಮಲಗಿದರು. ಆದರೂ ಮಾವನವರು ಬರಲಿಲ್ಲ. ನಮ್ಮೆಲ್ಲರ ಯೋರೆಯ ಮೇಲೆ ಹುಚ್ಚು ಕಳೆಯು ಸುರಿಯಹತ್ತಿತು. ಚಂದ್ರಹಾರವು ಹೋದಂದಿನಿಂದ ಅತ್ತೆಯವರ ಶಿಟ್ಟು ಇದ್ದೇ ಇತ್ತು. ಈ ಹೊಸ ಸಂಕಟದಿಂದ ಅದು ನಾಲ್ಕಷ್ಟಾಯಿತು. ನನ್ನ ಕಾಲ್ಗುಣವೇ ಕೆಟ್ಟದಿದ್ದದರಿಂದ ಈ ಹಾಡಾಯಿತೆಂದು ಮನ ಬಂದಂತೆ ನನ್ನನ್ನು ಅನ್ನಲಾರಂಭಿಸಿದರು. ಅವರು ಆಡಿದ ಒಂದೊಂದು ಶಬ್ದವೂ ನನ್ನ ಹೃದಯಪಿನ್ನು ಛೇದಿಸುತ್ತಿತ್ತು. ಇನ್ನೊಬ್ಬರ ವಸ್ತುವನ್ನು ಹಾಕದಿದ್ದರೆ ನನ್ನ ಗತಿಯು ಹೀಗೆ ಯಾಕೆ ಆಗುತ್ತಿತ್ತು? ಅಂತೂ ನನಗೆ ತಕ್ಕ ಪ್ರಾಯಶ್ಚಿತವು ದೊರೆತಿತು. ನನ್ನ ಹುಚ್ಚು ಸ್ವಭಾವಕ್ಕೆ ನನಗೆ ದೇವರು ಸರಿಯಾದ ಶಿಕ್ಷೆಯನ್ನು ಕೊಟ್ಟನೆಂದು ತೋರಿತು. ನನ್ನ ಸಂಕಟವನ್ನು ದೂರಮಾಡಲಿಕ್ಕೆ ನಾನು ಮನದಲ್ಲಿ ಎಷ್ಟೋ ಹರಿಕೆಗಳನ್ನು ಬೇಡಿಕೊಂಡೆ. ಕೋಟೆಯೊಳಗಿನ ಅಂಜನೇಯನಿಗೆ ಬೇಡಿಕೊಂಡ

ಹರಿಕೆಯು ಜಲ್ಲುತ್ತದೆಂದು ಕೇಳಿ, ಆತನನ್ನು ಬೇಡಿಕೊಂಡೆ. ಈ ಮೇರೆಗೆ ದುಃಖದಲ್ಲಿ ಮುಳುಗಿರಲು, ಮನೆಯವರು ಮೈಸೂರಿನಿಂದ ಬಂದರು. ಇನ್ನೂ ಹೊಸ್ತಿಲು ದಾಟಿರಲಿಲ್ಲ. ಆದರೂ ಅತ್ತೆಯವರು ಹುಡುಗರನ್ನು ಉದ್ದೇಶಿಸಿ ಒದರಿ ಹೇಳುವಂತೆ–" ಖೋಡಿಗಳಿರಾ, ಅತ್ತಿಗೆಯವರು ಚಂದ್ರಹಾರವನ್ನು ನೀಗಿದರೆಂದು ಅಣ್ಣನಿಗೆ ಹೇಳಬೇಡಿರಿ. ಅವ ಮಹಾಕೋಪಿ " ಎಂದು ಗರ್ಜಿಸಿದರು. ಇದು ಅವರಿಗೆ ಕೇಳಿಸದಿದ್ದೀತೇ? ಉಪ್ಪರಿಗೆಯನ್ನೇರಲು ಒಮ್ಮಿಂದೊಮ್ಮೆ ಅಲ್ಲಿ ಬರಲು ನನಗೆ ಅಪ್ಪಣೆಯಾಯಿತು. ಆಗ ನಮ್ಮತ್ತೆಯವರಿಗಾದ ಆನಂದವನ್ನು ಎಷ್ಟೆಂದು ಹೇಳಲಿ? ಅವರ ಜನ್ಮವೇ ಅವರಿಗೆ ಸಾರ್ಥಕವಾಯಿತೆಂದೆನಿಸಿತು. ಸುಂದರಾ ಅತ್ತಿಗೆಯವರಿಗೆ ನನ್ನ ಮೇಲೆ ಪ್ರಾಣವಿದ್ದದರಿಂದಲೂ ಇದರಲ್ಲಿ ನನ್ನದೇನೂ ತಪ್ಪಿಲ್ಲವೆಂದು ಅವರಿಗೆ ತೋರಿದ್ದರಿಂದಲೂ ಅವರಿಗೆ ನನ್ನ ಬಗ್ಗೆ ಕನಿಕರವಿತ್ತು. ನಾನು ಮಾಳಿಗೆಯ ಮೇಲೆ ಹೋದೆ. ಆದರೆ ಒಂದೊಂದು ಮೆಟ್ಟಿಲು ಏರುವಾಗ ಸ್ವರ್ಗದ ಮೆಟ್ಟಿಲುಗಳನ್ನು ಏರುತ್ತಿರುವೆನೆಂದೆನಿಸಿತು. ಭಯದಿಂದ ಮೈಯೆಲ್ಲ ಬೆವತಿತು. ಎದೆಹಾರುವದು ಮನೆಯಲ್ಲಿ ಎಲ್ಲರಿಗೂ ಕೇಳುವಂತಿತ್ತು. ಚಂದ್ರಹಾರದ ಬದಲು ಬೆನ್ನಿನ ಮೇಲೆ ಪ್ರಹಾರಗಳು ಬೀಳುವವೆಂದು ತೋರಿತು. ಮಾಳಿಗೆಯ ಮೇಲೆ ಹೋಗಿನಿಂತಿದ್ದರೂ ಅತ್ತ ಕಡೆಗೆ ಕಣ್ಣೆತ್ತಿ ನೋಡುವದು ನನ್ನಿಂದಾಗಲಿಲ್ಲ. ಆದ್ದರಿಂದ ಮೂಲೆಯಲ್ಲಿ ನಾನು ಮೋರೆ ಜೋಲು ಹಾಕಿಕೊಂಡು ನಿಂತೆನು. ಬಾಯಿಯು ಆರಿತು. ನಾಲಿಗೆಯು ಶಿಳಿದು ಹೋದಂತೆ ಆಯಿತು. ಉಂಗುಷ್ಮದಿಂದ ನೆಲವನ್ನು ಕೆದರುತ್ತಿದ್ದೆನೆಂದು ಮಾತ್ರ ನನಗೆ ಚನ್ನಾಗಿ ನೆನಪದೆ. ಇದನ್ನು ನೋಡಿ ಅವರು " ಉಗುರಿನಿಂದ ನೆಲವನ್ನು ಕೆದರುತ್ತನಿಂತರೆ! ಚಂದ್ರಹಾರವು ಅಲ್ಲಿ ಗುಪ್ತವಾಗಿದೆಯೇನು? " ಮಾತಾಡಿ ನನ್ನ ನಿರ್ದೋಷವನ್ನು ಹೇಳಬೇಕೆನಿಸಿತು. ಆದ ಸಂಗತಿಯನ್ನು ನಾನು ಅವರಿಗೆ ಹೇಳಿದೆನು. ಇನ್ನು ಮೇಲೆ ಇನ್ನೊಬ್ಬರ ವಸ್ತುವನ್ನು ಮುಟ್ಟಿದರೆ ಕೆಟ್ಟಾಣೆಯೆಂದನು. " ಮುಚ್ಚು, ಬಾಯಿಮುಚ್ಚು, ನಾಕು ನಿನ್ನ ರಗಳೆ. ನನಗೆ ಚಂದ್ರಹಾರಬೇಕು. ಚಂದ್ರಹಾರ! ಬೇಕಾದದ್ದು ಮಾಡು. ಚಂದ್ರಹಾರವನ್ನು ತಾ. ಚಂದ್ರಹಾರದ ಹೊಕ್ಕು ನನಗೇನೂ ಕಾಣುವದಿಲ್ಲ, ಏನೂ ತೋರುವದಿಲ್ಲ. ನಡೀ, ಹೋಗು ಇಲ್ಲಿಂದ, ಈ ಮೋರೆ ನನಗೆ ತೋರಿಸಬೇಡ. " ಈ ಶಬ್ದಗಳ ನೆನವಾದರೆ ಇಂದಿಗೂ ನನ್ನ ಮೈ ನಡುಗುತ್ತದೆ. ಅತ್ತೆಯವರು ಮನಸಿಗೆ ಹತ್ತುವಂತೆ ಬಿಡಿದ್ದರೂ, ನನಗೆ ಅಷ್ಟು ಕೆಡಕೆನಿಸಲಿಲ್ಲ. ಹೇಳಿ ಕೇಳಿ ಅವರು ಹೆಂಗಸರು. ವಸ್ತ ಕಳೆದದ್ದಕ್ಕೆ ಅವರು ಮಾಡಿದ ಅಕಾಂಡತಾಂಡವವೆಷ್ಟೆ ಸ್ತ್ರೀ ಸ್ವಭಾವಕ್ಕನುರೂಪವಾದದ್ದಿತ್ತು. ಮೇಲಾಗಿ ಅತ್ತೆಯ ಅಧಿಕಾರವನ್ನು ಯಾವಾಗ ತೋರಿಸಬೇಕು? ಮನೆಯವರೂ ಅವರ ಕಿತ್ತೆಯನ್ನೇ ತೀಡಿದ್ದು ನೋಡಿ ನನಗೆ ಆಶ್ಚರ್ಯವಾಗದಿರಲಿಲ್ಲ. ತಾಯಿಯಂತೆ ಮಗನೆಂಬ ಮಾತು ಸರ್ವಥಾ ಸುಳ್ಳಲ್ಲ. ಮನುಷ್ಯಪ್ರಾಣಿಯು

ಕೇವಲ ಸ್ವಾರ್ಥಸಾಧಕನೆಂದು ಆ ಕ್ಷಣದಿಂದ ನನ್ನ ದೃಢನಂಬಿಗೆಯಾಯಿತು. ಸ್ವಾರ್ಥದಿಂದ ಪ್ರೀತಿಯು, ನಿಜವಾದ ಪ್ರೀತಿಯು ಸಹ ಮಣ್ಣುಪಾಲಾಗುತ್ತದೆ. ಇರಲಿ. ಒಂದೊಂದು ಪ್ರಸಂಗದಲ್ಲಿ ಎಂದಿಲ್ಲದ ಧೈರ್ಯವು ಬರುತ್ತದೆಂಬ ಮಾತು ಸುಳ್ಳಲ್ಲ. ನಾನು ಮರ್ಯಾದೆಯಿಂದ ಸ್ಪಷ್ಟವಾಗಿ ಅಂದದ್ದು:— "ನಿಜವಾಗಿ ನಡೆದದ್ದನ್ನೆಲ್ಲ ನಡೆದಂತೆ ನಿಜವಾಗಿ ನಾನು ಹೇಳಿದ್ದಕ್ಕೆ, ಆ ದೋಷವನ್ನೇ ನನ್ನ ಮೇಲೆ ಹೊರಿಸಿದರೆ, ನನ್ನ ಪ್ರಾಣಕ್ಕೆ ಏನಾದರೂ ಕೆಡಕು ಮಾಡಿಕೊಳ್ಳುವದೇ ನಿಶ್ಚಯ. ನನ್ನ ಈ ಹಾಳು ಮೋರೆ ನೋಡುವದು ನಿಮಗೆ ಬೇಕಾಗಿಲ್ಲವಷ್ಟೇ. ಆಗಲಿ, ನಾನಿದ್ದೇನೆ, ಪುಷ್ಕರಣಿಯಿದೆ." ನನ್ನ ಈ ಮಾತುಗಳು ಮುಗಿಯುವಷ್ಟರಲ್ಲಿ, ಅತ್ತೆಯವರು ಕೆಳಗಿನಿಂದಲೇ "ತಾನು ನೋಡಿದರೆ ಹುಡಿಗಿ, ಗಂಡನನ್ನು ಹ್ಯಾಗೆ ಎದುರಿಸುವಳು ನೋಡಿರಿ! ಚಂದ್ರಹಾರವೇನು ಸಾಮಾನ್ಯವಸ್ತುವೇ? ನಿನಗೆ ಅದು ಕಸವಾಗಿರಬಹುದು. ನಿಮ್ಮಪ್ಪಗೆ ಅದು ಕವಡೆಯ ಬೆಲೆಯಾಗಬಹುದು. ಇಂಥ ಸಾವಿರ ಚಂದ್ರಹಾರಗಳನ್ನು ಕೊಳ್ಳಲಿಕ್ಕೆ ಅವನಲ್ಲಿ ಹಣವಿರಬಹುದು. ಅದರೆ ನಮಗೆ ಆ ಸಾಮರ್ಥ್ಯವೆಲ್ಲಿಂದ ಬರಬೇಕು? ನಾವು ಬಡವರು. ಒಂದು ಚಂದ್ರಹಾರವನ್ನು ತರುವದೇ ನಮಗೆ ಅಸಾಧ್ಯವಾಗಿದೆ. ಅದನ್ನು ನೀನು ನೀಗಿ ತಣ್ಣಗೆ ಕೂತಿರುವಿ. ಗಂಡನು ಮಾತಾಡಿಸಿದ್ದು ತಪ್ಪಾಯಿತಲ್ಲೇ? ಪ್ರಾಣ ನೀಗುವ ಭಯ ತೋರಿಸುತ್ತೀಯೇ? ನಮ್ಮ ಸುಂದರಿಯ ಕಣ್ಣೀರು ಇನ್ನೂ ನಿಲ್ಲಲೊಲ್ಲವು. ಪಾಪ, ಅವಳ ಹಣೇಬರಹ ಹಬ್ಬವೆಲ್ಲ ಹೋಗಹತ್ತಿದೆ. ಅದರಿಂದ ನಿನಗೇನಾದರೂ ದುಃಖವೇ?..." ತಮ್ಮ ಶಿಷ್ಟನ ಮಾತುಗಳನ್ನು ಉಸುರುಬಿಡದೆ ಕಾರುತ್ತಿದ್ದರು. ಇಷ್ಟರಲ್ಲಿ ಮಾವನವರು ಕೆಳಗೆ ಬಂದ ಸಪ್ಪಳು ನಮಗೆಲ್ಲ ಕೇಳಿಸಿತು. ಆದ್ದರಿಂದ ಅವರು ಕೆಳಗೆ ಹೋದರು. ನಾನೂ ಹಿಂದಿನ ಮೆಟ್ಟುಗಳಿಂದ ಇಳಿದು ಮನೆಯೊಳಗೆ ಹೋದೆ, ಹಾಗೂ ನೀರು ತರುವ ನೆವದಿಂದ ಪುಷ್ಕರಿಣಿಯಲ್ಲಾದರೂ ಪ್ರಾಣಕಳಕೊಳ್ಳಬೇಕೆಂದು ಕೊಡವನ್ನು ಬಗಲಲ್ಲಿಟ್ಟುಕೊಂಡು ಹೊರಟೆ. ಹೊಸ್ತಿಲದಾಟುವಷ್ಟರಲ್ಲಿ ಮನೆಯ ಮುಂದೆ ಒಂದು ಜಟ್ಕಾವು ಬಂದು ನಿಂತಿತು. ಅದರೊಳಗಿಂದ ಭಾವಂದಿರೂ, ನನ್ನ ಅಣ್ಣನೂ ಕೆಳಗಿಳಿದರು. ಭಾವಬಿದಿಗೆಯ ಹಬ್ಬದ ದಿವಸ ಅಣ್ಣನನ್ನು ನೋಡಿದ ಕೂಡಲೆ ನನಗೆ ಹಿಡಿಸಲಾರದಷ್ಟು ಆನಂದವಾಗಬೇಕಷ್ಟೇ. ಆದರೆ ಸಂಕಟ ಸಮಯದಲ್ಲಿ ಇಷ್ಟ ಜನರ ದರ್ಶನವು ಸಹ ಚಿಂಕಿಯುಂತೆ ಸುಡುತ್ತದೆಂಬ ಮಾತು ತೀರ ನಿಜವಾದದ್ದು. ಚಂದ್ರಹಾರದ ಬೆಲೆಯನ್ನೂ ನಮ್ಮತ್ತೆಯವರ ಕಠಿಣವಾದ ಶಬ್ದಗಳನ್ನೂ ಮತ್ತೆ ಕೇಳಬೇಕಾಗುವದೆಂದು, ಅಣ್ಣನಿಗೆ ಮೋರೆ ತೋರಿಸುವದೂ ನನಗೆ ಬೇಡಾಯಿತು. ಪ್ರಾಣತ್ಯಾಗ ಮಾಡಿಕೊಳ್ಳಬೇಕೆಂಬ ಧೈರ್ಯವೂ ಹ್ಯಾಗೋ ಇಳ್ಸಿದಾಯಿತು. ನಾನು ಹಾಗೇ ಮನೆಯೊಳಗೆ ತಿರುಗಿಹೋದೆ. ಊಟವಾದ ಬಳಿಕ ಅತ್ತಿಗೆಯವರು ಭಾವಂದಿ

ತನ್ನು ಕೂಡಿಸಿ ಆರತಿಯೆತ್ತಿದರು. ಆದರೆ ಅಣ್ಣನಿಗೆ ಆರತಿಯೆತ್ತಲಿಕ್ಕೆ ನನಗೆ ಧೈರ್ಯಸಾಲಲಿಲ್ಲ. ಆದರೂ ಅತ್ತಿಗೆಯವರ ಆಗ್ರಹವನ್ನು ಮೀರಲಾರದೆ ಹಾಗೂ ಹೀಗೂ ನಾನು ಆರತಿಗೆ ಕೈಹಿಡಿದೆ. ಇಷ್ಟರಲ್ಲಿ ತಟ್ಟೆಯಲ್ಲಿ ಏನೋ ಜಡಪದಾರ್ಥವು ಬಿದ್ದಂತೆ ತೋರಿತು. ನೋಡುತ್ತೇನೆ, ಯಾವದಕ್ಕೋಸ್ಕರ ಕಳೆದ ಮೂರು ನಾಲ್ಕು ದಿವಸ ಬುದ್ಧಿಯು ಭ್ರೆಮಹೊಂದಿತ್ತೋ, ಯಾವದರ ಕಾರಣ ನಾನು ಪ್ರಾಣಬಿಡಲು ಸಹ ನಿಶ್ಚೈಸಿದ್ದೆನೋ, ಯಾವ ವಸ್ತುವಿಗೋಸ್ಕರ ನಮ್ಮ ಅತ್ತೆಯವರು ನಮ್ಮ ಕುಲಪರಂಪರೆಯನ್ನು ಉದ್ಧಾರಮಾಡಿದ್ದರೋ ಅದೇ ಚಂದ್ರಹಾರ. ನನಗೆ ಆಕಾಲದಲ್ಲಾದ ಆನಂದವನ್ನು ನಾನು ವರ್ಣಿಸಲಾರೆ.

ಆದರೆ ಈ ಚಂದ್ರಹಾರವು ಅಣ್ಣನ ಕೈಯಲ್ಲಿ ಹ್ಯಾಗೆ ಬಂತು? ಇದು ಮಾತ್ರ ಗೂಢವಾಗಿಯೇ ಉಳಿದಿತ್ತು. ಆ ದಿವಸದ "ವೃತ್ತಾಂತ ಪತ್ರಿಕೆ" ಯಲ್ಲಿ ದೊಡ್ಡ ಅಕ್ಷರದಿಂದ ಅಚ್ಚು ಹಾಕಿದ ಮುಂದೆ ಬರೆದ ಸಂಗತಿಯನ್ನು ಓದಿದ ಕೂಡಲೆ ಎಲ್ಲವೂ ಸ್ಪಷ್ಟವಾದವು.

"ಬಿಂಗಳೂರಿನ ಅಸಲ್ ಷೋದಾನಾದ +++ ನು ಮೊನ್ನೆ ರಾತ್ರಿ ಕನ್ನಂಬಿಟ್ಟಿಯವರ ಮನೆಗೆ ಕನ್ನಕೊರೆದು ಮನೆಯೊಳಗಿನ ಕೆಲವು ವಸ್ತದ ಪೆಟ್ಟಿಗೆಗಳನ್ನು ಹುಡುಕುತ್ತಿರುವಾಗ ಈ ಊರಿನಲ್ಲಿ ಹೆಸರಾಗಿರುವ ಸಬ್‌ಇನಸ್ಪೆಕ್ಟರ ಕೆ. ರಂಗರಾಯರು ಅವನನ್ನು ಕದ್ದ ವಸ್ತಸಹಿತವಾಗಿ ಅಲ್ಲಿಯೇ ಹಿಡಿದರು. ಇದರಲ್ಲಿ ಆಶ್ಚರ್ಯವಾದ ಸಂಗತಿಯೇನೆಂದರೆ, ಅದೇ ಅಸಲ್ ಕಳ್ಳನಲ್ಲಿ ಪುಷ್ಕರಣಿಯ ನೆರೆಯಲ್ಲಿರುವ ರಂಗರಾಯರ ಸಂಬಂಧಿಕರಾದ ಬಿ. ಸೂರ್ಯನಾರಾಯಣರಾಯರವರ ಸೊಸೆಯ ಕೊರಳಿನಿಂದ ಅದೇ ಪುಷ್ಕರಣಿಯ ಮೇಲೆ ಹಗಲುಹಾಡಿನಲ್ಲಿ ಎತ್ತಿದ ಚಂದ್ರಹಾರವು ಸಿಕ್ಕಿತು. ರಂಗರಾಯರು ಈ ಕಳ್ಳನ ಮೈಯನ್ನು ಮೆತ್ತಗೆ ಮಾಡಿದ ಕೂಡಲೆ, ತಾನು ಸೂರ್ಯನಾರಾಯಣರಾಯರ ಮನೆಯ ನೆರೆಯಲ್ಲಿ ಹೋಗುವಾಗ ಅವರು ತಮ್ಮ ಸೊಸೆಗೆ ಮಾಡಿದ ಉಪದೇಶವು ತನ್ನ ಕಿವಿಗೆ ಬಿದ್ದದ್ದರಿಂದ ಈ ಕೆಲಸವು ತನಗೆ ಸುಲಭವಾಯಿತೆಂದು ಒಪ್ಪಿಕೊಂಡನು. ರಂಗರಾಯರ ಬುದ್ಧಿಚಾತುರ್ಯವನ್ನೂ ಅವರು ಅದನ್ನು ಸಮಯೋಚಿತವಾಗಿ ಉಪಯೋಗ ಪಾಡಿದ್ದನ್ನೂ ಎಷ್ಟು ಹೊಗಳಿದರೂ ಕಡಿಮೆಯೇ" ಇದನ್ನು ಓದಿ ನಮ್ಮ ಅಣ್ಣನ ಬಗ್ಗೆ ನನಗೆ ಬಹಳ ಕೌತುಕವಾಯಿತು. ನನ್ನ ಚಿಕ್ಕಂದಿನ ಈ ಸಂಗತಿಯನ್ನು ನಾನು ಎಂದೂ ಮರೆಯಲಾರೆ.

ರಾತ್ರಿಯನಲ್ಲನ ಪದ್ಯಂಗಳು.

(೧ ನೇ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಇಂದುವಿನ ಸಿರಿಯನಳಿದನ।
ಕಂದನ ಕವಚವನು ಬೇಡಿದಾತನ ಸುತನಂ॥
ಕೊಂದವನ ಶಿರದಿ ಧರಿಸಿಯೆ।
ನಿಂದಾತನ ಪೊಲ್ದನಕ್ಕ ರಾತ್ರಿಯನೆಲ್ಲಂ॥ ೯॥

ಇಂದುವಿನ ಸುತನ ಮುಂದಣ।
ಮುಂದಿರ್ದನ ಮುಂದೆ ಬಹನ ಮುಂದೈತಹನಾ॥
ಕಂದನ ಕೊಂದನ ಭಾವನ।
ಚಂದವ ನೆರೆ ಪೊಲ್ದನಕ್ಕ ರಾತ್ರಿಯನೆಲ್ಲಂ॥ ೧೦॥

ಗುರುವಿನ ಶಿಷ್ಯನ ಪುತ್ರನ।
ವರ ಸುಪತಾಕೆಯನು ಪಿರಿದಾತನ ಪಿತನಾ॥
ನೆರೆಮನೆಯಾತನ ಮಿತ್ರನ।
ಪರಿಯಂನೆರೆ ಪೊಲ್ದನಕ್ಕ ರಾತ್ರಿಯನೆಲ್ಲಂ॥ ೧೧॥

ಪುಳುವಿನ ಪೆಸರಿನ ಮೇಣ್‌ಗಿಡ।
ದೊಳಗಿನ ಸಾರವನೆ ಪೊತ್ತು ಮೂಡೆಯನ ಸಲಹಲ್॥
ಬಳ ಭಸ್ಮದ ಬೂದಿಯೊಳ್ ಪೊರಳುವ।
ಬೆಳದುಟಿಯನ ಪೊಲ್ದನಕ್ಕ ರಾತ್ರಿಯನೆಲ್ಲಂ॥ ೧೨॥

ಕಾಮುಕ ವಿಟನೆನುತಿರ್ದನು।
ಪ್ರೇಮದಿ ಮೈದಡವಿನೋಡಿ ಸುಯ್ಯನೆ ಸುಯ್ದಂ॥
ರಾವನ ಪಡೆಯೊಳು ಪಿರಿಯನ।
ನಾವಸಿವನ ಪೊಲ್ದನಕ್ಕ ರಾತ್ರಿಯನೆಲ್ಲಂ॥ ೧೩॥

ಪುರುಷವೆಸರವನ ಪಡೆದವ।
ನರಸಿಯ ಕೂಡೆ ಜನಿಸಿದಾತನ ಪಿತನಾ॥

ನಿರುತಂ ಮೊಗದಲಿ ನಿಂತವ।
ನಿರವನು ತಾಂ ಪೊಲ್ದನಕ್ಕ ರಾತ್ರಿಯನೆಲ್ಲಂ ॥ ೧೪ ॥

ಇರುಳೊಳು ನೋಡಿದ ಕನಸಿಗೆ।
ನೆರೆ ಕನ್ನಡ ಪೆಸರನುಳ್ಳಮೂರಕ್ಷರಮಂ ॥
ಬರೆದು ತುದಿ ಮೊದಲಿಗೋದಲು।
ದೊರೆಯಾದನು ತಾನೆಬಂದ ರಾತ್ರಿಯನೆಲ್ಲಂ ॥ ೧೫ ॥

ಕಂದದ ಮುರಿ ಕಡಗದಮುರಿ।
ಬಿಂದಿಗೆಯೊಳಗರ್ಧಭಾಗ ಹರವಿಯಹೋಳಂ ॥
ಸಂಧಿಸಿದ ಜೋಗಿ ನಾತ್ರೆಯ।
ಚಂದವ ನೆರೆ ಪೊಲ್ದನಕ್ಕ ರಾತ್ರಿಯನೆಲ್ಲಂ ॥ ೧೬ ॥

ಮೃಗಧರನ ಹಗೆಯ ಹಗೆಯನ।
ಹಗೆತೀರಿರ್ದವನ ಸುತನ ವೈರಿಯ ಪುರವಂ ॥
ನೆಗಹಿದನ ಹಗೆಯ ಭೃತ್ಯನ।
ನಗೆಮೊಗಮಂ ಪೊಲ್ದನಕ್ಕ ರಾತ್ರಿಯನೆಲ್ಲಂ ॥ ೧೭ ॥

ಉತ್ತರಿಯ ತಾಯಿಯನುಜನ।
ಕತ್ತಲೆಯೊಳಗೊತ್ತಿ ಕೊಂದನಣ್ಣನ ಪಿತನಂ ॥
ಪೊತ್ತು ನೆಲೆ ತಿರಗುವಾತನ।
ಬಿತ್ತರಮಂ ಪೊಲ್ದನಕ್ಕ ರಾತ್ರಿಯನೆಲ್ಲಂ ॥ ೧೮ ॥

ಇನ ಸುತನ ಸುತನ ಮೂಮ್ಮನ।
ಧನುವನು ಕಿತ್ತವನ ತಮ್ಮನನುಜನ ಶಿರವಂ ॥
ಅನುವರದೊಳಿರಗಿದಾತನ।
ಘನಮಹಿಮನ ಪೊಲ್ದನಕ್ಕ ರಾತ್ರಿಯನೆಲ್ಲಂ ॥ ೧೯ ॥

ಪಶುಪತಿಯ ಕೊರಳಹಾರದ।
ಅಸುವಂಮೆಟ್ಟಿದನ ಸುತನ ಬಯಕೆಯಂತಾವೊಳ್ ॥
ಎಸೆವ ಹದಿನಾಯಕಾರ್ತಿಯ।
ಹೆಸರಂ ಬಯಿಚಿಟ್ಟನಕ್ಕ ರಾತ್ರಿಯನೆಲ್ಲಂ ॥ ೨೦ ॥

ಆತ್ಮೋನ್ನತಿಯ ತತ್ವಗಳು.

ಜಾನ್ ಸ್ಟುಅರ್ಟ್ ಬ್ಲಾಕೆ ಎಂಬ ಪ್ರಸಿದ್ಧ ಗ್ರಂಥಕಾರನು ಹೇಳಿದ ಸಂಸ್ಮರಣೆಯ ತತ್ವಗಳನ್ನು ಇದರಡಿ ಕೊಟ್ಟಿದ್ದೇವೆ.

(೧). ಕೇವಲ ತಾತ್ವಿಕ ಹಾಗೂ ಪಾರಮಾರ್ಥಿಗ ವಿಚಾರದಲ್ಲಿ ತೊಡಗಿದವರು, " ಜಗನ್ಮಿಥ್ಯ " ಎಂದು ಪ್ರತಿಪಾದಿಸುತ್ತಿದ್ದರೂ, ಈ ಜಗತ್ತಿನಲ್ಲಿದ್ದು ವ್ಯವಹಾರಮಾಡುವ ನಾವೆಲ್ಲರು ಅದೆಲ್ಲ ಸತ್ಯವೆಂದು ತಿಳಿದು ನಡೆಯಬೇಕು.

(೨). ಸುಳ್ಳುತನದಿಂದ ಕೆಲವು ಪ್ರಸಂಗಗಳಲ್ಲಿ ಜಯವಾದಂತೆ ಕಂಡು ಬಂದರೂ ಕೊನೆಯಲ್ಲಿ ಸತ್ಯವೇ ಜಯಹೊಂದುವದೆಂಬ ಮಾತು ನೆನಪಿನಲ್ಲಿಡತಕ್ಕದ್ದಾಗಿದೆ. ಸಂಸಾರವೆಂಬ ಸಾಗರದಲ್ಲಿ ಸತ್ಯವೆಂಬದು ಈಸುಗುಂಬಳಕಾಯಿಯಂತೆ ತಾರುಣೋಪಾಯವಾಗಿದೆ.

(೩). ನಾವು ನಿರಂತರ ಮಾಡುವ ಕೃತ್ಯಗಳನ್ನು ನಮ್ಮ ಶೀಲಸ್ವಭಾವವು ಅವಲಂಬಿಸಿರುವದು. ನಮ್ಮ ಆಯುಷ್ಯದ ಪ್ರತಿಕ್ಷಣವನ್ನು ಲೋಕಸಂಗ್ರಹಕ್ಕೆ ಉಪಯೋಗಿಸುವದೇ ಭೂಷಣವು.

(೪). ನಾವು ಮಾಡತಕ್ಕ ಕಾರ್ಯವನ್ನು ತತ್ಪರತೆಯಿಂದಲೂ ಮನಃಪೂರ್ವಕವಾಗಿಯೂ ಮಾಡಬೇಕು. ಸತ್ಕೃತ್ಯದ ಬಗ್ಗೆ ಯಾವಾಗಲೂ ನಮ್ಮ ಪ್ರೀತಿ ಇರಬೇಕು.

(೫). ನಮ್ಮ ಮನೋವಿಕಾರಗಳು ನಿಯಂತ್ರಿತವಾಗಿರಬೇಕು. ಅಂಕೆ ತಪ್ಪಿದರೆ ಬೆಂಕಿಯಂತೆ ಅವು ನಾನಾತರದ ಹಾನಿ ಮಾಡುವವು.

(೬). ಯಾವದೊಂದು ಕೆಲಸವನ್ನು ಕೈಕೊಂಡರೆ ಅದನ್ನು ಉತ್ತಮರೀತಿ ಕಡೆಗಾಣಿಸಬೇಕು. ಒಂದೇ ಕಾಲಕ್ಕೆ ನೂರಾರು ಕೆಲಸಮಾಡುವ ಗೊಂದಲಕ್ಕೆ ಬೀಳಬಾರದು. ಒಂದೇ ಕೆಲಸ ಮಾಡಿದರೂ ಮನಃಪೂರ್ವಕವಾಗಿ ಎರಡನೇದವರಿಗೆ ಹೆಸರಿಡಲಿಕ್ಕೆ ಆಸ್ಪದವಿರದಂತೆ ಮಾಡಬೇಕು. ಒಂದು ಕೆಲಸಕ್ಕೆ ಆರಂಭಮಾಡಿದ ಮೇಲೆ ನಿಮಿಷಾರ್ಧವನ್ನು ಸಹ ವ್ಯರ್ಥ ಹೋಗಗೊಡದೆ ಅದನ್ನು ಕಡೆತನಕ ಮುಟ್ಟಿಸದೆ ಅರ್ಧಕ್ಕೆ ಬಿಡಬಾರದು.

(೭). ವಾಚನ ಸಂಬಂಧದಿಂದ ಲಕ್ಷದೊಳಗಿಡುವ ಮಾತೇನಂದರೆ ಬಹಳಷ್ಟು ಪುಸ್ತಕಗಳನ್ನು ಓದಿದೆನೆಂದು ಜಂಬಬಡಿಯದೆ ಗ್ರಾಹ್ಯಗುಣಗಳಿದ್ದ ಪುಸ್ತಕಗಳನ್ನೇ ಓದಬೇಕು. ಪುಕ್ಕಟೆ ಮೇಳೆಗಳಿಯಬಾರದು.

(೮). ಜನರು ನಿಮಗೆ ಜಾಣರನ್ನಬೇಕೆಂದು ಅವರ ಮುಂದೆ ನೀವಾಗಿ ನಿಮ್ಮ ಜಾಣತನದ ಪ್ರದರ್ಶನ ಮಾಡಬೇಡರಿ. ನಿಮ್ಮ ಆಚ್ಚಾರವಿಚಾರಗಳು ಕೇವಲ

ಪ್ರೇಮ, ಪ್ರಮಾಣಿಕತನ, ಭೂತದಯ ಮುಂತಾದ ಸದ್ಗುಣಗಳಿಂದ ತುಂಬಿರುತ್ತವೆಂದು ಅನ್ಯರ ಅನುಭವಕ್ಕೆ ಬರುವಂತೆ ನಿಮ್ಮ ವರ್ತನವಿರಬೇಕು. ವಿದ್ವತ್ತ್ರೈಯನ್ನು ಬೇಕಂತ ಬೈಲಿಗೆ ತರುವ ಕಾರಣವಿಲ್ಲ. ಅದು ತನ್ನಷ್ಟಕ್ಕೆ ತಾನೇ ಪ್ರಕಟವಾಗುವದು.

ವಿನೋದ.

ಸೂಲೆಯ ಹೆಡ್‌ಮಾಸ್ತರರು ಗುರುರಾಯರಿಗೆ—ರಾಯರೇ ನಿಮ್ಮ ಹುಡುಗಿರ್ಯಾಕ ನಮ್ಮ ಸೂಲಿಗೆ ಕಳಿಸಹತ್ತಿರುವಿರಿ, ನಿಮ್ಮ ಹುಡುಗನ್ನು ಯಾಕೆ ಕಳಿಸುವದಿಲ್ಲ?

ಗುರುರಾಯರು—ಮಾಸ್ತರರೇ, ನಾನು ನನ್ನ ಹುಡಗನ ಕ್ಷೇಮದ ಸಲುವಾಗಿ ಹೆಚ್ಚು ಕಾಳಜಿ ಮಾಡುವೆನು!

* * *

ಕಾಲೇಜದಲ್ಲಿ ದೊರಕುವ ಕ್ಷೇಮದಿಂದ ವಿದ್ಯಾರ್ಥಿಗಳ ತಲೆಯು ಬೆಳೆಯುತ್ತದೆಂಬ ಬಗ್ಗೆ ಕಾಲೇಜದ ಪ್ರೊಫೆಸರರೊಬ್ಬರು ಎಷ್ಟೋ ಕಾರಣಗಳನ್ನು ಹೇಳಿ, ನಿಮಗೆ ಬೇರೆ ಕಾರಣಗಳೇನಾದರೂ ಇರುವದು ಗೊತ್ತಿರಿಯೋ? ಎಂದು ತಮ್ಮ ವಿದ್ಯಾರ್ಥಿಗಳಿಗೆ ಪ್ರಶ್ನೆ ಮಾಡಿದರು. ಆಗ ವಿದ್ಯಾರ್ಥಿಗಳಲ್ಲೊಬ್ಬನು—ವಿದ್ಯಾರ್ಥಿಗಳ ತಲೆ ಬೆಳೆಯುವದಕ್ಕೆ ಅತಿ ಮಹತ್ವವಾದ ಕಾರಣವೆಂದರೆ ಕಾಲೇಜಿನಲ್ಲಿ ನಾಯಿಂದರ ಸಂಖ್ಯೆಯು ಸಾಕಷ್ಟು ಇಲ್ಲದಿರುವದು.

* * *

ಅ—ಧೊಂಡೋಪಂತರು ತಾವಿರುವ ಮನೆಬಿಟ್ಟು ಎರಡನೇ ಕಡೆಗೆ ಹೋದರು.

ಬ—ಆದ್ಯಾಕೆ? ಅವರು ಅಲ್ಲಿದ್ದು ತುಸು ದಿವಸಗಳಾಗಿದ್ದವು. ನೆರೆಹೊರೆಯವರ ಗುರುತು ಅವರಿಗೆ ಚನ್ನಾಗಿ ಆಗಿತ್ತು.

ಅ—ನೆರೆಹೊರೆಯವರ ಗುರುತು ಆದ್ದರಿಂದಲೇ ಪಂತರು ಆ ಮನೆಯನ್ನು ಬಿಟ್ಟು ಬೇರೆ ಕಡಿಗೆ ಹೋಗಬೇಕಾಯಿತು.

* * *

ಮಾಸ್ತರನು (ವಿದ್ಯಾರ್ಥಿಗಳಿಗೆ)—ನಿಮಗೆ ಕಲಿಸಿ ಕಲಿಸಿ ನನ್ನ ತಲೆ ಕಾಯ್ದು ಹೋಯಿತು.

ವಿದ್ಯಾರ್ಥಿಗಳಲ್ಲೊಬ್ಬನು—ಇರಬಹುದು. ಈ ಸೂಲೆಯಲ್ಲಿ ಬಟಾಟೆ ಸುಟ್ಟ ನಾತ ಇಡಗಿರುವದರ ಕಾರಣವು ಈಗ ನನಗೆ ಗೊತ್ತಾಯಿತು.

* * *

ಪಾಕ್ಯರಸಾಹೇಬರು—ಶೆಟ್ಟರೇ ನಿಮ್ಮ ಹೆಂಡತಿಯು ಗಟ್ಟಿಯಾಗಿ ಮಾತಾಡಬೇಕಾದರೆ ಇನ್ನೂ ಬಂದು ವಾರಬೇಕು.

ಶೆಟ್ಟರು—ನಮ್ಮ ಕುಟುಂಬವು ಎಂದೂ ಗಟ್ಟಿಯಾಗಿ ಮಾತಾಡಲಾರದಂತೆ ಉತ್ತಮ ಔಷಧ ಕೊಟ್ಟರೆ ತಾವು ಬೇಡಿದ ಬಾರ್ಜ ಕೊಡುವೆನು.

ಮುಪಾಕವಿ ಶ್ರೀಪಂಪನು.

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಆ ಕಾಲದಲ್ಲಿ ದೇಶದಲ್ಲಿ ವಿಚಾರಶಕ್ತಿಯು ಬಾಹುಲ್ಯವೂ, ಕಲ್ಪನಾಶಕ್ತಿಯು ಪ್ರಾಬಲ್ಯವೂ ಇತ್ತು. ಮನುಷ್ಯನಲ್ಲಿಯೂ ಬಾಲ್ಯದಲ್ಲಿ ಕಲ್ಪನಾಶಕ್ತಿ ಹೆಚ್ಚಾಗಿರುವದು. ಆ ಕಾಲದಲ್ಲಿ ಕಲ್ಪಿತ ಕಥೆಗಳನ್ನು ಕೇಳುವದರಲ್ಲಿಯೂ, ಕಲ್ಪಿಸಿ ತಾನು ಹೇಳುವದರಲ್ಲಿಯೂ ಕುತೂಹಲವಿರುತ್ತದೆ. ಆದರೆ ಬರಬರುತ್ತ ಕೇವಲ ಕಲ್ಪನೆಯಲ್ಲಿ ಮನುಷ್ಯನ ಮನಸ್ಸು ಅನುರಕ್ತವಾಗುವದಿಲ್ಲ. ಮತ್ತು ಕಲ್ಪನಾಶಕ್ತಿಯು ಕೆಲ ಮಟ್ಟಿಗೆ ಕುಗ್ಗಿ ಆ ಸ್ಥಳದಲ್ಲಿ ವಿಚಾರಶಕ್ತಿಯು ಪ್ರಬಲವಾಗುವದು. ಇದೇ ಮಾತು ಇಡಿ ದೇಶಕ್ಕೂ ಅನ್ವಯಿಸುವದು. ಮೊದಮೊದಲು ದೇಶದ ಕಲ್ಪನಾಶಕ್ತಿಯು ಕಾವ್ಯರೂಪದಿಂದ ಹೊರಬೀಳುವದು. ಸೃಷ್ಟಿಯೊಳಗಿನ ಆಶ್ಚರ್ಯಕಾರಕ ವಿಷಯಗಳನ್ನೂ ಅವುಗಳಂತಹ ಬೇರೆ ಕಲ್ಪಿತ ವಿಷಯಗಳನ್ನೂ ವರ್ಣಿಸುವದೇ ಪ್ರಾಧಾನ್ಯವಾಗಿ ಇರುವದು. ಮುಂದೆ ಮುಂದೆ ಅವೇ ಸೃಷ್ಟಿಚಮತ್ಕಾರಗಳ ಕಾರಣಗಳು ಮೊದಲಾದ ಯಥಾರ್ಥ ಸ್ವರೂಪವನ್ನು ನಿರ್ಣಯಿಸುವದರಲ್ಲಿ ಜನರ ಮನಸ್ಸು ತೊಡಗಿ ಅಂಥ ಶಾಸ್ತ್ರೀಯ ಜ್ಞಾನದ ಗ್ರಂಥಗಳನ್ನು ಮಾಡಲಾರಂಭಿಸುವರು. ಈ ಪ್ರಕಾರದ ವಿಷಯ ಪ್ರತಿಪಾದನೆಯಲ್ಲಿ ಪದ್ಯರಚನೆಯು ಶೋಭಿಸುವದಿಲ್ಲ. ಆಗ ಸ್ವಾಭಾವಿಕವಾಗಿ ಜನರಾಡುವ ಭಾಷೆಯಲ್ಲಿ ಗ್ರಂಥಗಳನ್ನು ಬರೆಯುದೇಕಾಗುವದು. ಅಂಥ ಗ್ರಂಥಗಳಿಗೆ ಹಿಂದಿನ 'ಗದ್ಯಕಾವ್ಯ' ವೆಂಬ ಹೆಸರಿಗೆ ಪ್ರತಿಯಾಗಿ 'ಗದ್ಯಗ್ರಂಥ' ವೆಂಬ ಹೆಸರು ಸಲ್ಲುವದು. ಹಿಂದೆ ಹೇಳಿದಂತಹ ಕಲ್ಪನಾಮಯವಾದ ಕಾವ್ಯಗಳನ್ನು ನಿರ್ಮಿಸುವದಕ್ಕೆ ಮನುಷ್ಯನ ತತ್ತ್ವಜಿಜ್ಞಾಸೆಯ ಅಭಾವದಶೆಯು, ಇಲ್ಲವೆ ವಿಚಾರಶಕ್ತಿಯ ಬಾಲ್ಯದಶೆಯು ಅನುಕೂಲವಾಗಿರುತ್ತದೆಂಬದು ಪ್ರಾಚೀನ ಕಾವ್ಯಗಳನ್ನು ಪರಿಶೀಲಿಸಿದವರ ಮನಸ್ಸಿಗೆ ತೋಚದೆ ಇರಲಾರದು ಅಂಥ ಕಲ್ಪನಾಮಯವಾದ ಕಾವ್ಯನಿರ್ಮಾಣ ಕಾಲವು ಗ್ರಂಥರಚನೆಯ ಆದಿಕಾಲವೆಂದೇ ಹೇಳಬಹುದಾಗಿದೆ.

ಕನ್ನಡ ಕವಿತ್ವದ ಈ ಪ್ರಕಾರದ ಆದಿಕಾಲದಲ್ಲಿ ಆಗಿಹೋದ ಕವಿಗಳಲ್ಲಿ 'ಪಂಪ'ನೆಂಬವನೇ ಶ್ರೇಷ್ಠನು. ಇವನು ಶುದ್ಧವಾದ ಕನ್ನಡ ಭಾಷಾಶೈಲಿಯನ್ನುಂಟು ಮಾಡಿದನೆಂದು ಹೇಳಬಹುದು. ಅದ್ದರಿಂದ ಇವನು 'ಆದಿಕವಿ'ಯೆಂದೂ ಕೆಲವರು ಹೊಗಳಿದ್ದಾರೆ. "ಪಸರಿಪಕನ್ನಡಕ್ಕೊಡೆಯನೊರ್ವನೆಸತ್ಕವಿಪಂಪನಾವಗಂ" ಎಂದು ನಾಗಾರ್ಜುನನು ಹೇಳುವದೂ ಸಯುಕ್ತಿಕವಾಗಿದೆ. ಇವನ ಗ್ರಂಥಗಳಿಂದಲೇ ದೊರೆಯಬಹುದಾದ ಇವನ ಚರಿತ್ರೆಯು ಕೆಳಗೆ ಕೊಟ್ಟಿದೆ.

ಈ ಕವಿಗೆ ಹಂಪ, ಗುರುಹಂಪ, ಹಂಪದೇವ, ಪಂಪುಗ, ಎಂದೂ ಕರೆತ್ತ ದುಂಟು. ಇವನಿಂದ ಈಚೆಗೆ ಆಗಿಹೋದ ನಾಗಚಂದ್ರನೆಂಬ ಕವಿಯು (ಸ. ೧೧೦೫) ತನ್ನಲ್ಲಿ ಪಂಪನ ಯೋಗ್ಯತೆಯುಂಟೆಂಬದನ್ನೂ ಪಂಪನಲ್ಲಿ ತನಗಿದ್ದ ಗೌರವವನ್ನೂ ತೋರ್ಪಡಿಸುವದಕ್ಕಾಗಿ ಅಭಿನವಪಂಪನೆಂದು ಹೆಸರಿಟ್ಟುಕೊಂಡಿದ್ದನು. ಇದರಿಂದ ಪಂಪನ ಗೌರವವು ಎಷ್ಟಿತ್ತೆಂಬದು ವ್ಯಕ್ತವಾಗುವದು. ಈ ಅಭಿನವ ಪಂಪನು ಉದ ಯನಾದಂದಿನಿಂದ ಪಂಪನಿಗೆ ಆದಿಪಂಪನೆಂಬ ಹೆಸರು ಉಂಟಾಯಿತು. ಈತನ ಪೂರ್ವಜರು ವೆಂಗಿಮಂಡಲದಲ್ಲಿ (ಸುಮಾರು ಈಗಿನ ಬಳ್ಳಾರಿ ಜಿಲ್ಲೆಯಲ್ಲಿ) ವೆಂಗಿ ಪಳುಗೆ ಸೇರಿದ ಒಂದು ಅಗ್ರಹಾರದಲ್ಲಿ ವಾಸಿಸುತ್ತಿದ್ದರು. ಅವರು ವತ್ಸಗೋತ್ರದ ಬ್ರಾಹ್ಮಣರು. ಅವರಲ್ಲಿ ಮಾಧವ ಸೋಮಯಾಜಿ, ಎಂಬವನು ಅನೇಕ ಯಜ್ಞಗ ಳನ್ನು ಮಾಡಿ ವಸಂತ, ಕೊಟ್ಟೂರು, ನಿಡುಗುಂದಿ, ವಿಕ್ರಮಪುರ ಎಂಬ ಅಗ್ರಹಾರ ಗಳಲ್ಲಿರುವ ಬ್ರಾಹ್ಮಣರಲ್ಲಿ ಶ್ರೇಷ್ಠನೆನಿಸಿದ್ದನು. ಇವನ ಮಗನು ಅಭಿಮಾನ-ಚಂದ್ರ ನೆಂಬವನು. ಅಭಿಮಾನಚಂದ್ರನಿಗೆ ಕೊಮರಯ್ಯನೆಂಬ ಮಗನು ಹುಟ್ಟಿದನು. ಕೊಮ ರಯ್ಯನಿಗೆ ಅಭಿರಾಮದೇವರಾಯನೆಂಬ ಮಗನಾದನು. ಈತನು ಜಿನೇಂದ್ರ ಧರ್ಮವೇ ಶ್ರೇಷ್ಠವೆಂದು ನಂಬಿ ಜೈನಮತವನ್ನು ಸ್ವೀಕರಿಸಿದನು. ಈತನ ಮಗನೇ ಪ್ರಖ್ಯಾತನಾದ ಪಂಪನು. ಆದ್ದರಿಂದ ಈತನೂ ಜೈನನೆಂದು ಬೇರೆ ಹೇಳುವ ಅವಶ್ಯವಿಲ್ಲ.

ಈ ಕವಿಯ ಜನ್ಮಸ್ಥಳವು ಇಂಥದೇ ಎಂದು ನಿಷ್ಕರ್ಷೆಯಿಂದ ಹೇಳಲಾ ಗುವದಿಲ್ಲ. ಇವನು ರಟ್ಟರಾಜ್ಯದಲ್ಲಿದ್ದನೆಂದು ರನ್ನನು ಬರೆದಿದ್ದಾನೆ. ಆದರೆ ಪಂಪನು ತನ್ನ ಭಾರತದಲ್ಲಿ ಬನವಾಸಿ ದೇಶವನ್ನು ಬಹಳವಾಗಿ ವರ್ಣಿಸಿದ್ದಾನೆ. ಮತ್ತು ಅರ್ಜುನನು ತೀರ್ಥಯಾತ್ರೆಗೆ ಹೊರಟು ಗೋಕರ್ಣಕ್ಕೆ ಬಂದಾಗ ಅಲ್ಲಿ ಹತ್ತಿದ ಬನವಾಸಿ ದೇಶವನ್ನು ನೋಡಿ ಅದು ತನ್ನ ಮನಸ್ಸಿಗೆ ಬಂತೆಂದೂ, ಅದನ್ನು ನಾನು ಎಂದೂ ಮರೆಯಲಾರೆನೆಂದೂ ಅಂದಂತೆ " ಅರಂಕುಸಮಿಟ್ಟೊಡಂ ನೆನೆವು ದೆನ್ನ ಮನಂ ಬನವಾಸಿ ದೇಶಮುಂ " (ಯಾರು ಅಂಕುಶವನ್ನು ಚುಚ್ಚಿದರೂ ನನ್ನ ಮನಸು ಬನವಾಸಿ ದೇಶವನ್ನು ನೆನೆಯುವದು) " ತೆಂಕನಾಡಮರೆಯಲ್ಕೆನ್ನೀಂ ಮನಂಬಕ್ಕುಮೆ " ದಕ್ಷಿಣ ದೇಶವನ್ನು ಮರೆಯಲು ನನ್ನ ಮನಸ್ಸಾದೀತೇ?) ಎಂಬ ವಾಕ್ಯಗಳಿಂದ ಕವಿಯು ಅನುವಾದಿಸಿದ್ದಾನೆ. ಇದರಿಂದ ಆ ದೇಶವು ಕವಿಗೆ ಅಭಿಮತವಾಗಿತ್ತೆಂದು ವ್ಯಕ್ತವಾಗುತ್ತದೆ. ಮತ್ತು ಇವನು ಬನವಾಸಿ ದೇಶದಲ್ಲಿ ಜನಿಸಿ ರಾಜಾಶ್ರಯ ಹೊಂದಿ ಬೇರೆ ದೇಶದಲ್ಲಿ ವಾಸಮಾಡುತ್ತಿದ್ದನೆಂದು ಊಹಿಸ ಲವಕಾಶವುಂಟು. ಆದರೂ ಬನವಾಸಿ ದೇಶದ ಸಮೀಪದಲ್ಲಿರುವ ಪುಲಿಗೆರೆಯಲ್ಲಿ (ಲಕ್ಷ್ಮೇಶ್ವರದಲ್ಲಿ) ರೂಢವಾದ ತಿರುಳ್ಗನ್ನಡ ಭಾಷೆಯಲ್ಲಿ ಗ್ರಂಥಗಳನ್ನು ಬರೆದಂತೆ,

" ರಾಜಸುಧಾನಿಯ ಪುಟವಹ । ಸಾಜದ ಪುಲಿಗೆರೆಯ ತಿರುಳಕನ್ನಡದೊಳ್ ॥
ವ್ಯಾಜದೆಸಕದೊಳಿವುದಿದೊಂ । ದೋಜೆಯಬಲದಿನಿಯಕವಿತೆಪಂಪನಕವಿತೆ॥"

ಎಂಬ ಪದ್ಯದಿಂದ ಹೇಳಿದ್ದಾನೆ. (ಭಾರತ).

ಇವನು ಗ್ರಂಥದಲ್ಲಿ ತನ್ನ ಜನ್ಮಕಾಲವನ್ನೇ ಹೇಳದಿದ್ದರೂ ಅದನ್ನು ನಿಷ್ಕರ್ಷಿಸುವದಕ್ಕೆ ತಕ್ಕಷ್ಟು ಸಂಗತಿಗಳನ್ನು ತಿಳಿಸಿದ್ದಾನೆ. ಆದಿಪುರಾಣದ ಕೊನೆಯಲ್ಲಿ.

" ಶಕವರ್ಷಮೆಂಟುನೂರ । ಕ್ಕೆ ಕಡೆಯೊಳರುವತ್ತುಮೂರು ಸಂದೆಂದುಜಗ ॥
ತ್ಪ್ರಕಟ ಪ್ಲವಸಂವತ್ಸರ । ದ ಕಾರ್ತಿಕಮುದೆಮನೀಯ ನಂದೀಶ್ವರದೊಳ ॥
ಸಿತಪಕ್ಷದ ಪಂಚಮಿದಿನ । ಪತಿವಾರಂ ಶುಭನಮೂಲನಕ್ಷತ್ರದೊಳ್ ॥
ನ್ವಿತಮಾಗ ನೆಗಳ್ದುದೀಮ । ತ್ಕೃತಿಜಗದೊಳ್ಪುದಿದುಸಾಗರಾಂತಕ್ಷಿತಿಯಂ ॥"

ಎಂಬೀ ಪದ್ಯಗಳಿವೆ. ಮತ್ತು ಅದೇ ಗ್ರಂಥದ ಆದಿಭಾಗದಲ್ಲಿ—

" ದುಂದುಭಿ ಗಭೀರನಿನದಂ । ದುಂದುಭಿಸಂವತ್ಸರೋದ್ಭವಂ ಪ್ರಕಟಿಯಿಸೋ ॥
ದುಂದುಭಿಸಿಂಹಾಸನಸುರ । ದುಂದುಭಿಪತಿಚರಣಕಮಲಭೃಂಗಂ ಪಂಪಂ ॥ "

ಎಂಬ ಪದ್ಯವಿದೆ. ಇವುಗಳಿಂದ ತಿಳಿಯುವದೇನಂದರೆ— ಈತನು ಶಕ ೮೬೩ (ಕ್ರಿ. ಶ. ೯೪೧) ಪ್ಲವಸಂವತ್ಸರದಲ್ಲಿ ಗ್ರಂಥವನ್ನು ಮುಗಿಸಿದನು. ಅದರ ಹಿಂದಿನ ದುಂದುಭಿ ಸಂವತ್ಸರದಲ್ಲಿ ಹುಟ್ಟಿದನು. ಪ್ಲವಸಂವತ್ಸರದ ಹಿಂದೆ ದುಂದುಭಿಯವರೆಗೆ ಲೆಕ್ಕಮಾಡಿದರೆ ೫೯ ವರ್ಷಗಳಾಗುವವು. ಅಂದರೆ ಇವನ ಜನ್ಮಕಾಲವು ಕ್ರಿ. ಶ. ೯೦೨; ಮೇಲಿನ ಪದ್ಯಗಳ ರಚನಾಕ್ರಮವನ್ನು ನೋಡಲು ಅವು ಪಂಪನಿರ್ಮಿತ ಎಂಬ ವಿಷಯದಲ್ಲಿ ಸಂಶಯವು ಬರುವದಿಲ್ಲ; ಮತ್ತು ಇವನ ಗ್ರಂಥಗಳ ಭಾಷಾ ಶೈಲಿಯಿಂದಲೂ ಇವನು ಪ್ರಾಚೀನನೆಂಬದು ಸ್ಪಷ್ಟವಾಗಿ ತೋರುವದು. ಆದ್ದರಿಂದ ಮೇಲಿನ ಶ್ಲೋಕಗಳಲ್ಲಿ ಹೇಳಿದ ಕಾಲವು ಸರಿಯಾಗಿರಬೇಕು.

ಈ ಕವಿಯು ತನ್ನ ಗುರು " ಗುರುದೇವೇಂದ್ರಮುನೀಂದ್ರಂ " ಎಂದು ಹೇಳಿಕೊಂಡಿರುವದರಿಂದ ದೇವೇಂದ್ರಮುನಿಯಲ್ಲಿ ವಿದ್ಯೆ ಕಲಿತನೆಂದು ಗೊತ್ತಾಗುತ್ತದೆ. ಕನ್ನಡದಲ್ಲಷ್ಟೇ ಅಲ್ಲದೆ ಸಂಸ್ಕೃತದಲ್ಲಿಯೂ ಪಂಪನಿಗೆ ಪಾಂಡಿತ್ಯವು ಚನ್ನಾಗಿತ್ತು. ಪಂಪನು ವಿದ್ವಾಂಸನಾಗಿದ್ದರೂ ವಿದ್ಯೆಯಿಂದ ಉಪಜೀವಿಕೆಯನ್ನು ಸಾಗಿಸುತ್ತಿದ್ದಂತೆ ತೋರುವದಿಲ್ಲ. ತಾನು—' ಚತುರಂಗಬಲಭಯಂಕರಣಂ ' (ಚತುರಂಗ ಸೈನ್ಯಕ್ಕೆ ಭಯವನ್ನುಂಟು ಮಾಡುವವನು.) ಎಂದೂ ' ನಿಷ್ಕಿಂಪಂ ' (ನಡುಗದವನು. ಭಯವಿಲ್ಲದವನು.) ಎಂದೂ, " ಜೋಳದವಾಳಿ, ನಿಜಾಧಿನಾಥನಾಹವದೊ

---

೧ ರಾಜಧಾನಿಯ; ೨ ಪುಟಹಾಕಿದೆಂತಿರುವ; ೩ ಲಕ್ಷ್ಮೀಶ್ವರದ; ೪ ಸಾರವಾದೆಕನ್ನಡ; ೫ ಸ್ವಭಾವಿಕವಾದ; ೬ ರಚನೆ; ೭ ಖಿಡಗು (ಶೋಖಿ.) ೮ ಮಧುರವಾದ.

ಳರಾತಿಸಾಯಕರ ಪಟ್ಟನೆ ನಾಶಿಸೆ ಸಂದಪೆಂಪು, ಭೂಭುವನದೊಳಾವಗಂ ಬೆಳಗೆ ವಿಕ್ಕಭಿಪ್ರಾಸದ ಮೂತುಕೀರ್ತಿಯುಂ ವಿವರಿಸೆ ಸಂದನೇಂ ಕಲಿಯೋ ಗುಣಾರ್ಣವಂ" (ಜೋಳಿ = ಹಂಗು) ಒಡೆಯನ ಹಂಗಿನಲ್ಲಿರತಕ್ಕ ಕ್ರಮವೂ (ಒಡೆಯನಿಗೆ ವಿಧೇಯನಾಗಿರುವ ಗುಣವೂ) ತನ್ನ ಒಡೆಯನ ಸಲುವಾಗಿ ಮಾಡಿದ ಯುದ್ಧದಲ್ಲಿ ಹಾಳಾದ ಶತ್ರುನಾಯಕರ ರಾಜ್ಯದಿಂದ ತೋರಿಬಂದ ಮಾಹಾತ್ಮ್ಯವೂ ಭೂಲೋಕದಲ್ಲಿ ಯಾವಾಗಲೂ ಶೋಭಿಸಲು, ಉಳಿದ ಗೌರವದ ಸಂಗತಿಗಳು ಕೀರ್ತಿಯನ್ನು ಪಸರಿಸಲು, ಇವನು ಪ್ರಸಿದ್ಧನಾದನು. ಆದುದರಿಂದ ಗುಣಾರ್ಣವನು (ಈ ಬಿರುದುಳ್ಳ ಪ್ರಸ್ತುತಕವಿಯು) ಏನು ಶೂರನೋ? ಎಂದೂ ಹೇಳಿಕೊಂಡಿರುವದರಿಂದ ಪರಾಕ್ರಮಶಾಲಿಯಾಗಿ ದಂಡನಾಥನಾಗಿದ್ದಂತೆ ತೋರುತ್ತದೆ. ಇವನು ಪುಲಿಗೆರೆಯಲ್ಲಿ ಆಳುತ್ತಿದ್ದ (ಗಂ ನೇ ಶ.) ಪ್ರಖ್ಯಾತನಾದ ಅರಿಕೇಸರಿಯನ್ನು ಆಶ್ರಯಿಸಿದ್ದನು. ಈ ರಾಜನು ಕವಿಯನ್ನು ಕರೆಸಿಕೊಂಡು ಅವನಿಗೆ ಬೇಕಾದಷ್ಟು ಸಂಪತ್ತನ್ನು ಕೊಟ್ಟು ತನ್ನ ಪ್ರಖ್ಯಾತಿಯು ಲೋಕದಲ್ಲಿ ಚಿರಸ್ಥಾಯಿಯಾಗಿ ನಿಲ್ಲುವಂತೆ ಒಂದು ಕಾವ್ಯವನ್ನು ಬರೆಯಬೇಕೆಂದು ಹೇಳಿದನು. ಅದಕ್ಕೆ ಇವನು ಒಪ್ಪಿ ಭಾರತಕಥೆಯಿಂದ 'ವಿಕ್ರಮಾರ್ಜುನ ವಿಜಯ' ವೆಂಬ ಗ್ರಂಥವನ್ನು ಬಿಡಿದನು. ಅದರಲ್ಲಿ ಅರ್ಜುನನಿಗೆ ತನ್ನ ಪೋಷಕನಾದ ಅರಿಕೇಸರಿಯ ನಾಮಗಳನ್ನೂ ಬಿರುದುಗಳನ್ನೂ ಕೊಟ್ಟು ವರ್ಣಿಸಿ ತನ್ನ ಅರಿಕೇಸರಿನೃಪನು ಅರ್ಜುನನಿಗೆ ಸರಿಯಾದವನು, ಎಂಬ ಭಾವವು ಬರುವಂತೆ ಮಾಡಿದ್ದಾನೆ. ಇದರಿಂದ ಆ ಅರಸನಿಗೆ ಸಂತೋಷವಾಗಿ ಈ ಕವಿಗೆ ಧರ್ಮಪುರವೆಂಬ ಅಗ್ರಹಾರವನ್ನು 'ನಾರ' ವೆಂಬ ಹೆಸರಿಟ್ಟು ಮಾನ್ಯವಾಗಿ ಕೊಟ್ಟನು.

ಕನ್ನಡ ಕಾವ್ಯಗಳಲ್ಲಿ ಗ್ರಂಥಾರಂಭದಲ್ಲಿ ಒಂದು ವಿಶಿಷ್ಟಪದ್ಧತಿಯು ಕಂಡು ಬರುತ್ತದೆ. ಆದಿಯಲ್ಲಿ ಇಷ್ಟದೇವತಾಸ್ತೋತ್ರ ಮೊದಲಾದ ಮಂಗಳವನ್ನು ಮಾಡಿದ ಬಳಿಕ ತನ್ನ ಹಿಂದೆ ಆಗಿಹೋದ ಪ್ರಸಿದ್ಧಕವಿಗಳನ್ನು ಹೊಗಳುವದು. ಇದರಿಂದ ಕವಿಗಳ ಕಾಲನಿರ್ಣಯವನ್ನು ಮಾಡಲು ಅನುಕೂಲವಾಗಿದೆ ಪಂಪನು ತನ್ನ ಆದಿಪುರಾಣದಲ್ಲಿ ತನ್ನ ಹಿಂದೆ ಆಗಿಹೋದ ಕನ್ನಡ ಕವಿಗಳಲ್ಲಿ ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದರೆಂಬ ಮೂವರ ಹೆಸರನ್ನು ಮಾತ್ರ ಹೇಳಿರುವನು. ಸಂಸ್ಕೃತ ಕವಿಗಳಲ್ಲಿ ವ್ಯಾಸಮುನಿ, ಸತ್ಯವಿವ್ಯಾಸ ಎಂಬಿಬ್ಬರ ಹೆಸರನ್ನು ಹೇಳಿದ್ದಾನೆ. ಆದರೆ ಶ್ರೀ ವರ್ಧದೇವ, ಶ್ರೀವಿಜಯ ಮೊದಲಾದ ಪ್ರಾಚೀನ ಮಹಾಕವಿಗಳನ್ನು ತನ್ನ ಗ್ರಂಥದಲ್ಲಿ ಏಕೆ ಉಲ್ಲೇಖಿಸಲಿಲ್ಲವೋ ತಿಳಿಯದು. ಪ್ರಾಚೀನ ಕವಿ ಪ್ರಶಂಸೆಯಾದ ಬಳಿಕ ತಮ್ಮ ಬಿರುದುಗಳನ್ನೂ ಪರ್ಯಾಯದಿಂದ ತಮ್ಮ ವರ್ಣನೆಯನ್ನೂ ತಮ್ಮ ಗ್ರಂಥಗಳ ವರ್ಣನೆಯನ್ನೂ ತಿಳಿಸುವ ಪದ್ಧತಿಯು ಉಂಟು. ಸಂಸ್ಕೃತ ಕವಿಗಳು ಗ್ರಂಥಾರಂಭದಲ್ಲಿ ಬಹುತರ ತಮ್ಮ ಗರ್ವನಿಹಾರ ಮಾಡಿ

ಕೊಂಡದ್ದು ಕಂಡು ಬರೆಯವದು. ಇದಕ್ಕೆ ವಿಪರೀತವಾಗಿ ಕನ್ನಡ ಕವಿಗಳಲ್ಲಿ ಆತ್ಮ ಶ್ಲಾಘನೆ ಮಾಡಿಕೊಳ್ಳುವ ಪದ್ಧತಿಯು ಹೇಗೆ ಉಂಟಾಯಿತೋ? ತಿಳಿಯದು. ಪಂಪನು ತನ್ನ ಆದಿಪುರಾಣದ ಪ್ರತಿಯೊಂದು ಆಶ್ವಾಸದ ಆದಿಪದ್ಯದಲ್ಲಿ 'ಸರಸ್ವತೀ ಮಣಿಹಾರ'ನೆಂಬ ಬಿರುದಿನಶ್ಲೋಕೊನೆಯ ಎರಡು ಪದ್ಯಗಳಲ್ಲಿ 'ಸುಕವಿಜನ ಮನೋಮಾನಸೋತ್ತಂಸ ಹಂಸ, ಸಂಸಾರಸಾರೋದಯ' ಎಂಬ ಬಿರುದುಗಳನ್ನೂ ಹೇಳಿಕೊಂಡಿದ್ದಾನೆ. ಭಾರತದಲ್ಲಿ ಇಪ್ಪೆಲ್ಲ ಬಿರುದುಗಳು ತನಗೆ ಬಂದದ್ದರ ಕಾರಣ ಗಳನ್ನು ಹೇಳುವದಕ್ಕಾಗಿ ದೊಡ್ಡದೊಂದು ಗದ್ಯವನ್ನೇ ಮಾಡಿದ್ದಾನೆ. ಇವನನ್ನೇ ಅನುಸರಿಸಿ ಅಗ್ಗಳ, ನಾಗಚಂದ್ರ ಮೊದಲಾದವರೂ ಆಶ್ವಾಸದ ಆದ್ಯಂತ ಪದ್ಯಗ ಳಲ್ಲಿ ತಮ್ಮ ಬಿರುದುಗಳನ್ನು ಹೇಳುತ್ತ ನಡೆದರು. ಇದರಿಂದ ಅನೇಕರು ಕನ್ನಡ ಕವಿಗಳಲ್ಲಿ ಆತ್ಮಶ್ಲಾಘಾ ದೋಷವನ್ನೆಣಿಸುತ್ತಾರೆ. ಆದರೆ ಕನ್ನಡ ಕವಿಗಳಲ್ಲಿ ಗ್ರಂಥಾಂತ್ಯದಲ್ಲಿ ಗ್ರಂಥಮುಗಿದ ಶಕವನ್ನು ಬಹುತರ ಹೇಳುತ್ತ ಬಂದಿರುವ ಪದ್ಧ ತಿಯು ಉತ್ತಮವಾಗಿದೆ.

ಆದಿಪುರಾಣ, ವಿಕ್ರಮಾರ್ಜುನವಿಜಯ, ಎಂಬೆರಡು ಗ್ರಂಥಗಳನ್ನು ಪಂಪನು ಮಾಡಿದ್ದಾನೆ. ಅವುಗಳಲ್ಲಿ ಆದಿಪುರಾಣದ ವಿಷಯದಲ್ಲಿ ವೈ. ವಾ. ಮೈ॥ ಎಸ್, ಬಿ, ನರಸಿಂಹಾಚಾರ್ಯರವರು ಕಥಾಸಾರ ಮೊದಲಾದ ಕೆಲವು ಸಂಗತಿಗಳನ್ನು ಬರೆ ದಿದ್ದಾರೆ. ಆದ್ದರಿಂದ ವಿಕ್ರಮಾರ್ಜುನ ವಿಜಯವೊಂದನ್ನೆ ತೆಗೆದುಕೊಂಡು ಮುಂದಿನ ಲೇಖದಲ್ಲಿ ಪ್ರಸ್ತುತಕವಿಯು ಕವಿತ್ವದ ಸ್ವಾದವನ್ನು ತೆಗೆದುಕೊಳ್ಳುವ.

ವಿಕ್ರಮಾರ್ಜುನವಿಜಯೆ (ಭಾರತೆ).

ಈ ಗ್ರಂಥದಲ್ಲಿ ಸಂಸ್ಕೃತ ಮಹಾಭಾರತದ ಕಥೆಯೇ ವರ್ಣಿತವಾಗಿದೆ. ಅದು ಪ್ರಸಿದ್ಧವಾಗಿಯೇ ಇರುವದರಿಂದ ಇಲ್ಲಿ ಕಥಾಸಾರವನ್ನು ಬರೆವ ಗೋಜಿಗೆ ಹೋಗ ಲಿಲ್ಲ. ಯಾಕಂದರೆ ಆ ಕಥೆಯು ಬಹು ವಿಸ್ತಾರವಾಗಿ ಇರುವದರಿಂದ ಅದೊಂದು ಬೇರೆ ಗ್ರಂಥವೇ ಆಗಿರುವದು. ಈ ಗ್ರಂಥದ ಕಥೆಯು ಕವಿಕಲ್ಪಿತವಲ್ಲವಾದ್ದರಿಂದ ಇದರಲ್ಲಿ ಕವಿಯ ಸಂವಿಧಾನ ರಚನಾಚಾತುರ್ಯವನ್ನು ಕಂಡುಹಿಡಿಯಲಾಗುವದಿಲ್ಲ. ಆದರೂ ಮಹಾಸಾಗರದಂತಿರುವ ಭಾರತಕಥೆಯಲ್ಲಿ ಮುಖ್ಯವಾದ ಕಥಾಸಾರವನ್ನೂ ತಕ್ಕಷ್ಟೇ ಉಪಾಖ್ಯಾನಗಳನ್ನೂ ತೆಗೆದುಕೊಂಡು ಹದಿನಾಲ್ಕು ಆಶ್ವಾಸಗಳಲ್ಲಿ ವಿಭಾ ಗಿಸಿ ಕಾವ್ಯದ ತೆರದಲ್ಲಿ ಗ್ರಂಥವನ್ನು ರಚಿಸಿದ್ದನ್ನು ನೋಡಲು ಸಂವಿಧಾನ ರಚನೆಯಲ್ಲಿ ಇವನ ನಾಮಧ್ಯೇವು ಚೆನ್ನಾಗಿತ್ತೆಂದು ವ್ಯಕ್ತವಾಗುವದು. ಸಂಸ್ಕೃತ ಮಹಾಭಾಗ ತದ ಕಥೆಗೂ ಇವನು ಹೇಳಿದ ಕಥೆಗೂ ಇಲ್ಲಲ್ಲಿ ಸ್ವಲ್ಪ ವ್ಯತ್ಯಾಸಗಳುಂಟು. ಇದಕ್ಕೆ

ಆಧಾರವಾಗಿ ಸಂಸ್ಕೃತದಲ್ಲಿ ಜೈನರು ಮಾಡಿದ ಯಾವದೊಂದು ಭಾರತವು ಉಂಟೋ ತಿಳಿಯದು.

ಈ ಗ್ರಂಥದ ಕಥಾಭಾಗವು ಇತಿಹಾಸರೂಪವಾಗಿ ಇದ್ದರೂ ಸಂಧ್ಯಾವರ್ಣನ ಮೊದಲಾದ ಕಾವ್ಯಾಂಗ ವರ್ಣನೆಗಳು ಉತ್ತಮವಾಗಿವೆ. ಆ ವರ್ಣನಾಭಾಗಗಳನ್ನು ನೋಡಲು ಕವಿಯು ಪ್ರತಿಭಾಶಕ್ತಿಯುಳ್ಳವನೆಂಬದು ಸ್ಪಷ್ಟವಾಗಿ ಕಂಡುಬರುವದು. ಕೆಲವೆಡೆ ಸಂಸ್ಕೃತ ಕಾವ್ಯಗಳಲ್ಲಿರುವ ವರ್ಣನಾಭಾಗಗಳನ್ನು ಕನ್ನಡಕ್ಕೆ ಪರಿವರ್ತಿಸಿಯೂ ಹೇಳಿದ್ದಾನೆ. ಈ ಗ್ರಂಥವು ಕಥಾದೃಷ್ಟಿಯಿಂದ ಇತಿಹಾಸ ಗ್ರಂಥಗಳಲ್ಲಿ ಸೇರಿದರೂ ಆ ಕಥೆಯನ್ನು ಹೇಳುವ ಶೈಲಿಯಿಂದಲೂ, ಇತರ ಕಾವ್ಯಾಂಗಭೂತವಾದ ವರ್ಣನೆಗಳಿಂದಲೂ ಮಹಾಕಾವ್ಯವೆಂಬ ಹೆಸರನ್ನು ಹೊಂದಲು ಅರ್ಹವಾಗಿದೆ ಒಂದು ಕಡೆಯಲ್ಲಿ ಕವಿಯು ಸಂಧ್ಯಾಕಾಲದ ವರ್ಣನೆಯನ್ನು ಈ ತೆರದಲ್ಲಿಮಾಡಿದ್ದಾನೆ—

ನವನಳಿನೀವನಂಗಳ ಪರಾಗರಜಂಗಳನುಂಡು ಮುನ್ನವಮಂ ।
ತವನೆ ನಿಯುಕ್ತಳಭ್ರಮಣವಿಹ್ವಲನಾಗಿ ಬಳಲ್ದು ಕಾರುವಂ ।
ತೆವೊಲಿರೆ ಕೆಂಪು, ತತ್ಕಮಲ*ಕಾನನ ಕಂಟಕಲಗ್ನಪಾದನಾ ।
ದವೊಲುಡುಗುತ್ತುಮಾತ್ಮಕರಮಂ ರವಿಹೊರ್ದಿದನಸ್ತಶೈಲಮಂ ॥ ೧ ॥

[ಈ ಪದ್ಯದಲ್ಲಿ ಸಂಜೆಗೆಂಪನ್ನೂ ಆ ಕಾಲದಲ್ಲಿ ಕಿರಣಗಳು ಜಗ್ಗಲ್ಪಟ್ಟಂತೆ ಪಶ್ಚಿಮ ದಿಕ್ಕಿನ ಕಡೆಗೆ ಹೋಗುವದನ್ನೂ ವರ್ಣಿಸುವನು. ಕಮಲವನಗಳಲ್ಲಿ ಸೂರ್ಯನ ಅವಯವಗಳಾದ ಕರಗಳ (ಕಿರಣ, ಕೈ) ಸಂಚಾರವಿದ್ದದರಿಂದ ಅವನ ಸಂಚಾರವೂ ಇದ್ದಂತಾಯಿತು. ರವಿಯು ತನ್ನ ಕರಗಳಿಂದ ಹೊಸದಾಗಿ ಅರಳಿದ ಕಮಲವನಗಳ ಧೂಲಿಯನ್ನು ಮೊದಲು ಉಂಡು ಮುಂದೆ ಕೂಡಲೆ ಆಕಾಶದಲ್ಲಿ ಭ್ರಮಣ ಮಾಡಿದುದರಿಂದ ಪೀಡಿತನಾಗಿ ಬಳಲಿ ಅದೇ ಧೂಲಿಯು ಕಣಗಳನ್ನು ಕಾಣುವನೋ ಎಂಬಂತೆ ಅವನ ಕೆಂಪು ತೋರಲು ಮತ್ತು (ಕಿರಣಗಳ ಉಪಸಂಹರಣವು.) ಆ ಕಮಲವನದಲ್ಲಿ ತಿರುಗಿದಾಗ ಕಮಲಬಳ್ಳಿಗಳ ಮುಳ್ಳುಗಳು ಕಾಲಲ್ಲಿ ನಟ್ಟಿದ್ದರಿಂದ ಅವನ್ನು ತೆಗೆದುಕೊಳ್ಳುವದಕ್ಕಾಗಿ ಬಲುದೂರ ಚಾಚಿದ್ದ ತನ್ನ ಕರಗಳನ್ನು ಪಾದದ ಕಡೆಗೆ ಉಪಸಂಹರಿಸಿ ತೆಗೆದುಕೊಳ್ಳುತ್ತಾನೋ ಎಂಬಂತೆ ತೋರಲು ಅಸ್ತಾಚಲವನ್ನು ಆಶ್ರಯಿಸಿದನು.]

ಕ್ರಮವಾಗಿ ಸೂರ್ಯನು ಅಸ್ತಂಗತನಾದನು. ಆಗ ಕಮಲಗಳು ದಳಿಗಳನ್ನು ಮುಚ್ಚಿಕೊಂಡು ಮೊಗ್ಗುಗಳಂತಾದುವು. ಆ ಕಾಲದಲ್ಲಿ ಯಾವಾಗಲು ಕಮಲಗಳಲ್ಲಿಯೇ ಆಶ್ರಯಹೊಂದಿಕೊಂಡು ಇದ್ದ ತುಂಬಿಗಳು:—

" ಆ ಸರಸೀಜಬಾಂಧವನ ಪಿಂಬಡಿಸೊಳ್ ಕಡುವಿನ್ನವಾದವಿಂ ।
ತೀ ಸರಸೀರುಹಂಗಳವನೀ ಪದದೊಳ್ ಬಿಸುಟೆಂತು ಪೋಗಿವೆಂ ।

ಬೀ ಸಮುಕಟ್ಟಿನೊಳ್ ನೆಲಸಿದಂತಿರಗಿರ್ದುವ್ವ ಷಟ್ಪದಂಗಳು।
ತ್ಕೇಸ*ರ ಕೋಟಿಸಂಕಟ ಕುಶೀಶಯಕೋಶ ಕುಟೀರಕಂಗಳೊಳ್ " ॥ ೨ ॥

[ಆ ಕಮಲಬಂಧುವಾದ ಸೂರ್ಯನು ಅಸ್ತವಾಗಲು ಈ ಕಮಲಗಳು ಬಹಳ ಖಿನ್ನವಾಗಿರುವವು. ಅದ್ದರಿಂದ ಅಂತು ಇಷ್ಟವಿಯೋಗದ ಕಷ್ಟಹೊಂದಿದ ಕಮಲಗಳನ್ನು ಈ ಪ್ರಸಂಗದಲ್ಲಿ ಬಿಟ್ಟು ಹೇಗೆ ಹೋಗಬೀಕು? ಎಂಬ ಅಭವ್ಯಾಯದಿಂದ ಕೇಸರಗಳ ತುದಿಗಳಿಂದ ಇಕ್ಕಟ್ಟಾಗಿರುವ ಕಮಲಗಳ ಮೊಗ್ಗುಗಳೆಂಬ ಗುಡಿಸಲುಗಳಲ್ಲಿ ಇದ್ದವೋ ಎಂಬಂತೆ ಅಲ್ಲಿ ಸಿಕ್ಕಿಕೊಂಡಿದ್ದವು.]

ವಚನ— " ಅಂತು ಕಮಲವನಂಗಳಾದಿತ್ಯಂಗೆ ಕೆಯ್ಯಂ ಮುಗಿವಂತೆ ಮುಗಿಯೆ ಬಳಿಯಂ ಕ್ರಮಕ್ರಮದೊಳ್ "

[ಮೇಲೆ ಹೇಳಿದಂತೆ ಕಮಲಗಳು ಮೊಗ್ಗಾದದ್ದನ್ನು ನೋಡಿದರೆ ಹೋಗಿ ಬರುವ ಸೂರ್ಯನಿಗೆ ಕಮಲವನಗಳು ಕಯ್ಮುಗಿಯುವವೋ ಎಂಬಂತೆ ತೋರಲು ಮುಂದೆ ಕ್ರಮವಾಗಿ]

ದಟ್ಟಾದ ಕತ್ತಲೆಯು ವ್ಯಾಪಿಸಿಕೊಂಡಿತು:—

" ಮಸಿಯಿಂದಂ ಜಗಮೆಲ್ಲಮುಂ ದಿತಿಸುತಂ ಮುಂಪುಳ್ದನೋ ಕಾಲನೋ ।
ಘಸಮೂಹಂ ದೆಸೆಯೆಲ್ಲಮುಂ ಕವಿದುದೋ ಗಂಧೇಭಚರ್ಮಂಗಳಂ ।
ಪಸರಂಗೆಯ್ದನೊ ಶಂಭುವೆಂಬ ಬಗೆಯಿಂ ತಳ್ಪೊಯ್ದುಕಳ್ಪೇರಿ ಸೂ ।
ಚಿಸಲಾರ್ಗಂ ಕರಮಾಗದಂತು ಕವಿದತ್ತುದ್ದಾಮಭೀಮಂ ತಮಂ ॥ ೩ ॥"

[ದೈತ್ಯನು ಜಗವನ್ನೆಲ್ಲ ಕಾಡಿಗೆಯಿಂದ ಹೂಳಿದನೊ? (ಸಂಧ್ಯಾಕಾಲವು ದೈತ್ಯರ ಆಟಾಟದ ಸಮಯವಾದ್ದರಿಂದ ಈ ರೀತಿ ಊಹಿಸುವನು.) ಮುಂದೆ ಅದಕ್ಕೂ ದಟ್ಟವಾಗುತ್ತಿರುವ ಕತ್ತಲೆಯನ್ನು ನೋಡಿ— ಪ್ರಳಯಕಾಲದ ಮೇಘಗಳ ಸಮೂಹವು ದಿಕ್ಕುಗಳನ್ನೆಲ್ಲ ಮುಚ್ಚಿತೋ? ಇಲ್ಲವೆ ಈ ಸಂಧ್ಯಾಸಮಯದಲ್ಲಿ ಈಶ್ವರನು ತಾಂಡವ (ಅದ್ಭುತವಾದ ನರ್ತನ) ವನ್ನು ಮಾಡುತ್ತಿರುವದರಿಂದ ಅವನು ತನ್ನ ಗಜಚರ್ಮಗಳನ್ನು ಬೀಸಿದನೋ ಎಂದು ಊಹಿಸುವ ರೀತಿಯಲ್ಲಿ ಕಪ್ಪು ಹೆಚ್ಚಾಗಿ ಯಾರಿಗೂ ವರ್ಣಿಸಲಸಾಧ್ಯವಾದಂತೆ ಅತ್ಯಂತ ಭಯಂಕರವಾದ ಕತ್ತಲೆಯು ವ್ಯಾಪಿಸಿತು.]

ವಚನ— " ಅಗಳ್ ತಾರಿಗಣಂಗಳ್ ದಿಶಾವನಿತೆಯರ ಮುಕುಟಮಾಣಿಕಗಳಂತೆ ನಡುಬೆಳಗಿಯುಂ ಕತ್ತಲೆಯನಲೆಯಲಾರವಾದುವು. ಜನಕವ್ಯಾಪಾದಪಂಕ್ತಿಗಳ್ ಪಳಪಳನೆ ಬೆಳಗುವ ಸೊಡರ್ಗಳನಾದಿತ್ಯನನಂಟರೆಂದು ತಮೋರಾಜಕಂ ಮುಳಿದುಸೆರಗೆಯ್ದ ಬೆಳಗಿನ ಸೆರೆಯಮನೆಗಳನ್ನವಾದುವು.....ಅಗಳ್—ಲೋಹಿತಾಂಗಂ ರಜನೀಪತಿ ಉದಿತನಾದಂ "

[ಆಗ ನಕ್ಷತ್ರಗಣಗಳು ದಿಗ್ವನಿತೆಯರ ಕಿರೀಟಗಳಲ್ಲಿರುವ ರತ್ನಗಳಂತೆ ಹೆಚ್ಚಿಗೆ ಹೊಳೆಯುತ್ತಿದ್ದರೂ ಕತ್ತಲೆಯನ್ನು ಕಳೆಯಲು ಸಮರ್ಥವಾಗಲಿಲ್ಲ. ಸುವರ್ಣವು

ಯುವಾದ ಉಷ್ಣರಿಗೆಗಳ ನಾಲುಗಳು—ಅಂಧಕಾರವೆಂಬ ಕ್ಷತ್ರಿಯ ರಾಜನು ತಳತಳ ಹೊಳೆಯುವ ದೀಪಗಳನ್ನು ಸೂರ್ಯನ ನಂಟರೆಂದು ತಿಳಿದು ಸೆರೆಹಾಕಿದ ಬೆಳಕಿನ ಸೆರೆಮನೆಗಳಂತೆ ಆದವು. ಆಗ ಕೆಂಪಾದ ಶರೀರವುಳ್ಳ ಚಂದ್ರನು ಉದಯವಾದನು.]

ಆದೇ ಮೂಡುತ್ತಿರುವ ಆ ಚಂದ್ರಮಂಡಲದ ಕೆಂಪನ್ನು ನೋಡಿ ಈ ರೀತಿ ಊಹಿಸುವನು:—

" ನೆರೆದೈ ಸಂಜೆಯೊಳೆಂದು ಕಾಯೆದ್ದಿದೊಡೇನಾತ್ಮಾಂಗದೊಳ್ರೋಹಿಣೀ ।
ಚರಣಾಲಕ್ತಕರಾಗಮುಚ್ಚಿಪುದುದೋ ಮೇಣ್ಯಾಮಿನೀ ಕಾಮಿನೀ ।
ವಿರಹಂ ಪೊಣ್ಮಿರುದೋ ತಮೋಗಜದ ಕೋಡೇರಿಂದಮೇಂ ನೊಂದುದೊ ।
ಹರಿಣಂ ತಾನೆನಿಸುತ್ತ ರಕ್ತರುಚಿಯಿಂ ಬಿಂಬಂ ಸುಧಾಸೂತಿಯಾ ॥ ೪ ॥"

["ನೀನು ಸಂಧ್ಯಾ ಸ್ತ್ರೀಯೊಡನೆ ಕೂಡಿದೆ" ಎಂದು ಚಂದ್ರಪತ್ನಿ ರೋಹಿಣಿಯು ಸಂತಾಪಗೊಂಡು ಒದೆಯಲು ಅವನ ದೇಹದಲ್ಲಿ ಆ ರೋಹಿಣಿಯು ಚರಣದಲ್ಲಿ ಹಚ್ಚಿದ್ದ ಅಲತಿಗೆಯ ಕೆಂಪು ತೊಡೆಯಿತೋ? ಇಲ್ಲವೆ ಅವನಿಗೆ ರಾತ್ರಿಯೆಂಬ ತನ್ನ ನಲ್ಲಳ ವಿರಹದಿಂದುಂಟಾದ ಅನುರಾಗವು ಹೊರಬಿದ್ದಿತೋ? ಇಲ್ಲವೆ ತನ್ನ ಶತ್ರುವಾದ ಕತ್ತಲೆಯೆಂಬ ಅನೆಯು ಹಲ್ಲಿನ ಹೊಡತದಿಂದ ತನ್ನ ವಾಹನವಾದ ಹರಿಣವು ಘಾಯಹೊಂದಿತೋ? ಅಂದರೆ ಘಾಯದಿಂದ ಅದರ ರಕ್ತವು ಹೊರಬಿದ್ದಿರುವದೋ ಎಂಬಂತೆ ರಕ್ತಪ್ರಕಾಶದಿಂದ ಅಮೃತಕಿರಣನಾದ ಚಂದ್ರನ ಬಿಂಬವು ತೋರಿತು.]

ಈ ಸಂಧ್ಯಾವರ್ಣನೆಯಲ್ಲಿ— ಮೊದಲು ಸಂಜೆಯೂ, ಬಳಿಕ ದಟ್ಟಾದ ಕತ್ತಲೆಯೂ, ಅಷ್ಟರಲ್ಲಿ ಚಂದ್ರೋದಯವೂ ಆದಂತೆ ವರ್ಣಿಸಿದ್ದರಿಂದ ಇದು ಕೃಷ್ಣ ಪ್ರತಿಪದೆಯ ಸಂಧ್ಯಾವರ್ಣನೆಯಂತೆ ಇದೆ. ಮೊದಲನೆಯ ಪದ್ಯದಲ್ಲಿ—ಕವಿಯು ಸಂಧ್ಯಾಕಾಲದ ಪ್ರಕಾಶದ ಕೆಂಪುತನಕ್ಕೂ ಕರಗಳ ಉಪಸಂಹಾರಕ್ಕೂ ಉತ್ಪ್ರೇಕ್ಷಿಸಿದ ಕಾರಣಗಳು ವಿಚಿತ್ರವಾಗಿವೆ. ಯಥೇಚ್ಛವಾಗಿ ಊಟಮಾಡಿದವನು ಒಡನೆಯೆ ಭ್ರಮಣಮಾಡಿದರೆ ಅವನು ತಲೆತಿರುಗಿ ಪ್ರಾಂತಿಮಾಡಿಕೊಳ್ಳುವದು ಲೋಕಸ್ವಭಾವವಾಗಿದೆ. ಸೂರ್ಯನು ಆಕಾಶದಂಥ ವಿಸ್ತಾರವಾದ ಬೈಲಲ್ಲಿ ಉಂಡೊಡನೆ ತಿರುಗಹತ್ತಿದ್ದರಿಂದ ಅವನು ತಲೆತಿರುಗಿ ಕಾರಬೇಕಾಯಿತು. ಕಾರುವಾಗ ಮೋರೆಯು ಕೆಂಪಾಗುವದಷ್ಟೇ? ಹಾಗೆ ಸೂರ್ಯನೂ ಕೆಂಪಾಗಿದ್ದನು. ಮತ್ತು ಅವನು ಉಂಡ ಪದಾರ್ಥವು ಕಮಲಧೂಲಿಯು; ಅದು ಕೆಂಪಾಗಿದ್ದುದರಿಂದ ಸೂರ್ಯನು ಕಾರಿದ ಇಲ್ಲವೆ ಅವನಿಂದ ಹೊರಟ ಪ್ರಕಾಶವು ಕೆಂಪಗಿತ್ತೆಂದು ಹೇಳಲು ಶಕ್ಯವಾಗಿದೆ. ಮುಂದೆ— ಮನುಷ್ಯನಿಗೆ ಸಂಚಾರಮಾಡುವ ಕಾಲದಲ್ಲಿ ಕಾಲಲ್ಲಿ ಮುಳ್ಳು ನಡಲು ಅವನು ಅದನ್ನು ತೆಗೆಯುವದಕ್ಕೆ ಪಾದದ ಹತ್ತರಕ್ಕೆ ಕೈಯನ್ನು ತಂದು ಬಂಡೆಗೆ ಕುಳಿತುಕೊಳ್ಳುವಂತೆ ಸೂರ್ಯನು ಕಮಲವನದಲ್ಲಿ ಮುಳ್ಳು ನಡಲು ಅದನ್ನು ತೆಗೆಯುವದಕ್ಕೋ ಎಂಬಂತೆ ಇದುವರೆಗೆ ಚಾಚಿದ್ದ ಕರವನ್ನು ಹಿಂದೆಗೆಯುತ್ತ ಅಸ್ತಾಚಲದ ಮೇಲೆ ಕುಳಿತುಕೊಂಡನು. (ಸಶೇಷ).

M. P. Pnjar, Kannada Pundit.

ವಾಗ್ಭೂಷಣಂ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं वाग्भूषणम् भूषणम् ॥

(भर्तृहरिः)

ಸಂಪುಟ ೧೬.	ನವಂಬರ ೧೯೧೦.	ಸಂಚಿಕೆ ೪.

ಕವಿಕುಲಗುರುವಾದ ಕಾಲಿದಾಸನ ನೀತಿಯು.

ಪಂಡಿತರಾಜ ಜಗನ್ನಾಥ ಕವಿಗಳ ಅಭಿಪ್ರಾಯದಂತೆ ಧನಪ್ರಾಪ್ತಿ ಅಥವಾ ಪುತ್ರಪ್ರಾಪ್ತಿ ಇವುಗಳಿಂದುಂಟಾಗುವ ಆನಂದಕ್ಕಿಂತ ವಿಲಕ್ಷಣವಾದ ಆನಂದವು ಕಾವ್ಯದಿಂದುಂಟಾಗುತ್ತಿದೆ. ಮತ್ತಾವ ಲೌಕಿಕ ಆನಂದವೂ ಆ ಆನಂದವನ್ನು ಹೋಲಲಾರದು ಸಾಧಾರಣ ಜನರಿಗೆ ಅದರ ಕಲ್ಪನೆಯೂ ಬಾರದು. ಮನೋರಂಜನ ದ್ವಾರದಿಂದ ಸದುಪದೇಶ ಮಾಡುವದೇ ಕಾವ್ಯದ ಪ್ರಧಾನವಾದ ಪ್ರಯೋಜನವು. ಅಂತಃಕರುಣದೊಳಗಿನ ಕುವಿಚಾರಗಳನ್ನು ಕಿತ್ತಿಚಲ್ಲಿ, ಆ ಸ್ಥಳದಲ್ಲಿ ಸುವಿಚಾರಗಳ ಬೀಜಾರೋಪಣ ಮಾಡುವದು, ಮನುಷ್ಯನನ್ನು ದುರ್ಮಾರ್ಗದಿಂದ ತಿರುಗಿಸಿ ಸುಮಾರ್ಗಕ್ಕೆ ಹಚ್ಚುವದು, ಅದರಿಂದ ಇಹಪರಲೋಕಗಳ ಸುಖಗಳನ್ನೊದಗಿಸಿ ಕೊಡುವದು, ಇವೇ ಮೊದಲಾದವುಗಳಿಗೆ ಕಾವ್ಯದಂಥ ಉತ್ಕೃಷ್ಟವಾದ ಸಾಧನವು ಬೇರೊಂದಿಲ್ಲ; ಈ ಕಾರಣದಿಂದೇ ಕಾಲಿದಾಸ ಕವಿಗೆ ಪೌರ್ವಾತ್ಯ, ಪಾಶ್ಚಾತ್ಯ ಪಂಡಿತರಿಂದ ಕವಿಲೋಲಿಕೆಯಲ್ಲಿ ಅತ್ಯುಚ್ಚ ಸ್ಥಾನವು ದೊರೆತಿದೆ. ಕೆಲವು ಪಾಶ್ಚಾತ್ಯ ಪಂಡಿತರಂತೂ ಆತನಿಗೆ ಭರತಖಂಡದ ಶೆಕ್ಸ್‌ಪೀಅರನೆಂಬ ಯಥಾರ್ಥನಾಮವನ್ನು ಕೊಟ್ಟಿದ್ದಾರೆ. ಪ್ರಸ್ತುತ ಲೇಖದ ಉದ್ದೇಶವು ಕಾಲಿದಾಸನ ಕಾವ್ಯನಾಟಕಗಳೊಳಗಿನ ಗುಣವರ್ಣನವನ್ನು ಮಾಡುವದಿಲ್ಲ. ಆ ಗ್ರಂಥಗಳಲ್ಲಿ ಕವಿಯು ನೀತಿಬೋಧವನ್ನು ಮಾಡುವದಕ್ಕಾಗಿ ಎಂಥ ಮಾದರಿಗಳನ್ನು ವಾಚಕರ ಮುಂದೆ ತಂದಿರಿಸಿರುವನೆಂಬದನ್ನು ವಿವೇಚಿಸುವದಿದೆ.

ಸ್ಥೂಲವಾಸದಿಂದ ನೋಡಲಾಗಿ ನೀತಿಯು ನಾಲ್ಕು ಪ್ರಕಾರದ್ದಾಗಿ ತೋರುತ್ತದೆ:—ಗಿನೆಯದು ಆತ್ಮವಿಷಯಕವಾದ್ದು, ೨ನೆಯದು ಕೌಟುಂಬಿಕ, ೩ನೆಯದು ಸಾಮಾಜಿಕ, ೪ನೆಯದು ರಾಜಕೀಯವು.

ಆತ್ಮವಿಷಯಕ ನೀತಿಯೊಳಗೆ ಆತ್ಮರಕ್ಷಣ, ಆತ್ಮಹತ್ಯೆ ಮಾಡದಿರುವುದು, ಆರೋಗ್ಯರಕ್ಷಣ, ದ್ರವ್ಯಾರ್ಜನ, ವಿನಯಶೀಲತೆ, ಇಂದ್ರಿಯನಿಗ್ರಹ, ಮುಂತಾದ ಎಷ್ಟೋ ಸಂಗತಿಗಳ ಅಂತರ್ಭಾವವಾಗುತ್ತದೆ. ಆತ್ಮರಕ್ಷಣವೇ ಸಮಸ್ತ ಸಾಂಸಾರಿಕ ಕೃತ್ಯಗಳೆಂಬ ಕಟ್ಟಡಗಳ ಆಧಾರವು. ಈ ವಿಷಯವನ್ನು ಕವಿಯು ರಘುವಂಶದಲ್ಲಿ ದಿಲೀಪರಾಜನ ವರ್ಣನೆಯು ಪ್ರಸಂಗದಲ್ಲಿ ವಿಶದವಾಗಿ ಹೇಳಿದ್ದಾನೆ. ಆ ರಾಜನು ಸ್ವಸಂರಕ್ಷಣೆಯಲ್ಲಿ ಯಾವ ಭಯವನ್ನು ಮನಸ್ಸಿನಲ್ಲಿ ತರುತ್ತಿದ್ದಿಲ್ಲ. ಅದರಂತೆ ಕುಮಾರಸಂಭವದಲ್ಲಿ ಬಟುವೇಷವನ್ನು ಧರಿಸಿದ ಶಂಕರನು ತಪಶ್ಚರ್ಯೆಯಿಂದ ಶರೀರದ ಮೇಲೆ ಉದಾರಳಾದ ಪಾರ್ವತಿಗೆ "ಶರೀರವೇ ಧರ್ಮಕ್ಕೆ ಮುಖ್ಯ ಸಾಧನವಾದ್ದರಿಂದ ಅದನ್ನು ಉಪೇಕ್ಷಿಸಬೇಡ" ಎಂದು ಉಪದೇಶ ಮಾಡಿರುವನು. ಹಾಗೇ ವಸಿಷ್ಠ ಋಷಿಯ ಧೇನುವಾದ ನಂದಿನಿಯು ದಿಲೀಪ ರಾಜನಿಗೆ "ಅನೇಕ ಸುಖೋಪಭೋಗಗಳನ್ನು ಉಪಭೋಗಿಸಿತಕ್ಕ ನಿನ್ನ ಶರೀರವನ್ನು ಚನ್ನಾಗಿ ರಕ್ಷಿಸಿಕೋ" ಎಂದು ಸ್ಪಷ್ಟವಾಗಿ ಹೇಳಿರುತ್ತದೆ. ಇಂದುಮತೀ ಮರಣದಿಂದ ದುಃಖಿತನಾದ ಅಜರಾಜನಿಗೆ ವರತಂತು ಮುನಿಯ ಶಿಷ್ಯನು "ಭಾರ್ಯೆ ವಿಯೋಗ ದುಃಖದಿಂದ ಜೀವಕೂಡುವದು ದೊಡ್ಡ ಅವಿಚಾರವದೆ, ಜೀವಿತ ರಕ್ಷಣವೇ ನಿಜವಾದ ಪುರುಷಾರ್ಥವು." ಎಂದು ಮನಗಾಣಿಸಿ ಕೊಟ್ಟಿದ್ದಾನೆ.

ಇಂದುಮತಿಯ ನಿಧನಾನಂತರದಲ್ಲಿ ಅಜರಾಜನು ಕೆಲವು ಕಾಲದ ಮೇಲೆ ತನ್ನ ಪ್ರಾಣಕೊಟ್ಟನು. ಇದರಿಂದ ಪತ್ನಿಯಂತೆ ಪತಿಯಲ್ಲೂ ಪತ್ನೀಪ್ರೇಮವಿರಬೇಕೆಂಬದನ್ನೇ ಸೂಚಿಸಿದ್ದಾನೆ. ಶಂಕರನು ಕಾಮನನ್ನು ದಹಿಸಿದ ನಂತರ ಸಹಗಮನಕ್ಕೆ ಸಿದ್ಧಳಾದ ರತಿಗೆ, ಆಕಾಶವಾಣಿಯಿಂದ ಉಪದೇಶಮಾಡಿ ಸಹಗಮನವನ್ನು ನಿಲ್ಲಿಸಿದ್ದಾನೆ.

ರಘುವಂಶದೊಳಗಿನ ರಾಜರು ತಕ್ಕ ಕಾಲಗಳಲ್ಲೆದ್ದು ತಮ್ಮ ಕರ್ತವ್ಯಗಳನ್ನು ನೆರವೇರಿಸುತ್ತಿದ್ದರೆಂದು ವರ್ಣಿಸಿ, ಕವಿಯು ಅಪ್ರತ್ಯಕ್ಷ ರೀತಿಯಿಂದ ಪ್ರಾತಃಕಾಲದಲ್ಲಿ ತೀವ್ರ ಏಳುವದು ದೀರ್ಘಾಯುಷ್ಯಕ್ಕೆ ಕಾರಣವದೆ, ಎಂಬದನ್ನು ಸೂಚಿಸಿದ್ದಾನೆ. ಬೇಟೆಯಾಡುವದರಿಂದ ಆರೋಗ್ಯಾಭಿವೃದ್ಧಿಯಾಗುತ್ತದೆ, ಎಂಬ ವಿಷಯವನ್ನು ಸಚಿವರು ದಶರಥ ರಾಜನಿಗೆ ಬೋಧಿಸಿ, ಅತನಿಗೆ ಮೃಗಯಾಕ್ಕೆ ಅನುಮೋದನವನ್ನು ಕೊಟ್ಟರು. ಶಾಕುಂತಲದಲ್ಲಾದರೂ ಕವಿಯು ದುಷ್ಯಂತನ ಸೇನಾಪತಿಯ ಮುಖದಿಂದ ಬೇಟೆಯ ವರ್ಣನವನ್ನು ಮಾಡಿಸಿದ್ದಾನೆ. ಇದರಿಂದ ಕಾಲ

ಕಾಲಕ್ಕೆ ಏಳುವದರಿಂದಲೂ ಬೇಟಿಯಂಥ ಶ್ರಮದ ಕೆಲಸಗಳನ್ನು ಮಾಡುವದರಿಂದಲೂ ಆರೋಗ್ಯವುಂಟಾಗುವದೆಂಬ ಮಾತು ವಾಚಕರ ಧ್ಯಾನದಲ್ಲಿ ಬರುತ್ತಿದೆ

ಧನಾರ್ಜನೆ ಮಾಡುವದು ಮನುಷ್ಯನ ಕರ್ತವ್ಯದೊಳಗಿಂದೇ ಒಂದು ದ್ರವ್ಯಾರ್ಜನೆಯಿಂದಾ ಮನುಷ್ಯನಿಗೆ ಒಂದು ಪ್ರಕಾರದ ಬಲಬರುತ್ತದೆ, ಈ ಮಾತುಗಳಲ್ಲಿ ಕಾಲಿದಾಸನು ವಿಸ್ಮರಣೆ ಮಾಡಿಲ್ಲ. ಆದಾಗ್ಯೂ ದ್ರವ್ಯವನ್ನು ಕೇವಲ ಸ್ವೋಪಭೋಗಕ್ಕಾಗಿ ಗಳಿಸದೆ ಗಳಿಸಿದ ದ್ರವ್ಯದ ವಿನಯೋಗವನ್ನು ಪರೋಪಕಾರಾರ್ಥವಾಡಶಕ್ಕದ್ದು. ಈ ತತ್ವವು ರಘುವಂಶದಲ್ಲಿ ಎಷ್ಟೋ ಕಡೆಗೆ ಪ್ರತಿಪಾದಿಸಲ್ಪಟ್ಟಿದೆ. ಹೀಗೇ ಮೇಘದೂತದೊಳಗೆ ಒಂದು ಕಡೆಯಲ್ಲಿ ಕಾಲಿದಾಸನು " ದೊಡ್ಡವರ ದುಡ್ಡಿನ ಗಳಿಕೆಯು ಬಡವರ ಕಷ್ಟನಿವಾರಣಕ್ಕಾಗಿಯೇ ಸರಿ. " ಎಂದು ಸುಂದರವಾದ ಸ್ಮರಣೀಯ ವಾಕ್ಯವನ್ನು ಬರೆದಿಟ್ಟಿದ್ದಾನೆ,

ವಿನಯಶೀಲತೆಯು ಸರ್ವ ಗುಣಗಳಲ್ಲಿ ಶ್ರೇಷ್ಠವಾದದ್ದೂ ಮನುಷ್ಯನ ಎಲ್ಲ ಬಗೆಯ ಉನ್ನತಿಗೆ ಕಾರಣವಾದದ್ದೂ ಇದೆ. ವಿನಯವು ಒಂದಿಲ್ಲದಿದ್ದರೆ ಮನುಷ್ಯನ ಇತರ ಗುಣಗಳು ವಿಕಾಸ ಹೊಂದುವದಿಲ್ಲ; ವಿನಯದಿಂದೇ ಮಿಕ್ಕ ಗುಣಗಳಿಗೆ ಶೋಭೆಯುಂಟಾಗುತ್ತದೆ. ಕಾಲಿದಾಸನು ತನ್ನಲ್ಲಿ ಶಕ್ಯ ಗುಣಗಳಿಲ್ಲದೆ, ಸೂರ್ಯವಂಶ ವರ್ಣನದಂಥ ಮಹತ್ತರ ಕರ್ಮದಲ್ಲಿ ಪ್ರಸಕ್ತನಾದೆನಲ್ಲ, ಎಂಬ ವಿಷಯವನ್ನು ರಘುವಂಶದಲ್ಲಿ ಮೊದಲೇ ಪ್ರತಿಪಾದಿಸಿ, ತನ್ನಲ್ಲಿ ವಾಸಿಸುತ್ತಿದ್ದ ವಿನಯವನ್ನು ವಾಚಕರ ಲಕ್ಷಕ್ಕೆ ತಂದುಕೊಟ್ಟಿದ್ದಾನೆ. ರಘುರಾಜನು ಕಾಂಬೋಜ ರಾಜರನ್ನು ಗೆದ್ದು ಸಂಪತ್ತಿಯನ್ನು ಹರಣಮಾಡಿದರೂ ಅವರ ಗರ್ವವನ್ನು ಮಾತ್ರ ತರಲಿಲ್ಲವೆಂದು ವರ್ಣಿಸಿ, ಕವಿಯು ರಘುರಾಜನ ನಿಗರ್ವವನ್ನು ಚನ್ನಾಗಿ ತೋರಿಸಿದ್ದಾನೆ. ರಾಮನೂ ಅವರ ಬಂಧುಗಳೂ ಶಿಕ್ಷಣದಿಂದ ನೈಸರ್ಗಿಕ ವಿನಯವನ್ನು ಹೆಚ್ಚಿಸಿಕೊಂಡರು. ಲವಣಾಸುರನನ್ನು ಸಂಹರಿಸಿದಾಗ್ಗೆ ಋಷಿಗಳು ಭರತನನ್ನು ಕೊಂಡಾಡಲು ಅತನು ವಿನಯದಿಂದ ಮೋರೆಯನ್ನು ಕೆಳಗೆ ಮಾಡಿದನು. ತಾರುಣ್ಯ, ಸೌಂದರ್ಯ, ಸಂಪತ್ತು ಇವುಗಳಲ್ಲಿ ಒಂದೊಂದರಿಂದಾದರೂ ಮನುಷ್ಯನು ಉನ್ಮತ್ತನಾಗುತ್ತಾನೆ. ಅದರೆ ಅತಿಥಿಯೆಂಬ ರಾಜಸಲ್ಲಿ ಇವೆಲ್ಲವುಗಳಿದ್ದರೂ ಅತನ ಅಂತಃಕರಣಕ್ಕೆ ಗರ್ವವು ತಿಲಮಾತ್ರವಾದರೂ ಹತ್ತಲಿಲ್ಲ.

ವಿಚಾರಶಕ್ತಿಯಿಂದ ಮನೋವಿಕಾರಗಳನ್ನು ಸಾವರಿಸಿ ಹಿಡಿದುಕೊಳ್ಳುವದಕ್ಕೆ ಇಂದ್ರಿಯ ನಿಗ್ರಹವೆನ್ನುತ್ತಾರೆ. ಈ ಅನಾಮಾನ್ಯ ಗುಣದ ಉಲ್ಲೇಖವು ಕಾಲಿದಾಸನ ಗ್ರಂಥಗಳಲ್ಲಿ ಅಲ್ಲಲ್ಲಿ ಕಂಗೊಳಿಸುತ್ತದೆ. ಆತ್ಮನಿಗ್ರಹದ ಉದಾಹರಣವು ವಿಶೇಷವಾಗಿ ರಘುವಂಶದೊಳಗೇ ಕಂಡುಬರುತ್ತದೆ. ರಘುವಂಶದ ದಿಲೀಪಾದಿ ರಾಜರು ಕೇವಲ ವಂಶಾಭಿವೃದ್ಧಿಗಾಗಿ ವಿವಾಹವನ್ನು ಮಾಡಿಕೊಂಡರು. ಆತ್ಮನಿಗ್ರಹದ

ಉತ್ತಮವಾದ ಉದಾಹರಣವು ರಘುವಂಶದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಕೇವಲ ವಿಷಯಾಸಕ್ತನಾಗುವದರಿಂದ ಮನುಷ್ಯನು ರೋಗಿಯೂ ಅಲ್ಪಾಯುಷಿಯೂ ಐಹಿಕ ಸುಖಗ್ರಹಣಕ್ಕೆ ಅಪಾತ್ರನೂ ಆಗುವನೆಂಬದನ್ನು ಅಗ್ನಿವರ್ಣನ ವರ್ಣನದಿಂದ ಕಾಲಿದಾಸನು ಚೆನ್ನಾಗಿ ಬೋಧಿಸಿದ್ದಾನೆ.

ಸಮುದ್ರವಲಯಾಂಕಿತ ಪೃಥ್ವಿಯ ಸ್ವಾಮಿಯಾದ ದಿಲೀಪನು ತಮ್ಮ ಕುಲಗುರುಗಳಾದ ವಸಿಷ್ಠರ ಆಜ್ಞೆಯಿಂದ ಗೋಸೇವೆಯನ್ನು ಸ್ವೀಕರಿಸಿದನು. ಆಕಳಿವನ್ನು ಹಿಂಬಾಲಿಸಿ ವನಗಾವಿಗಳಂತೆ ತಿರುಗಾಡುವದು ಪಳಿತಲ್ಲವೆಂದು ಹಿಂಜರಿಯಲಿಲ್ಲ. ಇದರಲ್ಲೇನಿರುವದೆಂದು ಹೇತುವಾದವನ್ನವಲಂಬಿಸಿ ವಾಕ್ಚಲವನ್ನು ಮಾಡಲಿಲ್ಲ. ಅಲುಂದ ಆ ರಾಜನಿಗೆ ವಂಶಾಭಿವೃದ್ಧಿರೂಪ ಫಲವು ದೊರೆಕಿತು. ಪ್ರಾಣದಕಿಂತ ಗುರ್ವಾಜ್ಞೆಯು ಶ್ರೇಷ್ಠವೆಂದು ಅವನು ನಂದಿನೀ ವೃತ್ತಾಂತದಿಂದ ತೋರಿಸಿ ಕೊಟ್ಟಿದ್ದಾನೆ.

ಕಾಮುಂಬಿ ನೀತಿಯಲ್ಲಿ, ಪತಿಪತ್ನಿಯರ ಪರಸ್ಪರ ಪ್ರೀತಿಯು, ಸ್ತ್ರೀಯರ ಪಾತಿವ್ರತ್ಯವು, ಪುರುಷರ ಏಕಪತ್ನೀವ್ರತವು, ಮಕ್ಕಳ ವಿಷಯದಲ್ಲಿ ತಂದೆಯ ಕರ್ತವ್ಯವು, ಮಕ್ಕಳ ಪಿತೃಭಕ್ತಿಯು, ಬಂಧುಪ್ರೇಮ ಮುಂತಾದ ವಿಷಯಗಳು ಅಂತರ್ಭಾವ ವಾಗುತ್ತವೆ. ದಿಲೀಪ–ಸುದಕ್ಷಿಣಾ, ದುಷ್ಯಂತ–ಶಕುಂತಲಾ, ಅಜೇಂದುಮತೀ, ರಾಮಸೀತಾ, ಶಂಕರಪಾರ್ವತೀ ಈ ದಂಪತಿಗಳ ವರ್ಣನದಲ್ಲಿ ಕಾಲಿದಾಸನು ಪತಿಪತ್ನಿಯರ ನಿಜವಾದ ಪ್ರೇಮದ ಮಾದರಿಯನ್ನೇ ಚೆನ್ನಾಗಿ ತೋರಿಸಿದ್ದಾನೆ. ಅಜ. ಹಾಗು ರಾಮಚಂದ್ರ ಇವರ ಉದಾಹರಣದಿಂದ ಏಕಪತ್ನೀವ್ರತದ ಮಹತ್ವವನ್ನು ಕವಿಯು ಸ್ಫುಟವಾಗಿ ವಿವರಿಸಿದ್ದಾನೆ.

ಸೂರ್ಯವಂಶದ ರಾಜರೆಲ್ಲ ಬಾಲ್ಯದೊಳಗೇ ಉತ್ತಮ ಶಿಕ್ಷಕರಿಂದ ವಿದ್ಯಾಸಂಪಾದನೆಯನ್ನು ಮಾಡುತ್ತಿದ್ದರು. ಅವರ ಶಿಕ್ಷಣವು ಏಕದೇಶೀಯವಾಗದೆ, ರಾಜನೀತಿ ಧನುರ್ವಿದ್ಯಾ ಲೌಕಿಕ ಜ್ಞಾನ ಇವುಗಳಿಂದ ಕೂಡಿದ್ದಾಗಿತ್ತು. ಅಜನು ತನ್ನ ಪ್ರಿಯಪತ್ನಿಯ ಮರಣದನಂತರದಲ್ಲಿ ವಿಳಂಬವಿಲ್ಲದೆ ಜೀವಧಾರಣ ಮಾಡಿದ್ದು ತನ್ನ ಅಲ್ಪ ವಯಸ್ಸಿನ ಪುಮಾರನಾದ ದಶರಥನ ಶಿಕ್ಷಣದ ದೆಸೆಯಿಂದೇ ಎಂದು ಹೇಳಬಹುದು. ರಾಮ ಲಕ್ಷ್ಮಣಾದಿಗಳು ತಮ್ಮ ವಿವಾಹದ ಪೂರ್ವದಲ್ಲೇ ವಿದ್ಯಾಸಂಪನ್ನರಾಗಿದ್ದರು. ಇವರ ಪಿತೃಭಕ್ತಿಯು ಹೊಗಳುವಂಥದಿತ್ತು. ಪಟ್ಟಾಭಿಷೇಕದ ಮೊಹೂರ್ತವು ನಿಶ್ಚಯವಾಗಿದ್ದಾಗ್ಯೂ ಅದನ್ನು ಬಿಟ್ಟು ಪಿತ್ರಾಜ್ಞೆಯಿಂದ ಗಹನವಾದ ವನವಾಸಕ್ಕೆ ರಾಮಚಂದ್ರನು ಆನಂದದಿಂದ ಹೊರಟದ್ದು ಸಾಧಾರಣ ಮಾತಲ್ಲ.

ರಾಮಲಕ್ಷ್ಮಣ ಭರತಶತ್ರುಘ್ನರು ಚಿಕ್ಕಂದಿನಲ್ಲಿ ಕೂಡ ಎಂದೂ ಬಡಿದಾಡದೆ, ಪರಸ್ಪರ ಪ್ರೇಮಭಾವದಿಂದ ನಡೆದುಕೊಳ್ಳುತ್ತಿದ್ದರು. ಒಬ್ಬನು ವನವಾಸಕ್ಕೆ ಹೋದರೆ ಮತ್ತೊಬ್ಬನು ಸಂತೋಷದಿಂದ ರಾಜಪದಕ್ಕೆ ಹಪಹಪಿಸಲಿಲ್ಲ. ತನ್ನ ತಾಯಿಯು ಅಘಟಿತಘಟನಾ ನಾಹಸವನ್ನು ಮಾಡಿ ತನ್ನ ಮುಂದೆ ತಂದಿರಿಸಿದ ರಾಜ್ಯದ ಎಡೆಯನ್ನು ಕುಮಾರ ಭರತನು ಕಾಲಿನಿಂದೊದ್ದು ತಪಸ್ವಿಯಾದನು. ಈ ರಾಜಕುಮಾರರಲ್ಲಿ ಉದರಭೇದವಿದ್ದರೂ ಅವರು ಏಕೋದರ ಬಂಧುಗಳಂತೆ ಅತ್ಯಂತ ಪ್ರೀತಿಯಿಂದ ಎಲ್ಲರೂ ನಡೆದುಕೊಳ್ಳುತ್ತಿದ್ದರು. ಇದರಿಂದ ಕಾಲಿದಾಸನು ಬಂಧುಪ್ರೇಮವನ್ನು ಜನ್ಮಾಗಿ ವ್ಯಕ್ತಪಡಿಸಿದ್ದಾನೆ.

ರಘುಕುಲದ ರಾಜರು ಮಿತಭಾಷಣಿಗಳಾಗಿದ್ದರು. ಬಹು ಭಾಷಣದಲ್ಲಿ ಸತ್ಯಾಂಶವು ಕಡಿಮೆ ಇರಬಹುದೆಂದು ಕವಿಯು ಅವರ ಈ ಗುಣವನ್ನು ವರ್ಣಿಸಿರುತ್ತಾನೆ. ದಶರಥರಾಜನು ಸತ್ಯಭಾಷಣದಲ್ಲಿ ಪ್ರಸಿದ್ಧನಾಗಿದ್ದನು. ತನ್ನ ಹೆಂಡತಿಗೆ ಕೊಟ್ಟ ವಚನದ ದೆಸೆಯಿಂದ ತನ್ನ ಪ್ರಿಯ ಜ್ಯೇಷ್ಠ ಪುತ್ರನನ್ನು ವನಕ್ಕೆ ಕಳುಹಿಸಿದನು. ರಘುಕುಲದ ರಾಜರ ಹತ್ತಿರ ಬಂದ ಯಾಚಕರು ನಿಷ್ಫಲರಾಗಿ ಎಂದೂ ಹೋಗುತ್ತಿರಲಿಲ್ಲ. ಜೀವವನ್ನಾದರು ಕೊಟ್ಟೇವು, ಯಾಚಕರನ್ನು ನಿರಾಶ ಮಾಡಲಿಕ್ಕಿಲ್ಲವೆಂದು ಅವರ ಪ್ರತಿಜ್ಞೆ ಇತ್ತು. ಅದರಾತಿಥ್ಯಗಳೂ ಶಿಷ್ಟಾಚಾರಗಳೂ ಕಾಳಿದಾಸನಿಂದ ಉತ್ತಮ ರೀತಿಯಿಂದ ವರ್ಣಿತವಾಗಿವೆ. ಕುಮಾರಸಂಭವದಲ್ಲಿ ಅರಣ್ಯದಲ್ಲಿ ಬಾರ್ವತಿಗೆ ಶಂಕರನು ಬೆಟ್ಟವಾದದ್ದೂ ಅವರ ಸಂಭಾಷಣವೂ ಓದುವವರ ಮನಸ್ಸನ್ನು ತಲ್ಲೀನ ಮಾಡಿಬಿಡುತ್ತವೆ. ವಿಕ್ರಾಂತದೊಳಗಾದರೂ ಪರಕೀಯ ಕುಮಾರಿಕೆಯರ ಕೂಡ ಎಷ್ಟು ಜಿಪ್ಪಿಸಿ ಮಾತಾಡತಕ್ಕದ್ದು ಎಂಬದನ್ನು ಶಂಕರನ ಭಾಷಣದಿಂದಲೂ, ಪರಕೀಯ ತರುಣರಗೂಡ ಮಾತಾಡುವಾಗ ಎಷ್ಟು ಮರ್ಯಾದೆಯನ್ನು ಕಾಯ್ದು ಅನ್ಯರ ಮುಖಾಂತರ ಮಾತಾಡಬೇಕೆಂಬ ವಿಷಯವನ್ನು ಶೈಲ ರಾಜ ಕುಮಾರಿಯ ಭಾಷಣದಿಂದಲೂ ತಿಳಿದುಕೊಳ್ಳಬಹುದು. ಇದರಿಂದ ಕವಿಯ ನಾಮಾಂಕಿತ ನೀತಿಯು ದಿಗ್ದರ್ಶನವಾಗುತ್ತದೆ.

ಕಾಲಿದಾಸನಿಂದ ವರ್ಣಿಸಲ್ಪಟ್ಟ ರಾಜರೆಲ್ಲ ಬಹಳ ನೀತಿವಂತರಿದ್ದರು. ಅವರು ಯುದ್ಧದಲ್ಲಿ ಜಯಶ್ರೀಗಿಂತ ಹೆಚ್ಚು ಮಹತ್ವವನ್ನು ಯಾವದಕ್ಕೂ ಕೊಡುತ್ತಿದ್ದಿಲ್ಲ. ಕರಹಾಗತರಾದ ಶತ್ರುಗಳ ಮೇಲೆ ಒಳ್ಳೆ ಅಂಕುಶವನ್ನು ಮಾಡುತ್ತಿದ್ದರು. ತಮ್ಮಿಂದ ಸೋತ ರಾಜಮಸ್ತಕಸಮೂಹವನ್ನು ಮುಂದಿ ತರುವದಕ್ಕೂ ಅವರು ಯುತ್ತಿಸುತ್ತಿದ್ದರು. ಶೌರ್ಯಕ್ಕೆ ನಿಜವಾದ ನೀತಿಯೇ ಭೂಷಣವೆಂದು ಕವಿಯು ಅಲ್ಲಲ್ಲಿ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾನೆ. ಮತ್ತು ನೀತಿರಹಿತವಾದ ಶೌರ್ಯವು ದಿಂಸ್ರಪಶುಗಳ ಕ್ರೌರ್ಯಕ್ಕೆ ಸಮಾನವಾಗಿದ್ದು ಶೌರ್ಯಸಹಿತ ನೀತಿಯು, ದೇವರು ಅಪೇಕ್ಷಿತ

ಉತ್ತಮವಾದ ಉದಾಹರಣವು ರಘುವಂಶದಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಕೇವಲ ವಿಷಯಾಸಕ್ತನಾಗುವದರಿಂದ ಮನುಷ್ಯನು ರೋಗಿಯೂ ಅಲ್ಪಾಯುಷಿಯೂ ಐಹಿಕ ಸುಖಗ್ರಹಣಕ್ಕೆ ಅಪಾತ್ರನೂ ಆಗುವನೆಂಬದನ್ನು ಅಗ್ನಿವರ್ಣನ ವರ್ಣನದಿಂದ ಕಾಲಿದಾಸನು ಚನ್ನಾಗಿ ಬೋಧಿಸಿದ್ದಾನೆ.

ಸಮುದ್ರವಲಯಾಂಕಿತ ಪೃಥ್ವಿಯ ಸ್ವಾಮಿಯಾದ ದಿಲೀಪನು ತಮ್ಮ ಕುಲಗುರುಗಳಾದ ವಸಿಷ್ಟರ ಆಜ್ಞೆಯಿಂದ ಗೋಸೇವೆಯನ್ನು ಸ್ವೀಕರಿಸಿದನು. ಆಕಳಿವನ್ನು ಹಿಂಬಾಲಿಸಿ ದನಗಾವಿಗಳಂತೆ ತಿರುಗಾಡುವದು ವಳಿತಲ್ಲವೆಂದು ಹಿಂಜರಿಯಲಿಲ್ಲ. ಇದರಲ್ಲೇನಿರುವದೆಂದು ಹೇತುವಾದವನ್ನವಲಂಬಿಸಿ ವಾಕ್ಚಲವನ್ನು ಮಾಡಲಿಲ್ಲ. ಅದರಿಂದ ಆ ರಾಜನಿಗೆ ವಂಶಾಭಿವೃದ್ಧಿರೂಪ ಫಲವು ದೊರಕಿತು. ಪ್ರಾಣದಕಿಂತ ಗುರ್ವಾಜ್ಞೆಯು ಶ್ರೇಷ್ಠವೆಂದು ಅವನು ನಂದೀನೀ ವೃತ್ತಾಂತದಿಂದ ತೋರಿಸಿಕೊಟ್ಟಿದ್ದಾನೆ.

ಕೌಟುಂಬಿಕ ನೀತಿಯಲ್ಲಿ, ಪತಿಪತ್ನಿಯರ ಪರಸ್ಪರ ಪ್ರೀತಿಯು, ಸ್ತ್ರೀಯರ ಪಾತಿವ್ರತ್ಯವು, ಪುರುಷರ ಏಕಪತ್ನೀವ್ರತವು, ಮಕ್ಕಳ ವಿಷಯಲ್ಲಿ ತಂದೆಯ ಕರ್ತವ್ಯವು, ಮಕ್ಕಳ ಪಿತೃಭಕ್ತಿಯು, ಬಂಧುಪ್ರೇಮ ಮುಂತಾದ ವಿಷಯಗಳು ಅಂತರ್ಭಾವವಾಗುತ್ತವೆ. ದಿಲೀಪ--ಸುದಕ್ಷಿಣಾ, ದುಷ್ಯಂತ--ಶಕುಂತಲಾ, ಅಜೇಂದುಮತೀ, ರಾಮಸೀತಾ, ಶಂಕರಪಾರ್ವತೀ ಈ ದಂಪತಿಗಳ ವರ್ಣನದಲ್ಲಿ ಕಾಲಿದಾಸನು ಪತಿಪತ್ನಿಯರ ನಿಜವಾದ ಪ್ರೇಮದ ಮಾದರಿಯನ್ನೇ ಚನ್ನಾಗಿ ತೋರಿಸಿದ್ದಾನೆ. ಅಜ ಹಾಗು ರಾಮಚಂದ್ರ ಇವರ ಉದಾಹರಣದಿಂದ ಏಕಪತ್ನೀವ್ರತದ ಮಹತ್ವವನ್ನು ಕವಿಯು ಸ್ಫುಟವಾಗಿ ವಿವರಿಸಿದ್ದಾನೆ.

ಸೂರ್ಯವಂಶದ ರಾಜರೆಲ್ಲ ಬಾಲ್ಯದೊಳಗೇ ಉತ್ತಮ ಶಿಕ್ಷಕರಿಂದ ವಿದ್ಯಾಸಂಪಾದನೆಯನ್ನು ಮಾಡುತ್ತಿದ್ದರು. ಅವರ ಶಿಕ್ಷಣವು ಏಕದೇಶೀಯವಾಗದೆ, ರಾಜನೀತಿ ಧನುರ್ವಿದ್ಯಾ ಲೌಕಿಕ ಜ್ಞಾನ ಇವುಗಳಿಂದ ಕೂಡಿದ್ದಾಗಿತ್ತು. ಅಜನು ತನ್ನ ಪ್ರಿಯಪತ್ನಿಯ ಮರಣದನಂತರದಲ್ಲಿ ಏಳೆಂಟು ವರುಷ ಜೀವಧಾರಣ ಮಾಡಿದ್ದು ತನ್ನ ಅಲ್ಪ ವಯಸ್ಸಿನ ಕುಮಾರನಾದ ದಶರಥನ ಶಿಕ್ಷಣದ ದೆಸೆಯಿಂದೇ ಎಂದು ಹೇಳಬಹುದು. ರಾಮ ಲಕ್ಷ್ಮಣಾದಿಗಳು ತಮ್ಮ ವಿವಾಹದ ಪೂರ್ವದಲ್ಲೇ ವಿದ್ಯಾಸಂಪನ್ನರಾಗಿದ್ದರು. ಇವರ ಪಿತೃಭಕ್ತಿಯು ಹೊಗಳುವಂಥದಿತ್ತು. ಪಟ್ಟಾಭಿಷೇಕದ ಮೂಹೂರ್ತವು ನಿಶ್ಚಯವಾಗಿದ್ದಾಗ್ಯೂ ಅದನ್ನು ಬಿಟ್ಟು ಪಿತ್ರಾಜ್ಞೆಯಿಂದ ಗಹನವಾದ ವನವಾಸಕ್ಕೆ ರಾಮಚಂದ್ರನು ಆನಂದದಿಂದ ಹೊರಟದ್ದು ಸಾಧಾರಣ ಮಾತಲ್ಲ.

ರಾಮಲಕ್ಷ್ಮಣ ಭರತಶತ್ರುಘ್ನರು ಚಿಕ್ಕಂದಿನಲ್ಲಿ ಕೂಡ ಎಂದೂ ಒಡಿದಾಡದೆ, ಪರಸ್ಪರ ಪ್ರೇಮಭಾವದಿಂದ ನಡೆದುಕೊಳ್ಳುತ್ತಿದ್ದರು. ಒಬ್ಬನು ವನವಾಸಕ್ಕೆ ಹೋದರೆ ಮತ್ತೊಬ್ಬನು ಸಂತೋಷದಿಂದ ರಾಜಪದಕ್ಕೆ ಹಪಹಪಿಸಲಿಲ್ಲ. ತನ್ನ ತಾಯಿಯು ಅಘಟಿತಘಟನಾ ಸಾಹಸವನ್ನು ಮಾಡಿ ತನ್ನ ಮುಂದೆ ತಂದಿರಿಸಿದ ರಾಜ್ಯದ ಎಡೆಯನ್ನು ಕುಮಾರ ಭರತನು ಕಾಲಿನಿಂದೊದ್ದು ತಪಸ್ವಿಯಾದನು. ಈ ರಾಜಕುಮಾರರಲ್ಲಿ ಉದರಭೇದವಿದ್ದರೂ ಅವರು ಏಕೋದರ ಬಂಧುಗಳಂತೆ ಅತ್ಯಂತ ಪ್ರೀತಿಯಿಂದ ಎಲ್ಲರೂ ನಡೆದುಕೊಳ್ಳುತ್ತಿದ್ದರು. ಇದರಿಂದ ಕಾಲಿದಾಸನು ಬಂಧುಪ್ರೇಮವನ್ನು ಚನ್ನಾಗಿ ವ್ಯಕ್ತಮಾಡಿದ್ದಾನೆ.

ರಘುಕುಲದ ರಾಜರು ಮಿತಭಾಷಣಿಗಳಾಗಿದ್ದರು. ಬಹು ಭಾಷಣದಲ್ಲಿ ಸತ್ಯಾಂಶವು ಕಡಿಮೆ ಇರಬಹುದೆಂದು ಕವಿಯು ಅವರ ಈ ಗುಣವನ್ನು ವರ್ಣಿಸಿರುತ್ತಾನೆ. ದಶರಥರಾಜನು ಸತ್ಯಭಾಷಣದಲ್ಲಿ ಪ್ರಸಿದ್ಧನಾಗಿದ್ದನು. ತನ್ನ ಹೆಂಡತಿಗೆ ಕೊಟ್ಟ ವಚನದ ದೆಸೆಯಿಂದ ತನ್ನ ಪ್ರಿಯ ಜ್ಯೇಷ್ಠ ಪುತ್ರನನ್ನು ವನಕ್ಕೆ ಕಳುಹಿಸಿದನು. ರಘುಕುಲದ ರಾಜರ ಹತ್ತರ ಬಂದ ಯಾಚಕರು ವಿಮುಖರಾಗಿ ಎಂದೂ ಹೋಗುತ್ತಿರಲಿಲ್ಲ. ಜೀವವನ್ನಾದರು ಕೊಟ್ಟೇವು, ಯಾಚಕರನ್ನು ನಿರಾಶ ಮಾಡಲಿಕ್ಕಿಲ್ಲವೆಂದು ಅವರ ಪ್ರತಿಜ್ಞೆ ಇತ್ತು. ಅದರಾತಿಥ್ಯಗಳೂ ಶಿಷ್ಟಾಚಾರಗಳೂ ಕಾಳಿದಾಸನಿಂದ ಉತ್ತಮ ರೀತಿಯಿಂದ ವರ್ಣಿತವಾಗಿವೆ. ಕುಮಾರಸಂಭವದಲ್ಲಿ ಅರಣ್ಯದಲ್ಲಿ ಪಾರ್ವತಿಗೆ ಶಂಕರನು ಬೆಟ್ಟಿಯಾದದ್ದೂ ಅವರ ಸಂಭಾಷಣವೂ ಓದುವವರ ಮನಸ್ಸನ್ನು ತಲ್ಲೀನ ಮಾಡಿಬಿಡುತ್ತವೆ. ಏಕಾಂತದೊಳಗಾದರೂ ಪರಕೀಯ ಕುಮಾರಿಕೆಯರ ಕೂಡ ಎಷ್ಟು ಜಪ್ಪಿಸಿ ಮಾತಾಡತಕ್ಕದ್ದು ಎಂಬದನ್ನು ಶಂಕರನ ಭಾಷಣದಿಂದಲೂ, ಪರಕೀಯ ತರುಣರಗೂಡ ಮಾತಾಡುವಾಗ ಎಷ್ಟು ಮರ್ಯಾದೆಯನ್ನು ಕಾಯ್ದು ಅನ್ಯರ ಮುಖಾಂತರ ಮಾತಾಡಬೇಕೆಂಬ ವಿಷಯವನ್ನು ಶೈಲ ರಾಜಕುಮಾರಿಯ ಭಾಷಣದಿಂದಲೂ ತಿಳಿದುಕೊಳ್ಳಬಹುದು. ಇದರಿಂದ ಕವಿಯು ಸಾಮಾಜಿಕ ನೀತಿಯ ದಿಗ್ದರ್ಶನವಾಗುತ್ತದೆ.

ಕಾಲಿದಾಸನಿಂದ ವರ್ಣಿಸಲ್ಪಟ್ಟ ರಾಜರೆಲ್ಲ ಬಹಳ ನೀತಿವಂತರಿದ್ದರು. ಅವರು ಯುದ್ಧದಲ್ಲಿ ಜಯಕ್ಕಿಂತ ಹೆಚ್ಚು ಮಹತ್ವವನ್ನು ಯಾವದಕ್ಕೂ ಕೊಡುತ್ತಿದ್ದಿಲ್ಲ. ಶರಣಾಗತರಾದ ಶತ್ರುಗಳ ಮೇಲೆ ಬಹಳ ಅಂತಃಕರಣ ಮಾಡುತ್ತಿದ್ದರು. ತಮ್ಮಿಂದ ಸೋತ ರಾಜಮನೆತನಗಳನ್ನು ಮುಂದೆ ತರುವದಕ್ಕೂ ಅವರು ಯತ್ನಿಸುತ್ತಿದ್ದರು. ಶೌರ್ಯಕ್ಕೆ ನಿಜವಾದ ನೀತಿಯೇ ಭೂಷಣವೆಂದು ಕವಿಯು ಅಲ್ಲಲ್ಲಿ ಅಭಿಪ್ರಾಯವನ್ನು ವ್ಯಕ್ತಮಾಡಿದ್ದಾನೆ. ಮತ್ತು ನೀತಿವಿರಹಿತವಾದ ಶೌರ್ಯವು ಹಿಂಸ್ರಪಶುಗಳ ಕ್ರೌರ್ಯಕ್ಕೆ ಸರಿಯಾಗಿದೆ; ಶೌರ್ಯವಿಲ್ಲದ ನೀತಿಯು ಕೇವಲ ಅಶಕ್ತತನವು;

ಎಂದು ವರ್ಣಿಸಿರುವನು. ಪ್ರಜೆಯಿಂದ ತೆಗೆದುಕೊಳ್ಳಲ್ಪಟ್ಟ ಕರದ್ರವ್ಯವು ಅವರ ಕಲ್ಯಾಣಕ್ಕಾಗಿಯೇ ವ್ಯಯಮಾಡಲ್ಪಡುತ್ತಿತ್ತು. ಆ ಕಾಲದ ರಾಜರು ನ್ಯಾಯನಿರ್ಣಯವನ್ನು ಸ್ವತಃ ಕೈಕೊಂಡು ನಿಗ್ರಹಾನುಗ್ರಹಗಳನ್ನು ಮಾಡುತ್ತಿದ್ದರು. ಅದರಿಂದೇ " ಪ್ರಜಾರಂಜನದಿಂದ ರಾಜನು ರಾಜಸೇನಿಸಿಕೊಳ್ಳುತ್ತಾನೆ " ಎಂಬ ಮಾತು ಕಾಳಿದಾಸನಿಂದ ಪ್ರತಿಪಾದಿಸಲ್ಪಟ್ಟಿದೆ. ರಾಜರ ಇಂಥ ಉತ್ಕೃಷ್ಟವಾದ ವರ್ತನದಿಂದ ಪ್ರಜರು ರಾಜನಿಷ್ಠರಾಗಿ ರಾಜರ ಸುಖದುಃಖಗಳಿಗೆ ಪಾಲುಗಾರರಾಗಿದ್ದರು. ಅಜರಾಜನು ಪ್ರಜಾಪಾಲನವು ನನ್ನ ಕರ್ತವ್ಯವಾದದರಿಂದ ನಾನು ಬದುಕಬೇಕಾಗಿದೆ ಎಂದು ವಿಚಾರಿಸಿ, ಪತ್ನೀವಿಯೋಗಾನಂತರ ತೀವ್ರದಿಂದ ದೇಹತ್ಯಾಗವನ್ನು ಮಾಡಲಿಲ್ಲ. ದೇಹವು ದೇಹಧಾರಣವು ಬಹ್ವಂಶದಿಂದ ಪರೋಪಕಾರಕ್ಕಾಗಿಯೇ ಇದೆ, ಎಂಬ ಮಾತು ಇತರ ಕವಿಗಳ ಗ್ರಂಥಗಳಲ್ಲಿ ಸಿಗುವದು ದುರ್ಲಭವು.

ಇದು ಕಾಲಿದಾಸ ಕವಿಯ ಕಾವ್ಯಗಳೊಳಗಿನ ನೀತಿಯ ದಿಗ್ದರ್ಶನ ಮಾತ್ರವೆಂದು ವಾಚಕರು ತಿಳಿಯುತಕ್ಕದ್ದು. ಕಾಳಿದಾಸನ ಮೂಲ ಗ್ರಂಥಾವಲೋಕನದಿಂದುಂಟಾಗುವ ಮನೋಭಾವವನ್ನು ಪೂರ್ಣವಾಗಿ ಕನ್ನಡದಲ್ಲಿ ವ್ಯಕ್ತ ಮಾಡುವದು ನಮ್ಮಂಥವರಿಗೆ " **प्रांशुलभ्ये फलेमोहादुद्बाहुरिवावामनः** " ಎಂಬಂತೆಯೇ ಸರಿ.

Narasinhachary Kavyanand.

ವಿನೋದ.

ಮಗೆ—ಅಪ್ಪಾ, ನಾನು ಎತ್ತಿನ ಮೇಲೆ ಯಾಕೆ ಕೂಡ್ಬಾರದೊ?

ತಂಡೆ—ಎತ್ತಿನ ಮೇಲೆ ಕೂತರೆ ಪುನಃ ಮುಂಜೀ ಮಾಡಿಕೊಳ್ಳಬೇಕಾಗುವದು.

ಮಗೆ—ಹಾಗಾದರೆ ಈಶ್ವರನು ಯಾವಾಗಲೂ ಎತ್ತಿನ ಮೇಲೆ ಕೂತಿರುವನಲ್ಲ! ಆವನಿಗೆ ಮುಂಜೀ ಯಾರು ಮಾಡುವರು?

* * *

ಗುಂಡೇರಾಯ—ಅಜ್ಜೀಬಾಯಿ ತುಪ್ಪ ಹಾಕಿರಿ ಊಟಕ್ಕೆ ಕೂಡುವೆನು.

ಅಜ್ಜೀಬಾಯಿ— ಮತ್ಯಾಕೆ ತುಪ್ಪ ಹಾಕುವದು? ತುಪ್ಪ ಹಾಕಿ ಎಷ್ಟೋ ಹೊತ್ತಾಯಿತು.

ಗುಂಡೇರಾಯ—ತುಪ್ಪ ಹಾಕಿದ್ದರೆ ಇನ್ನೂ ಕೆಟ್ಟ ನಾತವೇಕ ಬರಲೊಲ್ಲದು?

* * *

ಡಾಕ್ಟರರು—ಯಾಕೆ? ರಂಗಾಚಾರ್ಯರೇ, ನಮ್ಮಲ್ಲಿ ಔಷಧ ತೆಗೆದುಕೊಳ್ಳಲಿಕ್ಕೆ ಬರುವದನ್ನು ಬಿಟ್ಟರಿ.

ರಂಗಾಚಾರ್ಯರು—ಈಗ ಪಕ್ಷಮಾಸ ಮಹಾರಾಯಾ—ನೀವು ಏನಾದರೂ ಪಥ್ಯ ಹೇಳಬಹುದೆಂದು ಅಂಜಿಕೊಂಡು ನಿಮ್ಮಲ್ಲಿ ಬರುವದನ್ನು ಬಿಟ್ಟರುವೆನು.

ಸುಂದರಿ.

ತಿರುಮಲರಾಯನಿಗೆ ಒಬ್ಬಳೇ ಮಗಳು. ಅವಳ ಹೆಸರು ಸುಂದರಿ. ಹೆಸರು ಅನ್ವರ್ಥಕವಾದದ್ದು. ಅವಳಿಗೀಗ ಆರನೆಯ ವರುಷ. ಈಗಾಗಲೇ ಮೊದಲನೇ ಇಯತ್ತೆಯಲ್ಲಿ ಪಾಸಾಗಿದ್ದಳು. ಸೂಕ್ಷ್ಮಬುದ್ಧಿಯ ಹುಡುಗಿ. ಯಾರನ್ನೂ ದ್ವೇಷಿಸುತ್ತಿದ್ದಿಲ್ಲ. ಅಕೆಯನ್ನು ಕಂಡರೆ ಮಾಸ್ತರರಿಗೆ ಪರಮಾನಂದ. ಒಂದು ದಿನ ಸಾಲೆಗೆ ಬರದಿದ್ದರೆ ತೀರಿತು; ಮಾರನೆಯ ದಿನವೇ ಕರೆಯಲಿಕ್ಕೆ ಕಳುಹಿಸುತ್ತಿದ್ದರು.

ತಿರುಮಲರಾಯನು ಬಡವ. ಆಸ್ತೆವೃತ್ತಿಗಳೇನೂ ಇದ್ದಿಲ್ಲ. ಭಿಕ್ಷೆಯೇ ಅವನ ಮುಖ್ಯೋದ್ಯೋಗವೆಂದರೂ ಅಡ್ಡಿಯಿಲ್ಲ. ಸಂಸಾರವೂ ಸಣ್ಣದು; ಮನೆಯಲ್ಲಿ ಮಗಳು ಒಬ್ಬಳೇ ಇದ್ದಳು. ವಿಧುರನಾಗಿ ಕಳೆದ ನಾಗರಪಂಚಮಿಗೆ ಐದು ವರುಷವಾಗಿ ಹೋಗಿತ್ತು. ಆಗಲೇ ಊರನ್ನು ಬಿಟ್ಟು ಎಲ್ಲಿಗಾದರೂ ಹೋಗಿಬಿಡಬೇಕೆಂದು ಯೋಚಿಸಿದ್ದನು. ಆದರೆ ಎಳೆಗೂಸನ್ನೇ ಕಟ್ಟಿಕೊಂಡು ಎಲ್ಲಿಗೂ ಹೋಗಲಾರದೆ ಅಲ್ಲೇ ಉಳಿದುಕೊಂಡಿದ್ದನು. ಈಗ ಸುಂದರಿಯು ಆರು ವರುಷದವಳಾಗಿದ್ದಳು.

ಒಂದುದಿನ ಮಧ್ಯಾನ್ಹದ ಮೂರು ಘಂಟೆಯ ಸಮಯದಲ್ಲಿ ತಿರುಮಲರಾಯನು ತನ್ನ ಮನೆಯಲ್ಲಿ ಕುಳಿತಿದ್ದನು. ಆಗ ತಲೆಬಾಗಿಲಲ್ಲಿ ಯಾರೋ ಕರೆಯುವ ಹಾಗೆ ಕೇಳಿಸಿತು. ಹೊರಗೆ ಬಂದು ನೋಡಲಾಗಿ ನೆರೆಮನೆಯ ಮುದುಕಿ ಗಂಗಮ್ಮನು "ತಿಮ್ಮಲಾ, ತಿಮ್ಮಲಾ" ಎಂದು ಒದರುತ್ತ ತಲೆಬಾಗಿಲಲ್ಲಿ ನಿಂತಿದ್ದಳು. ತಿರುಮಲರಾಯನು ಅವಳ ಹತ್ತರ ಹೋದನು. ಗಂಗಮ್ಮನು ಬಿರುಸುಡಿಯನ್ನಾಡುತ್ತ, "ತಿಮ್ಮಲಾ ನಾಳಿನಿಂದ ಸುಂದರಿಗುನ್ನು ಸಾಲೆಗೆ ಕಳುಹಿಸಬೇಡ. ನನ್ನಾಣೆಯಿದೆ. ನಾನು ಆ ಮುಂಡೆಯರ ಬೈಗಳನ್ನು ಕೇಳಲಾರೆನು. ಬಡವನ ಮಗಳಿಗೆ ಸಾಲೆಯ್ಯ ಬರಹವ್ವ ಯಾಕೆಂದು ಕೇಳುತ್ತಾರೆ. ನಾಳೆಗೆ ನಾಹೇಬನ ಹೆಂಡತಿಯಾಗಿ ಹೋಗುತ್ತಾಳೆಂದೂ ಹೇಳುತ್ತಾರೆ. ಇನ್ನೂ ನೂರಾರು ಹೇಳುತ್ತಾರೆ. ಅದನ್ನೆಲ್ಲಾ ನಾನು ಹೇಳಳಾರೆನು. ನೀನಿಗೆ ಹೋದಾಗಲೂ ಇದೇ ಸುದ್ದಿ; ಗುಡಿಗೆ ಹೋಗುವಾಗಲೂ ಇದೇ ಗದ್ದಲ; ಪುರಾಣದಿಂದ ತಿರುಗಿ ಒರುವಾಗಲಂತೂ ಕಿವಿಗೊಟ್ಟು ಕೇಳಲಾಸಲ್ಲ. ನೀನಾದರೂ ಕಲಿಸಿ ಮಾಡುತ್ತಿಯೇನು? ಅವಳೇನೂ ಸರಕಾರೀ ಚಾಕರೀ ಮಾಡಬೇಕಾಗಿಲ್ಲ. ಇಷ್ಟುದಿನ ಮನೆಯಲ್ಲಿ ನೋಡುವವರಿದ್ದಿಲ್ಲವೆಂದು ಸಾಲೆಗೆ ಕಳಿಸುತ್ತಿದ್ದೆವು ಇನ್ನೇನು ದೊಡ್ಡಾಕೆಯಾದಳು. ಕೆರೆಬಾವಿಗಳಿಗೆ ಹೋಗುವ ಭಯವೇನೂ ಇಲ್ಲ ನಾನು ದಿನಾಲು ಅಕೆಗೆ ಮನೆವಾರ್ತೆಯ ಕೆಲಸಗಳನ್ನು ಕಲಿಸುತ್ತೇನೆ. ತೀರಿತು. ಮಡಿಕೆಗಳನ್ನು ತಿಕ್ಕುವವರು ಸಾಲೆಯ ಒರಹವನ್ನು ಕಕ್ಕೊಂಡು ಮಾಡುತ್ತಾರೇನು?" ಇವೇ ಮುಂತಾದ ಮಾತುಗಳನ್ನು ಹೇಳುತ್ತಾ, ತನ್ನ ಜತೆಗಾರ್ತಿಯರಿಗೆ ನೂರಾರು

ಹೆಸರುಗಳನ್ನಿಡುತ್ತ, ಅವರನ್ನು ನೂರಾಶು ಬಗೆಯಿಂದ ನಿಂದಿಸುತ್ತ, ನಡುನಡುವೆ ಸುಂದರಿಯ ಗುಣಗಳನ್ನು ಕೊಂಡಾಡುತ್ತ ನಾಳಿನಿಂದ ಮಾತ್ರ ಸುಂದರಿಯನ್ನು ಸಾಲೆಗೆ ಕಳುಹಿಸಬೇಡವೆಂದು ಖಂಡಿತವಾಗಿ ಹೇಳಿ, ಮಾತು ಮುಗಿಸಿ ಹೊರಟು ಹೋದಳು.

ತಿರುಮಲರಾಯನಿಗೆ ಉಪಾಯವಿಲ್ಲದಂತಾಯಿತು. ಅವನಿಗೆ ಚಿಕ್ಕಂದಿನಿಂದಲೂ ಸುಂದರಿಯ ರಕ್ಷಣೆಗೆ ಗಂಗಮ್ಮನೇ ಸಹಾಯಕಳಾಗಿದ್ದಳು. ಅವನು ಭಿಕ್ಷೆಗೆ ಹೋದಾಗಲೂ ಎರಡನೇ ಕೆಲಸದಲ್ಲಿ ತೊಡಗಿರುವಾಗಲೂ ಅಕೆಯೇ ಸುಂದರಿಯನ್ನು ನೋಡುತ್ತಿದ್ದಳು. ಅದರಿಂದ ಅಕೆಯ ಮಾತನ್ನು ಮೀರಲಿಕ್ಕೆ ಮನಸ್ಸು ಒಪ್ಪಲಿಲ್ಲ. ಈ ಮಾತನ್ನು ಅವನು ಭಿಕ್ಷೆಗೆ ಹೋದಾಗ ನಾಲ್ಕಾರು ಜನರ ಬಾಯಿಯಿಂದ ಕೇಳಿದ್ದನು. ಕಡೆಗೆ ನಿರುಪಾಯನಾಗಿ ನಾಳಿನಿಂದ ಸುಂದರಿಯನ್ನು ಸಾಲೆಗೆ ಕಳುಹಿಸಬಾರದೆಂದು ನಿಶ್ಚಯಿಸಿದನು. ಅಷ್ಟರಲ್ಲಿ ಸುಂದರಿಯು ಸಾಲೆಯಿಂದ ಬಂದಳು. ತಿರುಮಲರಾಯನು ಮಗಳನ್ನು ಕರೆದು ಕೂಡ್ರಿಸಿಕೊಂಡು "ಸುಂದರೀ ನೀನು ನಾಳಿನಿಂದ ಸಾಲೆಗೆ ಹೋಗಬೇಡ. ಗಂಗಮ್ಮನ ಮನೆಗೆ ಹೋಗು" ಎಂದು ಹೇಳಿದನು. ಈ ಮಾತನ್ನು ಕೇಳಿ ಸುಂದರಿಯ ಮೋರೆಯು ಸಣ್ಣದಾಯಿತು. ಅಂತೂ ಸುಂದರಿಯ ವಿದ್ಯಾಭ್ಯಾಸವು ಸದ್ಯಕ್ಕೆ ಈ ರೀತಿಯಿಂದ ಪೂರ್ಣವಾಯಿತು.

ಸುಂದರಿಗೆ ಹನ್ನೆರಡನೆಯ ವರುಷವು ಪ್ರಾರಂಭಿಸಿತು. ಬಡವನ ಮಗಳಾದ್ದರಿಂದ ಮೈಮೇಲೆ ಆಭರಣಗಳೇನೂ ಇದ್ದಿಲ್ಲ. ಉಟ್ಟುಕೊಳ್ಳುವದಕ್ಕೆ ಚಲೋ ಸೀರೆಯೂ ಇದ್ದಿಲ್ಲ. ದೇವರು ಕೊಟ್ಟ ರೂಪವು ಮಾತ್ರ ಚನ್ನಾಗಿತ್ತು. ಆ ರೂಪದಿಂದಲೇ ಅವಳು ತನ್ನ ಗೆಳತಿಯರನ್ನೆಲ್ಲ ಮೀರಿದ್ದಳು. ಅದಕ್ಕೆ ಇನ್ನೂ ಒಂದು ಕಾರಣವಿತ್ತು. ಬಡತನದಲ್ಲಿದ್ದವರು ತಾವೇ ಸದ್ಗುಣಿಗಳಾಗುವರೆಂದು ಅನೇಕರು ಹೇಳುವರು. ಯಾವ ಕಾರಣದಿಂದಲೋ ಸುಂದರಿಯು ಸದ್ಗುಣ ಪೂರಿತೆಯಾಗಿದ್ದಳು. ಅವಳು ಹುಟ್ಟಿ ಇಷ್ಟು ದಿನಗಳಾಗಿದ್ದರೂ ಯಾರ ಸಂಗಡಲೂ ಕದನವಾಡಿದ್ದಿಲ್ಲ. ಗಟ್ಟಿಯಾಗಿ ಮಾತನ್ನೇ ಆಡುತ್ತಿದ್ದಿಲ್ಲವೆಂದರೂ ಸಲ್ಲುವದು

ಸುಂದರಿಯು ಈಗ ಮೊದಲಿನ ಹಾಗಿರಲಿಲ್ಲ. ನಾಲ್ಕು ಜನರು ನೆರೆದಲ್ಲಿ ಹೋಗುವದನ್ನು ಬಿಟ್ಟುಬಿಟ್ಟಿದ್ದಳು. ಮೊದಲಿನ ಗೆಳತಿಯರನ್ನೂ ಒಬ್ಬೊಬ್ಬರನ್ನಾಗಿ ಬಿಡುತ್ತ ಬಂದಿದ್ದಳು. ಚಿಕ್ಕಂದಿನ ಗೆಳತಿಯರನ್ನು ನೋಡುತ್ತಲೇ ಅವಳ ಮೋರೆಯ ಕಳೆಯು ಇಳಿಯುವದು. ಮಧ್ಯಾನ್ಹದ ಬಸಿಲಿನಲ್ಲಿ ಯಾರೂ ಇಲ್ಲದ ಹೊತ್ತನ್ನು ನೋಡಿಕೊಂಡು ನೀರಿಗೆ ಹೋಗುತ್ತಿದ್ದಳು. ಪುರಾಣಕ್ಕೆ ಹೋಗುವದನ್ನಂತೂ ಬಿಟ್ಟೇ ಬಿಟ್ಟಿದ್ದಳು. ಸುಂದರಿಯ ಸ್ಥಿತಿಯು ಈ ರೀತಿಯಾಗಿ ಬದಲಾಗುವದಕ್ಕೆ ಕಾರಣವೇನು? ಗಂಗವ್ವ, ಸುಬ್ಬವ್ವ, ಗೋದಾವರವ್ವ, ಪಾರ್ವತಿ, ಸರಸ್ವತಿ, ಭಾಗೀರಥಿ, ಕಪುಲೆ,

ವಿಮಲೆ ಮುಂತಾದ ನೆರೆಹೊರೆಯ ಹೆಂಗಸರೂ ಹುಡುಗಿಯರೂ ತನ್ನ ಬಗ್ಗೆ ತಮ್ಮ ತಮ್ಮೊಳಗೆ ಆಡಿಕೊಳ್ಳುವದನ್ನು ಆಕೆಯು ಕೇಳಿದ್ದಾಳಾಗಿ ತೋರುತ್ತದೆ.

ಗಂಗಮ್ಮನೂ ಭಾಗೀರಥಮ್ಮನೂ ಈಂಕುಳಲ್ಲಿ ಕೊಡಗಳನ್ನಿಟ್ಟುಕೊಂಡು ಕೆರೆಯದಂಡೆಯ ಮೇಲೆ ಮಾತಾಡುತ್ತ ನಿಂತುಕೊಂಡಿದ್ದರು. " ಏನ್ಹುಟ್ಟು ಸುಂದರಿ! ಎಂಥಾಗುಣವಂತಿ! ಅವಳ ಅಚ್ಚು ಮೆಚ್ಚಾದ ಮಾತುಗಳನ್ನೂ ಕೊಂಕು-ಕೊರತೆಗಳಿಲ್ಲದ ನಡತೆಯನ್ನೂ ನೋಡಿದರೆ, ಮನಸ್ಸು ಮರುಗುವದು. ಯಾರ ಕೂಡಾದರೂ ಕದನವಾಡಿದ್ದನ್ನು ನೋಡಿರುವೆಯಾ? ಕೇಳಿರುವೆಯಾ? ಇಂಥ ಸೊಸೆಯನ್ನು ಯಾರು ಹೊಂದುವರೋ! ನಿಮ್ಮ ಯಜಮಾನರೇನೂ ಒಪ್ಪುವಂತೆ ತೋರುವದಿಲ್ಲ ನಮ್ಮವಳಾಗಿದ್ದೀಯೆಂದು ಹೇಳಿದೆ. ನಮ್ಮ ಹುಡುಗಿಯು ನಮ್ಮಲ್ಲಿಯೇ ಇದ್ದಂತಾಗುತ್ತಿತ್ತೆಂದು ಹೇಳಿದೆ. ಇನ್ನೂ ಒಮ್ಮೆ ಕೇಳಿನೋಡು " ಗಂಗಮ್ಮನು ಭಾಗೀರಥಮ್ಮಗೆ ಹೇಳಿದಳು. " ಅಮ್ಮಾ ನಾನೇನು ಮಾಡಲೆ, ಅವರು ವರದಕ್ಷಿಣೆಯ ಮಾತನ್ನು ಮೊದಲು ಎತ್ತುವರು. ಅದಾದ ಮೇಲೆ, ಹುಡುಗಿಯು ಎಷ್ಟು ಕಲಿತಿದ್ದಾಳೆಂದು ಕೇಳುವರು. ಎಷ್ಟು ಹೇಳಿದರೂ ಕೇಳಲೊಲ್ಲರು. ಇನ್ನೂ ಒಮ್ಮೆ ವಿಚಾರಿಸಿ ನೋಡುತ್ತೇನೆ. ಆದರಂತೂ ಆಯಿತು; ಇಲ್ಲವಾದರೆ ಉಪಾಯವಿಲ್ಲ. " ಎಂದು ಹೇಳಿ ಭಾಗೀರಥಮ್ಮನು ಹೊರಟು ಹೋದಳು.

ಮಾಘಮಾಸವು ಹೋಯಿತು. ಫಾಲ್ಗುಣ ಮಾಸವೂ ಕಳೆಯಿತು. ಚೈತ್ರಮಾಸವೂ ಮುಗಿಯುತ್ತ ಬಂತು. ಜ್ಯೇಷ್ಠ ಮಾಸದಲ್ಲಿ ವಿವಾಹ ಮುಹೂರ್ತವಿಲ್ಲ. ನಡುವೆ ಉಳಿದದ್ದು ಒಂದೇ ತಿಂಗಳು. ಇನ್ನೂ ವರನೇ ಗೊತ್ತಾಗಿಲ್ಲ. ಸುಂದರಿಗೆ ಹದಿನೈದು ವರುಷಗಳು ತುಂಬಿ ಹೋದವು. ಅದರಿಂದ ತಿರುಮಲರಾಯನು ಚಿಂತೆಯಲ್ಲಿ ಮುಳುಗಿ ಹೋಗಿದ್ದನು.

ತಿರುಮಲರಾಯನು ತನ್ನ ಪರಿಚಿತರಲ್ಲಿ ನಾಲ್ಕೈದು ಜನರನ್ನು ಕೇಳಿನೋಡಿದನು. ಅವರಲ್ಲಿ ಒಬ್ಬಿಬ್ಬರು ಅವನ ಸ್ಥಿತಿಗತಿಗಳನ್ನು ನೋಡಿ, ವರದಕ್ಷಿಣೆಯ ಮಾತನ್ನು ಎತ್ತಲಿಲ್ಲ. ಆದರೆ ಹುಡುಗಿಗೆ ಓದು ಬರಹಗಳು ಬರುವದಿಲ್ಲೆಂಬದನ್ನು ಕೇಳಿ, ಆ ಪ್ರಸ್ತಾಪವನ್ನೇ ಬಿಟ್ಟು ಬಿಟ್ಟರು. ತಿರುಮಲರಾಯನು ಇದು ಗಂಗಮ್ಮನ ಮಾತು ಕೇಳಿದ್ದರ ಫಲವೆಂದು ಮನಸ್ಸಿನಲ್ಲಿಯೇ ಅಂದುಕೊಂಡನು.

ತಿರುಮಲರಾಯನ ಮಾವನ ಮನೆಯಲ್ಲಿ ಅತ್ತಿಮಾವಂದಿರಾರೂ ಇದ್ದಿಲ್ಲ. ಗೋವಿಂದರಾಯನೆಂಬ ಶ್ಯಾಲಕನೊಬ್ಬನು ಮಾತ್ರ ಇದ್ದನು. ಗೋವಿಂದರಾಯನು ಮನೆಯಲ್ಲಿ ಸ್ಥಿತಿವಂತ, ಗುಣವಂತನೂ ಆಗುದು; ದಯಾವಂತನೆಂದು ಹೆಸರಾಗಿದ್ದನು. ಆದರೆ ತಿರುಮಲರಾಯನು ಅಲ್ಲಿಗೆ ಹೋಗದೆ ಹದಿನೈದು ವರುಷಗಳಾಗಿದ್ದವು. ತನ್ನ ಪ್ರಿಯಭಾರ್ಯೆಯು ಗತಿಸಿದಂದಿನಿಂದ ಅವನು ಆ ಊರಿಗೇ

ಹೋಗಿರಲಿಲ್ಲ. ಹನ್ನೊಂದು ವರುಷಗಳೆ ತರುವಾಯ ತಿರುಮಲರಾಯನು ಪುನ: ಮಾವನ ಮನೆಗೆ ಹೋದನು. ಹೋಗಿ ತನ್ನ ಸ್ಥಿತಿಗತಿಗಳನ್ನೆಲ್ಲ ಗೋವಿಂದರಾಯನ ಮುಂದೆ ಹೇಳಿಕೊಂಡನು. ಕೇಳುತ್ತಿದ್ದ ಗೋವಿಂದರಾಯನ ಮನಸ್ಸು ಕರಗಿ ನೀರಾಗಿ ಹೋಯಿತು. ಆಗ ತಿರುಮಲರಾಯನ ಅವಸ್ಥೆಯು, ಏನಾಗಿದ್ದೀತು? ಗೋವಿಂದರಾಯನು ಅವನಿಗೆ ಧೈರ್ಯವನ್ನು ಹೇಳಿದನು. ಹ್ಯಾಗಾದರೂ ಮಾಡಿ ಲಗ್ನವನ್ನು ಮಾಡಿಸದೆ ಬಿಡುವದಿಲ್ಲೆಂದೂ ಸಾಧಿಸಿದಷ್ಟು ಉತ್ತಮ ವರನನ್ನೇ ಗೊತ್ತು ಮಾಡುವೆನೆಂದೂ ವಚನ ಕೊಟ್ಟನು. ಗೋವಿಂದರಾಯನು ಸುಂದರಿಗೆ ಅನುರೂಪನಾದ ವರನನ್ನು ಗೊತ್ತು ಮಾಡಿದನು. ವೈಶಾಖ ವದ್ಯ ನವಮಿಯ ದಿವಸ ಮಿಥುನ ಲಗ್ನದಲ್ಲಿ ನಾರಾಯಣರಾಯನು ಸುಂದರಿಯ ಪಾಣಿಗ್ರಹಣವನ್ನು ಮಾಡಿದನು. ನಾಲ್ಕೈದು ದಿನಗಳಲ್ಲಿ ಮದುವೆಯ ಕೆಲಸವೆಲ್ಲಾ ತೀರಿತು. ಸಂಸಾರದಲ್ಲಿ ಅನನ್ಯ ಸಹಾಯಕನಾದ ತಿರುಮಲರಾಯನು ಸುಂದರಿಯನ್ನು ಪತಿಗೃಹಕ್ಕೆ ಕಳುಹಿಸುವಾಗ ಎಷ್ಟು ಮರುಗಿದ್ದಾನು! ಅದು ಮಗಳನ್ನು ಪತಿಗೃಹಕ್ಕೆ ಕಳುಹಿಸಿದ ತಾಯಿತಂದೆಗಳ ಹೃದಯಕ್ಕೇ ಗೊತ್ತು.

ಸುಂದರಿಯು ಅತ್ತೆಯ ಮನೆಯನ್ನು ಸೇರಿದಳು. ಅತ್ತೆಯ ಮನೆಯಲ್ಲಿ ಅತ್ತೆಯಿಲ್ಲ. ಮಾವನಿಲ್ಲ; ಅವಳೇ ಗೃಹಿಣಿ; ಅವಳ ಪತಿಯೇ ಗೃಹಸ್ಥ; ವಿಧವೆಯಾದ ನಾದಿನಿಯೊಬ್ಬಳು ಮಾತ್ರ ಆಕೆಯ ಗೃಹಕಾರ್ಯ್ಯಗಳಲ್ಲಿ ಸಹಾಯಕಳಾಗಿದ್ದಳು. ನಾರಾಯಣರಾಯನು ನಾಲ್ಕು ಮಂದಿಗೆ ಬೇಕಾದವನು. ಹೆಸರಾದ ಮನೆತನದವ. ಅದರಲ್ಲಿಯೂ ಬ್ರಾಹ್ಮಣ. ಅಂದ ಮೇಲೆ ಬರಹೋಗುವ ಜನರಿಗೇನು ಕಡಿಮೆ? ನಾರಾಯಣರಾಯನು ಮನೆಯಲ್ಲಿದ್ದರೆ ಹೊತ್ತಿಗೆ ನಾಲ್ಕೈದು ಜನರಾದರೂ ಊಟಕ್ಕೆ ಇಲ್ಲದ ದಿನವಿಲ್ಲ ಸುಂದರಿಯು ಚಿಕ್ಕಂದಿನಿಂದಲೂ ದುಡಿದ ಹುಡುಗಿಯಾದ್ದರಿಂದ ಅತಿಥಿಗಳೆಲ್ಲರನ್ನೂ ಕೊಂಕು-ಕೊರತೆಗಳಿಲ್ಲದಂತೆ ಸರಿಯಾಗಿ ಸತ್ಕರಿಸುತ್ತಿದ್ದಳು.

ಒಂದುದಿನ ನಾರಾಯಣರಾಯನು ಕಾರ್ಯ್ಯಾಂತರಕ್ಕಾಗಿ ಸುರಪುರಕ್ಕೆ ಹೋಗಬೇಕಾಯಿತು. ಹೋಗುವಾಗ ಹತ್ತೆಂಟು ದಿನಗಳಲ್ಲಿಯೇ ತಿರುಗಿ ಬರುವೆನೆಂದೂ, ರಾತ್ರೆ ಗೌಡರ ತಮ್ಮಣ್ಣನು ಒಂದು ಮಲಗಿಕೊಳ್ಳಲ್ಲೆಂದೂ ಹೇಳಿ ಹೋದನು.

ನಾರಾಯಣರಾಯರು ಹೊರಟು ಹೋಗಿ ಹದಿನಾರು ದಿನಗಳಾದವು. ಇನ್ನೂ ಬರಲಿಲ್ಲ. ಸುಂದರಿಯು ನಾಲ್ಕೈದು ದಿನಗಳಿಂದಲೂ ಹಾದೀ ನೋಡಿನೋಡಿ ಬೇಸತ್ತಳು. ಅವಳಿಗೆ ಅನ್ನವೇ ಸೇರದು. ಕೆಲಸಬೊಗಸೆಗಳ ಕಡೆಗೆ ಮನಸ್ಸೇ ಹೋಗದು. ಕನಸುಮನಸುಗಳಲ್ಲೆಲ್ಲಾ ನಾರಾಯಣರಾಯನೇ ತುಂಬಿದ್ದನು. "कोऽहः पाथ-शंकी" ಎಂಬ ಕಾಲಿದಾಸ ವಚನದಂತೆ ಆಕೆಯ ಮನಸ್ಸಿನಲ್ಲಿ ಕೆಟ್ಟಕೆಟ್ಟ ವಿಚಾರ

ಗಳು ಬರಲಾರಂಭಿಸಿದವು. ತಲೆಬಾಗಿಲಲ್ಲಿ ಯಾರು ಸಪ್ಪಳ ಮಾಡಿದರೂ ಇಣಿಕಿ ನೋಡುವಳು. ಪುನಃ ಹತಾಶಳಾಗಿ ಕುಳಿತುಕೊಳ್ಳುವಳು. ಮಧ್ಯಾನ್ಹದ ಮೇಲು ಗಾಡಿಗೆ ಬರಬಹುದೆಂದು ಯೋಚಿಸಿದ್ದಳು. ಗಾಡಿಯು ಬಂದು ಹೋದರೂ ನಾರಾಯಣರಾಯನು ಬರಲಿಲ್ಲ. ನಾಲ್ಕು ಬಡಿಯಿತು. ಅವಳ ನಾದಿನಿಯು ಅದೇತಕ್ಕೋ ನೆರೆಮನೆಗೆ ಹೋಗಿದ್ದಳು. ತಲೆಬಾಗಿಲಲ್ಲಿ ಯಾರೋ ಬರುವ ಸಪ್ಪಳವಾಯಿತು. ಸುಂದರಿಯು ಇಣಿಕಿ ನೋಡಿದಳು. ಅಷ್ಟರಲ್ಲಿ ಒಬ್ಬ ಪೋಸ್ಟಮನ್ನನು ಚರ್ಮದ ಪಾಕೇಟನ್ನು ಹೆಗಲಿಗೆ ಹಾಕಿಕೊಂಡು, ಕಯ್ಯಲ್ಲಿ ಕೆಲವು ಕಾಗದಗಳನ್ನು ಹಿಡಿದುಕೊಂಡು, ತಲೆಬಾಗಿಲ ಮುಂದೆ ಬಂದು ನಿಂತನು. ಸುಂದರಿಯು ಅಲ್ಲಿಗೆ ಹೋದಳು. ಅವನು "ನಾರಾಯಣರಾಯರ ಮನೆಯು ಇದೇ ಏನು?" ಎಂದು ಕೇಳಿದನು. ಸುಂದರಿಯು ಹೌದೆನ್ನಲು ಅವನು ಒಂದು ಪಾಕೇಟನ್ನು ತೆಗೆದು ಸುಂದರಿಯ ಕೈಯ್ಯಲ್ಲಿ ಕೊಟ್ಟು ಹೊರಟುಹೋದನು. ಸುಂದರಿಯು ಅದನ್ನು ತಿರುತಿರುವಿ ನೋಡಿದಳು. ಏನೂ ಗೊತ್ತಾಗಲಿಲ್ಲ. ಅಷ್ಟರಲ್ಲಿ ಯಾವನೋ ಒಬ್ಬನು ಮುಂದಿನಿಂದ ಹಾದು ಹೋಗುವದನ್ನು ಸುಂದರಿಯು ನೋಡಿ ಅವನನ್ನು ಕರೆದಳು. ಅವನು ಅಕೆಯ ಹತ್ತರ ಬರಲು, ಅವಳು ಆ ಪಾಕೇಟನ್ನು ಅವನ ಕೈಯಲ್ಲಿ ಕೊಟ್ಟಳು. ಅವನು ಅದನ್ನು ಒಡೆದು ಒಳಗಿನ ಕಾಗದವನ್ನು ಮನಸ್ಸಿನಲ್ಲಿಯೇ ಓದಹತ್ತಿದನು. ಸುಂದರಿಯು ಎವೆಯಿಕ್ಕದೆ ಅವನ ಮೋರೆಯನ್ನು ನೋಡುತ್ತ ನಿಂತುಕೊಂಡಳು. ಅವನು ಓದುತ್ತೋದುತ್ತ "ಊಸ್" ಎಂದು ನಿಟ್ಟುಸುರು ಬಿಟ್ಟನು. ಕೂಡಲೆ ಸುಂದರಿಯ ಮುಖವು ಬಾಡಿಹೋಯಿತು. ಕಮಲಕ್ಕೆ ಜ್ವಾಲೆಯು ಸೋಂಕಿದಂತಾಯಿತು. ಅಕೆಯು ಬಾಯಿಯಿಂದ ಮಾತುಗಳೇ ಹೊರಡಲಿಲ್ಲ. ಕ್ಷಣಹೊತ್ತಿನ ಮೇಲೆ "ಏನು" ಎಂದು ಕೇಳಿದಳು. ಗೃಹಸ್ಥನು "ಏನು ಹೇಳಲೆಮ್ಮಾ, ಈಗಿನ ದಿನ ವಾನವೇ ಅಂಥಾದ್ದು! ಸತ್ಯಕ್ಕೆ ಮಾರ್ಗವೇ ಇಲ್ಲ!! ಹೇ ಪರಮೇಶ್ವರಾ, ನಾರಾಯಣರಾಯರಂಥ ಪುಣ್ಯಾತ್ಮರ ಮೇಲೆ ಇಂಥ ಪ್ರಸಂಗವನ್ನು ತರಬಹುದೇ! ಅಮ್ಮಾ ನೀವಾದರೂ ಏನು ಮಾಡುತ್ತೀರಿ! ಈಗ ಎರಡು ಸಾವಿರ ರೂಪಾಯಿಗಳನ್ನು ಎಲ್ಲಿಂದ ತರುತ್ತೀರಿ? ಅದೆಂದೂ ಆಗದ ಮಾತು" ಎಂದು ಹೇಳುತ್ತ ಕಣ್ಣೀರು ಸುರಿಸಹತ್ತಿದನು. ಈಗಂತೂ ಪತಿಪರಾಯಣೆಯಾದ ಆ ಸಾಧ್ವೀಮಣಿಯ ದುಃಖಕ್ಕೆ ಪಾರವೇ ಇರಲಿಲ್ಲ. ಆ ಬಾಲೆಯು ಎರಡು ಸಾವಿರ ರೂಪಾಯಿಗಳನ್ನು ಏನು ಮಾಡಬೇಕೆಂದು ಕೇಳಿದಳು. ಅದಕ್ಕೆ ಆ ಗೃಹಸ್ಥನು, ದುಃಖಿತಸ್ವರದಿಂದ "ಅಮ್ಮಾ ಈ ಪತ್ರದಲ್ಲಿ ಹೆಚ್ಚಿಗೇನೂ ಬರೆದಿಲ್ಲ; ಭಯಂಕರವಾದ ಪ್ರಸಂಗದಲ್ಲಿ ಬಿದ್ದಿರುತ್ತೇನೆ; ಪಾರಾಗುವ ಸಂಭವವು ತೋರುವದಿಲ್ಲ; ಆದರೂ ಪ್ರಯತ್ನಮಾಡಿ ನೋಡುತ್ತೇನೆ; ಎರಡು ಸಾವಿರ ರೂಪಾಯಿಗಳನ್ನು ಮನಿಯಾರ್ಡರು ಮಾಡಿ ಕಳುಹಿಸಿಕೊಡು; ನಿನ್ನ ಸೌಭಾಗ್ಯವು ಎಷ್ಟು ದಿನವಿದೆಯೋ ಗೊತ್ತಿಲ್ಲ. (ಈ ವಾಕ್ಯವನ್ನು ಹೇಳುವಾಗ ಅವನ

ಧ್ವನಿಯು ತೀರ ಕುಗ್ಗಿ ಹೋಯಿತು. ಕಡೆಯ ಶಬ್ದವಂತೂ ಹೊರಡಲೇ ಇಲ್ಲ.) ಇಷ್ಟೇ ಈ ಪಕ್ಕದ ಸಾರಾಂಶವು." ಎಂದು ಹೇಳಿದನು. ಸುಂದರಿಯು ಕೆಳಗೆ ಕುಳಿತು ಬಿಟ್ಟಳು ಕಡೆಗೆ ಸ್ವಲ್ಪ ಚೇತರಿಸಿಕೊಂಡು, " ಸ್ವಾಮೀ ಮನಿಯಾರ್ಡರು ಅಂದರೇನು? ಅಷ್ಟು ದೂರ ಹಣವನ್ನು ಒಯ್ದು ಎಂದು ಮುಟ್ಟಿಸುತ್ತಾರೆ? ಅದೆಲ್ಲಾ ನಮ್ಮ ದುರ್ದೈವಕ್ಕೆ ಆಗದ ಮಾತೇ ಸರಿ." ಎಂದು ಹೇಳುತ್ತ ಅಳಹತ್ತಿದಳು. ಅದನ್ನು ಕೇಳಿ ಆ ಗೃಹಸ್ಥನು ಮನಿಯಾರ್ಡರವೆಂದರೇನೆಂಬದನ್ನೂ ಹಣವು ಅಲ್ಲಿಗೆ ಹೋಗಿ ಮುಟ್ಟುವ ಬಗೆಯನ್ನೂ ತಾರಮನಿಯಾರ್ಡರದ ಕ್ರಮವನ್ನೂ ಚನ್ನಾಗಿ ವಿವರಿಸಿ ಹೇಳಿದನು. ಮತ್ತು ಹಣವನ್ನು ಕೊಟ್ಟರೆ ತಾನೇ ಹೋಗಿ ಮನಿಯಾರ್ಡರು ಮಾಡಿ ಬರುವೆನೆಂತಲೂ ಹೇಳಿದನು. ಅದನ್ನು ಕೇಳಿ ಸುಂದರಿಯು ಒಳಗೆ ಹೋಗಿ ಎರಡು ಸಾವಿರ ರೂಪಾಯಿಗಳನ್ನು ತಂದು ಅವನ ಕೈಯಲ್ಲಿ ಕೊಟ್ಟು, ನಮಸ್ಕಾರ ಮಾಡಿ, ಸ್ವಾಮೀ ಈ ಹೊತ್ತಿನಲ್ಲಿ ನನಗೆ ತಾವೇ ತಂದೆ; ತಾವೇ ಬಂಧು; ತಮ್ಮ ಹೊರತು ಯಾರೂ ಇಲ್ಲ. ದಯಮಾಡಿ ಅಷ್ಟು ಕೆಲಸ ಮಾಡಿಕೊಟ್ಟರೆ ತಮ್ಮ ಉಪಕಾರವನ್ನು ಎಂದೆಂದು ಮರೆಯೆನು. ಹ್ಯಾಗಾದರೂ ಮಾಡಿ ನನ್ನ ಪ್ರಾಣದೊಡೆಯರು ಪಾರಾಗುವ ಹಾಗೆ ಮಾಡಿರಿ. ಮತ್ತೈರಡು ರೂಪಾಯಿಗಳು ಹೋದರೂ ಚಿಂತೆಯಿಲ್ಲ. ತಾರಿನಿಂದಲೇ ಕಳುಹಿಸಿರಿ." ಎಂದು ಹೇಳಿ ಮತ್ತೈರಡು ರೂಪಾಯಿಗಳನ್ನು ತೆಗೆದು ಅವನ ಕಯ್ಯಲ್ಲಿ ಕೊಟ್ಟಳು. ಅವನು ಅದನ್ನು ತೆಗೆದುಕೊಂಡು " ಅಮ್ಮಾ ಹೆದರ ಬೇಡಿರಿ. ನನ್ನ ಕೈಯಿಂದಾದಷ್ಟೂ ಸಹಾಯ ಮಾಡುತ್ತೇನೆ. ರಕ್ಷಿಸುವವನು ದೇವರಿದ್ದಾನೆ. ನಮ್ಮ ಕಯ್ಯಲ್ಲೇನಿದೆ? ನಾನು ಪೋಸ್ಟ ಆಫೀಸಿಗೆ ಹೋಗಿ ರೂಪಾಯಿಗಳನ್ನು ಕಳುಹಿಸುತ್ತೇನೆ. ಮತ್ತ ತಾರಿನಿಂದ ಯಾವತ್ತು ಸಂಗತಿಗಳನ್ನು ತಿಳಿದುಕೊಂಡು ಬರುತ್ತೇನೆ." ಎಂದು ಹೇಳಿ ಹೊರಟು ಹೋದನು.

ರಾತ್ರಿಯು ಎಂಟು ಘಂಟೆಯಾಯಿತು. ರೂಪಾಯಿಗಳನ್ನು ಕಳುಹಿಸಲಿಕ್ಕೆ ಹೋದ ಗೃಹಸ್ಥನು ಇನ್ನೂ ಬರಲಿಲ್ಲ. ಸುಂದರಿಯೂ ಅವಳ ನಾದಿನಿಯೂ ಬಾಗಿಲ ಮುಂದೆ ದೀಪವನ್ನಿಟ್ಟುಕೊಂಡು ತಲೆಬಾಗಿಲನ್ನು ನೋಡುತ್ತ ಕುಳಿತಿದ್ದರು. ಗೃಹಸ್ಥನು ಏನು ಸುದ್ದಿಯನ್ನು ತರುವನೋ ಎಂದು ತರಳೆಯರಿಬ್ಬರೂ ಚಡ ಪಡಿಸಹತಿದ್ದರು. ಆ ಹೊತ್ತು ಮನೆಯಲ್ಲಿ ಒಲೆಯನ್ನು ಹೊತ್ತಿಸಲೇ ಇಲ್ಲ. ಅಷ್ಟರಲ್ಲಿ ಯಾರೋ ಒಳಗೆ ಬಂದರು. ಸುಂದರಿಯು ಹೋಗಿ ಅವನ ಪಾದಗಳನ್ನು ಹಿಡಿದುಕೊಂಡು, " ಸ್ವಾಮೀ ಏನೇನು ತಿಳಿಯಿತು? ತಮ್ಮ ಉಪಕಾರವನ್ನು ಎಂದೆಂದೂ ಮರೆಯೆನು " ಎಂದು ಮುಂತಾಗಿ ಹೇಳುತ್ತ ಅಳಹತ್ತಿದಳು. ಒಳಗೆ ಬಂದವನಿಗೆ ಏನು ಗೊತ್ತಾಗಲಿಲ್ಲ. ಅವನು ಆಶ್ಚರ್ಯಚಕಿತನಾಗಿ ಸುಂದರಿಯನ್ನು ಹಿಡಿದು ಎತ್ತಿದನು. ಸುಂದರಿಯು ಅವನ ಮೋರೆಯನ್ನು ನೋಡಿದಳು. ಅವನಾರು! ನಾರಾಯಣರಾಯ!!

ವಾಚಕ ಮಹನೀಯರೇ ಸುಂದರಿಗೆ ಈಗ ಎಷ್ಟು ಆನಂದವಾಗಿದ್ದೀತು? ಅದನ್ನು ವರ್ಣಿಸುವದು ನಮಗಂತೂ ಅಸಾಧ್ಯವೇ ಸರಿ. ಆ ಆನಂದವನ್ನು ನಮ್ಮ ಸುಂದರಿಯು ಗೆಳತಿಯರೇ ತರ್ಕಿಸಬೇಕು. ಸ್ವಲ್ಪಹೊತ್ತು ಸಂಭಾಷಣೆ ನಡೆದ ಮೇಲೆ ನಾರಾಯಣರಾಯನಿಗೆ ಮಧ್ಯಾನ್ಹದ ಮೇಲೆ ನಡೆದ ಸಂಗತಿಯು ಗೊತ್ತಾಯಿತು. ನಿಜವಾದ ಸಂಗತಿಯು ಎಲ್ಲರಿಗೂ ಗೊತ್ತಾಯಿತು. ಸುಂದರಿಯು ತಾನು ಓದು-ಬರಹಗಳನ್ನು ಕಲಿಯದೆ ಇರುವದರಿಂದ ಇಷ್ಟೊಂದು ಅನರ್ಥಕ್ಕೆ ಗುರಿಯಾದೆನೆಂಬದನ್ನು ತಿಳಿದುಕೊಂಡಳು. ಈ ಸಂಗತಿಯು ತಿರುಮಲರಾಯನಿಗೂ ಗೊತ್ತಾಯಿತು. ಅವನು ಇದು ಗಂಗಮ್ಮನ ಮಾತು ಕೇಳಿದ್ದರ ಫಲವೆಂದು ಅಂದುಕೊಂಡನು. ಅಂದಿನಿಂದ ನಾರಾಯಣರಾಯನು ಸುಂದರಿಯ ಅಧ್ಯಾಪಕನಾದನು. ಕುಶಾಗ್ರ ಬುದ್ಧಿಯುಳ್ಳ ಸುಂದರಿಯು ಒಂದೆರಡು ವರುಷಗಳಲ್ಲಿಯೇ ಚನ್ನಾಗಿ ಓದಲಿಕ್ಕೂ ಬರೆಯಲಿಕ್ಕೂ ಕಲಿತಳು. ಅಂದಿನಿಂದ ಇಂಥ ಪ್ರಸಂಗಗಳು ಎಂದೂ ಒದಗಲಿಲ್ಲ. ಸುಂದರಿ ನಾರಾಯಣರಾಯರ ಸಂಸಾರವು ಸುಖಕರವಾಗಿ ಸಾಗಿತು.

ಸುಂದರಿಯು ತನ್ನಂತೆ ವಿದ್ಯಾಹೀನೆಯರಾಗಿರುವದು ಅನರ್ಥಕ್ಕೆ ಕಾರಣವಾಗುವದೆಂದು ತನ್ನ ಗೆಳತಿಯರನ್ನು ಬೋಧಿಸಿದಳು ತಿರುಮಲರಾಯನು ತನ್ನಂತೆ ಹೆರವರ ಮಾತುಕೇಳಿ, ಹೆಣ್ಣು ಮಕ್ಕಳನ್ನು ಅಜ್ಞಾನಾಂಧಕಾರದಲ್ಲಿಟ್ಟು, ಅವರ ಸುಖಕ್ಕೆ ಮಣ್ಣು ಕೂಡಿಸಬೇಡಿರೆಂದು ಬೋಧಿಸಿದನು. ನಾರಾಯಣರಾಯನು ತನ್ನ ಸಹ ವ್ಯವಸಾಯಿಗಳನ್ನು ಬೋಧಿಸಿ ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ದೊರೆಯುವಂತೆ ಮಾಡಿದನು.

ಶಾಮರಾಯರು—ಏನು ಭೀಮರಾಯರೇ, ನಿಮ್ಮ ಈಗಿರುವ ಕುಟುಂಬವು ಎರಡನೇದೊ? ಮೂರನೇದೊ?

ಭೀಮರಾಯರು—ಯಾಕೆ, ರಾಯರೆ, ಈಗಿನ ನಮ್ಮ ಕುಟುಂಬವು ಆರನೇದು.

ಶಾಮರಾಯರು— ಸೈ, ಸೈ, ನಿನಗೆ ಲಗ್ನಮಾಡಿಕೊಳ್ಳುವ ಚಟ ಬಿದ್ದಂತೆ ತೋರುವದು.

* * *

ಕೀನು—ಅವ್ವಾ, ತಮ್ಮನು ಊರಿಂದ ಯಾವಾಗ ಬರುವನು?

ತಾಯಿ—ಯಾಕಪ್ಪಾ, ಇಷ್ಟಾಕೆ ತಮ್ಮನ ಮೇಲೆ ಪ್ರೀತಿ ಬಂದಿದೆ?

ಕೀನು—ಅವ್ವಾ, ಇಂದು ಈ ಬೆಕ್ಕಿಗೆ ಪೀಡಿಸಿ ಪೀಡಿಸಿ ನನಗೆ ತ್ರಾಸಬಂದಿದೆ.

ತಾಯಿ— ಬೆಕ್ಕಿನಂತೆ ತಮ್ಮನನ್ನು ಪೀಡಿಸಬೇಕೆಂದು ಯೋಚಿಸಿರುವಿಯೊ? ಒಳ್ಳೇ ಸಮಾಚಾರ!

ರಾಮಾನುಜಾಚಾರ್ಯರು.

೧. ಭಗವದ್ರಾಮಾನುಜಾಚಾರ್ಯರು ಮದರಾಸಿಗೆ ಹದಿನಾರು ಮೈಲು ದೂರದಲ್ಲಿರುವ ಶ್ರೀಪೆರಂಬೂದೂರು (ಭೂತಪುರಿ) ಎಂಬ ಗ್ರಾಮದಲ್ಲಿ ಕ್ರಿಸ್ತಶಕ ೧೦೧೭ನೆಯ ಸಂವತ್ಸರದಲ್ಲಿ ಅವತರಿಸಿದರು. ಇವರ ತಂದೆಯ ಹೆಸರು ಆಸೂರಿ ಕೇಶವಾಚಾರ್ಯರು. ತಾಯಿ ಕಾಂತಿಮತೀದೇವಿ. ಶಾಖೆ ಯಜುಶ್ಶಾಖೆಯು. ಸೂತ್ರ ಆಪಸ್ತಂಭ ಸೂತ್ರವು. ನಮ್ಮ ರಾಮಾನುಜರ ಚಿಕ್ಕ ವಯಸ್ಸಿನಲ್ಲಿಯೇ ತಂದೆಯು ಪರಮಪದವನ್ನೈದಿದನು. ತಾಯಿಯಾದ ಕಾಂತಿಮತೀದೇವಿಯು ಅತನನ್ನು ಕಾಂಚೀಪುರಕ್ಕೆ ಕರೆದುಕೊಂಡು ಹೋಗಿ, ವಿದ್ಯಾಭ್ಯಾಸವನ್ನು ಮಾಡಿಸುತ್ತಿದ್ದಳು. ಹದಿನಾರು ವರುಷ ಪ್ರಾಯ ಬರುವವರೆಗೆ ರಾಮಾನುಜರು ಸಾಂಗವಾಗಿ ವೇದಾಧ್ಯಯನವನ್ನು ಮಾಡಿ, ಆಗ ಅದ್ವೈತ ಸಿದ್ಧಾಂತದಲ್ಲಿ ಪ್ರಸಿದ್ಧಿ ಹೊಂದಿದ್ದ ಯಾದವ ಪ್ರಕಾಶನ ಬಳಿ ವೇದಾಂತಶಾಸ್ತ್ರವನ್ನು ಓದುತ್ತಿದ್ದರು.

ಆ ಕಾಲದಲ್ಲಿ ಶ್ರೀ ಶಂಕರಾಚಾರ್ಯರಿಂದ ಸ್ಥಾಪಿಸಲ್ಪಟ್ಟಿದ್ದ ಷಣ್ಮತಗಳಲ್ಲಿಯೂ ಮುಖ್ಯವಾಗಿ ಹೆಸರು ಹೊಂದಿದ ಅದ್ವೈತಸಿದ್ಧಾಂತವು ಆಸೇತು ಹಿಮಾಚಲಪರ್ಯಂತವೂ ವ್ಯಾಪಿಸಿ, ಜನನ್ನಾಗಿ ಬೇರೂರಿತ್ತು. ಈ ಸಿದ್ಧಾಂತದಸಾರಾಂಶವೇನಂದರೆ:—

(a) ಜಗತ್ತು ಮಿಥ್ಯೆ. (b) ಜೀವನೆಂಬುವನೊಬ್ಬನು ಬೇರೆ ಇಲ್ಲ. ಭಗವಂತನು ಅವಿದ್ಯಾ ಮೋಹಿತನಾದಾಗ ತಾನು ಜೀವನೆಂದು ಭ್ರಮೆಪಡುವನು. (c) ಭಗವಂತನು ನಿರ್ಗುಣನು.

a. ಜಗತ್ತು ಮಿಥ್ಯೆ:—ನಮಗೆ ಸಮಸ್ತ ಜ್ಞಾನವೂ ಇಂದ್ರಿಯಗಳ ಮೂಲಕ ಉಂಟಾಗುತ್ತಿರುವುದು, ಬಾಹ್ಯ ಪ್ರಪಂಚವು ಮಿಥ್ಯೆಯಾದರೆ ಇಂದ್ರಿಯಗಳಿಗೆ ವಿಷಯಭೂತವಾದ ಪದಾರ್ಥವೇ ಇಲ್ಲ. ಪಾಂಚಭೌತಿಕವಾದ ಶರೀರದಲ್ಲಿ ಇಂದ್ರಿಯಗಳು ಉಂಟಾಗಿಯೇ ತೀರಬೇಕು. ಜ್ಞಾನಸಾಧನವಾದ ಇಂದ್ರಿಯಗಳು, ಜ್ಞಾನವಿಷಯವಾದ ಪ್ರಪಂಚ ಇವೆರಡೂ ಇಲ್ಲವೆಂದರೆ ಜ್ಞಾನಜ್ಞೇಯಗಳಿಗೆ ಅವಕಾಶವೇ ಇಲ್ಲ.

b. ಜೀವನು:—ಈಶ್ವರನೇ ಅವಿದ್ಯೆಯಿಂದ ಮೋಹಿತನಾಗಿ ಜೀವನಾಗಿದ್ದಾನೆಂದು ಹೇಳುತ್ತಿದ್ದರು. ಈಅವಿದ್ಯೆಯು ಇರುವುದೆಂದಾಗಲಿ, ಇಲ್ಲವೆಂದಾಗಲಿ, ಹೇಳುವುದಕ್ಕೆ ಅವಕಾಶವಿಲ್ಲವಂತೆ. ನಿರ್ಗುಣನೂ, ನಿಷ್ಕ್ರಿಯನೂ ಆದ ಈಶ್ವರನು ಹೇಗೆ ಈ ಅವಿದ್ಯೆಯಿಂದ ಮೋಹಿತನಾದನೆಂದರೆ ಸದುತ್ತರವು ಇಲ್ಲ.

೮. ಭಗವಂತನು:—ಈತನು ನಿರ್ಗುಣನು. ಅಂದರೆ ಯಾವಗುಣವೂ ಇಲ್ಲದವನು. ಸುಗುಣ ದುರ್ಗುಣಗಳು ಎರಡೂ ಇಲ್ಲವು. ಹಾಗಾದರೆ ಅತನನ್ನು ನಾವು ತಿಳಿದುಕೊಳ್ಳುವುದು ಹೇಗೆ?

ಯಾದವ ಪ್ರಕಾಶನ ಬಳಿ ಅದ್ವೈತಬ್ರಹ್ಮ ಸೂತ್ರಭಾಷ್ಯವನ್ನು ಓದುತ್ತಿದ್ದ ರಾಮಾನುಜಾಚಾರ್ಯರಿಗೆ ಈ ಸಿದ್ಧಾಂತವು ಮನಸ್ಸಿಗೆ ಬರುವುದೆ? ಆರ್ಯ ಮಹರ್ಷಿಗಳಿಂದ ಅನಾದಿಯಾಗಿ ಶಿರಸಾ ವಹಿಸಲ್ಪಡುತ್ತಿದ್ದ ವೇದಗಳು ಹೀಗೆ ಬೋಧೆ ಮಾಡುವುವೇ ಎಂದು ಸಂದೇಹಿಸುತ್ತಾ ಸತ್ಯಾರ್ಥಜಿಜ್ಞಾಸುವಾಗಿ ಇದ್ದನು.

ಹೀಗಿರುವಲ್ಲಿ ಒಂದು ದಿನ ನಮ್ಮ ರಾಮಾನುಜರಿಗೂ ಗುರುವಾದ ಯಾದವ ಪ್ರಕಾಶರಿಗೂ ವಾಗ್ವಾದ ಬಿತ್ತು. ಆಗ ಯಾದವಪ್ರಕಾಶನು "ಕಪ್ಯಾಸಂ ಪುಂಡರೀಕಾಕ್ಷಮೇವಮಷ್ಟಿಣಿ" ಎಂಬ ಶ್ರುತಿಗೆ ಈಶ್ವರನ ಕಣ್ಣುಗಳು ಕೋತಿಯಾಸನದಂತೆ ಇರುವುವೆಂದು ಅರ್ಥವನ್ನು ಹೇಳಿದನು. ಜಗದೀಶ್ವರನಿಗೆ ಅಪಮಾನಕರವಾಗಿ ಹೇಳಲ್ಪಟ್ಟ ಅರ್ಥವನ್ನು ಕೇಳಿದ ರಾಮಾನುಜರು ಕಣ್ಣೀರನ್ನು ಬಿಟ್ಟರು. ಆ ಕಣ್ಣೀರು ಬಿಸಿಯಾಗಿ ಗುರುವಿನ ಶರೀರದ ಮೇಲೆ ಬಿದ್ದು ಚುರ್ರೆಂದು ಸುಡಲು, ಅತನು ತಲೆಯೆತ್ತಿ ನೋಡಿ, ದುಃಖಿಸುತ್ತಿದ್ದ ರಾಮಾನುಜನನ್ನು ಕಂಡು, ಶೋಕಕಾರಣವನ್ನು ಕೇಳಿದನು. ರಾಮಾನುಜನು ಗುರುವಿನಲ್ಲಿ ಅತನು ಹೇಳಿದ್ದು ಅನಾರ್ಥವೆಂದೂ ಕಪಿಶಬ್ದಕ್ಕೆ ಸೂರ್ಯನೆಂದು ಅರ್ಥವನ್ನು ಮಾಡಿಕೊಂಡು ಹೇಳಿದರೆ, ಸೂರ್ಯನ ಕಣ್ಣುಗಳ ರವಿಕಿರಣ ವಿಕಸಿತದಂತೆ ಇರುವುದೆಂದೂ ಹೇಳಿದರು. ಅಷ್ಟರ ಮೇಲೆ, ರಾಮಾನುಜರ ಮೇಲೆ ಗುರುವಿಗೆ ಕೋಪ ಬಂದು, ಅವರನ್ನು ವಿದ್ಯಾಶಾಲೆಯಿಂದ ಓಡಿಸಿದನು.

೫. ಅದ್ವೈತ ಸಿದ್ಧಾಂತವು ವೇದ ಮೂಲವಾದುದಲ್ಲವೆನ್ನುವುದಕ್ಕೆ ರಾಮಾನುಜರಿಗೆ ಯಾವಆಧಾರವು ಇರುವುದೆಂಬ ಸಂಶಯವು ವಿಚಾರಿಸಲ್ಪಡಬೇಕಾಗಿರುವುದು. ಅಪೌರುಷೇಯಗಳೆಂದೂ ಅವು ಭಗವನ್ಮುಖೋದ್ಗತವಾದುದರಿಂದ ಪರಮ ಪ್ರಮಾಣಗಳೆಂದೂ, ಸಮಸ್ತಾಸ್ತಿಕರಾದ ಹಿಂದುಗಳು ಶಿರಸಾವಹಿಸಿರುವರು. ಈ ವೇದಗಳಲ್ಲಿ ಉಪನಿಷದ್ಭಾಗವು ಚಿದಚಿದೀಶ್ವರ ಸ್ವರೂಪವನ್ನು ಬೋಧಿಸುವುದು. ಈ ಉಪನಿಷದರ್ಥವನ್ನೇ ವೇದಾಂತ ಶಾಸ್ತ್ರವನ್ನು ಉದ್ಧರಿಸಿದ ಶ್ರೀ ವ್ಯಾಸಮಹರ್ಷಿಯು ಬ್ರಹ್ಮಸೂತ್ರಗಳನ್ನಾಗಿ ಬರೆದಿರುವನು. ಇವುಗಳನ್ನೇ ಮತತ್ರಯಾಚಾರ್ಯರೂ ಪರಮಪ್ರಮಾಣವಾಗಿ ಭಾವಿಸಿ, ಭಾಷ್ಯಗಳನ್ನು ಬರೆದಿರುವರು. ಅದರಿಂದ ಬ್ರಹ್ಮಸೂತ್ರಗಳು ವೇದಹೃದಯವೆಂದು ನಿಶ್ಚಯವಾಗಿ ಹೇಳಬಹುದು. ಈ ಭಾಷ್ಯರಚನೆಗೆ ಪೂರ್ವ ಬ್ರಹ್ಮ ಸೂತ್ರಗಳಿಗೆ ವ್ಯಾಸರ ಶಿಷ್ಯನಾದ ಬೋಧಾಯನನು ಒಂದು ವೃತ್ತಿಯ

ನ್ನು ಬರೆದನು. ಅದ್ವೈತಭಾಷ್ಯವನ್ನು ಬರೆದ ಶ್ರೀ ಶಂಕರಾಚಾರ್ಯರು ಇದನ್ನು ಪೂರ್ತಿ ಯಾಗಿ ಅಂಗೀಕರಿಸದೆ ತಮ್ಮ ಇಚ್ಛಾನುಸಾರವಾಗಿ ಸೂತ್ರಸಮನ್ವಯ ಮಾಡಿದು ದೇಕೆಂದರೆ, ಬೋಧಾಯನ ವೃತ್ತಿಯನ್ನು ಅಂಗೀಕರಿಸಿದರೆ ಶಂಕರಾಚಾರ್ಯರ ಅದ್ವೈತವಾದಕ್ಕೆ ಅವಕಾಶವಿರದು. ಬೋಧಾಯನನು ಮಹರ್ಷಿಯೂ ವ್ಯಾಸಶಿಷ್ಯನೂ ಆದುದರಿಂದ ಸೂತ್ರಾರ್ಥವು ಆತನಿಗೆ ಯಥಾರ್ಥವಾಗಿ ತಿಳಿಯುವುದಕ್ಕೆ ಅವಕಾಶವಿರುವುದು. ಆದುದರಿಂದಲೇ ಶ್ರೀ ಮದ್ರಾಮಾನುಜರು ಬೋಧಾಯನನ ವೃತ್ತಿಯನ್ನು ಅನುಸರಿಸಿ, ಶ್ರೀ ಭಾಷ್ಯವನ್ನು ಒರೆದು ವೇದಹೃದಯವಾದ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಉದ್ಧರಿಸಿದರು.

ವಿಶಿಷ್ಟಾದ್ವೈತಸಿದ್ಧಾಂತದ ಪ್ರಕಾರ ಚಿತ್ತೆಂತಲೂ, (ಅಂದರೆ ಜ್ಞಾನಾತ್ಮನಾದ ಜೀವನು.) ಅಚಿತ್ತೆಂತಲೂ, (ಅಂದರೆ ಜಡಾತ್ಮವಾದ ಪ್ರಕೃತಿ) ಈಶ್ವರನೆಂತಲೂ, ತತ್ವಗಳು ಮೂರು. ಚಿದಚಿತ್ತುಗಳು ಎರಡು ಸನಾತಗಳು ನಿತ್ಯಗಳಾಗಿ ಈಶ್ವರನಿಗೆ ಪರಾಧೀನಗಳಾಗಿರುವವು. ಜೀವನು ಕಿಂಚಿಜ್ಞತ್ವಾದಿ ಲಕ್ಷಿತನಾಗಿ ಈಶ್ವರನಿಗೆ ಶೇಷಭೂತನಾಗಿರುವನು. ಪ್ರಕೃತಿ ಅಸತ್ಯವೇ ಹೊರತು ಮಿಥ್ಯೆಮಾತ್ರವಲ್ಲ. ಅಸತ್ಯವೆಂದರೆ ಯಾವಾಗಲೂ ಒಂದೇ ರೀತಿಯಾಗಿರದೆ, ನಿರಂತರ ಪರಿಣಾಮವನ್ನು ಹೊಂದುವುದು. ಮಿಥ್ಯೆಯೆಂದರೆ ಅಲ್ಲದ್ದು, ಈಶ್ವರನು ನಿಖಿಳಹೇಯ ಪ್ರತ್ಯನೀಕ ಕಲ್ಯಾಣ ಗುಣೈಕನು. ಜೀವನು ಅನಾದಿ ಕರ್ಮವಾಸನೆಯಿಂದ ಜನನ-ಮರಣರೂಪ ಸಂಸಾರ ಪ್ರವಾಹದಲ್ಲಿ ತೇಲಾಡುತ್ತಾ ಭಗವನ್ನಿಹೇತುಕ ಕಟಾಕ್ಷದಿಂದ, ಕರ್ಮಜ್ಞಾನ, ಭಕ್ತಿ, ಪ್ರಪತ್ತಿ ವೈರಾಗ್ಯಗಳನ್ನು ಹೊಂದಿ, ಪರಂಪರಾಸಾಧನೆಯನ್ನು ಕೈಕೊಂಡು ಮುಕ್ತಿಯನ್ನು ಹೊಂದಬಲ್ಲನು.

ಈ ಮೇಲೆ ಹೇಳಿದ ಸಂಗತಿಗಳನ್ನು ನೋಡಿದರೆ ಶ್ರೀಮನ್ಮಥನಾಥದತ್ತನು ತನ್ನ ಮಹಾತ್ಮರ ಚರಿತ್ರೆಯಲ್ಲಿ " ಈಶ್ವರನು ಗುಣರಹಿತನೆಂದು ಶಂಕರವಾದದಲ್ಲಿ ಹೇಳುವುದು, ಬೌದ್ಧವಾದಕ್ಕಿಂತ ಏನೂ ಅತಿಶಯವು ಕಾಣಲಾರದು " ಎಂದು ಹೇಳುವವಾಕ್ಯವು ಸತ್ಯವೆಂದು ಹೇಳುವುದಕ್ಕೆ ಸಂದೇಹವಿಲ್ಲ. ಆದ್ದರಿಂದಲೇ ಆಸ್ತಿಕರಲ್ಲಿ ಬಹುಮಂದಿ ಅದ್ವೈತ ಮತವವು ಪ್ರಚ್ಛನ್ನ ಬೌದ್ಧವೆನ್ನುವರು. ಪ್ರಚ್ಛನ್ನಬೌದ್ಧವನ್ನು ನಿರಾಕರಿಸಿ, ಪ್ರಕೃತಿ ಸತ್ಯತ್ವವನ್ನೂ, ಜೀವೇಶ್ವರನ ಭೇದವನ್ನೂ, ಭಗವತ್ಕಲ್ಯಾಣ ಗುಣೈಕ್ಯತಾಸತ್ಯವನ್ನೂ, ಆರ್ಯರಮನಸ್ಸಿನಲ್ಲಿ ನೆಲಸಿದ ಮಹಾನುಭಾವರು ನಮ್ಮ ರಾಮಾನುಜರೇ!

(ಸಶೇಷ.)

M. I. V. Iyengar

ವಿಕ್ರಮಾರ್ಜುನವಿಜಯ (ಭಾರತ)

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಎರಡನೆಯ ಪದ್ಯದಲ್ಲಿ—ಸಂಧ್ಯಾಕಾಲದಲ್ಲಿ ಕಮಲಗಳು ಮುಕುಲಿತವಾಗು ವಾಗ ತುಂಬಿಗಳು ಸ್ವಾಭಾವಿಕವಾಗಿ ಅವುಗಳಲ್ಲಿ ಸಿಕ್ಕಿಕೊಳ್ಳುವದನ್ನು ಬೇರೆ ರೀತಿಯಿಂದ—ಅಂದರೆ, ತುಂಬಿಗಳು ಕಮಲಗಳ ಆಶ್ರಿತ (ಪೋಷ್ಯ) ಗಳೆಂದೂ, ಅವು ತಮ್ಮ ಪೋಷಕಗಳಾದ ಕಮಲಗಳಿಗೆ ವಿಪತ್ತು ಬರಲು ಆಗ ತಾವು ಆ ಕಮಲಗಳನ್ನು ಬಿಟ್ಟುಹೋಗದೆ ಅಲ್ಲಿಯೇ ಸಂಕುಚಿತ ಪ್ರದೇಶದಲ್ಲಿ ರಾತ್ರಿ ಕಾಲಕಳೆದವೆಂದೂ ಹೇಳಿದ್ದಾನೆ. ಇದರಿಂದ—ಯೋಗ್ಯರಾದ ಭೃತ್ಯರು ತಮ್ಮ ಒಡೆಯನ ವಿಪತ್ತಿನಲ್ಲಿ ತಾವೂ ದುಃಖವನ್ನು ಸೋಸಿಕೊಂಡು ಅವರ ಹತ್ತರವೇ ಇರುವಂತೆ ತುಂಬಿಗಳೂ ಇದ್ದವೆಂದು ಹೇಳಿದ್ದರಿಂದ ಅವುಗಳಲ್ಲಿ ಯೋಗ್ಯ ಭೃತ್ಯರ ನಡೆವಳಿಯು ಆರೋಪ ಮಾಡಿದಂತಾಗಿದೆ. ಇದರಿಂದ ಆ ವರ್ಣನೆಯು ಸಮಾಸೋಕ್ತ್ಯಲಂಕಾರದಿಂದ ಅಲಂಕೃತವಾಗಿದೆ. ಮುಂದೆ ಅಂಧಕಾರವು ವ್ಯಾಪಿಸಿದ್ದನ್ನು ಹೇಳುವ ಮೂರನೆಯ ಪದ್ಯದಲ್ಲಿ ಮಾಡಿದ ಮೂರು ಉತ್ಪ್ರೇಕ್ಷೆಗಳಲ್ಲಿ ವಿರಲಪದಾರ್ಥಗಳಿಂದ ಕ್ರಮವಾಗಿ ಘನಪದಾರ್ಥಗಳನ್ನು ಉತ್ಪ್ರೇಕ್ಷಿಸುತ್ತ ಹೋಗಿರುವದರಿಂದ ಕ್ರಮವಾಗಿ ಅಂಧಕಾರವು ಹೆಚ್ಚುತ್ತಿತ್ತೆಂಬ ಭಾವವು ಕೇಳುವವರ ಮನಸ್ಸಿನಲ್ಲಿ ಉಂಟಾಗುವದು.

ಇದೇ ಮೇರೆಗೆ ಋತುಗಳ ವರ್ಣನೆಗಳೂ ಮನೋಹರವಾಗಿವೆ. ಇವನ ವರ್ಣನೆಗಳಲ್ಲಿ ಕೃತ್ರಿಮತೆಯು ಬಹುತರ ಕಂಡುಬರುವದಿಲ್ಲ. ಶ್ಲೇಷ, ಪರಿಸಂಖ್ಯೆ, ಮೊದಲಾದ ಅಲಂಕಾರಗಳು ಇವನ ಗ್ರಂಥಗಳಲ್ಲಿ ಬಹುತರ ಇಲ್ಲವೇ ಇಲ್ಲ. ಪ್ರಾಚೀನ ಕವಿಯಾದ ಕಾಳಿದಾಸನ ಪ್ರಬಂಧಗಳಲ್ಲಿಯೂ ಈ ತರದ ಕೃತ್ರಿಮಾಲಂಕಾರಗಳು ಕಂಡು ಬರುವದಿಲ್ಲ. ಅವನ ಕಾವ್ಯದಲ್ಲಿ ಉಪಮೆಯು ಮೇಲಿಂದ ಮೇಲೆ ಬರುವಂತೆ ಮತ್ತು ಮನೋಹರವಾಗಿರುವಂತೆ ಇವನ ಕಾವ್ಯದಲ್ಲಿ ಉತ್ಪ್ರೇಕ್ಷೆ ಮೇಲಿಂದ ಮೇಲೆ ಬರುವದು ಮತ್ತು ಮನೋಹರವಾಗಿರುವದು. ಮೇಲಿನ ಸಂಧ್ಯಾವರ್ಣನದಲ್ಲಿ ಈ ವಿಷಯವು ಸ್ಪಷ್ಟವಾಗಿ ತೋರುವದು. ಇವನ ಭಾಷೆಯು ಪ್ರಾಯಶಃ ಅಲಂಕೃತವಲ್ಲದಿದ್ದರೂ ನೀರಸವಲ್ಲವೆಂಬದನ್ನು ನಿರ್ವಿವಾದವಾಗಿ ಹೇಳಬಹುದು. ಕೆಳಗೆ ಕೊಟ್ಟ ಅವತರಣದಲ್ಲಿ ಈ ಅಂಶವನ್ನು ಕಂಡುಕೊಳ್ಳಬಹುದು—

"ದ್ರೋಣಂ ತನಗೆ ಬಡತನ †ಮಡಸೆ ಅಶ್ವತ್ಥಾಮನಂ ಒಡಗೊಂಡು ನಾಡ

† ಅಡಸೆ—ವ್ಯಾಪಿಸಲು;

ನಾಡಂ ತೊಳಲ್ದು ತನ್ನ ಒಡನಾಡಿಯಪ್ಪ ಕೆಳೆಯಂ ದ್ರುಪದಂ ಛತ್ರವತಿಯೊಳ್ ಅರಸುಗೆಯ್ದುವನೆಂಬುದಂ ಕೇಳ್ದು ಆ ಪೊಳಲ್ಗೆ ಬಂದು ದ್ರುಪದನ ಅರಮನೆಯ ಬಾಗಿಲೊಳ್ ನಿಂದು ಪಡಿಯರನಂ ಕರೆದು ನಿಮ್ಮ ಒಡನಾಡಿದ ಕೆಳೆಯಂ ದ್ರೋಣನೆಂಬ ಪಾರ್ವಂ ಬಂದನೆಂದು ನಿಮ್ಮರಸಂಗೆ ಅರುಂಪೆ ಪೇಳ್ವ್ ಎಂಬುದುಂ ಆತನಾಮಾಳ್ಕೆಯೊಳೆ ಬಂದು ಅರುವುವ್ವದುಂ ರಾಜ್ಯಮದಿಂತಾಮದೋನ್ಮತ್ತನುಂ ಗ್ರರ್ವಗ್ರಹವ್ಯಗ್ರ ಚಿತ್ತನುಂ ಆಗಿ ಮೇಗಿಲ್ಲದೆ "

" ಅಂತೆಂಬನಾರ್ಗೆ? ಪಿರಿದುಂ।
ಭ್ರಾಂತುದಲೇ ದ್ರೋಣನೆಂಬನೇಂ ಪಾರ್ವನೆ ಸೇ।
ಳೆಂತೆನಗೆ ಕೆಳೆಯನೇ ನೂಂ।
ಕಂತಪ್ಪನನರಿಯನೆಂದು ಸಭೆಯೊಳ್ನುಡಿದಂ ॥"

ಹಾಗೆ " ನಿನ್ನ ಒಡನಾಡಿದ ಗೆಳೆಯನು ಪಾರ್ವನು " ಎಂಬದಾಗಿ ಹೇಳುವವನು ಯಾರವನು? ಅವನಿಗೆ ಭ್ರಾಂತಿಯಾದದ್ದು ನಿಜ್ಜಯ; ದ್ರೋಣನೆಂಬವನೇ? ಬ್ರಾಹ್ಮಣನೇ? ಅವನು ನನಗೆ ಹೇಗೆ ಗೆಳೆಯನು? ನಾನು ಅರಿಯೆ, ಅವನನ್ನು ಹೊರದಬ್ಬು ಎಂದು ಸಭೆಯಲ್ಲಿ ನುಡಿದನು—

" ಅಂತು ನುಡಿದುದಂ ಪಡಿಯರಂ ಬಂದು ಆ ಪೂಳ್ಕೆಯೊಳಿರುಪೆ ದ್ರೋಣಂ ಛತ್ಕಂಬದಿಂದೆ ಬಳಗಂ ಪೊಕ್ಕು ದ್ರುಪದನಂ ಕಂಡು—

ಅರುಯಿರೆ ನೀಮುಮಾಮು ಮೊಡನೋದಿದೆವೆಂಬುದನಣ್ಣನಿನ್ನನಾ।
ನರುಯೆನದೆಲ್ಲಿ ಕಂಡೆಯೊ ಮಹೀಪತಿಗಂ ದ್ವಿಜವಂಶಜಂಗಮೇ।
ತರುಕೆಳೆಯಿಂತು ನಾಣಿಲಿಗರಪ್ಪರೆ ಮಾನಸರೆಂಬ ಮಾತನೇ।
ನೆರೆಗೊಳೆ ಕುಂಭಸಂಭವನನಾ ದ್ರುಪದಂ ಕಡುಸಿಗ್ಗು ಮಾಡಿದಂ ॥"

ದ್ರೋಣ—ಅಣ್ಣಾ ನೀವೂ ನಾವೂ ಕೂಡಿ ವ್ಯಾಸಂಗಮಾಡಿದೆವೆಂಬದನ್ನು ಸ್ಮರಿಸುವದಿಲ್ಲವೆ?

ದ್ರುಪದ—ನಿನ್ನ ಗುರುತು ನನಗಿಲ್ಲ. ನೀನು ನನ್ನನ್ನು ಎಲ್ಲಿ ನೋಡಿದೆಯೊ? ಅರಸನಿಗೂ ಬ್ರಾಹ್ಮಣನಿಗೂ ಏತರ ಗೆಳೆತನ? ಹೀಗೆ ಮನುಷ್ಯರು ನಿರ್ಲಜ್ಜರಾಗಬೇಕೇ?

---

(೧) ತಿರುಗಿ, (೨) ಕೂಡಿ ಆಡಿದ. (೩) ಗೆಳೆಯ, (೪) ಒಂದು ಪಟ್ಟಣದ ಹೆಸರು, (೫) ಅರಸೊತ್ತಿಗೆ ರಾಜ್ಯ, (೬) ಪಟ್ಟಣ, (೭) ದ್ವಾರಪಾಲಕ, (೮) ಅರಸು ತನವೆಂಬ ಮದ್ಯದ ಮದದಿಂದ ಸೊಕ್ಕಿದವನೂ, (೯) ಅಹಂಕಾರವೆಂಬ ಪಿಶಾಚದಿಂದ ಪೀಡಿತವಾದ ಮನಸ್ಸುಳ್ಳವನೂ.

(೧) ರೀತಿ; (೨) ಬಲಾತ್ಕಾರದಿಂದ; (೩) ಗೆಳೆತನ;

ಎಂಬ ಮಾತನ್ನು ಆಡುತ್ತ ದ್ರುಪದನು ದ್ರೋಣನನ್ನು ಬಹಳ ನಾಚಿಕೆಗೇಡ ಮಾಡಿದನು.

" ಅಂತು ಮಾಡಿದುದಲ್ಲದೆ ಈ ನಾಣಿಲಿ ಪಾರ್ವನಂ ಎಳೆದು ಕಳೆಯಿಂ ಎಂಬುದಂ ದ್ರೋಣಂ ಇಂತೆಂದಂ—

" ನುಡಿ ತಡವಪ್ಪುದೊಂದು ವೊಗೆವೊಳ್ ಮುರುಕಂ ದೊರೆಕೊಳ್ವುದೊಂದುನಾ।
ಗ್ಗೆಡೆ ಗುಡದಿರ್ಪುದೊಂದು ನುಡಿಗಳ್ ಮೊರೆಯುಂ ಮರೆಯಿಪ್ಪುದೊಂದು ಕ।
ಳ್ಗುಡಿದವರದಂದಮಿಂತು ಸರಿ ಸಾರ್ತ್ತರೆ ಸಾರ್ವುದದರ್ಕೆ ಸಂದಿಯಂ।
ಬಡದೆ ಜಲಕ್ಕನೀಗಳರಿದೆಂ ಸರಿ ಕಳ್ಳಿಡವುಟ್ಟಿತೆಂಬುದಂ ॥ "

[ಮಾತು ಸರಲವಾಗಿ ಹೊರಡದೆ ಬಾಯಲ್ಲಿ ತಡೆತಡೆದು ಹೊರಡುವದೊಂದು, ವೋರೆಯಲ್ಲಿ ವಕ್ರತನವು ಬರುವದೊಂದು, ನಾಚಿಕೆ ಬಿಡುವದೊಂದು, ಮಾತುಗಳು ಹಿಂದುಮುಂದಿನ ಸಂಬಂಧವನ್ನು ಬಿಡುವದೊಂದು ಇದೆಲ್ಲವೂ ಮದ್ಯ ಕುಡಿದವರ ಲಕ್ಷಣವು, ಈ ಲಕ್ಷಣಗಳು ಲಕ್ಷ್ಮಿ (ಐಶ್ವರ್ಯ) ಬಂದೊಡನೆ ಬರುವವು. ಅದರಿಂದ ಲಕ್ಷ್ಮಿಯು ಮದ್ಯದ ಒಡಹುಟ್ಟಿದವಳು. (ಸಮುದ್ರಮಥನ ಮಾಡಿದಾಗ ಅದರಲ್ಲಿ ಮದ್ಯವೂ ಹುಟ್ಟಿತು; ಲಕ್ಷ್ಮಿಯೂ ಹುಟ್ಟಿದಳು.) ಎಂಬದನ್ನು ಈಗ ಸ್ಪಷ್ಟವಾಗಿ ತಿಳಿದೆನು.]

ಈ ಬಗೆಯಾಗಿ ಅವಮಾನಿತನಾದ ದ್ರೋಣನು ಮುಂದೆ ತನ್ನ ಶಿಷ್ಯನಾದ ಅರ್ಜುನನಿಂದ ದ್ರುಪದನನ್ನು ಕೋಡಗಗಟ್ಟುಕಟ್ಟಿ ತರಿಸಿ ಆಗ—

" ಸರಿಮೆಯೊಳಗಂದರುಯಿರೊ ।
ನೆರವಿಯೊಳಾರರುವೆರೊರ್ಮೆ ಕಂಡನನರುಯ ।
ಲ್ಕರಿಡೆಮ್ಮಂ ಬಡಪಾರ್ವರ ।
ನರಸರೆ ನೀವಿೂಗಳರಿವಿರರಿಯಿರೊ ಪೇಳಿಂ ॥ "

[ಅಂದು ಐಶ್ವರ್ಯಮದದಲ್ಲಿ ನನ್ನ ಗುರುತು ಹಿಡಿಯಲಿಲ್ಲ; ಇದು ಸರಿ; ಗುಂಪಿನಲ್ಲಿ ಎಂದೊ ಒಮ್ಮೆ ಕಂಡವನನ್ನು ಯಾರು ಗುರುತು ಹಿಡಿಯುವರು! ಅದು ಅಸಾಧ್ಯ! ಅರಸರೇ ನಾವು ಬಡಪಾರ್ವರನ್ನು ಈಗಲಾದರೂ ತಿಳಿಯುವಿರೋ ಇಲ್ಲವೊ ಪೇಳಿರಿ.]

ಎಂದು ಸಾಯು ಸರಸಂನುಡಿದುಮತ್ತಮಿಂತೆಂದಂ:—

" ಆದಿಕ್ಷತ್ರಿಯರೇ ನೀ । ಮಾದಿತ್ಯನನಿಳಿಪತೇಜದಿಂ ಪಾರ್ವನಕ ॥
ಲ್ಕೋದನಡುತಲೆಯೊಳಿರ್ದುದು । ಮಾದುದುನಿಮಗೆನುಡಿದುಕಾಯ್ದಿನೊಳೊದೆದಂ ॥

(೪) ನಿರ್ಲಜ್ಜ; (೫) ಜಗ್ಗಿ ಹೊರಗೆ ಹಾಕಿರಿ.

(ನೀವು ಆದಿಕ್ಷತ್ರಿಯವಂಶದವರು; ಸೂರ್ಯನನ್ನು ತಿರಸ್ಕರಿಸುವಂಥ ತೇಜಸ್ಸುಳ್ಳವರು; ಈಗ ಬ್ರಾಹ್ಮಣನು ನಡುತಲೆಯಮೇಲೆ ಕಾಲಿಂದ ಒದೆಯಲೂ ಸುಮ್ಮನೆ ಇರಬೇಕಾಯಿತು. ಎಂದು ಆಡಿಸಂತಾಪದಿಂದ ಒದ್ದನು.) ಇಲ್ಲಿ ತನ್ನ ದಾರಿದ್ರ್ಯವಿಷಯದಲ್ಲಿ ಲಜ್ಜಿತನಾದ ದ್ರೋಣನು ತನ್ನ ಬಾಲ್ಯದಿಂದ ಸ್ನೇಹಿತನಾಗಿದ್ದರೂ ಈಗ ಮಹಾರಾಜನಾದ ದ್ರುಪದನಬಳಿಯಲ್ಲಿ " ನನ್ನ ದಾರಿದ್ರ್ಯವನ್ನು ಹೇಗೆ ಹೇಳಿಕೊಳ್ಳಲಿ " ಎಂದು ಆಲೋಚಿಸುತ್ತ ಬಹು ಸಂಕೋಚದಿಂದ ಬಂದ ಪ್ರಸಂಗದಲ್ಲಿ ದ್ರುಪದನು ಉನ್ಮತ್ತನಂತೆ ಆಡಿದ ಮಾತುಗಳು ಆ ಅವಸ್ಥೆಯ ದ್ರೋಣನಿಗೆ ಎಂಥ ಸಂತಾಪವನ್ನುಂಟು ಮಾಡುವಂಥವಾಗಿವೆ! ಮುಂದೆ ದ್ರೋಣನು ಅರ್ಜುನನಿಂದ ಅವನನ್ನು ಕಟ್ಟಿಸಿ ತರಿಸಿದಾಗ ಆಡಿದಮಾತುಗಳು ಒಳ್ಳೇ ಅಭಿಮಾನಿಯಾದ ಮನುಷ್ಯನು ಸಹಿಸಲು ಅಸಾಧ್ಯವಾದಂಥವಾಗಿವೆ.

ಈ ಕಾವ್ಯದಲ್ಲಿ ರಸಪರಿಪೋಷವೂ ಅಲ್ಲಲ್ಲಿ ಚನ್ನಾಗಿ ಕಂಡುಬರುತ್ತದೆ. ಯಾವ ದೊಂದು ಕಾವ್ಯವು ಉತ್ತಮವು ಇಲ್ಲವೆ ಮಧ್ಯಮವು ಇಲ್ಲವೆ ಕನಿಷ್ಠವು ಎಂಬದನು ಅದರಲ್ಲಿರುವ ರಸವ್ಯಂಜಕವರ್ಣನೆಯಿಂದ ನಿರ್ಣಯಿಸಬೇಕಾಗುವದು. ರಸಕ್ಕೆ ಭಂಗ ಬರದೆ ಅದು ಉತ್ತಮವಾಗಿ ತೋರುವ ಕಾವ್ಯವು ಉತ್ತಮವು. ಯಾಕಂದರೆ ಕಾವ್ಯದಲ್ಲಿ ರಸವೇ ಮುಖ್ಯವಾಗಿ ಆಸ್ವಾದಿಸತಕ್ಕ ವಿಷಯವು. ರಸವು ಆನಂದಸ್ವರೂಪವೆಂದೂ ಕಾವ್ಯಪುರುಷನ ಜೀವವೆಂದೂ ಹೇಳುತ್ತಾರೆ. ಉಳಿದ ಶಬ್ದಾರ್ಥಗಳು ಆ ಕಾವ್ಯ ಪುರುಷನ ಶರೀರದಂತೆಯೂ, ಉಪಮೆಮೊದಲಾದ ಅಲಂಕಾರಗಳು ಕುಂಡಲ ಮೊದಲಾದ ಅಲಂಕಾರೆಗಳಂತೆಯೂ, ಮಾಧುರ್ಯ ಓಜಸ್ಸುಮೊದಲಾದ ಗುಣಗಳು ಶೌರ್ಯೋದಯಾದಿ ಗುಣಗಳಂತೆಯೂ ಇರುವವು. ಮನುಷ್ಯಶರೀರಕ್ಕೆ ಕುಂಡಲ ಮೊದಲಾದ ಅಲಂಕಾರಗಳಿಗಿಂತ ಜೀವದ ಅವಶ್ಯಕತೆಯೂ ಇರುವಂತೆ ಕಾವ್ಯಕ್ಕೆ ರಸದ ಆವಶ್ಯಕತೆಯುಂಟು. ಕೆಳಗಿನ ಪದ್ಯದಲ್ಲಿ ರಸಪರಿಪೋಷದ ಪ್ರಕಾರವನ್ನು ಕಾಣಬಹುದು.

" ಮೊಲೆಗಳೆಚ್ಚಿಟ್ಟದು ಕರ್ಗಿದ ಕುರುಳ್ಗೊಂಕಾಗಿ ಕಣ್ಗಿಯ್ದೆನೀ।
ಳಲರ್ಗಣ್ಗಳ್ ಚಪಲಂಗಳಾಗಿ ಜಘನಂ ಕಾಂಚೀಕಲಾಪಪ್ರಭೋ॥
ಜ್ವಲಮುದ್ವೃತ್ತಮುಮಾಗಿ ತಾಂಮಲೆಗೆ ಮಧ್ಯಸ್ಥಂಗಳಾಗಿರ್ದುವ।
ಕ್ಕಲೆನಲ್‌ತಕ್ಕುವೆ ಕೆನ್ನ ಮಾತ್ರಿವಳಿಗಳ್ಗೀನಂ ಸರೋಜಾಕ್ಷಿಯಾ॥ "

[ಅರ್ಜುನನು ತೀರ್ಥಯಾತ್ರೆಯನ್ನು ಮುಗಿಸಿಕೊಂಡು ದ್ವಾರಕೆಗೆ ಬಂದಾಗ ಸುಭದ್ರೆಯು ವಿರಹತಾಪದಿಂದ ಅಂದದು—ಕಮಲನೇತ್ರೆಯ, ಮೊಲೆಗಳು ಬಿರುನಾದ್ದರಿಂದೂ, ಕಪ್ಪಾದ ಕುರುಳುಗಳು ವಕ್ರವಾದ್ದರಿಂದೂ, ಬಹುವಿಸ್ತಾರವಾಗಿ ತೋರುವ ಕಣ್ಣುಗಳು ಚಪಲಗಳಾದ್ದರಿಂದೂ, ಜಘನವು ಒಡ್ಡಾಣವೆಂಬ ಅಲಂಕಾರದಿಂದ ಮೆರೆಯುವದೂ ಮತ್ತು ಉದ್ವೃತ್ತವೂ (ನಡತೆತಪ್ಪಿದ್ದು ಉಬ್ಬಿದುದೂ) ಆದ್ದರಿಂದೂ, ಆವುಪೀಡಿಸಲಿ ಬಿರುನಾದವರೂ ವಕ್ರಸ್ವಭಾವದವರೂ, ಚಪಲರೂ ಜನರನ್ನು ಪೀಡಿ

ಸುವದು ಸ್ವಭಾವ; ಆದರೆ ತ್ರಿವಳಿಗಳು ಮಧ್ಯಸ್ಥ (ಸಭ್ಯ ಶರೀರದ ಮಧ್ಯದಲ್ಲಿರುವ) ಗಳಾಗಿದ್ದರೂ, ಅವುಗಳಿಗೆ ಪರಿಪೀಡಾರೂಪವಾದ ಕಷ್ಟವು ತಕ್ಕದ್ದೇ? ಮಧ್ಯಸ್ಥ ಗಳೂ ಪೀಡಿಸುತ್ತವೆಂಬದು ಆಶ್ಚರ್ಯವು! ಇದು ತನ್ನಲ್ಲಿ ಅನುರಕ್ತೆಯಾದ ಸುಭದ್ರೆ ಯಲ್ಲಿ ಅನುರಕ್ತನಾದ ಅರ್ಜುನನು ಅವಳ ಸಮಾಗಮವಿಲ್ಲದಾಗ ವಿರಹವ್ಯಥೆಯಿಂದ ಹೇಳಿದುದು. ಇದರಲ್ಲಿ ವಿಪ್ರಲಂಭ ಶೃಂಗಾರರಸವು ತೋರುವದು. ಇಲ್ಲಿ ಈ ರಸದ ಆಲಂಬನವಿಭಾವವನ್ನು ಹೇಳುವಲ್ಲಿ ಕೇವಲ ಹೆಸರು ಹೇಳಿದೆ. ಸರೋಜಾಕ್ಷಿಯೂ ಎಂಬ ಪದವನ್ನು ಹೇಳಿದ್ದು ನ್ಯೂನತ್ವವಾಗಿದೆ. ಆ ಪದದಿಂದ ಆಲಂಬನವಿಭಾವವಾದ ಸುಭದ್ರೆಯು ಕಮಲದಂತೆ ಕಣ್ಣುಳ್ಳವಳು ಎಂದು ಅವಳ ಸೌಂದರ್ಯವು ವರ್ಣಿತ ವಾಗಿದೆ. ಈ ಸರೋಜಾಕ್ಷಿಯಾ, ಎಂಬ ಪದದಿಂದ ನಾಯಿಕೆಯನ್ನು ಸ್ಮರಿಸುವ ನಾಯಕನಲ್ಲಿ ಅಂತಹ ಸುಂದರಿಯ ಸಮಾಗಮವಿಲ್ಲೆಂದು ತಾಪವು ಹೆಚ್ಚಾಗಿ ತೋರುವದರಿಂದ ವಿಪ್ರಲಂಭಶೃಂಗಾರ ಪರಿಪೋಷವಾಗಿದೆ. ವಿರಹಕಾಲದಲ್ಲಿ ಕೇವಲಕಾಂತೆಯ ಸ್ಮರಣಕ್ಕಿಂತ ಕಾಂತಾವಯವ ಸ್ಮರಣೆಯು ಹೆಚ್ಚು ತಾಪಕರವೆಂಬುದು ಸಹಜ; ಅದರಲ್ಲಿಯೂ ಇರಬೇಕಾದ ಗುಣಗಳಿಂದ ಕೂಡಿದ ಅವಯವಗಳ ಸ್ಮರಣವು ಅತ್ಯಂತ ತಾಪಸಕರವು. ಇಲ್ಲಿ ಕಾಠಿಣ್ಯ, ಪಕ್ವತೆ ಮೊದಲಾದ ಆವಶ್ಯಕ ಗುಣಗಳಿಂದ ಕೂಡಿದ ಸ್ತನ, ಮುಂಗುರುಳುಗಳು ಮೊದಲಾದ ಅವಯವಗಳ ಸ್ಮರಣವು ನಾಯಕನಿಗೆ ಅತ್ಯಂತ ತಾಪಸಕರವಾಗಿರುವದರಿಂದ ವಿಪ್ರಲಂಭಕ್ಕೆ ಹೆಚ್ಚು ಪರಿಪೋಷವಾಗಿದೆ. ಮುಂದೆ—ಮಧ್ಯಸ್ಥ (ನಾಭು) ವಾದ ತ್ರಿವಳಿಗಗೆ ಪರಪೀಡೆಯು ತಕ್ಕದ್ದೇ? ಎಂದು ಹೇಳುವಲ್ಲಿ—ನಾಯಕನಲ್ಲಿ ದೈನ್ಯವು ತೋರುವದು. ಆ ದೈನ್ಯದಿಂದ ತಾನು ಪ್ರತೀಕಾರವಿಲ್ಲದೆ ಆ ಪೀಡೆಯನ್ನು ಸಹಿಸುತ್ತಾನೆಂಬ ಭಾವವು ತೋರುವದು. ಇದರಿಂದ ವಿಪ್ರಲಂಭಕ್ಕೆ ಮತ್ತಷ್ಟು ಮನೋಹರತೆ ಬಂದಿದೆ.

ಹೀಗೆ ರಸಪರಿಪೋಷವಾಗುವಂತೆ ಪದಗಳನ್ನಿಡುವದು ಮಹಾಕವಿಗಳಿಗಲ್ಲದೆ ಸಾಮಾನ್ಯ ಕವಿಗಳಿಗೆ ಸಾಧ್ಯವಿಲ್ಲ. ಸಾಮಾನ್ಯಕವಿಯ ಕಾವ್ಯದಲ್ಲಿ ಶಬ್ದಾಲಂಕಾರಗಳಲ್ಲಿ ಮಾತ್ರ ಸ್ವಾರಸ್ಯವು ಮುಗಿಯುವದು. ಆದರೆ ಮಹಾಕವಿಯ ಕಾವ್ಯದಲ್ಲಿ ರಸಕ್ಕೇ ಮಹತ್ವವಿರುವದು.

ಪಂಪನು ಕೇವಲ ಕಥೆಯನ್ನು ಹೇಳುವಾಗ ಭಾಷೆಯಲ್ಲಿ ಬಹಳ ಸಂಕ್ಷೇಪವನ್ನು ಮಾಡುವನು. "ಕಿರಿದರೊಳೆ ಪಿರಿದುಮರ್ಥಮನರುಪಲ್ಬಲ್ಲಾತ ನಾತನಿಂದಂ ನಿಪುಣಂ" ಎಂಬಂತೆ ಈತನು ಶಬ್ದಸಂಕ್ಷೇಪ ಮಾಡುವಲ್ಲಿ ನಿಪುಣನು. ಭಾರತಯುದ್ಧದಲ್ಲಿ ಅಭಿಮನ್ಯುವು ಚಕ್ರವ್ಯೂಹವನ್ನು ಭೇದಿಸಿದ ದಿವಸ ಅರ್ಜುನನು ಬೇರೆ ಕಡೆಯಲ್ಲಿ ಯುದ್ಧಮಾಡುತ್ತಿದ್ದನು. ಅವನಿಗೆ ಅಭಿಮನ್ಯು ಮೃತನಾದ ಪ್ರಕಾರವು ತಿಳಿದಿರಲಿಲ್ಲ. ಅವನು ಶಿಬಿರಕ್ಕೆ ಬಂದಮೇಲೆ ಧರ್ಮರಾಜನು ಆದಿನ ನಡೆದ ಪ್ರಕಾರವನ್ನೆಲ್ಲ ಅರ್ಜುನನಿಗೆ ತಿಳಿಸುವ ಪ್ರಸಂಗದಲ್ಲಿ:—

"ಗುರು ಚಕ್ರವ್ಯೂಹಮಂ ಪಣ್ಣಿದೊಡೆ ಪುಗಲಿದಂ ಬಲ್ಲದಾರೆಂದೊಡಿನ್ನಾ ।
ನಿರೆ ಮತ್ತಾರ್ಬಲ್ಲರೆಂದೊರ್ವನೆ ರಿಪುಬಲವಾರಾಶಿಯಂ ಪೊಕ್ಕು ಮಿಕ್ಕಾಂ ॥
ತರನಾಟಂದಿಕ್ಕಿ ದುರ್ಯೋಧನನ ತನಯುರಂ ನೂರ್ವರಂ ಕೊಂದುತತ್ಸಂ ।
ಗರದೊಳ್ ಕಾದೆಮ್ಮನಿಂತಾಂ ತಿರಿದು ನಿಜಸುತಂ ದೇವಲೋಕಕ್ಕೆ ಸಂದಂ॥"

[ದ್ರೋಣನು ತನ್ನ ಸೈನ್ಯವನ್ನು ಚಕ್ರಕೋಟಿಯಾಗಿ ಸಜ್ಜುಮಾಡಲು, ನಾನು ಇದನ್ನು ಪ್ರವೇಶಿಸುವದಕ್ಕೆ ಬಲವರು ಯಾರು? ಎಂದು ಕೇಳಲು, ನಾನು ಇರಲು ಇನ್ನಾರು ಇದನ್ನು ತಿಳಿದವರು? ಎಂದು ಹೇಳಿ ಒಬ್ಬನೆ ಸಮುದ್ರದಂತಹ ವೈರಿಸೈನ್ಯವನ್ನು ಹೊಕ್ಕು ಮಿಗಿಲಾಗಿ ಇದಿರಾದವರನ್ನು ಪರಾಕ್ರಮದಿಂದ ಕೊಂದು ದುರ್ಯೋಧನನ ನೂರುಮಂದಿ ಮಕ್ಕಳನ್ನು ಕೊಂದು ಆ ಯುದ್ಧದಲ್ಲಿ ನಮ್ಮನ್ನು ಸಂರಕ್ಷಿಸಿ, ಇಂತು ಯುದ್ಧಮಾಡಿ ನಿನ್ನ ಮಗನು ಸ್ವರ್ಗಲೋಕವನ್ನೈದಿದನು] ಇಂತು ಸಂಕ್ಷೇಪವಾಗಿ ಹೇಳಿರುವನು.

ಈ ಕವಿಗೆ ಸಂಸ್ಕೃತಸಾಹಿತ್ಯವಾಙ್ಮಯದ ಪರಿಚಯವು ಚೆನ್ನಾಗಿತ್ತೆಂದು ತೋರುವದು ಬಾಣಭಟ್ಟನ ಹರ್ಷಚರಿತೆ, ಕಾದಂಬರಿ, ಭಾರವಿಯ ಕಿರಾತಾರ್ಜುನೀಯ, ಕಾಳಿದಾಸನ ರಘುವಂಶ, ಹರ್ಷಕವಿಯ ರತ್ನಾವಲೀ ನಾಟಿಕೆ ಮೊದಲಾದುವನ್ನು ಇವನು ಚೆನ್ನಾಗಿ ಪರಿಶೀಲಿಸಿದ್ದನೆಂಬದು ಆಯಾ ಗ್ರಂಥಗಳಲ್ಲಿರುವ ಮನೋಹರ ಭಾವಗಳನ್ನು ಪರಿವರ್ತಿಸಿದ್ದರಿಂದ ತಿಳಿದು ಬರುವದು. ಹಿಂದೆ ಕೊಟ್ಟ ಸಂಧ್ಯಾವರ್ಣನೆಯಲ್ಲಿ * ಈ ಚಿಹ್ನವನ್ನು ಹಾಕಿದ ವಾಕ್ಯಗಳು ಹರ್ಷಚರಿತೆಯೊಳಗಿನವು. ಹಿಂದೆ ಏಳನೆಯ ಆಶ್ವಾಸದಲ್ಲಿ ಳಂ ರಿಂದ ಮುಂದಿನ ಏಳೆಂಟು ಪದ್ಯಗಳಲ್ಲಿ ಬಹುತರ ಕಿರಾತಾರ್ಜುನೀಯದ ಶ್ಲೋಕಗಳ ಭಾವವು ಹೇಳಲ್ಪಟ್ಟಿದೆ. ಸಂಪೂರ್ಣವಾಗಿ ಭಾಷಾಂತರಿಸಿದಂತೆ ತೋರುವ ಒಂದೆರಡು ಪದ್ಯಗಳನ್ನೂ ಅವುಗಳ ಮೂಲ ಶ್ಲೋಕಗಳನ್ನೂ ಕೆಳಗೆ ಕೊಟ್ಟಿದೆ. ಇದರಿಂದ ಕವಿಯು ಭಾಷಾಂತರಿಸುವ ಶಕ್ತಿಯು ವ್ಯಕ್ತವಾಗುವದು.

ಬೆಳಗುಗಳಿಲ್ಲನೊಂದುರೆಳಬೂಗಿ ನಭಸ್ಥಳದಿಂದಮಿಳೀಮುಹೀ ।
ತಳಕಿದಪ್ಪುದೆಂದು ಮನುಜಾಕೃತಿಯೆಂದು ಮುನೀಂದ್ರನೆಂದು ಕ ॥
ಕ್ಕೊಳಿಸೆ ಮುನೀಂದ್ರರೊಳ್ಳಮಳಸಂಭವನಂದನನೆಂದು ನೋಟಿಕ ।
ರ್ತ್ತಳಿವಳಿಗಾಗೆ ಸಾರೆವರಿ ನೀರದವರ್ಗದಿನಂದು ನಾರದಂ ॥

जयास्त्वयामित्यवधारिते पुरा ततः शरीरीति विभाविताकृतिम् ।
विभुर्विभक्तावयवं पुमानिति क्रमादमुं नारद इत्यबोधिसः ॥

(माघ १ सर्ग ३ श्लो.)

---

೧ ಪ್ರಕಾಶ, ೨ ಉರುಳಿ–ಉಂಡಿ, ೩ ಲಕಾಶ, ೪ ಮನುಷ್ಯನ ಲಕಾರ, ೫ ಕಮಲ ಸಂಭವನಂದನ–ಬ್ರಹ್ಮಪುತ್ರನಾದ ನಾರದ, ೬ ನೋಡುವರು, ೭ ಬೆರಗಾಗೆಲು, ೮ ಸಮೀಪಕ್ಕೆ ಬರಲು, ೯ ಲಕಾಶ.

ಕಿಡಿಸಲ್ ಪಂಕಜದುಕ್ಕನೇಂ ನೆರೆಯದೋ ನೇತ್ರೋತ್ಪಲಾನಂದಮುಂ।
ಪಡೆಯಲ್ ಸೂಲದೋ ಮನ್ಮಥಗೆ ಜಯಮುಂ ಮೆಚ್ಚೀಯದೋ ಸೂಲದೇಂ ॥
ಗಡವಿೞ್ಕಾಂತೆಯ ವಕ್ತ್ರಚಂದ್ರನೆಲೆ ತಾನೇನೆಂದು ಚಂದ್ರ ನಭ।
ಕ್ಕಡರ್ವಂ ಗೆಲ್ಲದೆ ತನ್ನೊಳುಳ್ಳಮೃತಂ ಬಿಂಬಾಧರಸ್ಥಾಮೃತಂ ॥

किं पद्मस्य रुचिं न हंति नयनानंदं विधत्ते न किम् ?।
वृद्धिं वा मधुकेतनस्य कुरुते नालोकमात्रेण किम् ? ॥
वक्त्रेंदौ तव सत्यमेव यदपरः शीतांशु रुज्जृम्भते ।
दर्पः स्यादमृतेन चेद्विह तदप्यस्त्येव बिम्बाधरे:॥ (रत्नावली द्वि. अं)

ಈ ಪ್ರಕಾರ ಪರಿವರ್ತಿಸಿದ್ದರಿಂದ ಅವನ ಪ್ರತಿಭಾಶಕ್ತಿಗೇನೂ ಕುಂದಕವಿಲ್ಲ. ಪ್ರಾಚೀನ ಮಹಾಕವಿಗಳ ಭಾವಗಳನ್ನು ಕನ್ನಡಿಸಿದ್ದರಿಂದ ಕನ್ನಡ ಸಾಹಿತ್ಯಕ್ಕೆ ಒಂದು ಶೋಭೆಯುಂಟಾಗಿದೆ. ಈ ಕವಿಗೆ ಸಂಸ್ಕೃತದಲ್ಲಿ ವೈದುಷ್ಯವಿತ್ತೆಂಬದಷ್ಟೇ ಅಲ್ಲದೆ ಆ ಭಾಷೆಯಲ್ಲಿ ಕಾವ್ಯರಚನಾ ಸಾಮರ್ಥ್ಯವೂ ಇದ್ದಿತೆಂಬದು ಕೆಳಗಿನ ಒಂದು ಶ್ಲೋಕದಿಂದಲೇ ವ್ಯಕ್ತವಾಗುವದು—

परस्परविरुद्धयोर्विनययौवनारंभयोः ।
प्रभूतसहजेर्ष्ययोरपि सरस्वती भीरुयोः ।
तथाच परिहारिना (?) प्रियमहाक्षम शौर्ययो ।
श्चिरं प्रथमसंगमो हरिणभूपतौ दृश्यते ॥ (೧೪ ಆ. ೩೦ ಪ.)

ಇದುವರೆಗೆ ಪಂಪನ ಗ್ರಂಥದ ಗುಣವರ್ಣನವೇ ಆಯಿತು. ಇನ್ನು ಅವನ ಗ್ರಂಥದಲ್ಲಿ ದೋಷಗಳಿವೆಯೋ ಇಲ್ಲವೋ ಎಂಬ ವಿಚಾರವನ್ನು ಮಾಡಿ ಈ ಲೇಖನವನ್ನು ಮುಗಿಸುವ.

ಪಂಪನ ಶೈಲಿಯಲ್ಲಿ ಸಾಮಾನ್ಯವಾಗಿ ಜನರು ಕ್ಲಿಷ್ಟತಾದೋಷವನ್ನೂ ದುಃಶ್ರವತ್ವ (ಕರ್ಣಕಟುತ್ವ) ದೋಷವನ್ನಿ ಆರೋಪಿಸುತ್ತಾರೆ. ಮೊದಲನೆಯ ದೋಷದ ವಿಷಯವಾಗಿ ಇಷ್ಟೇ ಹೇಳಬೇಕಾಗಿದೆ:— ಪಂಪನ ಗ್ರಂಥವು ಹುಟ್ಟಿ ಎಷ್ಟು ದಿವಸಗಳಾದವು? ಸುಮಾರು ಸಾವಿರ ವರ್ಷಗಳು ಸಂದು ಹೋದವಲ್ಲವೇ? ಕನ್ನಡ ಭಾಷೆಯು ಸ್ಥಿತಿಯನ್ನು ನೋಡಿದರೆ ಶತಕಶತಕಕ್ಕೆ ಬದಲಿಸುತ್ತ ಬಂದಿರುವದಲ್ಲವೇ? ಹೀಗಿರಲು ಪಂಪನು ತನ್ನ ಗ್ರಂಥದಲ್ಲಿ ಉಪಯೋಗಿಸಿದ ಆಗಿನ ಕಾಲದ ಜನರ ಬೂಥಿಯಲ್ಲಿದ್ದ ಕೆಲವು ಶಬ್ದಗಳ ಅರ್ಥವೂ, ವಾಡಿಕೆಯಲ್ಲಿರುವ ಮಾತುಗಳ ಅಭಿಪ್ರಾಯವೂ ಈಗ ನಮಗೆ ತಿಳಿಯದಂತಾಯಿತೆಂದರೆ ಇದು ಯಾರ ದೋಷವು? ಇದಲ್ಲದೆ ಈಗ ನಾವು ಓದುವ ಪ್ರತಿಯಲ್ಲಿ ಲೇಖಕರ ಮತ್ತು ಅಚ್ಚು ಹಾಕಿದವರ ಹಲವು ತಪ್ಪುಗಳು ಸೇರಿವೆ. ಈ ಕಾರಣಗಳಿಂದ ನಮಗೆ ಕೆಲವೆಡೆಗಳಲ್ಲಿ ಶೈಲಿಯು

ಕ್ಲಿಷ್ಟವೆಂದು ತೋರುವದೇ ಹೊರತು ನಿಜವಾಗಿ ಅವನ ಗ್ರಂಥದಲ್ಲಿ ಈ ದೋಷವಿಲ್ಲ. ಇನ್ನು ಕೆಲವರು:— "ಪಂಪನ ಭಾಷೆಯು ಕರ್ಣಕಟುವಾಗಿದೆ. ಜೈಮಿನಿ ಮೊದಲಾದ ಕೆಲವು ಕಾವ್ಯಗಳ ಶೈಲಿ ಮಾತ್ರ ಮೃದುವಾಗಿದೆ." ಎಂದು ಹೇಳ್ವವರು. ಇವರು ಕನ್ನಡಭಾಷೆಯ ಸ್ವರೂಪವನ್ನರಿಯದವರೆಂದು ಹೇಳಬೇಕಾಗುವದು. ಯಾಕಂದರೆ:— ಯಾವದೊಂದು ಶೈಲಿಯು ಮೃದುವೇ ಕಟುವೇ ಎಂಬದನ್ನು ನಿರ್ಣಯಿಸಬೇಕಾದರೆ ಆ ಭಾಷೆಯ ಹಲವು ಗ್ರಂಥಗಳನ್ನು ನೋಡಬೇಕು. ಮತ್ತು ಆ ಭಾಷೆಯ ಶಬ್ದಗಳು ಸ್ವಾಭಾವಿಕವಾಗಿ ಕಠೋರ ವರ್ಣಗಳಿಂದ ಕೂಡಿವೆಯೋ ಮೃದುವರ್ಣಗಳಿಂದ ಕೂಡಿವೆಯೋ ಎಂಬದನ್ನು ನೋಡಬೇಕು. ಬಳಿಕ ಮೃದು ವರ್ಣಘಟಿತ ಶಬ್ದಗಳನ್ನಿಡಲು ಬರುವಂತಿದ್ದು ಕವಿಯು ಕಠೋರ ವರ್ಣಘಟಿತ ಶಬ್ದಗಳನ್ನು ಉಪಯೋಗಿಸಿದ್ದರೆ ಅಲ್ಲಿ ಕಟುತ್ವ ದೋಷವನ್ನು ಆರೋಪಿಸಬೇಕಾಗುವದು. ಜೈಮಿನಿ ಮೊದಲಾದ ಗ್ರಂಥಗಳು ಅವುಗಳಲ್ಲಿ ಸಂಸ್ಕೃತ ಮೃದುವರ್ಣಘಟಿತವಾದ ಹಲವು ಶಬ್ದಗಳ ಮಿಶ್ರಣವಿರುವದರಿಂದಲೂ, ಕನ್ನಡ ಭಾಷೆಯು ಹೊಸ ಹೊಸದಾದಂತೆ ಹೆಚ್ಚು ಮೃದುಪಾಗುತ್ತ ನಡೆದುಬರಿಂದಲೂ ನಮಗೆ ಮೃದುವೆನಿಸಿವೆ. ಈ ಭಾರತದಲ್ಲಿ ಸಂಸ್ಕೃತ ಶಬ್ದಗಳು ಹೆಚ್ಚಾಗಿಲ್ಲ. ಇದರಲ್ಲಿ ಹೊಸಕನ್ನಡದ ಸಂಬಂಧವೂ ಇಲ್ಲ. ಹೀಗಿರಲು ಇದನ್ನರಿಯದೆ ವಿಚಾರಶೂನ್ಯರಾಗಿ ಮರಾಟಿ ಮೊದಲಾದ ಅನ್ಯಭಾಷೆಗಳಿಗೆ ಇದನ್ನು ಹೋಲಿಸಿ ಪಂಪನ ಭಾಷೆಯು ಇಲ್ಲವೇ ಹಳೆಗನ್ನಡವೇ ಕಟುವೆಂದು ಅನ್ನುತ್ತ ಕುಳಿತಿರುವ ಸ್ಥಿತಿಯು ಶೋಚನೀಯವಾಗಿದೆ. ಮರಾಟಿ ಮೊದಲಾದ ಅನ್ಯಭಾಷಾದೃಷ್ಟಿಯಿಂದ ಕಟುವಾದರೆ ಆಗಲಿ. ದೋಷವಿಲ್ಲ. ಕನ್ನಡಿಗರ ಜನ್ಮತ: ಕನ್ನಡ ಭಾಷೆಯನ್ನಾಡುವರ ಕಿವಿಗೆ ಈ ಭಾಷೆಯು ಮೃದುವಾಗಿಯೇ ಇರುತ್ತದೆಂಬದನ್ನು ಅವರು ಮರೆಯಲಾಗದು. ಈ ಗ್ರಂಥದಲ್ಲಿ ಸಂಸ್ಕೃತದ ಕೆಲಕೆಲವು ಉದ್ದುದ್ದ ಸಮಾಸ ಪದಗಳನ್ನು ಪ್ರಯೋಗಿಸಿದ್ದು ಉಚಿತವಾಗಿ ಇಲ್ಲವೆಂದು ತೋರುವದು.

ಒಟ್ಟಿಗೆ ನೋಡಿದರೆ ಪಂಪನ ಈ ಗ್ರಂಥದ ಯಾವ ಭಾಗವೂ ನೀರಸವಾಗಿಲ್ಲ. ಅದರಲ್ಲಿಯೂ ೪ ನೆಯ ಮತ್ತು ೧೩ನೆಯ ಆಶ್ವಾಸಗಳು ಬಹಳ ಮನೋಹರವಾಗಿವೆ. ಈ ಭಾರತದಂತೆ ಈ ಕವಿಯ ಆದಿಪುರಾಣವಾದರೂ ದೊಡ್ಡ ಗ್ರಂಥವು. ಇಂತಹ ಎರಡು ದೊಡ್ಡ ಉತ್ತಮ ಕಾವ್ಯಗಳನ್ನು ಅತ್ಯಲ್ಪ ಅವಧಿಯಲ್ಲಿ ಅಂದರೆ ಒಂಬತ್ತೇ ತಿಂಗಳಲ್ಲಿ ತನ್ನ ಪ್ರತಿಜ್ಞೆಯಂತೆ ರಚಿಸಿದ್ದನ್ನು ನೋಡಿದರೆ ಈ ಕವಿಯ ಸಾಮರ್ಥ್ಯದ ವಿಷಯದಲ್ಲಿ ಆಶ್ಚರ್ಯವಾಗದೆ ಇರದು. ಈ ಗ್ರಂಥವು ಕನ್ನಡಭಾಷೆಗೆ ಮನೋಹರವಾದ ಅಲಂಕಾರವಾಗಿದೆ ಎಂಬ ವಿಷಯದಲ್ಲಿ ಸಂದೇಹವಿಲ್ಲ.

M. P. Pujar, Kannada Pundit.

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं वाग्भूषणम् भूषणम् ॥
(भर्तृहरिः)

ಸಂಪುಟ ೧೬.	ಡಿಸೆಂಬರ ೧೯೧೧.	ಸಂಚಿಕೆ ೫.

ವೈಭವಕಾಲಿಗಳಾದ ಸಾರ್ವಭೌಮ ೫ ನೇ ಜಾರ್ಜ್ ಹಾಗು ಚಕ್ರವರ್ತಿನಿ ಮೇರಿಯವರ ಕಿರೀಟಧಾರಣ ಮಹೋತ್ಸವವು.

ಹಿಂದುಸ್ಥಾನದ ಇತಿಹಾಸದಲ್ಲಿ ಸನ್ ೧೯೧೧ ನೇ ಇಸವಿಯ ಡಿಸೆಂಬರದ ೧೫ ನೇ ತಾರೀಖು ಸುವರ್ಣಾಕ್ಷರಗಳಿಂದ ಬರೆದಿಡುವಷ್ಟು ಮಹತ್ವವುಳ್ಳದ್ದಾಗಿದೆ. ಯಾಕೆಂದರೆ ಆ ದಿವಸ ಮಧ್ಯಾನ್ಹ ೧೨ ಗಂಟೆಯಲ್ಲಿ ಯುಧಿಷ್ಠಿರಾದಿ ಸಾರ್ವಭೌಮ್ಯರ ಕಾಲದಿಂದ ಮೊಗಲ ಚಕ್ರವರ್ತಿಯವರ ಕಾಲದವರೆಗೆ ಭರತಖಂಡದ ರಾಜಧಾನಿಯೆಂದು ಪ್ರಸಿದ್ಧಪಡೆದ ದಿಲ್ಲಿಯ ಪಟ್ಟಣದಲ್ಲಿ ನೆರೆದ ಗೌರ್ನರ್ ಜನರಲ್ ಗೌರ್ನರರು ಮೊದಲಾದ ಬ್ರಿಟಿಷ್ ಅಧಿಕಾರಿಗಳಿಂದಲೂ ಏತದ್ದೇಶೀಯ ರಾಜರಿಂದಲೂ, ಪ್ರಾಂತಗಳ ಪ್ರತಿನಿಧಿಗಳಿಂದಲೂ, ಪಂಡಿತರಿಂದಲೂ ಪದವೀಧರರಿಂದಲೂ ಪ್ರಜಾಪ್ರಮುಖರಿಂದಲೂ ಸುಶೋಭಿತವಾಗಿರುವ ಅಪೂರ್ವ ಶೋಭೆಯುಳ್ಳ ಸಭಾಮಂಟಪದಲ್ಲಿ ವೈಭವಶಾಲಿಗಳಾದ ಸಾರ್ವಭೌಮ ಪಂಚಮಜಾರ್ಜರವರು, ಚಕ್ರವರ್ತಿನಿಯವರಾದ ಮೇರಿಯವರ ಸಮೇತವಾಗಿ ಸಿಂಹಾಸನವನ್ನಾರೋಹಿಸಿ, ರತ್ನಖಚಿತವಾದ ಕಿರೀಟವನ್ನು ಧರಿಸಿ, ಈ ನಮ್ಮ ಭರತಖಂಡದ ಪ್ರಜೆಗಳ ವಿಷಯವಾಗಿ ತಮಗಿರುವ ಪ್ರಜಾವಾತ್ಸಲ್ಯವನ್ನೂ ಸಹಾನುಭೂತಿಯನ್ನೂ ಪ್ರತ್ಯಕ್ಷವಾಗಿ ಪ್ರದರ್ಶಿಸಿದರು.

ಈ ಭರತಖಂಡದಲ್ಲಿ ಬ್ರಿಟಿಷ್ ಸಾಮ್ರಾಜ್ಯವು ನೆಲೆಗೊಳ್ಳುವ ಮೊದಲು ಇದರಲ್ಲಿ ಅನೇಕ ಹಿಂದೂ ಹಾಗೂ ಮಹಮ್ಮದೀಯ ಚಕ್ರವರ್ತಿಗಳು ದಿಲ್ಲಿಯಲ್ಲಿ ಆಳಿದರೂ ಒಬ್ಬರಿಂದಲೂ ಕೂಡ ಇಡೀ ಹಿಂದುಸ್ತಾನವನ್ನು ಅಖಂಡವಾದ ಏಕಚಕ್ರಾಧಿಪತ್ಯಕ್ಕೆ ಒಳಪಡಿಸುವದಾಗಲಿಲ್ಲ. ೧೧ ನೇ ಶತಮಾನದಿಂದ ೧೮ ನೇ ಶತಮಾನದ

ವರೆಗೆ ದಿಲ್ಲಿಯಲ್ಲಿ ಆಳಿದ ಮಹಮ್ಮದೀಯ ಬಾದಷಹರೆಲ್ಲ "ಚಕ್ರವರ್ತಿ"ಯೆಂಬ ಅತಿಗೌರವವುಳ್ಳ ಬಿರುದಾವಳಿಯನ್ನು ಧರಿಸಿದ್ದರೂ ಅವರ ರಾಜ್ಯದ ವಿಸ್ತಾರವು ಆ ಬಿರುದಾವಳಿಗೆ ಶೋಭಿಸುವಂತಿದ್ದಿಲ್ಲ. ಔರಂಗಜೇಬನ ತರುವಾಯ ಆಗಿ ಹೋದ ಮೊಗಲ್ ಬಾದಷಹರು ದುರ್ಬಲರೂ ವಿಷಯಾಸಕ್ತರೂ ಇದ್ದದರಿಂದ ಪಟ್ಟಕ್ಕೆ ಕೂಡಿಸಿದ ಮುಖ್ಯ ಮಂತ್ರಿಗಳ ಕೈಯಲ್ಲಿ ಅವರು ಗೊಂಬೆಗಳಂತಿದ್ದರು. ಅವರ ಕೈ ಕೆಳಗಿರುವ ಸುಭೇದಾರರೆಲ್ಲ ಸಂಧಿಸಾಧಿಸಿ ಸ್ವತಂತ್ರರಾದರು. ಭರತಖಂಡದಲ್ಲೆಲ್ಲ ಅಂತಸ್ಥಕಲಹಗಳುಂಟಾದವು. ದೇಶದೊಳಗಿನ ಶಾಂತತೆಯು ನಷ್ಟವಾಯಿತು. ವ್ಯಾಪಾರೋದ್ಯೋಗಗಳು ಕಟ್ಟಾದವು. ದೇಶದ ಮಹತ್ವವು ಕಡಿಮೆಯಾಯಿತು.

ಈ ನಮ್ಮ ಹಿಂದುಸ್ತಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯವು ಸ್ಥಾಪಿಸಲ್ಪಟ್ಟ ಮೇಲೆ ಅಸೇತುಹಿಮಾಚಲ ಪರ್ಯಂತ ಶಾಂತಿಯು ನೆಲೆಗೊಂಡಿತು. ಜನರ ಜೀವಿತವಿತ್ತ ಗಳು ಸುರಕ್ಷಿತವಾದವು. ದೇಶದಲ್ಲೆಲ್ಲ ಅನೇಕ ತರದ ಸುಧಾರಣೆಗಳಾದವು. ಹೆಚ್ಚಿಗೆ ಹೇಳುವದರಿಂದೇನು? ಇಡೀ ಪ್ರಪಂಚದ $\frac{1}{4}$ ದಷ್ಟು ರಾಜ್ಯದ ವಿಸ್ತಾರವುಳ್ಳ ಹಾಗು ಇಡೀ ಪೃಥ್ವಿಯ ಜನಸಂಖ್ಯೆಯು $\frac{1}{5}$ ಜನಸಂಖ್ಯೆಯುಳ್ಳ ಬ್ರಿಟಿಷ್ ಸಾಮ್ರಾಜ್ಯವೆಂಬ ಅವಾಢ್ಯ ಸಾಮ್ರಾಜ್ಯದ ಮುಕುಟಮಣಿಯೆಂಬ ಘನತೆಯು ಈ ನಮ್ಮ ಭರತ ಖಂಡಕ್ಕೆ ವ್ಯಾಪ್ತವಾಯಿತು.

ಬಾದಷಹ ಪಂಚಮ ಜಾರ್ಜರ ಈ ಕಿರೀಟಧಾರಣೋತ್ಸವವು ಅಪೂರ್ವ ವಾದದ್ದೆನ್ನಲಿಕ್ಕೆ ಅಡ್ಡಿ ತೋರುವದಿಲ್ಲ. ರಾಜಶಾಸನ ಶಾಸ್ತ್ರದಲ್ಲಿ ಈ ನಮ್ಮ ಭಾರತೀಯರು ಪಾಶ್ಚಾತ್ಯರಷ್ಟು ಮುಂದರಿಸಿದವರಲ್ಲಾದ್ದರಿಂದ ರಾಜರ ವಿಷಯವಾದ ಅಮೂರ್ತತತ್ವಗಳು ನಮ್ಮ ಮನಸಿನ ಮೇಲೆ ಅಷ್ಟು ಬಿಂಬಿಸುವದಿಲ್ಲ. ಬ್ರಿಟಿಷ್ ಸಾಮ್ರಾಜ್ಯವು ಈ ದೇಶದಲ್ಲಿ ಸ್ಥಾಪಿತವಾಗುವದಕ್ಕಿಂತ ಮೊದಲು ಆಗಿ ಹೋದ ಹಿಂದೂ ಹಾಗು ಮಹಮ್ಮದೀಯ ಚಕ್ರವರ್ತಿಗಳು ಇದೇ ದೇಶದಲ್ಲಿದ್ದು ಆಳುತ್ತಿದ್ದದರಿಂದ ಪ್ರಜಗಳಿಗೆ ಅವರ ದರ್ಶನವು ಕಪಿಲಾಷಷ್ಠಿಯ ಯೋಗವೆನಿಸುವ ಕಾರಣವಿದ್ದಿಲ್ಲ. ಈಷ್ಟ ಇಂಡಿಯಾ ಕಂಪನಿಸರಕಾರದ ಅಮಲು ಈ ದೇಶದಲ್ಲಿ ನಡಿಯುತ್ತಿದ್ದಾಗ ಅವರು ನೇಮಿಸಿದ ಅಧಿಕಾರಿಗಳೇ ರಾಜ್ಯಕಾರಭಾರ ಮಾಡುತ್ತಿದ್ದದರಿಂದ ಭಾರತೀಯರ ರಾಜನಿಷ್ಠೆಗೆ ತಕ್ಕ ಮೂರ್ತವಿಷಯವು ಇಲ್ಲದಂತಾಯಿತು. ಸನ್ ೧೮೫೮ ರಲ್ಲಿ ವಿಕ್ಟೋರಿಯಾ ಮಹಾರಾಣಿಯವರು ಹಿಂದುಸ್ತಾನದ ರಾಜ್ಯದಾಡಳತೆಯನ್ನು ಸ್ವತಃ ತಮ್ಮ ಕೈಯಲ್ಲಿ ತೆಗೆದುಕೊಂಡ ಮೇಲೆ ನಮ್ಮ ರಾಜನಿಷ್ಠೆಗೆ ತಕ್ಕ ವಿಷಯವು ದೊರಕಿತು. ಮಹಾರಾಜ್ಞಿಯವರು ತಮ್ಮ ಜಾಹೀರ ನಾಮೆಯಲ್ಲಿ ಹಿಂದುಸ್ತಾನದ ಪ್ರಜಗಳಿಗೆ ಕೊಟ್ಟ ಅಭಿವಚನಗಳನ್ನು ಪಾಲಿಸಿದ್ದರಿಂದ ಅವರ ವಿಷಯವಾಗಿ ಈ ದೇಶದ ಆಬಾಲವೃದ್ಧರಿಗೆ ಎಷ್ಟು ಪೂಜ್ಯಬುದ್ಧಿಯು ಇತ್ತೆಂಬದನ್ನು ಬೇರೆ ಹೇಳುವ ಅವಶ್ಯಕತೆ

ಬಿಲ್ಲ. ಹಿಂದೀ ಪ್ರಜರ ವಿಷಯವಾಗಿ ತಮಗಿರುವ ಪ್ರೀತಿಯನ್ನೂ ವಿಶ್ವಾಸವನ್ನೂ ವ್ಯಕ್ತಪಡಿಸುವದಕ್ಕಾಗಿ ಅವರು ತಮ್ಮ ೨ನೇ ಚಿರಂಜೀವರಾದ ಪ್ರಿನ್ಸ ಆಲ್‌ಫ್ರೆಡ ಎಂಬವರನ್ನು ಸನ್ ೧೮೬೯ ರಲ್ಲಿ ಹಾಗು ತಮ್ಮ ೩ನೇ ಮಗಳಾದ ಎಡ್ವರ್ಡ ರವರನ್ನು ಸನ್ ೧೮೭೫-೭೬ ರಲ್ಲಿ ಹಿಂದುಸ್ತಾನಕ್ಕೆ ಕಳುಹಿಕೊಟ್ಟರು. ಇವರ ಆಗಮನದಿಂದ ಇಂಗ್ಲಂಡ ಹಾಗು ಹಿಂದುಸ್ತಾನಗಳ ಮಧ್ಯದಲ್ಲಿರುವ ಸಂಬಂಧವು ಹೆಚ್ಚು ದೃಢವಾಯಿತು. ಸನ್ ೧೮೭೭ ರಲ್ಲಾದ ದಿಲ್ಲಿಯ ದರಬಾರಿನಲ್ಲಿ ವ್ಹಿಕ್ಟೋರಿಯಾ ಮಹಾರಾಣಿಯವರು ಹಿಂದುಸ್ತಾನದ ಚಕ್ರವರ್ತಿನಿಯೆಂಬ ಬಿರುದನ್ನು ಧರಿಸಿದರು. ಇವರು ತಮ್ಮ ಆರೋಗ್ಯಕ್ಕಾಗಿ ಯುರೋಪಖಂಡದ ಹಲವು ಭಾಗಗಳಲ್ಲಿ ಸಂಚರಿಸಿದಾಗ್ಯೂ ಈ ದೇಶಕ್ಕೆ ಎಂದೂ ಬರಲಿಲ್ಲ.

ಇವರ ತರುವಾಯ ಇಂಗ್ಲಂಡದ ಪಟ್ಟಕ್ಕೆ ಬಂದ ೭ನೇ ಎಡ್ವರ್ಡ ಬಾದಷಹರು, ಪ್ರಿನ್ಸ ಆಫ ವೇಲ್ಸ ಎಂಬ ಬಿರುದುಳ್ಳ ಯುವರಾಜರಿದ್ದಾಗ ಈ ದೇಶಕ್ಕೆ ಬಂದು ನೋಡತಕ್ಕ ಸ್ಥಳಗಳನ್ನು ನೋಡಿ, ವಿತದ್ದೇಶೀಯ ಅರಸರನ್ನು ಆದರದಿಂದ ಕಾಣಿಸಿಕೊಂಡು ಸನ್ ೧೮೭೫ ಮಾರ್ಚ ತಿಂಗಳಲ್ಲಿ ತಮ್ಮ ದೇಶಕ್ಕೆ ಪ್ರಯಾಣ ಮಾಡಿದರು. ಸನ್ ೧೯೦೫ರಲ್ಲಿ ದಿಲ್ಲಿಯಲ್ಲಾದ ದರಬಾರಕ್ಕೆ ಇವರು ಬಾರದೆ ತಮ್ಮ ಸಂದೇಶವನ್ನು ಆಗ ಗವ್ಹರ್ನರ ಜನರಲ್ ಆಗಿದ್ದ ಲಾರ್ಡ ಕರ್ಝನರ ಮುಖಾಂತರ ಪ್ರಜಗಳಿಗೆ ತಿಳಿಸಿದರು. ಎಡ್ವರ್ಡಬಾದಷಹರು ಯುರೋಪಖಂಡದಲ್ಲಿ ಶಾಂತತೆಯನ್ನು ನೆಲೆಗೊಳಿಸುವ ಉದ್ದೇಶದಿಂದ ಎಷ್ಟೋ ದೇಶಗಳಿಗೆ ಹೋಗಿದ್ದರೂ ಹಿಂದುಸ್ಥಾನಕ್ಕೆ ಬರುವದು ಇವರಿಂದಾಗಲಿಲ್ಲ.

ಇದರಿಂದ ಇಂಗ್ಲಂಡದ ಅರಸರು ಯುರೋಪಖಂಡದ ಸೀಮೆಯನ್ನು ದಾಟಿ ಬಾರದೆಂಬ ಸಾಂಪ್ರದಾಯವಿರಬಹುದೋ ಹ್ಯಾಗೆ? ಎಂಬ ಸಂಶಯವು ಭಾರತೀಯರ ಮನಸಿನಲ್ಲಿತ್ತು. ಪಂಚಮ ಜಾರ್ಜಬಾದಷಹರು ಇನ್ನೂ ಯುವರಾಜರಿದ್ದಾಗ ಸನ್ ೧೯೦೫ ಇಸವಿಯ ನೊವ್ಹೆಂಬರ ೯ನೇ ತಾರೀಖಿನ ದಿವಸ ಪತ್ನೀಸಮೇತರಾಗಿ ಮುಂಬೈ ಪಟ್ಟಣಕ್ಕೆ ಬಂದು ಈ ದೇಶದ ಮುಖ್ಯ ಮುಖ್ಯ ಸ್ಥಳಗಳಿಗೆ ಹೋಗಿ, ಸನ್ ೧೯೦೬ ಮಾರ್ಚ ತಿಂಗಳದ ೧೯ನೇ ತಾರೀಖಿನ ದಿವಸ ಕರಾಚಿ ಬಂದರದಲ್ಲಿ ಹಡಗವನ್ನೇರಿ ತಮ್ಮ ದೇಶಕ್ಕೆ ಮರಳಿ ಹೋದರು. ಆ ಅವಧಿಯಲ್ಲಿ ಈ ದಂಪತಿಗಳಿಗೆ ಈ ದೇಶದ ವಿಷಯವಾಗಿ ಪ್ರೀತಿಯೂ ಪ್ರಜಗಳ ವಿಷಯವಾಗಿ ಸದಯಾಂತಃಕರಣವೂ ಸಹಾನುಭೂತಿಯೂ ಉಂಟಾದವು.

ಈ ನಮ್ಮ ಬಾದಷಹರು ಸನ್ ೧೯೧೦ ಜೂನ ತಿಂಗಳ ೨೨ನೇ ತಾರೀಖಿನ ದಿವಸ ವೆಸ್ಟಮಿನಿಸ್ಟರ ದೇವಾಲಯದಲ್ಲಿ ಅಭಿಷಿಕ್ತರಾದ ಕಾಲಕ್ಕೆ ತಾವು ರಾಜ್ಯಸೂತ್ರವನ್ನು ಕೈಯಲ್ಲಿ ತೆಗೆದುಕೊಂಡ ಸಂಗತಿಯನ್ನು ಹಿಂದುಸ್ತಾನಕ್ಕೆ ಬಂದು ತಮ್ಮ

ವರೆಗೆ ದಿಲ್ಲಿಯಲ್ಲಿ ಆಳಿದ ಮಹಮ್ಮದೀಯ ಬಾದಷಹರೆಲ್ಲ "ಚಕ್ರವರ್ತಿ"ಯೆಂಬ ಅತಿಗೌರವವುಳ್ಳ ಬಿರುದಾವಳಿಯನ್ನು ಧರಿಸಿದ್ದರೂ ಅವರ ರಾಜ್ಯದ ವಿಸ್ತಾರವು ಆ ಬಿರುದಾವಳಿಗೆ ಶೋಭಿಸುವಂತಿದ್ದಿಲ್ಲ. ಔರಂಗಜೇಬನ ತರುವಾಯ ಆಗಿ ಹೋದ ಮೊಗಲ್ ಬಾದಷಹರು ದುರ್ಬಲರೂ ವಿಷಯಾಸಕ್ತರೂ ಇದ್ದದರಿಂದ ಪಟ್ಟಕ್ಕೆ ಕೂಡಿಸಿದ ಮುಖ್ಯ ಮಂತ್ರಿಗಳ ಕೈಯಲ್ಲಿ ಅವರು ಗೊಂಬೆಗಳಂತಿದ್ದರು. ಅವರ ಕೈ ಕೆಳಗಿರುವ ಸುಭೇದಾರರೆಲ್ಲ ಸಂಧಿಸಾಧಿಸಿ ಸ್ವತಂತ್ರರಾದರು. ಭರತಖಂಡದಲ್ಲೆಲ್ಲ ಅಂತಸ್ಥಕಲಹಗಳುಂಟಾದವು. ದೇಶದೊಳಗಿನ ಶಾಂತತೆಯು ನಷ್ಟವಾಯಿತು. ವ್ಯಾಪಾರೋದ್ಯೋಗಗಳು ಕಟ್ಟಾದವು. ದೇಶದ ಮಹತ್ವವು ಕಡಿಮೆಯಾಯಿತು.

ಈ ನಮ್ಮ ಹಿಂದುಸ್ತಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯವು ಸ್ಥಾಪಿಸಲ್ಪಟ್ಟ ಮೇಲೆ ಆಸೇತುಹಿಮಾಚಲ ಪರ್ಯಂತ ಶಾಂತಿಯು ನೆಲೆಗೊಂಡಿತು. ಜನರ ಜೀವಿತವಿತ್ತ ಗಳು ಸುರಕ್ಷಿತವಾದವು. ದೇಶದಲ್ಲೆಲ್ಲ ಅನೇಕ ತರದ ಸುಧಾರಣೆಗಳಾದವು. ಹೆಚ್ಚಿಗೆ ಹೇಳುವದರಿಂದೇನು? ಇಡೀ ಪ್ರಪಂಚದ $\frac{1}{4}$ ದಷ್ಟು ರಾಜ್ಯದ ವಿಸ್ತಾರವುಳ್ಳ ಹಾಗು ಇಡೀ ಪೃಥ್ವಿಯ ಜನಸಂಖ್ಯೆಯು $\frac{1}{5}$ ಜನಸಂಖ್ಯೆಯುಳ್ಳ ಬ್ರಿಟಿಷ್ ಸಾಮ್ರಾಜ್ಯವೆಂಬ ಅವಾಢ್ಯ ಸಾಮ್ರಾಜ್ಯದ ಮುಕುಟಮಣಿಯೆಂಬ ಘನತೆಯು ಈ ನಮ್ಮ ಭರತ ಖಂಡಕ್ಕೆ ಪ್ರಾಪ್ತವಾಯಿತು.

ಬಾದಷಹ ಪಂಚಮ ಜಾರ್ಜರ ಈ ಕಿರೀಟಧಾರಣೋತ್ಸವವು ಅಪೂರ್ವ ವಾದದ್ದೆನ್ನಲಿಕ್ಕೆ ಅಡ್ಡಿ ತೋರುವದಿಲ್ಲ. ರಾಜಶಾಸನ ಶಾಸ್ತ್ರದಲ್ಲಿ ಈ ನಮ್ಮ ಭಾರತೀ ಯರು ಪಾಶ್ಚಾತ್ಯರಷ್ಟು ಮುಂದರಿಸಿದವರಲ್ಲಾದ್ದರಿಂದ ರಾಜರ ವಿಷಯವಾದ ಅಮೂ ರ್ತತತ್ವಗಳು ನಮ್ಮ ಮನಸಿನ ಮೇಲೆ ಅಷ್ಟು ಬಿಂಬಿಸುವದಿಲ್ಲ. ಬ್ರಿಟಿಷ್ ಸಾಮ್ರಾಜ್ಯವು ಈ ದೇಶದಲ್ಲಿ ಸ್ಥಾಪಿತವಾಗುವದಕ್ಕಿಂತ ಮೊದಲು ಆಗಿ ಹೋದ ಹಿಂದೂ ಹಾಗು ಮಹಮ್ಮದೀಯ ಚಕ್ರವರ್ತಿಗಳು ಇದೇ ದೇಶದಲ್ಲಿದ್ದು ಆಳುತ್ತಿದ್ದದರಿಂದ ಪ್ರಜಗ ಳಿಗೆ ಅವರ ದರ್ಶನವು ಕಪಿಲಾಷಷ್ಠಿಯ ಯೋಗವೆನಿಸುವ ಕಾರಣವಿದ್ದಿಲ್ಲ. ಈಷ್ಟ ಇಂಡಿಯಾ ಕಂಪನಿಸರಕಾರದ ಅಮಲು ಈ ದೇಶದಲ್ಲಿ ನಡಿಯುತ್ತಿದ್ದಾಗ ಅವರು ನೇಮಿಸಿದ ಅಧಿಕಾರಿಗಳೇ ರಾಜ್ಯಕಾರಭಾರ ಮಾಡುತ್ತಿದ್ದದರಿಂದ ಭಾರತೀಯರ ರಾಜನಿಷ್ಠೆಗೆ ತಕ್ಕ ಮೂರ್ತವಿಷಯವು ಇಲ್ಲದಂತಾಯಿತು. ಸನ್ ೧೮೫೮ ರಲ್ಲಿ ವ್ಹಿಕ್ಟೋರಿಯಾ ಮಹಾರಾಣಿಯವರು ಹಿಂದುಸ್ತಾನದ ರಾಜ್ಯಾಡಳತೆಯನ್ನು ಸ್ವತಃ ತಮ್ಮ ಕೈಯಲ್ಲಿ ತೆಗೆದುಕೊಂಡ ಮೇಲೆ ನಮ್ಮ ರಾಜನಿಷ್ಠೆಗೆ ತಕ್ಕ ವಿಷಯವು ದೊರ ಕಿತು. ಮಹಾರಾಜ್ಞಿಯವರು ತಮ್ಮ ಜಾಹೀರ ನಾಮೆಯಲ್ಲಿ ಹಿಂದುಸ್ತಾನದ ಪ್ರಜಗ ಳಿಗೆ ಕೊಟ್ಟ ಅಭಿವಚನಗಳನ್ನು ಪಾಲಿಸಿದ್ದರಿಂದ ಅವರ ವಿಷಯವಾಗಿ ಈ ದೇಶದ ಆ ಬಾಲವೃದ್ಧರಿಗೆ ಎಷ್ಟು ಪೂಜ್ಯಬುದ್ಧಿಯು ಇತ್ತೆಂಬದನ್ನು ಬೇರೆ ಹೇಳುವ ಅವಶ್ಯಕತೆ

ಯಿಲ್ಲ. ಹಿಂದೀ ಪ್ರಜರ ವಿಷಯವಾಗಿ ತಮಗಿರುವ ಪ್ರೀತಿಯನ್ನೂ ವಿಶ್ವಾಸವನ್ನೂ ವ್ಯಕ್ತಪಡಿಸುವದಕ್ಕಾಗಿ ಅವರು ತಮ್ಮ ೨ನೇ ಚಿರಂಜೀವರಾದ ಪ್ರಿನ್ಸ ಆಲ್‌ಫ್ರೆಡ ಎಂಬವರನ್ನು ಸನ್ ೧೮೬೯ ರಲ್ಲಿ ಹಾಗು ತಮ್ಮ ಗಾದಿಯ ಮಾಲಕರಾದ ಎಡ್ವರ್ಡ ರವರನ್ನು ಸನ್ ೧೮೭೫-೭೬ ರಲ್ಲಿ ಹಿಂದುಸ್ತಾನಕ್ಕೆ ಕಳುಹಿಕೊಟ್ಟರು. ಇವರ ಆಗ ಮನದಿಂದ ಇಂಗ್ಲೆಂಡ ಹಾಗು ಹಿಂದುಸ್ತಾನಗಳ ಮಧ್ಯದಲ್ಲಿರುವ ಸಂಬಂಧವು ಹೆಚ್ಚು ದೃಢವಾಯಿತು. ಸನ್ ೧೮೭೭ ರಲ್ಲಾದ ದಿಲ್ಲಿಯ ದರಬಾರಿನಲ್ಲಿ ವ್ಹಿಕ್ಟೋರಿಯಾ ಮಹಾರಾಣಿಯವರು ಹಿಂದುಸ್ತಾನದ ಚಕ್ರವರ್ತಿನಿಯೆಂಬ ಬಿರುದನ್ನು ಧರಿಸಿದರು. ಇವರು ತಮ್ಮ ಆರೋಗ್ಯಕ್ಕಾಗಿ ಯುರೋಪಖಂಡದ ಹಲವು ಭಾಗಗಳಲ್ಲಿ ಸಂಚರಿಸಿ ದಾಗ್ಯೂ ಈ ದೇಶಕ್ಕೆ ಎಂದೂ ಬರಲಿಲ್ಲ.

ಇವರ ತರುವಾಯ ಇಂಗ್ಲೆಂಡದ ಪಟ್ಟಕ್ಕೆ ಬಂದ ೭ನೇ ಎಡ್ವರ್ಡ ಬಾದಷಹರು, ಪ್ರಿನ್ಸ ಆಫ ವೇಲ್ಸ ಎಂಬ ಬಿರುದುಳ್ಳ ಯುವರಾಜರಿದ್ದಾಗ ಈ ದೇಶಕ್ಕೆ ಬಂದು ನೋಡತಕ್ಕ ಸ್ಥಳಗಳನ್ನು ನೋಡಿ, ವಿತದ್ದೇಶೀಯ ಅರಸರನ್ನು ಆದರದಿಂದ ಕಾಣಿಸಿ ಕೊಂಡು ಸನ್ ೧೮೭೫ ಮಾರ್ಚ ತಿಂಗಳಲ್ಲಿ ತಮ್ಮ ದೇಶಕ್ಕೆ ಪ್ರಯಾಣ ಮಾಡಿ ದರು. ಸನ್ ೧೯೦೩ರಲ್ಲಿ ದಿಲ್ಲಿಯಲ್ಲಾದ ದರಬಾರಕ್ಕೆ ಇವರು ಬಾರದೆ ತಮ್ಮ ಸಂದೇಶವನ್ನು ಆಗ ಗವ್ಹರ್ನರ ಜನರಲ್ ಆಗಿದ್ದ ಲಾರ್ಡ ಕರ್ಝನರ ಮುಖಾಂತರ ಪ್ರಜಗಳಿಗೆ ತಿಳಿಸಿದರು. ಎಡ್ವರ್ಡಬಾದಷಹರು ಯುರೋಪಖಂಡದಲ್ಲಿ ಶಾಂತತೆ ಯನ್ನು ನೆಲೆಗೊಳಿಸುವ ಉದ್ದೇಶದಿಂದ ಎಷ್ಟೋ ದೇಶಗಳಿಗೆ ಹೋಗಿದ್ದರೂ ಹಿಂದು ಸ್ಥಾನಕ್ಕೆ ಬರುವದು ಇವರಿಂದಾಗಲಿಲ್ಲ.

ಇದರಿಂದ ಇಂಗ್ಲೆಂಡದ ಅರಸರು ಯುರೋಪಖಂಡದ ಸೀಮೆಯನ್ನು ದಾಟಿ ಬಾರದೆಂಬ ಸಾಂಪ್ರದಾಯವಿರಬಹುದೋ ಹ್ಯಾಗೆ? ಎಂಬ ಸಂಶಯವು ಭಾರತೀ ಯರ ಮನಸಿನಲ್ಲಿತ್ತು. ಪಂಚಮ ಜಾರ್ಜಬಾದಷಹರು ಇನ್ನೂ ಯುವರಾಜರಿದ್ದಾಗ ಸನ್ ೧೮೮೫ ಇಸವಿಯ ನೊವ್ಹೆಂಬರ ೯ನೇ ತಾರೀಖಿನ ದಿವಸ ಪತ್ನೀಸಮೇತ ರಾಗಿ ಮುಂಬೈ ಪಟ್ಟಣಕ್ಕೆ ಬಂದು ಈ ದೇಶದ ಮುಖ್ಯ ಮುಖ್ಯ ಸ್ಥಳಗಳಿಗೆ ಹೋಗಿ ಸನ್ ೧೮೮೬ ಮಾರ್ಚ ತಿಂಗಳದ ೧೮ನೇ ತಾರೀಖಿನ ದಿವಸ ಕರಾಚಿ ಬಂದರದಲ್ಲಿ ಹಡಗವನ್ನೇರಿ ತಮ್ಮ ದೇಶಕ್ಕೆ ಮರಳಿ ಹೋದರು. ಆ ಅವಧಿಯಲ್ಲಿ ಈ ದಂಪತಿಗ ಳಿಗೆ ಈ ದೇಶದ ವಿಷಯವಾಗಿ ಪ್ರೀತಿಯೂ ಪ್ರಜಗಳ ವಿಷಯವಾಗಿ ಸದಯಾಂತ: ಕರಣವೂ ಸಹಾನುಭೂತಿಯೂ ಉಂಟಾದವು.

ಈ ನಮ್ಮ ಬಾದಷಹರು ಸನ್ ೧೯೧೦ ಜೂನ ತಿಂಗಳ ೨೨ ನೇ ತಾರೀಖಿನ ದಿವಸ ವೆಸ್ಟಮಿನಿಸ್ಟರ ದೇವಾಲಯದಲ್ಲಿ ಅಭಿಷಿಕ್ತರಾದ ಕಾಲಕ್ಕೆ ತಾವು ರಾಜ್ಯಸೂ ತ್ರವನ್ನು ಕೈಯಲ್ಲಿ ತೆಗೆದುಕೊಂಡ ಸಂಗತಿಯನ್ನು ಹಿಂದುಸ್ತಾನಕ್ಕೆ ಬಂದು ತಮ್ಮ

ಪ್ರಜಗಳಿಗೆ ಸ್ವತ: ತಿಳಿಸುವ ಉದ್ದೇಶವನ್ನು ವ್ಯಕ್ತಪಡಿಸಿದ್ದರು. ಆ ಸುಯೋಗವು ಈ ವರ್ಷದ ಡಿಸೆಂಬರ ೧೭ ನೇ ತಾರೀಖಿನ ದಿವಸ ಒದಗಿತು.

ದಿಲ್ಲಿಯಲ್ಲಾಗತಕ್ಕ ರಾಜ್ಯಾರೋಹಣದ ನಿಮಿತ್ತವಾಗಿ ಲಂಡನದಲ್ಲಿರುವ ತಮ್ಮ "ಬಕ್ಕಿಂಗ್ಹಮ್ ಪ್ಯಾಲೇಸ" ಎಂಬ ಅರಮನೆಯಿಂದ ಪತ್ನೀಸಮೇತರಾಗಿ ಹೊರಟು ಸ್ಟೇಶನಕ್ಕೆ ಬರುವ ಮಾರ್ಗದಲ್ಲಿ ಲಂಡನನಗರವಾಸಿಗಳು ತಮಗಾದ ಆನಂದವನ್ನು ವ್ಯಕ್ತಪಡಿಸಿದರು. ಉಗಿಬಂಡಿಯಲ್ಲಿ ಪರಿವಾರದೊಡನೆ ಕುಳಿತು ಪೊರ್ಟ್ಸಮಥ್ ಬಂದರಕ್ಕೆ ಪ್ರಯಾಣಿಸಿದರು. ಅಲೆಕ್ಸಾಂಡ್ರಾ ಮಹಾರಾಣಿ ಮೊದಲಾದವರು ಇವರನ್ನು ಪೋರ್ಟ್ಸಮಥ್‌ದವರೆಗೆ ಹಿಂಬಾಲಿಸಿದ್ದರು. ಪೋರ್ಟ್ಸಮಥ್‌ದಲ್ಲಿ ಸಿದ್ಧವಾಗಿದ್ದ "ಮದೀನಾ" ಎಂಬ ಭವ್ಯವಾದ ನೌಕೆಯನ್ನೇರಿ ಮಹಾರಾಣಿ ಮೇರಿ ಸ್ಟೇಟ ಸೆಕ್ರೆಟರಿ ಕ್ರೂ ಮೊದಲಾದವರಿಂದ ಕೂಡಿಕೊಂಡು ಇಂಡಿಯಾ ದೇಶಕ್ಕಾಗಿ ಪ್ರಯಾಣಿಸಿದರು. ಮದೀನಾ ಹಡಗವು ಮಾರ್ಗದಲ್ಲಿ ಯಾವತರದ ತೊಂದರೆಯು ಬಾರದೆ ಸುರಕ್ಷಿತವಾಗಿ ಜಿಬ್ರಾಲ್ಟರ ಸಾಮುದ್ರ ಧ್ವನಿಯನ್ನು ದಾಟಿ ಮುಂದೆ ಡಿಸೆಂಬರ ೨೩ನೇ ತಾರೀಖಿನ ದಿವಸ ಬ್ರಿಟಿಷ್ ಹಿಂದುಸ್ತಾನದ ಬಾಗಿಲವಾದ ಏಡನ್ ಬಂದರಕ್ಕೆ ಬಂದು ತಲುಪಲು ಬಾದಷಹರು ಮೇಳೆಗೆ ಸರಿಯಾಗಿ ಮುಂಬೈ ಬಂದರಕ್ಕೆ ಬಂದು ತಲುಪುವರೆಂಬ ಆಶೆಯು ಭಾರತೀಯರಲ್ಲುಂಟಾದದ್ದು ಸಹಜವು, ಡಿಸೆಂಬರ ೩೦ನೇ ತಾರೀಖಿನ ದಿವಸ "ಮದೀನಾ" ಹಡಗವು "ಅಪೊಲೋ" ಬಂದರಕ್ಕೆ ಬಂದು ತಲುಪಿತು. ತದನಂತರ ವರ್ತಿಸಿದ ಸಂಗತಿಗಳನ್ನು ನಮ್ಮ ವಾಚಕರ ಸಲುವಾಗಿ ಸಂಕ್ಷಿಪ್ತವಾಗಿ ಇದರಡಿಕೊಡುವೆವು.

ಶನಿವಾರ ತಾರೀಖು ೩ನೇ ದಿಶಂಬರ ದಿವಸ ಪ್ರಾತ:ಕಾಲದ ೧೦ ಗಂಟೆಗೆ ಬಾದಷಹರವರ 'ಮದೀನಾ' ಉಗೆಹಡಗವು ಮುಂಬಯಿ ಬಂದರಕ್ಕೆ ಬಂದು ತಲ್ಪಿತು. ಎಲ್ಲಕ್ಕೂ ಮೊದಲು ಹಿಂದುಸ್ತಾನದ ವ್ಹಾಯಿಸರಾಯ ಲಾರ್ಡ ಹಾರ್ಡಿಂಜ ಸಾಹೇಬರು ಬಾದಷಹರ ದರ್ಶನಕ್ಕಾಗಿ ಅಪಾಲೋಬಂದರದಿಂದ ಉಗೆಹಡಗಕ್ಕೆ ಹೋದರು. ತರುವಾಯ ನಾ. ಗವ್ಹರ್ನರ ಸರಜಾರ್ಜ ಕ್ಲಾರ್ಕ ಸಾಹೇಬರೂ ಇಲಾಖೆಯ ಇತರ ದೊಡ್ಡ ದೊಡ್ಡ ಅಧಿಕಾರಿಗಳೂ ಸಾರ್ವಭೌಮ ದಂಪತಿಗಳ ದರ್ಶನವನ್ನು ತಕ್ಕೊಂಡು ತಿರುಗಿ ಬಂದರು. ಆ ದಿನ ಮಧ್ಯಾನ್ಹದ ನಾಲ್ಕು ಗಂಟೆಗೆ ಬಾದಷಹರವರು ಭರತಖಂಡದ ಪುಣ್ಯಭೂಮಿಯ ಮೇಲೆ ಕಾಲಿಡತಕ್ಕವರಿದ್ದರೂ ಹನ್ನೊಂದು ಗಂಟೆಯಿಂದಲೇ ಪ್ರೇಕ್ಷಕರ ಸಮುದಾಯವು ತಮ್ಮ ತಮ್ಮ ಸ್ಥಳದ ಅನುಕೂಲತೆಯನ್ನು ಮಾಡಿಕೊಳ್ಳುವ ವಿಚಾರದಲ್ಲಿ ತೊಡಗಿತ್ತು. ಬಾದಷಹರವರ ಸ್ವಾಗತೋತ್ಸವದ ಸಲುವಾಗಿ ನಿಮಂತ್ರಿತರಾದ ಈ ಇಲಾಖೆಯೊಳಗಿನ ದೊಡ್ಡ ದೊಡ್ಡ ಸಂಸ್ಥಾನಿಕರು, ಸರದಾರರು, ಮ್ಯುನಸಿಪಾಲ್ಟಿ ಹಾಗು ಕಾರ್ಪೋರೇಶನ್‌ದ

ಸಭಾಸದರು, ಮುಂಬಯಿ ನಗರದೊಳಗಿನ ಸನ್ಮಾನಿತರಾದ ಸಭ್ಯಗೃಹಸ್ಥರು ಇವರ ಸಲುವಾಗಿ ಅಪಾಲೊ ಬಂದರದ ಮೇಲೆ ವಿಶಾಲವೂ ಅರ್ಧಚಂದ್ರಾಕೃತಿಯೂ ಆದ ಒಂದು ಛಾವಣಿಯಿಲ್ಲದ ಮಂಟಪವು ನಿರ್ಮಿಸಲ್ಪಟ್ಟಿತ್ತು. ಈ ಮಂಟಪವು ಸಮುದ್ರಾಭಿಮುಖವಾಗಿರುವದರಿಂದ ಬಾದಷಹರು ನೀರೊಳಗಿಂದ ನೆಲದ ಮೇಲೆ ಕಾಲಿಟ್ಟ ಸ್ಥಳದಿಂದ ಸಭಾಗೃಹದಲ್ಲಿ ಪ್ರವೇಶಮಾಡುವವರೆಗೆ ಆ ಮಂಟಪದಲ್ಲಿ ಕುಳಿತ ಎಲ್ಲ ಜನರಿಗೂ ಅವರ ದರ್ಶನಲಾಭವಾಗುವಂತೆ ವ್ಯವಸ್ಥೆಯು ಇತ್ತು. ಮೂರುಗಂಟೆಯ ಸುಮಾರಿಗೆ ಈ ಗೃಹವು ಜನರಿಂದ ತುಂಬಿ ಹೋಗಿತ್ತು.

ಮಧ್ಯಾಹ್ನದ ಮೂರುವರೆ ಗಂಟೆಯ ಸುಮಾರಿಗೆ ಬಾದಷಹರನ್ನು ಕರಕೊಂಡು ಬರುವದಕ್ಕಾಗಿ ನಾ. ಗವ್ಹರ್ನರ ಜನರಲ್ ಸಾಹೇಬರೂ ನಾ. ಗವ್ಹರ್ನರ ಸಾಹೇಬರೂ ಬಂದರದ ಮೇಲೆ ಹಾಜರಾದರು. ನಾಲ್ಕು ಬಡಿಯಲಿಕ್ಕೆ ಹತ್ತು ನಿಮ್ಯುಟುಗಳು ಇರುವಾಗ ಮಹಾರಾಜರೂ, ಮಹಾರಾಣಿಯವರೂ ಮದೀನಾ ಉಗೆಹಡಗದಿಂದ ಸ್ಟೀಮಲಾಂಚವೆಂಬ ಬೋಟಿನಲ್ಲಿ ಇಳಿದರು. ಕೂಡಲೆ ಅಲ್ಲಿದ್ದ ಯುದ್ಧದ ಹಡಗಗಳೊಳಗಿನ ತೋಪುಗಳು ಧಡಲ್ ಧಡಲ್ ಎಂದು ಹಾರಹತ್ತಿದವು. ಒಂದು ನೂರಾ ಒಂದು ತೋಪುಗಳು ಹಾರುವಷ್ಟರಲ್ಲಿ ಬಾದಶಹರು ದಂಡೆಗೆ ಬಂದು ತಲ್ಪಿದರು. ಅವರ ಪಾದಸ್ಪರ್ಶವಾಗುವ ಪವಿತ್ರಸ್ಥಳದಲ್ಲಿ ಅತ್ಯಂತ ಶೋಭಾಯಮಾನವಾದ ಗುಮ್ಮಟದಿಂದ ಒಪ್ಪುವ ಸುವರ್ಣದ ಕಳಸವುಳ್ಳ ಮಂಟಪವು ಕಟ್ಟಲ್ಪಟ್ಟಿತ್ತು. ಅಲ್ಲಿ ಮೊದಲು ಸಾರ್ವಭೌಮ ದಂಪತಿಗಳಿಗೆ ಸ್ವಾಗತವಾಯಿತು. ಅಲ್ಲಿಂದ ಸಭಾಗೃಹದೊಳಗಿನ ಉಚ್ಚಾಸನಗಳ ವರೆಗೆ ಕೆಂಪು ಬನಾತನ್ನು ಹಾಸಿದ್ದರು. ಮಹಾರಾಜರೂ ಮಹಾರಾಣಿಯವರೂ, ಸ್ಟೇಟ ಸೆಕ್ರೇಟರಿ ಲಾರ್ಡ ಕ್ರ್ಯೂ ಧೊರೆಗಳೂ ನಾ. ಗವ್ಹರ್ನರ ಜನರಲ್ ಸಾಹೇಬರೂ, ನಾ. ಗವ್ಹರ್ನರ ಸಾಹೇಬರೂ ಆ ಬನಾತಿನ ಮೇಲೆ ಸಾವಕಾಶವಾಗಿ ನಡೆಯುತ್ತ ಬರುತ್ತಿದ್ದರು. ಆ ಕಾಲಕ್ಕೆ ರಾಜದಂಪತಿಗಳ ಮೇಲೆ ಛತ್ರಚಾಮರಗಳು ಹಿಡಿಯಲ್ಪಟ್ಟಿದ್ದವು. ಅರ್ಧ ಚಂದ್ರಾಕೃತಿ ಮಂಟಪದಲ್ಲಿ ಕುಳಿತ ಎಲ್ಲ ಜನರು ಎದ್ದುನಿಂತು ಸಾರ್ವಭೌಮ ದಂಪತಿಗಳನ್ನು ಕಣ್ಣತುಂಬ ನೋಡಿ, ಹರ್ಷಭರಿತರಾಗಿ ಚಪ್ಪಾಳೆಗಳನ್ನು ಬಾರಿಸಿದರು. ಸಭಾಗೃಹದಲ್ಲಿ ಬಾದಷಹರ ಸಲುವಾಗಿ ಅರ್ಧ ಚಂದ್ರಾಕೃತಿ ಗೃಹದ ಎದುರಿಗೆ ಒಂದು ಎತ್ತರವಾದ ಸ್ಥಳವನ್ನೇ ನಿರ್ಮಿಸಿದ್ದರು. ಆ ಸ್ಥಳದ ಮೇಲೆ ಸುಂದರವಾದ ಒಂದು ಗುಮ್ಮಟವನ್ನು ಕಟ್ಟಿ ಅದರ ಮೇಲೆ ಕಳಸವನ್ನು ಇಡುವದಕ್ಕೆ ಬದಲಾಗಿ ರಾಜಮುಕುಟವನ್ನು ಕೂಡಿಸಿದ್ದರು. ಸಾರ್ವಭೌಮ ದಂಪತಿಗಳು ಕೂಡುವದಕ್ಕಾಗಿ ಕೆಂಪು ಕಿನಕಾಫಿನ ಗಾದಿಗಳುಳ್ಳ ಸುವರ್ಣವರ್ಣದ ಖುರ್ಚಿ

ಗಳು ಇಡಲ್ಪಟ್ಟಿದ್ದವು. ಕಾಲಕೆಳಗೆ ಸುಂದರವಾದ ಚೌರಂಗಗಳನ್ನು ಮಂಡಿಸಿದ್ದರು. ಚಕ್ರವರ್ತಿ ೫ ನೇ ಜಾರ್ಜರವರೂ ಮಹಾರಾಣಿ ಮೇರಿಯವರೂ ತಮ್ಮ ತಮ್ಮ ಸ್ಥಳಗಳಲ್ಲಿ ವಿಶ್ರಮಿಸಿದರು. ಮಹಾರಾಜರವರ ಬಲಗಡೆಗೆ ಲಾರ್ಡ್‌ಕ್ರ್ಯೂ, ಲಾರ್ಡ್ ಹಾರ್ಡಿಂಜ ಧೊರೆಗಳು ನಿಂತುಕೊಂಡರು; ಮಹಾರಾಣಿಯವರ ಖುರ್ಚಿಯ ಎಡ ಗಡೆಗೆ ಸರಜಾರ್ಜ ಕ್ಲಾರ್ಕರೂ ಬೇರೆ ಕೆಲವು ಅಧಿಕಾರಿಗಳೂ ನಿಂತುಕೊಂಡಿದ್ದರು. ಈ ಸಮಯದಲ್ಲಿ ಮುಂಬಯಿ ಕಾರ್ಪೊರೇಶನ್ ಸಭೆಯ ಅಧ್ಯಕ್ಷರಾದ ಸರ ಫೇರೋಜಶಹ ಮೇಥಾ ಎಂಬವರು ಮುಂಬಯಿ ನಾಗರಿಕರ ವತಿಯಿಂದ ಸಾರ್ವ ಭೌಮ ದಂಪತಿಗಳಿಗೆ ಮಾನಪತ್ರವನ್ನು ಅರ್ಪಿಸಿದರು. ಅದರೊಳಗಿನ ಮುಖ್ಯ ಸಂಗತಿಗಳು:—

" ಈ ಹೊತ್ತಿನ ಆನಂದದ ಪ್ರಸಂಗವು ಕೇವಲ ಹಿಂದುಸ್ತಾನದ ಇತಿಹಾಸದ ಲ್ಲಿಷ್ಟೇ ಅಲ್ಲ; ತಮ್ಮ ಆಳಿಕೆಗೆ ಒಳಪಟ್ಟ ಜಗತ್ತಿನ ಬೇರೆ ಬೇರೆ ಭಾಗಗಳ ಇತಿಹಾ ಸದಲ್ಲಿ ಅಪೂರ್ವವಾದದ್ದಿರುವದು. ಹಿಂದುಸ್ತಾನದ ಬಾದಷಹರಾಗಿ ತಾವು ಈ ದೇಶ ಕ್ಕೆ ಬಂದದ್ದರಿಂದ ಬ್ರಿಟಿಷರಾಜಮನೆತನದಲ್ಲಿ ಹಿಂದುಸ್ತಾನಕ್ಕೆ ಯೋಗ್ಯಮರ್ಯಾದೆ ಯುಂಟೆಂಬದೂ, ಬಾದಷಹರು ಧರಿಸಿದ ರಾಜಮುಕುಟವು ಎಲ್ಲ ಪ್ರಕಾರದ ಜನರ ಏಕೀಕರಣದ ಚಿನ್ಹವೆಂಬದೂ ಜಗತ್ತಿಗೆ ವ್ಯಕ್ತವಾಗುತ್ತದೆ. ಮುಂಬಯಿ ನಡುಗ ಡ್ಡೆಯು ಇಂಗ್ಲಂಡದ ಅರಸನಿಗೆ ವಿವಾಹ ಪ್ರಸಂಗದಲ್ಲಿ ವರದಕ್ಷಿಣೆಯಾಗಿ ಸಿಕ್ಕಿರು ತ್ತದೆ. ಈ ನಡುಗಡ್ಡೆಯಲ್ಲಿ ಪಟ್ಟಣವನ್ನು ಕಟ್ಟಿದ ಪ್ರಾಚೀನಕಾಲದ ಮುತ್ಸದ್ದಿಗಳ ಮಹತ್ವಾಕಾಂಕ್ಷೆಗಳು ಈಗ ಈಡೇರಿರುವವೆಂಬದಕ್ಕೆ ಸಂದೇಹವಿಲ್ಲ. ಪೌರ್ವಾತ್ಯ ಪಾಶ್ಚಿಮಾತ್ಯ ಸುಧಾರಣೆಗಳು ಏಕೀಕರಣವಾಗಿ ಉನ್ನತಿಚಕ್ರವು ಭ್ರಮಿಸಬೇಕೆಂಬ ಬ್ರಿಟಿಷ ಸತ್ತಾಧಾರಿಗಳ ಅಪೇಕ್ಷೆಯು ನಮ್ಮ ಈ ಮುಂಬಯಿ ಪಟ್ಟಣದಲ್ಲಿ ಫಲದ್ರೂ ಪಕ್ಕೆ ಬರುತ್ತಿರುವದು. ತಮ್ಮ ದರ್ಶನಲಾಭವು ನಮಗೆ ಹೊಸದೇನೂ ಅಲ್ಲ. ತಾವು ಉಭಯತರು ಹಿಂದುಸ್ತಾನದ ಸಾರ್ವಭೌಮ ದಂಪತಿಗಳಾಗಿ ಈ ದೇಶಕ್ಕೆ ಬಂದ ಸಂಗತಿಯು ನಮ್ಮ ಹೃತ್ಪಟಲದಲ್ಲಿ ಎಂದೂ ಮಾಜಿಹೋಗದಂತೆ ಮಾಡಿರುತ್ತದೆ. ತಾವು ನಮ್ಮ ವಿಷಯವಾಗಿ ನಿಜವಾದ ಸಂಗತಿಗಳನ್ನು ಅರಿತು ಕೊಂಡವರಾಗಿಯೂ ನಮ್ಮ ಸುಖದುಃಖಗಳ ವಿಷಯವಾಗಿ ಸಹಾನುಭೂತಿಯುಳ್ಳವರಾಗಿಯೂ ಪರಲೋ ಕವಾಸಿಗಳೂ ಪೂಜ್ಯರೂ ಆದ ವಿಕ್ಟೋರಿಯಾ ಮಹಾರಾಣಿಯವರೂ ಏಳನೇ ಎಡ್ವ ರ್ಡ ಬಾದಷಹರೂ ನಮ್ಮ ವಿಷಯವಾಗಿ ವ್ಯಕ್ತಪಡಿಸಿದ ಪ್ರೇಮದಿಂದ ಪೂರಿತರಾ ಗಿಯೂ ನಮ್ಮನ್ನು ಆಳಬೇಕೆಂದು ಪ್ರಾರ್ಥಿಸುತ್ತೇವೆ. "

ಈ ಮಾನ ಪತ್ರದ ವಾಚನವಾದ ಮೇಲೆ ಬಾದಷಹರು ಅದಕ್ಕೆ ಕೊಟ್ಟ ಉತ್ತ ರದ ಸಾರಾಂಶವು:—

" ನಾವು ಈಗ ಈ ದೇಶಕ್ಕೆ ಹೊಸಬರಾಗಿ ಬಂದಿಲ್ಲ; ಇಂದಿಗೆ ಆರು ವರ್ಷಗಳ ಪೂರ್ವದಲ್ಲಿ ಮಾತ್ರ ನಾವು ಈ ದೇಶಕ್ಕೆ ಹೊಸದಾಗಿಯೇ ಬಂದಿದ್ದೆವು ಆ ಕಾಲಕ್ಕೆ ನೀವು ನಮಗೆ ಮಾಡಿದ ಸತ್ಕಾರವನ್ನು ನಾವು ಇನ್ನೂ ಮರೆತಿಲ್ಲ. ಆ ಸತ್ಕಾರದಿಂದಲೇ ನಾವು ಪ್ರೇರಿತರಾಗಿ ಈ ವಿಸ್ತಾರವಾದ ದೇಶವನ್ನು ತಿರುಗಿ ಇಲ್ಲಿಯ ಬೇರೆ ಬೇರೆ ನಿವಾಸಿಗಳ ವಿಷಯವಾಗಿ ಸೂಕ್ಷ್ಮಜ್ಞಾನವನ್ನು ಸಂಪಾದಿಸಲಿಕ್ಕೆ ಯತ್ನ ಮಾಡಿದೆವು. ಆ ಜ್ಞಾನದಿಂದ ಇಲ್ಲಿಯ ನಿವಾಸಿಗಳ ವಿಷಯವಾದ ಸಹಾನುಭೂತಿಯು ದೃಢವಾಯಿತು. ಇಂಗ್ಲಂಡದ ರಾಜ್ಯಸೂತ್ರಗಳು ನಮ್ಮ ಕಯ್ಯಲ್ಲಿ ಬಂದ ಕೂಡಲೆ ಎಲ್ಲಕ್ಕೂ ಮೊದಲು ನಮ್ಮ ಮನಸಿನಲ್ಲಿ ಇನ್ನೊಮ್ಮೆ ಹಿಂದುಸ್ತಾನಕ್ಕೆ ಹೋಗಿ ಅಲ್ಲಿಯ ನಮ್ಮ ಪ್ರಜೆಗಳನ್ನು ನೋಡಬೇಕೆಂಬ ವಿಚಾರವು ಉತ್ಪನ್ನವಾಯಿತು. ಅದು ಇಂದಿಗೆ ಸಫಲವಾಯಿತು. ಸದ್ಯಕ್ಕೆ ಈ ದೇಶದಲ್ಲಿ ಸಕಾಲಕ್ಕೆ ಮಳೆಯಾದದ್ದರಿಂದ ಈ ಇಲಾಖೆಯ ಕೆಲಕೆಲವು ಭಾಗಗಳಲ್ಲಿ ಕಾಣುತ್ತಿದ್ದ ಬರಗಾಲದ ಲಕ್ಷಣಗಳು ನಷ್ಟವಾಗಿ ನಾಲ್ಕು ಕಡೆಗೆ ಸುಖಸಮೃದ್ಧಿಯ ಲಕ್ಷಣಗಳು ತೋರಹತ್ತಿರುವವು. ಇದು ಸಮಾಧಾನಕರವಾದ ಸಂಗತಿಯೇ ಸರಿ!

ನಿಮ್ಮ ಮಾನಪತ್ರದಿಂದ ನಮಗೆ ಮುಂಬಯಿ ನಡುಗಡ್ಡೆಯು ಇಂಗ್ಲಂಡದ ಒಬ್ಬ ಅರಸನ ವಿವಾಹದಕಾಲಕ್ಕೆ ವರದಕ್ಷಿಣೆಯಾಗಿ ಸಿಕ್ಕದ್ದೆಂಬ ಪ್ರಾಚೀನ ಸಂಗತಿಯ ಸ್ಮರಣವಾಯಿತು. ಇಂದಿಗೆ ಎರಡೂವರೆ ನೂರುವರ್ಷಗಳ ಪೂರ್ವದಲ್ಲಿ ವಿೂನುಹಿಡಿಯುವವರ ಒಂದು ಸಣ್ಣ ಹಳ್ಳಿಯಾಗಿದ್ದ ಮುಂಬಯಿ ನಡುಗಡ್ಡೆಯು, ನಿಮ್ಮ ಹಾಗು ನಿಮ್ಮ ಪೂರ್ವಜರ ಶ್ರಮದಿಂದ ಬ್ರಿಟಿಷ ರಾಜಮುಕುಟದೊಳಗಿನ ಒಂದು ಮಣಿಯಾಗಿರುವದು. ಇಲ್ಲಿಯ ಭವ್ಯವಾದ ಮಂದಿರಗಳನ್ನು ನೋಡಿ ನಮ್ಮ ಮನಸಿಗೆ ಬಹಳ ಸಂತೋಷವಾಗುತ್ತದೆ. ಹೆಚ್ಚು ಉಪಯುಕ್ತವಾದ ಸುಧಾರಣೆಗಳೂ ಈ ಪಟ್ಟಣದಲ್ಲಿ ಅಲ್ಲಲ್ಲಿಗೆ ದೃಷ್ಟಿಗೋಚರವಾಗುತವೆ. ಇದಲ್ಲದೆ ಈ ನಗರದೊಳಗಿನ ಬೇರೆ ಬೇರೆ ಜಾತಿಯ ಎಲ್ಲ ನಾಗರಿಕರ ಹಿತದ ಸಲುವಾಗಿಯೂ ಸುಖ ಶಾಂತಿಗಳ ಸಲುವಾಗಿಯೂ ಉತ್ಕರ್ಷದ ಸಲುವಾಗಿಯೂ ನಿಮ್ಮೆಲ್ಲರ ಪ್ರಯತ್ನಗಳು ಎಡೆಬಿಡದೆ ನಡೆದಿರುವವು ಇದು ಬಹಳ ಮಹತ್ವದ ಸಂಗತಿಯು. ಇದರಿಂದ ನಿಮ್ಮ ಪಟ್ಟಣವೆಂಬ ರತ್ನದ ಕಾಂತಿಯು ವಿಶೇಷವಾಗಿ ಹಬ್ಬುವದು. ಇಂದು ನೀವು ನಮಗೂ ನಮ್ಮ ಪತ್ನಿಯವರಿಗೂ ಒಳ್ಳೇ ವಿಜೃಂಭಣೆಯಿಂದ ಸ್ವಾಗತವನ್ನು ಮಾಡಿದ್ದಕ್ಕಾಗಿ ನಾವು ಉಭಯತರು ಅಂತಃಕರಣಪೂರ್ವಕವಾಗಿ ನಿಮ್ಮ ಆಭಾರವನ್ನಿಸುತ್ತೇವೆ. ದಯಾಘನನಾದ ಪರಮೇಶ್ವರನು ಹಿಂದುಸ್ತಾನದ ನಿವಾಸಿಗಳ ಮೇಲೆ ಸರ್ವಕಾಲವೂ ಕೃಪಾದೃಷ್ಟಿಯನ್ನು ಇಡಲೆಂತಲೂ ಅವರಿಗೆ ಶಾಂತಿ ಸಮೃದ್ಧಿಗಳನ್ನು ದಯಪಾಲಿಸಲೆಂತಲೂ ನಾವು ಪುನಃಪೂರ್ವಕವಾಗಿ ಪ್ರಾರ್ಥಿಸುತ್ತೇವೆ."

ಅಲ್ಲಿಗೆ ಅವರೋ ಬಂದರದ ಮೇಲಿನ ಸ್ವಾಗತೋತ್ಸವದ ಕಾರ್ಯವು ನೆರವೇರಿತು. ತರುವಾಯ ಪಟ್ಟಣದ ರಾಜವೀಥಿಗಳಲ್ಲಿ ಸಾರ್ವಭೌಮದಂಪತಿಗಳ ಮೆರವಣಿಗೆಯು ಹೊರಬಿತ್ತು. ಚಕ್ರವರ್ತಿ ೫ನೇ ಜಾರ್ಜ ಮಹಾರಾಜರೂ, ಮೇರಿ ಮಹಾರಾಣಿಯವರೂ ಒಂದು ಸುಂದರವಾದ ರಥವನ್ನು ಆರೋಹಣ ಮಾಡಿದರು. ಅವರ ಹಿಂದಿನ ರಥದಲ್ಲಿ ಸ್ಟೇಟಸೆಕ್ರೇಟರಿ ಲಾರ್ಡ ಕ್ರೂ ಸಾಹೇಬರೂ, ಗವ್ಹರ್ನರ ಜನರಲ್ ಲಾರ್ಡ ಹಾರ್ಡಿಂಜ ಸಾಹೇಬರೂ ವಿಶ್ರಮಿಸಿದ್ದರು; ಅವರ ಹಿಂದಿನ ರಥದಲ್ಲಿ ನಾ. ಗವ್ಹರ್ನರ ಸಾಹೇಬರು ತಮ್ಮ ಪತ್ನಿಯವರೊಂದಿಗೆ ಕುಳಿತುಕೊಂಡಿದ್ದರು. ಈ ಮೂರು ರಥಗಳ ಹಿಂದಿನ ಎರಡು ಗಾಡಿಗಳಲ್ಲಿ ಬಾದಷಹರ ಸಂಗಡ ಬಂದ ಕೆಲವು ಅಧಿಕಾರಿಗಳು ಕುಳಿತಿದ್ದರು. ಈ ಅಯ್ದೂ ಗಾಡಿಗಳ ಹಿಂದೆಯೂ ಮುಂದೆಯೂ ದೊಡ್ಡ ದೊಡ್ಡ ಕುದುರೆಗಳನ್ನು ಏರಿದ ಲಕ್ಷ್ಕರೀ ಶಿಪಾಯಿಗಳ ಒಂದೊಂದು ಗುಂಪು ನಡೆದಿತ್ತು. ಎಲ್ಲಕ್ಕು ಮುಂದೆ ತೋಪಿನ ಕೆಲವು ಗಾಡಿಗಳು ನಡೆದಿದ್ದವು. ಈ ವೈಭವದಿಂದ ಮೆರವಣಿಗೆಯು ಮೊದಲೇ ಗೊತ್ತಾದ ರಾಜಮಾರ್ಗಗಳಲ್ಲಿ ಸಾಗಿತು.

ಈ ಮಾರ್ಗಗಳ ಎರಡೂ ಮಗ್ಗಲು, ಅಲ್ಲಲ್ಲಿಗೆ ಸುವರ್ಣ ಕಲಶಗಳುಳ್ಳ ಕಂಬಗಳನ್ನು ನಿಲ್ಲಿಸಿ, ಅವುಗಳನ್ನು ತರತರದ ಬಣ್ಣಗಳಿಂದ ಶ್ರಿಂಗರಿಸಿದ್ದರು. ನಿಶಾನೆಗಳಿಂದಲೂ ಪತಾಕೆಗಳಿಂದಲೂ ತೋರಣಗಳಿಂದಲೂ ಮಾರ್ಗಗಳು ಒಳ್ಳೇ ಶೋಭೆಯನ್ನು ಹೊಂದಿದ್ದವು. ಅಲ್ಲಲ್ಲಿಗೆ ಭವ್ಯವಾದ ಕಮಾನುಗಳನ್ನು ಕಟ್ಟಿ ಅವುಗಳ ಮೇಲೆ 'ಸಾರ್ವಭೌಮ ದಂಪತಿಗಳಿಗೆ ಜಯವಾಗಲಿ' ಎಂಬ ಅರ್ಥದ ಸುವರ್ಣಾಕ್ಷರಗಳು ಥಳಥಳಿಸುತ್ತಿದ್ದವು. ಕಮಾನುಗಳ ಮೇಲಿನ ಗುಮ್ಮಟಗಳು ಒಳ್ಳೇ ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದವು. ಮೆರವಣಿಗೆಯು ಹೊರಡತಕ್ಕ ರಾಜಮಾರ್ಗಗಳ ಎರಡೂಮಗ್ಗಲು ಲಷ್ಕರೀ ಶಿಪಾಯಿಗಳು ಸಾಲಾಗಿ ನಿಂತುಕೊಂಡಿದ್ದರೂ ಅವರ ಹಿಂಭಾಗದಲ್ಲಿಯೂ, ಅಂತಸ್ತುಗಳಲ್ಲಿಯೂ ಪ್ರೇಕ್ಷಕರ ಸಂದಣಿಯು ಮಿಗಿಲಾಗಿತ್ತು. 'ಕುಕ್‌ಶೊಕ' ಮಾರ್ಗದಿಂದ ಎಲ್ಫಿನ್ಸಟನ್ ಹಾಯಸ್ಕೂಲಿಗೆ ಹೋಗುವ ಮಾರ್ಗದಲ್ಲಿ ರಾಜದರ್ಶನೋತ್ಸುಕರಾದ ೩೦,೭೫ ಸಾವಿರ ವಿದ್ಯಾರ್ಥಿಗಳು ತಮ್ಮ ಸಲುವಾಗಿ ಮೊದಲೇ ಸಿದ್ಧಮಾಡಿಟ್ಟ ಸ್ಥಳಗಳಲ್ಲಿ ಕಯ್ಯೊಳಗೆ ನಿಶಾನೆಗಳನ್ನು ಹಿಡಕೊಂಡು ವ್ಯವಸ್ಥೆಯಿಂದ ಕುಳಿತಿದ್ದರು. ಈ ಮಾರ್ಗಗಳೊಳಗಿನ ಎಲ್ಲ ಸರಕಾರಿ ಹಾಗು ಖಾಸಗಿ ಇಮಾರತುಗಳು ಚಿತ್ರವಿಚಿತ್ರವಾದ ನಿಶಾನೆಗಳಿಂದಲೂ ಕಾಗದಗಳಿಂದಲೂ ಕಮಾನುಗಳಿಂದಲೂ ಸುಶೋಭಿತವಾಗಿ ಮಾಡಲ್ಪಟ್ಟಿದ್ದವು. ಸಾರ್ವಭೌಮ ದಂಪತಿಗಳ ಸ್ವಾರಿಯು ಕ್ರಮವಾಗಿ ಈ ಎಲ್ಲ ರಾಜಮಾರ್ಗಗಳೊಳಗಿಂದ ಹಾಯ್ದು ನಡೆಯಿತು. ಪಬ್ಲಿಕವರ್ಕ್ಸ ಕಚೇರಿಯು

ಹತ್ತರದ ಕಮಾನಿನ ಮೇಲೆ ಕಟ್ಟಲ್ಪಟ್ಟ ಗುಮ್ಮಟಗಳಲ್ಲಿ ಕುಳಿತ ಜನರು ಸಾರ್ವ ಭೌಮ ದಂಪತಿಗಳ ಮೇಲೆ ಮುತ್ತುಗಳನ್ನು ಸೂರೆಮಾಡಿದರು. ಜನರು ಚಕ್ರವರ್ತಿ ದಂಪತಿಗಳನ್ನು ಕಣ್ತುಂಬ ನೋಡಿ, ಜಯಘೋಷದಿಂದಲೂ ಚಪ್ಪಾಳಿಗಳಿಂದಲೂ ಆನಂದಪ್ರದರ್ಶನ ಮಾಡಿದರು. ಬಾದಷಹರವರ ರಥವು ವಿದ್ಯಾರ್ಥಿಗಳ ಮುಂದೆ ಬರಲು, ಅವರು ತಮ್ಮ ಕಯ್ಯೊಳಗಿನ ನಿಶಾನೆಗಳನ್ನು ಮೇಲಕ್ಕೆತ್ತಿ ರಾಜಭಕ್ತಿಯನ್ನು ವ್ಯಕ್ತಪಡಿಸಿದರು. ಈ ಮೇರೆಗೆ ಒಂದು ತಾಸಿನಲ್ಲಿ ಏಳು ಮೈಲು ಮಾರ್ಗಕ್ರಮಣ ಮಾಡಿ ಬಾದಷಹರ ರಥವು ತಿರುಗಿ ಅಪಾಲೋ ಬಂದರದ ಮೇಲೆ ಬಂದಿತು. ಮಹಾ ರಾಜರೂ ಮಹಾರಾಣಿಯವರೂ ಮದೀನಾ ಉಗೆಹಡಗಕ್ಕೆ ಪ್ರಯಾಣಮಾಡಿದರು. ಜನರು ರಾಜದಂಪತಿಗಳನ್ನು ಬಗೆಬಗೆಯಿಂದ ಬಣ್ಣಿಸುತ್ತ ತಮ್ಮ ತಮ್ಮ ಬಿಡಾರಗಳಿಗೆ ತೆರಳಿದರು.

ಆ ದಿನ ರಾತ್ರಿ ಪಟ್ಟಣದಲ್ಲಿ ನಾಲ್ಮುಕಡೆಗೆ ವಿಲಕ್ಷಣವಾದ ದೀಪೋತ್ಸವ ವಾಯಿತು. ಜೇರೆ ಜೇರೆ ಇಮಾರತುಗಳು ಜೇರೆ ಜೇರೆ ಬಣ್ಣದ ವಿದ್ಯುದ್ದೀಪಗಳಿಂದ ಅತ್ಯಂತ ಶೋಭಾಯಮಾನವಾಗಿ ಕಂಗೊಳಿಸುತ್ತಿದ್ದವು. ಎಷ್ಟೋ ಸರಕಾರೀ ಖಾಸಗೀ ಇಮಾರತುಗಳು ಸಹಸ್ರಾವಧಿ ದೀಪಗಳಿಂದ ತುಂಬಿ ಹೋಗಿದ್ದವು. ಇದೇ ಪ್ರಕಾರ ಳನೇ ೫ನೇ ತಾರೀಖುಗಳ ದಿವಸವೂ ದೀಪೋತ್ಸವವು ಮಾಡಲ್ಪಟ್ಟಿತು.

ಆದಿತ್ಯವಾರ ತಾರೀಖು ೫ನೇ ದಿಶಂಬರ ದಿವಸ ಸಾರ್ವಭೌಮದಂಪತಿಗಳಿಗೆ ನಾ. ಗವ್ಹರ್ನರ ಸಾಹೇಬರ ಬಂಗಲೆಯಲ್ಲಿ ಮೇಜವಾನಿಯ ಸಮಾರಂಭವು ನೆರವೇರಿತ್ತು. ಆ ಕಾಲಕ್ಕೆ ಕೆಲವು ನೇಟೀವ ಸಭ್ಯಗೃಹಸ್ಥರೂ ಬಾದಷಹರ ಪಂಕ್ತಿಲಾಭವನ್ನು ಪಡೆದರು.

ಬಾದಷಹರ ಆಗಮನದ ಪ್ರೀತ್ಯರ್ಥವಾಗಿ ಮುಂಬಯಿ ನಾಗರೀಕರು ಮಾಡಿದ ಅನೇಕ ಸಿದ್ಧತೆಗಳಲ್ಲಿ 'ಹಳೇ ಮುಂಬಯಿ ಪ್ರದರ್ಶನವು' ಒಂದಾಗಿದೆ. ಇದು ಎಲ್ಫಿನ್ಸ್ಟನ್ ಹಾಯಸ್ಕೂಲಿನ ಎದುರಿಗೆ ಇರುವ ವಿಸ್ತಾರವಾದ ಜೈಲಿನಲ್ಲಿ ಇರುವದು. ಈ ಪ್ರದರ್ಶನದಿಂದ ಹಿಂದುಸ್ತಾನದ ವಿಶೇಷವಾಗಿ ಮುಂಬಯಿ ಪಟ್ಟಣದ ಹಾಗು ಮುಂಬಯಿ ಇಲಾಖೆಯ ಔದ್ಯೋಗಿಕ ಸ್ಥಿತಿಯು ಯಾವ ಪ್ರಕಾರದ್ದಿರುವದೆಂಬದು ಗೊತ್ತಾಗುವದು. ಇಲ್ಲಿ ತಾಳೇಗಾಂವದ ಕಾಜಿನಕಾರಖಾನೆಯನ್ನೂ ಅಹಮದಾಬಾದ ಮುಂಬಯಿಗಳಲ್ಲಿ ಸಿದ್ಧವಾಗುವ ಅರಿವೆಗಳನ್ನೂ ಈ ದೇಶದಲ್ಲಿ ಸಿದ್ಧವಾಗುವ ಕಬ್ಬಿಣ ಪಿತ್ತಾಳೆಗಳ ಒಡವೆಗಳನ್ನೂ ತಿಜೋರಿಯ ಪೆಟ್ಟಿಗೆಗಳು ನಳದಕೊಳವೆಗಳು ಮೊದ ಲಾದ ವಸ್ತುಗಳನ್ನೂ ನಾಟೀನ ಮಖಮಲಗಳ ಮೇಲೆ ಜರದ ಕಲಾಒತುಗಳನ್ನು ಮಾ ಡಿದ ಹಲವು ಪ್ರಕಾರದ ನಮೂನೆಗಳನ್ನೂ ನೋಡಬಹುದು. ಇದಲ್ಲದೆ ಈ ಪ್ರದರ್ಶ ನದಲ್ಲಿ ಎಷ್ಟೋ ಸಂಸ್ಥಾನಿಕರು ಕಳಿಸಿದ ಪ್ರಾಚೀನ ವಸ್ತುಗಳನ್ನು ಸಂಗ್ರಹಿಸಿರುವರು.

ಹಿಮಾಲಯ ಪರ್ವತದೊಳಗಿನ ಉಗೆಬಂಡಿಯ ಮಾರ್ಗದ ಮಾದರಿಯೂ ಹಳೆ ಮುಂಬಯಿ ಕೋಟೆಯೂ ಈ ಪ್ರದರ್ಶನದ ಮತ್ತೊಂದು ಅಂಗವಾಗಿದೆ. ಇದನ್ನು ನೋಡಲಿಕ್ಕೆ ಒಂದು ರೂಪಾಯಿ ಫೀ ಕೊಡಬೇಕಾಗುವದು. ಹಳೇ ಮುಂಬಯಿ ಕೋಟೆಯು ಗೋಡೆಯು ದೇವದಾರು ಕಟ್ಟಿಗೆಯ ಹಲಿಗೆಗಳಿಂದ ಮಾಡಲ್ಪಟ್ಟಿದ್ದರೂ ದೂರದಿಂದ ನೋಡುವವರಿಗೆ ಕಲ್ಲಿನ ಗೋಡೆಯೆಂಬಂತೆ ಭಾಸವಾಗುತ್ತದೆ. ಕೋಟೆಯೊಳಗೆ ಮಧ್ಯಭಾಗದಲ್ಲಿ ಸುಂದರವಾದ ಶುಭ್ರವರ್ಣದ ಸಣ್ಣ ಚಪ್ಪರಗಳಿದ್ದು ಅವುಗಳಲ್ಲಿ ಇ. ಸ. ೧೬೬೫ನೇ ವರ್ಷ ಮುಂಬಯಿ ನಡುಗಡೆಯು ಹ್ಯಾಗೆ ಹಲವು ಸಣ್ಣ ಸಣ್ಣ ನಡುಗಡ್ಡೆಗಳಿಂದ ಕೂಡಿ ಆಗಿತ್ತೆಂಬದನ್ನೂ ಇ. ಸ. ೧೯೧೧ನೇ ವರ್ಷದ ಅಂದರೆ ಸದ್ಯದ ಮುಂಬಯಿ ಪಟ್ಟಣವು ಹ್ಯಾಗಿರುವದೆಂಬದನ್ನೂ ನಕಾಶಗಳಿಂದಲೂ, ಮಣ್ಣಿನ ಆಕೃತಿಗಳಿಂದಲೂ ತೋರಿಸಿದ್ದಾರೆ. ಹಿಮಾಲಯ ಪರ್ವತದ ಒಂದು ಭಾಗದಲ್ಲಿ ಹಾಯುವ ಉಗೆಬಂಡಿಯ ಮಾರ್ಗದ ಮಾದರಿಯೂ ಬಹು ಪ್ರೇಕ್ಷಣೀಯವಾಗಿರುವದು. ಇದು ಒಂದು ಮೈಲು ಉದ್ದವಾಗಿರುವದು. ಇದನ್ನು ಸಿದ್ಧ ಮಾಡಲಿಕ್ಕೆ ಒಂದು ಲಕ್ಷರೂಪಾಯಿಗಳು ವೆಚ್ಚವಾಗಿರುವವೆಂದು ಹೇಳುತ್ತಾರೆ.

ಬಾದಷಹರೂ ಮಹಾರಾಣಿಯವರೂ ಸೋಮವಾರ ತಾರೀಖು ೪ನೇ ದಿಶಂಬರ ದಿವಸ ಪ್ರಾತಃಕಾಲದ ೯॥ ಗಂಟೆಗೆ ಈ ಪ್ರದರ್ಶನವನ್ನು ನೋಡಲಿಕ್ಕೆ ಬಂದಿದ್ದರು. ಅಲ್ಲಿ ೮ ರಿಂದ ೧೫ ವರ್ಷ ವಯಸ್ಸುಳ್ಳ ೨೦-೩೫ ಸಾವಿರ ವಿದ್ಯಾರ್ಥಿಗಳು ಬಾದಷಹರಿಗೆ ಸ್ವಾಗತವನ್ನು ಮಾಡಿದರು. ಈ ಹುಡುಗರಿಗೆ ಮಹಾರಾಣಿಯವರ ಚಿತ್ರಗಳುಳ್ಳ ಒಂದೊಂದು ಕಾಜಿನ ಪೇಲೆಯೂ ಮಿಠಾಯಿಯ ಒಂದೊಂದು ಪುಡಿಕೆಯೂ ಉಚಿತವಾಗಿ ಕೊಡಲ್ಪಟ್ಟವು. ಈ ದಿವಸ ರಾತ್ರಿ ಬಾದಷಹರವರ ಸ್ವಾಗತದ ಪ್ರೀತ್ಯರ್ಥವಾಗಿ ಬ್ಯಾಕಬೆ ಎಂಬಲ್ಲಿ ಮದ್ದು ಹಾರಿಸಲ್ಪಟ್ಟಿತು.

೫ನೇ ತಾರೀಖಿನ ದಿವಸ ಸಾಯಂಕಾಲಕ್ಕೆ ಸಾರ್ವಭೌಮದಂಪತಿಗಳು ಎಲೆಫಂಟಾ ಕೇವ್ಹ ಜಗಳನ್ನು ನೋಡಿಬಂದ ಮೇಲೆ ಮದೀನಾ ಉಗೆ ಹಡಗದಲ್ಲಿ ದಿಲ್ಲಿಗೆ ಹೊರಡುವ ಸಿದ್ಧತೆಯು ಪ್ರಾರಂಭವಾಯಿತು. ಹತ್ತುವರೆ ಗಂಟೆಯು ಸುಮಾರಿಗೆ ಬಾದಶಹರ ಸ್ವಾರಿಯು ತಮ್ಮ ಯಾವತ್ತು ಸರಂಜಾಮಿನಿಂದಲೂ ಪರಿವಾರದಿಂದಲೂ ಸಹಿತವಾಗಿ ಅವಾಲೋಬಂದರದ ಮೇಲೆ ಬಂದಿತು. ಆ ಕಾಲಕ್ಕೆ ಬಂದರದ ಸುತ್ತು ಮುತ್ತು ಕೆಂಪು, ಹಸರು, ನೀಲವರ್ಣದ ದೀವಿಗೆಗಳು ಥಳ ಥಳಿಸುತ್ತಿದ್ದವು. ಬಂದರದ ಹೊರಗೂ ಚಿತ್ರ ವಿಚಿತ್ರವಾದ ದೀವಿಗೆಗಳು ಮಾರ್ಗಕ್ಕೆ ಶೋಭೆಯನ್ನುಂಟು ಮಾಡುತ್ತಿದ್ದವು. ಮಹಾರಾಜರು ಬಂದರದಿಂದ ಹೊರಟ ಕೂಡಲೆ ಲಕ್ಷ್ಕರೀಬ್ಯಾಂಡ ಭಾರಿಸಹತ್ತಿತು. ಮಾರ್ಗದ ಎರಡೂ ಮಗ್ಗಲು ಬಾದಷಹರಿಗೆ ನಿರೋಪಕೊಡುವದಕ್ಕಾಗಿ ನೆರೆದ ಜನರ ಜಯಘೋಷದಿಂದ ಮುಂಬಯಿ ಪಟ್ಟಣವು ಗದ್ದರಿಸಿ ಹೋ

ಯಿತು. ಬೋರಿಬಂದರ ಸ್ಟೇಶನದ ಹೊರಭಾಗದಲ್ಲಿ ಸಾರ್ವಭೌಮದಂಪತಿಗಳ ಮಾರ್ಗಪ್ರತೀಕ್ಷಿಸುತ್ತ ಸಾವಿರಾರು ಜನರು ನೆರೆದಿದ್ದರು. ಬಾದಷಹರ ಸ್ವಾರಿಯು ಸ್ಟೇಶನಕ್ಕೆ ಬಂದ ಕೂಡಲೆ ಅವರೆಲ್ಲರು ಚಪ್ಪಾಳಿಗಳ ಗರ್ಜನೆಯಿಂದಲೂ ಜಯ ಘೋಷದಿಂದಲೂ ಆನಂದ ಪ್ರದರ್ಶನ ಮಾಡಿದರು. ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳೆಲ್ಲರೂ ಸ್ಟೇಶನದ ಮೇಲೆ ಹಾಜರಿದ್ದರು. ೧೦-೪೫ ಗಂಟೆಗೆ ಬಾದಷಹರ ಸಸಲೂನವು ಬೋರಿಬಂದರ ಸ್ಟೇಶನದಿಂದ ದಿಲ್ಲಿಗೆ ಹೊರಟಿತು.

೭ನೇ ತಾರೀಖಿನ ದಿವಸ ಪ್ರಾತಃಕಾಲದ ೧೦ ಗಂಟೆಗೆ ಹಿಂದು ಮುಸಲ್ಮಾನರ ಪ್ರಾಚೀನ ರಾಜಧಾನಿಯಾದ ದಿಲ್ಲೀ ಪಟ್ಟಣಕ್ಕೆ ಬಾದಶಹರವರ ಆಗೆಬಂಡಿಯು ಬಂದು ತಲ್ಪಿತು. ಗವ್ಹರ್ನರ ಜನರಲ್ಲರೇ ಮೊದಲಾದ ದೊಡ್ಡ ದೊಡ ಅಧಿಕಾರಸ್ಥರು ಸಾರ್ವಭೌಮದಂಪತಿಗಳ ಸ್ವಾಗತದ ಸಲುವಾಗಿ ಸ್ಟೇಶನಡ ಮೇಲೆ ಮಾರ್ಗ ಪ್ರತೀಕ್ಷಿಸುತ್ತ ನಿಂತುಕೊಂಡಿದ್ದರು. ಮಹಾರಾಜರೂ ಮಹಾರಾಣಿಯವರೂ ಗಾಡಿಯಿಂದ ಇಳಿದ ಕೂಡಲೆ ಕೋಟೆಯಲ್ಲಿ ಸಲಾಮಿನ ೧೦೧ ತೋಪುಗಳು ಹಾರಹತ್ತಿದವು. ತರುವಾಯ ರಾಜಮಾರ್ಗದ ಎಡಬಲಗಳಲ್ಲಿ ನಿಂತ ಸೈನಿಕರು ತುಬಾಕಿಗಳನ್ನು ಹಾರಿಸಹತ್ತಿದರು. ಈ ಸಪ್ಪಳವು ಸ್ಟೇಶನದಿಂದ ಆರಂಭವಾಗಿ ಜುಮ್ಮಾಮಸೀದಿ, ಚಾಂದಣೀ ಚೌಕ ಈ ಮಾರ್ಗಗಳ ಕ್ರಮದಿಂದ ನಾಲ್ಕು ಮೈಲಿನ ಪ್ರದಕ್ಷಿಣೆಯಿಂದ ಪುನ: ಹೊರಟಿ ಸ್ಥಳಕ್ಕೆ ಬಂದು ಮುಟ್ಟಿತು. ಆಷ್ಟರಲ್ಲಿ ಲಾರ್ಡ ಹಾರ್ಡಿಂಜ ಸಾಹೇಬರವರು ಸಾರ್ವಭೌಮದಂಪತಿಗಳಿಗೆ ಎಲ್ಲ ಅಧಿಕಾರಿಗಳ ಪರಿಚಯವನ್ನು ಮಾಡಿಕೊಟ್ಟರು. ತರುವಾಯ ಮಹಾರಾಜರೂ ಮಹಾರಾಣಿಯವರೂ ಕೋಟೆಯೊಳಗಿನ ಸಂಸ್ಥಾನಿಕರ ಕ್ಯಾಂಪಿಗೆ ಕಾಲುನಡಿಗೆಯಿಂದ ನಡೆದರು. ಆ ಸ್ವಾಗತ ಮೆಂಟಪದಲ್ಲಿ ಹಿಂದುಸ್ಥಾನದ ಎಲ್ಲ ಮುಖ್ಯ ಮುಖ್ಯ ಸಂಸ್ಥಾನಿಕರು ನೆರೆದಿದ್ದರು. ನಿಜಾಮ, ಗಾಯಕವಾಡ, ಮೈಸೂರ ಕಾಶ್ಮೀರ, ಶಿಂದೆ, ಉದೇಪೂರ ಇತ್ಯಾದಿ ಕ್ರಮದಿಂದ ಸಂಸ್ಥಾನಿಕರು ಸಾರ್ವಭೌಮದಂಪತಿಗಳನ್ನು ಕಂಡುಕೊಂಡರು. ತರುವಾಯ ರಾಜದಂಪತಿಗಳು ದಿಲ್ಲೀ ಪಟ್ಟಣದಲ್ಲಿ ಪ್ರವೇಶ ಮಾಡುವ ಮೆರವಣಿಗೆಯ ಸಮಾರಂಭವು ಆರಂಭವಾಯಿತು. ಮುಂಬಯಿ ನಗರದಂತೆ ಇಲ್ಲಿಯೂ ಮೆರವಣಿಗೆ ಹೊರಡತಕ್ಕ ರಾಜವೀಧಿಗಳು ನಿಶಾನೆಗಳಿಂದಲೂ, ಪತಾಕೆಗಳಿಂದಲೂ, ತೋರಣಗಳಿಂದಲೂ, ಕಮಾನುಗಳಿಂದಲೂ ಶ್ರಿಂಗರಿಸಲ್ಪಟ್ಟಿದ್ದವು. ಎಲ್ಲ ಅಧಿಕಾರಿಗಳಿಂದ ಸಹಿತವಾದ ಈ ಮೆರವಣಿಗೆಯು ಒಳ್ಳೇ ವಿಜೃಂಭಣೆಯಿಂದ ಸಾಂಗವಾಯಿತು. ಜನರು ಚಪ್ಪಾಳಿಗಳಿಂದಲೂ ನಮೆನಗಳಿಂದಲೂ ತಮ್ಮ ಆನಂದ ಪ್ರದರ್ಶನವನ್ನೂ ರಾಜಭಕ್ತಿಯನ್ನೂ ವ್ಯಕ್ತಪಡಿಸಿದರು.

ಆ ದಿವಸ ಮಧ್ಯಾಹ್ನದಲ್ಲಿ ಬಾದಷಹರವರು ಕೆಲವು ಸಂಸ್ಥಾನಿಕರನ್ನು ಕಂಡುಕೊಂಡರು. ಮಹಾರಾಣಿಯವರು ಸರ ಜಾನ ಹ್ಯೂವೆಟ ಎಂಬವರ ಸಂಗಡ ಕೋಟೆ

ಯೊಳಗಿನ ಐತಿಹಾಸಿಕ ಸ್ಥಳಗಳನ್ನು ನೋಡಲಿಕ್ಕೆ ಹೋಗಿದ್ದರು. ಮರುದಿವಸ ಅಂದರೆ ತಾರೀಖು ೮ನೇ ದಿಸಂಬರ ದಿವಸ ಮತ್ತೆ ಕೆಲವು ಸಂಸ್ಥಾನಿಕರ ಭೆಟ್ಟಿಗಳು ಆದವು; ಆ ಅವಧಿಯಲ್ಲಿ ಮಹಾರಾಣಿಯವರು ಕುತುಬಮಿನಾರ ಮೊದಲಾದ ಐತಿಹಾಸಿಕ ಸ್ಥಳಗಳನ್ನು ನೋಡಿಕೊಂಡು ಬಂದರು. ಆ ದಿವಸ ಮಧ್ಯಾಹ್ನದಲ್ಲಿ ಚಕ್ರವರ್ತಿ ೫ನೇ ಜಾರ್ಜರವರ ಹಸ್ತದಿಂದ ವೈಭವಶಾಲಿಗಳೂ ಶಾಂತತಾಪ್ರಿಯರೂ ಆದ ಪರಲೋಕವಾಸಿ ೭ನೇ ಎಡ್ವರ್ಡ ಬಾದಶಹರವರ ಸ್ಮಾರಕದ ಕಟ್ಟಿಯಕಲ್ಲು ಕೂಡಿಸಲ್ಪಟ್ಟಿತು. ಈ ಸ್ಮಾರಕದ ಸಲುವಾಗಿ ಇಡೀ ಹಿಂದುಸ್ತಾನದ ನಿವಾಸಿಗಳು ಕೂಡಿ ೫ ಲಕ್ಷ ರೂಪಾಯಿಗಳನ್ನು ಕೂಡಿಸಿರುವರು. ಈ ಹಣದಿಂದ ೭ನೇ ಎಡ್ವರ್ಡ ಬಾದಶಹರವರ ಒಂದು ಅಶ್ವಾರೂಢ ಮೂರ್ತಿಯನ್ನು ನಿರ್ಮಿಸಿ ಆದನ್ನು ಪ್ರಾಚೀನ ಐತಿಹಾಸಿಕ ನಗರವಾದ ಈ ದಿಲ್ಲೀ ಪಟ್ಟಣದಲ್ಲಿ ಕೋಟೆಗೂ ಜುಮ್ಮಾಮಸೀದಿಗೂ ನಡುವೆ ಇರುವ ವಿಸ್ತಾರವಾದ ಬೈಲಿನಲ್ಲಿ ಸ್ಥಾಪಿಸತಕ್ಕವರಿರುವರು. ಈ ಪ್ರಸಂಗದಲ್ಲಿ ಸ್ಮಾರಕ ಕಮಿಟೀಯ ವತಿಯಿಂದ ಮ್ಹಾಯಿಸರಾಯ ಲಾರ್ಡ ಹಾರ್ಡಿಂಜ ದೊರೆಗಳು ೫ನೇ ಜಾರ್ಜ ಮಹಾರಾಜರವರಿಗೆ ಮಾನಪತ್ರವನ್ನು ಸಮರ್ಪಿಸಿದರು.

ಶನಿವಾರ ತಾರೀಖು ೯ನೇ ದಿಶಂಬರ ದಿವಸ ಮಹಾರಾಜರವರಿಗೆ ಸರಕಾರೀ ಕಾರ್ಯಕ್ರಮವೇನೂ ಇದ್ದಿಲ್ಲ. ಮಹಾರಾಣಿಯವರ ಕಡೆಗೆ ಕೆಲವು ಹಿಂದು ಸ್ತ್ರೀಯರ ಡೆಪ್ಯುಟೇಶನವು ಬಂದಿತ್ತು. ಅದರಲ್ಲಿ ಪತಿಯಾಲಾ, ಕಪುರ್ಥಾಲಾ, ಮೌರಭಂಜ ವಿಜಯನಗರ ಈ ಸಂಸ್ಥಾನಗಳ ಮಹಾರಾಣಿಯವರೂ ಜಂಜೀರೆಯ ಬೇಗಮಳೂ, ಬೇರೆ ಕೆಲವು ಸ್ತ್ರೀಯರೂ ಇದ್ದರು. ಈ ಪ್ರಸಂಗದಲ್ಲಿ ಮೊದಲು ಲೇಡೀ ಹಾರ್ಡಿಂಜರವರು ಮಾನಪತ್ರವನ್ನು ಓದಿ ಹೇಳಿದ ತರುವಾಯ, ಪತಿಯಾಲಾ ಸಂಸ್ಥಾನದ ಮಹಾರಾಣಿಯವರು ಇಡೀ ಹಿಂದುಸ್ತಾನದ ಸ್ತ್ರೀಯರ ಪತಿಯಿಂದ ಚಕ್ರವರ್ತಿನಿ ಮೇರಿ ಮಹಾರಾಣಿಯವರಿಗೆ ಹೊಗಲರ ಕಾಲದ ರತ್ನಖಚಿತವಾದ ಎರಡು ಆಭರಣಗಳನ್ನು ಸಮರ್ಪಿಸಿದರು. ಆ ಬಳಿಕ ಮಹಾರಾಣಿಯವರು ಆಭಾರಮನ್ನಿಸುವ ನಾಲ್ಕು ಮಾತುಗಳನ್ನು ಆಡಿದ ಮೇಲೆ ನೆರೆದ ಸಂಸ್ಥಾನಿಕರ ರಾಣಿಯವರೆಲ್ಲರೂ ಚಕ್ರವರ್ತಿನಿ ಮೇರಿ ಮಹಾರಾಣಿಯವರ ಮುಂದೆ ಬಂದು ತಮ್ಮ ತಮ್ಮ ಸಾಂಪ್ರದಾಯಾನುಸಾರವಾಗಿ ನಮನಗಳನ್ನು ಮಾಡಿದರು. ತರುವಾಯ ಎಲ್ಲರೂ ಮತ್ತೊಮ್ಮೆ ಸಲಾಮು ಮಾಡಿ ತಮ್ಮ ತಮ್ಮ ಸ್ಥಳಗಳಿಗೆ ಹೊರಟು ಹೋದರು.

ಮರುದಿವಸ ಅಂದರೆ ತಾರೀಖು ೧೦ನೇ ದಿವಸ ಆದಿತ್ಯವಾರವಿದ್ದದರಿಂದ ಯಾವ ಕಾರ್ಯಕ್ರಮವೂ ಇದ್ದಿಲ್ಲ. ಆದರೆ ಕ್ರಿಸ್ತೀಧರ್ಮಾನುಸಾರವಾಗಿ ಈಶ್ವರೋಪಾಸನಾಕಾರ್ಯವು ಮಾಡಲ್ಪಟ್ಟಿತು. ಈ ಪ್ರಸಂಗದಲ್ಲಿ ಮದ್ರಾಸದ ಬಿಶಪಸಾಹೇಬರು ಪ್ರಸಂಗಕ್ಕೆ ಉಚಿತವಾದ ಧರ್ಮೋಪದೇಶವನ್ನು ಮಾಡಿದರು.

೧೧ನೇ ತಾರೀಖಿನ ದಿವಸ ಮಹಾರಾಜರವರು ಸೈನ್ಯದ ಕೆಲವು ಗುಂಪುಗಳಿಗೆ ನಿಶಾನೆಗಳನ್ನು ಉಚಿತವಾಗಿ ಕೊಟ್ಟರು. ಆ ಕಾಲಕ್ಕೆ ಸೈನಿಕರಿಗೆ ಮಹಾರಾಜರವರು ಕರ್ತವ್ಯವನ್ನು ಬೋಧಿಸುವಂಥ ಕೆಲವು ಮಾತುಗಳನ್ನಾಡಿದರು.

ದಿಶಂಬರ ೧೭ನೇ ತಾರೀಖಿನ ದಿವಸ ೫ನೇ ಜಾರ್ಜ ಮಹಾರಾಜರವರು ಹಿಂದು ಸ್ತಾನದ ಚಕ್ರವರ್ತಿ ಎಂಬ ಬಿರುದಿನಿಂದ ದಿಲ್ಲಿಯಲ್ಲಿ ಸಿಂಹಾಸನಾಧಿಷ್ಠಿತರಾಗಿ ಯಾವತ್ತು ಮಾಂಡಲಿಕ ಭೂಪಾಲರಿಂದ ನಮನ ಮಾಡಿಸಿಕೊಳ್ಳಲ್ಪಟ್ಟರು ಹಾಗು ಈ ದೇಶದ ಪ್ರಜೆಗಳಿಗೆ ಕೆಲವು ಹಕ್ಕುಗಳನ್ನೂ ಅಧಿಕಾರಗಳನ್ನೂ ದಯಪಾಲಿಸಿ ದರು ಆ ವೈಭವನನ್ನು ಎಷ್ಟು ವರ್ಣಿಸಿದರೂ ಸ್ವಲ್ಪವೇ ಸರಿ.

ದರಬಾರದ ಹೊತ್ತಿನ ಪೂರ್ವದಲ್ಲಿಯೇ ಅಂಫಿಥಿಯಟರವು ಪ್ರೇಕ್ಷಕರ ಸಮು ದಾಯದಿಂದ ತಂಬಿಹೋಗಿತ್ತು. ಎಲ್ಲಕ್ಕೂ ಮುಂಭಾಗದಲ್ಲಿ ಗವ್ಹರ್ನರ ಲೆ. ಗವ್ಹರ್ನ ರರೂ, ಸಂಸ್ಥಾನಿಕರೂ, ಸರಕಾರದಿಂದ ನಿಮಂತ್ರಿತರಾದ ಸಭ್ಯಗೃಹಸ್ಥರೂ, ಕುಳಿತಿ ದ್ದರು; ಅವರ ಹಿಂದೆ ಸೈನಿಕರು ಅವರ ಹಿಂದೆ ದಿನ್ನೆಯ ಮೇಲೆ ದಿಲ್ಲಿಯ ನಿವಾಸಿಗಳು ಈ ಪ್ರಕಾರ ಕೂಡಿಸುವ ವ್ಯವಸ್ಥೆಯು ಇತ್ತು. ೧೮೫೭ನೇ ಇಸವಿಯಲ್ಲಿ ಇಂಗ್ಲಿಷರ ಸಲುವಾಗಿ ಜೀವದ ಹಂಗು ದೊರೆದು ಕಾದಿದ ಅಂಂ ಶಿಪಾಯಿಗಳು ದರಬಾರಕ್ಕೆ ಬರಲು ಸೈನಿಕರು ಚಪ್ಪಾಳಿಗಳ ಗರ್ಜನೆಯಿಂದ ಆನಂದ ಪ್ರದರ್ಶನ ಮಾಡಿದರು. ಅಷ್ಟರಲ್ಲಿ ಲಾರ್ಡ ಕ್ರೂ್ಯ, ಲಾರ್ಡ ಹಾರ್ಡಿಂಜ ಸಾಹೇಬರವರು ಬರಲು, ಲಕ್ಷ್ಮೀ ಜನರು ಅವರಿಗೆ ಸಲಾಮು ಮಾಡಿದರು. ಮತ್ತು ಎಲ್ಲ ಜನರು ಎದ್ದು ನಿಂತು ವ್ಹಾಯಿ ಸರಾಯರ ಸಲುವಾಗಿ ಇದ್ದ ತಮ್ಮ ಸನ್ಮಾನ ಬುದ್ಧಿಯನ್ನು ವ್ಯಕ್ತಪಡಿಸಿದರು. ಹೊ ತ್ತಿಗೆ ಸರಿಯಾಗಿ ಚಕ್ರವರ್ತಿ ೫ನೇ ಜಾರ್ಜ ಮಹಾರಾಜರೂ ಮೇರಿಮಹಾರಾಣಿಯ ವರೂ ದರಬಾರ ಮಂದಿರಕ್ಕೆ ದಯಮಾಡಿಸಿದರು. ಉಭಯತರು ದಿವ್ಯವಾದ ದರಬಾ ರದ ಪೋಷಾಕು ಹಾಕಿಕೊಂಡು ತಲೆಯ ಮೇಲೆ ರತ್ನಖಚಿತವಾದ ಕಿರೀಟವನ್ನು ಧಾರಣ ಮಾಡಿದ್ದರು. ಬಾದಷಹರೂ ಮಹಾರಾಣಿಯವರೂ ತಮ್ಮ ರಥದೊಳಗಿಂದ ಇಳಿದು ಅಂಫಿಥಿಯಟರದೊಳಗಿನ ತಮ್ಮ ಸ್ಥಳಗಳ ಕಡೆಗೆ ಹೋಗುತ್ತಿರಲು ನೆರೆದ ಯಾವತ್ತು ಜನರು ಎದ್ದುನಿಂತು ಚಪ್ಪಾಳಿಗಳಿಂದಲೂ, ಜಯಜಯಕಾರದಿಂದಲೂ, ಸಲಾಮುಗಳಿಂದಲೂ ತಮ್ಮ ಆನಂದವನ್ನು ವ್ಯಕ್ತಪಡಿಸಿದರು. ಲಾರ್ಡ ಹಾರ್ಡಿಂಜ ಸಾಹೇಬರು ಅವರನ್ನು ಎದುರ್ಗೊಂಡರು; ಬಾದಷಹರೂ ಮಹಾರಾಣಿಯವರೂ ಸಿಂಹಾಸನದಲ್ಲಿ ವಿರಾಜಮಾನರಾದರು. ತರುವಾಯ ಬಾದಷಹರು ಅಪ್ಪಣೆಕೊಟ್ಟ ಮೇಲೆ ತುತೂರಿಯೂ ಡ್ರಮ್ ಎಂಬವಾದ್ಯವೂ ಬಾರಿಸಲ್ಪಟ್ಟು ದರಬಾರದ ಕೆಲಸಕ್ಕೆ ಪ್ರಾರಂಭವಾಯಿತು. ಆಗ ಚಕ್ರವರ್ತಿ ೫ನೇ ಜಾರ್ಜ ಮಹಾರಾಜರವರು ಕಯ್ಯಲ್ಲಿ ಒಂದು ಕಾಗದ ಸುರುಳಿಯನ್ನು ಹಿಡಕೊಂಡು ಎದ್ದುನಿಂತರು; ಅವರ ಹತ್ತರ ವನ್ಹ್ಯ

ಲಂಕಾರಗಳಿಂದ ಭೂಷಿತರಾದ ಮಹಾರಾಣಿಯವರು ಬಂದುನಿಂತರು. ಬಾದಶಹರೆ ಬಲಭಾಗಕ್ಕೆ ಸ್ವಲ್ಪ ಹಿಂಬದಿಗೆ ಗವ್ಹರ್ನರ ಜನರಲ್ ಸಾಹೇಬರು ಬಂದುನಿಂತರು; ಮತ್ತು ಬಾದಶಹರ ಅಂಗ ಸಂರಕ್ಷಕರಾದ ಜನರು ಹಿಂಭಾಗದಲ್ಲಿ ನಿಂತುಕೊಂಡು ತರುವಾಯ ಬಾದಷಹರವರ ಭಾಷಣವು ವ್ಯಾರಂಭವಾಯಿತು.

" ನಮ್ಮ ವಿಶ್ವಾಸದ ಅಧಿಕಾರಿಗಳೇ, ರಾಜನಿಷ್ಠ ಸಂಸ್ಥಾನಿಕರೇ, ಪ್ರಜೆಗಳೇ, ಅಭಾರ ಹಾಗು ಸಮಾಧಾನಗಳೆಂಬ ನಿಜವಾದ ಮನೋವೃತ್ತಿಗಳಿಂದ ಪ್ರೇರಿತರಾಗಿ ನಾವು ಈ ಹೊತ್ತು ನಿಮ್ಮ ಮುಂದೆ ಬಂದು ನಿಂತಿದ್ದೇವೆ. ಈ ವರ್ಷವನ್ನು ನಾವೂ ಮಹಾರಾಣಿಯವರೂ ಒಳ್ಳೇ ಸಮಾರಂಭಗಳಲ್ಲಿ ಕಳೆದಾಗ್ಯೂ, ಅದು ನಮಗೆ ಸುಖ ಕಾರಕವಾಗಿದ್ದರೂ, ನಮಗೆ ಅತ್ಯಂತ ಶ್ರಮದಾಯಕವಾಗಿರುತ್ತದೆ. ಆದರೂ ಈ ದೇಶಕ್ಕೆ ಬರಲು ಹತ್ತುವ ಕಾಲವನ್ನೂ ಕ್ರಮಿಸತಕ್ಕ ಅಂತರವನ್ನೂ ನಾವು ವಿಚಾರ ಮಾಡಲಿಲ್ಲ. ಹಿಂದಕ್ಕೆ ನಾವು ಈ ದೇಶಕ್ಕೆ ಬಂದಾಗಲೇ ಈ ದೇಶದ ಮೇಲೆ ಪ್ರೀತಿ ಮಾಡುವದನ್ನು ಕಲಿತೆವು. ಆ ಕಾಲದ ಕೃತಜ್ಞತಾಮಯ ಸ್ಮೃತಿಯಿಂದ ನಮ್ಮ ಮನಸು ಹಿಂದುಸ್ತಾನದ ಕಡೆಗೆ ಎಳೆಯಲ್ಪಟ್ಟಿತು. ಸ್ವಂತಮನೆಯಲ್ಲಿ ದೊರಕು ವಂಥ ಪ್ರೇಮವು ಯಾವ ಹಿಂದುಸ್ತಾನದಲ್ಲಿ ನಮಗೆ ಲಭಿಸಿತೋ ಆ ದೇಶಕ್ಕೆ ಪುನ: ಬರಲು, ಒಳ್ಳೇ ಉತ್ಸಾಹದಿಂದ ನಾವು ಸಿದ್ಧರಾದೆವು. ಕಳೆದ ಜೂನ ತಿಂಗಳ ೨೨ ನೇ ತಾರೀಖಿನ ದಿವಸ ' ವೆಸ್ಟಮಿನಿಸ್ಟರ ಅಬೆ ' ಎಂಬ ಮಠದಲ್ಲಿ ಪೂರ್ವಪರಂಪರೆಯಂತೆ ಪವಿತ್ರವೂ ಗಂಭೀರವೂ ಆದ ವಿಧಿಪ್ರಕಾರವಾಗಿ ನಮ್ಮ ಪೂರ್ವಜರ ಕಿರೀಟವು ನಮ್ಮ ತಲೆಯ ಮೇಲೆ ಇಡಲ್ಪಟ್ಟಿತು. ಹಾಗು ನಮ್ಮ ರಾಜ್ಯಾರೋಹಣದ ಸಮಾರಂಭವು ನೆರವೇರಿತು. ಈ ಸುದ್ದಿಯನ್ನು ತಮ್ಮೆಲ್ಲರಿಗೆ ಸ್ವತ: ಜಾಹಿರ ಪಡಿಸಬೇಕೆಂಬ ಇಚ್ಛೆಯನ್ನು ಕಳೆದ ಜುಲೈ ತಿಂಗಳಲ್ಲಿ ನಾವು ನಿಮಗೆ ಕಳಿಸಿದ ಸಂದೇಶದಲ್ಲಿ ಪ್ರಕಟ ಮಾಡಿದ್ದೆವು. ಆ ನಮ್ಮ ಇಚ್ಛೆಯು ಇಂದಿಗೆ ಪೂರ್ಣ ವಾಗಿರುತ್ತದೆ. ಮಹಾರಾಣಿಯವರೊಂದಿಗೆ ನಾವು ಈ ದೇಶಕ್ಕೆ ಬಂದು ಇಲ್ಲಿಯ ರಾಜನಿಷ್ಠ ಸಂಸ್ಥಾನಿಕರ ವಿಷಯವಾಗಿಯೂ ಪ್ರಜೆಗಳ ವಿಷಯವಾಗಿಯೂ ನಮ್ಮ ಅಂತ:ಕರಣದಲ್ಲಿ ನೆಲೆಗೊಂಡಿದ್ದ ಪ್ರೇಮಭಾವವನ್ನೂ ಹಿಂದು ಸಾಮ್ರಾಜ್ಯದ ಕಲ್ಯಾ ಣವೂ ಸುಖವೂ ನಮಗೆ ಎಷ್ಟು ಸೇರಿಕೆಯ ವಿಷಯಗಳಾಗಿರುವವೆಂಬದನ್ನೂ ತೋ ರಿಸುವ ಉತ್ಕಟೇಚ್ಛೆಯು ನಮ್ಮಲ್ಲಿ ಇರುವದು; ಇದಲ್ಲದೆ ಲಂಡನದಲ್ಲಿ ಆದ ಗಂಭೀ ರವಾದ ರಾಜ್ಯಾರೋಹಣದ ಉತ್ಸವವನ್ನು ನೋಡಲಿಕ್ಕೆ ಯಾರಿಗೆ ಶಕ್ಯವಿದ್ದಿಲ್ಲವೋ ಅವರಿಗೆ ಆ ಉತ್ಸವದ ಸಂಸ್ಮರಣಾರ್ಥವಾಗಿ ದಿಲ್ಲಿಯಲ್ಲಿ ಆಗುವ ಸಮಾರಂಭವನ್ನು ನೋಡುವ ಪ್ರಸಂಗವು ದೊರೆಯಬೇಕೆಂಬದೂ ನಮ್ಮ ಅಪೇಕ್ಷೆಯಿರುತ್ತದೆ. ಈ ಅಪಾ ರವಾದ ಜನಸಮುದಾಯವನ್ನೂ ನಮ್ಮ ಗವ್ಹರ್ನರರೇ ಮೊದಲಾದ ಪ್ರಾಮಾಣಿಕ ನೌಕರರನ್ನೂ ಸಂಸ್ಥಾನಿಕರನ್ನೂ ಪ್ರಜಾಪ್ರತಿನಿಧಿಗಳನ್ನೂ ಸೈನ್ಯಗಳ ವತಿಯಿಂದ

ಬಂದ ಪ್ರತಿನಿಧಿಗಳನ್ನೂ ಕಂಡು ನಮಗೂ ಮಹಾರಾಣಿಯವರಿಗೂ ಅಂತಃಕರಣ ಪೂರ್ವಕವಾಗಿ ಸಮಾಧಾನವಾಗುತ್ತದೆ. ತಾವೆಲ್ಲರೂ ನಮಗೆ ಕೊಡಲಪೇಕ್ಷಿಸಿದ ಸನ್ಮಾನವನ್ನೂ ವ್ಯಕ್ತಪಡಿಸಲಿಚ್ಛಿಸಿದ ರಾಜನಿಷ್ಠೆಯನ್ನೂ ನಾವು ಸ್ವತಃ ಅಂತಃಕರಣ ಪೂರ್ವಕವಾಗಿಯೂ ಸಮಾಧಾನಪೂರ್ವಕವಾಗಿಯೂ ಸ್ವೀಕರಿಸತಕ್ಕವರಿರುತ್ತೇವೆ. ಈ ಐತಿಹಾಸಿಕ ಪ್ರಸಂಗದಲ್ಲಿ ಹಿಂದುಸ್ತಾನದ ಸಂಸ್ಥಾನಿಕರು ಪ್ರಜೆಗಳು ಹಾಗು ನಾವು ಇವರೊಳಗೆ ಪರಸ್ಪರ ಸಹಾನುಭೂತಿಯ ಭಾವನೆಯಿಂದಲೂ, ಪ್ರೇಮಪೂರಿತವಾದ ಸದಿಚ್ಛೆಗಳಿಂದಲೂ, ಐಕ್ಯಭಾವವು ಉತ್ಪನ್ನವಾಗುತ್ತಿರುವದೆಂಬ ವಿಚಾರವು ನಮ್ಮ ಅಂತಃಕರಣದಲ್ಲಿ ದೃಢವಾಗಿ ಮೂಡಿರುವದು. ಈ ಮನೋವೃತ್ತಿಯ ಚಿಹ್ನವೆಂತಲೇ ನಾವು ನಮ್ಮ ಪ್ರಜೆಗಳಿಗೆ ನಮ್ಮ ಸ್ವತಃದ ಕೆಲವು ಅನುಕೂಲತೆಗಳನ್ನೂ ವರಪ್ರಸಾದಗಳನ್ನೂ ಕೊಟ್ಟು ನಮ್ಮ ರಾಜ್ಯಾರೋಹಣದ ಉತ್ಸವವನ್ನು ಸಾಂಗಗೊಳಿಸಬೇಕೆಂಬದನ್ನು ನಿಶ್ಚಯಿಸಿದ್ದೇವೆ. ಆ ಸಂಗತಿಗಳು ಇದೇ ಈಗ ನಮ್ಮ ವ್ಹಾಯಿಸರಾಯರ ಮುಖಾಂತರವಾಗಿ ಜಾಹೀರ ಮಾಡಲ್ಪಡುವವು. ನಮಗಿಂತಲೂ ಪೂರ್ವದಲ್ಲಿ ಆಗಿ ಹೋದ ಪೂಜ್ಯ ಸಿಂಹಾಸನಾಧಿಪತಿಗಳು ನಿಮ್ಮ ಹಕ್ಕುಗಳೂ ಅಧಿಕಾರಗಳೂ ಅಬಾಧಿತವಾಗಿ ನಡಿಯುವವೆಂಬ ಬಗ್ಗೆ ಕೊಟ್ಟ ವಚನಗಳನ್ನೇ ಪುನಃ ನಿಮಗೆ ನಾವು ಕೊಡುವ ಪ್ರಸಂಗವು ಒದಗಿದ್ದಕ್ಕಾಗಿಯೂ, ನಿಮ್ಮ ಕಲ್ಯಾಣ, ಶಾಂತತೆ ಹಾಗು ಸಮಾಧಾನ ಇವುಗಳ ಸಂಬಂಧದಿಂದ ನಮ್ಮ ಮನಸಿನಲ್ಲಿ ಅಂತಃಕರಣಪೂರ್ವಕವಾದ ಪ್ರೇಮವು ನೆಲೆಗೊಂಡಿರುವದೆಂದು ಹೇಳುವ ಪ್ರಸಂಗವು ಒದಗಿದ್ದಕ್ಕಾಗಿಯೂ ನಮಗೆ ಬಹಳ ಸಂತೋಷವಾಗುತ್ತದೆ. ಪರಮೇಶ್ವರನ ಕೃಪೆಯು ನಮ್ಮ ಪ್ರಜೆಗಳನ್ನು ಸರ್ವಕಾಲವೂ ರಕ್ಷಿಸಲಿ! ಅವರ ಸುಖ ಉತ್ಕರ್ಷಗಳ ಅಭಿವೃದ್ಧ್ಯರ್ಥವಾಗಿ ನಾವು ಮಾಡುವ ಪ್ರಯತ್ನಗಳಿಗೆ ಅವನ ಸಹಾಯವು ದೊರೆಯಲಿ!! ಎಂದು ಪ್ರಾರ್ಥಿಸಿ ಇಲ್ಲಿ ನೆರೆದ ನಮ್ಮ ಯಾವತ್ತು ಸಂಸ್ಥಾನಿಕರಿಗೂ ಪ್ರಜೆಗಳಿಗೂ ನಮ್ಮ ಪ್ರೇಮಪೂರ್ವಕವಾದ ಸಲಾಮನ್ನು ಸಾದರಪಡಿಸುತ್ತೇವೆ!!

ಬಾದಷಹರ ಈ ಭಾಷಣವು ಮುಗಿದ ಮೇಲೆ ನೆರೆದ ಸಭಿಕರೆಲ್ಲರು ಎಷ್ಟೋ ಹೊತ್ತಿನ ವರೆಗೆ ಒಂದೇ ಸವಸೆ ಚಪ್ಪಾಳಿ ಬಾರಿಸಿದರು. ಆ ಬಳಿಕ ಬಾದಷಹರ ಸಂಬಂಧವಾದ ತಮ್ಮ ರಾಜನಿಷ್ಠೆಯನ್ನೂ ಸ್ವಾಮಿನಿಷ್ಠೆಯನ್ನೂ ಪ್ರಸಿದ್ಧರೀತಿಯಿಂದ ವ್ಯಕ್ತಪಡಿಸುವ ವಿಧಾನವು ಆರಂಭವಾಯಿತು. ಎಲ್ಲಕ್ಕೂ ಮೊದಲು ಗವ್ಹರ್ನರಜನರಲ್ ಸಾಹೇಬರು ಬಾದಷಹರ ಮುಂದೆ ಬಂದು ಮೂರು ಸಾರೆ ಬಗ್ಗಿ ನಮಸ್ಕಾರ ಮಾಡಿದರು. ತರುವಾಯ ಕಮಾಂಡರ ಇನ್-ಚೀಫ್, ಗವ್ಹರ್ನರ ಜನರಲ್ಲರ ಕಾರ್ಯಕಾರೀ ಕೌನ್ಸಿಲಿನ ಸಭಾಸದರು, ಆ ಬಳಿಕ ಸಂಸ್ಥಾನಿಕರು ಕ್ರಮವಾಗಿ ಬಾದಷಹರ ಮುಂದೆ ಬಂದು ನಿಂತು ನಮಸ್ಕರಿಸಿ ತಮ್ಮ ಸ್ವಾಮಿನಿಷ್ಠೆಯನ್ನು ವ್ಯಕ್ತಪಡಿಸಿದರು. ಹಿಂದಕ್ಕೆ ಮೊಗಲ ಬಾದಷಹರ ವರ್ಚಸ್ಸಿಗೆ ಒಪ್ಪಿಕೊಳ್ಳದ ಎಷ್ಟೋ

ಅರಸುಮನೆತನದೊಳಗಿನ ಸಂಸ್ಥಾನಿಕರು ಕೂಡ ಈ ಕಾಲಕ್ಕೆ ಬಾದಷಹರಿಗೆ ತಲೆ ಬಾಗಿ ಮುಜುರೆಯನ್ನು ಮಾಡಿದರು. ಇಷ್ಟಾದ ಬಳಿಕ ಮಹಾರಾಜರೂ ಮಹಾರಾಣಿಯವರೂ ದರಬಾರದ ಸಿಂಹಾಸನಗಳಿಂದ ಎದ್ದು 'ರಾಯಲ ಪವ್ಹಿಲಿಯನ'ದಲ್ಲಿಯ ಸಿಂಹಾಸನಗಳ ಮೇಲೆ ವಿರಾಜಮಾನರಾದರು. ಸಂಗಡ ಇದ್ದ ಗವ್ಹರ್ನರ ಜನರಲ್ ಮೊದಲಾದವರು ತಮ್ಮ ತಮ್ಮ ಅಧಿಕಾರಕ್ಕೂ ಮರ್ಯಾದೆಗೂ ಅನುಸರಿಸಿ ನಿಂತುಕೊಂಡರು. ತರುವಾಯ ತುತೂರಿಯು ಊದಲ್ಪಟ್ಟಿತು. ಡ್ರಮ ಬಾರಿಸಲ್ಪಟ್ಟಿತು. ಆಗ ಬಾದಷಹರ ಅಪ್ಪಣೆಯ ಮೇರೆಗೆ ಬ್ರಿಗೇಡಿಯರ ಜನರಲ ಪೆಟನ "ಹೆರಲ್ಡ ಇನ್-ಚೀಫ" ಎಂಬವರು ಬಾದಷಹರ ಜಾಹೀರನಾಮೆಯನ್ನು ಓದಿ ಹೇಳಿದರು; ಈ ಜಾಹೀರನಾಮೆಯ ಸರಕಾರೀ ಕನ್ನಡ ಭಾಷಾಂತರವು ಪ್ರಸಿದ್ಧವಾಗಿರುತ್ತದೆ. ಅದನ್ನೇ ಇಲ್ಲಿ ಕೊಡುತ್ತೇವೆ.

ಮಲಿಕ್. ಮುಅಝುಮ್. ಕೈಸರೆ. ಹಿಂದರವರ
ಬಾದಶಹರ ಜಾಹೀರನಾಮೆಯು.

ಮಲಿಕ ಮುಅಝುಮ್‌ರವರ ರಾಜ್ಯಾರೋಹಣ ಮಹೋತ್ಸವವು ನೆರವೇರಿದ ಸಂಗತಿಯನ್ನು ಮಲಿಕ್ ಮುಅಝುಮ್‌ರವರ ಸಾಮ್ರಾಜ್ಯದಲ್ಲಿ ಜಾಹೀರ ಮಾಡುವ ಬಗ್ಗೆ.

ಜಾಜ್ಞ, ಮಲಿಕ್, ಮುಅಝುಮ್ ಕೈಸರೀ ಹಿಂದ,

ನಮ್ಮ ಬಾದಶಾಹೀ ರಾಜ್ಯಾರೋಹಣದ ಮಹೋತ್ಸವವನ್ನು ಸರ್ವಶಕ್ತನಾದ ಪರಮೇಶ್ವರನ ಅನುಗ್ರಹದಿಂದಲೂ ಕೃಪೆಯಿಂದಲೂ ಇಸವಿ ಸ. ೧೯೧೧ ನೇ ವರ್ಷದ ಜೂನ ತಿಂಗಳ ೨೨ನೇ ತಾರೀಖಿಗೆ ಮಾಡಬೇಕೆಂಬ ಇರಾದೆಯನ್ನು ನಮ್ಮ ಆಡಳಿತೆಯ ಮೊದಲನೇ ವರ್ಷದಲ್ಲಿ ನಾವು ಇ. ಸ. ೧೯೧೦ ನೇ ವರ್ಷದ ಜುಲೈ ತಿಂಗಳ ೧೯ನೇ ತಾರೀಖಿನ ಮತ್ತು ನವಂಬರ ತಿಂಗಳ ೩ನೇ ತಾರೀಖಿನ ನಮ್ಮ ಬಾದಶಾಹೀ ಜಾಹೀರನಾಮೆಗಳಲ್ಲಿ ಪ್ರಕಟಿಸಿ ಜಾಹೀರು ಮಾಡಿದ್ದೆವು.

ಆದದರಿಂದ ಈಗ ನಾವು ಈ ನಮ್ಮ ಬಾದಶಾಹೀ ಜಾಹೀರನಾಮೆಯ ದ್ವಾರಾ ನಮ್ಮ ರಾಜ್ಯಾರೋಹಣವಾದ ಸಂಗತಿಯನ್ನು ಜಾಹೀರು ಮಾಡುತ್ತೇವೆ. ಮತ್ತು ಈಗ ದಿಲ್ಲಿಯಲ್ಲಿ ನೆರೆದ ನಮ್ಮ ಎಲ್ಲ ಅರಸರಿಗೆ ಸಂಸ್ಥಾನಿಕರಿಗೆ ಮತ್ತು ಜನರಿಗೆ ನಾವು ಬಾದಶಹ ಮತ್ತು ಮಲಿಕ್ ಮುಅಝುಮ್ ಎಂಬ ನಾತೆಯಿಂದ ಅಭಿನಂದನ ಮಾಡಿ ನಮ್ಮ ಹಿಂದೀ ಸಾಮ್ರಾಜ್ಯದ ಸಂಬಂಧದಿಂದ ನಮಗೆ ಅತ್ಯಂತ ಪ್ರೇಮವಿರುತ್ತದೆಂದು ಅವರಿಗೆ ಆಶ್ವಾಸನೆಕೊಡುತ್ತೇವೆ. ಈ ಸಾಮ್ರಾಜ್ಯದ ಸುಖಾಭಿವೃದ್ಧಿಯ ಬಗ್ಗೆ ನಾವು

ಯಾವಾಗಲು ತತ್ಪರರಾಗಿರುತ್ತೇವೆ. ಮತ್ತು ಈ ತತ್ಪರತೆಯು ನಿಂತರವಾಗಿ ಕಾಯು ಮಿರುವದು.

ನಮ್ಮ ಆಡಳತೆಯು ಎರಡನೇ ವರ್ಷದಲ್ಲ ತಾರೀಖು ೧೫ನೇ ಮಾಹೆ ದಿಶಂ ಬರ ಸನ್ನ ೧೯೧೧ನೇ ಇಸವಿಯ ದಿವಸ ದಿಲ್ಲಿಯೊಳಗಿನ ನಮ್ಮ ದರಬಾರದಲ್ಲಿ ಜಾಹೀ ರಮಾಡಲ್ಪಟ್ಟಿತು.

ಈಶ್ವರನು ಮಲಿಕ್, ಮುಆಝುವ್ ಕೈಸರೇ ಹಿಂದರವರನ್ನು
ಸಂರಕ್ಷಿಸಲಿ!

ಜಾಹೀರನಾಮೆಯ ವಾಚನವು ಮುಗಿದ ಮೇಲೆ ಗೌ್ಹನರಲ್ಲ ಲಾರ್ಡ ಹಾರ್ಡಿಂಜ ಸಾಹೇಬರು ಬಾದಷಹರವರವರ ಪ್ರಸಾದಗಳನ್ನು ಪ್ರಸಿದ್ಧಿ ಪಡಿಸುವದ ಕ್ಕಾಗಿ ಮುಂದೆ ಬಂದರು. ಅವರು ಓದಿಹೇಳಿದ ಪ್ರಸಿದ್ಧಪತ್ರಿಕೆಯ ಸಾರಾಂಶವು:—

ಹಿಂದೀ ಸಾಮ್ರಾಜ್ಯದ ಉತ್ಪನ್ನದ ಹಣದೊಳಗಿಂದ ಶಿಕ್ಷಣದ ಪ್ರಗತಿಯ ವೆಚ್ಚವು ನಡೆಯುಬೇಕೆಂಬ ಮೊದಲನೇ ಪ್ರತಿಯ ಹಕ್ಕನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ಸಂಬಂಧದಿಂದ ಅಪೇಕ್ಷಿಸಲ್ಪಟ್ಟ ಪ್ರಶಂಸನೀಯವಾದ ಬೇಡಿಕೆಗಳಿಗೆ ಅನುಸಾರವಾಗಿ, ಹಿಂದುಸ್ತಾನ ಸರಕಾರದವರು ಇನ್ನು ಮುಂದೆ ಶಿಕ್ಷಣವು ಶಕ್ಯವಿದ್ದಷ್ಟು ಮಟ್ಟಿಗೆ ಸರ್ವತ್ರ ಉಪಲಬ್ಧವಾದದ್ದು ವ್ಯಾಪಕವಾದದ್ದು ಆಗುವದರ ಕಡೆಗೆ ಲಕ್ಷಕೊಡುವರು. ಈ ಉದ್ದೇಶವನ್ನು ಲಕ್ಷದಲ್ಲಿಟ್ಟು ಸದ್ಯಕ್ಕೆ ನಿಜವಾದ ಸಾರ್ವಜನಿಕ ಶಿಕ್ಷಣದ ಪ್ರೀತ್ಯರ್ಥವಾಗಿ ಹಿಂದುಸ್ತಾನ ಸರಕಾರದವರು ಒಮ್ಮೆಲೆ ೫೦ ಲಕ್ಷರೂಪಾಯಿ ವೆಚ್ಚಮಾಡುವದನ್ನು ನಿಶ್ಚಯಿಸಿದ್ದು. ಮುಂದೆ ಈ ಹಣದಲ್ಲಿ ದೊಡ್ಡ ಪ್ರಮಾಣದಿಂದ ಭರತಿ ಹಾಕತಕ್ಕವರಿರುವರು. ಹಿಂದುಸ್ತಾನದೊಳಗಿನ ಬ್ರಿಟಿಷ ಸೈನ್ಯದೊಳಗಿನ ಹಾಗು ಹಿಂದೀ ಸೈನ್ಯದೊಳಗಿನ "ನಾನ್ ಕಮಿಷನ್ಡ ಆಫೀಸರರಿಗೂ ಶಿಪಾಯಿಗಳಿಗೂ, ಲಷ್ಕರೀ "ಎಸ್ಟಿಮೇಟ' ದೊಳಗಿಂದ ಖರ್ಚು ಬೀಳುವ ಎಲ್ಲ ಖಾತೆಯೊಳಗಿನ ಕಾಯಂ ನೌಕರರಿಗೂ ೫೦ ರೂಪಾಯಿಗಳಗಿಂತ ಕಡಿಮೆ ಸಂಬಳವುಳ್ಳವರಿಗೆ ಅರ್ಧ ತಿಂಗಳ ಸಂಬಳವು ಇನಾಮಾಗಿಕೊಡಲ್ಪಡುವದು. ಇನ್ನು ಮುಂದೆ ಹಿಂದೀ ಸೈನ್ಯದೊಳಗಿನ ರಾಯಲ ನೇಟೀವ್ಹ ಆಫೀಸರರಿಗೂ 'ರಿಝಿಲ್ದಿಸ್ತ' ರಿಗೂ 'ವ್ಹಿಕ್ಟೋರಿಯನ ಕ್ರಾಸ ಆಫ ವ್ಹಾಲರ' ಎಂಬ ಬಿರುದಾವಳಿಯನ್ನು ದೊರಕಿಸಲಿಕ್ಕೆ ಪ್ರತಿಬಂಧವಾಗಲಾರದು. ಇನ್ನು ಮುಂದಿನ ಹತ್ತು ವರ್ಷಗಳಲ್ಲಿ ಆರ್ಡರ ಆಫ ಬ್ರಿಟಿಷ ಇಂಡಿಯಾ 'ದ ಮೊದಲನೇ ವರ್ಗದ ಸಭಾಸದರ ಸಂಖ್ಯೆಯು ೫೨ ರಿಂದ ಹೆಚ್ಚಾಗುವದಿಲ್ಲದೆ, ಈ ದರಬಾರದ ಪ್ರೀತ್ಯರ್ಥವಾಗಿ ಮೊದಲನೇ ವರ್ಗದಲ್ಲಿ ಹದಿನೈದು ಎರಡನೇವರ್ಗದಲ್ಲಿ ಹತ್ತೊಂಬತ್ತು ಹೊಸ ಜಾಗೆಗಳು ಉಂಟು ಮಾಡಲ್ಪಡುವವು. ಇನ್ನು ಮುಂದೆ 'ಫ್ರಂಟಿಯರ ಮಿಲಟರೀಕೋರ' ಹಾಗು ಲಷ್ಕರೀ ಪೋಲೀಸ ಇವ

ರಿಗೆ ಹೆಚ್ಚಿನ ದರ್ಜೆಗೆ ಹೋಗುವ ಹಕ್ಕು ದೊರೆಯುವದು. ಹಿಂದುಸ್ತಾನದೊಳಗಿನ ಬಾದಷಹನ ಸೈನ್ಯದೊಳಗಿನ ಯಾವ ಏತದ್ದೇಶೀಯ ನೌಕರರು ಬಹಳ ವರ್ಷಗಳ ವರೆಗೆ ಸನ್ಮಾನನೀಯ ನೌಕರಿಯನ್ನು ಮಾಡಿ ಹೆಸರುವಾಸಿಗಳಾಗಿರುವರೋ ಅವರಿಗೆ ಈಗ ಭೂಮಿಯೊಗಲಿ, ನಕ್ತ ಇನಾಮಾಗಲಿ, ಕೊಡಲ್ಪಡುವದು. 'ಇಂಡಿಯನ ಆರ್ಡರ ಆಫ಼ಮೆರೀಟ' ದೊಳಗಿನ ಮಯತ ಮನುಷ್ಯರ ಹೆಂಡಂದಿರಿಗೆ ಸರಕಾರದವರು ಮೂರು ವರ್ಷ ಮಾತ್ರ ವಿಶೇಷ ಅಲೌನ್ಸವನ್ನು ಕೊಡುತ್ತಿದ್ದರು; ಆದರೆ ಇನ್ನು ಮುಂದೆ ಈ ಅಲೌನ್ಸು ಆ ಹೆಂಗಸರು ಜೀವದಿಂದಿರುವ ಮಟ್ಟಿಗೆ ಇಲ್ಲವೆ ಎರಡನೇ ಮದುವೆಯನ್ನು ಮಾಡಿಕೊಳ್ಳುವ ವರೆಗೆ ಕೊಡಲ್ಪಡುವದು. ೫೦ ರೂಪಾಯಿಗಳಿಗಿಂತ ಕಡಿಮೆ ಸಂಬಳವುಳ್ಳ ಸಿವ್ಹಿಲ ನೌಕರರಿಗೆ ಅವರ ಅರ್ಧ ತಿಂಗಳ ಸಂಬಳವು ಉಚಿತವಾಗಿ ಕೊಡಲ್ಪಡುವದು. ದಿವಾಣ ಬಹಾದೂರ, ಸರದಾರ ಬಹಾದೂರ, ಖಾನಬಹಾದೂರ, ರಾಯಬಹಾದೂರ, ರಾವಬಹಾದೂರ, ಖಾನಸಾಹೇಬ, ರಾಯಸಾಹೇಬ, ರಾವಸಾಹೇಬ ಈ ಬಿರುದಾವಳಿಗಳನ್ನು ದೊರಕಿಸಿದವರಿಗೂ, ಇನ್ನು ಮುಂದೆ ದೊರಕಿಸುವವರಿಗೂ ಸನ್ಮಾನದ ಚಿಹ್ನವೆಂದು ಬೇರೆ ಬೇರೆ ಪದಕಗಳು ಕೊಡಲ್ಪಡುವವು. ಯಾರು ಮಹಾ ಮಹೋಪಾಧ್ಯಾಯ, ಅಥವಾ ಶಮ್ಸುಲ್ ಉಲ್ಮಾ ಎಂಬ ಪೂಜ್ಯ ಬಿರುದಾವಳಿಗಳನ್ನು ಪಡೆದಿರುವರೋ ಅಥವಾ ಇನ್ನು ಮುಂದೆ ಪಡೆಯುವರೋ ಅವರಿಗೆ ಪ್ರತಿವರ್ಷ ಕೆಲವು ಪೆನ್ಶನು ಪ್ರಾಚೀನವಿದ್ಯೆಯ ಉತ್ತೇಜನಾರ್ಥವಾಗಿ ಕೊಡಲ್ಪಡುವದು. ಪ್ರಶಂಸನೀಯವಾಗುವಂತೆ ನೌಕರಿಮಾಡಿದ ಕೆಲವು ಜನರಿಗೆ ಈ ದರಬಾರದ ಸಂಸ್ಮರಣಾರ್ಥವಾಗಿ ವಾಯವ್ಯ ಕಡೆಯ ಸರಹದ್ದಿನ ಪ್ರಾಂತದಲ್ಲಿಯೂ, ಬಲುಚಿಸ್ಥಾನದಲ್ಲಿಯೂ ತಹಾಹಯಾತ ಅಥವಾ ಅವರ ಮಕ್ಕಳಹಯಾತೀವರೆಗೆ ಸರಕಾರ ತೆರಿಗೆಯಿಲ್ಲದ ಭೂಮಿಗಳು ಕೊಡಲ್ಪಡುವವು. ಹೊಸ ಅರಸನು ಸಂಸ್ಥಾನಗಳ ಪಟ್ಟದ ಮೇಲೆ ಬಂದಾಗ ಸರಕಾರಕ್ಕೆ ಕೊಡಲ್ಪಡುತ್ತಿದ್ದ ಕಾಣಿಕೆಯ ಹಣವನ್ನು ಇನ್ನು ಮುಂದೆ ಕೊಡುವ ಪ್ರಸಂಗವು ಬರಲಿಕ್ಕಿಲ್ಲ. ಮತ್ತು ಕಾಠೇವಾಡ ಹಾಗು ಗುಜರಾಥ ಇಲ್ಲಿಯ 'ನಾನ್ ಜ್ಯುರಿಸ್ ಡಿಕ್ಶನಲ್ ಇಸ್ಟೇಟೀ' ಅಥವಾ ಮೇವಾಡದ ಭೂಖಿಯಾ ಸಂಸ್ಥಾನಿಕ ಇವರಿಂದ ಸರಕಾರಕ್ಕೆ ಸಲ್ಲತಕ್ಕ ಹಣವನ್ನು ಸರಕಾರದವರು ಮಾಫುಮಾಡಿದ್ದಾರೆ. 'ಇಂಪೀರಿಯಲ ಸವ್ಹಿಸ' ಲಷ್ಕರದೊಳಗಿನ ಜನರ ಸಲುವಾಗಿ 'ಆರ್ಡರ ಆಫ಼ ಬ್ರಿಟಿಷ ಇಂಡಿಯಾ'ದಲ್ಲಿ ಕೆಲವು ಹೊಸ 'ಸುಪನ್ಯುಮರರೀ' ಸ್ಥಳಗಳು ಉತ್ಪನ್ನ ಮಾಡಲ್ಪಡುವವು. ಅಪರಾಧ ಹಾಗು ದುರ್ನಡತೆಗಳ ಸಲುವಾಗಿ ಕಾಯಿದೆಗಳಿಂದ ವಿಧಿಸಲ್ಪಟ್ಟ ಶಿಕ್ಷೆಯನ್ನು ಅನುಭೋಗಿಸುತ್ತಿದ್ದ ಜನರು ಬಂಧಮುಕ್ತ ಮಾಡಲ್ಪಡುವರು. ಮತ್ತು ದಿವಾಣಿಯಲ್ಲಿ ಯಾವ ಸೆರೆಯಾಳುಗಳ ಸಾಲವು ಇದ್ದು ಸುಳ್ಳತನದ ಮೂಲಕವಾಗಿ ಸೆರೆಯಲ್ಲಿ ಬೀಳದೆ ನಿಜವಾಗಿ ಒಡತನದ ಮೂಲಕವಾಗಿ ಸೆರೆಯಲ್ಲಿ ಬಿದ್ದಿರುವರೋ

ಅವರನ್ನು ಸೆರೆಬಿಡಿಸಿ ಅವರ ಸಾಲವನ್ನು ಸರಕಾರದವರು ತೀರಿಸುವರು. ಈ ಅನು ಕೂಲತೆಗಳು ಅಥವಾ ಮೇಹರಬಾನಿಗೆಗಳು ಯಾರಿಗೆ ಯಾವ ಶರ್ತಿನಿಂದ ಕೊಡ ಲ್ಪಟ್ಟಿರುವವೆಂಬದು ಹಿಂದಿನಿಂದ ಪ್ರಸಿದ್ಧಮಾಡಲ್ಪಡುವದು."

ಈ ಅರ್ಥದ ಪ್ರಸಿದ್ಧ ಪತ್ರಿಕೆಯನ್ನು ಓದಿಹೇಳಿದ ತರುವಾಯ ಚೀಫ ಹೇರ ಲ್ಡರವರು ಚಕ್ರವರ್ತಿ ೫ನೇ ಜಾರ್ಜರವರ ಸಲುವಾಗಿಯೂ ಮೇರಿಮಹಾರಾಣಿಯ ವರ ಸಲುವಾಗಿಯೂ ಮೂರುಸಾರೆ ಜಯಘೋಷವನ್ನು ಮಾಡಬೇಕೆಂದು ಜನರಿಗೆ ಸೂಚಿಸಿದರು. ಆಕಾಲಕ್ಕೆ ಎಲ್ಲ ಸಭಿಕರು ಗಟ್ಟಿಯಾಗಿ ಒದರಿ ಜಯಜಯಕಾರ ಸೂಚಕವಾದ ಶಬ್ದಗಳನ್ನು ಉಚ್ಚರಿಸಿದರು. ಆ ಕಾಲಕ್ಕೆ ಮಹಾರಾಜರೂ ಮಹಾ ರಾಣಿಯವರೂ ಎದ್ದುನಿಂತು ಜನರ ಆಭಾರವನ್ನು ಮನ್ನಿಸುತ್ತಿದ್ದರು. ತರುವಾಯ ಸಾರ್ವಭೌಮದಂಪತಿಗಳು ಪುನಃ ದರಬಾರದ ಸಿಂಹಾಸನಗಳ ಮೇಲೆ ಬಂದು ಕುಳಿ ತುಕೊಂಡರು. ಇಲ್ಲಿಗೇ ದರಬಾರದ ಕಾರ್ಯಕ್ರಮವು ಮುಗಿಯುತಕ್ಕದ್ದಿತ್ತು ಆದರೆ ಹಾಗಾಗದೆ ಬಾದಷಹರವರು ಕಯ್ಯಲ್ಲಿ ಒಂದು ಕಾಗದವನ್ನು ಹಿಡಕೊಂಡು ಎದ್ದು ನಿಂತು ಜನರಿಗೆ ಪ್ರಸಿದ್ಧ ಪಡಿಸಿದ್ದೇನಂದರೆ:—

"ನಾವು ನಮ್ಮ ಗವ್ಹರ್ನರ ಜನರಲ ಇನಕೌನ್ಸಿಲ ಇವರ ಸಂಗಡ ಚರ್ಚೆ ಮಾಡಿ, ನಮ್ಮ ಮಂತ್ರಿಗಳ ಆಲೋಚನೆಯನ್ನು ತಕ್ಕೊಂಡು ಹಿಂದುಸ್ಥಾನ ಸರಕಾ ರದ ಮುಖ್ಯ ಸ್ಥಳವನ್ನು ಕಲಕತ್ತೆಯಿಂದ ತೆಗೆದು ಈ ದಿಲ್ಲೀ ಪಟ್ಟಣಕ್ಕೆ ತರಬೇಕೆಂಬ ದನ್ನು ನಿಶ್ಚಯಿಸಿದ ಸಂಗತಿಯನ್ನು ನಮ್ಮ ಯಾವತ್ತು ಪ್ರಜೆಗಳಿಗೆ ಜಾಹೀರುಮಾಡು ತ್ತೇವೆ. ಈ ವ್ಯವಸ್ಥೆಯಾಗುವ ಕಾಲಕ್ಕೆ ಈ ಸುಧಾರಣೆಯ ಪರಿಣಾಮವೆಂದು ಅದಷ್ಟು ಬೇಗನೆ ಬಂಗಾಲ ಇಲಾಖೆಗೆ ಒಬ್ಬ ಗವ್ಹರ್ನರನನ್ನೂ ಬಹಾರ, ಛೋಟಾ ನಾಗಪೂರ ಒಡಿಸಾ ಈ ಪ್ರಾಂತಗಳಿಗೆ ಮತ್ತೊಬ್ಬ ಲೆ. ಗವ್ಹರ್ನರನನ್ನೂ ಆಸಾಮ ಪ್ರಾಂತಕ್ಕೆ ಒಬ್ಬ ಚೀಫ ಕಮಿಶನರನನ್ನೂ ನೇಮಿಸುವದನ್ನು ಗೊತ್ತುಮಾಡಿದ್ದೇವೆ. ಈ ಸಂಗತಿಗಳನ್ನು ಕುರಿತು ಹಿಂದುಸ್ಥಾನ ಸರಕಾರದವರು ಸ್ಟೇಟ ಸೆಕ್ರೇಟರಿ ಇನ ಕೌನ್ಸಿಲರವರ ಅನುಮತಿಯನ್ನು ತಕ್ಕೊಂಡು ರಾಜ್ಯಾಭಾರಕ್ಕೆ ಅವಶ್ಯಕವಾದ ಸುಧಾರಣೆಗಳನ್ನೂ ಹೊಸ ಪ್ರಾಂತಗಳ ಮೇರೆಗಳನ್ನೂ ಗೊತ್ತುಮಾಡುವರು. ಅವು ಅಮಲಿನಲ್ಲಿ ಬರುವವು. ಈ ಬದಲಾವಣೆಗಳಿಂದ ಹಿಂದುಸ್ಥಾನದ ರಾಜ್ಯಕಾರ ಭಾರವು ಹೆಚ್ಚು ಚನ್ನಾಗಿ ನಡಿಸಲ್ಪಡುವದೆಂತಲೂ, ಅದರಿಂದ ನಮ್ಮ ಪ್ರಜೆಗಳಿಗೆ ಹೆಚ್ಚು ಸೌಖ್ಯವೂ ಉತ್ಕರ್ಷವೂ ಆಗುವದೆಂತಲೂ ಅಂತಃಕರಣಪೂರ್ವಕವಾಗಿ ಇಚ್ಛಿಸುತ್ತೇವೆ."

ಈ ಜಾಹೀರನಾಮೆಯಿಂದ ಜನರ ಆನಂದಸಾಗರವು ಉಕ್ಕೇರಿತು. ಆ ಆನಂದದ ಲಹರಿಗಳಲ್ಲಿ ಜನರು ಯಾರ ಕನಸುಮನಸುಗಳಲ್ಲಿಯೂ ಇಲ್ಲದೆ

ಒಮ್ಮೆಲೆ ತಮ್ಮ ಕಿವಿಗೆ ಬಿದ್ದ ಸಂಗತಿಯು ವಿಷಯವಾಗಿ ಆಶ್ಚರ್ಯಪಡುತ್ತಿರಲು ಗಾಡ ಸೇವದಿ ಕಿಂಗ' ಎಂಬ ರಾಷ್ಟ್ರಗೀತದಿಂದ ದರಬಾರದ ಕಾರ್ಯವು ಸಾಂಗ ಮಾಡಲ್ಪಟ್ಟಿತು. ಬಾದಷಹರೂ, ಮಹಾರಾಣಿಯವರೂ ತಮ್ಮ ರಥದಲ್ಲಿ ಕುಳಿತು ಕೊಂಡು ತೋಫಿನ ಸಲಾಮುಗಳನ್ನೂ ಜನರ ಸಲಾಮುಗಳನ್ನೂ ಸ್ವೀಕರಿಸುತ್ತ ತಮ್ಮ ಸ್ಥಳಿಕ್ಕೆ ಪ್ರಯಾಣಿಸಿದರು.

ಸಾರಾಂಶ, ಯಾವ ಹಕ್ಕುಗಳ ಸಲುವಾಗಿಯೂ, ಸುಧಾರಣೆಗಳ ಸಲುವಾ ಗಿಯೂ ಹತ್ತು ವರ್ಷಗಟ್ಟಲೆ ಪ್ರಯತ್ನ ಮಾಡಿದರೂ ಅವು ದೊರೆಯುವಂತಿದ್ದಲ್ಲವೋ ಅಂಥವು ಸಾರ್ವಭೌಮದಂಪತಿಗಳ ಆಗಮನದಿಂದ ನಮ್ಮ ದೇಶಕ್ಕೆ ಒಮ್ಮೆಲೆ ಪ್ರಾಪ್ತವಾದವು. ಇದಕ್ಕಾಗಿ ನಾವು ನಮ್ಮ ಸಾರ್ವಭೌಮದಂಪತಿಗಳನ್ನು ಎಷ್ಟು ಬಗೆಯಿಂದಕೊಂಡಾಡಿದರೂ ಸ್ವಲ್ಪವೇ ಸರಿ.

ದೇವರು ನಮ್ಮ ಸಾರ್ವಭೌಮದಂಪತಿಗಳಿಗೆ
ದೀರ್ಘಾಯುಷ್ಯವನ್ನೀಯಲಿ.

ಎಡಿಟರ್ಸ.

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वला:।
न स्नानं न विलेपनं न कुसुमं नालंकृता मूर्धजा:॥
वाण्येका समलंकरोति पुरुषं या संस्कृता धार्यते।
क्षीयंते खलु भूषणानि सततं वाग्भूषणम् भूषणम्॥

(भर्तृहरिः)

ಸಂಪುಟ ೧೬.	ಜಾನೆವರಿ ೧೯೧೨.	ಸಂಚಿಕೆ ೬.

ದಿಲ್ಲೀ ನಗರದ ಐತಿಹಾಸಿಕ ಮಹತ್ವವು.

ಐದನೇ ಜಾರ್ಜ ಬಾದಶಹರವರು ಹಿಂದುಸ್ಥಾನಕ್ಕೆ ಬಂದು ದಿಲ್ಲಿಯಲ್ಲಿ ರಾಜ್ಯಾರೂಢರಾದದ್ದು ಹಿಂದುಸ್ಥಾನದ ಇತಿಹಾಸದಲ್ಲಿ ಅಪೂರ್ವವಾದ ಹಾಗು ಮಹತ್ವದ ಸಂಗತಿಯಾಗಿದೆ. ಯಾಕಂದರೆ, ಇದಕ್ಕೂ ಮೊದಲು ರಾಜ್ಯಾರೋಹಣದ ನಿಮಿತ್ತವಾಗಿ, ಇಂಗ್ಲಂಡದ ಯಾವ ಬಾದಶಹರೂ ಹಿಂದುಸ್ಥಾನಕ್ಕೆ ಬಂದಿದ್ದಿಲ್ಲ. ಈ ಸಂಗತಿಯು ಹಿಂದುಸ್ಥಾನದ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವದಲ್ಲದೆ, ಹಿಂದೂ ಜನರ ಸ್ವಾಮಿನಿಷ್ಠೆಯನ್ನೂ, ಬ್ರಿಟಿಶ್ ರಾಜರ ವಿಷಯವಾಗಿದ್ದ ಅವರ ಆದರವನ್ನೂ ಹೆಚ್ಚಿಸುವದು. ಈ ತರದ ಸಮಾರಂಭವನ್ನೇ ಗವ್ಹರ್ನರ ಜನರಲ್ಲರಾದ ಲಾರ್ಡ ಲಿಟನ್ ಸಾಹೇಬರು ೩೫ ವರ್ಷಗಳಾಚೆಗೆ (ಅಂದರೆ ೧೮೭೭ ನೇ ಇಸ್ವಿಯ ಜನವರಿ ತಿಂಗಳಲ್ಲಿ) ದಿಲ್ಲಿಯಲ್ಲಿ ನೆರವೇರಿಸಿದ್ದರು. ಮುಂದೆ ೧೯೦೩ ನೇ ಇಸ್ವಿಯಲ್ಲಿ ಲಾರ್ಡ ಕರ್ಝನ್ ಸಾಹೇಬರು ಗವ್ಹರ್ನರ ಜನರಲ್ಲರಿದ್ದಾಗ, ೭ ನೇ ಎಡ್ವರ್ಡ ಬಾದಶಹರ ರಾಜ್ಯಾರೋಹಣ ಸಮಾರಂಭವು ಆದೇ ದಿಲ್ಲೀ ಪಟ್ಟಣದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಆದರೆ ಇವೆಲ್ಲ ಸಮಾರಂಭಗಳು ವಧೂವರರಿಲ್ಲದ ಮದುವಗಳ ಹಾಗಾಗಿದ್ದವೆಂದು ಕೆಲವರು ಅನ್ನುತ್ತಾರೆ. ಅಂದಮೇಲೆ ಚಕ್ರವರ್ತಿಗಳ ಹಾಗು ಚಕ್ರವರ್ತಿನಿಯವರ ಆಗಮನದಿಂದ ಪೂರ್ಣವಾಗಿದ್ದ ಈ ವರ್ಷದ ಸಮಾರಂಭವನ್ನು ನೋಡಿ ಹಿಂದೂ ಜನರಿಗೆ ಹಿಡಿಸಲಾರದಷ್ಟು ಆನಂದವು ಆದದ್ದು ಆಶ್ಚರ್ಯವೇ?

ರಾಜ್ಯಾರೋಹಣದ ಮೂರೂ ಸಮಾರಂಭಗಳು ದಿಲ್ಲಿಯಲ್ಲಿಯೇ ನೆರವೇರಿದವೆಂಬದು ಮೇಲೆಯೇ ಹೇಳಲ್ಪಟ್ಟಿದೆ. ಅಂದ ಮೇಲೆ, ವ್ಯಾಪಾರೋದ್ಯೋಗಗಳಿಂದ

ಮುಂದರಿಯುತ್ತಿರುವ-ಬೇರೆ ಪಟ್ಟಣಗಳನ್ನು ಬಿಟ್ಟು, ಹಳೇಪಟ್ಟಣವಾದ ದಿಲ್ಲಿಯನ್ನೇ, ಇಂಗ್ಲಿಷ ಮುತ್ಸದ್ದಿಗಳೂ ಕೂಡ, ಅಂಥ ಸಪಾರಂಭಗಳಿಗೆ ತಕ್ಕಸ್ಥಳವಾಗಿ ಆರಿಸಲಿಕ್ಕೆ ಕಾರಣವೇನಿರಬೇಕೆಂಬದರ ವಿಷಯವಾಗಿ ಎಲ್ಲರ ಮನಸ್ಸಿನಲ್ಲಿಯೂ ಕುತೂಹಲವು ಹುಟ್ಟುವದು ಸ್ವಾಭಾವಿಕವು. ಮತ್ತು ದಿಲ್ಲಿಯು ಹಿಂದೂಸಾಮ್ರಾಜ್ಯದ ರಾಜಧಾನಿಯಾಗಬೇಕೆಂಬ ಬಾದಶಹರ ನಿರ್ಣಯವನ್ನು ಕೇಳಿಯಂತೂ ಆ ಕುತೂಹಲವು ಹೆಚ್ಚುತ್ತನಡೆಯುವದು. ಆದ್ದರಿಂದ ಆ ಕುತೂಹಲವನ್ನು ತೃಪ್ತಿಪಡಿಸಬೇಕಾದರೆ, ಪೌರಾಣಿಕಕಾಲದಿಂದ ಇಂದಿನವರೆಗೂ ಆ ಪಟ್ಟಣಕ್ಕಿದ್ದ ಐತಿಹಾಸಿಕ ಮಹತ್ವವನ್ನು ಹುಡಕಿ ತೆಗೆಯಬೇಕಾಗುತ್ತದೆ. ಯಾಕಂದರೆ, ದಿಲ್ಲಿಗೆ ಇಷ್ಟು ಗೌರವವು ಪ್ರಾಪ್ತವಾದದ್ದು, ಅದರ ಐತಿಹಾಸಿಕ ಮಹತ್ವದಿಂದಲೇ.

ಮೊದಲು ಪೌರಾಣಿಕಕಾಲದಲ್ಲಿ ಈ ಪಟ್ಟಣಕ್ಕಿದ್ದ ಮಹತ್ವವನ್ನು ನೋಡುವಾ. ಪ್ರಸಿದ್ಧನಾದ ಕುರುರಾಜನು ಈ ಪಟ್ಟಣದಲ್ಲಿ ತಪಶ್ಚರ್ಯ ಮಾಡಿದ್ದರಿಂದ, ಈ ಪಟ್ಟಣಕ್ಕೆ ಕುರುಕ್ಷೇತ್ರವೆಂಬ ಅಭಿಧಾನವು ಪ್ರಾಪ್ತನಾಯಿತು. ಮುಂದೆ ಚಂದ್ರವಂಶದವನಾದ ಹಸ್ತಿಯು ಈ ಪಟ್ಟಣವನ್ನು ನೆಲಿಸಿ, ಇದನ್ನು ತನ್ನ ರಾಜಧಾನಿಯಾಗಿ ಮಾಡಿಕೊಂಡದಿನಿಂದ, ಇದಕ್ಕೆ 'ಹಸ್ತಿನಾಪುರ'ವೆಂಬ ಹೆಸರು ಬಂತು. ಕುರುಕುಲೋತ್ಪನ್ನನಾದ ಧರ್ಮರಾಜನು ಆಳುತ್ತಿದ್ದ ಇಂದ್ರಪ್ರಸ್ಥನಗರವು ಈಗ್ಯೂ ಪುರಾಣಕಿಲ್ಲೆಯೆಂಬ ಹೆಸರಿನಿಂದ, ದಿಲ್ಲಿಯಿಂದ ಕೆಲವು ಅಂತರದ ಮೇಲಿರುತ್ತದೆ. ಈ ಪಟ್ಟಣಕ್ಕೆ ಇಂದ್ರಪ್ರಸ್ಥವೆಂಬ ಹೆಸರು ಪ್ರಾಪ್ತವಾಗಲಿಕ್ಕೆ ಕಾರಣವೇನಾಯಿತೆಂಬದರ ವಿಷಯವಾಗಿ ಬೇರೆ ಬೇರೆ ಜನರು ಬೇರೆ ಬೇರೆ ಅಭಿಪ್ರಾಯವುಳ್ಳವರಿದ್ದಾರೆ. ಪಾಂಡವರು ಕಟ್ಟಿದ ಸುಂದರವಾದ ಆ ರಾಜಧಾನಿಯನ್ನೂ, ಧರ್ಮರಾಜನು ನ್ಯಾಯದಿಂದ ಆಳುತ್ತಿದ್ದ ಆ ಪಟ್ಟಣವನ್ನೂ ನೋಡಿ, ಸುಖದಿಂದ ಬಾಳುವೆ ಮಾಡುತ್ತಿದ್ದ ಅಲ್ಲಿಯ ನಾಗರಿಕರು ತಮ್ಮ ನಗರಕ್ಕೆ ಇಂದ್ರಪ್ರಸ್ಥವೆಂಬ ಗೌರವದ ಅಭಿಧಾನವನ್ನು ಕೊಟ್ಟ ಹಾಗೆ ಕಾಣುತ್ತದೆ. ಅದು ಹ್ಯಾಗಾದರೂ ಇರಲಿ, ಪಾಂಡವರು ಇಲ್ಲಿ ಎಷ್ಟೋ ವರ್ಷಗಳ ವರೆಗೆ ಸುಖದಿಂದ ರಾಜ್ಯವಾಳಿದರೆಂಬದು ದಿಟವಲ್ಲ. ಅವರ ತರುವಾಯ ಯಾದವವಂಶದವರು ದಿಲ್ಲಿಯಲ್ಲಿ ರಾಜ್ಯವಾಳಿದರೆಂದು ಗೊತ್ತಾಗುತ್ತದೆ. ಯಾದವ ವಂಶದ ಅನಿರುದ್ಧನ ಮಗನಾದ ವಜ್ರನು ಇಲ್ಲಿ ಆಳಿದನೆಂಬ ಒಗ್ಗೆ ಪುರಾಣಗಳಲ್ಲಿ ಉಲ್ಲೇಖವಿದೆ. ಪೌರಾಣಿಕ ಹಾಗು ಐತಿಹಾಸಿಕ ಕಾಲಗಳ ನಡುವಿನ ಅವಧಿಯಲ್ಲಿ ಮಾತ್ರ, ಉಳಿದ ಎಷ್ಟೋ ಸಂಗತಿಗಳ ಹಾಗೆ ದಿಲ್ಲಿಯ ಮಹತ್ವವೂ ಗೊತ್ತಾಗದೆ, ಹಾಗೆಯೇ ಉಳಿದಿರುತ್ತದೆ.

ಐತಿಹಾಸಿಕ ಕಾಲದಲ್ಲಿ ಆಳಿದ ಅರಸರ ಹೆಸರುಗಳು, ಅವರು ಕಟ್ಟಿಸಿದ ಜಯಸ್ತಂಭಗಳಿಂದಾಗಲಿ, ಬೇರೆ ಕಟ್ಟಡಗಳಿಂದಾಗಲಿ, ಗೊತ್ತಾಗುತ್ತವೆ. ೨೨ನೇ ಶತಕದಲ್ಲಿ

ಇಲ್ಲಿ ಧಾವನೆಂಬ ಅರಸನು ಆಳುತ್ತಿದ್ದನೆಂಬದು, ದಿಲ್ಲಿಯಲ್ಲಿ ಈಗ್ಯೂ ಕಾಣುತ್ತಿರುವ ಜಯಸ್ತಂಭದಿಂದ ಗೊತ್ತಾಗುತ್ತದೆ. ಮುಂದೆ ೮-೯ ಶತಕಗಳ ವರೆಗೆ ಇಲ್ಲಿ ಹಿಂದೂ ಅರಸರೇ ರಾಜ್ಯವಾಳುತ್ತಿದ್ದರು. ೧೧ ನೇ ಶತಕದಲ್ಲಿ ಅರಸನಾಗಿದ್ದ ಚವ್ಹಾಣ ಕುಲದ ಪೃಥ್ವೀರಾಜನು ಹಳೇ ದಿಲ್ಲಿಯನ್ನು ಕಟ್ಟಿಸಿದನು. ಇವನು ಘೋರಿಮಹಮ್ಮದನೆಂಬ ಅಫಗಾಣ ದಾಳಿಗಾರನನ್ನು ೧೧೯೧ ನೇ ಇಸ್ವಿಯಲ್ಲಿ ಸೋಲಿಸಿ, ಓಡಿಸಿಬಿಟ್ಟನು. ಆದರೆ ಅಷ್ಟರಲ್ಲಿಯೇ ಹಿಂದೂ ಅರಸರಲ್ಲಿ ಒಡಕು ಹುಟ್ಟಿದ್ದರಿಂದ, ಅವರು ಘೋರಿ ಮಹಮ್ಮದನನ್ನು ಎರಡನೇ ಸಾರಿ ಸೋಲಿಸಲಿಕ್ಕೆ ಸಮರ್ಥರಾಗಲಿಲ್ಲ. ಈ ಒಡಕು ಮುಂದೆ ಹಿಂದೂ ರಾಜ್ಯಗಳ ಲಯಕ್ಕೂ ಮುಸಲ್ಮಾನೀ ರಾಜ್ಯದ ಉದಯಕ್ಕೂ ಕಾರಣವಾಯಿತು. ಹಿಂದುಸ್ಥಾನದಲ್ಲಿ ಮುಸಲ್ಮಾನೀ ರಾಜ್ಯದ ಅಸ್ತಿಭಾರವನ್ನು ಹಾಕಿದವನು, ಪ್ರಸಿದ್ಧವಾದ ಕುತುಬಮಿನಾರವನ್ನು ಕಟ್ಟಿಸಲಾರಂಭಿಸಿದ ಕುತುಬುದ್ದೀನನು. ಇವನು ಮಹಮ್ಮದ ಘೋರಿಯ ಗುಲಾಮನಾಗಿದ್ದನು. ಇವನ ತರುವಾಯ ಕೆಲವು ವರ್ಷಗಳ ವರೆಗೆ ಆಳಿದ ಅರಸರೆಲ್ಲ ಮುಸಲ್ಮಾನರೇ. ಆದರೆ ಅವರೆಲ್ಲ ಒಂದೇ ವಂಶದವರಾಗಿದ್ದಿಲ್ಲವೆಂದು ಇತಿಹಾಸದಿಂದ ತಿಳಿಯುತ್ತದೆ. ಖಿಲಜಿ ವಂಶದ ಅರಸರ ಕಾಲದಲ್ಲಿ ದಿಲ್ಲೀ ಸಾಮ್ರಾಜ್ಯವು ಬೆಳೆಯಹತ್ತಿತು. ಅಲ್ಲಾವುದ್ದೀನ ಖಿಲಜಿಯ ಸರದಾರನಾದ ಮಲಿಖಕಾಫುರನು ರಾಮೇಶ್ವರದ ವರೆಗೆ ದಾಳಿಯಿಟ್ಟು ಅಲ್ಲಿಗೊಂದು ಮಸೀದಿಯನ್ನು ಕಟ್ಟಿಸಿದ್ದು ಪ್ರಸಿದ್ಧವದೆ. ತಘಲಖ ವಂಶದ ಅರಸರಲ್ಲಿ ಕಡೆಯವರು ದುರ್ಬಲರಿದ್ದದ್ದನ್ನು ನೋಡಿ, ತೈಮೂರ್ಲಿಂಗನೆಂಬ ಪರದೇಶದ ದಾಳಿಗಾರನು ದಿಲ್ಲಿಯ ಮೇಲೆ ದಾಳಿಯನ್ನಿಟ್ಟು ೩-೪ ದಿವಸಗಳ ವರೆಗೆ ಕೊಲೆಸುಲಿಗೆಗಳನ್ನು ನಡೆಯಿಸಿ, ಕರುಣವಿಲ್ಲದೆ ಅಸಂಖ್ಯ ಜನರನ್ನು ಕೊಂದು, ಅಗಣಿತ ದ್ರವ್ಯವನ್ನೂ, ಅಸಂಖ್ಯ ಗುಲಾಮರನ್ನೂ ಸಂಗಡ ತೆಗೆದುಕೊಂಡು ಸ್ವದೇಶಕ್ಕೆ ತಿರುಗಿ ಹೋದನಂತೆ. ಈ ದಾಳಿಯಿಂದ ತಘಲಕ ವಂಶದ ಅರಸರ ವರ್ಚಸ್ಸು ಕಡಿಮೆಯಾಗಹತ್ತಿತು. ಈ ಸಂಧಿಯನ್ನು ಸಾಧಿಸಿ ಸಯ್ಯದ ಹಾಗು ಲೋದಿ ವಂಶಗಳ ಅರಸರು ದಿಲ್ಲಿಯಲ್ಲಿ ಕೆಲವು ಕಾಲದ ವರೆಗೆ ಆಳಿದರು.

ದಿಲ್ಲಿಯು ಬೇರೆ ಬೇರೆ ಸಾಮ್ರಾಜ್ಯಗಳ ರಾಜಧಾನಿಯಿದ್ದಂತೆಯೇ, ಬೇರೆ ಬೇರೆ ಸಾಮ್ರಾಜ್ಯಗಳ ಭವಿತವ್ಯತೆಯನ್ನು ಗೊತ್ತುಪಡಿಸುವ ದೊಡ್ಡ ದೊಡ್ಡ ಸಂಗ್ರಾಮಗಳ ರಣಭೂಮಿಯಾಗಿದೆ. ಪುರಾಣಕಾಲದಿಂದಲೂ ಈ ಪಟ್ಟಣವು ಬೇರೆ ಬೇರೆ ಯುದ್ಧಭೂಮಿಗಳಿಗಾಗಿ ಪ್ರಸಿದ್ಧವದೆ. ಪಾಂಡವಕೌರವರ ನಡುವೆ, ಪುರಾಣ ಪ್ರಸಿದ್ಧವಾದ ಮಹಾಭಾರತದ ಯುದ್ಧವು ಜರಗಿದ್ದು ಇಲ್ಲಿಯೇ. ಐತಿಹಾಸಿಕ ಕಾಲದ ಮೊದಲನೇ ಮಹತ್ವದ ಯುದ್ಧವೆಂದರೆ—೧೫೨೬ ನೇ ಇಸ್ವಿಯಲ್ಲಿ ಪಾಣಿಪತ್ತವೆಂಬ ರಣಭೂಮಿಯಲ್ಲಿ ಲೋದಿವಂಶದ ಅರಸರ ಹಾಗು ಮೊಗಲರ ನಡುವೆ ಜರಗಿದ್ದೇ, ಎಂದು

ಹೇಳಬಹುದು. ಈ ಘೋರ ಸಂಗ್ರಾಮದಿಂದ, ದಿಲ್ಲಿಯು ಮೊಗಲವಂಶದ ಅರಸರ ಕೈಸೇರಿತು. ಈ ಅರಸರು ಒಳ್ಳೇ ವೈಭವದಿಂದಲೂ, ಶೌರ್ಯದಿಂದಲೂ, ಜಾಣತನದಿಂದಲೂ ಬಹಳಕಾಲದ ವರೆಗೆ ಹಿಂದುಸ್ಥಾನದ ದೊಡ್ಡ ಭಾಗವನ್ನೆಲ್ಲ ಆಳಿದರು. ಇವರು ಕೇವಲ ದಾಳಿಗಾಗಿ ಬಂದಿರದೆ, ತಳವೂರಿ ನಿಂತು ರಾಜ್ಯವಾಳುವದಕ್ಕಾಗಿ ಬಂದದ್ದರಿಂದ, ಇವರು ದಿಲ್ಲಿಯ ಶೋಭೆಯನ್ನೂ, ವಿಸ್ತಾರವನ್ನೂ ಹೆಚ್ಚಿಸಲು ಮನಮುಟ್ಟಿ ಪ್ರಯತ್ನಮಾಡಿದರು. ಬಾಬರನ ಕಾಲಕೀರ್ದಿಯು ಬಹಳ ದಿವಸಗಳು ಲಾಹೋರದಲ್ಲಿಯೇ ಹೋದವಾದ್ದರಿಂದ, ಅವನು ದಿಲ್ಲೀಪಟ್ಟಣವನ್ನು ಸುಧಾರಿಸಲು ವಿಶೇಷ ಪ್ರಯತ್ನಮಾಡಿದ ಹಾಗೆ ಕಾಣುವದಿಲ್ಲ. ಆದರೆ ಇವನ ಮಗನಾದ ಹುಮಾಯೂನನು ದಿಲ್ಲಿಯಲ್ಲಿಯೇ ಇರಲಿಚ್ಛಿಸಿ, ಪುರಾಣಕಾಲದ ಇಂದ್ರಪ್ರಸ್ಥದ ಸ್ಥಳದಲ್ಲಿ ಪುರಾಣಕಿಲ್ಲೆಯನ್ನು ಕಟ್ಟಿಸಿದನು. ಅಕಬರನು ಆಗ್ರಾಪಟ್ಟಣದಲ್ಲಿಯೇ ವಿಶೇಷವಾಗಿ ವಾಸಿಸುತ್ತಿದ್ದದರಿಂದ, ಅವನು ದಿಲ್ಲಿಯಲ್ಲಿ ಯಾವ ಮಹತ್ವದ ಕಟ್ಟಡವನ್ನೂ ಕಟ್ಟಿಸಿದ ಹಾಗೆ ತೋರುವದಿಲ್ಲ. ಇವನ ಮಕ್ಕಳೂ, ಮೊಮ್ಮಕ್ಕಳೂ ಬಹುಕಾಲದ ವರೆಗೆ ಆಗ್ರಾದಲ್ಲಿಯೇ ನಿಂತರು. ಆದರೆ ಶಹಾಜಹಾನನು ಮಾತ್ರ ದಿಲ್ಲೀಪಟ್ಟಣದ ಶೋಭೆಗಾಗಿಯೂ, ವಿಸ್ತಾರಕ್ಕಾಗಿಯೂ ವಿಶೇಷ ಪ್ರಯತ್ನಪಟ್ಟ ಹಾಗೆ ಕಾಣುತ್ತದೆ. ದಿಲ್ಲಿಯಲ್ಲಿ ಜನರು ಇರುವ ಹಾಗೆ ಮಾಡಿ, ದಿಲ್ಲಿಯ ಜನಸಂಖ್ಯೆಯನ್ನು ಬೆಳಿಸಿ, ಅಲ್ಲಿ ಭವ್ಯವಾದ ಇಮಾರತುಗಳನ್ನು ಕಟ್ಟಿಸಿದನು. ಅವುಗಳಲ್ಲಿ ಜುಮ್ಮಾಮಸೀದಿಯೇ ಮುಖ್ಯವಾದದ್ದು. ಈ ಕಟ್ಟಡವು ಈಗ್ಯೂ ಅಚ್ಚಳಿಯದೆ ನಿಂತು, ಆಗಿನ ಶಿಲ್ಪಿಗಳ ಜಾಣತನವನ್ನು ವ್ಯಕ್ತಪಡಿಸುತ್ತದೆ. ಔರಂಗಜೇಬನು ದಿಲ್ಲಿಯಲ್ಲಿ ಮಹತ್ವದ ಸುಧಾರಣೆಯನ್ನು ಮಾಡಿದ ಹಾಗೆ ತೋರುವದಿಲ್ಲ.

ಔರಂಗಜೇಬನ ತರುವಾಯ ಆಳಿದ ಮೊಗಲ ಅರಸರ ಕಾಲಕೀರ್ದಿಯಲ್ಲಿ, ಪರದೇಶದ ದಾಳಿಗಾರರೂ, ಮಹಾರಾಷ್ಟ್ರರೂ ದಿಲ್ಲಿಯ ಮೇಲೆ ದಾಳಿಯನ್ನಿಟ್ಟರು. ೧೭೩೯ರಲ್ಲಿ ನಾದಿರಶಹನು ದಿಲ್ಲಿಯನ್ನು ಹಸ್ತಗತ ಮಾಡಿಕೊಂಡು ಅಲ್ಲಿ ಭಯಂಕರ ಕೊಲೆಸುಲಿಗೆಗಳನ್ನು ನಡೆಯಿಸಿ, ಲೂಟಿನಿಂದ ಬಂದ ಹಣವನ್ನೂ, ದಿಲ್ಲಿಯ ಮಯೂರಸಿಂಹಾಸನವನ್ನೂ ಸ್ವದೇಶಕ್ಕೆ ಒಯ್ದು ಸಂಗತಿಯು ಇತಿಹಾಸ ಪ್ರಸಿದ್ಧವದೆ. ಈ ಕಾಲಕ್ಕೆ ಮೊಗಲ ಬಾದಶಹರು ತೀರದುರ್ಬಲರಾಗುತ್ತ ನಡೆದಿದ್ದರು. ಆದ್ದರಿಂದಲೇ ಪರಚಕ್ರದ ದಾಳಿಗಾರರನ್ನು ಹಿಮ್ಮೆಟ್ಟಿಸುವದು ಅವರ ಕೈಯಿಂದಾಗಲಿಲ್ಲ. ಇದೇ ಸಮಯದಲ್ಲಿ, ಮಹಾರಾಷ್ಟ್ರರು ದಕ್ಷಿಣ ಹಿಂದುಸ್ಥಾನದಲ್ಲಿ ಪ್ರಬಲರಾಗ ಹತ್ತಿದ್ದರು. ಬಲ್ಲಾಳ ಬಾಜೀರಾಯನೆಂಬ ಪ್ರಬಲನಾದ ಪೇಶ್ವೆಯು ಮಹಾರಾಷ್ಟ್ರರಾಜ್ಯದ ಸೂತ್ರವನ್ನು ನಡೆಯಿಸುತ್ತಿದ್ದನು. ಅವನು ದಕ್ಷಿಣದಲ್ಲಿ ಎಲ್ಲ ಅರಸರನ್ನು ಸೋಲಿಸಿ ಅವರು ಕಪ್ಪವನ್ನು ಕೊಡುವ ಹಾಗೆ ಮಾಡಿದ್ದನು. ಮತ್ತು ಮಹಾರಾಷ್ಟ್ರ ಸರದಾರರೆ

ಲ್ಲರಲ್ಲಿಯೂ ಒಕ್ಕಟ್ಟನ್ನುಂಟು ಮಾಡಿದ್ದನು. ಹೀಗೆ ಸ್ವದೇಶದಲ್ಲಿ ವ್ಯವಸ್ಥೆಯನ್ನು ನೆಲೆಗೊಳಿಸಿ, ದಿಲ್ಲಿಯ ಬಾದಶಹರಿಂದ ಸನದನ್ನೊಂದನ್ನು ಇಸುಗೊಳ್ಳಲಿಕ್ಕೆ ಉತ್ತರ ಹಿಂದುಸ್ಥಾನಕ್ಕೆ ತೆಗಳಿದನು. ಬಾದಶಹನು ಕೊಟ್ಟ ಆಸನದಿನಿಂದ ಮಹಾರಾಷ್ಟ್ರರು ಮೊಗಲ ಸಾಮ್ರಾಜ್ಯದಲ್ಲಿ 'ಚೌಥ' 'ಸರದೇಶಮುಖಿ'ಗಳನ್ನು ಎತ್ತಲಿಕ್ಕೆ ಬಾಧ್ಯರಾದರು. ಮುಂದೆ ಮಹಾರಾಷ್ಟ್ರರು ದಿನ-ದಿನಕ್ಕೆ ಪ್ರಬಲರಾಗುತ್ತ ನಡೆದು, ಉತ್ತರದಲ್ಲಿಯೂ ಕೂಡ ಹೊಸ ಹೊಸ ಪ್ರದೇಶಗಳನ್ನು ಗೆಲ್ಲಹತ್ತಿದರು. ಈ ಪ್ರಾಬಲ್ಯವನ್ನು ನೋಡಿ, ಇವರು ದಿಲ್ಲೀಸಾಮ್ರಾಜ್ಯದ ಬಾದಶಹರಾಗುವರೋ ಏನೋ ಎಂಬಂತೆ ತೋರಹತ್ತಿತು. ಆದರೆ ದುರ್ದೈವದಿಂದ ಘಟಿಸಿದ ಅವರ ಪಾಣಿಪತ್ತದ ಸೋಲು, ಉತ್ತರ ಹಿಂದುಸ್ಥಾನದಲ್ಲಿಯ ಅವರ ವರ್ಚಸ್ಸನ್ನು ಕಡಿಮೆಮಾಡಲಿಕ್ಕೆ, ಕಾರಣವಾಯಿತು. ಆದರೂ, ಶೂರನೂ ರಾಜನೀತಿ ಕುಶಲನೂ ಆದ ಮಾಧವರಾಯನಂಥ ಪೇಶ್ವೆಯರ ಕಾಲಕೀರ್ದಿಯಲ್ಲಿ ಮಹಾರಾಷ್ಟ್ರರು ಕಳಕೊಂಡ ತಮ್ಮ ವರ್ಚಸ್ಸನ್ನು ಪುನಃ ಸಂಪಾದಿಸಿದರು. ಉತ್ತರದಲ್ಲಿ ಶಿಂದೆಯು ಮೊಗಲಬಾದಶಹರ ಮೇಲೆ ತನ್ನ ವರ್ಚಸ್ಸನ್ನು ಕೂಡಿಸಿ, ಅವರನ್ನು ಕೇವಲ ಸೂತ್ರಗೊಂಬೆಗಳಂತೆ ಮಾಡಿದನು. ರಾಜ್ಯಕಾರಭಾರವೆಲ್ಲ ಮೊಗಲಬಾದಶಹರ ಹೆಸರಿನಿಂದಲೇ ನಡೆಯುತ್ತಿದ್ದರೂ, ನಿಜವಾದ ಅಧಿಪತಿಗಳು ಮಹಾರಾಷ್ಟ್ರರೇ ಆಗಿದ್ದರು. ೧೭೦೩ನೇ ಇಸ್ವಿಯಲ್ಲಿ ಎಸಗಿದ ದಿಲ್ಲಿಯ ಕಡುಕಾಳಗದಲ್ಲಿ ಲಾರ್ಡ ಲೇಕನು ಸಿಂದೆಯನ್ನು ಸೋಲಿಸಿದಂದಿನಿಂದ, ಮಹಾರಾಷ್ಟ್ರರ ವರ್ಚಸ್ಸು ಉತ್ತರ ಹಿಂದುಸ್ಥಾನದಲ್ಲಿ ಕಡಿಮೆಯಾಯಿತು. ದಿಲ್ಲಿಯ ಮೊಗಲಬಾದಶಹರು ೧೮೫೭ರವರೆಗೆ ನಾಮಶೇಷರಾಗಿ ಉಳಿದಿದ್ದರು. ಮುಂದೆ ೧೮೫೭ನೇ ಇಸ್ವಿಯಲ್ಲಿ ಆದ ಸಿವಾಯರ ಬಂಡಿನ ತರುವಾಯ, ಬ್ರಿಟಿಶ್‌ಸರಕಾರದವರು ಕಡೆಯ ಬಾದಶಹನನ್ನು ಹದ್ದುಪಾರ ಮಾಡಿಬಿಟ್ಟರು.

೧೮೦೩ರಲ್ಲಿ ದಿಲ್ಲಿಯು ಇಂಗ್ಲಿಷರವಶಕ್ಕೆ ಬಂದಂದಿನಿಂದ, ಆ ಪಟ್ಟಣದ ಮಹತ್ವವು ಕಡಿಮೆಯಾಗಹತ್ತಿತು. ಯಾಕಂದರೆ, ಈಸ್ಟಇಂಡಿಯಾ ಕಂಪನಿಯವರು ವ್ಯಾಪಾರದ ಅನುಕೂಲತೆಗಾಗಿ, ಬಂದರ ಸ್ಥಳಗಳನ್ನೇ ರಾಜಧಾನಿಗಳನ್ನಾಗಿ ಮಾಡಿಕೊಂಡಿದ್ದರು. ಅವೆಲ್ಲವುಗಳಲ್ಲಿ, ಕಲಕತ್ತಾಪಟ್ಟಣವು ಅವರ ಮುಖ್ಯರಾಜಧಾನಿಯಾಗಿತ್ತು.

೧೭೫೭ ನೇ ಇಸ್ವಿಯಲ್ಲಿ ಹಿಂದುಸ್ಥಾನದ ರಾಜ್ಯಕಾರಭಾರವು ಈಸ್ಟಇಂಡಿಯಾ ಕಂಪನಿಯವರಿಂದ ರಾಣಿಯವರ ಕೈಸೇರಿದ ಮೇಲೆ ರಾಣಿಯವರು 'ಹಿಂದುಸ್ಥಾನದ ಚಕ್ರವರ್ತಿನಿ'ಗಳೆಂಬ ಬಿರುದನ್ನು ಧರಿಸುವ ಸಮಾರಂಭವನ್ನು ಹಿಂದುಸ್ಥಾನದಲ್ಲಿ ನೆರವೇರಿಸಬೇಕೆಂದು ಗೊತ್ತಾದಂತೆ, ಆಗಿದ್ದ ವ್ಹಾಯಿಸರಾಯರಾದ ಲಾರ್ಡ ಲಿಟನ್ ಸಾಹೇಬರು ಅದನ್ನು ಎಲ್ಲಿ ನೆರೆಸಬೇಕೆಂದು ವಿಚಾರದಲ್ಲಿ ಮಗ್ನರಾದರು. ಆಗ

ಪ್ರಾಚೀನ ಸಾಮ್ರಾಜ್ಯಗಳ ರಾಜಧಾನಿಯಾದ ದಿಲ್ಲೀ ಪಟ್ಟಣದಲ್ಲಿಯೇ ನೆರೆಯಿಸುವದು ಪ್ರಶಸ್ತವೆಂದು ಅವರಿಗೆ ಕಂಡುಬಂತು. ಆದದರಿಂದ, ಅಲ್ಲಿಗೆ ಸಂಸ್ಥಾನಿಕರನ್ನೂ ಪ್ರಜೆಗಳ ಮುಖ್ಯ ಮುಖ್ಯ ಪ್ರತಿನಿಧಿಗಳನ್ನೂ ಕರೆಯಿಸಿ, ರಾಣಿಯವರು 'ಚಕ್ರವರ್ತಿನಿ'ಗಳೆಂಬ ಬಿರುದನ್ನು ಧರಿಸಿದ ಬಗ್ಗೆ ಜಾಹೀರಪತ್ರಿಕೆಯನ್ನು ಪ್ರಕಟಮಾಡಿದರು. ಈ ಸಮಾರಂಭವು ಬಹು ವೈಭವದಿಂದಲೂ, ವಿಜೃಂಭಣೆಯಿಂದಲೂ ನೆರವೇರಿತು. ಮುಂದೆ ಮಹಾರಾಣಿಯವರ ನಿಧನವಾದ ಮೇಲೆ, ಎಡ್ವರ್ಡ ಬಾದಶಹರ ರಾಜ್ಯಾರೋಹಣ ಸಮಾರಂಭವನ್ನು ನೆರವೇರಿಸುವ ಪ್ರಸಂಗ ಬಂದಾಗ, ಲಾರ್ಡ ಕರ್ಝನ್ ಸಾಹೇಬರು ಪುನ: ದಿಲ್ಲಿಯಲ್ಲಿಯೇ ಆ ಸಮಾರಂಭವನ್ನು ನೆರವೇರಿಸಬೇಕೆಂದು ಗೊತ್ತುಮಾಡಿದರು. ಈ ಸಮಾರಂಭದ ಪೂರ್ವಸಿದ್ಧತೆಯೆಲ್ಲ, ಮಹತ್ವಾಕಾಂಕ್ಷಿಗಳೂ, ಉತ್ಸವಪ್ರಿಯರೂ ಆದ ಲಾರ್ಡ ಕರ್ಝನ್ ಸಾಹೇಬರ ಪ್ರತ್ಯಕ್ಷಾವಲೋಕನದಿಂದಲೇ ಆದದ್ದರಿಂದ, ಈ ಸಮಾರಂಭವಾದರೂ ಚಿರಸ್ಮರಣೀಯವಾಯಿತು. ೧೯೧೦ ರಲ್ಲಿ ಎಡ್ವರ್ಡ ಬಾದಶಹರು ಪರಲೋಕವಾಸಿಗಳಾದ ಮೇಲೆ, ಅವರ ತರುವಾಯ ಜಾರ್ಜ ಪ್ರಭುಗಳ ರಾಜ್ಯಾರೋಹಣ ಸಮಾರಂಭವು ಇಂಗ್ಲಂಡ ದೇಶದಲ್ಲಿ ೧೯೧೧ ನೇ ಇಸ್ವಿಯ ಜೂನ ತಿಂಗಳಲ್ಲಿ ನೆರವೇರಿತು. ಅವರು 'ಹಿಂದುಸ್ಥಾನದ ಚಕ್ರವರ್ತಿ' ಗಳೆಂಬ ಬಿರುದನ್ನು ಧರಿಸುವ ಹಾಗು ದರಬಾರವನ್ನು ಕೂಡಿಸುವ ಸಮಾರಂಭವು ದಿಲ್ಲಿಯಲ್ಲಿಯೇ ನೆರವೇರಿಸಲ್ಪಡಬೇಕೆಂದು ಗೊತ್ತಾಯಿತು. ಆದರೆ ವಿಶೇಷ ಆನಂದದ ಸಂಗತಿಯೇನಂದರೆ--ಈ ಸಾರೆ ಜಾರ್ಜ ಬಾದಶಹರವರು ತಾವೇ ದಯಪಾಲಿಸಿ ಹಿಂದೂ ಪ್ರಜೆಗಳಿಗೆಲ್ಲ ಈ ಆನಂದದ ಸಂಗತಿಯನ್ನು ಪ್ರಕಟಮಾಡಬೇಕೆಂದು ಗೊತ್ತಾಯಿತು. ಅದಗಂತೆ ಅವರು ಹಿಂದುಸ್ಥಾನಕ್ಕೆ ಆಗಮನ ಮಾಡಿ, ಹಿಂದೂನಿವಾಸಿಗಳಿಗೆ ಅನೇಕ ಅಮೂಲ್ಯವಾದ ವರಗಳನ್ನು ದಯಪಾಲಿಸಿ, ಹಿಂದೂ ಸಾಮ್ರಾಜ್ಯದ ತುಂಬ ಆನಂದದ ಮಳೆಗರೆದಂತೆ ಮಾಡಿಬಿಟ್ಟರು.

H.J. Deshpande B. A.

ರಾಮಾನುಜಾಚಾರ್ಯರು.

(೪ ನೇ ಸಂಚಿಕೆಯಿಂದ ಮುಂದೆ ಸಾಗಿದ್ದು.)

ರಾಮಾನುಜರ ಕಾಲದಲ್ಲಿ ಬಹುದೇವತಾರಾಧನೆಯು ಹೆಚ್ಚಾಗಿ ಇತ್ತು. ಈಶ್ವರನು ಒಬ್ಬನೇ ಎನ್ನುವ ಮಾತು ಬದಲಾಯಿತು. ಕೆಲವರು ಶಕ್ತಿಯನ್ನೂ, ಕೆಲವರು ಸೂರ್ಯನನ್ನೂ, ಮತ್ತೆ ಕೆಲವರು ಗಣಪತಿಯನ್ನೂ, ಇನ್ನೂ ಕೆಲವರು ಪರಮೇಶ್ವರನನ್ನೂ, ಮತ್ತು ಕೆಲವರು ವಿಷ್ಣುವನ್ನೂ ಆರಾಧಿಸುತ್ತಿದ್ದರು. ಇದರಿಂದ ಈಶ್ವರ

ತತ್ವವು ತಿಳಿಯದೆ ಬಹುಮತವು ಏರ್ಪಟ್ಟಿತು. ಶ್ರುತಿವಾಕ್ಯಸಮನ್ವಯವನ್ನು ಸರಿಯಾಗಿ ಮಾಡಿಕೊಳ್ಳಲಾರದೆ ಹೋದದ್ದು ಈ ದುಸ್ಥಿತಿಗೆ ಕಾರಣವು. ಪರತತ್ವವನ್ನು ವರ್ಣಿಸುವದರಲ್ಲಿ ವೇದದಿಂದ ಈ ಮೇಲಿನ ಶಬ್ದವಲ್ಲದೆ ಇಂದ್ರಾದಿ ಶಬ್ದಗಳು ವಾಡಿಕೆಯಲ್ಲಿರುವುವು. ಆದರೆ ಅವೆಲ್ಲವೂ ಈಶ್ವರನ ಒಂದೊಂದು ಗುಣವನ್ನು ವರ್ಣಿಸಿರುವುವು. ಹಾಗಾದರೆ, ಈಶ್ವರನ ಸಮಸ್ತ ಗುಣಗಳನ್ನು ವರ್ಣಿಸುವ ಒಂದು ಪದವಾದರೂ ಇರುವುದೆ? ಎಂದು ವಿಚಾರಿಸಿದರೆ ಅಂಥ ಶಬ್ದವು ನಾರಾಯಣ ಶಬ್ದವೆಂದು ಮಹೋಪನಿಷತ್ತು, ನಾರಾಯಣೋಪನಿಷತ್ತು, ಬಾಲೋಪನಿಷತ್ತು, ಬೃಹದಾರಣ್ಯಕೋಪನಿಷತ್ತು, ತೈತ್ತಿರಿಯೋಪನಿಷತ್ತು, ಋಗ್ವೇದ ಯಜುರ್ವೇದಗಳು, ಪುರುಷಸೂಕ್ತವೂ ಉದ್ಘೋಷಿಸುತ್ತಿರುವುವು. "ಏಕೋಹವೈನಾರಾಯಣ ಆಸೀತ್ ನ ಬ್ರಹ್ಮಾನೇಶಾನ:" ಇತ್ಯಾದಿ ಶ್ರುತಿಗಳಿಂದ ನಾರಾಯಣಪರತತ್ವವು ನಿಷೇಧ ಪೂರ್ವಕವಾಗಿ ಸ್ಥಾಪಿಸಲ್ಪಡುತ್ತಿರುವುದು. ಮತ್ತು ನಾರಾಯಣಾದ್ಬ್ರಹ್ಮಾಜಾಯತೆ, ನಾರಾಯಣಾದ್ರುದ್ರೋ ಜಾಯತೆ" ಇತ್ಯಾದಿ ಶ್ರುತಿಗಳಿಂದ ಬ್ರಹ್ಮ ರುದ್ರಾದಿ ಸಮಸ್ತ ದೇವತೆಗಳೂ ನಾರಾಯಣನಿಂದಲೇ ಉದ್ಭವಿಸಿದಂತೆ ಹೇಳಿರುವ ಶ್ರುತಿಯುಲ್ಲಿಯೂ ನಾರಾಯಣನಿಗೆ ಸೃಷ್ಟಿಕರ್ತನು ಮತ್ತೊಬ್ಬನು ಇರುವನೆಂದು ಹೇಳದೆ ಇರುವದರಿಂದ, ಪರತತ್ವ ಒಂದೇ ಎಂದೂ, ಆ ಪರಮ ಪುರುಷನು ನಾರಾಯಣ ಶಬ್ದವಾಚ್ಯನೆಂದೂ ತಿಳಿಯುತ್ತಿರುವುದು.

ಇಷ್ಟೇ ಅಲ್ಲ "ಪರಮ ಪುರುಷನು ಶುದ್ಧ ಸತ್ವಪ್ರಧಾನಕ್ಕೆ ತತ್ವವು. ಅತನ ಸಾತ್ವಿಕಾವತಾರವು. ವಿಷ್ಣುವು ರಾಜಸಾವತಾರವು ಬ್ರಹ್ಮನು. ತಾಮಸಾವತಾರವು ಪರಮೇಶ್ವರನು (ಮಹೇಶ್ವರನು). ಭಗವಂತನ ಸಾತ್ವಿಕಾವತಾರವಾದ್ದರಿಂದ ಮುಮುಕ್ಷುಗಳಿಗೆಲ್ಲ ಉಪಾಸ್ಯನಾದ ದೈವವು ವಿಷ್ಣುವು ಮಿಕ್ಕ ಇಬ್ಬರೂ ರಾಜಸತಾಮಸಗಳಿಗೆ ಪೂಜ್ಯರು. ಅಲ್ಪಫಲದಾತರು. ಈ ಸಾತ್ವಿಕ ರಾಜಸ ತಾಮಸ ವಿಭಾಗವು ವೇದೋಪಬೃಹಣ ಮೊದಲಾದ ಪಾದ್ಮಸ್ಕಂದಾದಿ ಸಮಸ್ತ ಸಾತ್ವಿಕಪುರಾಣಾಂತರ್ಗತವಾದ ಉಮಾಮಹೇಶ್ವರ ಸಂವಾದದಲ್ಲಿ ಕಂಡುಬರುತ್ತಿರುವುದು. ಮತ್ತು "ತ್ರೈಗುಣ್ಯವಿಷಯಾವೇದಾ:" ಎಂದು ಗೀತಾವಾಕ್ಯವಿರುವುದು. ಆದುದರಿಂದಲೇ ಶ್ರುತಿ, ಸ್ಮೃತಿ, ಇತಿಹಾಸ ಪುರಾಣಗಳಲ್ಲಿಯೂ, ಸಾತ್ವಿಕ ದೈವವಾಗಿ ಪರಾತ್ಪರನಾದ ನಾರಾಯಣನ ವಿಷಯವಾಗಿ ಪ್ರಸಂಶೆಯನ್ನು ಮಾಡುತ್ತಿರುವುದೇ ಮುಮುಕ್ಷುಗಳಿಗೆ ಉಪಾದೇಯವೆಂದು ಶಾಸಿಸಿದರು.

ಈ ಮೇಲೆ ಹೇಳಿದ ಸಂಗತಿಗಳಿಂದ ನನಗೆ ವಿಷ್ಣುವು ಹೊರತು ಇತರ ದೇವರಲ್ಲಿ ದ್ವೇಷವೆಂದು ಊಹಿಸಬಾರದು. ಈಶ್ವರು ಒಬ್ಬನೇ? ಹಲವರೇ? ಒಬ್ಬನೇ ಆದ ಬಳಿಕ ಆತನು ಶ್ರುತಿಗಳೆಂಬ ಶಬ್ದದಿಂದ ವಾಚ್ಯನಾಗುತ್ತಿದ್ದಾನೆಯೇ ಎಂಬ

ಪ್ರಶ್ನೆಯನ್ನು ಹಾಕಿದರೆ, ನಾರಾಯಣ ಶಬ್ದವಾಚ್ಯವು ಪರತತ್ವವೆಂದು ಏರ್ಪಡುತ್ತಿರುವುದು. ರಾಮಾನುಜರ ಸಿದ್ಧಾಂತವು ಇದೇಯೆ. ಇದರ ಮೂಲಗಳನ್ನೇ ಏಕೇಶ್ವರೋಪಾಸವಾಗಿ ರಾಮಾನುಜರು ಉದ್ಧರಿಸಿದರೆನ್ನುವುದಕ್ಕೆ ಸಂಶಯವಿಲ್ಲ. ಇಷ್ಟೇ ಅಲ್ಲ. ರಾಮಾನುಜರ ಕಾಲದಲ್ಲಿ ಹಠಾದಿ ಯೋಗಗಳಿಂದ ಮುಕ್ತಿ ಬರುವದೆಂದು ವಿಸ್ವಾಸವಿತ್ತು. ಇದು ಮುಕ್ತಿಸಾಧನವಲ್ಲವೆಂದು ಬ್ರಹ್ಮಸೂತ್ರದಲ್ಲಿ ವ್ಯಾಸಮಹರ್ಷಿಯು ಹೇಳಿಯೇ ಇದ್ದಾನೆ. ಆದರೆ ಜನರು ಮಾತ್ರ ಅದನ್ನು ಬಿಡಲಿಲ್ಲ. ಆದಕ್ಕೆ ರಾಮಾನುಜರು ಮುಕ್ತಿಸಾಧನಕ್ಕೆ ಭಕ್ತಿಗಿಂತ ಬೇರೆ ಮಾರ್ಗ ಇಲ್ಲವೆಂದು ಬೋಧಿಸಿದರು. ಅಷ್ಟಾಕ್ಷರಿಯ ಮಂತ್ರಗಳಲ್ಲಿ ಈ ಸಿದ್ಧಾಂತವು ತುಂಬಿರುವುದು. ಆದುದರಿಂದಲೇ ನಾರಾಯಣನಿಗಿಂತ ಅನ್ಯ ದೈವವೂ, ಭಕ್ತಿಗಿಂತ ಇತರ ಉಪಾಯವೂ, ಅಷ್ಟಾಕ್ಷರಿಗಿಂತ ಇತರ ಮಂತ್ರವೂ ಮುಮುಕ್ಷುಗಳಿಗೆ ಉಪಾದೇಯವಲ್ಲವೆಂದು ಅವರು ಖಂಡಿತವಾಗಿ ಶಾಸನ ಮಾಡಿದರು.

ರಾಮಾನುಜರು ಚರಮದಶೆಯಲ್ಲಿ ಉಪದೇಶಿಸಿದ ಎಂಭತ್ತೈರಡು ವಾಕ್ಯಗಳಲ್ಲಿ, ಭಗವದ್ಭಕ್ತರದಲ್ಲಿ ಜಾತಿವಿಮರ್ಶೆ ಮಾಡುವುದು ಮಹಾಪಾಪವೆಂದೂ ಇಂಥವನು ಶಾಶ್ವತನರಕದ ಪಾಲಾಗುವನೆಂದೂ, ಹೇಳಿದರು. ರಾಮಾನುಜರಕಾಲದಲ್ಲಿ ಚಿದಚಿದೀಶ್ವರ ಸ್ವರೂಪನನ್ನು ನಿರೂಪಿಸಿರುವ ಅಷ್ಟಾಕ್ಷರೀ ಮಂತ್ರವನ್ನು ಬ್ರಾಹ್ಮಣರಿಗೆ ಹೊರತು ಅಂಧಕಾರದಲ್ಲಿ ಮುಳುಗಿ ಇದ್ದ ದ್ವಿಜೇತರರಾದ ಶೂದ್ರ, ಚಂಡಾಲಾದಿಗಳಿಗೆ ಉಪದೇಶ ಮಾಡುವಂತಾಯಿತು. ದ್ವಿಜೇತರರು ಯಾರೂ ತತ್ವಜ್ಞಾನವನ್ನು ಹೊಂದಲರ್ಹರಲ್ಲವೆಂದು ಆಗಿನ ಬ್ರಾಹ್ಮಣರ ಮತವು. ವಿವಿಧ ಜಾತಿಗಳಲ್ಲಿ ಹುಟ್ಟಿ ಭಾಗವತ ಶಾಸ್ತ್ರಗಳಿಗೆಲ್ಲ ಮೂಲ ಪುರುಷರಾಗಿದ್ದ ಆಳ್ವಾರುಗಳ ಶ್ರೀಸೂಕ್ತಿಸುಧಾಪ್ರವಾಹವನ್ನು ಅವಗಾಹನೆ ಮಾಡುತ್ತಿದ್ದ ನಮ್ಮ ರಾಮಾನುಜರಿಗೆ ಮಾತ್ರ ತತ್ವೋಪದೇಶವನ್ನು ಮಾಡುವದಕ್ಕಾಗಲಿ, ಜಾತಿವಿಮರ್ಶೆಯನ್ನು ಮಾಡುವದಕ್ಕಾಗಲಿ, ಕ್ರೂರವಾಗಿ ಕಂಡಿತು. ಆದುದರಿಂದಲೇ ಗುಪ್ತವಾಗಿ ಇಡತಕ್ಕುದೆಂದು ಗುರುವಿನಿಂದ ಆಜ್ಞಾಪಿಸಲ್ಪಟ್ಟಿದ್ದರೂ ಭಗವನ್ಮಂತ್ರವನ್ನು ಎಲ್ಲರಿಗೂ ಜಾತಿವಿಮರ್ಶೆ ಇಲ್ಲದೆ ಹೇಳಿದರು. ಆ ವಾರ್ತೆಯನ್ನು ಕೇಳಿದ ಗುರುವು ಆಚಾರೋಲ್ಲಂಘನಕ್ಕೆ ರಾಮಾನುಜರು ನರಕದ ಪಾಲಾಗುವರೆಂದು ಮೂದಲಿಸಿದನು. ಅದಕ್ಕೆ ರಾಮಾನುಜರು ಸ್ವಾಮೀ! ಈ ಮಂತ್ರಾರ್ಥವನ್ನು ತಿಳಿದರೆ ಮೋಕ್ಷವಲ್ಲವೆ ಫಲವು! ನಾನು ಹರಡಿದ ಮಂತ್ರದಿಂದ ಕೋಟ್ಯಾಂತರ ಜನರು ಮೋಕ್ಷಪದವಿಯನ್ನು ಅನುಭವಿಸುವುದನ್ನು ನೋಡುವ ಭಾಗ್ಯವು ಲಭಿಸಿದರೆ ಸಾಕು. ಅವರ ಶುಭಕ್ಕೆ ನಾನು ನರಕವನ್ನು ಅನುಭವಿಸಬೇಕಾಗಿ ಬಂದರೂ ಅನುಭವಿಸುವೆನು. ಎಂದು ಉತ್ತರವಿತ್ತರು. ಆಗ ಆಚಾರ್ಯನು ರಾಮಾನುಜರ ಮಹೌದಾರ್ಯಕ್ಕೂ, ಜೀವದಯಾಪರತೆಗೂ ಶ್ಲಾಘಿಸಿ, ತಲೆದೂಗುತ್ತಾ, ಜಾತಿವಿಮರ್ಶೆ ಇಲ್ಲದೆ ಸಮಸ್ತ

ಜನರಿಗೂ ಪಕಲೋಪನಿಷತ್ಸಾರವಾದ ಅಷ್ಟಾಕ್ಷರ ಮಂತ್ರವನ್ನು ಉಪದೇಶಿಸುತ್ತಾ ಬಂದದ್ದರಿಂದ ಅವರು ಸ್ಥಾಪಿಸಿದ ಸಿದ್ಧಾಂತಕ್ಕೆ 'ರಾಮಾನುಜದರ್ಶನ'ವೆಂದು ಹೆಸರಿಟ್ಟನು. ಆದದರಿಂದಲೇ ಕಡೇ ಜಾತಿ ಕೀಳುಜಾತಿಯು ಮಾದಿಗರೂ ಕೂಡ ದಾಸರೆಂಬ ಹೆಸರನ್ನು ಹೊಂದಿರುವ ವೈಷ್ಣವರು ಈಗಲೂ ಇರುವರು. ಉತ್ತಮ ಜಾತಿಯಲ್ಲಿ ಹುಟ್ಟಿದ ಬ್ರಾಹ್ಮಣರಿಗೂ, ಕೀಳು ಜಾತಿಯವರಾದ ಚಂಡಾಲರಿಗೂ ಶ್ರೀ ವೈಷ್ಣವ ಸಿದ್ಧಾಂತ ಪ್ರಕಾರ ಉಪದೇಶಿಸಲ್ಪಡುವ ಮಂತ್ರಾರ್ಥವು ಒಂದೇ ಭಗವದ್ಭಕ್ತರಲ್ಲಿ ವರ್ಣಭೇದವನ್ನು ಮಾಡಬಾರದೆಂದು ರಾಮಾನುಜರ ಅಭಿಪ್ರಾಯವು. ಇದಕ್ಕೆ ನಿದರ್ಶನವಾಗಿ ರಾಮಾನುಜರು ಭಗವದಾರಾಧನೆಗೆ ಪೂರ್ವ ಸ್ನಾನಮಾಡಿ, ಪವಿತ್ರವಾಗಿ ಇರುವುದರಿಂದ ವರ್ಣದಿಂದ ಶೂದ್ರನಾದರೂ ಜ್ಞಾನದಿಂದ ಭಾಗವತಶಿಖಾಮಣಿಯಾದ ಧನುರ್ದಾಸನಿಂದ ಧೌತವಸ್ತ್ರಗಳನ್ನು ಒಗೆಯಿಸಿ ಧರಿಸುತ್ತಿದ್ದರು. ಮತ್ತು ಮೇಲುಕೋಟೆಯಲ್ಲಿರುವ ಚಂಡಾಲರು ವರುಷಕ್ಕೆ ಒಂದು ಸಾರಿ ದೇವಾಲಯಕ್ಕೆ ನಿರಾತಂಕವಾಗಿ ಪ್ರವೇಶಿಸಬಹುದೆಂದು ಆಜ್ಞೆಯನ್ನು ಇತ್ತರು. ಆ ಪದ್ಧತಿಯು ಈಗಲೂ ಆಚರಣೆಯಲ್ಲಿದೆ.

ವಿಗ್ರಹಾರಾಧನೆಯನ್ನು ಮಾಡಬಹುದೆ? ಬಾರದೆ? ಎಂಬೀ ವಿಷಯವನ್ನು ಚರ್ಚಿಸುವುದಕ್ಕೆ ಈ ಚಿಕ್ಕ ಉಪನ್ಯಾಸದಲ್ಲಿ ಅವಕಾಶವಿಲ್ಲ. "ಅಂತರ್ಬಹಿಶ್ಚತತ್ಸರ್ವಂ ವ್ಯಾಪ್ಯನಾರಾಯಣಸ್ಥಿತಃ" ಎಂಬಂತೆ ಈಶ್ವರನು ಸಮಸ್ತ ಪದಾರ್ಥಗಳಲ್ಲಿಯೂ ಅಂತರ್ಯಾಮಿಯಾಗಿರುವುದರಿಂದ ವಿಗ್ರಹಾರಾಧನೆ ಮಾಡಬಹುದು ಎಂಬುದೇ ರಾಮಾನುಜರ ಮತವು ಈ ವಿಷಯವು ಹೇಗಾದರೂ ಇರಲಿ. ರಾಮಾನುಜರು ದೇವಾಲಯಗಳನ್ನೇ ತನ್ನ ಮತಪ್ರವರ್ತನೆಗೆ ಸಾಧನವಾಗಿ ಉಪಯೋಗಿಸಿಕೊಂಡರು. ಈಶ್ವರನ ಸನ್ನಿಧಿಯಾಗಿರುವುದರಿಂದ ದೇವಾಲಯಗಳಲ್ಲಿ ಚತುರ್ವರ್ಣವೂ ಕಲೆತು ಒಂದೇ ಪಂಕ್ತಿಯಲ್ಲಿ ತೀರ್ಥಪ್ರಸಾದ ಸ್ವೀಕಾರವನ್ನು ನಿರಾಕ್ಷೇಪವಾಗಿ ಮಾಡಬಹುದೆಂದು ವಿಧಿಸಿದರು. ಇದರಿಂದ ಜಾತಿ ವೈಷಮ್ಯಗಳು ನಶಿಸಿ, ಸಮದೃಷ್ಟಿ ಬೆಳೆಯುವುದಕ್ಕೂ, ಭಗವದ್ಭಕ್ತರಲ್ಲಿ ಸ್ನೇಹಭಾವವು ಉದಯಿಸುವುದಕ್ಕೂ ಉದ್ದೀಪಿಸಲ್ಪಟ್ಟಿತು. ಮತ್ತು ಎಲ್ಲೆಲ್ಲಿಯೂ ಪ್ರತಿ ದೇವಾಲಯಗಳಲ್ಲಿಯೂ ಅಧ್ಯಯನೋತ್ಸವವನ್ನು ಮಾಡುವ ಏರ್ಪಾಡನ್ನು ಮಾಡಿದರು. ಅಲ್ಲಿ ಚತುರ್ವೇದಗಳೂ, ಷಟ್ಶಾಸ್ತ್ರಗಳೂ, ಶ್ರೀ ಭಾಷ್ಯಾದಿ ಪ್ರಸ್ಥಾನತ್ರಯವೂ, ಶ್ರೀ ರಾಮಾಯಣ ಭಾರತ ಭಾಗವತಾದಿ ಸಮಸ್ತ ಸಾತ್ವಿಕ ಪುರಾಣಗಳೂ, ಇನ್ನೇ ಮುಂತಾದುವನ್ನು ಚೆನ್ನಾಗಿ ಅಭ್ಯಾಸ ಮಾಡಿದ ವಿಶಿಷ್ಟಾದ್ವೈತಿಕ ಪಂಡಿತರು ಉತ್ಸವಕ್ಕೆ ಸಮಾವೇಶವಾದ ಪ್ರಜೆಗಳಿಗೆ ಬೋಧಿಸಬೇಕೆಂದು ರಾಮಾನುಜರು ಶಾಸನಮಾಡಿದರು. ಇಷ್ಟೇ ಅಲ್ಲದೆ ರಾಮಾನುಜ ಪೀಠಕ್ಕೆ ಸಂಬಂಧಿಸಿ, ನಿನ್ನೆಯವರೆಗೆ ಪ್ರಸಿದ್ಧವಾಗಿರುವ ಅಷ್ಟದಿಗ್ಗಜಗಳನ್ನೂ, ಚತುಸ್ಪ್ರತಿ ಸಿಂಹಾಸನಗಳನ್ನೂ, ಸಿದ್ಧಾಂತವ್ಯಾಪನೆಗೂ ರಾಮಾನುಜರು ನಿಯ-

ಮಿಸಿದರು. ಅದರೆ ಈ ದೇವಾಲಯಗಳಾಗಲಿ, ಈ ಸಿಂಹಾಸನಸ್ಥರಾದ ಆಚಾರ್ಯ ಪುರುಷರಾಗಲಿ, ರಾಮಾನುಜರ ಶಾದ್ದೇಶವನ್ನು ನೆರವೇರಿಸುತ್ತಿರುವಂತೆ ತೋದದು.

ದ್ರವಿಡದೇಶದಲ್ಲಿ ವಿವಿಧಕಾಲಗಳಲ್ಲಿ, ವಿವಿಧಜಾತಿಗಳಲ್ಲಿ ಜನಿಸಿದ ಭಗವದ್ಭಕ್ತರು ತಮಗಿರುವ ಭಗವದನುಭವವನ್ನು ಅರವ (Tamil) ಭಾಷೆಯಲ್ಲಿ ಪದ್ಯ ಗದ್ಯಾತ್ಮಕವಾಗಿ ಹೇಳಿರುವರು. ಇವುಗಳನ್ನು ಪರಿಶೀಲಿಸಿದರೆ ಉಪನಿಷದರ್ಥವೇ ಬೋಧಿಸುತ್ತಿರುವುದು. ವೇದವು ಅಪೌರುಷೇಯವೆಂದೂ, ಪರಮಪ್ರಮಾಣವೆಂದೂ ನಮ್ಮ ವರಸಂಬಿಕೆ. ವೇದಾರ್ಥವು ಅನ್ಯ ಭಾಷೆಯಲ್ಲಿ ಹೇಳಿದ್ದರೆ ಅಷ್ಟು ಗೌರವವನ್ನು ತೋರಿಸದು. ವೇದದಲ್ಲಿದ್ದರೂ, ಮತ್ತಾವ ಗ್ರಂಥದಲ್ಲಿ ಇದ್ದರೂ ಭಗವದ್ವಿಷಯವು ಏಕರೀತಿ ಸಮಾನ ಗೌರವವನ್ನು ಹೊಂದುವುದೆಂದು ರಾಮಾನುಜರ ಅಭಿಪ್ರಾಯವು. ಅದು ಕಾರಣ ಭಗವದ್ವಿಷಯ ಶಾಸ್ತ್ರವಾದ ದ್ರವಿಡ ಪ್ರಬಂಧಗಳಿಗೆ ವೇದ ನಾಮಧೇಯವನ್ನು ರಾಮಾನುಜರ ಪೂರ್ವಾಚಾರ್ಯರು ಹೇಳಿರುವರು. ಈಗಲೂ ಉಭಯವೇದಾಂತ ಪ್ರವರ್ತಕರೆಂಬ ಬಿರುದನ್ನು ಶ್ರೀ ವೈಷ್ಣವರುಧರಿಸಿ ಇದ್ದಾರೆ.

ಮತ್ತು ರಾಮಾನುಜರು ಸ್ತ್ರೀಯರ ದುಸ್ಥಿತಿಯನ್ನೂ ಕೂಡ ಸ್ವಲ್ಪ ಸುಧಾರಣೆ ಮಾಡಿದರು. ಸ್ತ್ರೀಯರಿಗೆ ಪರಪುರುಷನ ಸ್ಪರ್ಶವು ಕೂಡದಲ್ಲವೆ! ಸೋದರರೊಡನೆಯಾಗಲಿ, ತಂದೆಯೊಡನೆ ಆಗಲಿ ಒಂದೇ ಹಾಸಿಗೆಯಲ್ಲಿ ಕುಳಿತುಕೊಳ್ಳಕೂಡದೆಂದು ನಮ್ಮವರ ಅಭಿಪ್ರಾಯ. ಅಂಥಾದ್ದರಲ್ಲಿ ಉತ್ತಮಜಾತಿ ಸ್ತ್ರೀಯರಿಗೆ ಗಂಡನು ಸತ್ತು ಹೋದ ಮಾತ್ರದಿಂದಲೇ ಉತ್ತಮಾಂಗವನ್ನು ಕೀಳು ಜಾತಿಯವನಾದ ಹಜಾಮರವನ ಕೈಗೆ ಕೊಟ್ಟು, ವಪನವನ್ನು ಮಾಡಿಸಿಕೊಳ್ಳುವುದು ಸ್ತ್ರೀಜನರ ಪವಿತ್ರತ್ವಕ್ಕೆ ಕೇವಲ ವಿರೋಧವೆಂದು ತಿಳಿದು, ರಾಮಾನುಜರು ಅಂತಹ ಕೃತ್ಯಗಳನ್ನು ಕೂಡದೆಂದು ವಿಧಾಯಕ ಮಾಡಿದರು. ಇದಕ್ಕೆ ಪ್ರಬಲವಾದ ಧರ್ಮಶಾಸ್ತ್ರ ವಚನಗಳು ಇಲ್ಲದೆ ಹೋಗಿಲ್ಲ ಅದರೆ ಅವನ್ನು ಪ್ರವರ್ತನ ಮಾಡಿದವರು ಅವರಿಗೆ ಮುಂದಾಳುಗಳಾದರು. ಇದಲ್ಲದೆ ಸ್ತ್ರೀಯರೂ ಭಕ್ತಿಯೋಗದಿಂದ ಮೋಕ್ಷಹೊಂದಲು ಅರ್ಹರೆಂದು ಅವರ ಅಭಿಮತವು. ಅಂಡಾಳೆಂಬವಳು ಒಬ್ಬ ಭಕ್ತಳು. ಈಕೆಯು ಈ ಹೊತ್ತಿನವರೆಗೂ ಶ್ರೀ ವೈಷ್ಣವರಿಂದ ಪೂಜಿಸಲ್ಪಡುತ್ತಿರುವಳು.

ಈ ಮೇಲೆ ಹೇಳಿದ ವಿಷಯಗಳನ್ನು ನಿಷ್ಪಕ್ಷಪಾತದಿಂದ ವಿಚಾರಿಸಿದರೆ, ರಾಮಾನುಜಾಚಾರ್ಯರು ಸಾಂಪ್ರದಾಯಿಕ ವಿಷಯಗಳಲ್ಲಿಯೂ, ಮತವಿಷಯಗಳಲ್ಲಿಯೂ ಅಧುನಿಕ ಕಾಲದಲ್ಲಿ ಪ್ರಥಮ ಸಂಸ್ಕರ್ತರೆಂದು ಒಪ್ಪುವ ಹೊರತೂ ತೀರದು.

ಸವನಾಗರಿಕರಾದ ಏಕೇಶ್ವರೋಪಾಸಕರೆಲ್ಲರಿಗೂ ರಾಮಾನುಜರ ಸಿದ್ಧಾಂತವು ರುಚಿಸುವುದೆಂಬ ಸಂಬಿಕೆಯಿಂದ ಈ ಲೇಖನವನ್ನು ಬರೆದಿರುವೆನು. ಪ್ರಮಾಣಸಹಿತವಾಗಿ ಬರೆಯುವುದಕ್ಕೆ ಇದು ಚಿಕ್ಕ ಲೇಖವಿರುವುದರಿಂದ ಇಲ್ಲಿಗೆ ನಿರಮಿಸಿರುವೆನು.

'ಇದಕ್ಕಿಂತಲೂ ಹೆಚ್ಚಿನ ಸುಖವು ಸ್ವರ್ಗದಲ್ಲಿರುವದುಂಟೇ?'

ಭಾರತಹುಣ್ಣಿವೆಯು. ಸುಮಾರು ಅರುತಾಸು ರಾತ್ರಿಯಾಗಿದೆ. ಹಿಟ್ಟು ಚಲ್ಲಿದ ಹಾಗೆ ಬೆಳದಿಂಗಳು ಬಿದ್ದಿದೆ. ಜನರು ಗಾಢನಿದ್ರೆಯ ಅತ್ಯಂತಸುಖವನ್ನು ಸ್ವರ್ಗಸು ಖದಂತೆ ಅನುಭವಿಸುತ್ತಾರೆ. ಎಲ್ಲ ಕಡೆಗೂ ಶಾಂತತೆಯ ಸಾಮ್ರಾಜ್ಯವಾಗಿದೆ. ಇಂಥ ಸಮಯದಲ್ಲಿ ದೇಶಪಾಂಡೆ ಗುರುರಾಯರ ಮನೆಯ ಉಪ್ಪರಿಗೆಯ ಮೇಲೆ ೧೫-೧೬ ವರ್ಷದ ಒಬ್ಬ ಸುಸ್ವರೂಪ ತರುಣಸ್ತ್ರೀಯು ನಿದ್ದೆಬಾರದೆ ಹಾಸಿಗೆಯ ಮೇಲೆ ಹೊರಳಾಡಿ, ಬೇಸತ್ತು, ಚಟ್ಟನೆ ಎದ್ದು ಕುಳಿತಳು. ಯಾವದೋ ಒಂದು ದುರ್ಧರವಾದ ಚಿಂತೆಯು ಅವಳ ಅಂತಃಕರಣವನ್ನು ವ್ಯಾಪಿಸಿತ್ತು. ಅದರಿಂದ ಅವಳಿಗೆ ಕೂತರೂ ಸಮಾಧಾನವಾಗದೆ, ಅಲ್ಲಿಂದ ಎದ್ದು ಬಾಗಿಲವನ್ನು ತೆರೆದು, ಮುಂದಿರುವ ಛಾವಣಿಗೆ ಬಂದಳು. ಶುಭ್ರವಾದ ಬೆಳದಿಂಗಳಿಂದ ಅವಳಿಗೆ ಸಮಾಧಾನವಾಗಲಿಲ್ಲ. ತಂಪಾದ ಮಂದಮಾರುತನಿಂದ ಅವಳ ಅಂತರ್ವಾಲೆಯು ಹೆಚ್ಚಾಯಿತೋ ಏನೋ, ಪುನಃ ಅಲ್ಲಿಂದ ಒಳಗೆ ಬಂದು, ಬಾಗಿಲಿಕ್ಕಿ, ಹಾಸಿಗೆಯ ಮೇಲೆ ಕೂತುಕೊಂಡಳು. ತುಂಬಿದ ಕೆರೆಯು ಕೋಡಿಬೀಳುವಂತೆ ಅವಳ ಅಂತಕರಣದೊಳಗಿಂದ ಒಂದೊಂದೇ ಚಿಂತಾಮಯ ವಿಚಾರಗಳು ಅಸ್ಖುಟವಾಗಿ ಹೊರಬೀಳ ಹತ್ತಿದವು—

"ಪೂರ್ವ ಜನ್ಮದ ಪುಣ್ಯದಿಂದ ತನ್ನ ಸೌಭಾಗ್ಯವು ಇತ್ತಕಡೆಯ ಪದರಿನಲ್ಲಿ ಬಿದ್ದಂದಿನಿಂದ ನನ್ನ ಸಮಾನ ಧನ್ಯಳು ನಾನೇ ಎಂದು ತಿಳಿದಿದ್ದೆನು. ಆದರೆ ಸಂಸಾರದ ಸುಖವು ಲೇಶಮಾತ್ರವೂ ದೊರೆಯುಬಾರದೆಂದು ವಿಧಿಯು ಸಂಕೇತವಿದ್ದಂತೆ ತೋರುತ್ತದೆ. ನಮ್ಮ ಅತ್ತೆಯವರು ಹಳೇಪದ್ಧತಿಯನ್ನು ಅನುಸರಿಸುವವರು. ಹೊಸ ಜಗತ್ತಿನ ಅನುಭವವು ಅವರಿಗಿಲ್ಲಿ. ಸ್ತ್ರೀ ಶಿಕ್ಷಣಕ್ಕಂತೂ ಅತ್ಯಂತ ವಿರೋಧಿಗಳು. ಕಲಿತ ಹೆಂಗಸರನ್ನು ಕಂಡರೆ ಅವರು ಎಳ್ಳಷ್ಟು ಸೇರುವದಿಲ್ಲ. ಸನಗೆ ಓದು ಬರಹಗಳು ಬರುತ್ತವೆಂಬದೇ ನಮ್ಮ ಅತ್ತೆಯವರ ಅಪ್ರೀತಿಗೆ ಮುಖ್ಯಕಾರಣವಾಗಿರುವದು. ನಮ್ಮ ಮಾವಂದಿರು ಭೋಳೇ ಸ್ವಭಾವದವರಿರುವದರಿಂದ ಚಿಕ್ಕನಿಂದಲೇ ಅತ್ತೆಯವರಿಗೆ ಸ್ವಾತಂತ್ರ್ಯವು ಸಿಕ್ಕಿರುವದು. ಅಶಿಕ್ಷಿತರಿಗೆ ಅದರಲ್ಲಿ ಸ್ತ್ರೀಯರಿಗೆ ಚಿಕ್ಕಂದಿನಿಂದ ಸ್ವಾತಂತ್ರ್ಯವು ದೊರೆತನೋಲೆ, ಸುಪರಿಣಾಮವು ಹ್ಯಾಗಾಗಬೇಕು?

ಅತ್ತೆಯವರ ಈ ತರದ ಗುಣಗಳಿಗಾಗಿ, ಅವರ ದೋಷವನ್ನೆಣಿಸಲಿಕ್ಕೆ ಬರುವದಿಲ್ಲ. ಅದು ಅವರ ಅಜ್ಞಾನವು. ಪರೋಕ್ಷದಲ್ಲಿ ಅತ್ತೆಯವರ ನಿಂದೆಯನ್ನು ಮಾಡ

ಬೇಕೆಂಬ ಉದ್ದೇಶವು ನನ್ನದಿಲ್ಲ. ಹ್ಯಾಗಾದರೂ ಮಾಡಿ, ಅತ್ತೆಮಾವಂದಿರ ಪ್ರೀತಿಯನ್ನು ಸಂಪಾದಿಸಿ, ಅವರ ಸೇವಾ ಶುಶ್ರೂಷೆಯನ್ನು ಮಾಡುತ್ತ ಆನಂದದಿಂದ ಕಾಲಕಳೆಯಬೇಕೆಂದು ಇಚ್ಛಿಸುತ್ತೇನೆ; ಆದರೆ ಇಂಥ ಸುಪ್ರಸಂಗವು ನನ್ನ ಅಯುಷ್ಯದಲ್ಲಿಯೇ ದೊರಕುವಂತೆ ತೋರುವದಿಲ್ಲ. ಪ್ರೀತಿ ಸಂಪಾದನೆಯು ಎಲ್ಲ ಮಾರ್ಗಗಳೂ ವಿಫಲವಾಗುತ್ತವೆ. ಆಗಲಿ, ನಾನು ಪಡೆದದ್ದನ್ನು ನಾನೇ ಅನುಭವಿಸಬೇಕು.

ಒಂದು ದಿವಸ ಮುಂಬೈಯಿಂದ ಬಂದ ಪತ್ರವನ್ನು ಓದುತ್ತ ಕುಳಿತಿದ್ದೆನು. ಅವರ ಭಾಷಾಚಾತುರ್ಯವನ್ನೂ, ಮನೋಹರವಾದ ಶಬ್ದರಚನೆಯನ್ನೂ ನೋಡಿ. ನನ್ನೊಳಗೇ ಆನಂದಬಡುತ್ತಿರುವಷ್ಟರಲ್ಲಿ ನಮ್ಮ ಅತ್ತೆಯವರ ದೃಷ್ಟಿಯು ಅಕಸ್ಮಾತ್ತಾಗಿ ನನ್ನ ಕೈಯೊಳಗಿನ ಪತ್ರದ ಮೇಲೆ ಬಿತ್ತು! ಇದಾವ ದೊಡ್ಡ ಅಪರಾಧ? ಇದಕ್ಕಾಗಿ ಎಲ್ಲ ಕಲಿತ ಸ್ತ್ರೀಯರನ್ನೂ, ಅವರ ಗಂಡಂದಿರನ್ನೂ ಅವಾಚ್ಯ ಶಬ್ದಗಳಿಂದ ನಿಂದಿಸಬೇಕೇ? ಅತ್ತೆಯವರ ಪ್ರೀತಿಸಂಪಾದನೆಗಾಗಿ ಅಂದಿನಿಂದ ಪತ್ರ ಓದುವದನ್ನೇ ಬಿಟ್ಟು ಬಿಟ್ಟೆನು. ಬಿಟ್ಟರಾದರೂ ಪ್ರೀತಿಸಂಪಾದನೆಯಾಯಿತೇ? ಅದೂ ಇಲ್ಲ. ಪತ್ರ ಮುಖದಿಂದಾಗುವ ಪತಿಯ ಪ್ರಿಯದರ್ಶನವೂ ಹೊರಟಾಯಿತು? ನೀರಿಗೆ ಹೋದಾಗ, ಪುರಾಣಕ್ಕೆ ಹೋದಾಗ ಸಹ ಜನರ ಮುಂದೆ ಆ ಪತ್ರದ ಸುದ್ದಿಯು ಇನ್ನೂ ನಡೆದಿರುವದು. ಉಪಕರಣಗಳನ್ನು ಸ್ವಚ್ಛವಾಗಿ ತಿಕ್ಕುವದರಿಂದ ಪಾತ್ರೆಗಳು ಸವೆಯುತ್ತವೆಂದೂ, ಅರಿವೆಗಳನ್ನು ಸ್ವಚ್ಛವಾಗಿ ಒಗೆಯುವದರಿಂದ ಅವು ಹರಿಯುತ್ತವೆಂದೂ ಅನ್ನುವರು. ಸ್ವಚ್ಛತೆಯ ಮಹತ್ವವು ಅವರಿಗೆ ಹ್ಯಾಗೆ ತಿಳಿಯಬೇಕು? ತಿಳಿಯದಿದ್ದರೂ ಇರಲಿ. ಹೀಗನ್ನುತ್ತಾರೆಂದು ತಿಳಿದು, ಸಾಧಾರಣವಾಗಿ ತಿಕ್ಕಿದರಾದರೂ ಸುಮ್ಮನಿರಬೇಕಲ್ಲವೇ? "ಕೆಲಸ ಮಾಡುವದಕ್ಕೆ ಸಾಲೀ ಕಲಿತ ಹುಡಿಗೆಯರ ಮೈ ಬಗ್ಗುವದಿಲ್ಲ. ಅವರು ಬಾಯೀಸಾಹೇಬರಾಗುವರು. ಎದುರುತ್ತರವನ್ನು ಕೊಡಲಿಕ್ಕೆ ಮಾತ್ರ ಚನ್ನಾಗಿ ಕಲಿತಿರುತ್ತಾರೆ" ಎಂದೆನ್ನುವರು.

ಈ ಊರವರು ಹೊಂಡದ ನೀರು ಕುಡಿಯುವರು. ಆ ನೀರಲ್ಲಿ ಕೆಂಪುಮಣ್ಣು ಅತಿಶಯವಾಗಿ ಕೂಡಿರುವದು. ಇಂಥ ನೀರನ್ನು ಕುಡಿಯುವದರಿಂದ ಪ್ರಕೃತಿಯು ಕೆಡುವದೆಂದು ಸಹಜವಾಗಿ ತಿಳಿಯುವಂತಿದೆ. ನಮ್ಮ ಮಾವನವರು ಮುಪ್ಪಿನವರೂ, ಜಡ್ಡಿನವರೂ ಇರುವದರಿಂದ ಅವರಿಗೆ ಇಂಥ ನೀರು ಹ್ಯಾಗೆ ತಡೆದೀತೆಂದು ತಿಳಿದು, ನೀರನ್ನು ಕಾಸಿ, ಸೋಸಬೇಕೆಂದು ಕುಳಿತಿದ್ದೆನು. ಅದನ್ನು ನಮ್ಮ ಅತ್ತೆಯವರು ಕಂಡರು. ಆ ಮೇಲೆ ಕೇಳುವದೇನು "ಬಾಯೀಸಾಹೇಬರಿಗೆ ಇಂಥ ನೀರು ಹ್ಯಾಗೆ ಸೇರೀತು. ಇನ್ನು ಮುಂದೆ ಟಪಾಲ ಮೇಲೆ ಗಂಗಾನದಿಯಿಂದ ನೀರು ತರಿಸಿದರೂ ತರಿಸುವವರೇ" ಎಂದು ಕರ್ಕಶಸ್ವರದಿಂದ ಮಾತಾಡಿದರು. ಅವರ ಸಂಗಡ ಮಾತಾಡಲಿಕ್ಕೆ ನನ್ನ ಧೈರ್ಯ ಸಾಲಲಿಲ್ಲ. ಆದರೂ ನಾನು ಮೆಲ್ಲಗೆ—"ನನಗಲ್ಲ. ಮಾವ

ನವರ ದೆಶಯಿಂದ ಕಾಸುತ್ತಿದ್ದೆನು" ಎಂದು ಅಂದೆನು. ಕೂಡಲೇ ಅತ್ತೀಬಾಯಿಯವರು—"ಈ ಊರು ಹುಟ್ಟಿದಂದಿನಿಂದ ಕುಡಿಯುವ ನೀರು ಇವೇ. ಅವನ್ನು ಕುಡಿದು, ನಾವೇನು ಸತ್ತಿಲ್ಲವಲ್ಲ. ಈಕೆಯು ಸಾಲೀಕಲಿತ ಸೊಕ್ಕಿನಿಂದ ನಮ್ಮಂಥ ಮಂಗಿಗೆ ಸಹ ಬದ್ಧೀ ಹೇಳಲಿಕ್ಕೆ ಬರುತ್ತಾಳೆ." ಎಂದು ಕಠೋರ ಮಾತುಗಳನ್ನಾಡುತ್ತ ಹೊರಟು ಹೋದರು. ಅಂದಿನಿಂದ ನೀರು ಕಾಸುವದನ್ನೇ ಬಿಟ್ಟಿನು. ಆದರೂ ಅವರು ಅನ್ನುವದನ್ನು ಇಂದಿಗೂ ಬಿಟ್ಟಿಲ್ಲ. ಏನುಮಾಡಲಿ! ಎಷ್ಟು ಸದ್ಭೀತುವಿನಿಂದ ಕೆಲಸಮಾಡಿದರೂ ನನ್ನ ಪಾಲಿಗೆ ದುಷ್ಟತನವೇ. ಅಶಿಕ್ಷಿತ ಅಧಿಕಾರಿಗಳ ಕೈಕೆಳಗೆ ನಡೆಯುವದು ಪರಮಕಷ್ಟ. ನಿಜವಾದದ್ದನ್ನು ಹೇಳಿದರೆ ಎದುರುತ್ತರ ಕೊಡುವಳೆಂದೂ, ಸುಮ್ಮನಿದ್ದರೆ ನಮ್ಮಂಥವರ ಸಂಗಡ ಕಲಿತವರು ಹ್ಯಾಗೆ ಮಾತಾಡುವರೆಂದೂ ಅನ್ನುವರು. ಸ್ವಲ್ಪ ಗಟ್ಟಿಯಾಗಿ ಮಾತಾಡಿದರೆ ಕರ್ಕಶಿಯನ್ನುವರು. ಹೀಗನ್ನುತ್ತಾರೆಂದು ಮೆಲ್ಲಗೆ ಮಾತಾಡಿದರೆ "ನಾಜೂಕು ಮಂದಿ. ಗಟ್ಟಿ ಮಾತಾಡಿದರೆ ಬಾಯಿ ನೊಂದೀತು" ಎಂದೆನ್ನುವರು. ದೇವರೇ, ಸಂಸಾರಯಾತ್ರೆಯು ಪರಮ ಕಷ್ಟಕರವೆಂದು ನಾರಿಹೇಳುವ ಸಾಧೂಕ್ತಿಯು ಯಥಾರ್ಥವಿರುತ್ತದೆ. ಅಂತೇ ನಾ ನಾ ಎಂದು ಎದೆ ತಟ್ಟಿಕೊಳ್ಳುವ ಪುರುಷಾಗ್ರಣಿಗಳು ಸಹ ಈ ಸಂಸಾರಸಾಗರದಲ್ಲಿ ಈಸಲಾರದೆ, ಕೈಸೋತು ಗುಟುಕು ನೀರು ಕುಡಿಯುತ್ತಿರುವರು.

ಮುಂಬೈಯಿಂದ ಹಿಂದಕ್ಕೊಂದು ಪತ್ರಬಂದಿತ್ತು. ಅದರಲ್ಲಿ ಅವರು ಉಪದೇಶಿಸಿದ್ದೇನಂದರೆ—"ನಮ್ಮ ತಾಯಿಯವರು ಅಶಿಕ್ಷಿತರಿರುವದರಿಂದ ನಿನಗೆ ಅವರು ಸೇರಲಾರರೆಂಬದು ಸಹಜವಿದೆ. ಇದಲ್ಲದೆ ಕಳೆದ ನಾತಾಳಿಗೆ ಬಂದಾಗ್ಗೆ ಈ ಸಂಗತಿಯನ್ನು ನಾನು ಕಣ್ಣಾರೆ ಕಂಡಿರುವೆನು. ನಾನು ಕಂಡ ಸಂಗತಿಗಳಲ್ಲಿ ನಿನ್ನ ಅಪರಾಧವೇನೂ ಇದ್ದಿಲ್ಲ. ನಮ್ಮ ತಾಯಿಯವರದಾದರೂ ಅಪರಾಧವಲ್ಲ; ಒಂದುವೇಳೆ ನಿನ್ನ ಮಾತು ನಿಜವಿದ್ದರೂ, ಪ್ರಸಂಗ ವಿಶೇಷದಲ್ಲಿ ಅದನ್ನು ಹಟದಿಂದ ನಡೆಸಲಿಕ್ಕೆ ಹೋಗಬೇಡ. ಅವರಂತೆಯೇ ನೀನು ವರ್ತಿಸು. ಯಾಕಂದರೆ ಅದರಿಂದೊದಗುವ ದುಷ್ಪ್ರಭಲವು ದೃಗ್ಗೋಚರವಾದ ಕೂಡಲೇ ನಿನ್ನ ಮಾತಿನ ಸತ್ಯತೆಯು ನಮ್ಮ ತಾಯಿಯವರಿಗೆ ಕೂಡಲೇ ಹೊಳೆಯುವದು. ಹೀಗೆ ಮಾಡದೆ ನಿಜವಾದ ನಿನ್ನ ಮಾತನ್ನೇ ಹಟದಿಂದ ಸಾಧಿಸಹೋದರೆ, ನಿನ್ನ ವಿಷಯವಾಗಿ ಅವರಲ್ಲಿ ಶತ್ರುತ್ವಭಾವನೆಯಾಗುವದು. ಬಹಳ ಬರೆಯುವದರಿಂದೇನು, ಹೊತ್ತು ಸಾಧಿಸಿ, ನಿನ್ನ ವಿವೇಕಬುದ್ಧಿ, ಸರಳವರ್ತನಗಳಿಂದ ನಿಮ್ಮೆಳಗೆ ಈಗಿದ್ದ ವಿಷಮತೆಯನ್ನು ದೂರುಮಾಡಿ, ಏಕರೂಪತೆಯಿಂದ ಸಂಸಾರದ ಸೌಖ್ಯವನ್ನು ಹೆಚ್ಚಿಸುವೆಯೆಂದು ತುಂಬಾ ಆಶೆಯುಳ್ಳವನಾಗಿದ್ದೇನೆ. ಸಂಸಾರದ ಸೌಖ್ಯವೇ ನನಗೆ ಪರಮಾನಂದವು. ನನಗೆ ಆನಂದವಾಗುವಂತೆ ವರ್ತಿಸುವದೇ ನಿನ್ನ ಪವಿತ್ರಕರ್ತವ್ಯವೆಂದು ಬರೆಯಲವಶ್ಯವಿಲ್ಲ. ನಮ್ಮತಂದೆಯವರ ಪ್ರಕೃತಿಯು

ವಿಷಯವಾಗಿ ಜಪ್ಪಿಸುತ್ತಿರು. ಇತ್ಯಾದಿ" ಪತಿಯ ಆಜ್ಞೆಯು ತಿರಸಾವಮಾನ್ಯವು; ಅದರೆ ಏನು ಮಾಡಲಿ, ಅತ್ತೆ ಮಾವರ ಮಾತಿನಂತೆ ನಡೆದರೂ ತಿರಸ್ಕಾರವು. ನಡೆಯದಿದ್ದರೂ ತಿರಸ್ಕಾರವು. ಈ ತಿರಸ್ಕಾರವು ನಾನು ವಿದ್ಯಕಲಿತದ್ದರ ಪರಿಣಾಮವಾಗಿರುವದು ನನ್ನ ವರ್ತನದ ಫಲವಲ್ಲ. ಮುಂದಿನ ವಿಚಾರವನ್ನು ಪತ್ರಮುಖದಿಂದ ತಿಳಿಯುವೆನೆಂದರೆ ಈಗ ಪತ್ರಬರೆಯುವದೂ ಬಂದಾಗಿದೆ, ಆಗಲಿ 'ಸತ್ಯವು ಜಯವಾಗುವದು' ಎಂಬ ಈಶ್ವರೀವಾಕ್ಯವನ್ನು ದೃಢವಾಗಿ ನಂಬಿನಡೆಯುವೆನು. ಅದರ ಶ್ರೇಯಾಶ್ರೇಯವು ಈಶ್ವರನಿಗೇ."

ಆ ಪ್ರಮದೆಯು ಈ ಪ್ರಕಾರ ಚಿಂತಿಸುತ್ತಿರುವಷ್ಟರಲ್ಲಿ ೩ ಹೊಡೆಯಿತು. ಈಶ್ವರನ ಮೇಲಿನ ನಂಬಿಗೆಯಿಂದ ಅವಳಿಗೆ ಸ್ವಲ್ಪ ಸಮಾಧಾನವೂ ಆಯಿತು. 'ಅಬ್ಬಾ! ೩ ಹೊಡೆಯಿತು. ಮಾವನವರಿಗೆ ಜಡ್ಡಾಗಿರುವದರಿಂದ ನಸಕು ಹರಿಯುವದರೊಳಗೆ ಏಳಬೇಕಾಗಿದೆ' ಎಂದೆನ್ನುತ್ತ ಮಲಗಿಕೊಂಡಳು. ಹೊತ್ತಾಗಿ ಮಲಗಿದ್ದರಿಂದ ಬೆಳ್ಳಗೆ ಬೆಳಗಾದರೂ ಎಚ್ಚರಿಕೆಯಾಗಲಿಲ್ಲ. ಕೆಳಗಿನಿಂದ "ಸರಲೇ, ಸರಲೇ, ಇನ್ನೂ ಏಳಲಿಲ್ಲೇನು ಮೂರುತಾಸು ಹೋತ್ತೀರಿದೆ. ಶ್ರೀಮಂತರಿಗೆ ಬೀಗನೇ ಹ್ಯಾಗೆ ಎಚ್ಚರಿಕೆಯಾದೀತು" ಎಂಬ ಕರ್ಕಶಯುಕ್ತವಾದ ಧ್ವನಿಯನ್ನು ಕೇಳಿದಾ ಕ್ಷಣವೇ ಸರಲೆಯು ಚಟ್ಟನೇ ಎದ್ದು, 'ಅಹಹಬೆಳಗಾಗಿದೆ' ಎಂದು ಮನಸ್ಸಿನಲ್ಲಿ ಅನ್ನುತ್ತ 'ಬಂದೆ'ನೆಂದು ಉತ್ತರಕೊಟ್ಟು ಲಗುಬಗೆಯಿಂದ ಕೆಳಗಿಳಿದು ಹೋದಳು.

ದೇಶಪಾಂಡೆ ಗುರುರಾಯನು ಈಗ ಸುಮಾರು ೫೦ ವರ್ಷದವನಿದ್ದನು. ಅತನು ಓದು ಬರಹಗಳನ್ನು ಮಾತ್ರ ಕಲಿತವನಾದ್ದರಿಂದ ವತನಿಯಗೌಡಿಕೆಯನ್ನು ಹಾಗೂ ಹೀಗೂ ಸಾಗಿಸುತ್ತ ಬಂದಿದ್ದನು. ಬರಬರುತ್ತ ಅದು ಸಹ ಸಾಗದಂತಾಗಿ ೫-೪ ವರ್ಷಗಳಿಂದ ಗೌಡಿಕೆಯನ್ನು ಸಹ ಬಿಟ್ಟಿದ್ದನು. ವರ್ಷಕ್ಕೆ ಸುಮಾರು ೪೦೦ ರೂಪಾಯಿಗಳ ವತನಿಯು ಉತ್ಪನ್ನವು ಬರುತ್ತಿತ್ತಲ್ಲದೆ, ಪೂರ್ವಾರ್ಜಿತರೋಪಿ ಆಸ್ತಿಯೂ ತಕ್ಕಮಟ್ಟಿಗಿತ್ತು. ಈತನು ಭೋಳೇ ಸ್ವಭಾವದವನಾದ್ದರಿಂದ ಈತನ ಹೆಂಡತಿಯಾದ ಯಮುನಾಬಾಯಿಯೇ ಸಂಸಾರದ ಕೆಲಸವನ್ನು ಸಾಗಿಸುತ್ತಿದ್ದಳು. ಈಕೆಯು ಗೌರವರ್ಣದ ವಳಿದ್ದು ಈಗ ಸುಮಾರು ೪೦ ವರ್ಷದವಳಾಗಿದ್ದಳು. ಈಕೆಯು ಹೊಟ್ಟೀಲಿ ಶಂಕರರಾಯನೆಂಬ ಒಬ್ಬನೇ ಮಗನಿದ್ದನು. ಈತನ ರೂಪವು ಬಹು ಮನೋಹರವಾದದ್ದು. ಗುಣಾಢ್ಯನೂ ಇದ್ದನು. ಶಂಕರರಾಯನಿಂದಲೇ ದೇಶಪಾಂಡೆ ಮನೆತನವು ಮುಂದಕ್ಕೆ ಬರುವದೆಂತಲೂ, ಈ ಮನೆಯಲ್ಲಿ ಯಮುನಾಬಾಯಿಯ ಅಧಿಕಾರವಿರುವರೆಗೆ ಈ ಮನೆಯು ಕಡೆಗೆ ಒಂದು ಬೆಕ್ಕು ಸಹ ಸುಳಿಯಲಾರದೆಂತಲೂ ಊರೊಳಗಿನ ಮುದುಕರು ತಮ್ಮ ತಮ್ಮೊಳಗೆ ಮಾತಾಡುತ್ತಿದ್ದರು. ಶಂಕರರಾಯನು ಈಗ ೨೫ ವರ್ಷದವನಿದ್ದು ಮುಂಬೈಕಾಲೇಜದಲ್ಲಿ ಬಿ. ಎ. ಕ್ಲಾಸಿನಲ್ಲಿ ಅಭ್ಯಾಸ ಮಾಡುತ್ತಿದ್ದನು.

ಶಂಕರರಾಯನ ಲಗ್ನವಾಗಿ ೧ ವರ್ಷವಾಗಿತ್ತು. ಸರಲೆಯ ತವರುಮನೆಯು ಅಲ್ಲಿಂದ ೬ ಹರದಾರಿ ದೂರದಲ್ಲಿತ್ತು. ಸರಲೆಯ ತಂದೆ ಭೀಮರಾಯನು ಧನಾಢ್ಯನಿದ್ದನು. ಆತನು ಈಗ ಮುದುಕನಾಗಿದ್ದರಿಂದ ಸರಲೆಯ ಅಣ್ಣನಾದ ಮಾಧವರಾಯನೇ ಸಂಸಾರವನ್ನು ನಡಿಸುತ್ತಿದ್ದನು. ಮಾಧವರಾಯನು ಪದವೀಧರನಿದ್ದರೂ, ಸರಕಾರದ ನೌಕರಿಯನ್ನು ಮಾಡದೆ, ಸ್ವಂತ ಬಂಡವಲದಿಂದಲೇ ನೂಲಿನ ಗಿರಣಿಯನ್ನು ಇಟ್ಟಿದ್ದನು. ಇದಲ್ಲದೆ ಆತನು ತಂದೆಯಿಂದ ಆರ್ಯವೈದ್ಯಶಾಸ್ತ್ರವನ್ನಭ್ಯಾಸಿಸಿದರಿಂದ ಕೂಡಿದಾಗ ಧರ್ಮಾರ್ಥವಾಗಿ ವೈದ್ಯಕೀ ಕೆಲಸವನ್ನು ಸಹ ಮಾಡುತ್ತಿದ್ದನು. ಅನುಭವಿಕನಾದ ತಂದೆಯ ಸಹಾಯದಿಂದ ಇತ್ತಿತ್ತಲಾಗಿ ಮಾಧವರಾಯನು ವೈದ್ಯಕೀಕೆಲಸದಲ್ಲಿ ಒಳ್ಳೇ ಹೆಸರಾಗಿದ್ದನು. ಭೀಮರಾಯನ ಮನೆಯಲ್ಲಿ ಹೆಂಗಸರು ಸಹ ಕಲಿತವರಿದ್ದದರಿಂದ ಸಂಸಾರವು ಒಳ್ಳೇ ವ್ಯವಸ್ಥಿತವಾಗಿ ನಡಗುತ್ತಿತ್ತು. ಅದ್ದರಿಂದ ಸರಲೆಗೆ ಚಿಕ್ಕಂದಿನಿಂದಲೇ ಸ್ವಚ್ಛತೆಯ ಚಟವು ಹತ್ತಿತ್ತು. ಓರಣ, ಅಚ್ಚುಕಟ್ಟುತನಗಳು ಅಕೆಯ ಸಹಜಗುಣಗಳಾಗಿದ್ದವು. ಆದರೂ ಅಣ್ಣನ ಹೆಂಡತಿಯಂತೆ ತಾನಾದರೂ ಸಂಸಾರದಲ್ಲಿ ಹೌದೆನ್ನಿಸಿಕೊಳ್ಳಬೇಕೆಂಬ ಆಕೆಯ ಲವಲವಿಕೆಯು ಈಗ ಕುಗ್ಗಿಹೋಗಿತ್ತು. ಇರಲಿ.

ಹಿಂದೆ ಹೇಳಿದಂತೆ ಸರಲೆಯು ಎದ್ದು ಬಂದವಳೇ ಮಾವನವರ ಕೋಣೆಯಲ್ಲಿ ಹಣಿಕೆದಾಕಿದಳು. ಗುರುರಾಯರಿಗೆ ಗಡದ್ದಾಗಿ ನಿದ್ದೆಹತ್ತಿತ್ತು. ಕೂಡಲೇ ಸರಲೆಯು ಪ್ರಾತರ್ನಿಧಿಯನ್ನು ತೀರಿಸಿಕೊಂಡು, ಕಸ, ಮುಸುರೆ, ಉಡುಸಾರಗೆ ಮೊದಲಾದ ನಿತ್ಯ ಕೆಲಸಗಳನ್ನು ಮಾಡಿ, ಮಾವನವರು ಏಳುವಮೊದಲು ಅವರಿಗೆ ಮೋರೆ ತೊಳಕೊಳ್ಳುವದಕ್ಕಾಗಿ, ನೀರುಕಾಸುತ್ತಲೇ ಕಷಾಯವನ್ನು ಮಾಡಹತ್ತಿದಳು. ಅದನ್ನು ಕಂಡು ಯಮುನಾಬಾಯಿಯು—"ಸರಲೇ ಕಷಾಯವನ್ನು ಮಾಡುತ್ತೀಯೇನು? ಅದರದೇನೂ ಕಾರಣವಿಲ್ಲ. ನಮ್ಮ ಕುಲದೇವತೆಯಾದ ಯಲ್ಲಮ್ಮನ ಮೇಲೆ ನಾನು ಹೊರೆ ಹಾಕಿದ್ದೇನೆ." ಎಂದು ಸ್ಪಷ್ಟವಾಗಿ ಹೇಳಿದಳು. ಬೇನೆಯು ಎಳೆಯದಿರುವಾಗಲೇ ಯೋಗ್ಯ ಉಪಾಯವನ್ನು ಮಾಡದಿದ್ದರೆ, ಕೆಟ್ಟ ಪರಿಣಾಮವಾಗುವದೆಂದು ಸರಲೆಯು ಕಳವಳಬಟ್ಟು, "ನಾನಾದರೂ ದೇವರ ಹೆಸರಿಂದಲೇ ಕಷಾಯವನ್ನು ಕೊಡುತ್ತಿದ್ದೆನು." ಎಂದು ವಿನಯದಿಂದ ಮಾತಾಡಿದಳು. ಅದಕ್ಕೆ ಯಮುನಾಬಾಯಿಯು ಸಿಟ್ಟುಗೆದ್ದು—"ಎಲ್ಲದರಲ್ಲಿಯೂ ನಿನ್ನ ಬುದ್ಧಿವಂತಿಕೆಯನ್ನು ಮೆರೆಯಿಸಬೇಡ. ಸಾಲಿಯನ್ನು ಕಲಿತವರಿಗೆ ದೇವರೆಲ್ಲಿರುವನು? ಛಹಾ, ಕಾಪಿಗಳೇ ನಿಮ್ಮ ದೇವತೆಗಳು." ಸಾಲಿಯನ್ನು ಕಲಿತವರೆಲ್ಲರು ನಾಸ್ತಿಕರಿರುತ್ತಾರೆಂದು ಸಹಜವಾಗಿ ಸಿದ್ಧಮಾಡಿದ ಅತ್ತೆಯವರ ಬುದ್ಧಿಚಾತುರ್ಯವನ್ನು ಕಂಡು, ಸರಲೆಗೆ ಆಶ್ಚರ್ಯವಾಯಿತು. ಮುಂದಿನ ಕೆಟ್ಟ ಪರಿಣಾ

ವನ್ನು ನೆನೆದು, ದುಃಖಿತಳಾಗಿ ಕಷಾಯ ಮಾಡುವದನ್ನು ಬಿಟ್ಟುಬಿಟ್ಟಳು.
ದಿನದಿನಕ್ಕೆ ಗುರುರಾಯರ ಪ್ರಕೃತಿಯು ಶೋಚನೀಯವಾಗುತ್ತ ಬಂತು. ಔಷಧೋಪಚಾರಗಳಂತೂ ಇಲ್ಲೇ ಇಲ್ಲ. ಒಂದು ದಿವಸ ಗುರುರಾಯರು ಮಲಗುವ ಕೋಣೆಯ ಎಲ್ಲ ಕಿಡಿಕೆಗಳನ್ನು ಹಾಕಿರಲು, ಸ್ವಚ್ಛ ಹವೆಗೆ ಮಾರ್ಗವಿಲ್ಲದ್ದನ್ನು ಸರಯು ಕಂಡು, ಒಂದು ಸಣ್ಣ ಕಿಡಿಕೆಯ ಬಾಗಿಲನ್ನು ಅರ್ಧತೆಗೆದಳು. ಕೆಲಹೊತ್ತಿನ ಮೇಲೆ ಯಮುನಾಬಾಯಿಯು ಆ ಕೋಣೆಯಲ್ಲಿ ಯಾತಕ್ಕೋ ಹೋಗಿರಲು, ಕಿಡಿಕೆಯ ಬಾಗಿಲು ತೆರೆದದ್ದನ್ನು ಕಂಡು—" ಸರಲೇ ಈ ಕಿಡಿಕೆಯ ಬಾಗಿಲವನ್ನು ಯಾರು ತೆರೆದರು? " ಎಂದು ಕೇಳಿದಳು. ಅದಕ್ಕೆ ಸರಲೆಯು—" ಸ್ವಚ್ಛ ಹವೆಗೆ ಮಾರ್ಗವಿಲ್ಲದ್ದರಿಂದ ನಾನೇ ತೆರದಿದ್ದೆನು. " ಹೀಗೆನ್ನಲು ಯಮುನಾಬಾಯಿಯು ತೀಕ್ಷ್ಣಶಬ್ದದಿಂದ—" ಗಂಡಸರಂದಂತೆ ಹವೆಯನ್ನು ತ್ತಾಳಿ. ಗಾಳಿಯಂದರೆ ಅಶುದ್ಧವಾಗುವದೋ? ಸಾಕು ನಮ್ಮವ್ವಾ ನಿನ್ನ ವಿಚಾರವನ್ನು ಇಲ್ಲಿಗೆ ಸಾಕುಮಾಡು. ನಿನ್ನ ಹವೆಗೆ ಬೆಂಕೀ ಹಚ್ಚಿತು. ಕೆಟ್ಟಗಾಳಿಬಡೆದು ಇಲ್ಲದ ಜಡ್ಡು ಬಂದೀತು. " ಎನ್ನಲು ಸರಳೆಯು ಸುಮ್ಮನಾದಳು. ಏಏಬಡೆಯದೆ ಶೂನ್ಯ ದೃಷ್ಟಿಯಿಂದ ಜಂತೆಯನ್ನು ನೋಡಹತ್ತಿದಳು. ನೋಡನೋಡುತ್ತ ಪಟಪಟನೆ ಅಶ್ರುಬಿಂದುಗಳುದುರಿದವು. ಯಾರಿಗೂ ತಿಳಿಯದಂತೆ ಅವುಗಳನ್ನೊರಿಸಿಕೊಂಡು, ಕೆಲಸಕ್ಕೆ ಹೊರಟು ಹೋದಳು. ಮುಂದೆ ೩-೪ ದಿವಸಗಳಲ್ಲಿ ಗುರುರಾಯರಿಗೆ ಕೆಂಡದಂಥ ಜ್ವರಬಂದವು. ತೊದಲು ಮಾತುಗಳನ್ನಾಡಹತ್ತಿದರು. ನಾಲಿಗೆಯು ಕಪ್ಪಾಯಿತು. ಆಗ ಯಮುನಾಬಾಯಿಯ ಕಣ್ಣುಗಳು ತೆರೆದವು. ಹಳ್ಳಿಯಊರು; ವೈದ್ಯರಿಲ್ಲ; ಗಾಬರಿಯಾದಳು. ಮುಂದಿನ ದುಃಸ್ಥಿತಿಯನ್ನು ನೆನೆದು, ಅವಳಿಗೆ ಏನೂ ತೋಚದಾಯಿತು. ಉತಾವಳಿ ಸ್ವಭಾವದ ಯಮುನಾಬಾಯಿಯು, ಯಲ್ಲಮ್ಮನನ್ನು ಬಾಯಿಗೆ ಬಂದ ಹಾಗೆ ಬಯ್ಯುಹತ್ತಿದಳು. ಕಡೆಗೆ ಉಸುರ್ಗರೆದು, ನಿರುಪಾಯಳಾಗಿ, ಸೊಸೆಯನ್ನು ಕುರಿತು—" ಸರಲಾ! ಅಂದು ಕಷಾಯವನ್ನು ಮಾಡುತ್ತಿದ್ದೆಯಲ್ಲ. ಅದನ್ನು ಇಂದು ಮಾಡಬಾರದೇ? " ಎಂದು ದೀನವಾಣಿಯಿಂದ ನುಡಿದಳು. ಅದಕ್ಕೆ ಸರಲೆಯು—" ಇಂದು ಆ ಕಷಾಯದಿಂದ ಏನಾಗಬೇಕಾಗಿದೆ. ಅವೆಲ್ಲ ಮೊದಲಿನ ಉಪಾಯಗಳು. ಮುಂಬೈಯಿಂದ " ಸರಲೆಯ ಮಾತು ಮುಗಿಯುವಷ್ಟರಲ್ಲಿಯೇ ಯಮುನಾಬಾಯಿಯು—" ಅಯ್ಯೋ! ಇಂಥ ಸಮಯದಲ್ಲಿ ನನ್ನ ಶಂಕರನಾದರೂ ಹತ್ತರ ಇಲ್ಲವಲ್ಲ! ಸಖಲಾ ಶಂಕರನಿಗೆ ಒಂದು ಪತ್ರವನ್ನಾದರೂ ಹಾಕವ್ವಾ. " ಎಂದು ದುಃಖದಿಂದ ನುಡಿದಳು. ಕೂಡಲೇ ಸರಲೆಯು ಪತ್ರಮುಟ್ಟುವದು ತಡವಾಗುವದೆಂದು ತಿಳಿದು, ಇಂಗ್ಲಿಷಿನಿಂದ ತಾರುಬಿಡತಕ್ಕ ಸಂಗತಿಯನ್ನು ಬರೆದು, ಅದಕ್ಕೆ ಹತ್ತುವ ಚಾರ್ಜಕೊಟ್ಟು, ತಾರು ಬಿಡುವದಕ್ಕಾಗಿ ಸ್ಟೇಶನ್ನಿಗೆ ಆಳನ್ನು ಕಳುಹಿಡಳು. ಅರ್ಜಂಟೆ ತಾರು ಇದ್ದುದರಿಂದ ಮೇಲಗಾಡಿಯನ್ನು ಹತ್ತಿ, ಶಂಕರರಾಯನು ೩ ಘಂಟೆಗೇ ಊರಿಗೆ ಬಂದನು.

ಸಶೇಷ.

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं वाग्भूषणम् भूषणम् ॥

(भर्तृहरिः)

ಸಂಪುಟ ೧೬.	ಫೆಬ್ರುವಾರಿ ೧೯೧೨.	ಸಂಚಿಕ ೭

ಲಿಪಿನಿವಾ[illegible]

ಅಶೋಕ ಮಹಾರಾಜನ ಕಾಲವು ಸ್ವದೇಶ ಪರದೇಶಗಳಲ್ಲಿ ಅವನು ಬೌದ್ಧ ಧರ್ಮವನ್ನು ಪ್ರಚಾರ ಮಾಡಿದ ಮಾತ್ರದಿಂದ ಇಲ್ಲವೆ ವಿಶಾಲವಾದ ಸಾಮ್ರಾಜ್ಯವನ್ನು ಆಳಿದನೆಂಬ ಮಾತ್ರದಿಂದ ಪ್ರಸಿದ್ಧಿಯನ್ನು ಹೊಂದಿದೆಯೆಂದು ಹೇಳುವಂತೆ ಇಲ್ಲ. ಆ ಕಾಲವು (ಕ್ರಿ. ಪೂ. ೩ ನೆಯ ಶತಮಾನವು) ಜ್ಞಾನ, ಧರ್ಮ, ರಾಜನೀತಿ, ಸಮಾಜನೀತಿ, ಶಿಲ್ಪವಿದ್ಯೆಗಳಲ್ಲಿ ಉಚ್ಚ ದಶೆಯನ್ನು ಹೊಂದಿದಂತೆ, ಭಾಷಾಸಾಹಿತ್ಯಗಳಲ್ಲಿಯೂ ಉತ್ಕರ್ಷವನ್ನು ಹೊಂದಿ ಇತಿಹಾಸದಲ್ಲಿ ಚಿರಸ್ಮರಣೀಯವಾಗಿರುವದು.

ಯಾವ ಪ್ರಾಚೀನ ಯುಗದಲ್ಲಿ ಮನುಷ್ಯರ ಭಾಷೆಯು ಗ್ರಂಥಸ್ಥವಾಯಿತು? ಮತ್ತು ಯಾವ ಕಾಲದಿಂದ ಅಕ್ಷರಗಳು ಪ್ರಚಾರದಲ್ಲಿ ಬಂದು ಜನರ ಸುಧಾರಣೆಯಲ್ಲಿ ಕ್ರಾಂತಿಯನ್ನುಂಟುಮಾಡಿದವು? ಎಂಬದನ್ನು ನಿಶ್ಚಿತವಾಗಿ ನಿರ್ಣಯಿಸುವದು ದುಃಸಾಧ್ಯವು. ಭರತಖಂಡದಲ್ಲಿ ಲೇಖನಪದ್ಧತಿಯುಂಟಾದ ಕಾಲವಾವದು? ಆ ಲೇಖನವು ಗ್ರಂಥಗಳಲ್ಲಿ ಯಾವಾಗ ಪ್ರಚಲಿತವಾಯಿತು? ಎಂಬದನ್ನು ಇಲ್ಲಿ ಆಲೋಚಿಸುವ.

ಭಾಷೆಯು ಗ್ರಂಥರೂಪವನ್ನು ಹೊಂದಿ ಜನಗಳಲ್ಲಿ ಪ್ರಚಾರವಾಗದೇಕಾದರೆ ಅಕ್ಷರಗಳ ಸಾಹಾಯ್ಯವು ಬೇಕು. ಭರತಖಂಡದಲ್ಲಿ ಈಗ ಎಷ್ಟು ಪ್ರಕಾರದ ಅಕ್ಷರಗಳು ಪ್ರಚಾರದಲ್ಲಿರುವವೊ, ಹಿಂದೆ ಇದ್ದವೊ, ಅವುಗಳಲ್ಲೆಲ್ಲ ಅಶೋಕ ಅಕ್ಷರಗಳೇ ಎಲ್ಲಕ್ಕೂ ಹಳೆಯವೆಂದು ಹೇಳುವರು. ಅಶೋಕ ಮಹಾರಾಜನ ಶಾಸನಗಳಲ್ಲಿ ಬರೆದ ಅಕ್ಷರಗಳೇ ಅಶೋಕ ಅಕ್ಷರಗಳು. ಕ್ರಿ. ಪೂ. ೩ ನೆಯ ಶತಮಾನದಿಂದ ಅಂದರೆ ಅಶೋಕ ಮಹಾರಾಜನ ಆಳಿಕೆಯ ಕಾಲದಿಂದ ಲೇಖನ ಪದ್ಧತಿಯು ಭರತ

ಖಂಡದಲ್ಲಿ ಆರಂಭವಾಯಿತೆಂದು ಅನೇಕ ಯುರೋಪೀಯ ಪಂಡಿತರ ಅಭಿಪ್ರಾಯ ವಿರುವದು. ಅವರು ಪ್ರಾಚೀನ ಸೇಮಿಟಿಕ ಅಕ್ಷರಗಳಿಂದ ಅಶೋಕ ಅಕ್ಷರಗಳು ಹುಟ್ಟಿದವೆಂದೂ ಅವುಗಳಿಂದೇ ಭರತಖಂಡದ ಬೇರೆ ಬೇರೆ ಅಕ್ಷರಗಳು ಹುಟ್ಟಿರುತ್ತವೆಂದೂ ಹೇಳುವರು. ಭಾಷಾತತ್ವಜ್ಞರೂ ಐತಿಹಾಸಿಕರೂ ಈ ವಿಷಯವನ್ನು ಬಹಳ ಮಟ್ಟಿಗೆ ಆಲೋಚಿಸಿರುವರು. ಭರತಖಂಡದ ವರ್ಣಮಾಲೆಯು ಈ ದೇಶದಲ್ಲಿಯೇ ಉತ್ಪನ್ನವಾಯಿತೇ? ಇಲ್ಲವೆ ಪರದೇಶದಿಂದ ತರಲ್ಪಟ್ಟಿತೇ? ಎಂಬ ವಿಷಯದಲ್ಲಿ ಯುರೋಪೀಯ ಪಂಡಿತರು ಬಹು ದಿವಸಗಳಿಂದ ಚರ್ಚೆಯನ್ನು ನಡಿಸುತ್ತ ಬಂದಿರುವರು. ಆದರೂ ಆ ವಿಷಯದಲ್ಲಿ ಆ ಪಂಡಿತರ ಐಕಮತ್ಯವಾಗಲಿಲ್ಲ. ಟಮಾಸ್, ಗೋಲ್‌ಉಷ್ಟ್ಕಾರ, ರಾಜೇಂದ್ರ ಲಾಲಮಿತ್ರ, ಲ್ಯಾಸೇನ್ ಮೊದಲಾದ ಪಂಡಿತರು ಭಾರತವರ್ಣಮಾಲೆಯು ಭಾರತಭೂಮಿಯಲ್ಲೇ ಉತ್ಪನ್ನವಾಯಿತೆಂದು ಹೇಳುವರು. ಕನಿಂಗಹಮ್ ಸಾಹೇಬರು ಅಶೋಕ ಅಕ್ಷರಗಳು ಪ್ರಾಚೀನಕಾಲದ ಭರತಖಂಡದ ವಸ್ತುಚಿತ್ರಗಳಿಂದ ಉತ್ಪನ್ನವಾದವೆಂದು ಹೇಳುವರು. ಸುಪ್ರಸಿದ್ಧ ಪಂಡಿತರಾದ ಪ್ರೊಫೆಸರ್ ಡಸನ್ ಎಂಬವರು ಭಾರತೀಯ ವರ್ಣಮಾಲೆಯು ಭರತಖಂಡದಲ್ಲಿಯೇ ಉತ್ಪನ್ನವಾಯಿತೆಂದು ವಿವೇಚಿಸಿರುವರು. ಇದಕ್ಕೆ ವಿರುದ್ಧವಾಗಿ, ಪ್ರಸಿದ್ಧರಾದ ಅನೇಕ ಭಾಷಾತತ್ವಜ್ಞರು ಭಾರತೀಯ ವರ್ಣಮಾಲೆಯು ಪರದೇಶದಿಂದ ಬಂದಿತೆಂದು ಪ್ರತಿಪಾದಿಸುತ್ತಾರೆ. ಜೇಮ್ಸ್‌ಪ್ರಿನ್ಸೆಪ್, ಡಾಕ್ಟರ ಮುಲ್ಲರ, ಇವರು ಭಾರತೀಯ ಅಕ್ಷರಗಳು ಗ್ರೀಕ ಅಕ್ಷರಗಳಿಂದ ಹುಟ್ಟಿರುವವೆಂದು ಹೇಳುವರು. ಕೆಲವರು ಚೀನ ದೇಶದ ವಸ್ತುಚಿತ್ರಗಳಿಂದ ಉತ್ಪನ್ನವಾದವೆಂದು ಹೇಳುವರು. ಪಾರಸ್ಯ ಅಕ್ಷರಗಳಿಂದ ಅಶೋಕ ಅಕ್ಷರಗಳು ಉತ್ಪನ್ನವಾದವೆಂದು ಪಾರ್ಕೇರನು ಹೇಳುವನು. ಬೀಬಾರ ಮತ್ತು ಟೀಲಾರ ಎಂಬವರು ಭಾರತವರ್ಣಮಾಲೆಯು ಇಮೆನ್ (Yemen) ದಿಂದ ತರಲ್ಪಟ್ಟಿತೆಂದು ಹೇಳುವರು. ಬೆನ್‌ಫಿ (Benfey) ಎಂಬವನು ಫಿನಿಸಿಯಾನರಿಂದ ಪ್ರಾಪ್ತವಾಯಿತೆಂದು ಹೇಳುವನು. ಸರ್ ಉಯಿಲಿಯಮ್ ಜೋನ್ಸ್, ಪ್ರೊಫೆಸರ್ ಕಪ್ ಲೆಪ್ಸಿನ್, ಡಾಕ್ಟರ್ ಪ್ಟಿಫನ್‌ಸನ್ ಗ್ರಿಸಿಲಾರ, ಕಾರನ್ ಬುಹ್ಲಾರ, ಮೊದಲಾದವರು ಕೊನೆಗೆ ಹೇಳಿದ ಮತವನ್ನು ಸಮರ್ಥಿಸುವರು.

ಮೇಲಿನ ಪ್ರಶ್ನವನ್ನು ಚೆನ್ನಾಗಿ ವಿಚಾರಿಸುವದಕ್ಕೆ ಮುಂಚೆ ಅಕ್ಷರಗಳು ಹೇಗೆ ಹುಟ್ಟಿದವು ಮತ್ತು ಯಾವ ದೇಶದಲ್ಲಿ ಎಲ್ಲಕ್ಕೂ ಮುಂಚೆ ಹುಟ್ಟಿದವು? ಎಂಬ ವಿಷಯವನ್ನು ಸಂಕ್ಷೇಪವಾಗಿ ವಿವೇಚಿಸುವದು ಕರ್ತವ್ಯವಾಗಿರುವದು. ಕೆಲವರು ಅಕ್ಷರ ಸೃಷ್ಟಿಗೆ ಮುಂಚೆ ಮನುಷ್ಯಜಾತಿಯು ಕೇವಲ ಗ್ರಾಮ್ಯಸ್ಥಿತಿಯಲ್ಲಿ ಇತ್ತೆಂದು ಹೇಳುವರು. ಅದು ನಿಜವಲ್ಲ. ವರ್ಣಮಾಲೆಯು ಪ್ರಚಾರದಲ್ಲಿ ಬರುವದಕ್ಕೆ ಮುಂಚೆ ಬಹು ಪ್ರಾಚೀನ ದೇಶಗಳು ಬೇಕಾದಷ್ಟು ಸುಧಾರಣೆಯನ್ನು ಹೊಂದಿದ್ದವು. ಶಿಲ್ಪವಿದ್ಯೆ,

ಕೃಷಿವಿದ್ಯೆ, ಧಾತುವಿದ್ಯೆ, ಸಂಗೀತ, ಧರ್ಮಶಾಸ್ತ್ರ ಮೊದಲಾದವು, ವರ್ಣಮಾಲೆಯು ಪ್ರಚಾರದಲ್ಲಿ ಬಹುವದಕ್ಕಿಂತ ಎಷ್ಟೋ ಕಾಲ ಮುಂಚೆ, ಭರತಖಂಡ, ಕ್ಯಾಲ್‌ಡಿಯ, ಮಿಸರ ಮೊದಲಾದ ದೇಶಗಳಲ್ಲಿ ಬೆಳವಣಿಗೆಯನ್ನು ಹೊಂದಿದ್ದವು. ಪ್ರಕೃತಿಯ (ನಿಸರ್ಗದ) ವಿಶ್ವಮೋಹದ ಚಿತ್ರವು ಯಾವಾಗ ಮನುಷ್ಯಜಾತಿಯ ಕಣ್ಣಿದುರಿಗೆ ಪ್ರಕಾಶಿತವಾಯಿತೋ, ಇಲ್ಲವೆ ಅದರ ರುದ್ರಮೂರ್ತಿಯು ನೋಡುವವರನ್ನು ವ್ಯಾಕುಲ ಮಾಡಿತೋ, ಆವಾಗಲೇ ಪ್ರೀತಿಯಿಂದಾಗಲಿ, ಭಕ್ತಿಯಿಂದಾಗಲಿ ಮನುಷ್ಯನು ತನ್ನ ಉದ್ಗಾರಗಳನ್ನು ಭಾಷೆಯಲ್ಲಿ ವ್ಯಕ್ತಮಾಡುವದಕ್ಕೆ ಪ್ರಯತ್ನಿಸುವನು. ಆರ್ಯ ಋಷಿಗಳ ಕಂಠದಲ್ಲಿ ಉದಾತ್ತ, ಅನುದಾತ್ತ, ಸ್ವರಿತ ಸ್ವರಸಂಯೋಗದಿಂದ ವೈದಿಕ ಸೂಕ್ತಗಳು ಪ್ರತಿಧ್ವನಿತವಾಗುತ್ತಿದ್ದ ಸಮಯದಲ್ಲಿ ಲಿಪಿಯು ಪ್ರಚಾರದಲ್ಲಿರಲಿಲ್ಲ. ಯಾವಾಗ ಪ್ರಾಚೀನಕಾಲದ ಎಕ್ವೇಡಿಯದ ಪುರೋಹಿತರು ಉಚ್ಚ ಸ್ವರದಿಂದ ಆಶೀರ್ವಚನಗಳನ್ನು ಉಚ್ಚರಿಸುತ್ತಿದ್ದರೋ ಆವಾಗಲೂ ಅಕ್ಷರಸೃಷ್ಟಿಯಾಗಿರಲಿಲ್ಲ. ಅಥವಾ ಯಾರು ಟ್ರೋಯು, ನಗರದ ಧ್ವಂಸವಾರ್ತೆಯನ್ನು ಗಾನಮಾಡುತ್ತ ತಿರುಗುತ್ತಿದ್ದರೋ ಅವರೂ ಅಕ್ಷರಗಳನ್ನು ತಿಳಿದಿರಲಿಲ್ಲ. ಅತಿಪ್ರಾಚೀನೇತಿಹಾಸವನ್ನು ನೋಡಲು ಅಕ್ಷರಸೃಷ್ಟಿಯಾಗುವದಕ್ಕೆ ಮುಂಚೆ ಶಿಲ್ಪ, ವಾಣಿಜ್ಯ, ಧರ್ಮಶಾಸ್ತ್ರ ಮೊದಲಾದವು ಬಹಳ ದೇಶಗಳಲ್ಲಿ ಪ್ರಚಲಿತವಾಗಿದ್ದವೆಂದು ತಿಳಿದುಬರುವದು.

ಅಕ್ಷರನಿರ್ಮಾಣವಾಗುವದಕ್ಕೆ ಮುಂಚೆ ಮೇಲೆ ಹೇಳಿದ ವಿಷಯಗಳು ಸಮಾಜದಲ್ಲಿ ಇದ್ದವಷ್ಟೇ ಅಲ್ಲದೆ ಒಂದು ಪ್ರಕಾರದ ಲೇಖನ ಪದ್ಧತಿಯೂ ಇತ್ತು. ಪ್ರತಿಯೊಂದು ಶಬ್ದವನ್ನು ಪ್ರಕಟಮಾಡುವದಕ್ಕೆ ಒಂದೊಂದು ಸ್ವತಂತ್ರ ಚಿಹ್ನವಿತ್ತು. ಆಗ ಬರಹದಲ್ಲಿ ಬಹಳ ತೊಂದರೆಯಿತ್ತು. ಒಂದೊಂದು ಭಾಷೆಯಲ್ಲಿ ಎಷ್ಟೆಷ್ಟು ಶಬ್ದಗಳಿವೆಯೆಂಬದರ ಇಯತ್ತೆಯೇ ಇದ್ದಿಲ್ಲ. ಅಂದಬಳಿಕ ಪ್ರತಿಯೊಂದು ಶಬ್ದದ ಸಲುವಾಗಿ ಒಂದೊಂದು ಚಿಹ್ನವನ್ನು ಉಪಯೋಗಿಸುವದಾದರೆ ಆ ಚಿಹ್ನಗಳು ಅಸಂಖ್ಯವಾಗುವವೆಂಬದು ಸಹಜವಿದೆ. ಆ ಚಿಹ್ನಗಳನ್ನೆಲ್ಲ ಗೊತ್ತು ಮಾಡಿಕೊಳ್ಳುವಲ್ಲಿ ಒಬ್ಬನ ಎಲ್ಲಾ ಆಯುಷ್ಯವು ಕಳೆದು ಹೋಗುತ್ತಿತ್ತು. ಆಗ ಬಹುತರ ಸಮಾಜದಲ್ಲಿ ಒಂದು ವಿವಕ್ಷಿತ ವರ್ಗದವರು ಮಾತ್ರ ಈ ಚಿಹ್ನಗಳನ್ನು ಕಲಿಯುತ್ತಿದ್ದರು ಸಾಧಾರಣ ಜನರು ಅದರ ಗೋಜಿಗೇ ಹೋಗುತ್ತಿರಲಿಲ್ಲ. ಲೇಖನ ಪದ್ಧತಿಯನ್ನು ಬಲ್ಲವರೇ ಶಾಸ್ತ್ರಚರ್ಚೆಯನ್ನು ಮಾಡುತ್ತಿದ್ದರು. ಮಿಸರ, ಅಸೀರಿಯಾ, ಚೀನ ಮೊದಲಾದ ದೇಶಗಳಲ್ಲಿ ಕೇವಲ ಪುರೋಹಿತರಷ್ಟೇ ಲೇಖನ ಪದ್ಧತಿಯನ್ನು ತಿಳಿಯುತ್ತಿದ್ದರು. ಭರತಖಂಡದಲ್ಲಿಯೂ ಬ್ರಾಹ್ಮಣಜಾತಿಯೊಂದೇ ಶಾಸ್ತ್ರಚರ್ಚೆಯನ್ನು ಮಾಡುತ್ತಿತ್ತೆಂದೂ, ಪಾಮರರಿಗೆ ಶಾಸ್ತ್ರಚರ್ಚೆಯಲ್ಲಿ ಅಧಿಕಾರವಿರಲಿಲ್ಲವೆಂದೂ ಇತಿಹಾಸದಿಂದ ತಿಳಿಯುವದು ಈ ಕೊರತೆಯನ್ನು ನೀಗುವದಕ್ಕಾಗಿಯೇ ಅಕ್ಷರಸೃಷ್ಟಿಯಾಯಿತು

ಹಿಂದೆ ಹೇಳಿದಂತೆ ಆಕಾಲದಲ್ಲಿ ಯಾವ ವಸ್ತುವಿನ ವಿಷಯವಾಗಿ ಹೇಳುವ ದಾದರೂ ಆ ವಸ್ತುವಿನ ಚಿತ್ರವನ್ನು ತೆಗೆದು ತೋರಿಸಬೇಕಾಗುತ್ತಿತ್ತು. ಈಗಲೂ ಈ ಪದ್ಧತಿಯ ನಿದರ್ಶನವು ಉಳಿದಿರುವದು. ಚೀನದೇಶದ ಅಕ್ಷರಗಳನ್ನು ನೋಡಿದರೆ ಅವು ವಸ್ತುವಿಶೇಷಗಳ ಚಿತ್ರಗಳ ಹೊರತು ಬೇರೆ ಇಲ್ಲವೆಂದು ಕಂಡುಬರುವದು.

ಪೃಥ್ವಿಯಲ್ಲಿ ಯಾವ ಮನುಷ್ಯವರ್ಗವು ಎಲ್ಲಕ್ಕೂ ಮೊದಲು ಅಕ್ಷರಗಳನ್ನು ಪ್ರಕಟ ಮಾಡಿತೆಂಬದನ್ನು ನಿಶ್ಚಿತವಾಗಿ ಹೇಳುವದಕ್ಕೆ ಬರುವಂತೆ ಇಲ್ಲ. ಅನೇಕರು ಫಿನೀಸಿಯಾ, ದೇಶದಲ್ಲಿ ಎಲ್ಲಕ್ಕೂ ಮೊದಲು ಅಕ್ಷರಗಳು ಹುಟ್ಟಿದವೆಂದು ಹೇಳುವರು. ಕೆಲವರು ಬಾಬಿಲೋನದಲ್ಲಿ ಹುಟ್ಟಿದವೆಂದೂ ಇನ್ನು ಕೆಲವರು ಕ್ರೀಟದೇಶದಲ್ಲಿ ಹುಟ್ಟಿದವೆಂದೂ ಮತ್ತೆ ಕೆಲವರು ಮಿಸರದೇಶದಲ್ಲಿ ಹುಟ್ಟಿದವೆಂದೂ ಹೇಳುವರು. ಪ್ಲೇಟೋ ಪ್ಲೂಟಾರ್ಕ್, ಟ್ಯಾಸಿಟಸ್, ಮೊದಲಾದ ಪಂಡಿತರು ಕೊನೆಯ ಮತವನ್ನು ಅಂಗೀಕರಿಸುವರು. ಈಮತವೇ ಬಹುಮಾನ್ಯವಾಗಿರುವದು. ಆದರೆ ಮಿಸರ ದೇಶದಿಂದ ಮುಂದೆ ಬೇರೆ ಬೇರೆ ದೇಶಗಳಲ್ಲಿ ಆ ಅಕ್ಷರಗಳ ಪ್ರಚಾರವು ಹೇಗೆ ಆಯಿತೆಂಬದನ್ನು ನಿರ್ಣಯಿಸುವದು ಕಠಿಣವಿರುವದು. ಮಿಸರದೇಶವು ಬಹುಪ್ರಾಚೀನಕಾಲದಿಂದ ತಿದ್ದುವಾಟಾದದ್ದು. 'ಮೆಮ್‌ಫಿಸ್' ನಗರವು ಮಿಸರದ ರಾಜಧಾನಿಯಿತ್ತು. ಇದೇ ಸ್ಥಳದಲ್ಲಿ ಇದುವರೆಗೆ ಜಗದ್ವಿಖ್ಯಾತವಾದ ಪಿರಾಮಿಡ ಎಂಬಗೋಪುರಗಳಿರುವವು. ಮುಂದೆ ಪ್ರಾಯಶಃ ಕ್ರೈಸ್ತನ ಜನ್ಮಕ್ಕೆ ಮುಂಚೆ ಎರಡುವರೆ ಸಾವಿರವರ್ಷಗಳ ಪೂರ್ವದಲ್ಲಿ ಬಲಿಷ್ಠವಾದ 'ಸೆಮಿಟಿಕ್' ಜಾತಿಯು ಮಿಸರದೇಶವನ್ನು ಆಕ್ರಮಿಸಿತ್ತು. ಇದೇ ಕಾಲದಲ್ಲಿ ಮಿಸರದೇಶದವರು ನಾಲ್ಕೂ ದಿಕ್ಕಿಗೆ ಹರಿಬಿದ್ದರು. 'ಸೆಮಿಟಿಕ್' ಜನರು "ಅಹ್ಹಿರಿಸ್" ನಗರವನ್ನು ರಾಜಧಾನಿಯನ್ನು ಮಾಡಿಕೊಂಡು ಕ್ರಿ. ಪೂ ೨೨೦೦-೧೭೦೦ ರವರೆಗೆ ರಾಜ್ಯವಾಳಿದರು. ಈ ಕಾಲದಲ್ಲಿ ಉಂಟಾದ ಮಿಸರದೇಶದ ಅಕ್ಷರಗಳು [ಸೇಮಿಟಿಕ್ ಅಕ್ಷರಗಳು] ನಿನೇವ್ಹಾ, ಫಿನಿಸಿಯಾ ಮೊದಲಾದ ದೇಶಗಳಲ್ಲಿ ವ್ಯಾಪ್ತವಾಗಿದ್ದವು.

ಈ ಮೇರೆಗೆ ಉಂಟಾದ ಮೂಲ ಸೆಮಿಟಿಕ್ ಅಕ್ಷರಗಳು ಎರಡು ಪಂಗಡವಾಗಿ ದಕ್ಷಿಣ ಸೆಮಿಟಿಕ್ ಮತ್ತು ಫಿನೀಸಿಯನ್ ಎಂಬ ಅಕ್ಷರಗಳನ್ನು ಹುಟ್ಟಿಸಿದವು. ಈ ದಕ್ಷಿಣ ಸೆಮಿಟಿಕ್ ಅಕ್ಷರಗಳು ಸ್ವಲ್ಪ ಹೆಚ್ಚುಕಡಿಮೆಯಾಗಿ ಪ್ರಾಚೀನ ಭಾರತದ ಅಕ್ಷರಗಳು [ಅಶೋಕ ಅಕ್ಷರಗಳು] ಆಗಿ ಪರಿಣಮಿಸಿದವು. ಅಶೋಕ ಅಕ್ಷರಗಳು ನಾಗರಿ, ಪಾಲಿ, ದ್ರಾವಿಡೀಯ, ಎಂದು ಮೂರು ಪಂಗಡವಾದವು. ನಾಗರೀ-ಅಕ್ಷರಗಳಿಂದ ತೀಬೇಟೀಯ, ಗುಜರಾಥೀ, ಕಾಶ್ಮೀರೀ, ಮಹಾರಾಷ್ಟ್ರೀ, ಬಂಗಾಲೀ, ಅಕ್ಷರಗಳು ಹುಟ್ಟಿದವು. ಪಾಲೀ ಅಕ್ಷರಗಳಿಂದ ಬ್ರಹ್ಮ, ಶ್ಯಾಮ, ಯವದ್ವೀಪ, ಸಿಂಹಲ, ಕೋರಿಯಾ ದೇಶಗಳ ಅಕ್ಷರಗಳು ಹುಟ್ಟಿದವು. ಮಲೆಯಾಳ, ತೆಲುಗು, ಕನ್ನಡ,

ತಮಿಳು ಅಕ್ಷರಗಳು ಡ್ರಾವಿಡೀಯ ಅಕ್ಷರಗಳಿಂದ ಹುಟ್ಟಿದವು. ಕಾಲಾನುಸಾರವಾಗಿ ನಾನಾ ಪ್ರಕಾರವಾಗಿ ಅಕ್ಷರಗಳಲ್ಲಿ ಹೆಚ್ಚುಕಡಿಮೆಗಳಾದವು. ಈಗ ಅವುಗಳ ರಚನೆಯಲ್ಲಿ ವಿಶೇಷ ಹೆಚ್ಚುಕಡಿಮೆಗಳು ಕಂಡುಬಂದರೂ ಅವೆಲ್ಲ ಅಕ್ಷರಗಳು ಒಂದೇ ಮೂಲ ಅಕ್ಷರಗಳಿಂದ ಉತ್ಪನ್ನವಾದಂಥವು. ಭರತಖಂಡದ ಅತಿ ಪ್ರಾಚೀನಕಾಲದಲ್ಲಿ ಕೊರೆದ ಲಿಪಿಗಳ ಅಕ್ಷರಗಳಿಂದೇ ಈ ದೇಶದ ಎಲ್ಲ ಅಕ್ಷರಗಳ ಉತ್ಪತ್ತಿಯಾಗಿರುವದು. ಅಶೋಕ ಮಹಾರಾಜನ ಕಾಲದಲ್ಲಿ ಈ ಲಿಪಿಗಳು ಕೊರೆಯಲ್ಪಟ್ಟಿರುವವು. ಅಶೋಕನು ಕೊರೆಯಿಸಿದ ಅಕ್ಷರಗಳು ಎರಡು ಸಾವಿರ ವರ್ಷಗಳಾದರೂ ಇದುವರೆಗೆ ಅಚ್ಚಳಿಯದೆ ಈವೊತ್ತು ಕೊರೆದಂತೆ ಕಾಣುತ್ತಿರುವವು. ಪೃಥ್ವಿಯಲ್ಲಿ ನಾನಾ ದೇಶಗಳಲ್ಲಿ ನಾನಾಪ್ರಕಾರದ ಅಕ್ಷರಗಳು ಪ್ರಚಲಿತವಾಗಿದ್ದರೂ ಅಶೋಕ ಅಕ್ಷರಗಳಂತೆ ಸುಂದರ, ನಿರಲಂಕಾರ, ಸರಲ ಅಕ್ಷರಗಳು ಯಾವವೂ ಇಲ್ಲ. ಅಶೋಕ ಲಿಪಿಯು ಎರಡು ಪ್ರಕಾರವಾಗಿ ಬರೆಯಲ್ಪಟ್ಟಿರುವದು. ಒಂದು ಪ್ರಕಾರಕ್ಕೆ ಆರ್ಯಪಾಳಿ (Ariano pali) ಇನ್ನೊಂದು ಪ್ರಕಾರಕ್ಕೆ ಭಾರತೀಯ ಪಾಲಿ (Inda pali) ಎಂದು ಹೆಸರು. ಆರ್ಯಪಾಲಿ ಮತ್ತು ಭಾರತೀಯ ಪಾಲಿ ಅಕ್ಷರಗಳು ಕ್ರಮವಾಗಿ ಉತ್ತರ ಅಶೋಕ ಅಕ್ಷರ ಮತ್ತು ಭಾರತೀಯ ಅಶೋಕ ಅಕ್ಷರ ಎಂದು ಕರೆಯಲ್ಪಡುವವು. ಆರ್ಯಪಾಲಿ ಅಕ್ಷರಗಳು ಖರೋಷ್ಟ್ರಿ ಅಥವಾ ಇಂಡೋಬಾಷ್ಟ್ರಿಯನ್ (Indo Bastrian) ಅಕ್ಷರಗಳೆಂದು ಪ್ರಸಿದ್ಧವಾಗಿರುವವು. "ಸಾಹಾವಾಜಗಿರಿ" ಮತ್ತು "ಮಾನಸೇರಾ" ಎಂಬ ಎರಡು ಸ್ಥಳಗಳಲ್ಲಿ ದೊರೆತ ಅಶೋಕನ ಶಿಲಾಶಾಸನಗಳು ಉತ್ತರ ಅಶೋಕ ಅಕ್ಷರಗಳಲ್ಲಿ ಬರೆಯಲ್ಪಟ್ಟಿರುವವು.

ಈ ಅಶೋಕಲಿಪಿಯ ಉತ್ಪತ್ತಿಯ ಸಂಬಂಧವಾಗಿ ಪಾಶ್ಚಾತ್ಯ ಪಂಡಿತರು ಬೇರೆ ಬೇರೆ ಮತಗಳನ್ನು ಪ್ರಕಟಿಸಿರುವರು. ಕೆಲವರು ಅವು ಗ್ರೀಕ ಅಕ್ಷರಗಳಿಂದ ಹುಟ್ಟಿದವೆಂದು ಹೇಳುವರು. ಕೆಲವರು ಸೆಮಿಟಿಕ್ ಅಕ್ಷರಗಳೇ ರೂಪಾಂತರವಾಗಿ ಅಶೋಕ ಅಕ್ಷರಗಳಾಗಿ ಪರಿಣಮಿಸಿದವೆಂದು ಹೇಳುವರು. ಪ್ರೊಫೆಸರ ಬೇಬಾರ, ಡಾಕರ್ ಬುಹ್ಲರ್ ಮೊದಲಾದವರು ಭಾರತೀಯ ಅಕ್ಷರಗಳಲ್ಲಿ ಎಷ್ಟೋ ಅಸೀರಿಯದ ಅಕ್ಷರಕ್ಕೆ ಹೋಲುವವೆಂದೂ, ಕ್ರಿ. ಪೂ. ೬ನೆಯ ಮತ್ತು ೭ನೆಯ ಶತಮಾನದಲ್ಲಿ ಪಾಲಿಸ್ತೈನದಲ್ಲಿದ್ದ ಫೋಶಾ, ಅನುಶಾಸನಕ್ಕೆ ಹೋಲುವವೆಂದೂ ಹೇಳುವರು. ಇಷ್ಟರಿಂದಲೇ ಅವರು ಉತ್ತರ ಸೆಮಿಟಿಕ್ ಅಕ್ಷರಗಳಿಂದ ಭಾರತೀಯ ಅಕ್ಷರಗಳು ಹುಟ್ಟಿದವೆಂದು ಹೇಳುವರು. ಇದಕ್ಕೆ ವಿರುದ್ಧವಾಗಿ "ಬಿಸಾಕ್‌ಬೇಲಾನ್" ಎಂಬವರು ದಕ್ಷಿಣ ಸೆಮಿಟಿಕ್ ಅಕ್ಷರಗಳಿಂದೇ ಭಾರತೀಯ ಅಕ್ಷರಗಳು ಉತ್ಪನ್ನವಾಗಿರುತ್ತವೆಂದು ತೋರಿಸುವದಕ್ಕೆ ಬಹಳ ಪ್ರಯತ್ನ ಮಾಡಿರುವರು. ಡಾಕ್ಟರ ರಿಸ್‌ಡೇಹೆಡ್ ಎಂಬವರು ಎರಡು ಮತಗಳಿಗೂ ಅನುಮೋದನ ಕೊಡುವದಿಲ್ಲ. ಅವರು ಉತ್ತರ ಇಲ್ಲವೆ ದಕ್ಷಿಣ ಸೆಮಿಟಿಕ್ ಜಾತಿಗಳು ಬಹು ಪೂರ್ವಕಾಲದಲ್ಲಿ ಯುಫ್ರೆಟಿಸ್ ಸಮೀ

ಹಿಂದೆ ಹೇಳಿದಂತೆ ಆಕಾಲದಲ್ಲಿ ಯಾವ ವಸ್ತುವಿನ ವಿಷಯವಾಗಿ ಹೇಳುವ ದಾದರೂ ಆ ವಸ್ತುವಿನ ಚಿತ್ರವನ್ನು ತೆಗೆದು ತೋರಿಸಬೇಕಾಗುತ್ತಿತ್ತು. ಈಗಲೂ ಈ ಪದ್ಧತಿಯ ನಿದರ್ಶನವು ಉಳಿದಿರುವದು. ಚೀನದೇಶದ ಅಕ್ಷರಗಳನ್ನು ನೋಡಿದರೆ ಅವು ವಸ್ತುವಿಶೇಷಗಳ ಚಿತ್ರಗಳ ಹೊರತು ಬೇರೆ ಇಲ್ಲವೆಂದು ಕಂಡುಬರುವದು.

ಪೃಥ್ವಿಯಲ್ಲಿ ಯಾವ ಮನುಷ್ಯವರ್ಗವು ಎಲ್ಲಕ್ಕೂ ಮೊದಲು ಅಕ್ಷರಗಳನ್ನು ಪ್ರಕಟ ಮಾಡಿತೆಂಬದನ್ನು ನಿಶ್ಚಿತವಾಗಿ ಹೇಳುವದಕ್ಕೆ ಬರುವಂತೆ ಇಲ್ಲ. ಅನೇಕರು ಫಿನೀಸಿಯಾ, ದೇಶದಲ್ಲಿ ಎಲ್ಲಕ್ಕೂ ಮೊದಲು ಅಕ್ಷರಗಳು ಹುಟ್ಟಿದವೆಂದು ಹೇಳುವರು. ಕೆಲವರು ಬಾಬಿಲೋನದಲ್ಲಿ ಹುಟ್ಟಿದವೆಂದೂ ಇನ್ನು ಕೆಲವರು ಕ್ರೀಟದೇಶದಲ್ಲಿ ಹುಟ್ಟಿದವೆಂದೂ ಮತ್ತೆ ಕೆಲವರು ಮಿಸರದೇಶದಲ್ಲಿ ಹುಟ್ಟಿದವೆಂದೂ ಹೇಳುವರು. ಪ್ಲೇಟೋ ಪ್ಲೂಟಾರ್ಕ್, ಟ್ಯಾಸಿಟಸ್, ಮೊದಲಾದ ಪಂಡಿತರು ಕೊನೆಯ ಮತವನ್ನು ಅಂಗೀಕರಿಸುವರು. ಈಮತವೇ ಬಹುಮಾನ್ಯವಾಗಿರುವದು. ಆದರೆ ಮಿಸರ ದೇಶದಿಂದ ಮುಂದೆ ಬೇರೆ ಬೇರೆ ದೇಶಗಳಲ್ಲಿ ಆ ಅಕ್ಷರಗಳ ಪ್ರಚಾರವು ಹೇಗೆ ಆಯಿತೆಂಬದನ್ನು ನಿರ್ಣಯಿಸುವದು ಕಠಿಣವಿರುವದು. ಮಿಸರದೇಶವು ಬಹುಪ್ರಾಚೀನಕಾಲದಿಂದ ತಿದ್ದುಪಾಟಾದದ್ದು. ಮೆಮ್‌ಫಿಸ್ ನಗರವು ಮಿಸರದ ರಾಜಧಾನಿಯಿತ್ತು. ಇದೇ ಸ್ಥಳದಲ್ಲಿ ಇದುವರೆಗೆ ಜಗದ್ವಿಖ್ಯಾತವಾದ ಪಿರಾಮಿಡ ಎಂಬಗೋಪುರಗಳಿರುವವು. ಮುಂದೆ ಪ್ರಾಯಶಃ ಕ್ರೈಸ್ತನ ಜನ್ಮಕ್ಕೆ ಮುಂಚೆ ಎರಡುವರೆ ಸಾವಿರವರ್ಷಗಳ ಪೂರ್ವದಲ್ಲಿ ಬಲಿಷ್ಠವಾದ ಸೆಮಿಟಿಕ್ ಜಾತಿಯು ಮಿಸರದೇಶವನ್ನು ಆಕ್ರಮಿಸಿತ್ತು. ಇದೇ ಕಾಲದಲ್ಲಿ ಮಿಸರದೇಶದವರು ನಾಲ್ಕೂ ದಿಕ್ಕಿಗೆ ಹರಿಬಿದ್ದರು. ಸೆಮಿಟಿಕ್ ಜನರು "ಅವ್ಹಿರಿಸ್" ನಗರವನ್ನು ರಾಜಧಾನಿಯನ್ನು ಮಾಡಿಕೊಂಡು ಕ್ರಿ. ಪೂ ೨೨೦೦-೧೭೦೦ ರವರೆಗೆ ರಾಜ್ಯವಾಳಿದರು. ಈ ಕಾಲದಲ್ಲಿ ಉಂಟಾದ ಮಿಸರದೇಶದ ಅಕ್ಷರಗಳು [ಸೇಮಿಟಿಕ್ ಅಕ್ಷರಗಳು] ನಿನೇವ್ಹಾ, ಫಿನಿಸಿಯಾ ಮೊದಲಾದ ದೇಶಗಳಲ್ಲಿ ವ್ಯಾಪ್ತವಾಗಿದ್ದವು.

ಈ ಮೇರೆಗೆ ಉಂಟಾದ ಮೂಲ ಸೆಮಿಟಿಕ್ ಅಕ್ಷರಗಳು ಎರಡು ಪಂಗಡವಾಗಿ ದಕ್ಷಿಣ ಸೆಮಿಟಿಕ್ ಮತ್ತು ಫಿನೀಸಿಯನ್ ಎಂಬ ಅಕ್ಷರಗಳನ್ನು ಹುಟ್ಟಿಸಿದವು. ಈ ದಕ್ಷಿಣ ಸೆಮಿಟಿಕ್ ಅಕ್ಷರಗಳು ಸ್ವಲ್ಪ ಹೆಚ್ಚುಕಡಿಮೆಯಾಗಿ ಪ್ರಾಚೀನ ಭಾರತದ ಅಕ್ಷರಗಳು [ಅಶೋಕ ಅಕ್ಷರಗಳು] ಆಗಿ ಪರಿಣಮಿಸಿದವು. ಅಶೋಕ ಅಕ್ಷರಗಳು ನಾಗರಿ, ಪಾಲಿ, ದ್ರಾವಿಡೀಯ, ಎಂದು ಮೂರು ಪಂಗಡವಾದವು. ನಾಗರೀ-ಅಕ್ಷರಗಳಿಂದ ತೀಬೇಟೀಯ, ಗುಜರಾಥೀ, ಕಾಶ್ಮೀರೀ, ಮಹಾರಾಷ್ಟ್ರೀ, ಬಂಗಾಲೀ, ಅಕ್ಷರಗಳು ಹುಟ್ಟಿದವು. ಪಾಲೀ ಅಕ್ಷರಗಳಿಂದ ಬ್ರಹ್ಮ, ಶ್ಯಾಮ, ಯವದ್ವೀಪ, ಸಿಂಹಲ, ಕೋಲಿಯಾ ದೇಶಗಳ ಅಕ್ಷರಗಳು ಹುಟ್ಟಿದವು. ಮಲೆಯಾಳ, ತೆಲುಗು, ಕನ್ನಡ,

ತಮಿಳು ಅಕ್ಷರಗಳು ಡ್ರಾವಿಡೀಯ ಅಕ್ಷರಗಳಿಂದ ಹುಟ್ಟಿದವು. ಕಾಲಾನುಸಾರವಾಗಿ ನಾನಾ ಪ್ರಕಾರವಾಗಿ ಅಕ್ಷರಗಳಲ್ಲಿ ಹೆಚ್ಚುಕಡಿಮೆಗಳಾದವು. ಈಗ ಅವುಗಳ ರಚನೆಯಲ್ಲಿ ವಿಶೇಷ ಹೆಚ್ಚುಕಡಿಮೆಗಳು ಕಂಡುಬಂದರೂ ಅವೆಲ್ಲ ಅಕ್ಷರಗಳು ಒಂದೇ ಮೂಲ ಅಕ್ಷರಗಳಿಂದ ಉತ್ಪನ್ನವಾದಂಥವು. ಭರತಖಂಡದ ಅತಿ ಪ್ರಾಚೀನಕಾಲದಲ್ಲಿ ಕೊರೆದ ಲಿಪಿಗಳ ಅಕ್ಷರಗಳಿಂದೇ ಈ ದೇಶದ ಎಲ್ಲ ಅಕ್ಷರಗಳ ಉತ್ಪತ್ತಿಯಾಗಿರುವದು. ಅಶೋಕ ಮಹಾರಾಜನ ಕಾಲದಲ್ಲಿ ಈ ಲಿಪಿಗಳು ಕೊರೆಯಲ್ಪಟ್ಟಿರುವವು. ಅಶೋಕನು ಕೊರೆಯಿಸಿದ ಅಕ್ಷರಗಳು ಎರಡು ಸಾವಿರ ವರ್ಷಗಳಾದರೂ ಇದುವರೆಗೆ ಅಚ್ಚಳಿಯದೆ ಈವೊತ್ತು ಕೊರೆದಂತೆ ಕಾಣುತ್ತಿರುವವು. ಪೃಥ್ವಿಯಲ್ಲಿ ನಾನಾ ದೇಶಗಳಲ್ಲಿ ನಾನಾಪ್ರಕಾರದ ಅಕ್ಷರಗಳು ಪ್ರಚಲಿತವಾಗಿದ್ದರೂ ಅಶೋಕ ಅಕ್ಷರಗಳಂತೆ ಸುಂದರ, ನಿರಲಂಕಾರ, ಸರಲ ಅಕ್ಷರಗಳು ಯಾವವೂ ಇಲ್ಲ. ಅಶೋಕ ಲಿಪಿಯು ಎರಡು ಪ್ರಕಾರವಾಗಿ ಬರೆಯಲ್ಪಟ್ಟಿರುವದು. ಒಂದು ಪ್ರಕಾರಕ್ಕೆ ಆರ್ಯಪಾಳಿ (Ariano pali) ಇನ್ನೊಂದು ಪ್ರಕಾರಕ್ಕೆ ಭಾರತೀಯ ಪಾಲಿ (Inda pali) ಎಂದು ಹೆಸರು. ಆರ್ಯಪಾಲಿ ಮತ್ತು ಭಾರತೀಯ ಪಾಲಿ ಅಕ್ಷರಗಳು ಕ್ರಮವಾಗಿ ಉತ್ತರ ಅಶೋಕ ಅಕ್ಷರ ಮತ್ತು ಭಾರತೀಯ ಅಶೋಕ ಅಕ್ಷರ ಎಂದು ಕರೆಯಲ್ಪಡುವವು. ಆರ್ಯಪಾಲಿ ಅಕ್ಷರಗಳು ಖರೋಷ್ಟ್ರಿ ಅಥವಾ ಇಂಡೋಬಾಸ್ಟ್ರಿಯನ್ (Indo Bastrian) ಅಕ್ಷರಗಳೆಂದು ಪ್ರಸಿದ್ಧವಾಗಿರುವವು. "ಸಾಹಾವಾಜಗಿರಿ" ಮತ್ತು "ಮಾನಸೇರಾ" ಎಂಬ ಎರಡು ಸ್ಥಳಗಳಲ್ಲಿ ದೊರೆತ ಅಶೋಕನ ಶಿಲಾಶಾಸನಗಳು ಉತ್ತರ ಅಶೋಕ ಅಕ್ಷರಗಳಲ್ಲಿ ಬರೆಯಲ್ಪಟ್ಟಿರುವವು.

ಈ ಅಶೋಕಲಿಪಿಯ ಉತ್ಪತ್ತಿಯ ಸಂಬಂಧವಾಗಿ ಪಾಶ್ಚಾತ್ಯ ಪಂಡಿತರು ಬೇರೆ ಬೇರೆ ಮತಗಳನ್ನು ಪ್ರಕಟಿಸಿರುವರು. ಕೆಲವರು ಅವು ಗ್ರೀಕ ಅಕ್ಷರಗಳಿಂದ ಹುಟ್ಟಿದವೆಂದು ಹೇಳುವರು. ಕೆಲವರು ಸೆಮಿಟಿಕ್ ಅಕ್ಷರಗಳೇ ರೂಪಾಂತರವಾಗಿ ಅಶೋಕ ಅಕ್ಷರಗಳಾಗಿ ಪರಿಣಮಿಸಿದವೆಂದು ಹೇಳುವರು. ಪ್ರೊಫೆಸರ ಬೇಬಾರ, ಡಾಕರ್ ಬುಹ್ಲರ್ ಮೊದಲಾದವರು ಭಾರತೀಯ ಅಕ್ಷರಗಳಲ್ಲಿ ಎಷ್ಟೋ ಅಸೀರಿಯದ ಅಕ್ಷರಕ್ಕೆ ಹೋಲುವವೆಂದೂ, ಕ್ರಿ. ಪೂ. ೬ನೆಯ ಮತ್ತು ೭ನೆಯ ಶತಮಾನದಲ್ಲಿ ಪಾಲಿಸ್ತೈನದಲ್ಲಿದ್ದ ಮೋಶಾ, ಅನುಶಾಸನಕ್ಕೆ ಹೋಲುವವೆಂದೂ ಹೇಳುವರು. ಇಷ್ಟರಿಂದಲೇ ಅವರು ಉತ್ತರ ಸೆಮಿಟಿಕ್ ಅಕ್ಷರಗಳಿಂದ ಭಾರತೀಯ ಅಕ್ಷರಗಳು ಹುಟ್ಟಿದವೆಂದು ಹೇಳುವರು. ಇದಕ್ಕೆ ವಿರುದ್ಧವಾಗಿ "ಜಿಸಾಕ್‌ಬೇಲಾನ್" ಎಂಬವರು ದಕ್ಷಿಣ ಸೆಮಿಟಿಕ್ ಅಕ್ಷರಗಳಿಂದೇ ಭಾರತೀಯ ಅಕ್ಷರಗಳು ಉತ್ಪನ್ನವಾಗಿರುತ್ತವೆಂದು ತೋರಿಸುವದಕ್ಕೆ ಬಹಳ ಪ್ರಯತ್ನ ಮಾಡಿರುವರು. ಡಾಕ್ಟರ ರಿಸ್‌ಡೇಹೆಡ್ ಎಂಬವರು ಎರಡು ಮತಗಳಿಗೂ ಅನುಮೋದನ ಕೊಡುವದಿಲ್ಲ. ಅವರು ಉತ್ತರ ಇಲ್ಲವೆ ದಕ್ಷಿಣ ಸೆಮಿಟಿಕ್ ಜಾತಿಗಳು ಬಹು ಪೂರ್ವಕಾಲದಲ್ಲಿ ಯುಪ್ರೆಟಿನ್ ಸಮೀ

ಪದ ಪ್ರದೇಶದಲ್ಲಿದ್ದು ಅಲ್ಲಿಂದ ಭಾರತೀಯ ಅಕ್ಷರಗಳು ಪ್ರಚಲಿತವಾದವೆಂದು ಹೇಳುವರು.

ಇತಿಹಾಸವನ್ನು ನೋಡಲು ತಿಳಿದುಬರುವದೇನಂದರೆ:— ಕ್ರಿ. ಪೂ. ೭ ನೆಯ ಶತಮಾನದಲ್ಲಿ ಭರತಖಂಡದ ಪಶ್ಚಿಮ ತೀರದಲ್ಲಿರುವ ಸೌವೀರ, ಸುಪಾರಕ, ಬಾರಕಚ್ಛ (ಇದಕ್ಕೆ ಎರಡನೆ ಹೆಸರು ಭೃಗುಕ್ಷೇತ್ರ) ಎಂಬ ಬಂದರಗಳಿಗೂ, ಬಾಬಿಲನಕ್ಕೂ ಬಹಳ ವ್ಯಾಪಾರವು ನಡೆಯುತ್ತಿತ್ತು; ಭರತಖಂಡದ ಪಶ್ಚಿಮತೀರದಲ್ಲಿದ್ದ ದ್ರವಿಡ ಜಾತಿಯೇ ಎಲ್ಲಕ್ಕೂ ಮೊದಲು ಬಾಬಿಲನದಿಂದ ಸೆಮಿಟಿಕದ ಪೂರ್ವದಲ್ಲಿ ಎಕ್ವೇಡಿಯರಲ್ಲಿ ಪ್ರಚಲಿತವಾಗಿದ್ದ ವರ್ಣಮಾಲೆಯನ್ನು ಭರತಖಂಡಕ್ಕೆ ತಂದಿತು, ಇದೇ ಲಿಪಿಯು ಸುಮಾರು ಸಾವಿರ ವರ್ಷಗಳ ತರುವಾಯ ಭರತಖಂಡದ ಪ್ರಸಿದ್ಧವಾದ ಬ್ರಹ್ಮಲಿಪಿಯಾಗಿ ಪರಿಣಮಿಸಿತು" ಈ ವಿಷಯದಲ್ಲಿ ಪರದೇಶದ ಪಂಡಿತರ ಐಕಮತ್ಯವಿಲ್ಲ. ನಾವು ತಿಳಿದದ್ದೇನಂದರೆ—ಆರ್ಯಜನರ ಪ್ರಾಚೀನ ವಾಸಭೂಮಿಯೇ ಅಶೋಕ ಅಕ್ಷರಗಳ ಜನ್ಮಸ್ಥಾನವು. ಮುಂದೆ ಕಾಲಾನುಸಾರವಾಗಿ ಸೆಮಿಟಿಕ್ ಜಾತಿಯ ಸಂಸರ್ಗದಿಂದ ಅವುಗಳಲ್ಲಿ ಎಷ್ಟೋ ಹೆಚ್ಚುಕಡಿಮೆಗಳಾದ ಮೇಲೆ ಅವು ಭಾರತೀಯ ಅಶೋಕ ಅಕ್ಷರಗಳಾಗಿ ಪರಿಣಮಿಸಿದವು.

ಕೆಲವರು ಈ ದೇಶದಲ್ಲಿ ಎಷ್ಟು ಪ್ರಕಾರದ ಅಕ್ಷರಗಳು ಪ್ರಚಲಿತವಾಗಿ ಇರುವವೋ ಅವುಗಳೆಲ್ಲೆಲ್ಲ ಅಶೋಕ ಅಕ್ಷರಗಳೇ ಎಲ್ಲಕ್ಕೂ ಪ್ರಾಚೀನವೆಂದೂ ಅವುಗಳ ಪೂರ್ವದಲ್ಲಿ ಲೇಖನವೇ ಇರಲಿಲ್ಲವೆಂದೂ ನಂಬುವರು. ಆದರೆ ಈ ಮತವು ಸಯುಕ್ತಿಕವೆಂದು ಹೇಳಲಾಗುವದಿಲ್ಲ. ಕ್ರಿ. ಪೂ. ೩ ನೆಯ ಶತಮಾನದಲ್ಲಿ ಅಶೋಕ ಅಕ್ಷರಗಳು ಈ ದೇಶದಲ್ಲಿ ಪ್ರಚಲಿತವಾಗಿದ್ದವು. ಅಶೋಕ ಮಹಾರಾಜನ ಕಾಲಕ್ಕಿಂತ ಬಹು ಪೂರ್ವಕಾಲದಲ್ಲಿ ಭರತಖಂಡದಲ್ಲಿ ದರ್ಶನಗಳು, ಧರ್ಮಶಾಸ್ತ್ರಗಳು ಮೊದಲಾದ ವಿಷಯಗಳು ಉನ್ನತಿಯನ್ನು ಹೊಂದಿದ್ದವು. ಮತ್ತು ಅದಕೊಡನೆ ಲೇಖನ ಪದ್ಧತಿಯೂ ಪ್ರಚಲಿತವಾಗಿತ್ತು. ಹಿಂದೂ ಗ್ರಂಥಗಳಲ್ಲಿಯೂ ಬೌದ್ಧಗ್ರಂಥಗಳಲ್ಲಿಯೂ ಈ ವಿಷಯದಲ್ಲಿ ಅನೇಕ ಆಧಾರಗಳು ದೊರೆಯುವವು. ವೈದಿಕ ಸೂಕ್ತಗಳು ರಚಿತವಾದ ಕಾಲದಲ್ಲಿ ಲೇಖನಪದ್ಧತಿಯು ಇದ್ದಿಲ್ಲವೆಂಬದು ಒಪ್ಪಬೇಕಾದದ್ದೇ. ಆಗ ಆ ಸೂಕ್ತಗಳನ್ನು ಜನರು ಪರಮುಖದಿಂದ ಕೇಳಿ ಸ್ಮರಣ ಸಹಾಯದಿಂದೇ ಕಾದುಕೊಂಡಿದ್ದರು. ಆದ್ದರಿಂದ ಅವಕ್ಕೆ ಶ್ರುತಿ, ಎಂಬ ಹೆಸರುಂಟಾಯಿತು. ಆದರೆ ಮುಂದೆ ಸ್ವಲ್ಪ ದಿವಸಗಳಲ್ಲಿ ಲೇಖನಪದ್ಧತಿಯು ವಿಷಯವಾಗಿ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖವಿರುವದು. ಪಾಣಿನಿವ್ಯಾಕರಣವು ಕ್ರಿ. ಪೂ. ೪ ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತು. ಅದರ ಒಂದು ಸೂತ್ರದಲ್ಲಿ 'ಲಿಪಿಕರ' ಎಂಬ ಶಬ್ದವು ಬಂದಿರುವದು. ಆಗ ಒಂದುಮೇಲೆ ಲೇಖನವು ಪ್ರಚಾರದಲ್ಲಿಲ್ಲದಿದ್ದರೆ ಈ ಶಬ್ದವು ಎಂದೂ

ಪ್ರಯೋಗಿಸಲ್ಪಡುತ್ತಿರಲಿಲ್ಲ. ಮನುಸಂಹಿತೆಯು ೮ ನೆಯ ಅಧ್ಯಾಯದ ೧೬೮ ನೆಯ ಶ್ಲೋಕದಲ್ಲಿ 'ಲೇಖಿತ' ಎಂಬ ಶಬ್ದದ ಉಲ್ಲೇಖವುಂಟು. ಇದರಿಂದ ಮನುವಿನ ಕಾಲದಲ್ಲಿಯೂ ಲೇಖನದ ಪ್ರಚಾರವಿತ್ತೆಂದು ಕಂಡುಬರುವದು. ಇದರಂತೆ ಮಹಾಭಾರತದಲ್ಲೂ 'ವೇದಲೇಖಿಕ' ಎಂಬ ಶಬ್ದದ ಪ್ರಯೋಗವುಂಟು. 'ಲಲಿತವಿಸ್ತರ' ವೆಂಬ ಪ್ರಾಚೀನ ಬೌದ್ಧಗ್ರಂಥದಲ್ಲಿ ೬೪ ಪ್ರಕಾರದ ಲಿಪಿಗಳ ಉಲ್ಲೇಖವಿರುವದು. ಬಹುಶ: ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಲಲಿತವಿಸ್ತರ ಗ್ರಂಥವು ಬರೆಯಲ್ಪಟ್ಟಿತೆಂದು ಅನೇಕರು ಊಹಿಸುತ್ತಾರೆ.

ಪ್ರಾಚೀನ ಸಂಸ್ಕೃತ ವಾಙ್ಮಯದಲ್ಲಿರುವಂತೆ ಪ್ರಾಚೀನಪಾಲೀ ಗ್ರಂಥಗಳಲ್ಲಿಯೂ ಅಶೋಕಲಿಪಿಯು ಪ್ರಚಾರದಲ್ಲಿ ಬರುವದಕ್ಕೆ ಮುಂಚೆ ಲೇಖನಪದ್ಧತಿಯ ಉಲ್ಲೇಖವು ಬಹಳ ಸ್ಥಳಗಳಲ್ಲಿ ಕಂಡು ಬರುವದು. ಸೂತ್ರಪಿಡಕವೆಂಬ ಗ್ರಂಥದ ಪ್ರಥಮಭಾಗದಲ್ಲಿ 'ಶೀಲ'ವೆಂಬ ಹೆಸರಿನ ಧರ್ಮಶಾಸ್ತ್ರವು ಬಂದಿರುವದು. ಈ ಶೀಲ ಗ್ರಂಥವು ಕ್ರಿ. ಪೂ. ೪೫೦ರಲ್ಲಿ ಸಂಕಲಿತವಾಯಿತೆಂದು ಐತಿಹಾಸಿಕರು ಊಹಿಸುತ್ತಾರೆ. ಬೌದ್ಧ ಭಿಕ್ಷುಗಳಲ್ಲಿ ನಿಷಿದ್ಧವಾದ ವಿಷಯಗಳಾವವು? ಎಂಬ ವಿಷಯದ ವಿವೇಚನೆಯು ಶೀಲಗ್ರಂಥದಲ್ಲಿರುವದು. ನಿಷಿದ್ಧವಾದವುಗಳ ಪಟ್ಟಿಯಲ್ಲಿ 'ಅಕ್ಷರಿಕಾ' ಎಂಬ ಆ ಕಾಲದ ಒಂದು ಆಟದ ಹೆಸರಿನ ಉಲ್ಲೇಖವಿರುವದು. 'ಅಕ್ಷರಿಕಾ' ಎಂಬದು ಒಂದು ಆಟವಾದ ಮೇಲೆ ಅಕ್ಷರಜ್ಞಾನವು ಜನರಲ್ಲಿ ಪ್ರಚಲಿತವಾಗಿತ್ತೆಂದು ತೋರುವದು. ವಿನಯವಿಟಕವೆಂಬ ಪ್ರಾಚೀನ ಪಾಲಿಗ್ರಂಥದ ೪ನೇ ಭಾಗದ ಒಂದು ಸೂತ್ರದಲ್ಲಿ ಲೇಖನವು ಶಿಲ್ಪವಿದ್ಯೆಯಲ್ಲಿ ಎಣಿಸಲ್ಪಟ್ಟಿರುವದು. ಬೌದ್ಧಯುಗದಲ್ಲಿ ಲಿಪಿವಿದ್ಯೆಯು ಉಪಜೀವನದ ನಿಕೃಷ್ಟ ಉಪಾಯಗಳಲ್ಲಿ ಒಂದಾದ್ದರಿಂದ ಈ ಪ್ರಕಾರ ಎಣಿಸಿರಬಹುದು. ಆ ಕಾಲದಲ್ಲಿ ಯಾವನಾದರೂ ದುರ್ಬುದ್ಧಿಯಿಂದ ಸಮಾಜದಲ್ಲಿ ಆತ್ಮಹತ್ಯೆಯನ್ನು ಸಮರ್ಥನಮಾಡುವ ಗ್ರಂಥವನ್ನು ಬರೆದರೆ ಅವನಿಗೆ ಆ ಗ್ರಂಥದ ಅಕ್ಷರಗಳ ಸಂಖ್ಯೆಯಿಂದ ಶಾಸನವಾಗುತ್ತಿತ್ತೆಂದು ಪ್ರವಾದವಿದೆ. * ಬಿಂಬಿಸಾರನೆಂಬ ರಾಜನು ತನ್ನ ಆಳಿಕೆಯ ಕಾಲದಲ್ಲಿ ಗಾಂಧಾರ ದೇಶದ ರಾಜನಾದ 'ಪಕ್ಕುಸತಿ'ಯ ಬಳಿಗೆ ಒಂದು ಪತ್ರವನ್ನು ಕಳಿಸಿದ್ದನು. ಈ ಪತ್ರವನ್ನು ಚಿನ್ನದ ತಗಡಿನ (೬ ಘೂಟು×೧೧ಘೂ. ೫ ಇ.) ಮೇಲೆ ಕೊರೆಸಿದ್ದನು. ಅದರಲ್ಲಿ ಬುದ್ಧ ಮತ್ತು ಅವನ ಉಪದೇಶಗಳು ಬರೆಯಲ್ಪಟ್ಟಿದ್ದವು. ಬುದ್ಧದೇವನ ಪ್ರಸಿದ್ಧ ಶಿಷ್ಯನಾದ ಮಹಾಕಾಶ್ಯಪನೆಂಬವನು ತಾನು ಸಂಸಾರ ಬಿಟ್ಟು ಹೋಗುವಾಗ ತನ್ನ ಹೆಂಡತಿಯಾದ ಭದ್ರೆಯ ಅಪ್ಪಣೆಯನ್ನು ಪತ್ರದ್ವಾರದಿಂದ ತೆಗೆದು

* ಈ ಮಹಾರಾಜನು ಕ್ರಿ. ಪೂ. ೬ನೆಯ ಶತಮಾನದಲ್ಲಿ ಆಳಿದನು. ಇವನು ನವ ರಾಜಗೃಹವೆಂಬ ಹೊಸರಾಜಧಾನಿಯನ್ನು ಮಾಡಿಕೊಂಡಿದ್ದನು.

ಪದ ಪ್ರದೇಶದಲ್ಲಿದ್ದು ಅಲ್ಲಿಂದ ಭಾರತೀಯ ಅಕ್ಷರಗಳು ಪ್ರಚಲಿತವಾದವೆಂದು ಹೇಳುವರು.

ಇತಿಹಾಸವನ್ನು ನೋಡಲು ತಿಳಿದುಬರುವದೇನಂದರೆ:— ಕ್ರಿ. ಪೂ. ೩ ನೆಯ ಶತಮಾನದಲ್ಲಿ ಭರತಖಂಡದ ಪಶ್ಚಿಮ ತೀರದಲ್ಲಿರುವ ಸೌವೀರ, ಸುಪಾರಕ, ಬಾರಕಚ್ಛ (ಇದಕ್ಕೆ ಎರಡನೆ ಹೆಸರು ಭೃಗುಕ್ಷೇತ್ರ) ಎಂಬ ಬಂದರಗಳಿಗೂ, ಬಾಬಿಲನಕ್ಕೂ ಬಹಳ ವ್ಯಾಪಾರವು ನಡೆಯುತ್ತಿತ್ತು; ಭರತಖಂಡದ ಪಶ್ಚಿಮತೀರದಲ್ಲಿದ್ದ ದ್ರವಿಡ ಜಾತಿಯೇ ಎಲ್ಲಕ್ಕೂ ಮೊದಲು ಬಾಬಿಲನದಿಂದ ಸೆಮಿಟಿಕದ ಪೂರ್ವದಲ್ಲಿ ಎಕ್ವೇಡಿಯರಲ್ಲಿ ಪ್ರಚಲಿತವಾಗಿದ್ದ ವರ್ಣಮಾಲೆಯನ್ನು ಭರತಖಂಡಕ್ಕೆ ತಂದಿತು, ಇದೇ ಲಿಪಿಯು ಸುಮಾರು ಸಾವಿರ ವರ್ಷಗಳ ತರುವಾಯ ಭರತಖಂಡದ ಪ್ರಸಿದ್ಧವಾದ ಬ್ರಹ್ಮಲಿಪಿಯಾಗಿ ಪರಿಣಮಿಸಿತು" ಈ ವಿಷಯದಲ್ಲಿ ಪರದೇಶದ ಪಂಡಿತರ ಐಕಮತ್ಯವಿಲ್ಲ. ನಾವು ತಿಳಿದದ್ದೇನಂದರೆ—ಆರ್ಯಜನರ ಪ್ರಾಚೀನ ವಾಸಭೂಮಿಯೇ ಅಶೋಕ ಅಕ್ಷರಗಳ ಜನ್ಮಸ್ಥಾನವು. ಮುಂದೆ ಕಾಲಾನುಸಾರವಾಗಿ ಸೆಮಿಟಿಕ್ ಜಾತಿಯ ಸಂಸರ್ಗದಿಂದ ಅವುಗಳಲ್ಲಿ ಎಷ್ಟೋ ಹೆಚ್ಚುಕಡಿಮೆಗಳಾದ ಮೇಲೆ ಅವು ಭಾರತೀಯ ಅಶೋಕ ಅಕ್ಷರಗಳಾಗಿ ಪರಿಣಮಿಸಿದವು.

ಕೆಲವರು ಈ ದೇಶದಲ್ಲಿ ಎಷ್ಟು ಪ್ರಕಾರದ ಅಕ್ಷರಗಳು ಪ್ರಚಲಿತವಾಗಿ ಇರುವವೋ ಅವುಗಳಲ್ಲೆಲ್ಲ ಅಶೋಕ ಅಕ್ಷರಗಳೇ ಎಲ್ಲಕ್ಕೂ ಪ್ರಾಚೀನವೆಂದೂ ಅವುಗಳ ಪೂರ್ವದಲ್ಲಿ ಲೇಖನವೇ ಇರಲಿಲ್ಲವೆಂದೂ ನಂಬುವರು. ಆದರೆ ಈ ಮತವು ಸಯುಕ್ತಿಕವೆಂದು ಹೇಳಲಾಗುವದಿಲ್ಲ. ಕ್ರಿ. ಪೂ. ೩ ನೆಯ ಶತಮಾನದಲ್ಲಿ ಅಶೋಕ ಅಕ್ಷರಗಳು ಈ ದೇಶದಲ್ಲಿ ಪ್ರಚಲಿತವಾಗಿದ್ದವು. ಅಶೋಕ ಮಹಾರಾಜನ ಕಾಲಕ್ಕಿಂತ ಬಹು ಪೂರ್ವಕಾಲದಲ್ಲಿ ಭರತಖಂಡದಲ್ಲಿ ದರ್ಶನಗಳು, ಧರ್ಮಶಾಸ್ತ್ರಗಳು ಮೊದಲಾದ ವಿಷಯಗಳು ಉನ್ನತಿಯನ್ನು ಹೊಂದಿದ್ದವು. ಮತ್ತು ಅದರೊಡನೆ ಲೇಖನ ಪದ್ಧತಿಯೂ ಪ್ರಚಲಿತವಾಗಿತ್ತು. ಹಿಂದೂ ಗ್ರಂಥಗಳಲ್ಲಿಯೂ ಬೌದ್ಧಗ್ರಂಥಗಳಲ್ಲಿಯೂ ಈ ವಿಷಯದಲ್ಲಿ ಅನೇಕ ಆಧಾರಗಳು ದೊರೆಯುವವು. ವೈದಿಕ ಸೂಕ್ತಗಳು ರಚಿತವಾದ ಕಾಲದಲ್ಲಿ ಲೇಖನಪದ್ಧತಿಯು ಇದ್ದಿಲ್ಲವೆಂಬದು ಒಪ್ಪಬೇಕಾದದ್ದೇ. ಆಗ ಆ ಸೂಕ್ತಗಳನ್ನು ಜನರು ಪರಮುಖದಿಂದ ಕೇಳಿ ಸ್ಮರಣ ಸಹಾಯದಿಂದೇ ಕಾದುಕೊಂಡಿದ್ದರು. ಆದ್ದರಿಂದ ಅವಕ್ಕೆ ಶ್ರುತಿ, ಎಂಬ ಹೆಸರುಂಟಾಯಿತು. ಆದರೆ ಮುಂದೆ ಸ್ವಲ್ಪ ದಿವಸಗಳಲ್ಲಿ ಲೇಖನಪದ್ಧತಿಯು ವಿಷಯವಾಗಿ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖವಿರುವದು. ಪಾಣಿನಿವ್ಯಾಕರಣವು ಕ್ರಿ. ಪೂ. ೪ ನೆಯ ಶತಮಾನದಲ್ಲಿ ಅಸ್ತಿತ್ವದಲ್ಲಿತ್ತು. ಅದರ ಒಂದು ಸೂತ್ರದಲ್ಲಿ 'ಲಿಪಿಕರ' ಎಂಬ ಶಬ್ದವು ಬಂದಿರುವದು. ಆಗ ಒಂದುವೇಳೆ ಲೇಖನವು ಪ್ರಚಾರದಲ್ಲಿಲ್ಲದಿದ್ದರೆ ಈ ಶಬ್ದವು ಎಂದೂ

ಪ್ರಯೋಗಿಸಲ್ಪಡುತ್ತಿರಲಿಲ್ಲ. ಮನುಸಂಹಿತೆಯ ೮ ನೆಯ ಅಧ್ಯಾಯದ ೧೬೮ ನೆಯ ಶ್ಲೋಕದಲ್ಲಿ 'ಲೇಖಿತ' ಎಂಬ ಶಬ್ದದ ಉಲ್ಲೇಖವುಂಟು. ಇದರಿಂದ ಮನುವಿನ ಕಾಲದಲ್ಲಿಯೂ ಲೇಖನದ ಪ್ರಚಾರವಿತ್ತೆಂದು ಕಂಡುಬರುವದು. ಇದರಂತೆ ಮಹಾ ಭಾರತದಲ್ಲೂ 'ವೇದಲೇಖಕ' ಎಂಬ ಶಬ್ದದ ಪ್ರಯೋಗವುಂಟು. 'ಲಲಿತವಿಸ್ತರ' ವೆಂಬ ಪ್ರಾಚೀನ ಬೌದ್ಧಗ್ರಂಥದಲ್ಲಿ ೬೪ ಪ್ರಕಾರದ ಲಿಪಿಗಳ ಉಲ್ಲೇಖವಿರುವದು. ಬಹುಶ: ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಲಲಿತವಿಸ್ತರ ಗ್ರಂಥವು ಬರೆಯಲ್ಪಟ್ಟಿತೆಂದು ಅನೇಕರು ಊಹಿಸುತ್ತಾರೆ.

ಪ್ರಾಚೀನ ಸಂಸ್ಕೃತ ವಾಙ್ಮಯದಲ್ಲಿರುವಂತೆ ಪ್ರಾಚೀನಪಾಲೀ ಗ್ರಂಥಗಳ ಲ್ಲಿಯೂ ಅಶೋಕಲಿಪಿಯು ಪ್ರಚಾರದಲ್ಲಿ ಬರುವದಕ್ಕೆ ಮುಂಚೆ ಲೇಖನಪದ್ಧತಿಯ ಉಲ್ಲೇಖವು ಬಹಳ ಸ್ಥಳಗಳಲ್ಲಿ ಕಂಡು ಬರುವದು. ಸೂತ್ರಪಿಡಕವೆಂಬ ಗ್ರಂಥದ ಪ್ರಥಮಭಾಗದಲ್ಲಿ 'ಶೀಲ'ವೆಂಬ ಹೆಸರಿನ ಧರ್ಮಶಾಸ್ತ್ರವು ಬಂದಿರುವದು. ಈ ಶೀಲ ಗ್ರಂಥವು ಕ್ರಿ. ಪೂ. ೪೫೦ರಲ್ಲಿ ಸಂಕಲಿತವಾಯಿತೆಂದು ಐತಿಹಾಸಿಕರು ಊಹಿ ಸುತ್ತಾರೆ. ಬೌದ್ಧ ಭಿಕ್ಷುಗಳಲ್ಲಿ ನಿಷಿದ್ಧವಾದ ವಿಷಯಗಳಾವವು? ಎಂಬ ವಿಷಯದ ವಿವೇಚನೆಯು ಶೀಲ ಗ್ರಂಥದಲ್ಲಿರುವದು. ನಿಷಿದ್ಧವಾದವುಗಳ ಪಟ್ಟಿಯಲ್ಲಿ 'ಅಕ್ಷ ರಿಕಾ' ಎಂಬ ಆ ಕಾಲದ ಒಂದು ಆಟದ ಹೆಸರಿನ ಉಲ್ಲೇಖವಿರುವದು. 'ಅಕ್ಷ ರಿಕಾ' ಎಂಬದು ಒಂದು ಆಟವಾದ ಮೇಲೆ ಅಕ್ಷರಜ್ಞಾನವು ಜನರಲ್ಲಿ ಪ್ರಚಲಿತವಾ ಗಿತ್ತೆಂದು ತೋರುವದು. ವಿನಯವಿಟಕವೆಂಬ ಪ್ರಾಚೀನ ಪಾಲಿಗ್ರಂಥದ ೪ನೇ ಭಾಗದ ಒಂದು ಸೂತ್ರದಲ್ಲಿ ಲೇಖನವು ಶಿಲ್ಪವಿದ್ಯೆಯಲ್ಲಿ ಎಣಿಸಲ್ಪಟ್ಟಿರುವದು. ಬೌದ್ಧಯುಗದಲ್ಲಿ ಲಿಪಿವಿದ್ಯೆಯು ಉಪಜೀವನದ ನಿಕೃಷ್ಟ ಉಪಾಯಗಳಲ್ಲಿ ಒಂದಾ ದ್ದರಿಂದ ಈ ಪ್ರಕಾರ ಎಣಿಸಿರಬಹುದು. ಆ ಕಾಲದಲ್ಲಿ ಯಾವನಾದರೂ ದುರ್ಬು ದ್ಧಿಯಿಂದ ಸಮಾಜದಲ್ಲಿ ಆತ್ಮಹತ್ಯೆಯನ್ನು ಸಮರ್ಥನಮಾಡುವ ಗ್ರಂಥವನ್ನು ಬರೆ ದರೆ ಅವನಿಗೆ ಆ ಗ್ರಂಥದ ಅಕ್ಷರಗಳ ಸಂಖ್ಯೆಯಿಂದ ಶಾಸನವಾಗುತ್ತಿತ್ತೆಂದು ಪ್ರವಾದವಿದೆ.* ಬಿಂಬಿಸಾರನೆಂಬ ರಾಜನು ತನ್ನ ಆಳಿಕೆಯ ಕಾಲದಲ್ಲಿ ಗಾಂಧಾರ ದೇಶದ ರಾಜನಾದ 'ಪಕ್ಕುಸತಿ'ಯ ಬಳಿಗೆ ಒಂದು ಪತ್ರವನ್ನು ಕಳಿಸಿದ್ದನು. ಈ ಪತ್ರವನ್ನು ಚಿನ್ನದ ತಗಡಿನ (೬ ಘೂಟು×೧೧ಘೂ. ೫ ಇ.) ಮೇಲೆ ಕೊರೆಸಿದ್ದನು. ಅದರಲ್ಲಿ ಬುದ್ಧ ಮತ್ತು ಅವನ ಉಪದೇಶಗಳು ಬರೆಯಲ್ಪಟ್ಟಿದ್ದವು. ಬುದ್ಧದೇವನ ಪ್ರಸಿದ್ಧ ಶಿಷ್ಯನಾದ ಮಹಾಕಾಶ್ಯಪನೆಂಬವನು ತಾನು ಸಂಸಾರ ಬಿಟ್ಟು ಹೋಗು ವಾಗ ತನ್ನ ಹೆಂಡತಿಯಾದ ಭದ್ರೆಯ ಅಪ್ಪಣೆಯನ್ನು ಪತ್ರದ್ವಾರದಿಂದ ತೆಗೆದು

* ಈ ಮಹಾರಾಜನು ಕ್ರಿ. ಪೂ. ೬ನೆಯ ಶತಮಾನದಲ್ಲಿ ಆಳಿದನು. ಇವನು ನವ ರಾಜಗೃಹವೆಂಬ ಹೊಸರಾಜಧಾನಿಯನ್ನು ಮಾಡಿಕೊಂಡಿದ್ದನು.

ಕೊಂಡನೆಂದು "ಮನೋರಥಪುರಾನಿ" ಎಂಬ ಪಾಲೀಗ್ರಂಥದಲ್ಲಿ ವರ್ಣಿತವಾಗಿರುವದು. ಪಾಲೀಗ್ರಂಥದ ಆಧಾರಗಳಿಂದ ಆ ಕಾಲದಲ್ಲಿ ಗಂಡಸರು ಹೆಂಗಸರು ಎಲ್ಲರಲ್ಲಿಯೂ ಲಿಪಿವಿದ್ಯೆಯು ಪ್ರಚಲಿತವಾಗಿತ್ತೆಂದು ತೋರುವದು. ರಾಜಕಾರ್ಯಗಳಲ್ಲಿಯೂ, ಸುದ್ದಿಯನ್ನು ಕಳುಹಿಸುವಲ್ಲಿಯೂ ಲಿಪಿವಿದ್ಯೆಯ ಪ್ರಯೋಜನವಾಗುತ್ತಿತ್ತು.

ಅಶೋಕ ಮಹಾರಾಜನ ಕಾಲಕ್ಕಿಂತ ಪೂರ್ವದಲ್ಲಿಯೇ ಈ ದೇಶದಲ್ಲಿ ಲೇಖನಪದ್ಧತಿಯೂ ಭಾಷಾಸಾಹಿತ್ಯವೂ ಇದ್ದರೂ ಅವು ಸರ್ವಸಾಧಾರಣವಾಗಿ ಜನರಲ್ಲಿ ಪ್ರಚಾರವಾಗುವದಕ್ಕೆ ಅಶೋಕ ಮಹಾರಾಜನ ಕಾಲದಿಂದೇ ಪ್ರಯತ್ನವು ಆರಂಭವಾಯಿತು. ಅಶೋಕನು ತನ್ನ ವಿಶಾಲರಾಜ್ಯದಲ್ಲಿದ್ದ ರಾಜಮಾರ್ಗಗಳು, ಪರ್ವತಗಳು, ಗುಹೆಗಳು ಇವುಗಳಲ್ಲೆಲ್ಲ ಈ ಲಿಪಿಯ ಪ್ರಚಾರವನ್ನು ಮಾಡಲಾರಂಭಿಸಿದನು. ಇದುವರೆಗೆ ಅಲ್ಪಸ್ವಲ್ಪ ಜನರಲ್ಲಿದ್ದ ಲೇಖನ ಕಲೆಯು ಈಗ ಎಲ್ಲ ಕಡೆಗೆ ಪ್ರಚಾರವಾಗಹತ್ತಿತು. ವೈದ್ಯಪ್ರವಾಸಿಗಳು ಹಲವು ಸ್ಥಳಗಳಲ್ಲಿ ಚಿಕಿತ್ಸೆಯ ಸಲುವಾಗಿ ತಿರುಗುತ್ತ ನಿತ್ಯವ್ಯವಹಾರದ ಔಷಧಗಳ ಹೆಸರುಗಳನ್ನೂ, ಅನುಪಾನದ ಪ್ರಕಾರಗಳನ್ನೂ ಪ್ರಸಿದ್ಧ ಸ್ಥಳಗಳಲ್ಲಿ ಕಲ್ಲುಗಳ ಮೇಲೆ ಕೊರೆದು ಇಡುತ್ತಿದ್ದರು.

ಈ ಪ್ರಕಾರ ಅಶೋಕನ ಕಾಲದಲ್ಲಿಯೇ ಬರಹದ ಪ್ರಚಾರವಾಗಿದ್ದರೂ ಇದಕ್ಕು ಮುಂಚೆಯೆ ಭರತಖಂಡದಲ್ಲಿ ಬರಹವು ಇತ್ತೆಂಬದಕ್ಕೆ ಅನೇಕ ಆಧಾರಗಳುಂಟು. ಬುದ್ಧನ ಅಸ್ಥಿಗಳ ಮೇಲೆ ಕಟ್ಟಿದ ಕೆಲವು ಸಮಾಧಿಗಳ ಮೇಲೂ ಬುದ್ಧನ ಶಿಷ್ಯರಾದ ಮಜ್ಝಿಮ ಮತ್ತು ಕಾಶ್ಯಪ ಇವರ ಸಮಾಧಿಗಳ ಮೇಲೂ ಕೊರೆದ ಲಿಪಿಗಳುಂಟು. ಇವು ಅಶೋಕನ ಶಾಸನಗಳಿಗಿಂತ ಮೊದಲಿನವೆಂಬದಕ್ಕೆ ಸಂಶಯವಿಲ್ಲ. ಇದರಿಂದ ಈಗ ಅಶೋಕ ಅಕ್ಷರಗಳೆಂದು ಪ್ರಸಿದ್ಧವಾಗಿದ್ದ ಅಕ್ಷರಗಳು ಅಶೋಕನ ಕಾಲಕ್ಕೆ ಮುಂಚೆಯೆ ಪ್ರಚಲಿತವಾಗಿದ್ದವೆಂದು ಸ್ಪಷ್ಟವಾಗಿ ತೋರುವದು. ಕ್ರಿ. ಪೂ. ೬ನೆಯ ಇಲ್ಲವೆ ೭ನೆಯ ಶತಮಾನದಲ್ಲಿ ಭರತಖಂಡಕ್ಕೆ ಎಲ್ಲಕ್ಕೂ ಮೊದಲು ವರ್ಣಮಾಲೆಯು ತರಲ್ಪಟ್ಟಿತೆಂದು ಇತಿಹಾಸಜ್ಞರು ಊಹಿಸುತ್ತಾರೆ. ವೇದಗಳು ಇದಕ್ಕೂ ಮುಂಚೆ ಈ ದೇಶದಲ್ಲಿ ಪ್ರಚಲಿತವಾಗಿದ್ದವು. ಆದರೆ ಮೊದಲು ಮೊದಲು ಬ್ರಾಹ್ಮಣರು ಬರಹವನ್ನು ಆದರಿಸದೆ ಮೊದಲಿನ ತಮ್ಮ ಮುಖಪಾಠಕ್ರಮವನ್ನೆ ಅನುಸರಿಸುತ್ತಿದ್ದರು. ಅಕ್ಷರಗಳ ಆವಿರ್ಭಾವಕ್ಕೆ ಮುಂಚೆ ಆದ ಗ್ರಂಥಗಳಿಗೆ ವೈದಿಕವಾಙ್ಮಯವೆಂದೂ ಆ ಬಳಿಕ ಆದ ಗ್ರಂಥಗಳಿಗೆ ಲೌಕಿಕವಾಙ್ಮಯವೆಂದೂ ರೂಢಿ ಬಿದ್ದಿರಬೇಕೆಂದು ಕೆಲವರು ಊಹಿಸುತ್ತಾರೆ.

ಮೇಲಿನ ವಿವರಣೆಯಿಂದ ಬರಹವು ಬಹು ಪ್ರಾಚೀನಕಾಲದಲ್ಲಿ ಉಂಟಾಗಿದ್ದರೂ ಅದರ ಪ್ರಚಾರಕ್ಕೆ ಬೌದ್ಧಯುಗವೇ ಆರಂಭವೆಂಬದು ಸ್ಪಷ್ಟವಾಗುವದು.

ಮೊಟ್ಟಮೊದಲು ಮಣ್ಣಿನ ಹಂಚುಗಳ ಮೇಲೆ ಅಕ್ಷರಗಳನ್ನು ಕೊರೆಯುತ್ತಿದ್ದರು. ಆದರೆ ಈ ಪದ್ಧತಿಯಿಂದ ಪುಸ್ತಕಗಳನ್ನಾಗಲಿ, ಪತ್ರಗಳನ್ನಾಗಲಿ ಬರೆಯುವದು ಅಸಾಧ್ಯವಾಗಿತ್ತು. ರಾಜಕೀಯ ಶಾಸನ ಮೊದಲಾದವುಗಳನ್ನು ತಾಮ್ರ ಮೊದಲಾದ ಧಾತುಗಳ ಹಲಗೆಗಳ ಮೇಲೆ ಬರೆಯುತ್ತಿದ್ದರು. ಖೋಟಾನದ ಸಮೀಪದಲ್ಲಿರುವ 'ಫೋಸಿಂಗ' ವಿಹಾರದಿಂದ ಈ ಪ್ರಕಾರ ಮಣ್ಣಿನ ಹಂಚಿನ ಮೇಲೆ ಬರೆದ ಒಂದು ಲಿಪಿಯನ್ನು ಡಾಕ್ಟರ್ ಹೋಯಿ, ಎಂಬವರು ಸಂಪಾದಿಸಿದ್ದಾರೆ. ಹಂಚು ಇಟ್ಟಿಗೆಗಳ ಮೇಲೆ ಅಕ್ಷರಗಳನ್ನು ಕೊರೆಯುವದು ಪ್ರಚಲಿತವಿದ್ದರೂ, ಸುವರ್ಣ, ತಾಮ್ರಗಳ ತಗಡಿನ ಮೇಲೆ ಬರೆಯುವದೂ ಅತಿಪ್ರಾಚೀನಕಾಲದಿಂದ ಪ್ರಚಾರದಲ್ಲಿತ್ತು. * ತಕ್ಷಶಿಲೆಯು "ಧ್ವಂಸಾವಶೇಷ" ದಲ್ಲಿ ಈ ಪ್ರಕಾರದ ಒಂದು ತಾಮ್ರ ಶಾಸನವು ದೊರೆತಿರುವದು. ಇದಲ್ಲದೆ ತಾಲಪತ್ರ ಭೂರ್ಜಪತ್ರಗಳ ಮೇಲೆ ಬರೆವ ವ್ಯವಹಾರವೂ ಪ್ರಾಚೀನಕಾಲದಲ್ಲಿ ಇತ್ತು. ಭೂರ್ಜಪತ್ರಗಳ ಮೇಲೆ ಮಸಿಯಿಂದ ಭರೋಷ್ಟ್ರೀಲಿಪಿಯಲ್ಲಿ ಬರೆದ ಒಂದು ಪುಸ್ತಕವು ಫೋಸಿಂಗ ವಿಹಾರದಲ್ಲಿ ದೊರೆತಿರುವದು. ಅದರಲ್ಲಿ ಬೌದ್ಧಧರ್ಮ ಸಂಬಂಧವಾದ ಪದಗಳಿರುವವು. ಈ ಪುಸ್ತಕವು ಕ್ರಿಸ್ತಶಕಕ್ಕೆ ಸ್ವಲ್ಪ ಮುಂಚೆ ಬರೆಯಲ್ಪಟ್ಟಿತೆಂದು ಅನೇಕರು ಊಹಿಸುತ್ತಾರೆ. ಪಾಲೀಭಾಷೆಯಲ್ಲಿಯೂ, ಸಂಸ್ಕೃತಭಾಷೆಯಲ್ಲಿಯೂ ಕ್ರಿಸ್ತಶಕದ ಆರಂಭದ ಸುಮಾರಿಗೆ ಬರೆದ ಈ ತರದ ಅನೇಕ ಪುಸ್ತಕಗಳು ದೊರೆತಿರುತ್ತವೆ. ಮುಂದೆ ಕಾಗದಗಳು ಪ್ರಚಾರವಾಗುವವರೆಗೆ ಬಹುತರ ತಾಲಪತ್ರಗಳು, ಇಲ್ಲವೆ ಭೂರ್ಜಪತ್ರಗಳು ಇವುಗಳ ಮೇಲೆ ಬರೆಯುವ ರೂಢಿಯೇ ಇತ್ತು.

M. P. Pujar.
ಕನ್ನಡ ಪಂಡಿತ.

---

* ಪಂಜಾಬಕ್ಕೆ ಸೇರಿದ ರಾವಲಪಿಂಡಿ ಎಂಬದು ಪ್ರಾಚೀನ ತಕ್ಷಶಿಲೆಯೆಂದು ಇತಿಹಾಸಜ್ಞರ ಅಭಿಪ್ರಾಯವುಂಟು.

ವಿನೋದಗಳು.

ನೀರು ಕಾಸುವ ಬಂಬು ಮಾರುವ ವಿಜಂಟನು— ರಾಯರೇ! ಇದೊಂದು ನೀರು ಕಾಸುವ ಬಂಬು ಕೊಂಡು ಬಿಡಿರಿ. ಇದರಿಂದ ಅರ್ಧ ಉರುವಲು ಉಳಿಯುವದು.

ರಾಯರು— ಹಾಗಾದರೆ ಎರಡು ಒಂಬು ಕೊಡಿರಿ, ಅಂದರೆ ಎಲ್ಲ ಉರವಲು ಉಳಿದೀತು?

* * *

ಬಾಳ್ಯಾ—ಅವ್ವಾ! ಅವ್ವಾ! ನನ್ನ ನಾಲಿಗಿಗೆ ಕಾಲುಗಳಿರುವವೇನು?

ತಾಯಿ— ಛೇ ಹುಚ್ಚಾ! ನಾಲಿಗಿಗೆ ಎಲ್ಲಾದರೂ ಕಾಲು ಇರುವವೇನು?

ಬಾಳ್ಯಾ—ಹಾಗಾದರೆ ಅಪ್ಪನು— "ನಿನ್ನ ನಾಲಿಗೆಯು ಮುಂಜಾವಿನಿಂದ ಸಂಜೆಯ ತನಕ ನಡದೇ ಇರುತ್ತದೆ." ಅಂತ ಯಾಕೆ ಅನ್ನುತ್ತಾನೆ?

* * *

ಮಾಸ್ತರ—ಗೋವಿಂದಾ ನೀನು ತೊಟ್ಟುಕೊಂಡಿರುವ ಕೀಟವೆಯ ಅಂಗಿಯು ಬಂದು ಕ್ಷುದ್ರ ಪ್ರಾಣಿಯಿಂದ ದೊರೆಯುವದೆಂಬದು ನಿನಗೆ ಗೊತ್ತಿದೆಯೋ?

ವಿದ್ಯಾರ್ಥಿ—ಹೌದು ಸಾರ್, ಆ ಕ್ಷುದ್ರಪ್ರಾಣಿ ನಮ್ಮಪ್ಪನು ಅಲ್ಲೇನ್ರಿ ಸಾರ್?

* * *

ಜಜ್ಜ ಸಾಹೇಬರು (ಆರೋಪಿಗೆ)—ನೀನು ಮಾಡಿದ ತಪ್ಪಿಗಾಗಿ ನಾನು ನಿನಗ ಘಾಸಿ ೀಕ್ಷೆಯನ್ನು ವಿಧಿಸಿದ್ದೇನೆ.

ಆರೋಪಿ—ಸಾಹೇಬರೇ, ನಾನು ಆಗದಿ ನಿರಪರಾಧಿ ಇದ್ದೇನೆ.

ಜಜ್ಜ (ಚಿಟ್ಟಗೆದ್ದು)—ಸುಮ್ಮನಿರು. ಮಾತಾಡಿದರೆ ಇದಕ್ಕೂ ಹೆಚ್ಚಿನ ೀಕ್ಷೆಯು ಕೊಡಲಾದೀತು.

* * *

ಗೋಪಾಳರಾಯರು—ಪಂತರೆ, ಜಗತ್ತೆಲ್ಲಾ ಸುಖಿಯಿರುವದೆಂದು ನಿಮಗೆ ಎಂದಾದರೂ ಎನಿಸುವದೊ?

ಪಂತರು—ತಿಂಗಳಲ್ಲಿ ಒಂದುದಿನ ಮಾತ್ರ ಎನಿಸುವದು.

ಗೋಪಾಳರಾಯರು—ಅದು ಯಾವ ದಿವಸ.

ಪಂತರು—ನಮಗೆ ಪಗಾರ ಬಂದ ದಿವಸ!

* * *

ವೆಂಕಟರಾವ—ಬಾಬುರಾಯರೆ! ನಾನು ಕೀರ್ತನಕ್ಕೆ ಹೋದ ಕೂಡಲೆ ನಿದ್ದೆ ಬರುತ್ತಿತ್ತು. ಅದನ್ನು ತಪ್ಪಿಸಲಿಕ್ಕೆ ಒಂದು ಉತ್ತಮವಾದ ಹಂಚಿಕೆ ತೆಗೆದಿರುವೆನು.

ಬಾಬುರಾವ—ಆದಾವ ಹಂಚಿಕೆ?

ವೆಂಕಟರಾವ—ಕೀರ್ತನಕ್ಕೆ ಹೋಗುವದನ್ನೇ ಬಿಟ್ಟುಬಿಡುವದು!

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं वाग्भूषणम् भूषणम् ॥

(भर्तृहरिः)

ಸಂಪುಟ ೧೬.	ಮಾರ್ಚ್ ೧೯೧೩.	ಸಂಚಿಕೆ ೮.

ಕನ್ನಡ ಭಾಷೆಯೂ ಬರಹವೂ.

ಕನ್ನಡಭಾಷೆಯು ಬಹು ಪುರಾತನವಾದುದೂ, ಗಂಭೀರವಾದುದೂ, ಶುದ್ಧವಾದುದೂ ಆಗಿರುವುದೆಂಬುದಕ್ಕೆ ಈ ಭಾಷೆಯಲ್ಲಿರುವ ಗ್ರಂಥಭಾಂಡಾರವೇ ನಿದರ್ಶನವಾಗಿದೆ. ಪ್ರಕೃತದಲ್ಲಿ ಈ ಭಾಷೆಗೆ ಬಂದಿರತಕ್ಕ ದುಸ್ಥಿತಿಯು ಇಂಡಿಯದ ಇತರ ಯಾವ ಭಾಷೆಗೂ ಬಂದಿಲ್ಲವೆಂದರೂ ಸಲ್ಲುವುದು. ಇದು ಹೀಗಾಗಲು ಕಾರಣವೇನೆಂಬುದು ವಿಚಾರಣೀಯವು ಕರ್ನಾಟಕ ದೇಶವು ಬಹುಕಾಲದಿಂದಲೂ ಹಿಂದೂ ರಾಜರ ಆಳ್ವಿಕೆಯಲ್ಲಿಯೇ ಇದ್ದು, ಭಾಷಾಭಿವೃದ್ಧಿಗೆ ಅವರಿಂದ ತುಂಬ ಸಹಾಯ ಉಂಟಾಗಿತ್ತು. ಜೈನರೂ, ಬ್ರಾಹ್ಮಣರೂ, ಲಿಂಗಾಯಿತರೂ ಈ ಭಾಷೆಯಲ್ಲಿ ಅತ್ಯುತ್ತಮ ಗ್ರಂಥಗಳನ್ನು ರಚಿಸಿದರು. ಬಹು ಸ್ವಲ್ಪಕಾಲ ಮಾತ್ರ ತುರುಷ್ಕರ ಅಧೀನಕ್ಕೆ ಈ ರಾಜ್ಯಗಳು ಒಳಪಟ್ಟಿದ್ದರೂ ಭಾಷೆಯ ಹೀನಸ್ಥಿತಿಗೆ ಅವರನ್ನು ಗುರಿಮಾಡುವದು ಚನ್ನಾಗಿಲ್ಲ. ಕನ್ನಡ ದೇಶವು ಒಂದೇ ಆಧಿಪತ್ಯಕ್ಕೆ ಸೇರದೆ ಬೇರೆ ಬೇರೆ ರಾಜ್ಯಗಳಾಗಿ ಒಡೆದು ಹೋದುದರಿಂದ ಸರ್ವತ್ರ ಏಕರೀತಿಯಾದ ಭಾಷೆಯು ನಿಲ್ಲದೆ ಹೋಯಿತೆಂಬುದು ಒಂದು ಕಾರಣ. ವಿದ್ಯಾವಂತರಾದ ಉತ್ತಮ ವರ್ಣಗಳವರು ಸಂಸ್ಕೃತ ಭಾಷೆಯ ಗ್ರಂಥಗಳ ಕಡೆಗೆ ಹೆಚ್ಚು ಲಕ್ಷಕೊಡುತ್ತಾ ಬಂದರೆಂಬುದೂ ಒಂದು ಕಾರಣ. ಇಂಗ್ಲಿಷಭಾಷಾ ಪ್ರಾಬಲ್ಯದ ದೆಸೆಯಿಂದ ಇಲ್ಲಿಯ ದೇಶಭಾಷೆಗಳಲ್ಲಿ ಜನರಿಗೆ ಅನಾದರ ಉಂಟಾದುದು ಮತ್ತೊಂದು ಕಾರಣ. ಇವುಗಳ ಹೊರತು ಬೇರೆ ಯಾವುದನ್ನೂ ಹೇಳಲಿಕ್ಕೆ ಅವಕಾಶವಿಲ್ಲ.

ಈಗಿನ ಕನ್ನಡ ಭಾಷೆಯ ಸ್ಥಿತಿಯನ್ನು ನೋಡೋಣ. ಮೈಸೂರು ಕನ್ನಡ, ಮಂಗಳೂರು ಕನ್ನಡ, ಧಾರವಾಡ ಕನ್ನಡ ಎಂಬ ಮೂರು ಭಾಗಗಳಾಗಿ ವಿಂಗಡಿಸ ಬಹುದು. ಇವುಗಳಲ್ಲಿ ಪ್ರತಿಬಿಂದೂ ಹತ್ತೆಂಟು ಒಳಭೇದಗಳನ್ನುಳ್ಳದ್ದಾಗಿದ್ದರೂ, ಆಯಾ ಪ್ರಾಂತಗಳ ಗ್ರಂಥಗಳು ಸ್ವಲ್ಪ ಹೆಚ್ಚು ಕಡಿಮೆ ಒಂದೇ ಮಾದರಿಯಾಗಿವೆ ಯೆಂದು ಹೇಳಬಹುದು. ಎಲ್ಲೆಲ್ಲಿಯೂ ವಿದ್ಯಾಪ್ರಸರಣೆಗಾಗಿ ಸರಕಾರದವರು ಏರ್ಪ ಡಿಸಿರುವ ಪಾಠಶಾಲೆಗಳ ಟೆಕ್ಸ್ಟ್ ಬುಕ್ಕುಗಳು ಸುದಾ ಈ ಭಾಗಗಳಲ್ಲಿ ಪ್ರತ್ಯೇಕವಾ ಗಿಯೇ ಇವೆ. ಇವುಗಳಲ್ಲಿ ಎಲ್ಲಿಯಾದರೂ ಶುದ್ಧವಾಗಿಯೂ, ಸಮಗ್ರವಾಗಿಯೂ, ನಿರಾಕ್ಷೇಪವಾಗಿಯೂ ಇರತಕ್ಕ ವ್ಯಾಕರಣ ಗ್ರಂಥವೇ ಇಲ್ಲ. ಭಾಷೆಯ ನಿಕಂಕುಶ ಪ್ರವೃತ್ತಿಗೆ ಇದೇ ಮುಖ್ಯ ಕಾರಣವೆನ್ನಬಹುದು. ಗ್ರಂಥಭಾಷೆಗೂ ಆಡುವ ಭಾಷೆ ಗೂ ಸ್ವಲ್ಪಮಟ್ಟಿಗೆ ವ್ಯತ್ಯಾಸವಿರಬಹುದಾದುದು ಎಲ್ಲಾ ದೇಶಭಾಷೆಗಳಿಗೂ ಸಹಜ ವಾದರೂ, ನಮ್ಮ ಕನ್ನಡದಲ್ಲಿ ಅದು ಅತಿಶಯವಾಗಿದೆ. ಈಗಿನ ಗ್ರಂಥಕರ್ತರು ಲಕ್ಷಣವನ್ನು ಗಮನಿಸದೆ, ತಮ್ಮ ಮನಸ್ಸಿಗೆ ಬಂದಂತೆ ಪ್ರಯೋಗಗಳನ್ನು ಬದಲಾಯಿ ಸುತ್ತಾ ಬರುವುದು, ತುಂಬಾ ದುಃಖಕರವಾದುದು. ಸಂಸ್ಕೃತ ನಿಯಮವನ್ನಾಗಲಿ, ಪ್ರಾಚೀನ ಕರ್ನಾಟಕ ನಿಯಮವನ್ನಾಗಲಿ, ಅತಿಕ್ರಮಿಸಿ, ಮುರಾರಿಯು ಮೂರನೆಯ ಮಾರ್ಗವೆಂಬಂತೆ ತಮಗೆ ತೋರಿದ ರೀತಿಯಲ್ಲಿ ಭಾಷೆಯನ್ನು ಸಂಸ್ಕರಿಸತೊಡಗಿದರೆ ಕೊನೆಗೆ ಇದರ ಪರಿಣಾಮವು ಹೇಗಾಗಬಹುದು? ಗ್ರಂಥಭಾಷೆಗೂ, ವ್ಯಾವಹಾರಿಕ ಭಾಷೆಗೂ ಪರಸ್ಪರ ಸಂಬಂಧವಿದ್ದೇ ಇರುವುದು. ರಾಜಕೀಯ ವ್ಯಾವಾರಗಳಲ್ಲಿ ಅನ್ಯ ದೇಶ್ಯಶಬ್ದಗಳನ್ನು ಸ್ವಲ್ಪಮಟ್ಟಿಗೆ ಸಂದರ್ಭಾನುಸಾರ ಉಪಯೋಗಿಸಿಕೊಳ್ಳು ವುದು ಅಗತ್ಯವೇ ಹೊರತು, ದೇಶಭಾಷೆಯ ಪದಗಳನ್ನು ಲಕ್ಷಣವಿರುದ್ಧವಾಗಿ ಪ್ರಯೋಗಿಸುವುದು ಹಾಸ್ಯಾಸ್ಪದವಲ್ಲವೇ? ಕೆಲವು ಉದಾಹರಣೆಗಳನ್ನು ದೃಷ್ಟಾಂತ ಕ್ಕೆ ತೆಗೆದುಕೊಳ್ಳೋಣ.

ದನವಿನ	ಮೋಗಣಿಂದ	ದುರ್ನಡತೆ	ಮಾಲೆ
ಉಶ್ತಲ್ಪಟ್ಟ	ಮಾಡಿತಿ	ನನಿಗೆ	ಇದ್ಯಾಕೆ
ಗೋಧ್ಯಕ್ಕಿ	ವ್ಯಾಳ್ಳ	ವಬ್ಬನು	ಯಿಲ್ಲಿ

ಇತ್ಯಾದಿ.

ಇವುಗಳಿಗೆ ಹೇಗೆ ಲಕ್ಷಣಗಳನ್ನು ಕಲ್ಪಿಸ ಬಹುದೋ ಇತ್ಯಾದಿ ವಿಚಾರಗಳನ್ನು ವಾಠಕಮಹಾಶಯರೇ ಯೋಚಿಸಿಲಿ.

ಇನ್ನು ಬರಹದ ಕಡೆಗೆ ತಿರುಗೋಣ; ಸುಂದರವಾದ ಅಕ್ಷರವನ್ನು ಬರೆಯುವ ಕ್ರಮವಂತು ಹೋಗಿ ಎಷ್ಟೋ ವರುಷಗಳಾದುವು. ಅಕ್ಷರ ಸಂಯೋಜನದಲ್ಲಿಯಾ ದರೂ ತಪ್ಪಿಲ್ಲದೆ ಬರೆಯುತ್ತಿರುವರೇ ಎಂದು ನೋಡಿದರೆ, ಅದರ ಲಕ್ಷಣ ಹೇಳತೀ ರದು. ಉದಾ:—

ಅಗ್ಸ	(ಅಗಸ)	ಕಂತ್ತೆ	(ಕತ್ತೆ)	ತಟ್ಟೆ	(ತಟ್ಟೆ)
ದಿವ್ಸ	(ದಿವಸ)	ನೈಕ	(ನಾಯಿಕ)	ಹರಳೆ	(ಅರಳೆ)
ಬ್ಯಾಸರೆ	(ಬೇಸರೆ)	ವಿಶೆ	(ವಿಷ)	ಕಳ್ಳು	(ಕಲ್ಲು)

ಲೌಕಿಕ ವ್ಯವಹಾರದ ಪ್ರತಿ ಒಂದು ಪತ್ರದಲ್ಲಿಯೂ ಇಂತಹ ನೂರಾರು ತಪ್ಪುಗಳು ಸಿಕ್ಕುವುವಲ್ಲದೆ ಪ್ರಸಿದ್ಧಗೊಳಿಸುವ ವಾರ್ತಾಪತ್ರಿಕೆಗಳು ಸುದಾ ಈ ಬಗೆಯ ದೋಷಗ್ರಸ್ತಗಳಾಗಿರುವುದನ್ನು ನೋಡಬಹುದು. ಹೀಗೆಯೇ ಜನರು ಮನಸ್ಸಿ ಬರೆಯತೊಡಗಿದರೆ ಭಾಷಾವಧುವಿಗೆ ದೋಷಬಾರದೆ ಇದ್ದೀತೆ?

ಧಾರವಾಡದ ವಿದ್ಯಾವರ್ಧಕ ಸಂಘದವರು ೨೫-೩೦ ವರುಷಗಳಿಂದಲೂ ಕನ್ನಡವನ್ನು ಕ್ರಮಕ್ಕೆ ತರಬೇಕೆಂದು ಯತ್ನಸುತ್ತಲಿರುವುದು ಕನ್ನಡಿಗರ ಭಾಗ್ಯೋದಯವೇ ಎಂದು ಹೇಳಬಹುದು. ನಮ್ಮವರು ಆ ಭಾಷಾಸೇವಕರಿಗೆ ಅಲ್ಪಸ್ವಲ್ಪವಾದರೂ ಸಹಾಯ ಮಾಡಿ, ಭಾಷೆಯನ್ನು ಉದ್ಧರಿಸಲು ಯತ್ನಿಸದೆ ಹೋಗಿರುವುದು ಹಾಸ್ಯಾಸ್ಪದವೆಂದರೂ ಅಡ್ಡಿಯಿಲ್ಲ. ಮುಂದೆಯಾದರೂ ನಮ್ಮ ದೇಶಬಾಂಧವರು ಅವರ ಕಾರ್ಯಗಳಿಗೆ ನೆರವಾಗಿ, ತಮ್ಮ ಮಾತೃಭಾಷೆಯ ಮಾತೃಸ್ಥಿತಿಯ ಕಡೆಗೆ ಲಕ್ಷ್ಯ ಕೊಟ್ಟು, ನಿರ್ದುಷ್ಟವಾದ ಗ್ರಂಥಗಳನ್ನು ಆದರಿಸುತ್ತಾ, ದೋಷಗಳನ್ನು ಹೊರಗೆಡವಿ ತಿದ್ದಿಸುತ್ತಾ ಬಂದಲ್ಲಿ ಹಲವು ವರುಷಗಳಲ್ಲಿಯಾದರೂ ನೆರೆಹೊರೆಯ ಭಾಷೆಗಳಂತೆ ಕನ್ನಡವೂ ಶುದ್ಧವಾಗುವುದೆಂದು ನೆಂಬುತ್ತೇನೆ. ಭಾಷಾಭಿಮಾನಿಗಳು ಇದಕ್ಕೆ ಲಕ್ಷ್ಯಕೊಡಲಿ.

K. R. Aiyengar.

[ಈ ಲೇಖದಲ್ಲಿ ಹೊಸ ವಿಚಾರಗಳೇನೂ ಇಲ್ಲ. ಗ್ರಂಥಕರ್ತರು ಬರವಣಿಗೆಯಲ್ಲಿ ಸಾಮಾನ್ಯವಾಗಿ ಮಾಡಬಹುದಾದ ದೋಷಗಳು ಆದಷ್ಟು ಕಡಿಮೆಯಾಗಬೇಕೆಂಬದೂ, ಅವಶ್ಯಕ ಸಂದರ್ಭಗಳ ಹೊರತು ಉಳಿದ ಕಡೆಗಳಲ್ಲಿ ಆದಷ್ಟು ಮಟ್ಟಿಗೆ ಅಚ್ಚ ಕನ್ನಡ ಪದಗಳಿನ್ನು ಉಪಯೋಗಿಸುವದು ಯೋಗ್ಯವು ಎಂಬದನ್ನು ಗ್ರಂಥಕರ್ತರ ಸ್ಮರಣೆಗೆ ತಂದು ಕೊಡುವದೂ ಲೇಖಕರ ಮುಖ್ಯ ಉದ್ದೇಶವಾಗಿದೆ].

ಎಡಿಟರ.

ಇದಕ್ಕಿಂತಲೂ ಹೆಚ್ಚಿನ ಸುಖವು ಸ್ವರ್ಗದಲ್ಲಿರುವದುಂಟೇ?

(೬ ನೆಯ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಶಂಕರರಾಯನನ್ನು ಕಂಡು ಯಮುನಾಬಾಯಿಗೆ ಆನಂದವಾಗಿ—" ಶಂಕರಾ! ಸರಲೆಯು ಇಂದೇ ನಿನಗೆ ಪತ್ರ ಬರೆದಿದ್ದಳು. ಅದು ಇಷ್ಟು ಬೇಗ ನಿನಗೆ ಮುಟ್ಟಿತೇನು?"

" ಪತ್ರವಲ್ಲ. ಆಕೆಯು ನನಗೆ ತಾರು ಬಿಟ್ಟಿದ್ದಳು."

" ತಾರು! ಅದನ್ನು ಬಿಡಲಿಕ್ಕೆ ಸರಲೆಗೂ ಬರುವದೇನು? ಅವಯ್ಯಾ! ಸರಲೆಯ ಜಾಣತನದಿಂದ ನಮ್ಮಪ್ಪನು ಒಳ್ಳೇ ಹೊತ್ತಿಗೆ ಬಂದನು. ಸರಲೆಯಲ್ಲದಿದ್ದರೆ ಈ ಹಳ್ಳೀ ಊರಲ್ಲಿ ಇಂಗ್ರೇಜಿ ಯಾರಿಗೆ ಬರುತ್ತಿತ್ತು? ನಮ್ಮ ಸರಲೆಯು ಅಖಂಡ ಸೌಭಾಗ್ಯವತಿಯಾಗಲಿ! ಅಪ್ಪಾ ಶಂಕರಾ! ನಿನ್ನನ್ನು ಹಡೆದವರ ಸ್ಥಿತಿಯು..." ಎಂದು ಗಟ್ಟಿಯಾಗಿ ಅಳಹತ್ತಿದಳು. ಶಂಕರರಾಯನು ತಾಯಿಯನ್ನು ಸಮಾಧಾನಪಡಿಸಿ, ತಂದೆಯ ಕೋಣೆಗೆ ಹೋದನು. ಆತನು ತಂದೆಯ ಶೋಚನೀಯ ಸ್ಥಿತಿಯನ್ನು ಕಂಡು ಗಾಬರಿಯಾಗಿ, ಕೂಡಲೇ ಡಾಕ್ಟರರನ್ನು ಕರೆಕಳುಹಿದನು. ಶಂಕರರಾಯನ ಪತ್ರವನ್ನು ಕಂಡಕೂಡಲೇ ಡಾಕ್ಟರರಾದರೂ ತಡ ಮಾಡದೇ ಹೊರಟು ಬಂದರು. ಡಾಕ್ಟರರು ಗುರುರಾಯರ ಪ್ರಕೃತಿಯನ್ನು ಚನ್ನಾಗಿ ನೋಡಿ,—" ಶಂಕರರಾವ! ಇವರಿಗೆ ಅಜಾರಿಯೊದ ಕೂಡಲೇ ತಕ್ಕ ಉಪಾಯವನ್ನು ನೀವು ಏನೂ ಮಾಡಿದಂತೆ ಕಾಣುವದಿಲ್ಲ. ಕೆಟ್ಟ ಹವೆ, ಅಶುದ್ಧ ನೀರು ಇವುಗಳ ಯೋಗದಿಂದ ಇವರ ರಕ್ತದ ಮೇಲೆ ಬಹು ಕೆಟ್ಟ ಪರಿಣಾಮವಾಗಿರುತ್ತದೆ. ಅದ್ದರಿಂದಲೇ ರಕ್ತಾಭಿಸರಣವು ಸರಿಯಾಗಿ ಸಾಗಲೊಲ್ಲದು. ಇದಲ್ಲದೆ ಇವರಿಗೆ ಔಷಧ ಪಥ್ಯಗಳೇನೂ ಸಡೆದಂತೆ ತೋರಲಿಲ್ಲ. ನೀವು ಸುಧಾರಿಸಿದವರಿದ್ದು, ಹೀಗೇಕೆ ಮಾಡಿದಿರಿ? ಈಶ್ವರನ ಯತ್ನ! ದುಃಖಿಸಬೇಡಿರಿ. ಇನ್ನು ಮುಂದೆ ಔಷಧಕೊಡುವ ಪ್ರಯೋಜನವಿಲ್ಲ." ಎಂದು ಹೇಳಿ ಡಾಕ್ಟರರು ಶಂಕರರಾಯನ ಅಪ್ಪಣೆಯನ್ನು ಪಡೆದು ಹೊರಟುಹೋದರು. ಡಾಕ್ಟರರ ಮಾತುಗಳನ್ನು ಲಕ್ಷ ಪೂರ್ವಕವಾಗಿ, ಕೇಳುತ್ತ ನಿಂತಿದ್ದ ಯಮುನಾಬಾಯಿಯು ಅಲ್ಲಿಂದಲ್ಲೇ ಕುಸಿ ಕೂತಳು. ದೀರ್ಘ ನಿಃಶ್ವಾಸವನ್ನು ಬಿಟ್ಟು ಸುತ್ತಲೂ ಶೂನ್ಯದೃಷ್ಟಿಯಿಂದ ನೋಡ ಹತ್ತಿದಳು. ಡಾಕ್ಟರರ ಪ್ರತಿಯೊಂದು ಮಾತುಗಳು ಯಮುನಾಬಾಯಿಯ ಅಂತಃಕರಣದಲ್ಲಿ ದೂರದವರೆಗೆ ಸೇರಿ, ವಿಷಬಾಣಗಳಂತೆ ಆ ಪಾಪಿಯ ಹೃದಯವನ್ನು ಚುಚ್ಚಹತ್ತಿದವು. ಶಂಕರರಾಯನು ಸರಲೆಯಕಡೆಗೆ ನೋಡಿ—" ಡಾಕ್ಟರರ ಮಾತುಗಳನ್ನು ಕೇಳಿದೆಯೊ? ಇಲ್ಲಿದ್ದು ನೀನು ಏನು ಕೆಲಸವನ್ನು ಮಾಡಿರುವೆ?" ಎಂದು

ಗಂಭೀರವಾಣಿಯಿಂದ ಕೇಳಿದನು. ಸರಲೆಗೆ ಉತ್ತರಕೊಡುವ ಮಾನಸಿಕ ಧೈರ್ಯ ವಾಗಲಿಲ್ಲ. ಕಂಠವು ಸದ್ಗದಿತವಾಯಿತು. ಕಣ್ಣುಗಳಿಂದ ಅಶ್ರುಧಾರೆಗಳು ನಡೆದವು. ಯಮುನಾಬಾಯಿಯು ಅಳುತ್ತಳುತ್ತ—"ಅಪ್ಪಾ ಶಂಕರಾ! ಇದೆಲ್ಲ ಅನರ್ಥಕ್ಕೆ ನೀಚಳಾದ ನಾನೇ ಕಾರಣಳು. ನನ್ನ ಬುದ್ಧಿವಂತೆಯಾದ ಸೊಸೆ—ಸರಲಾದೇವಿಯ ಮಾತಿನಂತೆ ನಡೆಯದೆ, ನನ್ನ ಅಹಂಕಾರದಿಂದಲೇ ನನ್ನ ಕಾಲಮೇಲೆ ಕಲ್ಲುಹಾಕಿ ಕೊಂಡೆನು. ನಿರ್ದೋಷೆಯಾದ ಸರಲಾದೇವಿಗೆ ಛಲಮಾಡಿದ್ದರ ಪಾಪದ ಫಲವನ್ನು ನಾನು ಅನುಭವಿಸುತ್ತೇನೆ." ಈ ಪ್ರಕಾರವಾಗಿ ನೆನಿನೆನಿಸಿಕೊಂಡು, ಆಕಾಶ ಪಟಲವು ಭೇದಿಸುವಂತೆ ಆಕ್ರೋಶಮಾಡಹತ್ತಿದಳು. ಸಾಮಾನ್ಯ ಸ್ತ್ರೀಯರು ಪ್ರಸಂಗ ವಿಶೇಷದಲ್ಲಿ ಧೈರ್ಯತಾಳಿ, ಸಾಹಸಮಾಡದೆ ಹತಾಶರಾಗಿ ಕೂತುಕೊಳ್ಳುವರು. ಕೈಮೀರಿ ಹೋದನಂತರ ಪಶ್ಚಾತ್ತಾಪ ಪಡುವರು. ಆದರೆ ಸರಲೆಯು ಅಂಥ ಮಂದ ಬುದ್ಧಿಯವಳಿದ್ದಿಲ್ಲ. ವಿವೇಕ ಭ್ರಷ್ಟರಂತೆ ಸುಮ್ಮನೇ ಅಳುತ್ತಕೂತು, ಕಾಲಹರಣ ಮಾಡುವದರಲ್ಲಿ ಅರ್ಥವಿಲ್ಲೆಂದು ತಿಳಿದು, ಸರಲೆಯು ಶಂಕರರಾಯನ ಅಪ್ಪಣೆಯನ್ನು ಪಡೆದು, ಅಣ್ಣನಾದ ಮಾಧವರಾಯನನ್ನು ಕರೆಯಲಿಕ್ಕೆ ತಾನೇ ಹೊರಟಳು; ಅದನ್ನು ಕಂಡು ಯಮುನಾಬಾಯಿಯು—"ತಂಗೀ, ಸರಲಕ್ಕಾ, ಮಾಧವರಾಯನನ್ನು ಕರೆಯಲಿಕ್ಕೆ ಹೊಗುವೆಯೊ? ನನ್ನಂಥ ಪಾಪಿಷ್ಠೆಯ ಮನೆಗೆ ಆ ಗುಣವಂತನು ಹ್ಯಾಗೆ ಬಂದಾನು? ಕಳೆದ ದೀಪಾವಳಿಗೆ ನಿನ್ನನ್ನು ಕರೆಯಲಿಕ್ಕೆ ಬಂದಾಗ, ನಿನ್ನ ಮೇಲಿನ ಅಸೂಯೆಯಿಂದ ಆ ಘನವಂತನಿಗೆ ಈ ಕೆಟ್ಟಬಾಯಿಂದ ನಿಷ್ಠುರಮಾತುಗಳನ್ನಾಡಿದೆನು. ಆದರೂ ಆ ಮುದ್ದುಮಗನು ತುಟಿಯನ್ನು ಎರಡು ಮಾಡಲಿಲ್ಲ. ಆ ಮಹಿಮನು ಜಗತ್ತನ್ನೇ ಅಪ್ತರೆಂದು ತಿಳುಕೊಂಡಿರಲು, ಪಾಪಿಯಾದ ನಾನು ಪ್ರತ್ಯಕ್ಷ ಅಪ್ತರನ್ನು ಸಹ ಶತ್ರುಗಳೆಂದು ತಿಳಿದೆನು. ತಂಗವ್ವಾ, ನಿನೇ ನನ್ನ ದೇವತೆಯು! ನಾನು ಸರ್ವಸ್ವೀ ಅಪರಾಧಿಯಿದ್ದೇನೆ. ನನ್ನ ಮಾಂಗಲ್ಯವನ್ನು ಕಾಯುವ ಭಾರ ನಿನ್ನನ್ನೇ ಕೂಡಿರುತ್ತದೆ."

ಈ ಪ್ರಕಾರ ಕೃತಾಪರಾಧವನ್ನು ನೆನಿನೆನಿಸಿ ಅಳುತ್ತಿರಲು, ಸರಲೆಯು ಅತ್ತೆಯವರನ್ನು ಸಮಾಧಾನಮಾಡಿ, ಶಂಕರರಾಯನು ತಂದ ಟಾಂಗೆಯನ್ನು ಹತ್ತಿಕೊಂಡು, ನಂಬಿಗೆಯ ಸೇವಕನನ್ನು ಸಂಗಡಕರಕೊಂಡು, ತವರ ಮನೆಗೆ ಹೋದಳು. ಮೊದಲು ಯಮುನಾಬಾಯಿಯ ಮನೆಗೆ ಬರಲಿಕ್ಕೆ ಮಾಧವರಾಯನ ಮನಸ್ಸು ಎಳಸದಿದ್ದರೂ, ಬಂದಂಥ ಸಂಕಟ ಸಮಯವನ್ನೂ ಸರಲೆಯ ಸರಳ ವರ್ತನವನ್ನೂ ಮನಸ್ಸಿನಲ್ಲಿ ತಂದು, ಹೊರಟು ಬಂದನು.

ಇತ್ತ ಯಮುನಾಬಾಯಿಯ ಕಣ್ಣುಗಳು ಮಾಧವರಾಯನು ಬರುವ ಮಾರ್ಗದ ಕಡೆಗೇ ಇದ್ದವು. "ನೀಚಳಾದ ನಾನು ಆತನಿಗೆ ಹಲವು ಸಾರೆ ನಿಷ್ಠುರ ಮಾತಗಳನ್ನಾಡಿದ್ದರಿಂದ ಆತನು ಬಹುತರವಾಗಿ ನನ್ನ ಮನೆಗೆ ಬರಲಿಕ್ಕಿಲ್ಲ. ನಾನು ಸಣ್ಣ ಸಣ್ಣ

ಮಾತಿಗೆ ಸಹ ಎರಡನೆಯವರ ತಪ್ಪು ಹಿಡಿದು, ಕಠಿಣ ಪ್ರಸಂಗದಲ್ಲಿಯೂ ಅವರಿಗೆ ನೆರವಾಗುವದಕ್ಕೆ ಹೋಗುವದಿಲ್ಲ. ಇಷ್ಟೇ ಅಲ್ಲ. ಅವರಿಗೆ ಹೆಚ್ಚು ಕಷ್ಟ ಸಂಭವಿಸುವಂತೆ ಕೈಲಾದಷ್ಟು ಪ್ರಯತ್ನಿಸುತ್ತಿರುತ್ತೇನೆ. ಅಂದವೇಲೆ ಅಸಹ್ಯಕರವಾದ ಮಾತುಗಳನ್ನಾಡಿದ ದುಷಳಾದ ನನ್ನ ಮನೆಗೆ ಮಾಧವರಾಯನು ಹ್ಯಾಗೆ ಬಂದಾನು?" ಎಂಬದಾಗಿ ತನ್ನ ಪಾಪಮಯ ಅಂತಃಕರಣಕ್ಕೆ ಅನ್ಯರ ಅಂತಃಕರಣವನ್ನು ಸರಿ ಮಾಡಿ ನೋಡುತ್ತ ಹೋದಂತೆ ಯಮುನಾಬಾಯಿಯ ಮನಸ್ಸು ಹೆಚ್ಚು ಹೆಚ್ಚು ತಳಮಳಿಸಹತ್ತಿತು. ಕೆಲಹೊತ್ತಿನನಂತರ ದೂರದಿಂದ ಟಾಂಗೆಯು ಕಾಣಿಸಹತ್ತಿತು. ಅವಳ ಭ್ರಾಂತಿಯುಕ್ತವಾದ ಕಣ್ಣಿಗೆ ಮಾಧವರಾಯನು ಕಾಣಿಸದಾಗಲು ಅವಳ ದುಃಖವು ಹೆಚ್ಚಾಯಿತು. ಕೃತಾಪರಾಧಕ್ಕಾಗಿ ಗಲ್ಲಗಲ್ಲ ಬಡಕೊಳ್ಳಹತ್ತಿದಳು. ಅಷ್ಟರಲ್ಲಿ ಟಾಂಗೆಯು ಬಂದು, ಮನೆಯಮುಂದೆ ನಿಂತಕೂಡಲೇ ಸರಲೆಯೂ, ಮಾಧವರಾಯನೂ ಕೆಳಗಿಳಿದರು. ಇಬ್ಬರನ್ನು ಕಂಡು ಯಮುನಾಬಾಯಿಗೆ ಆನಂದವಾಯಿತು. ಶಂಕರರಾಯನು ಮಾಧವರಾಯನ ಕೈ ಹಿಡಿದು, ಒಳಗೆ ಕರಕೊಂಡು ಬಂದನು. ಯಮುನಾಬಾಯಿಗೆ ಮೊದಲು ಶತ್ರುಸಮಾನನಾಗಿ ತೋರುತ್ತಿದ್ದ ಮಾಧವರಾಯನು ಇಂದು ಪ್ರತ್ಯಕ್ಷ ದೇವರಂತೆ ತೋರಹತ್ತಿದನು. ಮಾಧವರಾಯನು ಬಂದವನೇ ಗುರುರಾಯರ ಪ್ರಕೃತಿಯನ್ನು ನೋಡಿ–"ಬೇನೆಯು ಕಠಿಣವದೆ. ಅದರೂ ಗಾಬರಿಯಾಗಬೇಡಿರಿ. ಔಷಧ ಹಾಕಲಿಕ್ಕೆ ಬರುವಂತಿದೆ. ಸ್ವಲ್ಪ ತಡವಾಗಿದ್ದರೆ ಮಾತ್ರ ಬಹಳ ಕಠಿಣವಾಗುತ್ತಿತ್ತು." ಎಂದು 'ಹೇಮಗರ್ಭ' ಮಾತ್ರೆಯ ಪ್ರಯೋಗವನ್ನು ಮಾಡಿದನು. ಆ ಮಾತ್ರೆಯ ಯೋಗದಿಂದಲೋ, ಯಮುನಾಬಾಯಿಯ ಸೌಭಾಗ್ಯವು ಬಲವತ್ತರ ಬಿದ್ದದರಿಂದಲೋ, ಗುರುರಾಯರ ಪ್ರಕೃತಿಯು ದಿನದಿನಕ್ಕೆ ಸುಧಾರಿಸಹತ್ತಿತು. ಮುಂದೆ ೧೫–೨೦ ದಿವಸಗಳಲ್ಲಿ ಮನೆಯಲ್ಲಿಯೇ ಓಡಾಡಹತ್ತಿದರು. ಮುಂದೆ ಶಕ್ತಿಯುಮೇಲೆ ಔಷಧಕೊಡಲು ಒಂದು ತಿಂಗಳಲ್ಲಿ ಪ್ರಕೃತಿಯು ಮೊದಲಿನಂತೆ ಆಯಿತು. ಸರ್ವರಿಗೂ ಆನಂದವಾಯಿತು. ಯಮುನಾಬಾಯಿಯು ಹಿಂದಿನ ಅಪರಾಧಕ್ಕಾಗಿ ಮಾಧವರಾಯನಿಗೆ ಪರಿಪರಿಯಿಂದ ಹೇಳಿಕೊಳ್ಳಹತ್ತಿದಳು. ಅದಕ್ಕೆ ಮಾಧವರಾಯನು—"ತಾವು ಹಿರಿಯರು. ಹಾಗೆ ಅಂದು ಕೊಳ್ಳಬಾರದು. ಅದು ತಮ್ಮ ದೋಷವಲ್ಲ. ಕಾಲಮಹಿಮೆಯು. ತಾವು ಮನಸ್ಸಿಗೆ ಹಚ್ಚಿಕೊಳ್ಳಬಾರದು." ಎಂಬದಾಗಿ ಯಮುನಾಬಾಯಿಯ ಸಮಾಧಾನಮಾಡಿದನು. ಮಾಧವರಾಯನು ಅತ್ಯಂತ ಮಹತ್ವದ ಕೆಲಸಗಳನ್ನು ಸಹಜಿಟ್ಟು ಬಂದದ್ದರಿಂದ ಊರಿಗೆ ಹೋಗುವದಕ್ಕಾಗಿ ಅಪ್ಪಣೆ ಕೊಡಬೇಕೆಂದು, ಶಂಕರರಾಯನಿಗೂ, ಯಮುನಾಬಾಯಿಗೂ ಆಗ್ರಹದಿಂದ ಹೇಳಿಕೊಳ್ಳಹತ್ತಿದನು. ಕಡೆಗೆ ಅವರು ನಿರುಪಾಯರಾಗಿ, ಮಾಧವರಾಯನಿಗೆ ಮೇಜವಾನಿಯನ್ನು ಮಾಡಿಸಿ, ಊರಿಗೆ ಹೋಗಲಿಕ್ಕೆ ಅಪ್ಪಣೆಕೊಟ್ಟರು. ಹೋಗುವ ಮುಂದೆ ಮಾಧವರಾಯನು ಯಮುನಾ

ಬಾಯಿಗೆ ನಮಸ್ಕಾರಮಾಡಿದನು. ಕಳೆದ ದೀಪಾವಳಿಯಲ್ಲಿ ಇದೇ ಮಾಧವರಾಯನು ನಮಸ್ಕಾರಮಾಡಲು, ಅಂತರಂಗದಲ್ಲಿ ಶಪಿಸಿದ ಯಮುನಾಬಾಯಿಯು, ಇಂದು ಮನಃಪೂರ್ವಕವಾಗಿ ಆಶೀರ್ವದಿಸಿದಳು.

ಮುಂದೆ ೪--೬ ದಿವಸಗಳಲ್ಲಿ ಶಂಕರರಾಯನೂ ಮುಂಬೈಗೆ ಹೋದನು. ಮುಂದೆ ೩ ತಿಂಗಳಲ್ಲಿ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಹೊಂದಿದನು. ಅತನ ರಾಜನಿಷ್ಠೆ, ಸತ್ಯಪ್ರೀತಿ ಮೊದಲಾದ ಸದ್ಗುಣಗಳನ್ನು ಕಂಡು, ಕಲೇಕ್ಟರಸಾಹೇಬರು ತಾಲೂಕಿನ ಶಿರಸ್ತೇದಾರಿಕೆಗೆ ೫೫ ರೂಪಾಯಿ ಪಗಾರದಮೇಲೆ ನೇಮಿಸಿದರು. ಅಷ್ಟರಲ್ಲಿ ಸರಲೆಗೆ ಐದರೊಳಗೆ ಬಿದ್ದಿತ್ತು. ಯಮುನಾಬಾಯಿಯು ಮೊದಲಿನ ದುರ್ಗುಣಗಳೆಲ್ಲ ಅಳಿದುಹೋಗಿ, ಆ ಸ್ಥಳವನ್ನು ಸುಗುಣಗಳು ವ್ಯಾಪಿಸಿಕೊಂಡವು. ಇತ್ತಲಾಗಿ ಸರಲೆಯ ಅಭಿಪ್ರಾಯವಿಲ್ಲದೆ, ಮನೆಯೊಳಗಿನ ಯಾವ ಮಹತ್ವದ ಕೆಲಸಗಳನ್ನು ಯಮುನಾಬಾಯಿಯು ಬಹುತರವಾಗಿ ಮಾಡುತ್ತಿದ್ದಿಲ್ಲ. ಒಂದು ದಿವಸ ಮನೆಯಮುಂದಿನ ಉಪವನದಲ್ಲಿ ಸರಲೆಯೂ, ಅತ್ತಿಮಾವಂದಿರೂ ಕೂತಿರುವರು. ಶುಭ್ರವಾದ ಬೆಳದಿಂಗಳು ಬಿದ್ದಿತ್ತು. ಮನೋಹರವಾದ ಸೃಷ್ಟಿಸೌಂದರ್ಯವನ್ನು ನೋಡಿ, ಎಲ್ಲರೂ ಕೌತುಕ ಪಡುವರು. ಅಷ್ಟರಲ್ಲಿ ತಿರುಗಾಡಲಿಕ್ಕೆ ಹೋಗಿದ್ದ ಶಂಕರರಾಯನೂ ಅಲ್ಲಿಗೆ ಬಂದನು. ಸರಲೆಯು ಚಟ್ಟನೆ ಎದ್ದು ನಿಂತಳು. ಯಮುನಾಬಾಯಿಯು —"ಸರಲಾ! ನಿಮ್ಮರಾಯರು ಮಂಡಿಗೆಯಮೇಲೆ ಒಹುಪ್ರೀತಿ. ನಿನ್ನ ಪ್ರೀತಿಯು ಖೀರಿನ ಮೇಲೆ. ನಾಳೆ ಶ್ರೀಮಂತಕಾರ್ಯದಲ್ಲಿ ಖೀರು ಮಂಡಿಗೆಗಳೆರಡನ್ನೂ ಮಾಡಿದರಾಯಿತು. ಮನೆಯ ಯಜಮಾನರಿಗೆ ಇವೆರಡೂ ಶೇರುವದಿಲ್ಲ. ಅವರ ಸಲುವಾಗಿ, ಸಂಡಿಗುಳಿ, ಕಾಯರಸಗಳನ್ನು ಸ್ವಲ್ಪ ಹೆಚ್ಚು ಮಾಡಿದರಾಯಿತು. ಯಾಕೆ? ನಿನ್ನ ಮನಸ್ಸಿಗೆ ಹ್ಯಾಗೆ ಬರುತ್ತದೆ?" ಎಂದು ವಿನೋದದಿಂದ ಕೇಳಿದಳು. ಕೂಡಲೇ ಗುರುರಾಯರು— "ಮನೆಯ ಯಜಮಾನರಿಗೆ ಸೇರದೆ ಇದ್ದದ್ದು, ಯಜಮಾನಗಾದರೂ ಸೇರಲಾರದೆಂಬದು ಸಹಜವದೆ." ಎಂದು ಮುಗುಳುನಗೆ ನಗುತ್ತ ಮಾತಾಡಿದರು. ಆ ಮೇಲೆ ಶಂಕರರಾಯರು ಸ್ವಲ್ಪ ನಕ್ಕು— "ಮಂಡಿಗೀಖೀರಿನ ಆನಂದದ ಸುದ್ದಿಯಲ್ಲಿ ಇಂದಿನ ಅಡಿಗೆಯನ್ನು ಸಹ ಮರೆತಂತೆ ಕಾಣುತ್ತದೆ." ಎಂದು ವಿನೋದ ಮಾಡಿದನು. ಅದಕ್ಕೆ ಸರಲೆಯು—"ಅಡಿಗೆ ಯಾತಕ್ಕೆ! ಇದಕ್ಕಿಂತಲೂ ಹೆಚ್ಚಿನ ಸುಖವು ಸ್ವರ್ಗದಲ್ಲಿರುವದುಂಟೇ?" ಎಂಬ ಸವಿನೋದ ಉದ್ಗಾರವನ್ನು ಅಸ್ಪಷ್ಟವಾಗಿ ಹೊರಗೆಡಹಿದಳು.

ಪ್ರಿಯ ವಾಚಕರೇ! ಸರಲೆಯ ಉದ್ಗಾರವು ಯಥಾರ್ಥವಿರಬಹುದೋ?

ಲಿಂಗೋ ರಾಮಚಂದ್ರ ಅಕ್ಕೂರ.
ಸ್ಕೂಲ ಹೆಡ್‌ಮಾಸ್ತರ ಕನವಳ್ಳಿ.

ವಿನೋದ.

ಆ—ಯಾಕೆ ರಾಯರೆ! ನಿನ್ನೆರಾತ್ರಿ ನಿಮ್ಮ ಹೊಟ್ಟೆ ಕಡಿಯುತ್ತಿತ್ತೇನು? ನಿಮ್ಮ ಗೋಳಾಟವನ್ನು ಕೇಳಿ ನನಗಂತೂ ನಿದ್ರಿಯೇ ಬರಲಿಲ್ಲ.

ರಾಯರು—ಛೇ ನಾನೇನು ಅಳಲಿಲ್ಲ. ನಾನು ನಿನ್ನಿನಿಂದ ತುಸು ಸಂಗೀತವನ್ನು ಕಲಿಯಲಾರಂಭಿಸಿದ್ದೇನೆ!

* * * *

ಶಾಮರಾಯರು—ರಾಮರಾಯರೇ! ನಿಮ್ಮ ಮನಿಯೊಳಗಿನ ಟೊಣಪನೆಲ್ಲಿದ್ದಾನೆ? ಕಾಣುವದಿಲ್ಲ.

ರಾಮರಾಯರು—ನಾಳೆ ಆಪನ ಪರೀಕ್ಷೆಯ ರಿಝಲ್ಟು ಆಗತಕ್ಕದ್ದಿದೆ.

* * * *

ನಾಟಕದ ಮುಖ್ಯ ಪಾರ್ಟುತಕ್ಕೊಳ್ಳುವವನು—ನನಗೆ ಮಾತ್ರ ಬಂದು ಮಾತಿನ ಪ್ರಾಸವಿಲ್ಲ.

ಸ್ನೇಹಿತ—ಆದ್ಯಾತರದು?

ನಾಟ. ಪಾತ್ರ—"ವನ್ಸಮೋರ" ತಕ್ಕೊಳ್ಳುವದು.

* * * *

ಪಂಡಿತ—ರಾಯರೇ! ನಾನು ದೆಶಗ್ರಂಥಿ ಇರುವೆನು ಪರೀಕ್ಷೆಮಾಡಿ ಏನಾದರೂ ಸಂಭಾವನೆ ಕೊಡಬೇಕು. ತಮ್ಮ ಎದುರಿಗಿರುವ ವಕೀಲರು ಬಹಳ ಸಹಾಯ ಮಾಡಿದರು.

ರಾಯರು—(ಆನಂದದಿಂದ) ಹಾಗಾದರೆ ಇಲ್ಲಿಂದ ಏಳಿರಿ. ಅವರು ನಮ್ಮ ಖಾಸ ಅಣ್ಣಂದಿರು. ಅದು ಅವರು ಕೂಡ್ರುವ ಸ್ಥಳವು.

* * * *

ವೃದ್ಧರೋಗಿ (ವೈದ್ಯನಿಗೆ)—ನನ್ನ ತಲೆಯಾಕೆ ತಿರುಗುತ್ತದೆ?

ವೈದ್ಯ—ವೃದ್ಧಾಪ್ಯದಿಂದ.

ವೃ—ನನಗೆ ಕೆವ್ಮುಯಾಕೆ ಬರುತ್ತದೆ?

ವೈ—ವೃದ್ಧಾಪ್ಯದಿಂದ.

ವೃ—ನನಗೆ ಹಸಿಯೆ ಯಾಕೆ ಆಗುವದಿಲ್ಲ?

ವೈ—ವೃದ್ಧಾಪ್ಯದಿಂದ.

ವೃ—(ಸಿಟ್ಟಿನಿಂದ) ಪ್ರಕೃತಿಯೆ ಪರೀಕ್ಷೆಯಿಲ್ಲದೆ ಯಾಕೆ ವೈದ್ಯರಾದಿರಿ? ನಾನು ಇನ್ನೊಬ್ಬರ ಕಡಿಗೆ ಹೋಗುತ್ತೇನೆ.

ವೈ—(ಶಾಂತರಿಂದ) ನೀವು ಮತ್ತೊಬ್ಬರ ಕಡಿಗೆ ಹೋಗಿರಿ. ಏನೂ ಚಿಂತೆಯಿಲ್ಲ? ಆದರೆ ನಿಮಗೆ ಸಿಟ್ಟು ಬರುವದು ಸಹ ವೃದ್ಧಾಪ್ಯದಿಂದಲೇ ಎಂಬುದನ್ನು ಮಾತ್ರ ಲಕ್ಷ್ಯದೆಲ್ಲಿಡಿರಿ.

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं वाग्भूषणम् भूषणम् ॥

(भर्तृहरिः)

ಸಂಪುಟ ೧೬.	ಎಪ್ರಿಲ ೧೯೧೪.	ಸಂಚಿಕೆ ೯.

"ವಿನೋದಿಯ ಯುಗಾದಿ."

ಶ್ರೀಮತ್ ಶಾಲಿವಾಹನ ಶಕ ವರ್ಷ ೧೮೩೫ ನೇ ವಿರೋಧಿಕೃತ ಸಂವತ್ಸರದಲ್ಲಿ ಮಲಗಿದ ನಾನು ೧೮೩೬ ನೇ ಪರೀಧಾವೀ ಸಂವತ್ಸರದಲ್ಲಿ ಆಕಳಿಸುತ್ತ, ಎಡಬಲಕ್ಕೆ ನೋಡುತ್ತ, ಮುಚ್ಚಿದ ಮುಸುಕು ತೆರೆಯುದೆ, ಇನ್ನೂ ಕಣ್ಣೂರಸಿ ಕೊಳ್ಳುತ್ತ ಹಾಸಿಗೆಯಮೇಲೆ ಎದ್ದು ಕುಳಿತೆನು. ಇದರಲ್ಲಿ ಎಷ್ಟು ಮಾತ್ರವೂ ಅತಿಶಯೋಕ್ತಿಯಿಲ್ಲ; ಕಲ್ಪಿತವಿಲ್ಲ. ಒಂದು ಸಂವತ್ಸರದಲ್ಲಿ ಮಲಗಿ ಇನ್ನೊಂದು ಸಂವತ್ಸರದಲ್ಲೇಳುವ ನನ್ನಾ ಗಾಢನಿದ್ದೆಯನ್ನು ನೋಡಿ, ನೀವೆಲ್ಲರೂ ನನಗೆ "ಅಭಿನವ ಕುಂಭಕರ್ಣನೆಂಬ" ಬಿರುದು ಕೊಡಲು ಸಿದ್ಧರಾಗಿರಬಹುದು. ನಿಮ್ಮಾ ಬಿರುದೂ ಬೇಡ, ಬಿದುರನ್ನೂ ಒಲ್ಲೆನು. ಈ ದಿನವೇನೋ ಯುಗಾದಿ! ನಾನಾದರೂ ವಿನೋದಿ!!

ನಾನು ಮಲಗಿದ್ದು ವಿರೋಧಿಕೃತ್ ಸಂವತ್ಸರದಲ್ಲಿ; ಎದ್ದು ಕುಳಿತಿದ್ದು ಪರೀಧಾವೀ ಸಂವತ್ಸರದಲ್ಲಿ, ಮಲಗುವಾಗ ಫಾಲ್ಗುನ ಮಾಸ, ಏಳುವಾಗ ಚೈತ್ರ ಮಾಸ. ಮಲಗುವ ಸಮಯದಲ್ಲಿ ಅಮಾವಾಸೆಯ ಕಗ್ಗತ್ತಲೆ; ಏಳುವಾಗ ಮಧು ಮಾಸದ ಮನೋಹರವಾದ ಉಷಃಕಾಲ. ಒಟ್ಟಿನಮೇಲೆ ನಾನು ಮಲಗುವಾಗ ಇದ್ದ ಯೋಗವಿಲ್ಲ; ಕರಣವಿಲ್ಲ; ವಾರವಿಲ್ಲ; ತಿಥಿಯಿಲ್ಲ; ನಕ್ಷತ್ರವಿಲ್ಲ. ಪಕ್ಷ-ಮಾಸಋತು-ಸಂವತ್ಸರ-ಶಕಾಬ್ದಗಳೇ ಮೊದಲಾದುವೆಲ್ಲಾ ಬದಲಾಗಿ ಹೋಗಿವೆ! ಇಷ್ಟೊಂದು ಕಾಲವು ಕ್ರಮಿಸುವ ವರೆಗೂ ನಾನೆಷ್ಟು ನಿದ್ದೆ ಮಾಡಿ ಮಾಡಿದ್ದೆ ನೋ-ದೇವರಿಗೇ ಗೊತ್ತು!!

ನನ್ನಾ ಗಾಢವಾದ ನಿದ್ದೆಯಲ್ಲಿ ಒಂದು ವಿಚಿತ್ರವಾದ ಕನಸನ್ನು ಕಂಡೆನು. ಅದನ್ನು ನಮ್ಮ ವಾಗ್ಭೂಷಣದ ವಾಚಕ ಮಹನೀಯರ ಮುಂದೆ ಯಥಾರೀತಿಯಾಗಿ ಹೇಳಿಬಿಡುವೆನು.

ಈ ದಿನ ನಾನು ಏನೋ ಒಂದು ಕಾರ್ಯದ ನಿಮಿತ್ತವಾಗಿ ನಮ್ಮ ನೆರೆಯ ಊರಿಗೆ ಪ್ರವಾಸ ಮಾಡಿದ್ದೆನು. ಆ ದಿನ ಆ ಊರಲ್ಲಿ ಒಂದು ಮಹಾಸಭೆಯು ಸೇರಿದ್ದು, ಅನೇಕಾನೇಕ ಪಂಡಿತ ಮಹನೀಯರು ಸಭಾಸ್ಥಾನದಲ್ಲಿ ವಂಡಿತರಾಗಿದ್ದರು. ಆ ನಡುವೆ ಒಬ್ಬ ಮಹಾ ಪುರುಷನು ಎದ್ದು ನಿಂತು ತನ್ನ ಉಪನ್ಯಾಸವನ್ನು ಆರಂಭಿಸಿದೆನು.

ಕರ್ನಾಟಕ ಭಾಷಾಭಿವೃದ್ಧಿಯ ಸಲುವಾಗಿ ಬೇರೆ ಬೇರೆ ಜನರು ಪರಿಪರಿಯಿಂದ ಪ್ರಯತ್ನ ಮಾಡುತ್ತಲಿದ್ದಾರೆ. ನಾನಾದರೋ ಅಜ್ಞ; ಏನೂ ಅರಿಯದವ; ಕಯ್ಯಲ್ಲಿ ಹಣ ಕಾಸುಗಳಾದರೂ ಇವೆಯೇ, ಅವೂ ಇಲ್ಲ. ಇಂತಹ ನನ್ನಿಂದ ಭಾಷಾ ಪೋಷಣೆಗೆ ಸಹಾಯವೇನಾದೀತು ? ಶಾಂತ ಚಿತ್ತದಿಂದ ವಿಚಾರಮಾಡಿ, ದೊಡ್ಡ ದೊಡ್ಡ ಶಬ್ದಗಳನ್ನು ಜೋಡಿಸಿ ಪಶ್ಚಾತ್ತಾಪ ಸೂಚಕವಾದ ಉಪನ್ಯಾಸವನ್ನು ಮಾಡಿ, ಸಭಿಕರ ಮನೋರಂಜನೆಯನ್ನೂ ಮಾಡಿ, ಅವರನ್ನೆಲ್ಲ ಕರ್ತವ್ಯದಲ್ಲಿ ತೊಡಗಿಸುವಂತೆ ಮಾಡುವ ವಿಜ್ಞಾನವಾಗಲಿ, ವಕ್ತೃತ್ವವಾಗಲಿ ನನ್ನಲ್ಲಿ ಏಷ್ಟು ಮಾತ್ರವೂ ಇಲ್ಲ; ಆದರೂ " ಅಕರಣಾನ್ಮಂದ ಕರಣಂವರಂ " ಎಂಬಂತೆ ಏನೋ ನನ್ನ ಅಲ್ಪಮತಿಗೆ ತಿಳಿದಷ್ಟು " ಭಾಷಾಭಿವೃದ್ಧಿಯ ಉಪಾಯ " ಎಂಬೀ ವಿಷಯದ ಮೇಲೆ ಒಂದೆರಡು ಮಾತುಗಳನ್ನು ತಮ್ಮಮುಂದೆ ಇರಿಸಲು ಯತ್ನೆ ಮಾಡುತ್ತೇನೆ.

ಕರ್ನಾಟಕ ಭಾಷೆಯ ಪುನರುದ್ಧಾರಣಕ್ಕೆ ಅನೇಕರು ಅನೇಕ ಉಪಾಯಗಳನ್ನು ಸೂಚಿಸುವರು. ಕೆಲವರು ಮುರಿದು ಮುಕ್ಕಾಒಟ್ಟೆಯಾದ ಹಳೆಗನ್ನಡವನ್ನು ಪುನ: ಜೀರ್ಣೋದ್ಧಾರ ಮಾಡಬೇಕೆನ್ನುವರು. ಅದರಲ್ಲಿ ನೂತನ ವಿಷಯಗಳನ್ನು ಸೇರಿಸಿ ಗ್ರಂಥಗಳನ್ನು ಬರೆಯಬೇಕೆನ್ನುವರು. ಮತ್ತೆ ಕೆಲವರು ಸದ್ಯಕ್ಕೆ ಹಳೆಗನ್ನಡವನ್ನು ಕೈಬಿಟ್ಟು ಬಿಡಬೇಕು. ಯಾರಿಗೂ ತಿಳಿಯದ——ವ್ಯವಹಾರದಲ್ಲಿಲ್ಲದ ಮೃತ-ಭಾಷೆಯಲ್ಲಿ, ಯಾವ ವಿಷಯವನ್ನು ಬರೆದರೂ ಅಷ್ಟೇ; ಕುರುಡನ ಕಯ್ಯಲ್ಲಿ ದೀಪವನ್ನು ಕೊಟ್ಟಂತೆಯೇ ಸರಿ. ಬರೆಯತಕ್ಕದ್ದನ್ನೆಲ್ಲಾ ಹೊಸಗನ್ನಡದಲ್ಲಿಯೇ ಬರೆಯಬೇಕು; ಎಂದು ಹೇಳುವರು. ಇಂಗ್ಲಿಷವೇ ಮೊದಲಾದ ಪುರೋವೃದ್ಧಿಯನ್ನು ಹೊಂದಿರುವ ಭಾಷೆಗಳಲ್ಲಿರುವ ವಿದ್ಯಾಸಂಗ್ರಹದೊಳಗಿನ ಬೇರೆ ಬೇರೆ ವಿಷಯಗಳನ್ನು ಭಾಷಾಂತರಿಸಿಯೋ ರೂಪಾಂತರಿಸಿಯೋ ಕನ್ನಡ ಭಾಷಾಭಾಂಡಾರವನ್ನು ತುಂಬಬೇಕೆಂದು ಕೆಲವರು ಪ್ರತಿಪಾದಿಸಿದರೆ ಇವರ ವಿರುದ್ಧಾಭಿಪ್ರಾಯ

ವುಳ್ಳವರು, ಕನ್ನಡಿಗರು ಆ ಬಗೆಯ ಗೋಜಿಗೆ ಹೋಗದೆ ಮೂಲ ಗ್ರಂಥಗಳನ್ನೇ ಬರೆದು ಭಾಷೆಯನ್ನು ಬೆಳಿಸುವದು ಉಚಿತವೆಂದು ಹೇಳುವರು. ಸದ್ಯಕ್ಕೆ ಕನ್ನಡ ಭಾಷೆಯಲ್ಲಿಲ್ಲದ ಪರಭಾಷೆಯ ಶಬ್ದಗಳನ್ನು ಮನಬಂದಂತೆ ಕೈಕಾಲು ಮುರಿದು ಇಲ್ಲವೆ ಹಾಗೆಯೇ ಕನ್ನಡಕ್ಕೆ ಸೆಳೆತಂದು ಅದನ್ನು ಪುಷ್ಟೀಕರಿಸಬೇಕೆಂದು ಮತ್ತೆಕೆಲವರು ಅಭಿಪ್ರಾಯ ಪಡುವರು. ಈ ಜನರಿಗೂ ವಿರೋಧಿಗಳಿಲ್ಲೆಂಬಂತಿಲ್ಲ. ಅವರು ಇವು ಕೇವಲ ಅಸ್ಪೃಶ್ಯಗಳೆಂದೂ, ಇವುಗಳನ್ನು ಸೇರಿಸಿಕೊಂಡು ಪವಿತ್ರವಾದ ಕನ್ನಡ ಭಾಷೆಯನ್ನು ಕೆಡಿಸಿಕೊಳ್ಳಬಾರದೆಂದೂ, ಇವುಗಳನ್ನು ನೋಡಿ ದೊಡನೆಯೇ ಮೂರು ಮಾರು ದೂರ ಸರಿಯಬೇಕೆಂದೂ ಹೇಳುವರು.

ಈ ಬಗೆಯಾಗಿ ಅನೇಕರು ಅನೇಕ ರೀತಿಯಿಂದ ಭಾಷಾಭಿವೃದ್ಧಿಯ ಮಾರ್ಗವನ್ನು ಸೂಚಿಸಿದಂತೆಯೇ ನಾನಾದರೂ ನನ್ನ ಮನಸ್ಸಿನೊಳಗಿನ ವಿಚಾರಗಳನ್ನು ತಮ್ಮಮುಂದೆ ಹೇಳಿಬಿಡುವೆನು. ಗುಣವೆಷ್ಟೋ, ದೋಷವೆಷ್ಟೋ ಅದನ್ನು ನಿರ್ಣಯಿಸುವ ಭಾಗವು ತಮ್ಮಕಡೆಗೇ ಸರಿ.

ಅಂತಸ್ಥ ಮನೋವಿಕಾರಗಳ ಪ್ರತಿಬಿಂಬವೇ ಭಾಷೆಯೆನಿಸುವದು. ಅದರಿಂದ ನಮ್ಮಲ್ಲಿ ಶುದ್ಧವಾದ ಹಾಗು ಉಜ್ವಲವಾದ ಮನೋವಿಕಾರಗಳನ್ನು ಹುಟ್ಟಿಸುವದೇ ಪ್ರಥಮೋಪಾಯವೆಂದು ನನ್ನ ಅಭಿಪ್ರಾಯವು. ಭಾಷಾಂತರಗಳೂ ರೂಪಾಂತರಗಳೂ ಅಂತಸ್ಥಮನೋವಿಕಾರಗಳಿಗೆ ವ್ಯವಸ್ಥಿತ ರೂಪವನ್ನು ಕೊಡತಕ್ಕ ಸಾಧನಗಳಲ್ಲದೆ, ಈ ಬಗೆಯ ಕೃತ್ರಿಮ ಉಪಾಯಗಳಿಂದ ಭಾಷೆಯು ರಸಭರಿತವಾಗುವದೆಂದು ನಾನೆಂದೂ ಹೇಳಲಾರೆನು. ಈ ಮಾತಿನ ನಿಶ್ಚಯವು ನಾವು ಹುಂಬರೆಂದು ಹೀಯಾಳಿಸುವ ಹಳ್ಳಿಗಾಡ ಜನರ ಲಾವಣೀ ಪದಗಳನ್ನೂ ಪೆಟ್ಟಿಗೆ ತುಂಬ ಲಕ್ಷಣಗ್ರಂಥಗಳನ್ನೂ ವ್ಯಾಕರಣಗಳನ್ನೂ ಮುಖಸ್ಥ ಮಾಡಿಕೊಂಡು ಅಕ್ಷರಕ್ಕೆ ಅಕ್ಷರವನ್ನು ಹೊಂದಿಸಿ ಕವಿತಾವನಿತೆಯ ತುರುಬು ಹಿಡಿದು ಎಳೆತಂದ ಘನ ಪಂಡಿತರ ಕವಿತೆಗಳನ್ನೂ ಹೊಲಿಸಿ ನೋಡಿದರೆ ತಾನೇ ಕಂಡು ಬರುವದು. ಕನಕದಾಸ, ಪುರಂದರದಾಸರು, ಶಬ್ದಾನುಶಾಸನ ಕೈಪಿಡಿಗಳನ್ನು ಓದಿದ್ದಿಲ್ಲ; ನೋಡಿದ್ದಿಲ್ಲ; ಹೆಸರುಸಹ ಕೇಳಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ ಅವರ ಕವಿತೆಗಳೊಳಗಿನ ವಿಲಕ್ಷಣವಾದ ಕಾವ್ಯರಸವನ್ನು ನೋಡಿರಿ. ಇದಕ್ಕೆ ಕಾರಣವೇನು? ಇದಕ್ಕೆ ಆಯಾವಿಷಯಗಳಲ್ಲಾದ ಅವರ ಹೃದಯದ ಸ್ಫೂರ್ತಿಯೇ ಕಾರಣವು.

ಭಾಷೆಯು ಸ್ವತಂತ್ರವಾದದ್ದಲ್ಲ; ಅನ್ಯ ವಿಷಯಗಳ ಆಧಾರವಿಲ್ಲದೆ ಅದು ಮುಂದಕ್ಕೆ ಸಾಗುವಂತಿಲ್ಲ. ಅದಕ್ಕಾಗಿ ನಮ್ಮ ಪರಿಸ್ಥಿತಿಯು ಬದಲಾದಂತೆ ಭಾವಾಸ್ಥಿತಿಯಲ್ಲಿಯಾದರೂ ಹೆಚ್ಚುಕಡಿಮೆಗಳಾಗಲಿಕ್ಕೆ ಬೇಕು. ಅದಕ್ಕಾಗಿ ಹಳೆಗನ್ನಡವನ್ನು ಪೂರಾ ಪುನರುಜ್ಜೀವನ ಮಾಡುವೆವೆಂದರೆ ಅದು ಈಗ ತಾನೇ ಸಾಧ್ಯ

ವಿಲ್ಲ. ಹಾಗೆಂದು ಅದನ್ನು ಬಿಸುಟು ಬಿಡೋಣವೇ, ಅದೂ ಸರಿಯಲ್ಲ. ದುಃಖದಿಂದ ಅಳುವ ಹುಡುಗನನ್ನು ಹೀಗೆಯೇ ಅಳೆಂದು ನಿರ್ಬಂಧಿಸುವದು ಹ್ಯಾಗೆ ಅಸಾಧ್ಯವೋ ಹಾಗೆ ಇಂಥ ಶಬ್ದಗಳನ್ನು ಹೀಗೆಯೇ ಉಚ್ಚರಿಸಿ ಮಾತಾಡಿರೆಂದು ಜನರನ್ನು ನಿರ್ಬಂಧ ಪಡಿಸುವದೂ ಅಸಾಧ್ಯವು. ಹೀಗೆಂದ ಮಾತ್ರಕ್ಕೆ ಯಾವತ್ತು ಲಕ್ಷಣ ಗ್ರಂಥಗಳನ್ನೂ ವ್ಯಾಕರಣಗಳನ್ನೂ ಮೂಲೆಗೆ ಎಸೆದು ಬಿಟ್ಟು ಬೇಕು ಬೇಕಾದವರು ತಮ್ಮ ಮನಬಂದಂತೆ ಮಾತಾಡಲಿ, ಮನಬಂದಂತೆ ಗ್ರಂಥಗಳನ್ನು ಬರೆಯಲಿ, ಎಂದು ಹೇಳಿದಂತಾಗುವದಿಲ್ಲ. ವ್ಯಾಕರಣದ ನಿಯಮಗಳನ್ನು ಸಾಧ್ಯವಾದ ಮಟ್ಟಿಗೂ ಉಲ್ಲಂಘಿಸದಂತೆ ಪ್ರತಿಯೊಬ್ಬನೂ ಎಚ್ಚರಗೊಳ್ಳಲಿಕ್ಕೆ ಬೇಕು. ಆದರೆ ಅನ್ಯಭಾಷೆಗಳ ಹಾಗು ಅನ್ಯ ಸುಧಾರಣೆಗಳ ಸಂಘರ್ಷಣದಿಂದ ನಮ್ಮಲ್ಲುಂಟಾದ ವಿಚಾರಗಳಿಗೂ ವಿಕಾರಗಳಿಗೂ ನಮ್ಮ ಹಳೇ ವ್ಯಾಕರಣದ ನಿಯಮಗಳು ಸರಿಹೊಂದುವದಿಲ್ಲ. ಹೊಸ ಪ್ರಯೋಗಗಳಾಗಲಿ ಹೊಸ ಶಬ್ದಗಳಾಗಲಿ ಅವು ಯಾವ ಭಾಷೆಯವೇ ಇರಲಿ, ನಮ್ಮ ಭಾಷೆಯಲ್ಲಿ ಚನ್ನಾಗಿ ಪ್ರಚಾರದಲ್ಲಿ ಬಂದಬಳಿಕ ಅವುಗಳನ್ನು ಬಹಿಷ್ಕರಿಸಿ ಮುರಾರಿಯು ಮೂರನೆಯ ಪಂಥದಿಂದ ಹೊಸ ಪ್ರಯೋಗಗಳನ್ನು ಹುಟ್ಟಿಸುತ್ತ ಹೋಗುವದು ತಕ್ಕದ್ದಲ್ಲ. ರೈಲಿಗೆ ರೈಲು ಇಲ್ಲವೆ ಉಗಿಬಂಡಿಯೆಂದೇ ಹೇಳಬೇಕಲ್ಲದೆ ಧೂಮ-ಶಕಟವೆಂಬ ನೂತನ ಶಬ್ದವನ್ನು ಕಲ್ಪಿಸುತ್ತ ಕೂಡ್ರಬಾರದೆಂಬದೇ ನನ್ನ ಅಭಿಪ್ರಾಯವು.

ಇನ್ನು ಭಾಷಾಭಿಮಾನಿಗಳ ಕರ್ತವ್ಯದ ಸಂಬಂಧದಿಂದ ಒಂದೆರಡು ಮಾತುಗಳನ್ನು ಹೇಳಿ ಪ್ರಕೃತ ವಿಷಯವನ್ನು ಮುಗಿಸೋಣ.

ಕರ್ನಾಟಕ ಭಾಷೆಯಲ್ಲಿ ಲೇಖಕರಿಗೆ ಕಡಿಮೆಯಿಲ್ಲ. ಅವರ ಬರಹಗಳಿಗೆ ಆಶ್ರಯದಾತರೇ ಬೇಕಾಗಿರುವರು. ಅವು ಉದಾರ ಬುದ್ಧಿಯುಳ್ಳ ವಾಚಕ ಮಹನೀಯರ ಹಾದಿಯನ್ನು ನೋಡುತ್ತಿರುವವು. ಒಳ್ಳೊಳ್ಳೇ ಭಾಷಾಭಿಜ್ಞರೆಂದು ಹೆಸರು ಪಡೆದ ಪಂಡಿತ ಮಹನೀಯರಿಗೂಸಹ ಎಷ್ಟೋ ಗ್ರಂಥಗಳ ಹೆಸರುಸಹ ಗೊತ್ತಿಲ್ಲ. ಹೀಗಾಗಲು ಲೇಖಕರೂ ಕೆಲಮಟ್ಟಿಗೆ ಕಾರಣರೆಂದು ಹೇಳಬಹುದು. ಅದರಿಂದ ಬರಹಗಾರರ ಸಂಬಂಧದ ಒಂದೆರಡು ವಿಚಾರಗಳನ್ನು ಇಲ್ಲಿ ಹೇಳಿದರೆ ಅದು ಅವ್ಯಾಸಂಗಿಕವಾಗಲಾರದೆಂದು ತಿಳಿಯುತ್ತೇನೆ.

ಸಾಂಪ್ರತಕಾಲದ ಲೇಖಕ ಮಹನೀಯರು ಸಾಧ್ಯವಾದ ಮಟ್ಟಿಗೂ ಸರ್ವರಿಗೂ ತಿಳಿಯಬಹುದಾದ ಅಚ್ಚಗನ್ನಡದಲ್ಲಿಯೇ ಬರೆಯಲಿಕ್ಕೆ ಯತ್ನಿಸಬೇಕು. ಅದರಲ್ಲಿ ಅವ್ಯಾಸಂಗಿಕವಾದ ಹಳೆಗನ್ನಡ ಶಬ್ದಗಳಾಗಲಿ ಬಳಕೆಯಲ್ಲಿಲ್ಲದ ಪುಸ್ತಕದ ಸಂಸ್ಕೃತ ಶಬ್ದಗಳಾಗಲಿ ಬರಕೂಡದು. ಸಾಮಾನ್ಯವಾದ ವ್ಯಾವಹಾರಿಕ ಭಾಷೆಯಲ್ಲಿಯೇ ಬರೆಯುತ್ತಿರಬೇಕು. ಸಾಧ್ಯವಾದಷ್ಟು ಜನರರಿಯುವ ಪದ

ಗಳನ್ನು ಪ್ರಯೋಗಿಸಿ ತಾನೇ ಪಂಡಿತನೆನಿಸಿಕೊಂಡು ಅರಸರಿಂದ ಉಚಿತಗಳನ್ನೂ ಜನರಿಂದ ಜಯಪತ್ರಗಳನ್ನೂ ಹೊಂದತಕ್ಕ ಸಮಯವು ಈಗ ಉಳಿದಿಲ್ಲ.

ಗ್ರಂಥದೊಳಗಿನ ವಿಷಯಗಳು ಸಾಂಸ್ಕೃತಕಾಲಕ್ಕೆ ಸಂಬಂಧಿಸಿದವಿರಬೇಕು. ಪುನಃ ಅದೇ ಭಾರತ; ಪುನ: ಅದೇ ರಾಮಾಯಣ; ಇವು ಸಾಕಾಗಿವೆ. ಅವನ್ನು ನಾವು ನಮ್ಮ ಪೂರ್ವಜರ ಗ್ರಂಥಭಾಂಡಾರದೊಳಗಿಂದ ಓದಿ ತಿಳುಕೊಂಡರೆ ಸಾಕು. ಹೊಸ ಹೊಸ ಶಾಸ್ತ್ರೀಯ ವಿಷಯಗಳು, ನೈತಿಕ ವಿಷಯಗಳು ಇವೇ ಮೊದಲಾದವುಗಳನ್ನು ಬೇರೆ ಬೇರೆ ಭಾಷೆಗಳಿಂದ ಸೆಳೆದುಕೊಂಡು ಕನ್ನಡ ಭಾಷಾ ಭಾಂಡಾರವನ್ನು ತುಂಬಬೇಕು.

ಕನ್ನಡದಲ್ಲಿ ಪದ್ಯಗ್ರಂಥಗಳು ಬೇಕಾದಷ್ಟಿವೆ. ಅದಕ್ಕಾಗಿ ಪುನಃ ಪುನಃ ಹಳ್ಳಿಯ ಹುಂಬರು ಸಹ ತಿಳಿಯುತ್ತಿರುವ ವಿಷಯಗಳನ್ನು ಯಾರೂ ಅರಿಯದ ಭಾಷೆಯಲ್ಲಿ ವೃತ್ತಗಳಾಗಿಯೂ ಕಂದಗಳಾಗಿಯೂ ಹೆಣೆಯುವದರಲ್ಲಿ ಎಷ್ಟುಮಾತ್ರವೂ ಜಾಣತನವಿಲ್ಲ. ಹಾಗೆ ಮಾಡುವದಕ್ಕಿಂತ ಮಾಗಿಯು ಕೋಗಿಲೆಯುಂತೆ ಸುಮ್ಮನಿರುವದೇ ಲೇಸು.

ನಮ್ಮಲ್ಲಿ ಇತಿಹಾಸ ಗ್ರಂಥಗಳು ತೀರ ಕಡಿಮೆ. ಇದರಿಂದ ನಮ್ಮ ಪೂರ್ವಜರ ಗುಪ್ತ ಧನವು ಲುಪ್ತವಾಗುವ ಹೊತ್ತು ಬಂದಿದೆ. ಎಷ್ಟೋ ಮಹಾಪುರುಷರ ಹೆಸರು ಸಹ ನಮ್ಮವರಿಗೆ ಗೊತ್ತಿಲ್ಲ. ಈ ಕೊರತೆಯನ್ನು ನಿವಾರಿಸಲು ಗ್ರಂಥಕಾಶ ಮಹನೀಯರೇ ಸಮರ್ಥರು.

ಒಟ್ಟಿನಮೇಲೆ ಕರ್ನಾಟಕ ಕಾವ್ಯಮಾಲೆಯು ವೃದ್ಧಿಯನ್ನು ಹೊಂದಿ ಅದು ಕಾರ್ಯಕಾರಿಯಾಗಬೇಕಾದರೆ ಅದಕ್ಕೆ ಅನ್ಯಭಾಷೆಗಳ ಸಹಾಯವು ಬೇಕೇಬೇಕು. ಇಂಗ್ಲಿಷ, ಸಂಸ್ಕೃತ, ಮಹಾರಾಷ್ಟ್ರ ಮೊದಲಾದ ಮೇಲ್ತರದ ಭಾಷೆಗಳೊಳಗಿನ ಉದ್‌ಗ್ರಂಥಗಳನ್ನು ಭಾಷಾಂತರಿಸಿ ಇಲ್ಲವೆ ರೂಪಾಂತರಿಸಿ ಕರ್ನಾಟಕ ಗ್ರಂಥ ಭಂಡಾರವನ್ನು ತುಂಬಿದರೆ ಮಾತ್ರ ಅದು ಅಲ್ಪಕಾಲದಲ್ಲಿಯೇ ಕಾರ್ಯಕಾರಿಯಾಗಬಹುದು.

ಅಂತಸ್ಥ ಮನೋವಿಕಾರಗಳ ಪ್ರತಿಬಿಂಬವೇ ಭಾಷೆಯೆಂದು ಹೇಳಿದಮೇರೆಗೆ ನಾವು ಮೇಲ್ತರದ ಲೇಖಕರಾಗಬೇಕಾದರೆ ನಮ್ಮಲ್ಲಿ ಉಜ್ವಲವಾದ ಮನೋವಿಕಾರಗಳೂ ಸ್ಫೂರ್ತಿಯೂ ಉಂಟಾಗಲಿಕ್ಕೆ ಬೇಕು. ಅದಕ್ಕಾಗಿ ನಾವು ಅನೇಕ ಗ್ರಂಥಗಳನ್ನು ಓದಬೇಕು. ಅನೇಕ ಸಂಗತಿಗಳನ್ನು ನೋಡಬೇಕು. ಕೇಳಬೇಕು. ಓದಿದ ಹಾಗು ನೋಡಿದ ಸಂಗತಿಗಳನ್ನು ಮನನಮಾಡಬೇಕು. ಬಳಿಕ ನಮಗೆ ಬೇಕಾದ ಒಂದು ವಿಷಯವನ್ನು ಆರಿಸಿಕೊಂಡು ಬರೆಯಲಿಕ್ಕೆ ಕೂಡ್ರಬೇಕು. ಬರೆಯುವಾಗ ಜನರು ಏನನ್ನುವರೋ ಎಂಬ ಅಂಜಿಕೆಯನ್ನು ಮನಸ್ಸಿನಲ್ಲಿ ತರಕೂಡದು. ಜನರ ಮನ

ಸ್ಸನ್ನು ಅನುಸರಿಸಿ ಬರೆಯ ಹೋದರೆ ನಮ್ಮ ಹೃದಯದೊಳಗಿನ ವಿಚಾರಗಳು ಸರಳವಾಗಿ ಹೊರಗೆ ಬರಲಾರವು. ಬರೆದ ಸಂಗತಿಗಳೆಲ್ಲವೂ ಪ್ರಸಿದ್ಧವಾಗಲೇ ಬೇಕೆಂಬ ಹೇವವನ್ನು ಎಷ್ಟುಮಾತ್ರವೂ ಹಿಡಿಯಕೂಡದು. ಇಂದಿಲ್ಲ ನಾಳೆಯಾ ದೀತು. ಹುಟ್ಟುಹುಟ್ಟುತ್ತಲೇ ಲೇಖಕರಾಗಲು ಸಾಧ್ಯವಿಲ್ಲ. ಒಳ್ಳೊಳ್ಳೇ ಪಂಡಿತ ಮಹನೀಯರೂ ಒಮ್ಮೊಮ್ಮೆ ಲೇಖನಿಯನ್ನು ಹೆಡಿಯಲು ಹಿಂದೆ ಮುಂದೆ ನೋ ಡುತ್ತಿರಲು ನಮ್ಮಂಥವರ ಪಾಡೇನು ? ಒಮ್ಮೆ ಬರೆದ ಲೇಖಗಳನ್ನು ಪುನಃ ಪುನಃ ಓದಬೇಕು. ತಿದ್ದಬೇಕು. ಆ ಬಳಿಕ ಪುನಃ ಬರೆಯಬೇಕು. ಬರಹವು ತಮ್ಮ ಮನಸ್ಸಿಗೆ ಸಂಪೂರ್ಣ ಸಮಾಧಾನಕಾರಿಯಾದ ಹೊರತು ಅದನ್ನು ಮುಂದಿಯ ಮುಂದೆ ಇಡಬಾರದು. ಒಮ್ಮೊಮ್ಮೆ ಇದರಿಂದ ಲೇಖಕರ ಉತ್ಸಾಹವು ಕುಂದಿ ಹೋಗಬಹುದು.

ಒಟ್ಟನಮೇಲೆ ಭಾಷೆಯು ಅಂತಸ್ಥಮನೋವಿಕಾರಗಳ ಪ್ರತಿಬಿಂಬವಾದ ಕಾರಣ ಅದನ್ನು ಕಠಿಣವಾದ ವ್ಯಾಕರಣನಿಯಮಗಳಿಂದ ಪ್ರತಿಬಂಧಿಸಿ ಕೊರ ಗಿಸುವದೂ ಸರಿಯಲ್ಲ. ನದಿಯು ನೀರಿನಹಾಗೆ ಮನಬಂದಂತೆ ಹರಿಯಗೊಡು ವದೂ ಸರಿಯಲ್ಲ. ಲೇಖಕ ಮಹನೀಯರು ಸರ್ವರಿಗೂ ತಿಳಿಯಬಹುದಾದ ತಿಳಿ ಯಾದ ಕನ್ನಡ ಭಾಷೆಯಲ್ಲಿ ಪ್ರಚಲಿತ ವಿಷಯಗಳನ್ನು ಗದ್ಯರೂಪದಿಂದ ಬರೆಯ ಬೇಕು. ಇತಿಹಾಸಗಳನ್ನೂ ನೂತನ ಶಾಸ್ತ್ರೀಯ ಹಾಗು ನೈತಿಕ ವಿಷಯಗಳನ್ನೂ ಸಂಸ್ಕೃತವೇ ಮೊದಲಾದ ಮೇಲ್ತರದ ಭಾಷೆಗಳಿಂದ ಪರಿವರ್ತಿಸಿ ಕರ್ನಾಟಕ ಕಾವ್ಯಮಾಲೆಯನ್ನು ಬೆಳೆಯಿಸಬೇಕು. ಮಾತೃ ಭಾಷಾಭಿಮಾನಿಗಳು ಈ ತರದ ಗ್ರಂಥಲೇಖಕರಿಗೆ ಉದಾರಾಶ್ರಯ ಕೊಟ್ಟು ಅವರನ್ನು ಹುರಿದುಂಬಿಸಬೇಕು. ಲೇಖಕರಾಗಲಪೇಕ್ಷಿಸುವವರು ಹಿಂದೆ ಮುಂದೆ ನೋಡುತ್ತ ಕುಳಿತಿರಬಾರದು. ಇವೆ ಮುಖ್ಯವಾದ ನನ್ನ ಅಲ್ಪಮತಿಗೆ ತೋಚಿದ ವಿಚಾರಗಳನ್ನು ಪಂಡಿತ ವರ್ಯರ ಮುಂದಿರಿಸಿ ನನ್ನ ಅಲ್ಪ ಭಾಷಣವನ್ನು ಮುಗಿಸುವೆನು. ಎಂದು ಹೇಳಿ ಅವನು ತನ್ನ ಸ್ಥಾನದಲ್ಲಿ ಕುಳಿತುಕೊಂಡನು.

ಕೂಡಲೇ ಸಭಿಕರೆಲ್ಲರೂ ಚಪ್ಪಾಳೆಯನ್ನು ಬಾರಿಸಿ ಸಭಾಗೃಹದಲ್ಲೆಲ್ಲಾ ಕಲ ಕಲಾಟವನ್ನೆಬ್ಬಿಸಿದರು. ಆ ಗದ್ದಲದಿಂದ ನನಗೆ ಉಚ್ಚರವಾಯಿತು. ಕಣ್ದೆರೆದು ನೋಡಲಾಗಿ ಅಮಾವಾಸೆಯ ಕಗ್ಗತ್ತಲೆಯು ಹೋಗಿ ವಸಂತ ಋತುವಿನ ಸುಪ್ರಭಾತವು ಬಿದ್ದಿತ್ತು !!

ಈ ರೀತಿಯಾಗಿ ಎಚ್ಚತ್ತು ಕಣ್ಣೊರಸಿಕೊಳ್ಳುತ್ತ ಹಾಸಿಗೆಯಮೇಲೆ ಕುಳಿತು ಕೊಂಡು, ರಾತ್ರಿಯಲ್ಲಿ ನೋಡಿದ ಕನಸಿನ ಸಂಬಂಧವಾಗಿ ವಿಚಾರ ಮಾಡಹತ್ತಿ ದೆನು. ಕೂಡಲೆ ಆ ಉಪನ್ಯಾಸಕರ್ತನು ಹೇಳಿದ " ಲೇಖಕರಾಗಲಪೇಕ್ಷಿಸುವ

ವರು ಹಿಂದೆ ಮುಂದೆ ನೋಡುತ್ತ ಕುಳಿತುಕೊಳ್ಳಬಾರದು." ಎಂದು ಹೇಳಿದ ವಾಕ್ಯವು ಸ್ಮರಣೆಗೆ ಬಂದಿತು. ಕೂಡಲೆ ಲೆಕ್ಕಣಿಕೆಯನ್ನು ತೆಗೆದುಕೊಂಡೆನು. ವಿಷಯವನ್ನು ಆರಿಸಿ ಹೋದೆನು. ಯಾವ ವಿಷಯವೂ ಗರಿದೋರಲಿಲ್ಲ. ರಾತ್ರಿ ಕನಸಿನಲ್ಲಿ ಕೇಳಿದ ಉಪನ್ಯಾಸವನ್ನೇ ಸಂಕ್ಷೇಪವಾಗಿ ಬರೆದು ಬಿಡೋಣವೆಂದು ಯೋಚಿಸಿದೆನು. ಅದರಂತೆ ಕನಸಿನಲ್ಲಿ ಕೇಳಿದುದನ್ನು ನಿದ್ದಿಗಣ್ಣಿನಲ್ಲಿ ಬರೆದು ನಮ್ಮ ವಾಗ್ಭೂಷಣದ ವಾಚಕ ಮಹನೀಯರಮುಂದೆ ಇರಿಸಿರುವೆನು. ಗುಣ ಗ್ರಹಣ ಪಾರೀಣರಾದ ತಮಗೆ ಹೆಚ್ಚಿಗಿನ್ನೇನು ಹೇಳಿಕೊಳ್ಳಲಿಧೇ ?

ಸಜ್ಜನ ವಿಧೇಯ
"ವಿನೋದಿ."

ಕೃಷ್ಣಾಜಿಪಂತರ ಧೂರ್ತತ್ವ.

ಪ್ರಾತಃಕಾಲದ ಏಳು ಬಡೆಯುವ ಸಮಯ. ಪ್ರಾತರ್ವಿಧಿಗಳನ್ನು ತೀರಿಸಿ ಕೊಂಡು, ನಾನು ಚಹಾಪಾನವನ್ನು ಮಾಡುತ್ತಿರುವಷ್ಟರಲ್ಲಿ ಕೃಷ್ಣಾಜಿಪಂತರಿಂದ ಪತ್ರ ತೆಗೆದುಕೊಂಡು ಒಬ್ಬ ಮನುಷ್ಯನು ಬಂದನು. ಪತ್ರದ ಅಭಿಪ್ರಾಯವೇನೆಂದರೆ—

ಅನುಕೂಲವಿದ್ದರೆ ಎರಡು ದಿನ ನನ್ನೊಡನೆ ಗೋಕಾವಿಗೆ ಬರಬೇಕು. ನಮ್ಮ ಮನೆಗೆ ಬರುವದಾಗದಿದ್ದರೆ, ೯॥ ಗಂಟೆಗೆ ಅತ್ತಿಂದತ್ಕ ಜೋರಿ ಬಂದರಕ್ಕೆ ಬಂದರೂ ಚಿಂತೆಯಿಲ್ಲ.

ಕೃಷ್ಣಾಜಿಪಂತರು ಕರೆದರೆ, ನಾನಂತೂ ನಾವಿರಾರು ಕೆಲಸಗಳಿದ್ದರೂ ಬದಿಗೊತ್ತಿ ಹೋಗತಕ್ಕವನೇ. ಹೊತ್ತು ಸ್ವಲ್ಪವುಳಿದದ್ದರಿಂದ ಊಟಉಡಿಗೆಗಳ ಗೊಂದಲಕ್ಕೆ ಬೀಳದೆ, ಫಲಾಹಾರವನ್ನು ತೀರಿಸಿಕೊಂಡು ನಿಯಮಿತ ವೇಳೆಗೆ ಜೋರೀ ಬಂದರಕ್ಕೆ ಹೋದೆನು.

ಕೃಷ್ಣಾಜಿಪಂತ—ತಮ್ಮಾ ಬಂದೆಯಾ? ಒಳಿತಾಯಿತು. ಪರಸ್ಥಳದಲ್ಲಿ ಕಾಲಕಳೆಯುವದು ಕಠಿಣವಾಗುವದು. ಆದ್ದರಿಂದ ನಿನ್ನಂಥ ಮಿತ್ರನೊಬ್ಬನು ಬೇಕೇಬೇಕು.

ಗೋಕಾವಿಯ ಸ್ಟೇಶನ್ನಿನಿಂದ ನಾಲ್ಕಾರು ಮೈಲು ದೂರದಲ್ಲಿರುವ ಒಂದು ಹಳ್ಳಿಯಲ್ಲಿ ಒಬ್ಬ ಸಾವುಕಾರನ ಕೊಲೆಯಾಗಿದೆ. ಈ ಸಂಗತಿಯನ್ನು ನೀನು ನಿನ್ನಿನ ಟಾಯಿಮ್ಸ್ ಪತ್ರದಲ್ಲಿ ಓದಿರಬಹುದಲ್ಲವೇ?

"ಇಲ್ಲ. ನನಗೆ ಟಾಯಿಮ್ಸನನ್ನು ಓದಲಿಕ್ಕೆ ವೇಳೆದೊರೆಯದೆ ಬಹಳ ದಿನಗಳಾದವು."

" ನಿನಗೆ ಟಾಯಿಮ್ಸು ಓದುವದಾಗಲಿಲ್ಲವೇ? ಅಂಥ ಕೆಲಸವಾದರೂ ಏನು! ಇರಲಿ. ನಾನು ಓದಿದ ಸಂಗತಿಯಿಂದ, ಆ ಸಾವುಕಾರನ ಮಗನೇ ಅತನ (ತನ್ನ ತಂದೆಯ)ನ್ನು ಕೊಂದನೆಂದು ಸಿದ್ಧವಾಗುವಂತೆ ತೋರುತ್ತದೆ. ಈ ಗುನ್ಹೆಯು ತೀರ ಸುಲಭಸ್ವರೂಪದ್ದುಂಟು. ಆದರೆ ಶೋಧಮಾಡುವದು ಮಾತ್ರ ಬಹು ಕಠಿಣವು. "

ಶಾಬಾಸ್! ಒಂದೇ ಸಂಗತಿಯು ಸುಲಭವೂ ಕಠಿಣವೂ ಆಗಿರುವದುಂಟೋ? "

" ಹಾಗಲ್ಲ! ವಿಚಾರಿಸು. ಗುನ್ಹೆಯು ಬಾಹ್ಯಸ್ವರೂಪವು ಸರಳವಾಗಿದ್ದರೆ ಶೋಧಮಾಡುವದು ಕಠಿಣವಾಗುತ್ತದೆ. ಇರಲಿ, ಈ ಬಗ್ಗೆ ವಾದವಿವಾದವು ಬೇಡ. ಟಾಯಿಮ್ಸಿನಿಂದ ನನಗೆ ತಿಳಿದದ್ದೇನಂದರೆ—" ಕೊಲೆಪಟ್ಟ ಮನುಷ್ಯನು ಆ ಹಳ್ಳಿಯವನಲ್ಲ. ಅವನು ಕೋಲಾರದಲ್ಲಿ ಬಂಗಾರದ ಕಣಿಯ ಕೆಲಸವನ್ನು ಮಾಡುತ್ತಿದ್ದನು. ಆ ಕೆಲಸವು ಯುರೋಪಿಯನ್ನರ ಸ್ವಾಧೀನವಾಗಹತ್ತಿದ್ದರಿಂದ ಅದನ್ನು ಬಿಟ್ಟುಕೊಟ್ಟು, ಆ ವೂರಿಗೆ ಬಂದನು. ಕೋಲಾರದಲ್ಲಿ ಗಳಿಸಿಕೊಂಡು ಬಂದ ಹಣದಿಂದ ಆ ಹಳ್ಳಿಯಲ್ಲಿ ಕೆಲಮಟ್ಟಿಗೆ ಹೊಲಮನೆ ಹಿಡಿದುಕೊಂಡು ಸುಖವಾಗಿರಹತ್ತಿದನು. ಅತನ ಹೆಸರು ಹನುಮಂತರಾಯನೆಂಬದು. ಈತನು ಬಂದ ಕೆಲದಿನಗಳಲ್ಲಿಯೇ ರಂಗರಾಯನೆಂಬವನೊಬ್ಬನು ಬಂದು, ಈತನ ಹೊಲವನ್ನೇ ಲಾವಣಿ ಪಿಡಿದುಕೊಂಡು ಇರಹತ್ತಿದನು. ಅವರಿಬ್ಬರ ಪರಿಚಯವು ಮೊದಲೇ ಇತ್ತು. ರಂಗರಾಯನ ಮಗನ ಹೆಸರು ಬಿಂದುಮಾಧವ. ಹನುಮಂತರಾಯನ ಸೋದರಳಿಯನು ೧೮-೨೦ ವರ್ಷದವನಿರುವನು. ಅವನು ಮುಂಬಯಿಯ ಕಾಲೇಜದಲ್ಲಿ ಕಲಿಯುತ್ತಿದ್ದನು. ಆದರೆ ಮಾವನ ಮುಪ್ಪಿನ ಮೂಲಕ ಕಾಲೇಜಬಿಟ್ಟು ಇಲ್ಲಿಯೇ ಇರಹತ್ತಿ, ೨-೩ ತಿಂಗಳಾಯಿತು.

" ಬಿಂದುಮಾಧವನಾದರೂ ಅದೇ ವಯಸ್ಸಿನವನು. ಈತನಮೇಲೆಯೇ ತಂದೆಯನ್ನು ಕೊಂದ ಆರೋಪವು ಹೊರುವ ಸಂಭವವಿದೆ. ಆದರೆ ಕೊಲೆಯು ನಿಜವಾದ ಸಂಗತಿಯು ಬೇರೆಯಾಗಿದೆ. "

" ಮೊನ್ನೆ ಸೋಮವಾರ ಮಧ್ಯಾನ್ಹದ ಮೂರು ಬಡಿಯುವ ಹೊತ್ತಿಗೆ ರಂಗರಾಯನು ಹೊಲ ನೋಡಲಿಕ್ಕೆ ಹೋದನು. ದಾರಿಯಲ್ಲಿ ಸಣ್ಣದೊಂದು ಕೆರೆಯುಂಟು. ಅದರ ಎಡಬಲಗಳಲ್ಲಿ ಗಿಡಗಂಟಿಗಳ ದಟ್ಟಣೆ ಬಹಳ. ಕೆರೆಗೂ ರಂಗರಾಯನ ಮನೆಗೂ ಇರುವ ಅಂತರವು ಸಾಧಾರಣವಾಗಿ ಅರ್ಧಮೈಲು ಆಗಬಹುದು. ರಂಗರಾಯನು ಕೆರೆಯವರೆಗೆ ಹೋದದ್ದನ್ನು ನೋಡಿದೆವೆಂದು ಇಬ್ಬರು ಹೇಳಿರುವರು. ಅವರಲ್ಲಿ ಒಬ್ಬನು ೩೦-೩೫ ವರ್ಷದವನಿರುವನು. ಈತನು ಹನುಮಂತರಾಯನ ಅಳಿಯ. ಈತನು ಹೇಳಿದ್ದೇನೆಂದರೆ:—

'ರಂಗರಾಯನು ಕೆರೆಯದಾರಿಯಿಂದ ಹೋದದ್ದನ್ನು ನಾನು ನೋಡಿದೆನು. ಮುಂದೆ ತುಸು ಹೊತ್ತಿನಲ್ಲಿ ಬಿಂದು ಮಾಧವನು ಅದೇ ದಾರಿಯಿಂದ ಹೋದನು. ಆಗ ಆತನ ಕೈಯಲ್ಲಿ ದಪ್ಪವಾದ ಬೆತ್ತದ ಬಡಿಗೆಯೊಂದಿತ್ತು. ರಂಗರಾಯನು ಬಹಳ ದೂರ ಹೋಗಿದ್ದಿಲ್ಲ. ಆದ್ದರಿಂದ ಬಿಂದು ಮಾಧವನು ತಂದೆಯನ್ನು ಕೂಡಲಿಕ್ಕೆ ಹೋಗುತ್ತಿರಬಹುದೆಂದು ನಾನು ಭಾವಿಸಿದೆನು. ಸಾಯಂಕಾಲದಲ್ಲಿ ಈ ಕೊಲೆಯ ಸುದ್ದಿಯು ತಿಳಿಯುವವರೆಗೆ ನಾನು ಹೀಗೆಯೇ ತಿಳಿದಿದ್ದೆನು.'

"ಕೆರೆಯ ಎಡಬಲದ ಗಿಡಗಳ ಗುಂಪಿನಲ್ಲಿ ಆ ಊರ ಗೌಡನ ಐದಾರು ವರ್ಷದ ಮಗಳೊಬ್ಬಳು ಕಾಕುಳ್ಳುಗಳನ್ನು ಆರಿಸುತ್ತಿದ್ದಳು. ಅವಳು—'ಬಿಂದು ಮಾಧವನು ರಂಗರಾಯನೊಡನೆ ಮಾತಾಡುತ್ತಿರುವದನ್ನು ನೋಡಿದೆನು. ರಂಗರಾಯನು ಸಿಟ್ಟಾಗಿ, ಮಗನನ್ನು ಬೈದನು. ಅಲ್ಲದೆ ಹೊಡೆಯಲು ಕೈಯೆತ್ತಿದನು. ಆದರೆ ಬಿಂದು ಮಾಧವನು ತಂದೆಯ ಕೈಹಿಡಿದನು. ಆದ್ದರಿಂದ ನಾನು ಹೆದರಿ ಓಡಿಹೋದೆನು' ಎಂದು ಹೇಳಿರುವಳು."

"ಈ ಮೇರೆಗೆ ಎರಡು ಸಾಕ್ಷಿಗಳಾಗಿರುವವು. ಅಲ್ಲದೆ ಡಾಕ್ಟರರು ಕೊಟ್ಟ ಸರ್ಟಿಫಿಕೀಟಿನ ಅಭಿಪ್ರಾಯವೇನಂದರೆ:—'ರಂಗರಾಯನ ತಲೆಯ ಹಿಂಬದಿಗೆ ಬಿರುಸಾದ ಪದಾರ್ಥದಿಂದ ಚುಚ್ಚಿದೆ. ಬಿಂದು ಮಾಧವನ ಕೈಯಲ್ಲಿದ್ದ ಬಡಿಗೆಯಿಂದ ಈ ತರದ ಗಾಯವಾಗುವ ಸಂಭವವುಂಟು."

"ಕೊಲೆಯಬಗ್ಗೆ ಪ್ರಸಿದ್ಧವಾದ ಸಂಗತಿಯೆಲ್ಲ ಹೀಗಿರುವದು. ಇದರಲ್ಲಿ ಬಿಂದುಮಾಧವನನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕೆಂದು ನಾನು ಅತ್ತ ಕಡೆಗೆ ಹೊರಟಿರುವೆನು."

"ನೀನು ಹೇಳಿದ್ದನ್ನು ನೋಡಲಾಗಿ, ಆತನು ಉಳಿಯುವ ಸಂಭವ ತೋರುವದಿಲ್ಲ!"

"ನೀನನ್ನುವದು ನಿಜವು. ಆರೋಪವನ್ನು ಸಿದ್ಧಮಾಡಲಿಕ್ಕೆ ಕಾರಣೀಭೂತವಾದ ಸಾಕ್ಷಿಗಳಿಂದಲೇ ತದ್ವಿಪರೀತವಾದ ಅನುಮಾನಗಳು ಕೂಡ ಹೊರಡುವವೆಂಬದನ್ನು ಮರೆಯಬೇಡ. ವಿಚಾರವು ಮಾತ್ರ ತೀರ ಸೂಕ್ಷ್ಮರೀತಿಯಿಂದಾಗಬೇಕು. ಬಿಂದುಮಾಧವನ ನಡತೆಯು ಒಳ್ಳೆಯದೆಂಬ ಬಗ್ಗೆ ಸಹ ಒಬ್ಬಬ್ಬರ ಸಾಕ್ಷಿಗಳಾಗಿವೆ. ಅವುಗಳಲ್ಲಿ ಹನುಮಂತರಾಯನ ಅಳಿಯನ ಸಾಕ್ಷಿಯು ವಿಶೇಷ ಮಹತ್ವದ್ದಾಗಿದೆ, ಇರಲಿ. ನನ್ನ ಚಿಕ್ಕಂದಿನ ಗೆಳೆಯನಾದ ಮಾಣಿಕಜಿಯು ಗೋಕಾವಿಯ ಪೋಲೀಸರ ಸಹಾಯಕ್ಕಾಗಿ ಮುಂಬಯಿಯಿಂದ ಬಂದಿರುವನು. ಅವನಾದರೂ ನಿನ್ನಂತೆಯೇ ತಿಳಿದಿರುವನೆಂದು ತೋರುತ್ತದೆ. ಇನ್ನು ನಾವು ಕೈಮುಚ್ಚಿಕೊಂಡು ಕೂಡ್ರುವದು ಬಳಿತಲ್ಲ."

"ಒಳ್ಳೇದು. ಈ ವಿಷಯದಲ್ಲಿ ಆರೋಪಿಯು ಏನನ್ನತ್ತಾನೆ?"

"ಕೊಲೆಯು ಮರುದಿನ ಫೌಜದಾರನು ಬಿಂದುಮಾಧವನನ್ನು ಹಿಡಿಯಲಿಕ್ಕೆ ಹೋಗಲು, ಅವನು ಇದರಲ್ಲಿ ಆಶ್ಚರ್ಯವೇನು? ಇದೆಲ್ಲಾ ನನಗೆ ಮೊದಲೇ ತಿಳಿದಿತ್ತು!' ಎಂದನು."

"ಎಲ್ಲ ಆರೋಪಿಯು ತನ್ನ ಅಪರಾಧವನ್ನು ಒಪ್ಪಿಕೊಂಡಂತಾಗಲಿಲ್ಲವೇನು?"

-- ತಾನು ನಿರಪರಾಧಿಯೆಂಬದನ್ನು ಆತನು ಕೂಡಲೇ ತಿಳಿಸಿದನು. ಪರಿಸ್ಥಿತಿಯು ತನ್ನ ವಿರುದ್ಧವಾಗಿರುವದೆಂಬದು ಸುಶಿಕ್ಷಿತನಾದ ಆತನಿಗೆ ತಿಳಿದಿರಲಿಕ್ಕೆ ಬೇಕು. ಆ ಪರಿಸ್ಥಿತಿಯನ್ನು ಅನುಲಕ್ಷಿಸಿ, ಹೀಗೆ ಆಡಿದ್ದರಲ್ಲಿ ಆಶ್ಚರ್ಯವಿಲ್ಲ!"

"ತೀರ ಮಾತಿಗೆ ಬಾರದ ಸಾಕ್ಷಿಗಳಿಂದ ಸಹ ಅನೇಕರು ಅಪರಾಧಿಗಳೆಂದು ನಿರ್ಣಯಿಸಲ್ಪಟ್ಟಿರುವರು. ಇರಲಿ ಆರೋಪಿಯು ಇದಕ್ಕಿಂತ ಹೆಚ್ಚಾಗಿ ಏನೂ ಹೇಳಲಿಲ್ಲವಷೇ?

"ಇಗೋ ಆತನ ಜಬಾಬನ್ನೇ ಓದಿ ನೋಡು" ಎಂದು ಕೃಷ್ಣಾಜಿಪಂತರು ಜೇಬಿನೊಳಗಿನದೊಂದು ವರ್ತಮಾನಪತ್ರದ ಸಂಚಿಕೆಯನ್ನು ತೆಗೆದುಕೊಟ್ಟರು. ಅದರಲ್ಲಿದ್ದ ಸಂಗತಿಯೇನಂದರೆ:—

"ನಾನು ಕಳೆದ ಮೂರು ದಿನಗಳಿಂದ ಊರಲ್ಲಿಲ್ಲ. ಧಾರವಾಡಕ್ಕೆ ಹೋಗಿದ್ದೆನು. ನಾನು ಬಂದ ವೇಳೆಯಲ್ಲಿ ನನ್ನ ತಂದೆಯು ಮನೆಯಲ್ಲಿದ್ದಿಲ್ಲ. ಹೊಲಕ್ಕೆ ಹೋಗಿರುವನೆಂದು ಅಳು ಹೇಳಿದ್ದರಿಂದ ನಾನು ಹೊಲಕ್ಕೆ ಹೊರಟೆನು. ಆಗ ನನ್ನ ಕೈಯಲ್ಲಿ ಬತ್ತಿದ ದಪ್ಪವಾದ ಬಡಿಗೆಯಿತ್ತು. ಅದನ್ನು ನಾನು ಯಾವಾಗಲೂ ಹಿಡಿದಿರುವ ಪದ್ಧತಿಯುಂಟು. ನನ್ನ ತಂದೆಯು ಕೆರೆಯ ಸಮೀಪದಲ್ಲಿ ಹೋಗುತ್ತಿರುವದನ್ನು ನಾನು ಕಂಡೆನು.

ಆತನು ಕೋಲಾರದಲ್ಲಿ ಬಂಗಾರದ ಕಣಿಯ ಕೆಲಸವನ್ನು ಮಾಡುತ್ತಿದ್ದನು. ಆಗ ನಮಗೆ ಹಲವುಸಾರಿ ಅಡವಿಯಲ್ಲಿ ಸಂಚರಿಸುವ ಪ್ರಸಂಗಗಳೊದಗುತ್ತಿದ್ದವು. ಅಂಥ ಪ್ರಸಂಗಗಳಲ್ಲಿ ಆ ಸೀಮೆಯ ಪದ್ಧತಿಯಂತೆ ನಾವಾದರೂ ಕೆಲವೊಂದು ಸಂಕೇತದಿಂದ ಸಿಳ್ಳುಗಳನ್ನು ಹೊಡೆದು, ಅವುಗಳಿಂದ ಪರಸ್ಪರರ ವರ್ತಮಾನವನ್ನು ತಿಳಿದುಕೊಳ್ಳುತ್ತಿದ್ದೆವು.

"ನಾನು ತಂದೆಯ ಹಿಂದಿನಿಂದ ಹೋಗುತ್ತಿರುವಷ್ಟರಲ್ಲಿ ನನಗೆ ಆತನ ಸಿಳ್ಳು ಕೇಳಿಸಿತು. ಕೂಡಲೆ ನಾನು ಅಲ್ಲಿಗೆ ಹೋದೆನು. ನನ್ನನ್ನು ಕಂಡಕೂಡಲೆ ಆತನು ಸಿಟ್ಟಾಗಿ, ಬೈಯಹತ್ತಿದನು. ಕೊನೆಗೆ ನನ್ನನ್ನು ಹೊಡೆಯಲು ಯತ್ನಿಸಿದನು. ಆಗ ನಾನು ಓಡಿ ಹೋದೆನು. ನಾನು ಸ್ವಲ್ಪ ಮುಂದೆ ಬಂದು ಮರೆಯಾಗುವಷ್ಟರಲ್ಲಿ ನನ್ನ ತಂದೆಯು ಸಂಕಟದಿಂದ ಚೀರಿಕೊಂಡ ಧ್ವನಿಯು ಕಿವಿಗೆ

ಬಿತ್ತು. ನಾನು ಲಗುಬಗೆಯಿಂದ ಹೋಗಿ ನೋಡುವಷ್ಟರಲ್ಲಿ ಆತನ ತಲೆಗೆ ಮಹ ತ್ತರವಾದ ಗಾಯವಾಗಿ, ಅದರಿಂದ ಬಳಬಳನೆ ರಕ್ತವು ಸುರಿಯುತ್ತಲಿತ್ತು. ಆಗ ಆತನ ತಲೆಯನ್ನು ತೊಡೆಯಮೇಲೆ ಇಟ್ಟುಕೊಳ್ಳುವಷ್ಟರಲ್ಲಿ ಆತನ ಪ್ರಾಣವು ಹೋಯಿತು ನಾನು ಸಮೀಪದಲ್ಲಿಯೇ ಇದ್ದ ಕೃಷ್ಣಗೌಡನ ಮನೆಗೆ ಹೋಗಿ, ಅವರನ್ನೂ ಅವರ ತಮ್ಮನನ್ನೂ ಕರಕೊಂಡು ಬಂದು ತೋರಿಸಿದೆನು. ಬಳಿಕ ಮೂವರೂ ಕೂಡಿ ಹೆಣವನ್ನು ಅವರ ಮನೆಗೆ ಒಯ್ದೆವು. ಇಷ್ಟೆಲ್ಲ ಆಗುವವರೆಗೆ ಹೆಣದ ಸಮೀಪದಲ್ಲಿ ನಮಗಂತೂ ಯಾರೂ ಕಾಣಿಸಲಿಲ್ಲ. ನಮ್ಮ ತಂದೆಯು ಮಾತ್ರ ಸಾಯುವಾಗ ಅಸ್ಪಷ್ಟವಾದ 'ಮಂತರಾ' ಎಂದುಚ್ಚರಿಸಿದನು. ಇದ ರಿಂದ ನನಗೆ ಏನೂ ಬೋಧವಾಗಲಿಲ್ಲ. ತಂದೆಗೂ ನನಗೂ ಆದ ಜಗಳದ ಕಾರಣ ವನ್ನು ಮಾತ್ರ ನಾನು ಹೇಳಲಾರೆನು. ಆತನು ಚೀರಿಕೊಂಡದ್ದನ್ನು ಕೇಳಿ ನನ್ನ ಹೌಹಾರಿ ಹೋಗಿತ್ತು. ಆದ್ದರಿಂದ ಅಲ್ಲಿ ಯಾರಾದರೂ ಉಂಟೋ ಇಲ್ಲವೋ ಎಂಬದನ್ನು ನೋಡುವ ವಿಚಾರವು ನನ್ನ ಮನಸ್ಸಿನಲ್ಲಿ ಬರಲೇ ಇಲ್ಲ!

"ತುಸು ದೂರದಲ್ಲಿ ಒಂದು ಅರಿವೆಯು ಬಿದ್ದಿತ್ತೆಂಬದಾಗಿ ನನಗೆ ಅರ್ಧ ಮರ್ಧ ನೆನಪುಂಟು. ಆದರೆ ಅದನ್ನು ಯಾರು ಒಯ್ದರು? ಯಾವಾಗ ಒಯ್ದರು? ಮೊದಲಾದ ಸಂಗತಿಗಳು ನನ್ನ ಲಕ್ಷದಲ್ಲಿಲ್ಲ ಆ ಅರಿವೆಯು ಬಹುತರವಾಗಿ ಹೊರುವ ಧೋತರವಿರಬಹುದೆಂದು ತೋರುತ್ತದೆ."

ಈ ಸಂಗತಿಯನ್ನೆಲ್ಲ ಓದಿ, ನಾನು ಮೋರೆಯೆತ್ತಿ ಕೃಷ್ಣಾಜಿಪಂತರನ್ನು ನೋಡಿದೆನು. ಅವರು ಕಣ್ಣು ಮುಚ್ಚಿಕೊಂಡು ಲೋಡಿಗೆ ತಲೆಗೊಟ್ಟಿದ್ದರು. ಆದ್ದ ರಿಂದ ಹೆಚ್ಚಿಗೆ ಮಾತಾಡದೆ, ನಾನಾದರೂ ವಿಚಾರಮಾಡುತ್ತ ಕುಳಿತುಕೊಂಡೆನು.

ನಾವು ನಿಯಮಿತ ವೇಳೆಗೆ ಗೋಕಾವಿಯ ಸ್ಟೇಶನ್ನಿಗೆ ಬಂದು ತಲಪಿದೆವು. ನಮ್ಮ ಒರುವಿಕೆಯು ಮೊದಲೇ ತಿಳಿದದ್ದರಿಂದ ಮಾಣಿಕಜಿಯು ಚಕ್ಕಡಿಯನ್ನು ತಂದಿದ್ದನು ಗೋಕಾವಿಯಲ್ಲಿಯೇ ಊಟಮಾಡಿಕೊಂಡು, ಸಂಜೆಯ ೫ ಘಂಟೆಗೆ ಆ ಹಳ್ಳಿಗೆ ಹೋದೆವು ಅಲ್ಲಿ ನಮಗೋಸುಗ ಒಬ್ಬ ಗೌಡನ ಮನೆಯನ್ನು ಗೊತ್ತುಪಡಿಸಿದ್ದರು. ನಾವು ಆ ಮನೆಗೆ ಹೋಗಿ, ಕುಳಿತುಕೊಳ್ಳುವಷ್ಟರಲ್ಲಿ ಸಾದು ಗಪ್ಪು ಬಣ್ಣದ ತರುಣನೊಬ್ಬನು ಕೃಷ್ಣಾಜಿಪಂತರನ್ನು ಹುಡುಕುತ್ತ ಬಂದು "ಕೃಷ್ಣಾ ಜಿಪಂತರೇ, ನಾನು ಕಾಲೇಜದಲ್ಲಿರುವಾಗ ನಿಮ್ಮ ಕೀರ್ತಿಯನ್ನು ಬಹಳವಾಗಿ ಕೇಳಿದ್ದೆನು. ನನಗೋಸ್ಕರ ಇಲ್ಲಿಯವರೆಗೆ ಒರುವ ಶ್ರಮವನ್ನು ಸಹಿಸಿದ್ದಕ್ಕಾಗಿ ಋಣಿಯಾಗಿದ್ದೇನೆ. ಬಿಂದುಮಾಧವನೂ ನಾನೂ ಚಿಕ್ಕಂದಿನಿಂದಲೇ ಪ್ರೀತಿಯ ಗೆಳೆಯರು. ಅವನು ಇಂಥ ಅಕಾರ್ಯವನ್ನು ಎಂದೂ ಮಾಡಲಾರನು. ಆದರೆ

ಆತನಿಂದಲೇ ಈ ಕೆಲಸವಾಗಿದೆಯಂದು ಮಾಣಿಕಜಿಯು ಮಾತ್ರ ನಿಶ್ಚಯಿಸಿದಂತೆ ತೋರುವದು." ಎಂದನು.

ಕೃಷ್ಣಾಜಿಪಂತ—ಮಾಣಿಕಜಿಯ ನಿಶ್ಚಯವೇ ಸಬಲವಾದ ಆಧಾರವೆಂದು ತಿಳಿಯಲಾಗದು. ಸದ್ಯಕ್ಕೆ ಈಪರಿ ಗಾಬರಿಯಾಗುವ ಕಾರಣವೇನೂ ಇಲ್ಲ!

ತರುಣ—ಮಾಣಿಕಜಿ, ಕೇಳಿರಿ. ಬಿಂದುಮಾಧವನನ್ನು ಅಪರಾಧಿಯನ್ನಾಗಿ ತಿಳಿಯಬೇಡಿರೆಂದು ನಾನು ಮೊದಲೇ ಹೇಳಲಿಲ್ಲವೇ!

ಕೃಷ್ಣಾಜಿಪಂತರೇ, ನೀವು ನನ್ನ ಮಿತ್ರನನ್ನು ಉಳಿಸಿಕೊಳ್ಳುವಿರಷ್ಟೇ? ಹಣದಬಗ್ಗೆ ಅನುಮಾನಿಸಬೇಡಿರಿ. ಮಾವನು ತನ್ನ ಸ್ವತ್ತನ್ನೆಲ್ಲ ನನ್ನ ಹೆಸರಿನಿಂದಲೇ ಮಾಡಿಕೊಟ್ಟನು. ಅದೆಲ್ಲಾ ತೀರುವವರೆಗೆ ವೆಚ್ಚಮಾಡಲು ನಾನು ಅಂಜುವದಿಲ್ಲ. ಹೊಟ್ಟೆ ಹೂರಕೊಳ್ಳುವ ಮಟ್ಟಿಗೆ ನಾನು ಶಿಕ್ಷಣಹೊಂದಿರುವದರಿಂದ ನನ್ನ (ಸ್ವಂತದ) ಬಗ್ಗೆ ಚಿಂತೆಯಿಲ್ಲ. ಹೇಗಾದರೂ ಮಾಡಿ, ನನ್ನ ಪ್ರಿಯಮಿತ್ರನನ್ನು ಉಳಿಸಿಕೊಳ್ಳಿರಿ.

ಈ ಮೇರೆಗೆ ಮಾತಾಡುವಷ್ಟರಲ್ಲಿ ಆ ತರುಣನ ಕುತ್ತಿಗೆಯ ಶಿರಗಳುಬಿದ್ದರಿಂದ ಅತನ ಬಾಯಿಂದ ಮಾತುಗಳೇ ಹೊರಡದಾದವು.

ಕೃಷ್ಣಾಜಿಪಂತ—ನೆನ್ನಿಂದಾದಷ್ಟು ಪ್ರಯತ್ನಮಾಡುವೆನು. ಬಹುತರವಾಗಿ ಈ ಅಪರಾಧವು ಬಿಂದುಮಾಧವನಮೇಲೆ ಹೊರುವದಿಲ್ಲವೆಂದು ನನ್ನ ಮನೋದೇವತೆಯು ಹೇಳುವಳು.

ತರುಣ—ಪಂತರೇ, ನಿಮ್ಮ ಮಾತಿನಿಂದ ನನಗೆ ಸ್ವಲ್ಪ ಧೈರ್ಯ ಬಂತು. ನಾಳೆ ಮುಂಜಾನೆ ಇನ್ನೊಮ್ಮೆ ತಮ್ಮನ್ನು ಕಾಣಲಿಕ್ಕೆ ಬರುವೆನು. ಆಗ ನನ್ನ ಮಿತ್ರನನ್ನು ನನಗೆ ಒಪ್ಪಿಸುವಿರೆಂದು ನಂಬಿದ್ದೇನೆ.

ಕೃಷ್ಣಾಜಿಪಂತ—ನಾನು ಒಮ್ಮೆ ನಿಮ್ಮ ಮಾವಂದಿರನ್ನು ಕಾಣಬೇಕಾಗುವದು. ಅನುಕೂಲವಿದ್ದರೆ ಈಗಲೇ ಬರುವೆನು.

ತರುಣ—ಛೀ ಅವರು ಪಕ್ಷಘಾತದ ವಿಕಾರದಿಂದ ಬೇನೆ ಬಿದ್ದಿರುವರು. ಮೊದಲೊಮ್ಮೆ ಈ ಬೇನೆಯು ತೊಡಕಿತ್ತು. ರಂಗರಾಯನ ಕೊಲೆಯ ಸುದ್ದಿಯನ್ನು ಕೇಳಿದ ಮರುದಿವಸವೇ ಅದು ಮರುಕಳಿಸಿ ಹಾಸಿಗೆ ಗೊರಗಿಸಿ ಬಿಟ್ಟಿದೆ. ರಂಗರಾಯರಿಗೂ ಅವರಿಗೂ ಕೋಲಾರದಲ್ಲಿದ್ದಾಗಲೇ ವಿಶೇಷ ಪರಿಚಯವು.

ಕೃ—ಇಬ್ಬರೂ ಒಂದೇ ಕಣಿಯಲ್ಲಿ ಕೆಲಸ ಮಾಡುತ್ತಿದ್ದರಲ್ಲವೇ?

ತ—ಅಹುದು.

ಕೃ—ಒಳ್ಳೇದು. ಹೋಗಿರಿ. ನಿಮ್ಮ ಉಪಕಾರವು ಬಹಳವಾಯಿತು. ಬೆಳಿಗಿನವರೆಗೆ ಏನೇನು ತಿಳಿಯುವದೋ ನೋಡುವೆನು.

ಆ ತರುಣನು ಹೋದಕೂಡಲೆ ಕೃಷ್ಣಾಜಿಪಂತರನ್ನು ಕುರಿತು ಮಾಣಿಕಜಿಯು—"ಪಂತರೇ, ಅತನಿಗೆ ವ್ಯರ್ಥವಾದ ಆಶೆಯನ್ನೇಕೆ ಹಚ್ಚಿದಿರಿ. ಇಂದಿನ

ತನಕ ಬೈಲಿಗೆ ಬಂದ ಆಧಾರಗಳಿಂದ ಬಿಂದುಮಾಧವನಮೇಲೆ ಆರೋಪವು ಸಿದ್ಧವಾಗುವದೆಂದು ನಿಮ್ಮ ಮನವರಿಕೆಯಾಗಿಲ್ಲವೇ ?" ಎಂದನು.

"ನಿಮ್ಮಂತೆ ನನ್ನ ಮನವರಿಕೆಯಾಗಿಲ್ಲ. ನನ್ನ ಆಶೆಯು ಪೂರ್ಣವಾಗಿದೆ. ಇರಲಿ ಆರೋಪಿಯು ಎಲ್ಲಿರುವನು ?"

"ಆತನು ಗೋಕಾವಿಯ ಸೆರೆಮನೆಯಲ್ಲಿರುವನು."

"ಹಾಗಾದರೆ ಈಗಲೇ ಗೋಕಾವಿಗೆ ಹೋಗೋಣ ನಡೆಯಿರಿ."

"ಆತನ ಭೆಟ್ಟಿಗಾಗಿ ನನ್ನೊಡನೆ ಒಬ್ಬರೇ ಬರತಕ್ಕದ್ದು, ಹೆಚ್ಚು ಜನ ಬರಬಾರದೆಂದು ನಿಯಮವುಂಟು. ಆದ್ದರಿಂದ ನಿಮ್ಮ ಸಂಗಡಿಗರೊಬ್ಬರು ಇಲ್ಲಿಯೇ ಉಳಿಯಬೇಕಾಗುವದು."

ಪಂತರೂ ಮಾಣಿಕಜಿಯೂ ಗೋಕಾವಿಗೆ ಹೋದನಂತರ ನಾನೂ ಊರಲ್ಲಿ ಸುಳಿದಾಡಿ ಬಂದೆನು. ಹಳ್ಳಿಯು ಮಧ್ಯಮ ಸ್ಥಿತಿಯದಾಗಿದ್ದರೂ ಒಳಿತಾಗಿ ಸ್ವಚ್ಛವಿತ್ತು. ಸಂಜೆಗೆ ನಾನು ಮನೆಗೆ ಬಂದಕಾಲಕ್ಕೆ ಅವರು ಬಂದಿದ್ದಿಲ್ಲ. ಆಗ ನಾನು ಡಾಕ್ಟರನ ಜಬಾಬನ್ನು ಓದಲಾರಂಭಿಸಲು, ಅದರೊಳಗಿನ ಒಂದು ವಾಕ್ಯವು ನನ್ನ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿತು. ಆ ವಾಕ್ಯ ಯಾವದೆಂದರೆ, ರಂಗರಾಯನ ಮಸ್ತಕದ ಹಿಂಬದಿಯಲ್ಲಿ ಎಡಗಡೆಗೆ ಆದ ಗಾಯವು ಬಹಳ ಭಯಂಕರವಾದದ್ದದೆ. ಈ ಗಾಯವಾದ ಕೂಡಲೆ ಆ ಮನುಷ್ಯನ ಪ್ರಾಣಗಳು ಹೋಗಿರಬಹುದು."

ಇದೇ ಈ ವಾಕ್ಯದ ವಚನವು ನನ್ನ ವಿಚಾರಗಳಿಗೆ ಮೊದಲು ಮಾಡಿತು.

"ತಂದೆ ಮಕ್ಕಳ ಜಗಳದಲ್ಲಿ ಮಗನು ತಂದೆಯನ್ನು ಹೊಡೆದಿದ್ದರೆ ಗಾಯವು ತಲೆಯ ಹಿಂಬದಿಯಲ್ಲಿ ಆಗುವ ಸಂಭವವಿಲ್ಲ. ಆದರೆ ಹೊಡೆಯುವಷ್ಟರಲ್ಲಿ ತಂದೆಯು ತುಸು ಹೊರಳಿದ್ದರೋ? ಹಿಂಬದಿಯಲ್ಲಿಯೇ ಆಗಲಿಕ್ಕೆ ಬೇಕು. ಏನೇ ಆಗಲಿ, ಈ ವಿಚಾರವನ್ನು ಕೃಷ್ಣಾಜಿಪಂತರಿಗೆ ತಿಳಿಸಬೇಕು. ಇನ್ನು ರಂಗರಾಯನು ಉಚ್ಚರಿಸಿದ 'ಮಂತರಾ' ದ ಅರ್ಥ ಏನಿರಬಹುದು? ಭಯಂಕರವಾದ ಗಾಯವಾಗಿ ಸಾಯುವಕಾಲಕ್ಕೆ ಮನುಷ್ಯನು ವಿಸ್ಮೃತಿಯಿಂದ ಹೀಗುಚ್ಚರಿಸಿದನೆಂಬದು ಅಸಮಂಜಸವು. ಬಹುತರವಾಗಿ ಆತನ ಮೈಮೇಲೆ ಸ್ಮೃತಿಯು ಇದ್ದಿರಬೇಕು. ಹಾಗು ಅಲ್ಲಿ ಕೆಲವೊಂದು ವಸ್ತ್ರ ಬಿದ್ದಿತ್ತೆಂದು ಬಿಂದು ಮಾಧವನು ಹೇಳಿದ್ದಾನೆ. ಈ ಎಲ್ಲಾ ಸಂಗತಿಗಳನ್ನು ವಿಚಾರಿಸುವದು ಅವಶ್ಯವದೆ. ಎಂದು ಹಲವು ಬಗೆಯಿಂದ ವಿಚಾರಮಾಡಿದೆನು.

ಪರಂತು ರಾತ್ರಿ ೧೧ ಘಂಟೆಗೆ ಬಂದರು. ನಾನು "ಬಿಂದು ಮಾಧವನಿಂದ ಹೆಚ್ಚಿನ ಸಂಗತಿಯಾವದಾದರೂ ತಿಳಿಯಿತೋ? ಎಂದು ಕೇಳಿದೆನು.

"ಹೆಚ್ಚಿನದೇನೂ ಇಲ್ಲ. ತಂದೆಮಕ್ಕಳ ಜಗಳದ ಕಾರಣಮಾತ್ರ ಹೊರಬಿತ್ತು ಅದೇನಂದರೇ–ತನ್ನ ಸ್ವತ್ತನ್ನೆಲ್ಲಾ ಅಳಿಯನಿಗೆ ಕೊಡಬೇಕೆಂದು ಹನುಮಂತರಾಯನು ಆಲೋಚಿಸಿದ್ದನು. ತನ್ನ ಮಗನನ್ನು ದತ್ತಕ ಮಾಡಿಕೊಳ್ಳಬೇಕೆಂದು ರಂಗರಾಯನು ಯಾವಾಗಲೂ ಆತನ ಬೆನ್ನು ಕಾಯುತ್ತಿದ್ದನು. ಈ ವಿಷಯದಲ್ಲಿ ತಂದೆಯ ಮತವು ಮಗನಿಗೆ ಸೇರದಾಗಿತ್ತು. ಆದ್ದರಿಂದಲೇ ಈಗ ನಾಲ್ಕಾರು ತಿಂಗಳಿನಿಂದ ಇವರಲ್ಲಿ ಆಗಾಗ್ಗೆ ಜಗಳಗಳಾಗುತ್ತಿದ್ದವು."

"ಇದ್ದೊಬ್ಬ ಮಗನನ್ನು ದತ್ತಕ ಕೊಡಲಿಚ್ಛಿಸುವವರು ತಂದೆಯೇ!"

ಇದಲ್ಲ ಧನಮಹಾತ್ಮ್ಯವು. ಇರಲಿ. '**ಸತ್ಯಮೇವ ಜಯತೆ**' ಎಂಬ ಸದ್ವಾಕ್ಯವು ಸುಳ್ಳಾಗಲಾರದು."

"ಒಳ್ಳೇದು. ಬಿಂದು ಮಾಧವನು ನಿರಪರಾಧಿಯೆಂದಬಳಿಕ ಅಪರಾಧಿಯು ಯಾವನಾಗಿರಬಹುದು?"

"ಈಗ ಅದನ್ನೇ ಶೋಧಿಸತಕ್ಕದ್ದದೆ. ಈಶಾನುಗ್ರಹದಿಂದ ಬೆಳಗಿನವರೆಗೆ ಮಳೆಯಾಗದಿದ್ದರೆ, ಅಪರಾಧಿಯನ್ನು ನಿಜವಾಗಿ ಶೋಧಮಾಡುವೆನು. ಸದ್ಯಕ್ಕೆ ತಿಳಿದ ಸಂಗತಿಗಳಲ್ಲಿ ಕೆಲವನ್ನಂತೂ ವಿಶೇಷವಾಗಿ ಪರೀಕ್ಷಿಸತಕ್ಕದ್ದದೆ. ರಂಗರಾಯನ ಸಳ್ಳು ತನಗೆ ಕೇಳಿಸಿತೆಂದು ಆರೋಪಿಯು ಹೇಳಿದ್ದಾನೆ. ಮಗನು ಊರಿಂದ ಬಂದದ್ದು ರಂಗರಾಯನಿಗೆ ಗೊತ್ತಿದ್ದಿಲ್ಲ. ಆದ್ದರಿಂದ ಆತನ ಉದ್ದೇಶವಾದರೂ ಮಗನನ್ನು ಕರೆಯುವದಿದ್ದಿಲ್ಲ. ಬೇರೆ ಯಾವನನ್ನಾದರೂ ಕರೆಯುವದಿರಲಿಕ್ಕೆ ಬೇಕು. ಆದ್ದರಿಂದಲೇ ಮಗನನ್ನು ಕಂಡು ಆತನು ಸಿಟ್ಟಾದನು. ಇದೊಂದು ಸಂಗತಿಯು ನಮಗೆ ಬಲವಾದ ಆಧಾರವಾಗಿದೆ."

ಇನ್ನು ಮಾತು ಸಾಕು. ರಾತ್ರಿಯು ಬಹಳವಾಗಿದೆ. ಕೆಲಸವು ಮಹತ್ವದ್ದಿರುವದರಿಂದ ನಮ್ಮ ಮನಸ್ಸು ಒಳ್ಳೇ ಶಾಂತವಾಗಿರಬೇಕಾಗುವದು. ಆದ್ದರಿಂದ ನಿದ್ರೆಯು ಅತ್ಯವಶ್ಯ.

ಮಾಣಿಕಜಿಯು ಬೆಳಗಿನ ೭ ಘಂಟೆಗೆ ಬಂದು—"ಪಂತರೇ, ಹನುಮಂತರಾಯನ ಬೇನೆಯು ಹೆಚ್ಚಾಗಿದೆಯೆಂದು ಸುದ್ದಿಯು ಹಬ್ಬಿದೆ. ಆತನು ಇನ್ನು ಬಹಳದಿವಸ ಬದುಕಲಾರನೆಂದು ಸಹ ಅನ್ನುವರು. ರಂಗರಾಯನ ಮರಣದಿಂದ ಆತನ ಎದೆಯೊಡೆದಂತೆ ತೋರುತ್ತದೆ. ಇವರಿಬ್ಬರದೂ ಮೊದಲಿನಿಂದ ಗೆಳೆತನವಿದ್ದ ಮೂಲಕ ಹೀಗಾಗುವದು ಸಹಜವು. ಹನುಮಂತರಾಯನು ರಂಗರಾಯನಿಂದ ಹೊಲದಬಗ್ಗೆ ಇಂದಿನವರೆಗೆ ಒಂದು ಕಾಸನ್ನು ಕೂಡ ಇಸುಕೊಂಡಿಲ್ಲವಂತೆ!" ಎಂದನು.

" ಮಾಣಿಕಜಿಯವರೇ, ನೀವು ಇದೊಂದು ಉಪಯುಕ್ತವಾದ ವರ್ತಮಾನವನ್ನು ತಿಳಿಸಿದಿರಿ. ಹನುಮಂತರಾಯನಿಂದ ಈ ಮೇರೆಗೆ ಉಪಕೃತನಾದ ರಂಗರಾಯನು, ಆತನ ಇಚ್ಛೆಯ ವಿರುದ್ಧವಾಗಿ ಬಿಂದು ಮಾಧವನನ್ನು ದತ್ತಕ ತೆಗೆದುಕೊಳ್ಳೆಂದು ಪೀಡಿಸಿದ್ದು ಸೋಜಿಗವಲ್ಲವೇ? ವಿಚಾರಮಾಡಿರಿ!"

" ಇಂಥ ಅಸಂಬದ್ಧ ಸಂಗತಿಗಳ ವಿಷಯವಾಗಿ ವಿಚಾರಮಾಡುವ ರೂಢಿಯು ನನಗಿಲ್ಲ. ಮಗನೇ ತಂದೆಯನ್ನು ಕೊಂದನೆಂದು ಸಿದ್ಧವಾಗುತ್ತದೆ. ಅದನ್ನು ಬಿಟ್ಟು ಮನಃ ಪೂರ್ವಕವಾಗಿ ಕಾಡುದಾರಿಯನ್ನು ತುಳಿಯುವರಾರು?"

ಈ ಮೇರೆಗೆ ಮಾತಾಡುತ್ತ ನಾವು ಕೆರೆಯ ಸಮೀಪದ ಸ್ಥಳಕ್ಕೆ ಬಂದೆವು. ಕೊಲೆಯಾಗುವದಕ್ಕಿಂತ ತುಸು ಮೊದಲು ಮಳೆಯಾಗಿದ್ದರಿಂದ ತೇವಾದ ನೆಲದಲ್ಲಿ ಹೆಜ್ಜೆಗಳು ಸ್ಪಷ್ಟವಾಗಿ ಮೂಡಿದ್ದವು. ಕೃಷ್ಣಾಜಿಪಂತರು ಪ್ರತಿಯೊಂದು ಹೆಜ್ಜೆಯನ್ನು ಲಕ್ಷಪೂರ್ವಕವಾಗಿ ನಿರೀಕ್ಷಿಸುತ್ತಿದ್ದರು. ಮತ್ತು ತಮ್ಮಷ್ಟಕ್ಕೆ ತಾವೇ ಏನೇನೋ ಗುಣುಗುಟ್ಟುತ್ತಿದ್ದರು.

ಮುಕ್ಕಾಲು ತಾಸಿನವರೆಗೆ ಹೀಗೆ ನಿರೀಕ್ಷಿಸಿದನಂತರ ಪಂತರು ನಮ್ಮಿಬ್ಬರನ್ನು ನೋಡಿ ಅಂದದ್ದೇನೆಂದರೆ:—

ಅತ್ತಕಡೆಗಿರುವದೇ ಕೃಷ್ಣಗೌಡರ ಮನೆಯು. ನೀವಿಬ್ಬರೂ ಅಲ್ಲಿಗೆ ನಡೆಯಿರಿ. ನಾನಾದರೂ ತೀವ್ರವೇ ಬರುವೆನು. ರಾಮಾ, ಆ ಗೌಡರಲ್ಲಿ ತುಸು ಸವತಿಕಾಯಿಗಳನ್ನು ಕೇಳು. ಸಿಕ್ಕರೆ ಇಂದಿನ ಊಟಕ್ಕೆ ಅದರ ಪಲ್ಲೆಯನ್ನು ಮಾಡೋಣ.

ನಾವು ಹೋದ ೧೦।೧೫ ನಿಮ್ಯೂಟುಗಳಲ್ಲಿ ಪಂತರು ಬಂದರು; ಅವರು ಕಯ್ಯೊಳಗಿನದೊಂದು ಕಲ್ಲನ್ನು ತೋರಿಸಿ " ಮಾಣಿಕಜೀ, ಕೊಲೆಯ ಆಯುಧವಿದೇ ನೋಡಿರಿ!" ಎಂದರು.

ಮಾಣಿಕಜಿ---ಇದಕ್ಕೆ ರಕ್ತವೆಲ್ಲಿಯೂ ಹತ್ತಿಲ್ಲವಲ್ಲ?

ಪಂತರು—ನೀವನ್ನುವದು ನಿಜವು. ನಾನು ಅಲ್ಲಿ ಬಿದ್ದಿರುವ ಕಲ್ಲುಗಳನ್ನೆಲ್ಲ ಪರೀಕ್ಷಿಸಿದೆನು. ಇದೊಂದು ಕಲ್ಲಿನ ಬುಡದ ಮಣ್ಣುಮಾತ್ರ ಬದಿಗಾಗಿದ್ದಿಲ್ಲ. ಬುಡದಲ್ಲಿ ಹೊಸದಾಗಿ ಹುಟ್ಟಿದ ಕರಿಕೆಯಿತ್ತು. ಆದ್ದರಿಂದ ಇದನ್ನು ಬೇರೆ ಕಡೆಯಿಂದ ತಂದಿಟ್ಟಿರಲಿಕ್ಕೆ ಬೇಕು. ಅಲ್ಲದೆ ಗಾಯದ ವರ್ಣನೆಯು ಇದರ ಆಕಾರಕ್ಕೆ ಅನುರೂಪವಾಗಿಯೇ ಇದೆ.

" ಇದೆಲ್ಲಾ ಸರಿ! ಕೊಂದವನೇನಾದರೂ ದೊರೆತನೋ?"

" ದೊರೆತನು. ಆತನು ತಕ್ಕಮಟ್ಟಿಗೆ ಎತ್ತರನೂ, ರೊಡ್ಡ (ಎಡಪ) ನ್ನೂ ಕುಂಟನೂ ಇರುವನು ಅವನು ಡಿಂಡಿಗಲ್ ಚಿರೂಟು ಸೇದುವನು. ಸೇದುವಾಗ ಕೊಳಿವೆಯನ್ನು ಉಪಯೋಗಿಸುವನು."

ಇದನ್ನು ಕೇಳುತ್ತಲೆ ಮಾಣಿಕಜಿಯು ಖೊಳ್ಳನೆ ನಗಹತ್ತಿ—' ಇಂಥವನನ್ನು ಹುಡುಕುವ ಯತ್ನಮಾಡುವದೆಂದರೆ, ಅಧೀನನಾದವನ್ನು ಬಿಟ್ಟು ಓಡುವವನನ್ನು ಬೆನ್ನಟ್ಟುವಂತೆಯೇ ಸರಿ! ' ಎಂದನು.

" ಮಾಣಿಕಜಿಯವರೇ, ನೀವೇನೂ ನನ್ನ ಮಾತು ಕೇಳಬೇಡಿರಿ ನಿಮ್ಮ ದಾರಿ ಬೇರೆ! " ಕೆಲ ಹೊತ್ತಿನಮೇಲೆ ನಾವೆಲ್ಲರೂ ಬಿಡಾರಕ್ಕೆ ಹೋದೆವು. ಊಟವಾದನಂತರ ಪಂತರು ' ರಾಮಾ, ನಾವು ಇಂದು ಸಂಜೆಯಗಾಡಿಗೆ ಮುಂಬಯಿಗೆ ಹೋಗಲಿಕ್ಕೆ ಬೇಕು. ' ಎಂದರು. " ಆ ತರುಣನಿಗೆ ಕೊಟ್ಟ ವಚನವನ್ನು ಪೂರಯಿಸದೆ ಹೋಗುವರೇನು ? "

" ಛೇ ಅದನ್ನು ಪೂರೈಸಿಯೇ ಹೋಗೋಣ. ಈಗ ನಾನು ಎಲ್ಲಾ ಸಂಗತಿಯನ್ನು ಹೇಳುವೆನು. ಕೇಳು.

ಸಿಳ್ಳಿನಬಗ್ಗೆ ನಿನ್ನ ವಿಚಾರವು ಸರಿಯಾಗಿದೆ. ರಂಗರಾಯನು ಸಾಯುವಾಗ ಬಹಳವಾಗಿ ಒದರಿಕೊಂಡಿದ್ದರೂ ಮಗನಿಗೆ ಮೂರೇ ಅಕ್ಷರಗಳು ಕೇಳಿಸಿರಬಹುದು. ಅತನು ಕೊಂದವನ ಹೆಸರನ್ನು ಹೇಳಲೆಳಸಿದನೆಂದು ನಾನು ಕಲ್ಪಿಸಿದರೆ ತಪ್ಪಾಗದು. ಹಾಗಾದರೆ ಕೊಂದವನ ಹೆಸರಿನಲ್ಲಿ ' ಮಂತರಾ ' ಎಂಬ ಅಕ್ಷರಗಳಿರಲೇ ಬೇಕು. ಆತನ ವರ್ಣನೆಯನ್ನು ನೀನು ಕೇಳಿರುವಿಯಲ್ಲವೇ ? ಮನುಷ್ಯನ ಎರಡು ಹೆಜ್ಜೆಗಳ ನಡುವಿನ ಅಂತರದಿಂದ ಸಾಧಾರಣವಾಗಿ ಆತನ ನಿಲುವಿಕೆಯನ್ನು ತರ್ಕಿಸಬಹುದು. ಆತನ ಒಂದು ಪಾದವು ಸ್ಪಷ್ಟವಾಗಿಯೂ ಇನ್ನೊಂದು ಅಸ್ಪಷ್ಟವಾಗಿಯೂ ಮೂಡಿರುವದರಿಂದ ಅವನು ಕುಂಟನಿರಬೇಕು. ಹೆಣದ ತಲೆಯ ಹಿಂಬದಿಯಲ್ಲಿ ಎಡಗಡೆಗೆ ಗಾಯವಾಗಿದೆ. ಹಿಂಬದಿಯಲ್ಲಿ ನಿಂತು ಹೊಡೆದಾಗ ಎಡಗಡೆಗೆ ಬಡಿಯಬೇಕಾದರೆ ಎಡಗಯ್ಯಿಂದಲೇ ಹೊಡೆದಿರಬೇಕು. ತಂದೆಮಕ್ಕಳ ಜಗಳ ನಡೆದಾಗ ಅವನು ಸಮೀಪದ ಗಿಡಗಳ ಗುಂಪಿನಲ್ಲಿ ನಿಂತು ಚಿರೂಟನ್ನು ಸೇದುತ್ತಿದ್ದನು. ಅದರದೊಂದು ಕೊರಿಯು (ತುಂಡು) ನನಗೆ ದೊರೆಯಿತು. ಡಿಂಡಿಗಲ್ ಚಿರೂಟಿನಂತೆ ಅದರ ವಾಸನೆಯುಂಟು. ಅದರ ಹಿಂಭಾಗವು ಚಪ್ಪಟೆಯಾಗಿಲ್ಲವಾದ್ದರಿಂದ ಅವನು ಕೊಳವೆಯನ್ನು ಉಪಯೋಗಿಸುತ್ತಿರಬೇಕೆಂಬದು ಸಹಜವು! "

ಈ ಪ್ರಕಾರ ಪಂತರು ಹೇಳುತ್ತಿರುವಷ್ಟರಲ್ಲಿ ನಾವು ಇಳಿದುಕೊಂಡ ಮನೆಯ ಯಜಮಾನನು ಬಂದು—ಹನುಮಂತರಾಯರು ತಮ್ಮನ್ನು ಕಾಣಲಿಕ್ಕೆ ಬಂದಿರುವರು. ಎಂದು ಹೇಳಿದನು.

ಹನುಮಂತರಾಯನು ತಕ್ಕಮಟ್ಟಿಗೆ ದಿನ ಹೋದವನಿದ್ದನು. ಅವನು ಕುಂಟನಾಗಿದ್ದನು. ಕ್ಯಾಪ್ಟನ್ಜಿಪಂತರು ಅವನನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ಕೋಣೆಯ

ಕದವನ್ನಿಕ್ಕಿ, 'ರಾಯರೇ, ನೀವು ಬೇನೆಯವರಾಗಿದ್ದರೂ ಇಲ್ಲಿಯವರೆಗೆ ಬರುವ ಶ್ರಮತಕ್ಕೊಂಡದ್ದು ನಮ್ಮಮೇಲೆ ಉಪಕಾರವಾಯಿತು. ಎಲ್ಲಾ ಸಂಗತಿಗಳು ನಮಗೆ ಮೊದಲೇ ತಿಳಿದುಬಿಟ್ಟವೆ!' ಎಂದರು.

"ಪಂತರೇ ನಿಮಗೆ ನನ್ನ ವರ್ತಮಾನಪತ್ರವನ್ನೆಲ್ಲ ಹೇಳುವೆನು. ನಾನು ಒಳ್ಳೇ ಮಾರ್ಗದಿಂದ ಹಣ ಗಳಿಸಿದವನಲ್ಲ. ಇದರ ಮರ್ಮವೆಲ್ಲ ರಂಗರಾಯ ನೊಬ್ಬನಿಗೆ ಮಾತ್ರ ತಿಳಿದಿತ್ತು. ನಾನು ಇನ್ನು ಸುಖದಿಂದ ಕಾಲಕಳೆಯುತ್ತ ಮೊದಲು ಮಾಡಿದ ಪಾಪವನ್ನೆಲ್ಲ ಕಳೆದುಕೊಳ್ಳಬೇಕೆಂದು ನಿಶ್ಚಯಿಸಿದ್ದೆನು. ನನ್ನ ಅಕ್ಕನು ನನ್ನನ್ನು ಬಹುಪರಿಯಿಂದ ಕಾಪಾಡಿ ತೀರಿಕೊಂಡಳು. ಅವಳ ಮಗನನ್ನು ಗೊತ್ತಿಗೆ ಹಚ್ಚುವದು ನನ್ನ ಕರ್ತವ್ಯವಲ್ಲವೇ? ಆ ಹುಡುಗನು ಬಹಳ ಒಳ್ಳೆಯವನಿದ್ದಾನೆ. ನನ್ನ ಆಸ್ತಿಯನ್ನೆಲ್ಲ ಅತನ ಹೆಸರಿನಿಂದಲೇ ಮಾಡತಕ್ಕವನಿದ್ದೇನೆ. ಹೀಗಿರಲು, ತನ್ನ ಮಗನನ್ನು ದತ್ತಕ ತೆಗೆದುಕೊಳ್ಳಬೇಕೆಂದು ರಂಗರಾಯನುಉಪದ್ರವ ಕೊಟ್ಟನು. ಇದರಿಂದ ನನಗೆ ಸಿಟ್ಟು ಬರುವದು ಸ್ವಾಭಾವಿಕವಲ್ಲವೇ? ನೀವೇ ನೋಡಿರಿ. ಇದಕ್ಕಿಂತ ಹೆಚ್ಚಾಗಿ ಹೇಳತಕ್ಕದ್ದೇನು? ಇನ್ನು ನಾವು ಬಹಳದಿನ ಬದುಕುವದಿಲ್ಲವೆಂಬದನ್ನು ಅರಿತಿದ್ದೇನೆ. ಆದರೆ ನನ್ನ ಈ ಪಾಪದ ಕೆಲಸವು ಅಳಿಯನಿಗೆ ತಿಳಿಯಬಾರದೆಂಬದೇ ಕಡೆಯ ಕೋರಿಕೆಯು! ಅದನ್ನು ಪೂರೈಸುವ ಭಾರವು ನಿಮ್ಮನ್ನು ಕೂಡಿಯದೆ.

ಪಂತರು ಈ ಎಲ್ಲ ಸಂಗತಿಯನ್ನು ಕಬೂಲೀ ಜಬಾಬಿನರೂಪದಿಂದ ಬರೆದು, ಕಾಗದವನ್ನು ಹನುಮಂತರಾಯನ ಮುಂದಿಟ್ಟು, 'ನೀವು ಇದಕ್ಕೆ ಸಹಿ ಮಾಡಿರಿ. ಅನಿವಾರ್ಯವಹದ ಪ್ರಸಂಗದ ಹೊರತು ನಾನು ಈ ಕಾಗದವನ್ನು ಹೊರಗೆಡವುವ ದಿಲ್ಲ. ಆದರೆ ನಿರಪರಾಧಿಯಾದ ಬಿಂದು ಮಾಧವನು ನಿಶ್ಚಯವಾಗಿ ಬಲ್ಲಿಯಾಗುವ ನೆಂದು ತೋರಿದರೆ ಮಾತ್ರ ನನ್ನ ಉಪಾಯವಿಲ್ಲ!' ಎಂದನು.

ಹನುಮಂತರಾಯನು ತುಟಿ ಎರಡು ಮಾಡದೆ ರುಜುಹಾಕಿದನು.

ಮುಂದಿದ ಸಂಗತಿಯನ್ನೂ ವಿಸ್ತರಿಸುವ ಅವಶ್ಯಕತೆಯಿಲ್ಲ. ನಾವು ಮುಂಬ ಯಿಗೆ ಬಂದ ತಿಂಗಳೊಳಗಾಗಿಯೇ ಹನುಮಂತರಾಯನ ಅಳಿಯನಿಂದ ಸುಂದರ ವಾದ ಹರಳುಂಗುರದೊಡನೆ ಕೃತಜ್ಞತಾದರ್ಶಕ ಲೇಖ ಒಂದು ಪಂತರ ದರ್ಶ ನಕ್ಕೆ ಬಂದಿತು.

L. B. Patil.

ವಿನೋದ.

ವಕೀಲ (ಪಕ್ಷಕಾರನಿಗೆ ಅವನಿರುವ ಸ್ಥಳವನ್ನು ತಿಳಿದುಕೊಳ್ಳುವ ಸಲುವಾಗಿ)—ನೀನು ಎಲ್ಲಿರುತ್ತೀ?

ಪಕ್ಷಕಾರ—ನನ್ನ ಅಂಣನ ಹತ್ತರ.

ವಕೀಲ—ನಿನ್ನ ಅಂಣನು ಎಲ್ಲಿರುತ್ತಾನೆ?

ಪಕ್ಷಕಾರ—ನನ್ನ ಹತ್ತರ.

ವಕೀಲ—ನೀವಿಬ್ಬರೂ ಎಲ್ಲಿರುತ್ತೀರಿ?

ಪಕ್ಷಕಾರ—ಬಂದೇ ಕಡೆಗೆ.

* * * *

ಸಂಭಾವಿತ—ನನಗೆ ಈ ಹೊತ್ತು 'ಎಮ್. ಎ' ದ ಡಿಗ್ರಿಯು ದೊರೆಯಿತು.

ಜಾವ್ಯಾಕ—ಹೀಗೇನು? ಹಾಗಾದರೆ; ಇನ್ನೊಂದು "ಡಿ" ಡಿಗ್ರಿಯು ಎಂದೆ ದೊರಿಯುವದು?

* * * *

ಮಾಧವನಿಗೆ ಅವನ ತಂದೆಯು ಬಂದು ದ್ವಾದಶಾಕ್ಷರೀ ಮಂತ್ರವನ್ನು ದಿನಾಲು ಗಂಟ ಸಾರೆ ಜಪಿಸಲಿಕ್ಕೆ ಹೇಳಿದ್ದನು. ಅವನಿಗೆ ಇಷ್ಟು ಸಾರೆ ಆ ಮಂತ್ರವನ್ನುಚ್ಚರಿಸಲಿಕ್ಕೆ ೧೫ ನಿನೀಟುಗಳು ಬೇಕಾಗುತ್ತಿದ್ದವು. ಬಂದು ದಿವಸ ಮಾಧವನು, ತನ್ನ ತಂದೆಯು ಬರೆಯುತ್ತ ಕುಳಿತಾಗ ಬಂದೇ ಸಂಗತಿಯು ಪುನಃ ಬರೆಯುವ ಪ್ರಸಂಗ ಬಂದಲ್ಲಿ 'ಸದರ' ಎಂತ ಬರೆಯುವದನ್ನು ನೋಡಿ ತನ್ನ ಮಂತ್ರದಲ್ಲಿಯೂ ಕೂಡ ಅದನ್ನೇ ಉಪಯೋಗಿಸ ಹತ್ತಿದನು. ಬಂದು ದಿವಸ ಅವನ ತಂದೆಯು:—ಎನೋ ಮಾಧವಾ, ಈಗ ನಿನಗೆ ಜಪ ಮಾಡಲಿಕ್ಕೆ ತೀರ ತುಸು ವೇಳೆಯು ಹೇಗೆ ಸಾಲುತ್ತದೆ. ಮಂತ್ರವನ್ನು ಮರೆತಿರುವಿ ಏನು? ಅನ್ನು ನೋಡೋಣ ಎಂದನು. ಮಾಧವನು ಬಂದುಸಾರೆ ಮಂತ್ರವನ್ನು ಪೂರಾ ಅಂದು ಆ ಮೇಲ ಗಂಟ ಸಾರೆ ಸದರ, ಸದರ, ಸದರ, ಎಂದೆನು.

* * * *

ಮಗನು (ತಂದೆಗೆ)—ಅಪ್ಪಾ! ನಾನು ಹಲ್ಲಿನ ಡಾಕ್ಟರನಾಗಲೋ? ಕಿವಿಯ ಡಾಕ್ಟರ ನಾಗಲೋ?

ತಂದೆ—ಬಾಳಾ! ಹಲ್ಲನ ಡಾಕ್ಟರ ನಾಗು.

ಮಗ—ಅದ್ಯಾಕೆ

ತಂದೆ—ಎಲ್ಲರಿಗೂ ಹಲ್ಲುಗಳು ಮೂವತ್ತೆರಡು ಇರುವವು. ಕಿವಿಗಳು ಮಾತ್ರ ಎರಡೇ ಇರುವವು.

* * * *

ಡಾಕ್ಟರ—ಶಾಮರಾಯರೇ! ಎರಡನೇ ಸಾರೆ ನಿಮ್ಮ ಹೆಂಡತಿಗೆ ಈ ರೋಗ ಬಂದಾಗ ಆವರ ತಲೆಯ ಮೇಲೆ ತಣ್ಣೀರು ಸುರುವಿ ಆ ಮೇಲೆ—

ಶಾಮರಾಯರು—ಆಮೇಲೆ ಸನ್ನಿಪಾತವಾಯಿತೆಂದು ಹೇಳಿ ನಿಮ್ಮನ್ನು ಕರಕೊಂಡು ಹೋಗಲಿಕ್ಕೆ ಬಂದೇ ಬರುವೆನು.

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं **वाग्भूषणम्** भूषणम् ॥

(भर्तृहरिः)

ಸಂಪುಟ ೧೬. | ಮೇ ೧೯೧೨. | ಸಂಚಿಕೆ ೧೦.

ಸಂಪತ್ತಿಯೆಂದರೇನು?

ಅರ್ಥ, ಧನ, ಸಂಪತ್ತಿ ಮೊದಲಾದ ಶಬ್ದಗಳನ್ನು ಜನರು ಸಮಾನಾರ್ಥದಲ್ಲಿ ವ್ಯವಹರಿಸುತ್ತಾರೆ. ಮತ್ತು ಅವರಿಗೆ ಈ ಶಬ್ದಗಳ ಅರ್ಥವನ್ನು ಕೇಳಲು ಹೊಲ ಮನೆ, ದುಡ್ಡುಕಾಸು, ಅರಿವೆ ಅಂಚಡಿ, ಕಾಳುಕಡಿ ಮೊದಲಾದುವೆಲ್ಲವು ಸಂಪತ್ತಿಯೆಂದು ಉತ್ತರ ಹೇಳುವರು. ಮತ್ತು ಸಂಪತ್ತಿಯೆಂಬದರಲ್ಲಿ ಸಾವಿರಾರು ವಸ್ತುಗಳ ಸಮಾವೇಶವಾಗುವದರಿಂದ ಇನ್ನೂ ನೂರಾರು ವಸ್ತುಗಳನ್ನು ಹೇಳಿ ಇವೆಲ್ಲ ಸಂಪತ್ತಿಯ ಅರ್ಥವೆಂದು ಯಾರಾದರೂ ಹೇಳಿದರೂ ಸಂಪತ್ತಿಯ ಸ್ವರೂಪಜ್ಞಾನವು ಎಂದೂ ಆಗಲಾರದು. ಈಗ ಇಲ್ಲಿ ಶಾಸ್ತ್ರದೃಷ್ಟಿಯಿಂದ ಸಂಪತ್ತಿಯೆಂಬ ಶಬ್ದದ ಅರ್ಥವನ್ನು ನಿರ್ಣಯಿಸತಕ್ಕದ್ದಿರುವದು. ಅಂದರೆ ಸಂಪತ್ತಿಯ ವ್ಯಾಖ್ಯೆಯನ್ನು ಹೇಳತಕ್ಕದ್ದಿರುವದು. ಶಾಸ್ತ್ರೀಯ ವ್ಯಾಖ್ಯೆಯು ಯಾವಾಗಲು ಸಾಮಾನ್ಯಧರ್ಮಗಳನ್ನು ಬೋಧಿಸುವದಾಗಿರಬೇಕು. ಆದ್ದರಿಂದ "ಸಂಪತ್ತಿ" ಎಂಬ ಶಬ್ದದಿಂದ ಹೇಳಲ್ಪಡುವ ಭಿನ್ನ ಭಿನ್ನ ವಸ್ತುಗಳಲ್ಲಿ ಯಾವ ಸಮಾನಧರ್ಮಗಳು ಇರುತ್ತವೆಂಬದನ್ನು ಆಲೋಚಿಸುವ.

(೧). ಸಂಪತ್ತಿಯೆಂದು ಹೇಳಲ್ಪಡುವ ವಸ್ತುವು ಮನುಷ್ಯನಿಂದ ಪೃಥಕ್ಕಾಗಿರಬೇಕು. ಇದರಿಂದ ಮನುಷ್ಯನು ಇಲ್ಲವೆ ಮನುಷ್ಯನ ಗುಣಗಳು ಸಂಪತ್ತಿಯೆನಿಸಲಾರವೆಂಬುದು ಸ್ಪಷ್ಟವಿದೆ. ಮನುಷ್ಯವಿಕ್ರಯ ಪದ್ಧತಿಯು (ಗುಲಾಮರಪದ್ಧತಿಯು) ರೂಢವಾಗಿರುವ ದೇಶದಲ್ಲಿ ಒಬ್ಬ ಮನುಷ್ಯನು ಇನ್ನೊಬ್ಬನ ಸಂಪತ್ತಿಯಾಗಬಹುದು. ಆದರೆ ತಾನೇ ತನ್ನ ಸಂಪತ್ತಿಯಾಗಲಾರನು. ಇದರಂತೆ ಮನುಷ್ಯನ

ಗುಣಗಳೂ ಸಂಪತ್ತಿಯೆನಿಸಲಾರವು. ಮನುಷ್ಯನ ಗುಣಗಳು ಸಂಪತ್ತಿಯ ಜನಕಗಳಾಗಿರಬಹುದು. ಹೇಗಂದರೆ—ಒಬ್ಬನು ತನ್ನ ಬುದ್ಧಿಬಲದಿಂದ ಬೇಕಾದಷ್ಟು ಸಂಪತ್ತಿಯನ್ನು ದೊರಕಿಸಬಹುದು. ಇಲ್ಲವೆ ಯಾವನೊಬ್ಬನು ಗಾಯಕನಾಗಿ ವಿಪುಲಸಂಪತ್ತಿಯನ್ನು ಹೊಂದಬಹುದು. ಈ ಬುದ್ಧಿ, ಗಾಯನ ಮೊದಲಾದ ಗುಣಗಳು ಸಂಪತ್ತಿಯೆನಿಸವು. ಆದರೆ ಸಂಪತ್ತಿ ಜನಕಗಳಾಗಿರುವವು. ವ್ಯವಹಾರದಲ್ಲಿಯೂ ಗ್ರಂಥಗಳಲ್ಲಿಯೂ ವಿದ್ಯಾಸಂಪತ್ತಿ, ಶರೀರಸಂಪತ್ತಿ, ಆರೋಗ್ಯಸಂಪತ್ತಿ ಮೊದಲಾದ ಶಬ್ದಗಳನ್ನು ಉಪಯೋಗಿಸುವರು. ಆದರೆ ಈ ಶಬ್ದಗಳು ಅಲ್ಲಿ ಲಾಕ್ಷಣಿಕವಾಗಿರುವವು.

(೨). ಸಂಪತ್ತಿಯೆನಿಸಿಕೊಳ್ಳುವ ವಸ್ತುವು ಮನುಷ್ಯನ ಇಚ್ಛೆಯನ್ನು ಪೂರ್ಣಮಾಡುವ ಶಕ್ತಿಯುಳ್ಳದ್ದಾಗಿರಬೇಕು. ಇದೊಂದು ಸಂಪತ್ತಿಯ ಸಾಮಾನ್ಯಧರ್ಮವು. ಈ ಧರ್ಮಕ್ಕೆ ವಸ್ತುವಿನ ಉಪಯುಕ್ತತೆಯನ್ನುವರು. ಅರ್ಥ, ಶಬ್ದದ ಉತ್ಪತ್ತಿಯಿಂದಲೂ ಇದೇ ಅರ್ಥವು ತೋರುವದು. ಯಾವದು ಮನುಷ್ಯನಿಂದ ಪ್ರಾರ್ಥಿಸಲ್ಪಡುವದೋ ಅದು ಅರ್ಥವು; (**अर्थ्यत इत्यर्थः**) ಇದರಿಂದ ಸಂಪತ್ತಿಯಲ್ಲಿ ಮನುಷ್ಯನ ಇಚ್ಛೆಯನ್ನು ಪೂರ್ಣಮಾಡುವ ಶಕ್ತಿಯು ಇರಲೇಬೇಕೆಂಬುದು ಸ್ಪಷ್ಟವದೆ. ಮನುಷ್ಯನ ಆ ಇಚ್ಛೆಯು ನೀತಿಯನ್ನು ಅನುಸರಿಸಿರಲಿ ಇಲ್ಲವೆ ಬಿಟ್ಟಿರಲ್ಲಿ, ಸ್ವಾಭಾವಿಕವಿರಲಿ, ಕೃತ್ರಿಮವಿರಲಿ ಈ ವಿಷಯವನ್ನು ಇಲ್ಲಿ ವಿಚಾರಿಸುವದಿಲ್ಲ. ಯಾವ ವಸ್ತುಗಳಿಗೆ ಲೋಕದಲ್ಲಿ ಬೇಡಿಕೆಯಿಗುವದೊ ಇಲ್ಲವೆ ಯಾವವಸ್ತುಗಳು ಲೋಕದಲ್ಲಿ ಖರ್ಚಾಗುವವೊ ಆ ಎಲ್ಲ ವಸ್ತುಗಳು ಸಂಪತ್ತಿಯೆಂಬ ಹೆಸರನ್ನು ಹೊಂದುವವು. ಅದ್ದರಿಂದ ಹೊಗೆಸೊಪ್ಪು, ಮದ್ಯ ಮೊದಲಾದ ವಸ್ತುಗಳ ಸೇವನವು ಅನೀತಿಜನಕವಾಗಿದ್ದರೂ ಅರ್ಥಶಾಸ್ತ್ರದೃಷ್ಟಿಯಿಂದ ಅವು ಸಂಪತ್ತಿಯೆನಿಸುವವು.

(೩). ದುರ್ಮಿಳತೆ ಇಲ್ಲವೆ ಕಷ್ಟಸಾಧ್ಯತೆಯು ಸಂಪತ್ತಿಯಲ್ಲಿರಬೇಕಾದ ಮೂರನೆಯ ಸಾಮಾನ್ಯಧರ್ಮವು. ವಿಪುಲವಾಗಿ ಇರುವ ಮತ್ತು ಏನೂ ಶ್ರಮವಿಲ್ಲದೆ ದೊರೆಯಬಹುದಾದ ಪದಾರ್ಥಗಳಿಗೆ ಯಾರೂ ಸಂಪತ್ತಿಯೆಂದು ಹೇಳುವದಿಲ್ಲ. ಆ ಪದಾರ್ಥಗಳು ಉಪಯುಕ್ತವಾಗಿರಬಹುದು. ಮತ್ತು ಮನುಷ್ಯನಿಂದ ಪೃಥಕ್ಕಾಗಿಯೂ ಇರಬಹುದು. ಅಷ್ಟರಿಂದಲೇ ಸಂಪತ್ತಿಯೆನಿಸಲಾರವು. ಸಂಪತ್ತಿಯಲ್ಲಿ ದುರ್ಮಿಳತೆ ಇಲ್ಲತೆ ಕಷ್ಟಸಾಧ್ಯತೆಯೆಂಬ ಧರ್ಮವು ಇರಲೇಬೇಕು. ಹವೆ, ನೀರು, ಬೆಳಕು, ಮೊದಲಾದ ವಸ್ತುಗಳು ಸಂಪತ್ತಿಯೆಂದು ಯಾರೂ ಹೇಳುವದಿಲ್ಲ. ಆದರೆ ಸಮಯವಿಶೇಷದಲ್ಲಿ ಅಥವಾ ದೇಶವಿಶೇಷದಲ್ಲಿ ಈ ವಸ್ತುಗಳೂ ಸಂಪತ್ತಿಯೆನಿಸಬಹುದು. ಆದರೆ ಎಲ್ಲಿ ಈ ವಸ್ತುಗಳ ದುರ್ಮಿಳತೆಯಿರುವದೊ ಅಲ್ಲಿ ಇವು ಸಂಪತ್ತಿಯಾಗುವವು. ಮಾರವಾಡದಂಥ ನಿರ್ಜಲಪ್ರದೇಶದಲ್ಲಿ ಒಂದು ತಂಬಿಗೆ ನೀರಿಗೆ ಒಂದು ದುಡ್ಡು ಕೊಡಬೇಕಾಗುವದು. ಅಲ್ಲಿ ಯಾವನ ಬಾವಿಯಲ್ಲಿ ನೀರು ವಿಪುಲ

ವಾಗಿರುವದೊ ಅವನು ಶ್ರೀಮಂತನಾಗುವನು. ದೊಡ್ಡ ಪಟ್ಟಣಗಳಲ್ಲಿ ದುರ್ಮಿಳತೆ ಯಿರುವದರಿಂದಲೇ ನೀರು ಬಿಲೆ ಬಾಳುವದು.

(೪). ಸಂಪತ್ತಿಯೆಂಬದು ಯಾರಿಗಾಡಿರೂ ಅಧೀನವಾಗಿರಬೇಕು. ಅಂದರೆ ಅದರಲ್ಲಿ ಸ್ವಾಧೀನತೆಯೆಂಬ ಧರ್ಮವಿರಬೇಕು. ಯಾವವಸ್ತುಗಳು ಸರ್ವಸಾಮಾ ನ್ಯವಾಗಿರುವವೊ ಮತ್ತು ಯಾವವಸ್ತುಗಳ ಮೇಲೆ ಯಾವನೊಬ್ಬನ ಸ್ವಾಧೀನತೆಯಿ ರುವದಿಲ್ಲವೊ ಅಂಥವಸ್ತುಗಳು ಸಂಪತ್ತಿಯೆನಿಸಲಾರವು. ಹವೆ, ನೀರು, ಭೂಮಿ, ಅಡವಿ ಮೊಟಲಾದವು ಸಂಪತ್ತಿಯಲ್ಲ ಸಂಪತ್ತಿಯು ಒಬ್ಬನಿಗೇ ಅಧೀನವಾಗಿರಬೇ ಕೆಂಬ ನಿಯಮವಿಲ್ಲ. ಒಬ್ಬನಿಗೆ ಅಧೀನವಾಗಿರಲಿ, ಜನಸಮೂಹಕ್ಕೆ ಅಧೀನವಾಗಿ ರಲಿ, ಇಲ್ಲವೆ ಸರಕಾರಕ್ಕೆ ಅಧೀನವಾಗಿರಲಿ ಆಗಿರಬಹುದು. ಅಂದರೆ ಅದರಲ್ಲಿ ಅಧೀನತೆ ಎಂಬ ಧರ್ಮವು ಅವಶ್ಯವು. ಮೇಲಿನ ವಿವರಣದಿಂದ ಸಂಪತ್ತಿಯೆನಿಸುವ ವಸ್ತುಗಳಲ್ಲೆಲ್ಲ ಪೃಥಕ್ತ್ವ, ಉಪಯುಕ್ತತ್ವ, ದುರ್ಲಭತ್ವ, (ದುರ್ಮಿಳತ್ವ,) ಅಧೀ ನತ್ವ, ಎಂಬೀನಾಲ್ಕು ಧರ್ಮಗಳು ಇರಲೇಬೇಕು. ಈ ನಾಲ್ಕು ಮೂಲಧರ್ಮಗ ಳಿಂದ ಬೇರೆ ಧರ್ಮಗಳು ಉಂಟಾಗುವವು. ಹೇಗಂದರೆ—ಸಂಪತ್ತಿಯು ಬೆಲೆಬಾಳುವ ಧರ್ಮವುಳ್ಳದ್ದಿರುತ್ತದೆ. ಅಂದರೆ ಅದು ಕೊಳ್ಳಲಿಕ್ಕೆ ಇಲ್ಲವೆ ಮಾರಲಿಕ್ಕೆ ಬರುವದು. ಇಲ್ಲವೆ ಅದಕ್ಕೆ ವಿನಿಮಯಮೂಲ್ಯವು ಇರುವದು. ಇದು ಸಂಪತ್ತಿಯ ವ್ಯಾಥಮಿಕ ಧರ್ಮವಲ್ಲ. ಯಾವದೊಂದು ಪದಾರ್ಥವು ಉಪಯುಕ್ತವಾಗಿದ್ದರೆ ಇಲ್ಲವೆ ದುರ್ಲ ಭವಾಗಿದ್ದರೆ ಅಥವಾ ಮನುಷ್ಯನಿಂದ ಪೃಥಕ್ಕಾಗಿದ್ದರೆ ಇಲ್ಲವೆ ಯಾರ ಸ್ವಾಧೀನದ ಲ್ಲಾರೂ ಇದ್ದರೆ ಆ ವಸ್ತುವನ್ನು ದೊರೆಕಿಸುವದಕ್ಕೆ ಮನುಷ್ಯನು ಶ್ರಮವಾಡುವನು, ಇಲ್ಲವೆ ಅದನ್ನು ಶ್ರಮದಿಂದ ದೊರಕಿಸಿದವನಿಗೆ ಪ್ರತಿಯಾಗಿ ಏನಾದರೂ ಕೊಡುವ ದಕ್ಕೆ ಅಂದರೆ ಆ ಪದಾರ್ಥದ ವಿನಿಮಯಮೂಲ್ಯವನ್ನು ಕೊಡುವದಕ್ಕೆ ಸಿದ್ಧನಾಗು ವನು. ಈ ವಿವರಣೆಯಿಂದ ಸಂಪತ್ತಿಯ ವ್ಯಾಖ್ಯೆಯು ಕೆಳಗೆ ತೋರಿಸಿದ ರೀತಿಯಲ್ಲಿ ಫಲಿತವಾಗುವದು.

"ಮನುಷ್ಯನಿಂದ ಪೃಥಕ್ಕಾದದ್ದು, ದುರ್ಲಭವಾದದ್ದು, ಯಾವನೊಬ್ಬನ ಸ್ವಾ ಧೀನದಲ್ಲಿರುವದೂ ಆಗಿರುವ ಉಪಯುಕ್ತವಾದ ವಸ್ತುವು ಸಂಪತ್ತಿಯೆನಿಸುವದು."

ಸಮಾಜದ ಭಿನ್ನಭಿನ್ನ ಪರಿಸ್ಥಿತಿಯಲ್ಲಿ ಸಂಪತ್ತಿಯು ಭಿನ್ನಭಿನ್ನವಾಗಿರುವದು. ಸಮಾಜದ ಬಾಲ್ಯಾವಸ್ಥೆಯಲ್ಲಿ ಮನುಷ್ಯನ ಗರಜುಗಳು ಬಹಳ ಸಂಕುಚಿತವಾಗಿ ರುವವು. ಮತ್ತು ಆಗ ಅವನ ಜೀವನ ಕ್ರಮದಲ್ಲಿಯೂ ಪಶುವರ್ಗದ ಜೀವನಕ್ರಮ ದಲ್ಲಿಯೂ ಹೆಚ್ಚಿನ ಅಂತರವಿರುವದಿಲ್ಲ. ಸಮಾಜದ ಇಂತಹ ಸ್ಥಿತಿಗೆ ಮೃಗಯಾ ವೃತ್ತಿಯೆಂದು ಹೇಳುವರು. ಈ ಸ್ಥಿತಿಯಲ್ಲಿ ಮನುಷ್ಯನು ಬೇಟೆಯಾಡಿ ತನ್ನ ಉಪ ಜೀವನವನ್ನು ಸಾಗಿಸುವನು, ಗಿಡಗಳ ಹೊದರುಗಳಲ್ಲಿ ವಾಸಿಸುವನು. ಈ ಸ್ಥಿತಿಯಲ್ಲಿ

ಸಂಪತ್ತಿಯ ಅಭಿವೃದ್ಧಿಯು ಎಂದೂ ಆಗದು. ಗೋಪಾಲಕವೃತ್ತಿಯು ಇದಕ್ಕೂ ಮುಂದಿನದು. ಈ ವೃತ್ತಿಯಲ್ಲಿ ಮನುಷ್ಯನು ಎಲ್ಲಿಯೂ ಸ್ಥಿರವಾಗಿ ವಾಸಿಸುವದಿಲ್ಲ. ತನ್ನ ದನಕರುಗಳ ಹಾಗು ತನ್ನ ಉಪಜೀವನವು ಅನಾಯಾಸವಾಗಿ ಆಗುವ ಸ್ಥಳಿಗ ಳಿಗೆ ಹೋಗುವನು. ಈ ಸ್ಥಿತಿಯಲ್ಲಿ ದನಕರುಗಳೂ ಕುರಿಗಳೂ ಅವುಗಳ ಹಾಲು, ಉಣ್ಣಿ, ತೊಗಲು ಮುಂತಾದವೂ ಸಂಪತ್ತಿಯಾಗಿರುವವು. ಇವುಗಳ ಸಮೃದ್ಧಿಯುಳ್ಳ ವನೇ ಶ್ರೀಮಂತನು. ಕೃಷಿವೃತ್ತಿಯು ಸಮಾಜದ ಉನ್ನತಸ್ಥಿತಿಯ ಸೂಚಕವಾಗಿರು ವದು. ಈ ವೃತ್ತಿಯಲ್ಲಿ ಜನರು ಒಂದು ಪ್ರದೇಶದಲ್ಲಿ ಸ್ಥಿರವಾಗಿ ವಾಸಮಾಡುವರು. ಸಮಾಜದ ಗರಜುಗಳೂ ಈ ವೃತ್ತಿಯಲ್ಲಿ ಹೆಚ್ಚಾಗುವವು. ಮತ್ತು ಆ ಗರಜುಗಳನ್ನು ಪೂರೈಸುವದಕ್ಕಾಗಿ ಹೆಚ್ಚು ಹೆಚ್ಚು ಪದಾರ್ಥಗಳನ್ನು ಸಿದ್ಧಮಾಡುವರು. ಆದರೂ ಈ ವೃತ್ತಿಯಲ್ಲಿ ಸಮಾಜದ ಗರಜುಗಳು ಹೆಚ್ಚಾಗಿ ಬೆಳೆದಿರುವದಿಲ್ಲ. ಆದರೆ ಉದ್ಯೋಗ ವೃತ್ತಿಯಲ್ಲಿ ಗರಜುಗಳು ಬಹಳವಾಗಿ ಬೆಳೆಯುವವು. ಮತ್ತು ಅವುಗಳನ್ನು ಪೂರೈ ಸುವದಕ್ಕಾಗಿ ಸಾವಿರಾರು ಉದ್ಯೋಗಗಳುಂಟಾಗುವವು. ಆದರಿಂದ ದೇಶದಲ್ಲಿ ನಾನಾ ಪ್ರಕಾರದ ಸಂಪತ್ತಿಯುಂಟಾಗುವದು.

ಈ ರೀತಿಯಲ್ಲಿ ಮೃಗಯಾವೃತ್ತಿ, ಗೋಪಾಲಕವೃತ್ತಿ, ಕೃಷಿವೃತ್ತಿ, ಉದ್ಯೋಗ ವೃತ್ತಿಗಳೆಂಬ ನಾಲ್ಕು ಅವಸ್ಥೆಗಳು ಸಮಾಜಕ್ಕೆ ಇರುವವೆಂದು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. ನಮ್ಮ ದೇಶದ ಜನರು ಹಳೆ ನಡತೆಗಳನ್ನು ಬಿಡದವರಾದ್ದರಿಂದಾಗಲಿ, ಅವರಲ್ಲಿಯು ಜಾತಿಭೇದದಿಂದಾಗಲಿ, ಇಲ್ಲವೆ ಈ ದೇಶವು ಬಹಳ ವಿಸ್ತಾರವಾಗಿರುವ ದರಿಂದಾಗಲಿ ಹಿಂದೂ ಜನಸಮಾಜದಲ್ಲಿ ಒಂದು ವಿಶೇಷವು ಕಂಡುಬರುವದು. ಅದೇನೆಂದರೆ ಮೇಲೆ ಹೇಳಿದ ಮೃಗಯಾವೃತ್ತಿ ಮೊದಲಾದುವೆಲ್ಲವು ನಮ್ಮ ದೇಶ ದಲ್ಲಿ ಈಗಲೂ ಏಕಕಾಲಕ್ಕೆ ಕಂಡುಬರುವವು. ಅನಾದಿಕಾಲದಿಂದ ಮೃಗಯಾವೃತ್ತಿ ಯಿಂದ ಜೀವಿಸುವವರು ಈಗಲೂ ಇದ್ದಾರೆ. ಹಿಂದುಸ್ತಾನದ ಬೇರೆ ಬೇರೆ ಗುಡ್ಡಗ ಳಲ್ಲಿ ವಾಸಿಸುವ ಭಿಲ್ಲ, ಕೋಳಿ ಮೊದಲಾದ ಮೂಲನಿವಾಸಿಗಳು ಈ ವರ್ಗಕ್ಕೆ ಸೇರಿ ದವರು. ಅನಾದಿಕಾಲದಿಂದ ಗೋಪಾಲವೃತ್ತಿಯಲ್ಲಿರುವ ಜನರನ್ನೂ ಈ ದೇಶದಲ್ಲಿ ಕಾಣಬಹುದು. ಇವರಿಗೆ ಮನೆಕಟ್ಟಿಕೊಂಡಿರುವದು ಸೇರುವದಿಲ್ಲ. ದನಕರು ಗಳನ್ನೂ ಕುರಿಗಳನ್ನೂ ಪಾಲಿಸುತ್ತ ಅವುಗಳಿಗೂ ತಮಗೂ ಅನುಕೂಲವಾದ ಪ್ರದೇಶಗಳಿಗೆ ತಿರುಗಾಡುವದೇ ಇವರ ಕ್ರಮವಾಗಿದೆ. ಹಿಂದುಸ್ತಾನದಲ್ಲಿ ಈಗ ಬಹು ಜನರು ಅಂದರೆ ಸುಮಾರು ನೂರಕ್ಕೆ ಎಪ್ಪತ್ತೈದು ಜನರು ಕೃಷಿವೃತ್ತಿಯಲ್ಲಿರುವರು. ಬ್ರಿಟಿಶರ ಆಳಿಕೆಯಲ್ಲಿ ನಮ್ಮ ದೇಶದಲ್ಲಿ ಉದ್ಯೋಗವೃತ್ತಿಯೂ ತಲೆದೋರಹತ್ತಿದೆ. ಆದರೂ ಹಿಂದುಸ್ತಾನವು ಕೃಷಿವೃತ್ತಿಯ ದೇಶವೆಂದು ಹೇಳಲು ಏನೂ ಬಾಧಕವಿಲ್ಲ. ಬ್ರಿಟಿಶರ ಆಳಿಕೆಯಿಂದಲೂ ಇಂಗ್ಲಿಶ ಶಿಕ್ಷಣದಿಂದಲೂ ಜನರ ಗರಜುಗಳು ಬೆಳೆಯು

ತ್ತಿರುವವು. ಅಭಿರುಚಿಯು ಭಿನ್ನವಾಗುತ್ತಿರುವದು. ಸಂಪತ್ತಿಯ ಉಪಭೋಗದಲ್ಲಿ ಜನರ ಪ್ರವೃತ್ತಿಯು ಬೆಳೆಯುತ್ತಿರುವದು. ಕಲಾಕೌಶಲ್ಯಗಳೂ ಅವುಗಳ ಸಾಧನ ಗಳೂ ಬೆಳೆಯುತ್ತಿರುವವು. ನಮ್ಮ ದೇಶದ ಕೆಲವು ದೊಡ್ಡ ಪಟ್ಟಣಗಳು ವ್ಯಾಪಾ ರೋದ್ಯೋಗಗಳ ಆಗರವಾಗಿರುವವು. ಇಂಥ ಪಟ್ಟಣದೊಳಗಿನ ಒಬ್ಬ ಶ್ರೀಮಂತನ ಅರಮನೆಯುಂಥ ಭವ್ಯಮಂದಿರಕ್ಕೂ ಭಿಲ್ಲನ ಗುಡಿಸಲಕ್ಕೂ ಇರುವ ಅಂತರವನ್ನು ನೋಡಿದರೆ ಮೃಗಯಾವೃತ್ತಿ ಮತ್ತು ಉದ್ಯೋಗವೃತ್ತಿಗಳಲ್ಲಿರುವವರ ಸ್ಥಿತಿಗತಿಗಳ ಅಂತರವು ಸ್ಪಷ್ಟವಾಗಿ ತೋರುವದು.

ಮಾಘಚರಿತ್ರವು.

(೧)

उपमा कालिदासस्य भारवेरर्थं गौरवम् ॥
दंडिनः पदलालित्यं माघे संतित्रयो गुणाः ॥ १ ॥

ಲಕ್ಷ್ಮಿಯ ಹಾಗು ಸರಸ್ವತಿಯ ಸಾನ್ನಿಧ್ಯವು ಏಕತ್ರವಾಗಿರುವದು ಬಹು ಶ್ಲಾಘನೀಯವಾದದ್ದು! ಅವುಗಳಲ್ಲಿ ಔದಾರ್ಯವೂ ಸಮ್ಮಿಲಿತವಾಗಿರುವದು ಇನ್ನೂ ಹೆಚ್ಚು ಶ್ಲಾಘನೀಯವಾದದ್ದು! ಯಾವ ಚರಿತ್ರದಲ್ಲಿ ಅತಿ ವಿದ್ವತ್ತೆಯೂ ಅತಿ ಐಶ್ವರ್ಯವೂ ಅತಿ ಔದಾರ್ಯವೂ ಅಡಗಿರುವವೋ ಅಂತಹ ಪುಣ್ಯಶ್ಲೋಕೀಯು ಚರಿತ್ರವನ್ನು ನಮ್ಮ ಕನ್ನಡ ವಾಚಕರಮುಂದೆ ಇಡುತ್ತೇವೆ.

ಯಾವದೊಂದು ಚರಿತ್ರವನ್ನು ಬರೆಯುವಾಗ್ಗೆ ಪ್ರಾರಂಭದಲ್ಲಿ, ಆ ಚರಿತ್ರ ನಾಯಿಕನ ಪೂರ್ವಜರ ವೃತ್ತಾಂತವನ್ನು ತುಸುಮಟ್ಟಿಗೆ ಹೇಳುವದು ವಾಡಿಕೆಯಾ ಗಿದೆ. ಇದರ ಉದ್ದೇಶವು ಪ್ರಾಯಶಃ ಹೀಗೆ ಇರಬಹುದು. "ಅನುವಂಶಿಕತತ್ವ" ಕ್ಕನುಸರಿಸಿ, ವಂಶದೊಳಗಿನ ಯಾವ ಯಾವ ಜನರ ಯಾವ ಯಾವ ಗುಣ ಗಳು ಚರಿತ್ರನಾಯಿಕನ ಸ್ವಭಾವದಲ್ಲಿ ಮವಡಿದ್ದವೆಂಬದನ್ನು ನೋಡಲಿಕ್ಕೆ ಅನುವು ದೊರೆಯುವದು. ಆದುದರಿಂದ ಆ ಪದ್ಧತಿಗನುಸಾರವಾಗಿ ನಮ್ಮ ಚರಿತ್ರನಾಯಿ ಕನ (ಮಾಘಕವಿಯ) ವಂಶವೃತ್ತಾಂತವನ್ನ ಇಲ್ಲಿ ಹೆಳುವೆವು.

ಈ ಮಾಘಕವಿಯು ಬ್ರಾಹ್ಮಣಕುಲೋತ್ಪನ್ನನು. ಇವನ ಅಜ್ಜನಾದ ಸುಪ್ರಭದೇವನು, ಶ್ರೀಧರ್ಮನಾಭ ಅರಸನ ಸರ್ವಾಧಿಕಾರಿ (ಮಂತ್ರಿ) ಯಾಗಿದ್ದು,

---

(೧) ಕಾಲಿದಾಸನ ಉಪಮಾ, ಭಾರವೀಯ ಅರ್ಥಗೌರವ, ದಂಡಿಯ ಪದಲಾಲಿತ್ಯ ಈ ಮೂರೂ ಗುಣಗಳು ಮಾಘಕವಿಯ ಕಾವ್ಯದಲ್ಲಿ ಏಕತ್ರವಾಗಿ ದೃಷ್ಟಿಗೆ ಬೀಳುತ್ತವೆ!

ಗುಜರಾಥ ಪ್ರಾಂತದೊಳಗೆ ಶ್ರೀಮಾಲಪುರವೆಂಬ ಊರಲ್ಲಿ ವಾಸಿಸುತ್ತಿದ್ದನು. ಇವನು ರಾಜಕರಣದಲ್ಲಿ ಬಹುದಕ್ಷನಾಗಿದ್ದು, ತನ್ನ ಅಧಿಕಾರವನ್ನು ಬಹು ಉತ್ತಮರೀತಿಯಿಂದ ನಾಗಿಸುತ್ತಿದ್ದನು. ಐಶ್ವರ್ಯ ದೃಷ್ಟಿಯಿಂದ ನೋಡಿದರೆ, ಇವನು ಪ್ರತ್ಯಕ್ಷ ಅರಸನೋ ಏನೋ ಅನ್ನುವ ಹಾಗೆ ಒಪ್ಪುತ್ತಿದ್ದನು! ಹೀಗೆ ಅಧಿಕಾರ ಹಾಗು ಐಶ್ವರ್ಯ ಸಂಪನ್ನನಾಗಿದ್ದರೂ ಅವನು ಯಾವಾಗಲೂ ಸಾತ್ವಿಕವೃತ್ತಿಯಿಂದ ಇರುತ್ತಿದ್ದನು!! ಜ್ಞಾನಿಗಳ ವಚನವನ್ನು ಸಜ್ಜನರು ಪಾಲಿಸುತ್ತಾರೆ; ಅದೇ ಮೇರೆಗೆ ಅಶ್ರೀಧರ್ಮನಾಭರಾಜನು, ತನ್ನ ಮಂತ್ರಿಯಾದ ಈಸುಪ್ರಭದೇವನ ಪರಿಣಾಮದಲ್ಲಿ ಹಿತಕರವಾದಂಥ ಉಪದೇಶವಚನಗಳನ್ನು ಪಾಲಿಸುವದರಲ್ಲಿ ತತ್ಪರನಾಗಿದ್ದನು. ಈಸುಪ್ರಭದೇವನಿಗೆ ಮುಂದೆ ಒಬ್ಬ ಪುತ್ರನು ಹುಟ್ಟಿದನು. ಇವನ ಹೆಸರು ದತ್ತಕ ಈ ಪುತ್ರನು ಅತ್ಯಂತ ಉದಾರನೂ ಕ್ಷಮಾಶೀಲನೂ ದಯಾಳುವೂ ಧಾರ್ಮಿಕನೂ ಇದ್ದುದರಿಂದ ವ್ಯಾಸನು ವರ್ಣಿಸಿದ ಧರ್ಮರಾಜನ ಗುಣಗಳನ್ನು ಈ ದತ್ತಕನಲ್ಲಿ ಕಂಡೆವೆಂದು ಜನರು ಅನ್ನಲಾರಂಭಿಸಿದರು. ಸಜ್ಜನರಲ್ಲಿ ಅಗ್ರಗಣ್ಯನಾದ ಈ ದತ್ತಕನು ಮುಂದೆ ಆ ಮಂತ್ರಿಪದವನ್ನು ಪಹಿಸಿದನು. ಇವನ ವಿಚಾರಯುಕ್ತ ರಾಜ್ಯ ಪಾಡಳಿತೆಯಿಂದ ಸಮಸ್ತ ಪ್ರಜೆಗಳು ಅನಂದಭರಿತರಾದರು. ಆಗ ಜನರೆಲ್ಲರು ಈ ಮಹಾತ್ಮನನ್ನು 'ಸರ್ವಾಶ್ರಯ' ಎಂಬ ಗೌರವದನಾಮದಿಂದ ಸಂಭೋಧಿಸ ತೊಡಗಿದರು!

ಈ ಸರ್ವಾಶ್ರಯ ಅಥವಾ ದತ್ತಕನಿಗೆ ಒಬ್ಬ ಮಗನು ಹುಟ್ಟಿದನು. ಇವನೇ ನಮ್ಮ ಚರಿತ್ರನಾಯಿಕನಾದ ಮಾಘನು. ಇವನು ಸತ್ಕವಿಯಾಗಿ ದುರ್ಲಭವಾದ ಕೀರ್ತಿಯನ್ನು ಹೊಂದಬೇಕೆಂಬ ಉದಾತ್ತಕಾಂಕ್ಷೆಯಿಂದ ಲಕ್ಷ್ಮೀಪತಿಯ ಶ್ರೀಕೃಷ್ಣನ) ಚರಿತ್ರವನ್ನು ವರ್ಣಿಸಿ 'ಶಿಶುಪಾಲವಧ' ವೆಂಬ ಕಾವ್ಯವನ್ನು ರೆಚಿಸಿದ್ದಾನೆ. ಇದು ಅತ್ಯಂತ ಮನೋಹರವಿರುತ್ತದೆ. ಈ ಕಾವ್ಯದ ಪ್ರತಿಯೊಂದು ಸರ್ಗದ ಕೊನೆಗೆ 'श्री' ಈ ಶಬ್ದದ ಚಿಹ್ನವಿರುತ್ತದೆ. (*)

(*) ಈ ಕಾವ್ಯದೊಳಗೆ ಪ್ರತಿಯೊಂದು ಸರ್ಗದ ಕೊನೆಯ ಶ್ಲೋಕದಲ್ಲಿ 'श्री' ಈ ಶಬ್ದವನ್ನು ಯೋಜಿಸಿರುತ್ತದೆ; ಆ ಶಬ್ದವು ಯಾವದಾದರೂ ಚರಣದಲ್ಲಿ ಬರುತ್ತದೆ; ಆದರೆ ಅದಕ್ಕೆ ವಿಭಕ್ತಿಯ ನೇನುವೇನೂ ಇಲ್ಲ. ಈ ವಂಶವೃತ್ತಾಂತವನ್ನು ಕವಿ ಚರಿತ್ರದ ಅಧಾರದಿಂದಲೂ ಶಿಶುಪಾಲವಧ ಕಾವ್ಯದ ಕೊನೆಯಲ್ಲಿರುವ ಕವಿವಂಶ ವರ್ಣನದ ಅಧಾರದಿಂದಲೂ ಬರೆದಿರುತ್ತದೆ. ಆ ವಂಶವರ್ಣದ ಶ್ಲೋಕಗಳು ಯಾವವೆಂದರೆ:—

॥ अथ कविवंशवर्णनम् ॥

सर्वाधिकारी सुकृताधिकारः श्रीधर्मनाभस्य बभूव राज्ञः ॥
आसक्तदृष्टिर्विरजाः सदैव देवोपरः सुप्रभदेवनामा ॥ १ ॥ (८०)

ಇನ್ನು ಈ ಮಾಘಕವಿಗೆ ಬಾಲ್ಯದಲ್ಲಿ ಯಾವತರಹದ ಶಿಕ್ಷಣವು ದೊರಕಿತು? ಮತ್ತು ಆ ಕಾಲಕ್ಕೆ ಅವನ ಪರಿಸ್ಥಿತಿಯು ಹ್ಯಾಗೆ ಇತ್ತು; ಇವೇ ಮೊದಲಾದ ಬಾಲ್ಯ ವೃತ್ತಾಂತಗಳನ್ನು ಈ ಸ್ಥಳದಲ್ಲಿ ಹೇಳುವದು ಅತ್ಯವಶ್ಯವಾದದ್ದು; ಯಾಕೆಂದರೆ. ಮುಂದೆ ಇವನು ಪ್ರೌಢನಾದಒಳಿಕ ಮಾಡಿದ ಮಹತ್ಕಾರ್ಯಗಳ ಬೀಜವು, ಬಾಲ್ಯದ ಶಿಕ್ಷಣದಲ್ಲಿಯೂ ಪರಿಸ್ಥಿತಿಯಲ್ಲಿಯೂ ಹ್ಯಾಗೆ ಅಡಿಗಿತ್ತೆಂಬದನ್ನು ತೋರಿಸಲಿಕ್ಕೆ ಬರುತ್ತದೆ. ಆದರೆ ನಮ್ಮೆಲ್ಲರ ದುರ್ದೈವದಿಂದ ಈ ಮಹಾತ್ಮನ ಬಾಲ್ಯವೃತ್ತಾಂತವು ಸಿಕ್ಕಿರಲಿಲ್ಲ. ಆದುದರಿಂದ "**ಫಲವೃಕ್ಷನ್ಯಾಯ**[1] " ದಂತೆ ಇವನು ಮಾಡಿದ ಮಹತ್ಕಾರ್ಯಗಳನ್ನು ಪರೀಕ್ಷಿಸಿ, ಬಾಲ್ಯಶಿಕ್ಷಣ, ಪರಿಸ್ಥಿತಿ ಮೊದಲಾದವುಗಳನ್ನು ಕಂಡು ಹಿಡಿಯುವ ಅರ್ಥಾತ್ ಕಾರ್ಯ್ಯಪದ್ಧತಿಯನ್ನು[2] ಸ್ವೀಕರಿಸಿ ಮುಂದಿನ ಚರಿತ್ರವನ್ನು ಬರೆಯಲುಪಕ್ರಮಿಸುತ್ತೇವೆ.

ಕವಿಗಳ ಚರಿತ್ರಗಳಿಗೂ ವೀರರ ಚರಿತ್ರಗಳಿಗೂ ದೊಡ್ಡದೊಂದು ಭೇದವಿರುತ್ತದೆ. ಶ್ರುತಿರಮ್ಯರಣವಾರ್ತಾ, ಘನಘೋರಯುದ್ಧ, ಅತುಲಪರಾಕ್ರಮ, ಅಕಲ್ಪಿತ ಬಿಡುಗಡೆ ಮೊದಲಾದ ಚಿತ್ತಾಕರ್ಷಕ ಸಂಗತಿಗಳಿಂದ ವೀರರ ಚರಿತ್ರಗಳು ಮನೋರಂಜಕವಾಗಿರುತ್ತವೆ. ಆದರೆ ಕವಿಗಳ ಹಾಗು ಸತ್ಪುರುಷರ ಚರಿತ್ರಗಳಲ್ಲಿ ಈ ಭಾಗವು ಕೊಂಚವಾದರೂ ಇರುವದಿಲ್ಲ. ಸತ್ಪುರುಷರ ಚರಿತ್ರವು, ಅವರ ಉದಾತ್ತ ಆಚಾರ ವಿಚಾರಗಳಲ್ಲಿ ಅಡಕಿಕೊಂಡಿದ್ದಂತೆ ಕವಿಗಳ ಚರಿತ್ರವು ಅವರ ಕಾವ್ಯದಲ್ಲಿ ಅಡಗಿರುತ್ತದೆ!

काले मितं वाक्यमुदर्कपथ्यं तथा गतस्येव जनः सुचेताः ॥
विनाऽनुरोधात् स्वहितेच्छयैव महीपतिर्यस्य वचश्चकार ॥२॥ (८१)

तस्याभवद् दत्तक इत्युदात्तः क्षमी मृदुर्धर्मपरस्तनूजः ॥
यंवीक्ष्य वै या समजातशत्रोर्वचो गुणग्राहि जनैः प्रतीये ॥३॥ (८२)

सर्वेण सर्वाश्रय इत्यमन्दमानन्दभाजा जनितं जनेन ॥
अथ द्वितियं स्वयमद्वितीयो मुख्यः स तां गौणमवापनाम ॥४॥ (८३)

श्रीशब्दरम्यकृतसर्गसमाप्तिलक्ष्म लक्ष्मीपतेश्चरितकीर्तनचारुमाघः ॥
तस्यात्मजः सुकविकीर्तिदुराशयाऽदः काव्यं व्यधत्त शिशुपालवधाभिधानम् ॥ ५ ॥

(1) ಫಲಗಳಿಂದ ಗಿಡದ ಯೋಗ್ಯತೆಯು ತಿಳಿಯುವದು.

(2) ಕಾರ್ಯ್ಯದಿಂದ ಕಾರಣವನ್ನು ಗೊತ್ತುಹಚ್ಚುವದು ಕಾರ್ಯ್ಯಪದ್ಧತಿಯು.

ನಮ್ಮ ಚರಿತ್ರನಾಯಿಕನು ಕವಿಯೂ ಸತ್ಪುರುಷನೂ ಇರುವದರಿಂದ ಮೇಲಿನ ತತ್ವದಂತೆ ಇವನ ಕಾವ್ಯದ ಅಂತರಂಗವನ್ನೂ ಉದಾತ್ತ ಆಚಾರವಿಚಾರಗಳನ್ನೂ ವಾಚಕರ ಮುಂದೆ ಇಡುವದು ನಮ್ಮ ಕರ್ತವ್ಯವಾಗಿರುವದು. ಆದುದರಿಂದ ಈ ಮಹಾತ್ಮನ ಚರಿತ್ರವನ್ನು ಕಾವ್ಯವಿವೇಚನ, ಸತ್ಪುರುಷರ ಸಮಾಗಮ, ಔದಾರ್ಯಾದ ಕೃತ್ಯಗಳು ಎಂಬ ಮೂರುವರ್ಗಗಳನ್ನು ಮಾಡಿ ವಿವೇಚಿಸುತ್ತೇವೆ.

ಈ ಮಾಘನು ಉದ್ದಾಮಕವಿಯಾಗಿದ್ದನೆನ್ನುವದಕ್ಕೆ ಈ ಚರಿತ್ರದ ಶಿರೋಭಾದಲ್ಲಿರುವ ಶ್ಲೋಕವೇ ಸಾಕ್ಷಿಯಾಗಿದೆ; ಅದನ್ನು ಇಲ್ಲಿ ತುಸು ವಿವರಿಸುವ. ಕವಿಕುಲಗುರುವೂ ಭರತಖಂಡದ ಶೇಕ್ಸಪಿಯರನೂ ಎಂದು ಹೊಗಳಿಸಿಕೊಳ್ಳುತ್ತಿರುವ ಜಗದ್ವಿಖ್ಯಾತನಾದಕಾಲಿದಾಸನಲ್ಲಿ ತೋರ್ಪಡುವ ಅತ್ಯಂತ ಉಜ್ವಲವಾದ ಗುಣವೆಂದರೆ, ಉಪಮಾಚಾತುರ್ಯವೇ. ಇದೇ ಮೇರೆಗೆ ಭಾರವೀಕವಿಯಲ್ಲಿ ಅರ್ಥಗೌರವವು ಅದ್ವಿತೀಯವಾಗಿರುವದು. ಈ ವರಕವಿಯ ಒಂದೇ ಪದ್ಯವು, ಅರ್ಥಗೌರವದ ಮೂಲಕ ಹತ್ತುಸಾವಿರ ರೂಪಾಯಿಗಳಿಗೆ ಅಡುವು (ಒತ್ತೆ) ಹಾಕಲ್ಪಟ್ಟಿತ್ತು! ಹಾಗೆಯೇ ಅಲಂಕಾರ ಶಾಸ್ತ್ರಜ್ಞನೂ ಲಲಿತಪದ ರಚನೆಯ ವಿಷಯದಲ್ಲಿ ಪರಮನಿಪುಣನೂ ಎಂದು ಪ್ರಸಿದ್ಧನಿರುವ ದಂಡಿಯಲ್ಲಿ ಪದಲಾಲಿತ್ಯವು ಉತ್ಕೃಷ್ಟವಾಗಿ ಸಾಧಿಸಿರುವದು. ಆದರೆ ಈ ಮೂರೂ ವಿಭೂತಿಗಳ ಮೂರೂ ಗುಣಗಳು ಏಕಶ್ರವಾಗಿ ಒಂದೇ ವ್ಯಕ್ತಿಯಲ್ಲಿ ಇದ್ದಮೇಲೆ ಅವ್ಯಕ್ತಿಯು (ಮಾಘ ಪಂಡಿತನು) ಎಂಥ ಉದ್ದಾಮಕವಿಯಾಗಿರಬೇಕೆಂಬದನ್ನು ವಾಚಕ ಮಹಾಶಯರೇ ಊಹಿಸಿಕೊಳ್ಳಲಿ. ಈ ಕವಿಯು ಶಿಶುಪಾಲವಧವೆಂಬ ಕಾವ್ಯವನ್ನು ರಚಿಸಿದ್ದಾನೆಂದು ಹಿಂದೆ ಹೇಳಿದ್ದೇವಷ್ಟೇ. ಈ ಗ್ರಂಥವು ಈಗ ಪ್ರಚಾರದಲ್ಲಿ ಮಾಘಕಾವ್ಯವೆಂದು ಪ್ರಸಿದ್ಧವದೆ. ಈ ಮಾಘಕಾವ್ಯದೊಳಗಿನ ಕಥಾಭಾಗವೇನಂದರೆ:—"ನಾರದ ಮುನಿಗಳು ದ್ವಾರಕಾ ಪಟ್ಟಣಕ್ಕೆ ಆಗಮನ ಮಾಡಿ, ಇಂದ್ರನ ನಿರೋಪದಪ್ರಕಾರ ಶ್ರೀಕೃಷ್ಣನಿಗೆ ಶಿಶುಪಾಲನ ವಧ ಮಾಡಲಕ್ಕೆ ಸೂಚಿಸಿದರು. ಆ ಬಳಿಕ ಕೃಷ್ಣನು ಧರ್ಮರಾಜನ ರಾಜಸೂಯ ಯಜ್ಞಕ್ಕೆ ಹೋಗಿ, ಅಲ್ಲಿ ಯಜ್ಞ ಸಮಾಪ್ತಿಯ ಸಮಯಕ್ಕೆ ಶಿಶುಪಾಲನ ವಧ ಮಾಡಿದನು." ಇಷ್ಟೇ ಸ್ವಲ್ಪ ಇತಿಹಾಸದಿಂದ ಇಪ್ಪತ್ತು ಸರ್ಗಗಳುಳ್ಳಂಥ ವಿಸ್ತೀರ್ಣವಾದ ಕಾವ್ಯವನ್ನು ರಚಿಸಿದ್ದಾನೆ! ಇದು ಅವನ ವಿವಿಧ ಜ್ಞಾನಭಾಂಡಾರದ ಪ್ರಭಾವವು. ಈ ಕಾವ್ಯದೊಳಗೆ ಪಟ್ಟಣ, ಸರೋವರ, ಪರ್ವತ, ಸಮುದ್ರ, ಋತು ಇತ್ಯಾದಿಗಳ ವರ್ಣನೆಯು ಅತ್ಯಂತ ಮನೋಹರವೂ ಉದಾತ್ತವೂ ಇರುತ್ತದೆ. ಈ ಪಟ್ಟಣಾದಿಗಳ ವರ್ಣನೆಯು ಅನುಭವಸಿದ್ಧವಿರುವದರಿಂದ ಇವನು ದೊಡ್ಡ ಶ್ರೀಮಂತನೂ ಸೂಕ್ಷ್ಮನಿರೀಕ್ಷಣಶಕ್ತಿಯುಳ್ಳವನೂ ಇರಬೇಕೆಂದು ಧಾರಾಳವಾಗಿ ಹೇಳಬಹುದಾಗಿದೆ.

ಹಾಗು ಈ ಕಾವ್ಯದೊಳಗೆ ಕೆಲವು ಪಾತ್ರಗಳ ಬಾಯಿಯಿಂದ ಸಂವಾದರೂಪವಾಗಿ ಪ್ರಸಂಗಾನುಸಾರ ರಾಜನೀತಿ, ಧರ್ಮಶಾಸ್ತ್ರ, ಇತಿಹಾಸ, ವ್ಯಾಕರಣ, ಮೀಮಾಂಸ, ಮೊದಲಾದ ವಿಷಯುಗಳನ್ನು ಸವಿಸ್ತಾರವಾಗಿಯೂ ಸಾರಭೂತವಾಗಿಯೂ ನುಡಿಸಿರುತ್ತಾನೆ. ಇದರಿಂದ ಅವನ ವಿವಿಧ ಶಾಸ್ತ್ರಾಧ್ಯಯನ, ಪಾಂಡಿತ್ಯ, ರಾಜಕಾರ್ಯಪಟುತ್ವ, ಅಪ್ರತಿಮ ವಿಚಾರಸರಣಿ ಮುಂತಾದವುಗಳು ಚನ್ನಾಗಿ ವ್ಯಕ್ತವಾಗುತ್ತವೆ.

ಇನ್ನು ಈ ಕಾವ್ಯದ ಯಾವಯಾವ ಸರ್ಗದಲ್ಲಿ ಯಾವಯಾವ ವರ್ಣನೆಯು ಬಂದಿರುತ್ತದೆಂಬದನ್ನು ಸ್ವಲ್ಪದರಲ್ಲಿ ದಿಗ್ದರ್ಶನಮಾಡುವ. ೧ ನೇ ಸರ್ಗದಲ್ಲಿ, ಶ್ರೀಕೃಷ್ಣನಿಗೆ ನಾರದರ ದರ್ಶನವಾಗಿದೆ. ತದನಂತರ ಉಭಯತರ ಕುಶಲಪ್ರಶ್ನೆಗಳಾದ ಬಳಿಕ ನಾರದರು ಇಂದ್ರನ ನಿರೋಪವನ್ನು ಹೇಳಿದ್ದಾರೆ. ಅದಕ್ಕೆ ಕೃಷ್ಣನು ಒಪ್ಪಿದ್ದಾನೆ. ೨ನೇ ಸರ್ಗದಲ್ಲಿ, ಧರ್ಮರಾಜನ ರಾಜಸೂಯಯಜ್ಞಕ್ಕೆ ಮೊದಲು ಹೋಗಬೇಕೋ ಅಥವಾ ಶಿಶುಪಾಲನ ಸಂಗಡ ಯುದ್ಧಮಾಡಲಿಕ್ಕೆ ಮೊದಲು ಹೋಗಬೇಕೋ ಎಂಬ ವಿಷಯದ ವಿಚಾರವು ವರ್ಣಿಸಲ್ಪಟ್ಟಿದೆ. ೩ನೇ ಸರ್ಗದಲ್ಲಿ, ದ್ವಾರಕಾ ಪಟ್ಟಣದಿಂದ ಇಂದ್ರಪ್ರಸ್ಥಕ್ಕೆ ಹೋಗುವದಕ್ಕೋಸ್ಕರ ಶ್ರೀಕೃಷ್ಣನ ಸರ್ವ ಪತ್ನಿಯರು ಹಾಗು ಸೈನ್ಯ ಸಹಿತವಾದ ಪ್ರಸ್ಥಾನವು ವರ್ಣಿಸಲ್ಪಟ್ಟಿದೆ. ೪ನೇ ಸರ್ಗದಲ್ಲಿ, ಮಾರ್ಗದೊಳಗೆ ಕಂಡು ಬಂದ ರೈವತಕಪರ್ವತದ ವರ್ಣನವಿದೆ. ೫ನೇ ಸರ್ಗದಲ್ಲಿ, ರೈವತಕಪರ್ವತದ ಮೇಲೆ ಶ್ರೀ ಕೃಷ್ಣನಿಗುಂಟಾದ ವಿಹಾರೇಚ್ಛೆಯು ವರ್ಣಿಸಲ್ಪಟ್ಟಿದೆ. ೬ನೇ ಸರ್ಗದಲ್ಲಿ, ಋತುಗಳ ವರ್ಣನವಿದೆ. ೭ನೇ ಸರ್ಗದಲ್ಲಿ, ಶ್ರೀ ಕೃಷ್ಣನ ವನವಿಹಾರದ ವರ್ಣನವಿದೆ. ೮ನೇ ಸರ್ಗದಲ್ಲಿ, ಜಲಕ್ರೀಡೆಯ ವರ್ಣನವಿರುತ್ತದೆ. ೯ನೇ ಸರ್ಗದಲ್ಲಿ, ಪ್ರದೋಷವರ್ಣನವಿದೆ. ೧೦ನೇ ಸರ್ಗದಲ್ಲಿ, ಸುರತದ ವರ್ಣನವಿರುತ್ತದೆ. ೧೧ನೇ ಸರ್ಗದಲ್ಲಿ, ಪ್ರಭಾತಕಾಲದ ವರ್ಣನವಿರುತ್ತದೆ. ೧೨ನೇ ಸರ್ಗದಲ್ಲಿ, ರೈವತಕಪರ್ವತದಿಂದ ಮುಂದೆ ಶ್ರೀ ಕೃಷ್ಣನ ಪ್ರಯಾಣವು ಹೇಳಲ್ಪಟ್ಟಿದೆ. ೧೩ನೇ ಸರ್ಗದಲ್ಲಿ, ಧರ್ಮರಾಜನ ಭೆಟ್ಟಿಯಾಗಿದೆ. ೧೪ನೇ ಸರ್ಗದಲ್ಲಿ, ಧರ್ಮರಾಜನು ಶ್ರೀ ಕೃಷ್ಣನ ಅರ್ಘ್ಯಪೂಜೆಯನ್ನು ಮಾಡಿದ್ದಾನೆ. ೧೫ನೇ ಸರ್ಗದಲ್ಲಿ, ಶ್ರೀ ಕೃಷ್ಣನು ಶಿಶುಪಾಲನು ಆಡಿದ ದುರ್ಭಾಷಣಗಳನ್ನು ವರ್ಣಿಸಿದ್ದಾನೆ. ೧೬ನೇ ಸರ್ಗದಲ್ಲಿ, ಶಿಶುಪಾಲನ ಕಡೆಯಿಂದ ಬಂದಂಥ ದೂತನ ದ್ವ್ಯರ್ಥ ಅಂದರೆ ಸ್ತುತಿನಿಂದಾಪರವಾದ ಸಂದೇಶವಚನವು ಇರುತ್ತದೆ. ೧೭ನೇ ಸರ್ಗದಲ್ಲಿ, ಯಾದವವೀರರಕ್ಷೋಭವು ವರ್ಣಿಸಲ್ಪಟ್ಟಿದೆ. ೧೮ನೇ ಸರ್ಗದಲ್ಲಿ, ಸಂಕುಲ ಯುದ್ಧದ ವರ್ಣನವಿರುತ್ತದೆ. ೧೯ನೇ ಸರ್ಗದಲ್ಲಿ, ದ್ವಂದ್ವಯುದ್ಧದ ವರ್ಣನವಿರುತ್ತದೆ. ೨೦ನೇ ಸರ್ಗದಲ್ಲಿ, ಶಿಶುಪಾಲನವಧವಾಗಿ ಶ್ರೀ ಕೃಷ್ಣನ ಸ್ವರೂಪದಲ್ಲಿ ಅವನ ಪ್ರವೇಶವು ವರ್ಣಿಸಲ್ಪಟ್ಟಿದೆ.

ಮೇಲಿನ ಪ್ರತ್ಯೇಕ ಸರ್ಗದೊಳಗಿನ ವಿಷಯ ನಿರ್ದೇಶವನ್ನು ನೋಡಿ ಬಿಟ್ಟರೆ, ಮಾಘಕವಿಯ ಪ್ರೌಢಿಯು ಸಹಜವಾಗಿಯೇ ಹೊಳೆಯುವಂತಿದೆ. ಈ ಕಾವ್ಯವನ್ನು ಓದಿದರೆ, ಕವಿಯು ಸ್ವಂತ ಅನುಭವಿಸಿ ಬರೆದಿರುತಾನೋ ಎನೋ ಎಂಬಂತೆ ಭಾಸವಾಗುತ್ತದೆ. ಇವನ ವರ್ಣನೆ ಮಾಡುವಶೈಲಿಯಾದರೂ ಬಹು ಗಂಭೀರವಾಗಿಯೂ ಸುರಸವಾಗಿಯೂ ಇರುತ್ತದೆ. ಈ ಕಾವ್ಯದಲ್ಲಿ ಅರ್ಥಾಲಂಕಾರವು ತುಂಬಿತುಳುಕುತ್ತಿರುವಂತೆ ಶಬ್ದಾಲಂಕಾರವಾದರೂ ನಿಬಿಡವಾಗಿದೆ. ಯುದ್ಧವರ್ಣನಾದಿಗಳಲ್ಲೆಲ್ಲ ಚಿತ್ರಾಲಂಕಾರಗಳೂ (ಅಂದರೆ ಅನೇಕ ತರದ ಬಂಧಗಳೂ) ಅನೇಕಾರ್ಥವುಳ್ಳಂಥ (ಅಂದರೆ ದ್ವ್ಯರ್ಥ, ತ್ರ್ಯರ್ಥವುಳ್ಳಂಥ) ಎಷ್ಟೋ ಪದ್ಯಗಳೂ ಬಹು ಚಾತುರ್ಯದಿಂದ ರಚಿಸಲ್ಪಟ್ಟಿರುತ್ತವೆ. ಅನುಪ್ರಾಸವುಳ್ಳ ಶ್ಲೋಕಗಳು ಅಲ್ಲಲ್ಲಿಗೆ ಕಂಗೊಳಿಸುತ್ತವೆ. ಯಮಕಾಲಂಕಾರವಂತೂ ತುಂಬಿರುವದು. ಋತುವರ್ಣನಾದಿಗಳಲ್ಲಿ ಹನ್ನೊಂದರಿಂದ ಹದಿನಾಲ್ಕು ಅಕ್ಷರಗಳ ವರೆಗೂ ಯಮಕ! ಕಿಂಬಹುನಾ ಇಡೀ ಚರಣವೇ ಯಮಕ!! ಆದಾದರೂ ಮಾತ್ರಾವೃತ್ತದಲ್ಲೇನು? ಅಲ್ಲ! ಅಲ್ಲ! ಅಕ್ಷರವೃತ್ತದಲ್ಲಿ!!! ಹೀಗಿದ್ದರೂ ಕೂಡ ಅರ್ಥದಲ್ಲಿ ಕ್ಲಿಷ್ಟತ್ವವು ಅಥವಾ ಅರುಚಿರತ್ವವು ರವಷ್ಟಾದರೂ ಇರುವದಿಲ್ಲ! ಯಾಕಂದರೆ, ಈ ಶಬ್ದಾಲಂಕಾರಗಳು ಎಳತಂದು ಜುಲುಮೆಯಿಂದ ಮಾಡಿದವುಗಳಲ್ಲ; ಕೇವಲ ಕವಿಯಸ್ಫೂರ್ತಿಯಿಂದ ಆ ಶಬ್ದಾಲಂಕಾರದ ಘಟಕ ಶಬ್ದಗಳು; ಪ್ರಸಂಗಾನುರೂಪವಾಗಿ ತಮ್ಮಿಂದ ತಾವೇ ಎದುರಿಗೆ ಬಂದು ನಿಂತಿರುತ್ತವೆ. ಇದರ ಕಾರಣವೇನಂದರೆ, ಇವನಲ್ಲಿ ವಿವಿಧ ಶಬ್ದಸಂಗ್ರಹವು ಅಪರಿಮಿತವಾಗಿತ್ತು. ಇದಕ್ಕೆ ವಿದ್ವತ್ಪರಂಪರೆಯಿಂದ ಸಂಸ್ಕೃತಜ್ಞರಲ್ಲಿ ಪ್ರಸಿದ್ಧವಿರುವ ಕೆಳಗಿನ ಶ್ಲೋಕಾರ್ಧವೇ ಸಾಕ್ಷಿಯಾಗಿದೆ.

"नव सर्गगते माघे नव शब्दोन विद्यते ॥"

"ಮಾಘಕಾವ್ಯದ ಒಂಬತ್ತು ಸರ್ಗಗಳನ್ನು ಓದಿತೆಂದರೆ, ಹೊಸಶಬ್ದಗಳು ಜಗತ್ತಿನಲ್ಲಿ ಕಂಡು ಬರುವದಿಲ್ಲ." ೧

ಇದು ವರೆಗೆ ಹೇಳಿದ ಕಾವ್ಯವರ್ಣನೆಯ ಸತ್ಯತೆಯನ್ನು ಮನಗಾಣಬೇಕಾದರೆ ಮಾಘಕಾವ್ಯವನ್ನೇ ಸಂಪೂರ್ಣವಾಗಿ ಓದಬೇಕೆಂದು ನಮ್ಮ ಸಂಸ್ಕೃತಜ್ಞ ವಾಚಕ

---

(೧) ಇದೇ ಮೇರೆಗೆ ಮಾಘಪಂಡಿತನ ಅಗಾಧ ಶಬ್ದಾರ್ಥಜ್ಞಾನ ಭಾಂಡಾರದ ದ್ಯೋತಕವಾದ ಇನ್ನೂ ಒಂದು ಶ್ಲೋಕಾರ್ಧವುಂಟು. ಅದಾವುದೆಂದರೆ:— "मुरारिपदचिन्ता चेत्तदा माघे मतिं कुरु" (ಮುರಾರಿ ಕವಿಯ ಶಬ್ದಗಳ ವಿಷಯದಲ್ಲಿ ವಿಚಾರ ಮಾಡುವದಿದ್ದರೆ ಮಾಘಕಾವ್ಯದಲ್ಲಿ ಬುದ್ಧಿಯನ್ನಿರಿಸು.) ಇದನ್ನೇ ಇನ್ನೊಂದು ವಿಧವಾಗಿಯೂ ಅರ್ಥ ಮಾಡುವರು. "मुरारिपदचिन्ता चेत्तदा माऽघे मतिंकुरु." ಶ್ರೀ ಕೃಷ್ಣನ ಚರಣವನ್ನು ಧ್ಯಾನಿಸುವರಿದ್ದರೆ, ಪಾಪದಲ್ಲಿ ಮನಸ್ಸನ್ನು ಹಾಕಬೇಡ).

ರಿಗೆ ಸೂಚಿಸುತ್ತೇವೆ. ಆದರೆ ಕೇವಲ ಕನ್ನಡವಾಚಕರಿಗೆ ಆ ಕಾವ್ಯದ ಅನುಭವವು ಕಿಂಚಿತ್ತಾದರೂ ಬರಬೇಕೆಂಬ ಉದ್ದೇಶದಿಂದ ಈ ಚಿಕ್ಕ ಚರಿತ್ರದಲ್ಲಿ ಆ ಮಾಘಕಾವ್ಯದ ಕಿಂಚಿದ್ಭಾಗವನ್ನು ನಿವೇದಿಸುತ್ತೇವೆ. ಇದರಿಂದ **स्थाली पुलाकन्याय** * ದಂತೆ ಆ ಇಡೀಕಾವ್ಯದೊಳಗಿನ ಗಂಭೀರಶೈಲಿಯೂ ಶಬ್ದಗಳ ವ್ಯೂಢಿಯೂ ಅರ್ಥದ ಪ್ರಸನ್ನತ್ವವೂ ಅರ್ಥಾಲಂಕಾರ ಶಬ್ದಾಲಂಕಾರಗಳೂ ಲಕ್ಷದಲ್ಲಿ ಬರುತ್ತವೆ.

श्रियःपतिः श्रीमतिशासितुं जगज्जगन्निवासो वसुदेवसद्मनि ॥
वसन् ददर्शावतरन्तमम्बराद्धिरण्यगर्भाङ्गभुवं मुनिं हरिः ॥१॥

गतं तिरश्चीनमनूरुसारथेः प्रसिद्धमूर्ध्वज्वलनं हविर्भुजः ॥
पतत्यधो धामविसारिसर्वतः किमेतदित्याकुलमीक्षितं जनैः॥२॥

चयस्विषामित्यवधारितं पुरा ततः शरीरीति विभाविताकृतिम् ॥
विभुर्विभक्तावयवं पुमानिति क्रमादमुं नारद इत्यबोधि सः ॥३॥

"(೧) ಲಕ್ಷ್ಮೀಪತಿಯಾದ ಶ್ರೀಕೃಷ್ಣನು ಸ್ವತಃ ಜಗತ್ತಿಗೆ ಆಧಾರನಾಗಿದ್ದು ಜಗತ್ತಿನ ನಿಯಮನ ಮಾಡುವದರಸಲುವಾಗಿ ವಸುದೇವನ ಶೋಭಾಯಮಾನವಾದ ಗೃಹದಲ್ಲಿ ಇರುತ್ತಿರಲು, ಆಕಾಶದಿಂದ ಇಳಿಯುತ್ತಿರುವ ಬ್ರಹ್ಮಪುತ್ರ ಮುನಿಯನ್ನು ನೋಡುವಂಥವನಾದನು. (೨) ಆ ಕಾಲಕ್ಕೆ ಜನರೆಲ್ಲರು ಅತ್ತಕಡೆಗೆ (ಆಕಾಶದಕಡೆಗೆ) ನೋಡತೊಡಗಿದರು. ಅವರು ಹೀಗೆ ಅಂದರು–ಇವನು ಸೂರ್ಯನೆಂದು ಎನ್ನಬೇಕೆಂದರೆ, ಸೂರ್ಯನ ಗತಿಯು ಡೊಂಕಾಗಿ ಇರುತ್ತದೆ. ಇನ್ನು, ಇದು ಅಗ್ನಿಯೆಂದು ಎನ್ನಬೇಕೆಂದರೆ, ಅದು ಅರ್ಧ್ವಗತಿಯುಳ್ಳದೆಂಬುವದು ಪ್ರಸಿದ್ಧವೇ ಇದೆ. ಅಂದಮೇಲೆ ಎಲ್ಲಿಕಡೆಗೂ ಪಸರಿಸುತ್ತಿರುವಂಥ ಈ ತೇಜವು ಕೆಳಗೆ ಬರುತ್ತರುತ್ತದೆ; ಏನಿದು!!! (೩) ಶ್ರೀಕೃಷ್ಣನು ಪ್ರಥಮತಃ ಇದು ತೇಜದ ರಾಶಿಯಿರುತ್ತದೆಂದು ನಿಶ್ಚಯಮಾಡಿದನು. ಮುಂದೆ ಅದು ಸ್ವಲ್ಪ ಸಮೀಪಕ್ಕೆ ಬಂದಕೂಡಲೆ ದೇಹಧಾರಿಯೊದಂಥ ಯಾವನೋ ಒಬ್ಬನು ಇರಬಹುದೆಂದು ಅದರ ಆಕೃತೀ ವಿಷಯದಲ್ಲಿ ಊಹಿಸಿ ಗೊತ್ತುಮಾಡಿದನು. ಆ ಬಳಿಕ ಅದಕ್ಕೂ ಸಮೀಪಕ್ಕೆ ಬಂದಕೂಡಲೆ ಇವನು ಪುರುಷನಿದ್ದಾನೆಂದು ಅವನ ಅವಯವ ವಿಭಾಗದಿಂದ ತಿಳಕೊಂಡನು. ಇದೇ ಕ್ರಮದಿಂದ ಕೊನೆಗೆ ಇವನು ನಾರದನೆಂದು ಗುರುತು ಹಿಡಿದನು."

(*) ಬಂದು ಲಗಳು ಹಿಚಕಿ ನೋಡಿದರೆ ಸಾಕು; ಇಡೀತಪ್ಪೇಲಿಯೊಳಗಿನ ಅನ್ನದ ಕಲ್ಪನೆ ಬರುವದು.

ಮಾಘಕಾವ್ಯದೊಳಗಿನ ಪ್ರಾರಂಭದ ಈ ಮೂರು ಶ್ಲೋಕಗಳನ್ನು ತೆಗೆದು ಕೊಂಡಿದ್ದೇವೆ. ಮೊಟ್ಟಮೊದಲಿನ ಶ್ಲೋಕದಲ್ಲಿಯೇ ಆ ಕಾವ್ಯದೊಳಗಿನ ಇತಿಹಾಸವು ಪ್ರಾರಂಭವಾಗಿದ್ದರೂ ಅದು ಮಂಗಲಾಚರಣರೂಪವಾಗಿದೆ. ಮಂಗಲಾಚರಣ ಮಾಡುವ ಶಾಸ್ತ್ರನಿರ್ದಿಷ್ಟ ಪದ್ಧತಿಗಳು ಮೂರು ಇರುತ್ತವೆ. ಆಶೀರ್ವಾದ, ನಮಸ್ಕಾರ, ವೂಜ್ಯವಸ್ತುವಿನ ಸ್ಮರಣ. ಇವುಗಳಲ್ಲಿ ಮೂರನೇ ಪ್ರಕಾರದ ಮಂಗಲಾಚರಣವು ಪ್ರಸ್ತುತ ಶ್ಲೋಕದಲ್ಲಿ ಮಾಡಲ್ಪಟ್ಟಿದೆ. ಅದು ಹ್ಯಾಗೆಂದರೆ:—ಶ್ರೀಕೃಷ್ಣನಿಗೆ ಮಹಾ ಮುನಿಗಳಾದ ನಾರದರ ದರ್ಶನವಾದದ್ದನ್ನು ಅರ್ಥಾತ್ ವೂಜ್ಯವಸ್ತುವನ್ನು ಇಲ್ಲಿ ವರ್ಣಿಸಿದ್ದು, ಆರಂಭದಲ್ಲಿ ಸರ್ವ ಮಂಗಲಕಾರ್ಯಗಳ ಅಧಿದೇವತೆಯಾದ ಮಹಾಲಕ್ಷ್ಮೀ, ತದ್ವಾಚಕ 'श्री' ಶಬ್ದವು ಯೋಜಿಸಲ್ಪಟ್ಟಿದೆ.

ಈ ಶ್ಲೋಕಗಳಲ್ಲಿಯ ಶಬ್ದಗಳ ಪ್ರೌಢತೆಯೂ ರಚನಾಚಾತುರ್ಯವೂ ಅರ್ಥಗಾಂಭೀರ್ಯವೂ ಓದಿದೊಡನೆಯೇ ವಾಚಕರ ಲಕ್ಷದಲ್ಲಿ ಬರುವಂತಿವೆ. ಇನ್ನು ಇವುಗಳಲ್ಲಿರುವ ಅಲಂಕಾರಗಳನ್ನು ವಿವರಿಸಿ ಹೇಳುವೆ. ಮೊದಲನೇ ಶ್ಲೋಕದಲ್ಲಿ[1] ಅನುಪ್ರಾಸವೆಂಬ ಶಬ್ದಾಲಂಕಾರವೂ[2] ಅಧಿಕ, ವಿರೋಧಾಭಾಸಗಳೆಂಬ ಅರ್ಥಾಲಂಕಾರಗಳೂ[3] ಇರುತ್ತವೆ. ಉದಾ:—'न' ಹಾಗು 'स' ಎಂಬೆರಡು ವ್ಯಂಜನಗಳು ಮೇಲಿಂದ ಮೇಲೆ ಬಂದಿರುತ್ತವೆ. ಇದು ಶ್ರುತ್ಯನುಪ್ರಾಸವಾಗಿದೆ.[4] 'श्री' 'जगत्'

---

(1) ಮನುಷ್ಯನಿಗೆ ವಸ್ತ್ರಾಭರಣಗಳೂ ವಿದ್ಯೆಯೂ ಹ್ಯಾಗೆ ಅಲಂಕಾರವೋ ಹಾಗೆಯೇ ಕಾವ್ಯಕ್ಕೆ ಅನುಪ್ರಾಸ, ಉಪಮಾ ಮುಂತಾದವುಗಳು ಅಲಂಕಾರಗಳು. ಇವು ಶಬ್ದಾಲಂಕಾರವೆಂತಲೂ ಅರ್ಥಾಲಂಕಾರವೆಂತಲೂ ಎರಡು ವಿಧವಾಗಿದೆ.

(2) ಶಬ್ದರಚನೆಯ ದ್ವಾರದಿಂದ ಕಾವ್ಯಕ್ಕೆ ಶೋಭೆಯನ್ನು ತರುವದೇ ಶಬ್ದಾಲಂಕಾರವು. ಇದು, ಅನುಪ್ರಾಸ, ಯಮಕ, ಚಿತ್ರಾಲಂಕಾರ ಹೀಗೆ ಮೂರುವಿಧವಾಗಿದೆ. ಒಂದು ಅಥವಾ ಅನೇಕ ವ್ಯಂಜನಗಳ ಆವೃತ್ತಿಯಾದರೆ (ಮೇಲಿಂದ ಮೇಲೆ ಬಂದರೆ) ಅದಕ್ಕೆ ಅನುಪ್ರಾಸವೆನ್ನುತ್ತಾರೆ. ಇದರಲ್ಲಿ, ವೃತ್ತ್ಯನುಪ್ರಾಸ, ಛೇಕಾನುಪ್ರಾಸ, ಲಾಟಾನುಪ್ರಾಸ, ಅಂತ್ಯಾನುಪ್ರಾಸ, ಶ್ರುತ್ಯಾನುಪ್ರಾಸ ಎಂಬ ಐದು ಭೇದಗಳುಂಟು,

(3) ಅರ್ಥತಾರತಮ್ಯದಿಂದ ಕಾವ್ಯಕ್ಕೆ ಶೋಭೆಯನ್ನು ತರುವದೇ ಅರ್ಥಾಲಂಕಾರವು. ಇದರಲ್ಲಿ, ಉಪಮಾ, ಪ್ರತೀಪ, ವ್ಯತಿರೇಕ, ಉತ್ಪ್ರೇಕ್ಷಾ, ವಿರೋಧಾಭಾಸ, ರೂಪಕ, ಕಾವ್ಯಲಿಂಗ, ಅರ್ಥಾಂತರನ್ಯಾಸ, ಅಧಿಕ, ಉದಾತ್ತ ಮುಂತಾದ ಅನೇಕ ಭೇದಗಳು.

(4) ಒಂದೇ ಸ್ಥಾನದಲ್ಲಿ ಹುಟ್ಟುವ ವ್ಯಂಜನಗಳ ಆವೃತ್ತಿಯಾದರೆ ಅದಕ್ಕೆ ಶ್ರುತ್ಯನುಪ್ರಾಸವೆನ್ನುತ್ತಾರೆ. ಇದು ಕಿವಿಗೆ ಬಹು ಮಧುರವಾಗಿರುವದರಿಂದ ಇದಕ್ಕೆ ಈ ಹೆಸರು ಬಂದಿದೆ.

ಈ ಅನೇಕ ವ್ಯಂಜನಗಳು ಎರೆಡೆರಡು ಸಲ ಬಂದಿರುತ್ತವೆ. ಇದು ಲಾಟಾನುಪ್ರಾಸವಾಗಿದೆ. ಇವೆರಡು ಅನುಪ್ರಾಸಗಳಾದವು. ಇನ್ನು ಅಧಿಕಾಲಂಕಾರವನ್ನು ನೋಡುವ. ಆಧಾರದ (ಸ್ಥಳದ) ಅತಿ ನ್ಯೂನತ್ವವನ್ನೂ ಅಧೇಯದ (ಇರತಕ್ಕ ವಸ್ತುವಿನ) ಅತಿ ವಿಸ್ತೃತ್ವವನ್ನೂ ವರ್ಣಿಸುವದೇ ಅಧಿಕಾಲಂಕಾರವು. ಆದುದರಿಂದ '**वसुदेव सद्मनि वसन् जगन्निवासः**' ಎಂಬ ಪದದಲ್ಲಿ ಅಧಿಕಾಲಂಕಾರವಾಗುತ್ತದೆ; ಯಾಕಂದರೆ ಜಗತ್ತಿಗೆ ಆಧಾರನಾದಂಥ ಅತಿ ಮಹಾನ್ ಶ್ರೀಕೃಷ್ಣನು ವಸುದೇವನ ಸಣ್ಣದೊಂದು ಮನೆಯಲ್ಲಿ ಇರುತ್ತಾನೆಂದು ವರ್ಣಿಸಲ್ಪಟ್ಟಿದೆ. ಹಾಗೆಯೇ ಈ ಪದದಲ್ಲಿ ವಿರೋಧಾಭಾಸಾಲಂಕಾರವೂ ಇರುತ್ತದೆ; ಯಾಕಂದರೆ ಶ್ರೀಕೃಷ್ಣನು (ದೇವರು) ಜಗನ್ನಿವಾಸನಿದ್ದು, ಜಗತ್ತಿನ ಒಂದು ಭಾಗದಲ್ಲಿ ವಸುದೇವನ ಗೃಹದಲ್ಲಿರುತ್ತಾನೆಂದು ವರ್ಣಿಸಲ್ಪಟ್ಟಿದೆ. ಎರಡನೇ ಶ್ಲೋಕದಲ್ಲಿ ಮಾಲಾವ್ಯತಿರೇಕಾಲಂಕಾರವು ಕಂಡುಬರುತ್ತದೆ. ಉಪಮಾನಕ್ಕಿಂತ ಉಪಮೇಯದ ಗುಣಾಧಿಕ್ಯವನ್ನು ವರ್ಣಿಸಿದ್ದರೆ ಅದು ವ್ಯತಿರೇಕಾಲಂಕಾರವು. ಈ ಅಲಂಕಾರದಲ್ಲಿ ಒಂದೇ ಉಪಮೇಯವಿದ್ದು ಅನೇಕ ಉಪಮಾನಗಳು ಇದ್ದರೆ ಅದಕ್ಕೆ ಮಾಲಾವ್ಯತಿರೇಕಾಲಂಕಾರವೆನ್ನುವರು. ಈ ಶ್ಲೋಕದಲ್ಲಿ ಮುನಿತೇಜವು ಉಪಮೇಯವಿದ್ದು, ಸೂರ್ಯ, ಅಗ್ನಿಗಳು ಉಪಮಾನಗಳಾಗಿರುವವು. ಹಾಗು ಈ ಉಪಮಾನಗಳಿಗಿಂತ ಉಪಮೇಯದ 'ಕೆಳಗೆ ಬರುವದು' ಎಂಬ ಗುಣಾಧಿಕ್ಯವು ವರ್ಣಿಸಲ್ಪಟ್ಟಿದೆ. ಮೂರನೇ ಶ್ಲೋಕದಲ್ಲಿ ಪದಾರ್ಥಹೇತುಕ ಕಾವ್ಯಲಿಂಗ ಅಲಂಕಾರವು ಇರುತ್ತದೆ. ಸಮರ್ಥನೀಯ ಅರ್ಥದ ಸಮರ್ಥನಮಾಡುವದಕ್ಕೆ ವಾಕ್ಯಾರ್ಥವು ಅಥವಾ ಪದಾರ್ಥವು ಕಾರಣವಿದ್ದರೆ ಅಲ್ಲಿ ಕಾವ್ಯಲಿಂಗ ಅಲಂಕಾರವಾಗುತ್ತದೆ. ಈ ಶ್ಲೋಕದಲ್ಲಿ '**विभावितकृतिं**' (ಆಕೃತಿವಿಷಯದಲ್ಲಿ ತರ್ಕ), '**विभक्तावयवम्**' (ಅವಯವಗಳ ವಿಭಜನ) ಈ ಪದಗಳು ನಾರದರ ದೇಹಧಾರಿತ್ವ ಹಾಗು ಪುರುಷತ್ವಗಳನ್ನು ಸಮರ್ಥನಮಾಡಲಿಕ್ಕೆ ಕಾರಣಗಳಾಗಿರುತ್ತವೆ.

---

(5) ಆನುಪ್ರಾಸಘಟಿಕ ಶಬ್ದಗಳು ಒಂದೇ ಅರ್ಥವುಳ್ಳವಿದ್ದು, ಅನ್ವಯ ಮಾತ್ರ ಭಿನ್ನವಿದ್ದರೆ ಲಾಟಾನುಪ್ರಾಸವಾಗುತ್ತದೆ. ಇದರ ನಿಜವಾದ ಹೆಸರು ಪದಾನುಪ್ರಾಸವು; ಆದರೆ ಈ ಪ್ರಾಸವು ಲಾಟದೇಶದ (ಕರ್ನಾಟಕದ) ಜನರಿಗೆ ಬಹು ಪ್ರಿಯವಾಗಿರುವದರಿಂದ ಇದಕ್ಕೆ ಲಾಟಾನುಪ್ರಾಸವೆಂದು ಹೆಸರು ಬಂದಿದೆ.

(6) ವಿರೋಧದ ಅಭಾಸಮಾತ್ರ ಇರಬೇಕು; ವಸ್ತುತಃ ವಿರೋಧವಿರಬಾರದು. ಅಲ್ಲಿ 'ವಿರೋಧಾಭಾಸ' ಅಲಂಕಾರವಾಗುತ್ತದೆ.

ಇದುವರೆಗೆ ಕೆಲವು ಅರ್ಥಾಲಂಕಾರಗಳನ್ನೂ ಒಂದು ಶಬ್ದಾಲಂಕಾರವನ್ನೂ (ಅನುಪ್ರಾಸವನ್ನೂ) ವಾಚಕರಮುಂವೆ ಇಟ್ಟೆವು. ಅರ್ಥಾಲಂಕಾರಗಳು ಬಹಳ ವಿರುವದರಿಂದ ಅವೆಲ್ಲವನ್ನೂ ಇಲ್ಲಿ ಹೇಳಲು ಸ್ಥಳವಿಲ್ಲ. ಇನ್ನು ಉಳಿದ ಎರಡು ಶಬ್ದಾಲಂಕಾರಗಳನ್ನು (ಯಮಕ ಚಿತ್ರಗಳನ್ನು) ಮಾತ್ರ ಮಾದರಿಗಾಗಿ ಸ್ವಲ್ಪ ಹೇಳುತ್ತೇವೆ.

(ಯಮಕಾಲಂಕಾರ.)

अयशोभिरुरालोके कोपधामरणाहते ॥
अयशोभिरुरा लोके कोपधा मरणाहते ॥ ५८ ॥

(सर्ग १९. सेनावर्णनम्)

ಈ ಶ್ಲೋಕದಲ್ಲಿ ಇಡೀ ಚರಣವೇ ಯಮಕವಾಗಿದೆ! ಹೀಗಿದ್ದರೂ ಅರ್ಥವು ಸರಳವಾಗಿದೆ! ಅರ್ಥ—ಭಾಗ್ಯಶಾಲಿಗಳೂ ತೇಜಸ್ವಿಗಳೂ ಕ್ರೋಧದ ಆಗರವೇ ಆಗಿರುವರೂ ಸಂಗ್ರಾಮ ವಿಷಯದಲ್ಲಿ ಉತ್ಸಾಹವುಳ್ಳವರೂ ಆದಂಥ ಈ ವೀರ ಪುರುಷರಲ್ಲಿ ಅಪಕೀರ್ತಿನಿವಾರಕ ಉಪಾಯವು ಮರಣದ ಹೊರತು ಮತ್ತಿನ್ನಾವದುಂಟು ?

(೨) ಪದ್ಮ, ಚಕ್ರ. ಖಡ್ಗ, ಛತ್ರ, ನಾಗ, ಶಿಬಿಕಾ, ಸರ್ವತೋಭದ್ರ, ಮುರಜ, ಗೋಮೂತ್ರಿಕ, ಮುಂತಾದ ವಸ್ತುಗಳ ಆಕೃತಿಯಂತೆ ವರ್ಣರಚನೆಯಿದ್ದರೆ ಅದಕ್ಕೆ ಚಿತ್ರಾಲಂಕಾರವೆನ್ನುವರು. ಇವುಗಳಿಗೆ ಬಂಧಗಳೆಂತಲೂ ಹೆಸರು.

(चित्रालंकार.)

॥ सर्वतो भद्रबन्द ॥

स का र ना ना र का स ॥
का य सा द द सा य का ॥
र सा ह वा वा ह सा र ॥
ना द वा द द वा द ना ॥ २८ ॥

ಈ ಬಂಧವು, ಮೂವತ್ತೆರಡು ಅಕ್ಷರಗಳುಳ್ಳಂಥ ನಾಲ್ಕು ಸಾಲಿನ ಅನುಷ್ಟುಪ್ ಶ್ಲೋಕದಲ್ಲಿ ರಚಿಸಲ್ಪಟ್ಟಿದೆ. ಇದರೊಳಗಿನ ಚಾತುರ್ಯವೇನಂದರೆ:—ಪ್ರತಿಯೊಂದು ಚರಣದ ಮೊದಲಿನ ನಾಲ್ಕು ಅಕ್ಷರಗಳನ್ನು ಮೊದಲು ಕ್ರಮದಿಂದ ಒದಿ, ಬಳಿಕ ಅವ

(*) ಅಕ್ಷರಗಳು ಒಂದರಮುಂದೆ ಒಂದು ಯಾವ ಕ್ರಮದಿಂದ ಮೊದಲು ಒಮ್ಮೆ ಉಕ್ತವಾಗಿರುತ್ತವೋ ಅದೇ ಕ್ರಮದಿಂದ ಪುನ: ಅವುಗಳ ಆವೃತ್ತಿಯಾದರೆ ಅದು ಯಮಕವು.

ನ್ನೇ ವಿರುದ್ಧ ಕ್ರಮದಿಂದ ಓದಿದರೆ ಚರಣವು ಪೂರ್ಣವಾಗುತ್ತದೆ. ಎರಡೂ ಕೊನೆಗಳ ಅಕ್ಷರಗಳನ್ನು ಕೆಳಗೆ ಮೇಲೆ ತಿರುವು ಮುರುವು ಓದುತ್ತ ಸಾಗಿದರೆ ಎಲ್ಲ ಚರಣಗಳೂ ಪೂರ್ಣವಾಗುವವು. ಅದು ಹ್ಯಾಗಂದರೆ:— ಪ್ರತಿಯೊಂದು ಚರಣದ ಪ್ರಥಮಾಕ್ಷರಗಳನ್ನು ಮೊದಲು ಮೇಲಿನಿಂದ ಕೆಳತನಕ ಓದಿ ಬಳಿಕ ಹಾಗೆಯೇ ಕೆಳಗಿನಿಂದ ಮೇಲ್ತನಕ ಪುನಃ ಅವನ್ನೇ ಓದಬೇಕು. ಅಂದರೆ ಪ್ರಥಮ ಚರಣವು ಉತ್ಪನ್ನವಾಗುತ್ತದೆ. ಇದೇ ಮೇರೆಗೆ ಪ್ರತಿಯೊಂದು ಚರಣದ ೩ನೇ ೩ನೇ ೪ನೇ ಅಕ್ಷರಗಳನ್ನು ಅವರೋಹ, ಆರೋಹಗಳ ಕ್ರಮದಿಂದ ಓದುತ್ತ ಸಾಗಿದರೆ ೨ನೇ ೩ನೇ ೪ನೇ ಚರಣಗಳು ಉತ್ಪನ್ನವಾಗುತ್ತವೆ. ಹಾಗು ಇದರಂತೆಯೇ ಪ್ರತಿಯೊಂದು ಚರಣದ ಕೊನೆಯ ಅಕ್ಷರಗಳನ್ನು ಮೊದಲು ಮಾಡಿ ಮಧ್ಯದವರೆಗೆ ಹಿಂದಕ್ಕೆ ಓದುತ್ತ ಸಾಗಿದರೂ ನಾಲ್ಕೂ ಚರಣಗಳು ಉತ್ಪನ್ನವಾಗುತ್ತವೆ. ಈ ಶ್ಲೋಕದ ಅರ್ಥವೇನಂದರೆ:— (ಇದು ಶಿಶುಪಾಲನ ಸೈನ್ಯದ ವರ್ಣನೆಯಿರುತ್ತದೆ) "ಪ್ರಯತ್ನಶೀಲರಾದ ಅನೇಕ ಶತ್ರುಸಮೂಹಗಳ ಗತಿಯನ್ನೂ ಶರೀರಗಳನ್ನೂ ನಾಶಮಾಡುವಂಥ ಬಾಣಗಳು ಯಾರಲ್ಲಿ ಉಂಟೋ, ಯುದ್ಧಮಾಡುವದರ ವಿಷಯದಲ್ಲಿ ಯಾರು ಪ್ರೀತಿಯುಳ್ಳವರಿದ್ದಾರೋ, ಯಾರಲ್ಲಿಯ ನಾನಾಪ್ರಕಾರದ ವಾದ್ಯಗಳು ಶ್ರೇಷ್ಠ ಅಶ್ವಗಳ ಹೇಷಣ ಶಬ್ದಗಳ ಸಂಗಡ ಕಲಹ ಮಾಡುತ್ತವೋ ಅಂಥ ಸೈನ್ಯವು ಅದು ಇದ್ದಿತು."

मुरजबन्ध

सा से ना ग म ना र म्भे ॥
र से ना सी द्ध ना र ता ॥
ता र ना द्ध ज ना म त्त ॥
धी र ना ग म ना म या ॥ २९ ॥

ಈ ಬಂಧದೊಳಗಿನ ಚಮತ್ಕಾರವು, ಮೃದಂಗಗಳ (ತಬಲಾ, ಮದ್ದಲಿ) ಆಕೃತಿಯನ್ನು ತೆಗೆದು ಆದರಲ್ಲಿ ಈ ಶ್ಲೋಕವನ್ನು ಬರೆದರೆ ಸ್ಪಷ್ಟವಾಗಿ ತಿಳಿಯವದು.

ಈ ಶ್ಲೋಕದ ಅರ್ಥವೇನಂದರೆ:—"ಆ ಸೈನ್ಯವು, ಪ್ರಯಾಣದ ಆರಂಭದಲ್ಲಿ ವೀರಶ್ರೀಯ ರಸದಿಂದ ನಿರಂತರವಾಗಿ ಉತ್ಸಾಹವುಳ್ಳದ್ದಾಗಿದ್ದತು. ಅದರೊಳಗಿನ ವೀರಭಟರು ಗಟ್ಟಿಸ್ವರದಿಂದ ಸಿಂಹನಾದವನ್ನು ಮಾಡುತ್ತಿದ್ದರು. ಅದರಲ್ಲಿದ್ದ ಧೈರ್ಯಶಾಲಿಗಳಾದ ಮದ್ದಾನೆಗಳು ಎಂದೂ ವ್ಯಥೆಯನ್ನು ಹೊಂದುತ್ತಿದ್ದಿಲ್ಲ."

प्रतिलोमानुलोमपादः

ना ना जा व जा व ना ना ॥
सा ज नौ घ घ नौ ज सा ॥

प रा नि हा हा नि रा प ॥
ता न्वि या त त या न्वि ता ॥ ४० ॥

ಈ ಶ್ಲೋಕದಲ್ಲಿರುವ ವಿಲಕ್ಷಣ ಚಾತುರ್ಯವೇನಂದರೆ:—ಪ್ರತಿಯೊಂದು ಚರಣವನ್ನು ಅಥವಾ ಚರಣಾರ್ಧವನ್ನು ತಿರುವು ಮುರುವು ಓದಿದರೆ, ಎಳ್ಳಷ್ಟೂ ನ್ಯೂನಾಧಿಕ್ಯವಿಲ್ಲದೆ ಚರಣವು ಇದ್ದಕ್ಕಿದ್ದಂತೆಯೇ ಪೂರ್ಣವಾಗುತ್ತದೆ. ಈ ಶ್ಲೋಕದ ಭಾವಾರ್ಥವೇನಂದರೆ:—"ಆ ಅನೇಕ ಪ್ರಕಾರದ ಯುದ್ಧಗಳಲ್ಲಿ ತಮ್ಮ ತೇಜಸ್ಸಿನಿಂದ ಶತ್ರುಗಳನ್ನು ತಿರಸ್ಕರಿಸುವಂಥ ಜನಸಮುದಾಯದಿಂದ ದಟ್ಟಣೆಯಾದಂಥ ಕ್ಷೀಣವಾಗದಂಥ ಆ ಸೈನ್ಯವು ಶತ್ರುಗಳಮೇಲೆ ಹೋಗಿಬಿದ್ದಿತು."

गोमूत्रिकाबन्ध.

प्र वृ त्ते वि क स द्वा न सा ध ने ऽ प्य वि षा दि भिः ॥
व वृ षे वि क स द्वा न यु ध मा प्य वि षा णि भिः ॥४६॥

ಈ ಶ್ಲೋಕದಲ್ಲಿ ಬಂದು ಬಿಟ್ಟು ಬಂದು ಅಕ್ಷರಗಳು ಎರಡೂ ಚರಣಗಳಲ್ಲಿ ಒಂದೇ ಪ್ರಕಾರದವು ಇರುತ್ತವೆ.

ಈ ಶ್ಲೋಕದ ತಾತ್ಪರ್ಯ ವೇನಂದರೆ:—"ಭಯಭಯಂಕರ ಗರ್ಜನೆಗಳಾಗಿ ಯುದ್ಧವು ಪ್ರಾರಂಭವಾದರೂ ಖೇದವಿಲ್ಲದಂಥ ಅನೆಗಳು ರಣಭೂಮಿಯ ಮೇಲೆ ಬಂದು ಪ್ರಚುರ ದಾನೋದಕದ ಮಳೆಗರೆಯಲು ಆರಂಭಿಸಿದವು."

गतप्रत्यागत.

तं श्री या घ न या ऽ न स्त रु चा सा र त या तया ॥
या त या त र सा चा रु स्त न या ऽ न घ या श्रितम् ॥८८॥

ಈ ಶ್ಲೋಕದೊಳಗಿನ ಚಮತ್ಕಾರವೇನಂದರೆ:—ಪ್ರಥಮ ಶ್ಲೋಕಾರ್ಧವನ ಅಕ್ಷರಶಃ ವಿರುದ್ಧಕ್ರಮದಿಂದ ಓದಿದರೆ, ದ್ವಿತೀಯ ಶ್ಲೋಕಾರ್ಧವು ಉತ್ಪನ್ನವಾಗುತ್ತದೆ ಅರ್ಥ—"ಪೂರ್ಣ ಆನಂದಯುಕ್ತಳೂ ಎಂದೂ ಮ್ಲಾನಕಾಂತಿಯಿಲ್ಲದವಳೂ ಸರ್ವೋತ್ಕೃಷ್ಟತ್ವವೆಂಬ ಗುಣದಿಂದ ಯುಕ್ತಳೂ ಸುಂದರವಾದ ಸ್ತನಗಳುಳ್ಳವಳೂ ನಿರ್ದೋಷಳೂ ಆದಂಥ ಲಕ್ಷ್ಮಿಯು ಉತ್ಕಂಠೆಯಿಂದ ಕೃಷ್ಣನ ಆಶ್ರಯ ಮಾಡಿದ್ದಾಳೆ."

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं **वाग्भूषणम्** भूषणम् ॥

(भर्तृहरिः)

ಸಂಪುಟ ೧೬.	ಜೂನ ೧೯೧೨.	ಸಂಚಿಕೆ ೧೧.

ಪೌರ್ವಾತ್ಯರ ಪ್ರಾಚೀನ ಯಂತ್ರವಿದ್ಯೆಯು.

ಆಧುನಿಕರ ಯಂತ್ರಶೋಧದಿಂದ ಜಗತ್ತಿನಲ್ಲಿ ಯುಗವೇ ಬದಲಿಸಿರುವದು. ಪಾಶ್ಚಾತ್ಯಪಂಡಿತರು ಮಾಡಿದ ಯಂತ್ರಶೋಧಗಳನ್ನು ನೋಡಲು ವಿಶ್ವಾಮಿತ್ರಮಹರ್ಷಿಯು ಹಿಂದೆಮಾಡಿದ ನೂತನ ಸೃಷ್ಟಿಯ ಕಥೆಯು ಸುಳ್ಳಿರಬಹುದೆಂದು ನಮ್ಮ ಮನಸಿನಲ್ಲಿ ಎಂದೂ ಬರುವದಿಲ್ಲ. ಪಾಶ್ಚಾತ್ಯರ ಯಂತ್ರಕೌಶಲದ ಪ್ರಕಾಶವು ಜಗತ್ತಿನಲ್ಲಿ ಹಬ್ಬಿದ ಹಾಗೆಲ್ಲ ಭರತಖಂಡದ ಕಳೆದುಹೋದ ಜ್ಞಾನರತ್ನಗಳು ಬೆಳಿಗೆಬಂದು ಮಿನುಗುತ್ತಿರುವವು. ಭರತಖಂಡವು ಅಧೋಗತಿಯ ಆಳವಾದ ಕೂಪದಲ್ಲಿ ಬೀಳಲು ಅದರಲ್ಲಿಯ ಜ್ಞಾನರತ್ನಗಳು ಅಜ್ಞಾನದ ದಟ್ಟವಾದ ಕತ್ತಲಲ್ಲಿ ಕಾಣಿಸದಂತಾದವು. ಪಾಶ್ಚಾತ್ಯರ ಜ್ಞಾನಪ್ರಭೆಯಿಂದ ಆ ಕತ್ತಲೆಯ ಆವರಣವು ದೂರವಾದಂತಾದ್ದರಿಂದ ಆ ಜ್ಞಾನರತ್ನಗಳು ಈಗೀಗ ಸಿಕ್ಕಹತ್ತಿವೆ. ಅವುಗಳ ಮಾಹಾತ್ಮ್ಯವು ಯಾವಪ್ರಕಾರವಿರುವದೆಂಬದನ್ನು ಇಲ್ಲಿ ಸ್ವಲ್ಪ ಆಲೋಚಿಸುವ.

ಮೇಲೆ ನಾವು ವಿಶ್ವಾಮಿತ್ರಮಹರ್ಷಿಯ ನೂತನ ಸೃಷ್ಟಿಯ ಉಲ್ಲೇಖವನ್ನು ಮಾಡಿರುವೆವಷ್ಟೆ? ಅವನ ಸೃಷ್ಟಿಯು ಈಶ್ವರಸೃಷ್ಟಿಯಿಂದ ಬೇರೆಯಾಗಿ ಕಾಣದೆ ಅದರ ಒಂದು ಅಂಗವಾಗುವಷ್ಟು ಮಟ್ಟಿಗೆ ಸೃಷ್ಟಿನಿಯಮವನ್ನು ಅನುಸರಿಸಿತ್ತು. ವಿಶ್ವಾಮಿತ್ರನ ನೂತನ ಸೃಷ್ಟಿಯಂಥ ಸೃಷ್ಟಿಯನ್ನು ಮಾಡುವದಕ್ಕೆ ಪಾಶ್ಚಾತ್ಯ ಯಂತ್ರಶಾಸ್ತ್ರಜ್ಞರಿಗೆ ಇನ್ನೂ ಅನೇಕ ಯುಗಗಳು ಹೋಗಬೇಕಾಗುವದು. ಅಂಥ ಮಹಾನುಭಾವನ ಸುದ್ದಿಯನ್ನು ಬಿಟ್ಟು ನಾವು ಈಗ ಸ್ವಲ್ಪ ಹೆಚ್ಚುಕಡಿಮೆ ಈಗಿನ ಪಾಶ್ಚಾತ್ಯಯಂತ್ರಶಿಲ್ಪಿಗಳಷ್ಟು ಯಂತ್ರಶಾಸ್ತ್ರಜ್ಞಾನವುಳ್ಳ ಬೇರೊಬ್ಬ ಪೌರ್ವಾತ್ಯನ

ವೃತ್ತಾಂತವನ್ನು ಇಲ್ಲಿ ವರ್ಣಿಸುವೆವು— ಪೌರ್ವಾತ್ಯ ಯಂತ್ರಜ್ಞರಲ್ಲಿ ಮಯದಾನವ ನಂಥ ಯಂತ್ರಶಾಸ್ತ್ರಜ್ಞನು ಇನ್ನೊಬ್ಬನಿರಲಿಲ್ಲ. ಪುರಾಣಾದಿಗಳಿಂದ ಅವನು ಶ್ರೇಷ್ಠನಾದ ಬಡಿಗನಿದ್ದನೆಂಬದನ್ನು ನಾವುಬಲ್ಲೆವು. ಅವನ ಯಂತ್ರಶಿಲ್ಪದ ಪರಿಚಯವನ್ನು ಮಾಡಿಕೊಡುವದಕ್ಕಾಗಿ ಈ ಪ್ರಸಂಗದ ಅವತರಣ ಮಾಡಿರುವೆವು. ಪ್ರಸಿದ್ಧವಾದ ಕಥಾಸರಿತ್ಸಾಗರವೆಂಬ ಗ್ರಂಥದಿಂದ ಈ ವಿವರಣವನ್ನು ಮುಖ್ಯವಾಗಿ ಸಂಗ್ರಹಿಸಿರುವೆವು. ಕಥಾಸರಿತ್ಸಾಗರದಲ್ಲಿ ಮಯನು ಯಂತ್ರಶಿಲ್ಪದ ಮೊದಲನೆಯ ಶೋಧಕನೆಂದು ವರ್ಣನೆಯಿರುವದು. ಸೂರ್ಯಪ್ರಭಲಂಬಕದ ೧ ನೆಯ ತರಂಗದಲ್ಲಿ ಚಂದ್ರಪ್ರಭರಾಜನ ಮಗನಾದ ಸೂರ್ಯಪ್ರಭನು ಮಯನ ಬಳಿಯಲ್ಲಿಯೇ ಯಂತ್ರವಿದ್ಯೆಯನ್ನು ಕಲಿತನೆಂದು ಹೇಳಿದೆ—

एवं मयेनाभिहितो राजा चंद्रप्रभोऽब्रवीत् ।
धन्याःस्मः पुण्यवानेष यथेच्छं नीयतामिति ॥ ३३ ॥
ततस्तमामंत्र्य नृपं तदनुज्ञानमाश्रुतम् ।
सूर्यप्रभं ससामात्यं पातालं नीतवान् मयः ॥ ३४ ॥
तत्रोपदिष्टवांस्तस्मै स तपांसि तथा यथा ।
राजपुत्रः ससामात्यो विद्याः शीघ्रमसाधयत् ॥ ३५ ॥
विमानसाधनं तस्मै तथैवोपदिदेश सः ।
येन भूतासनं नाम स विमानमुपार्जयत् ॥ ३६ ॥
तद्विमानाधिरूढं तं सिद्धविद्यं समन्त्रिकम् ।
सूर्यप्रभं स पातातालान्मयः स्वपुरमानयत् ॥३७ ॥

ಹಿಂದೆ ಹೇಳಿದಂತೆ ಮಯನು ಚಂದ್ರಪ್ರಭನಿಗೆ ಹೇಳಿಲು ಅವನು—' ನಾವು ಧನ್ಯರು, ಈ ಪುಣ್ಯವಂತನಾದ ಮಗನನ್ನು ಬೇಕಾದತ್ತ ಕರೆದುಕೊಂಡು ಹೋಗು,' ಎಂದು ಮಯನಿಗೆ ಹೇಳಿದನು. ಆ ಮೇಲೆ ಮಯನು ಅರಸನ ಒಪ್ಪಿಗೆಯನ್ನು ಪಡೆದ ಸೂರ್ಯಪ್ರಭನನ್ನು ಮಂತ್ರಿಗಳೊಡನೆ ತೀವ್ರವಾಗಿ ಪಾತಾಳಕ್ಕೆ ಒಯ್ದನು. ಅಲ್ಲಿ ಮಯನು ರಾಜಪುತ್ರನೂ ಅವನ ಮಂತ್ರಿಗಳೂ ಶೀಘ್ರವಾಗಿ ವಿದ್ಯೆಗಳನ್ನು ಸಾಧಿಸುವಂತೆ ಉಪದೇಶಮಾಡಿದನು. ಮತ್ತು ಅವನಿಗೆ ವಿಮಾನವಿದ್ಯೆಯನ್ನು ಉಪದೇಶಿಸಿದನು. ಆ ಉಪದೇಶದಿಂದ ಅವನು ಭೂತಾಸನವೆಂಬ ಒಂದು ವಿಮಾನವನ್ನು ಸಿದ್ಧಮಾಡಿದನು. ಮಂತ್ರಿಗಳೊಡನೆ ವಿದ್ಯೆಯನ್ನು ಸಾಧಿಸಿದ ಆ ಸೂರ್ಯಪ್ರಭನನ್ನು ಆದೇ ವಿಮಾನದಲ್ಲಿ ಏರಿಸಿ ಮಯನು ಅವನ ಪಟ್ಟಣಕ್ಕೆ ಕರೆದೊಯ್ದನು.

ಕಥಾಸರಿತ್ಸಾಗರದಿಂದ ಮಯನ ಚರಿತ್ರವು ಸ್ವಲ್ಪಮಟ್ಟಿಗೆ ಗೊತ್ತಾಗುವದು. ಅವನು ಮೊದಲು ಅನಾರ್ಯಸಂಪ್ರದಾಯದವನಿದ್ದನು. ಬಳಿಕ ಅನಾರ್ಯತನವನ್ನು ಬಿಟ್ಟು ಆರ್ಯರಿಗೆ ಶರಣು ಹೋದನು. ಆರ್ಯರಿಂದ ಉತ್ಸಾಹಿತನಾಗಿ ಇಂದ್ರನ ಸಭೆಯನ್ನು ನಿರ್ಮಿಸಿದನು. ಇದರಿಂದ ಅನಾರ್ಯರು ಆರ್ಯ ಪಕ್ಷದವನೆಂದ ಇವನ ಮೇಲೆ ಸಿಟ್ಟಾದರು. ಈ ಅನಾರ್ಯರ ಅಂಜಿಕೆಯಿಂದ ಮಯನು ವಿಂಧ್ಯ ಪರ್ವತದಲ್ಲಿ ಅನಾರ್ಯರಿಗೆ ದುರ್ಭೇದ್ಯವಾಗಿಯೂ, ವಿಚಿತ್ರ ಚಾತುರ್ಯದಿಂದ ಘಟಿತವಾಗಿಯೂ ಇರುವ ಒಂದು ನಗರವನ್ನು ಕಟ್ಟಿಕೊಂಡು ಅಲ್ಲಿ ವಾಸವಾಗಿದ್ದನು. ಆ ನಗರವೇ ಮೇಲೆ ಪಾತಾಲವೆಂದು ವರ್ಣಿತವಾದಂತೆ ತೋರುತ್ತದೆ. ಮಯನ ಈ ಚರಿತ್ರವು ಕೆಳಗಿನ ಶ್ಲೋಕಗಳಲ್ಲಿ ಕಾಣುವದು.

अस्ति त्रिजगति ख्यातो मयो नाम महासुरः ।
आसुरं भाव मुत्सृज्य शौरिं स शरणं श्रितः ॥ १२ ॥
तेन दत्ताभयश्चक्रे सच वज्रभृतः सभाम् ।
दैत्याश्च देवपक्षोऽयमिति तं प्रति चुक्रुधुः ॥ १३ ॥
तद्भयात्तेन विंध्याद्रौ मायाविवरमंदिरम् ।
अगम्यमसुरेन्द्राणां बव्हाश्चर्यमयं कृतम् ॥ १४ ॥

कथासरित्सागर—मदनमञ्चुकालम्बक ३ य तरंग.

ಕಥಾಸರಿತ್ಸಾಗರದ ಹಿಂದೆ ಹೇಳಿದ ಮದನಮಂಚುಕಾಲಂಬಕದಲ್ಲಿ ಮಯನ ಮಗಳಾದ ಸೋಮಪ್ರಭೆಯೆಂಬವಳು ಕಲಿಂಗಸೇನೆಯೆಂಬವಳಿವೆ ಕಟ್ಟಿಗೆಯಿಂದ ಮಾಡಿದ ಯಂತ್ರದ ಗೊಂಬೆಗಳನ್ನು ತೋರಿಸಿದಳೆಂದು ವರ್ಣಿಸಲ್ಪಟ್ಟಿದೆ. ಆ ಯಂತ್ರದ ಗೊಂಬೆಗಳ ವರ್ಣನೆಯನ್ನು ನೋಡಲು ಮಯನು ಯಂತ್ರಶಾಸ್ತ್ರದಲ್ಲಿ ಪಾರಂಗತನಿದ್ದನೆಂದು ತಿಳಿದುಬರುತ್ತದೆ. ಇಲ್ಲಿ ನಾವು ಆ ಆಶ್ಚರ್ಯಕಾರಕ ವರ್ಣನೆಯನ್ನು ಉದ್ಧರಿಸಿ ಬರೆಯುತ್ತೇವೆ.

इत्युक्त्वादर्शयत्तस्याः प्रोद्घाट्य बहुकौतुकाः ॥ १८ ॥
सोमप्रभा काष्ठमय्यः स्वमायायन्त्रपुत्रिकाः ।
कीलकाहतिमात्रेण काचिद्गत्वा विहायसा ।
तदाज्ञयापुष्पमालामादाय द्रुतमाययौ ॥ १९ ॥
काचित्तथैव पानीयमानिनाय यदृच्छया ।
काचिन्ननर्त काचिच्च कथालापमथाकरोत् ॥ २० ॥

कथासरित्सागर—मदनमञ्चुका लम्बक ३ य तरंग.

(ಸೋಮಪ್ರಭೆಯು ಈಪ್ರಕಾರ ಮಾತಾಡಿ ಕಷ್ಟಗೆಯಿಂದ ಮಾಡಿದ ಯಂತ್ರದ ಗೊಂಬೆಗಳನ್ನು ಹೊರತೆಗೆದು ಅವುಗಳ ಅನೇಕ ಪ್ರಕಾರದ ಕೌತುಕಗಳನ್ನು ತೋರಿಸಹತ್ತಿದಳು. ಒಂದು ಗೊಂಬೆಯು ಕೀಲವನ್ನು ಒತ್ತಿದೊಡನೆ ಆಕಾಶಮಾರ್ಗದಿಂದ ಗಮನಮಾಡಿ ಅವಳ ಅಜ್ಞಾನುಸಾರವಾಗಿ ಹೂಮಾಲೆಯನ್ನು ತೆಗೆದುಕೊಂಡು ಶೀಘ್ರವಾಗಿ ಬಂದಿತು. ಇನ್ನೊಂದು ಗೊಂಬೆಯು ಸ್ವೇಚ್ಛೆಯಾಗಿ ನೀರನ್ನು ತೆಗೆದುಕೊಂಡು ಬಂದಿತು. ಮತ್ತೊಂದು ಗೊಂಬೆಯು ಕುಣಿಯಿತು. ಬೇರೊಂದು ಗೊಂಬೆಯು ಮಾತಾಡತೊಡಗಿತು.)

ಅದರ ಮುಂದೆ ಇನ್ನೂ ಆಶ್ಚರ್ಯಕಾರಕ ವರ್ಣನೆಯು ಕಂಡು ಬರುವದು.

ततः सोमप्रभावादीद्राजन्नेतान्यनेकधा ।
मायायन्त्रादिशिल्पानि पित्रासृष्टानि मे पुरा ॥ ४२ ॥
यथाचेदं जगद्यन्त्रं पञ्चभूतात्मकं तथा ।
यन्त्राण्येतानि सर्वाणि शृणुतानि पृथक् पृथक् ॥
पृथ्वीप्रधानं यन्त्रं यद्वारादि पिदधातितत् ।
पिहितं तेन शक्नोति न चोद्घाटयितुं परः ॥
आकार स्तोययन्त्रोत्थः सजीव इव दृश्यते ।
तेजोमयन्तु यद्यन्त्रं तद्ज्वाला : परिमुञ्चति ॥
वातयन्त्रंच कुरुते चेष्टा गत्यागमादिकाः ।
व्यक्तीकरोति चालापं यन्त्रमाकाश सम्भवम् ॥
मया चैतान्यवाप्तानि तातात् किन्त्वमृतस्य यत् ।
रक्षकं चक्रयन्त्रं तत्तातो जानाति नापरः ॥

कथास० मदनमं० ३ य तरंगः ।

"ಆ ಬಳಿಕ ಸೋಮಪ್ರಭೆಯು ಕಲಿಂಗ ಸೇನೆಯ ತಂದೆಯಾದ ಕಲಿಂಗದತ್ತನಿಗೆ ಹೇಳಿದಳು. ರಾಜನೇ! ಈ ಕೌಶಲ್ಯರಚಿತವಾದ ಎಲ್ಲ ಯಂತ್ರಗಳನ್ನು ನಮ್ಮ ತಂದೆಯು ಬಹಳ ದಿವಸಗಳ ಹಿಂದೆ ನಿರ್ಮಿಸಿದ್ದಾನೆ. ಈ ಪೃಥ್ವೀರೂಪವಾದ ಯಂತ್ರವು ಪಂಚಭೂತಾತ್ಮಕವಾಗಿರುವಂತೆ ಈ ಯಂತ್ರಗಳೆಲ್ಲ ಪಂಚಭೂತಗಳ ಗುಣಗಳುಳ್ಳವು. ಅವುಗಳಲ್ಲಿ ಪ್ರತಿಯೊಂದರ ವರ್ಣನೆಯನ್ನು ಕೇಳಬೇಕು. ಇವುಗಳಲ್ಲಿ ಪೃಥ್ವೀತತ್ವ ಘಟಿತನಾದ ಯಂತ್ರವು ಬಾಗಿಲು ಮೊದಲಾದ್ದನ್ನು ಮುಚ್ಚಿದರೆ ಆ ಬಾಗಿಲನ್ನು ಯಾರೂ ತೆರೆಯಲು ಸಮರ್ಥರಾಗುವದಿಲ್ಲ. ಜಲಯಂತ್ರದ ಆಕಾ

ರವು ಸಚೀವದಂತೆ ತೋರುವದು. ತೇಜೋಮಯ ಯಂತ್ರವು ಅಗ್ನಿ ಜ್ವಾಲೆಗಳನ್ನು ಹೊರಗೆಡಹುವದು. ವಾತಯಂತ್ರವು ಗಮನ, ಆಗಮನ ಮೊದಲಾದ ಕಾರ್ಯಗಳನ್ನು ಮಾಡುವದು. ಆಕಾಶಯಂತ್ರವು ಮಾತಾಡುವದು. ನಾನು ಈ ಯಂತ್ರಗಳನ್ನೆಲ್ಲ ತಂದೆಯಿಂದ ತಿಳಿದುಕೊಂಡಿರುವೆನು. ಅದರೆ ಅಮೃತರಕ್ಷಕವಾದ ಚಕ್ರಯಂತ್ರವೆಂಬುವದು ಮಾತ್ರ ನಮ್ಮ ತಂದೆಗಲ್ಲದೆ ಬೇರೆಯವರಿಗೆ ತಿಳಿದಿಲ್ಲ."

ಈ ಸ್ಥಲದಲ್ಲಿ ಹೇಳಿದ ಪೃಥ್ವಿಯಂತ್ರ ಜಲಯಂತ್ರಗಳಂಥ ಯಂತ್ರಗಳು ಈ ಕಾಲದಲ್ಲಿ ಉಂಟು. ತೇಜೋಮಯ ಯಂತ್ರವು ಈ ಕಾಲದ 'ಗ್ಯಾಸ್' ಮತ್ತು 'ಇಲೆಕ್ಟ್ರಿಕ್‌ಲಾಯಿಟ್,' ಇವುಗಳ ಯಂತ್ರದಂತೆ ಇತ್ತೆಂದು ತೋರುತ್ತದೆ. ವಾತ ಯಂತ್ರವು ಈ ಕಾಲದ ಸಾಯ್‌ಕಲ್ ಮೋಟಾರ್, ಮೊದಲಾದವುಗಳಂತೆ ಇರಬಹುದೆಂದು ತೋರುವದು. ಮತ್ತು ಆಕಾಶಯಂತ್ರವು ಹೊಸದಾಗಿ ಪ್ರಚಾರದಲ್ಲಿ ಬಂದ ಫೋನೋಗ್ರಾಫಿನಂತೆ ಇರಬಹುದೆಂಬದು ಸ್ಪಷ್ಟವಿದೆ. ಚಕ್ರಯಂತ್ರವು ಯಾವತರದ್ದಿತ್ತೆಂಬದು ಗೊತ್ತಾಗದಿದ್ದರೂ ಆದೊಂದು ಗಾಲಿಯ ಯಂತ್ರ (wheeled machine) ವಿತ್ತೆಂದು ತೋರುವದು. ಅದು ಈ ಕಾಲದ ಇಲೆಕ್ಟ್ರಿಕ್ ಅಥವಾ ಗ್ಯಾಲ್ವಾನಿಕ್ ಬ್ಯಾಟರಿ (Electric or Galvanic battery) ಯಂತೆ ನಿತ್ಯವಾಗಿ ನವಶಕ್ತಿಯನ್ನು ಕೊಡುವ ವಿದ್ಯುದ್ಯಂತ್ರವಿರಬಹುದೆಂದು ತೋರುವದು.

ಕಥಾಸರಿತ್ಸಾಗರದಲ್ಲಿರುವ ವಿಮಾನ ಯಂತ್ರದ ವಿಸ್ತಾರವಾದ ವರ್ಣನೆಯನ್ನು ನೋಡಲು ಒಂದಾನೊಂದು ಸಮಯದಲ್ಲಿ ಈ ಯಂತ್ರವಿದ್ಯೆಯ ಚರ್ಚೆಯು ಚನ್ನಾಗಿ ಆಗಿತ್ತೆಂದೂ, ಈ ಯಂತ್ರವು ವಿಶೇಷವಾಗಿ ಪ್ರಚಾರದಲ್ಲಿತ್ತೆಂದೂ ಕಂಡು ಬರುತ್ತದೆ. ಈ ಸಂಬಂಧದ ಕೆಲವು ಸ್ಥಲಗಳನ್ನು ಉದ್ಧರಿಸಿ ಬರೆಯುತ್ತೇವೆ. ಅದರಿಂದ ನಾವು ಹೇಳಿದ್ದು ಸತ್ಯವೆಂದು ತೋರುವದು.

गत्वा तं यंत्रतक्षाणं वद प्राणधरं महत् ।
व्योमगामि विमानं नः प्रस्थानायोपकल्पय ॥

कथास० रत्नप्रभा लंबक ९ म तरंग:

"ಹೋಗಿ ಆ ಯಂತ್ರಶಿಲ್ಪಿಯಾದ ಪ್ರಾಣಧರನನ್ನು ಕುರಿತು—ನಮ್ಮ ಪ್ರಯಾಣಕ್ಕೆ ಅನುಕೂಲವಾದ ಒಂದು ದೊಡ್ಡ ವಿಮಾನವನ್ನು ಸಿದ್ಧಮಾಡಿ ಕೊಡು, ಎಂದು ಹೇಳಿದನು."

ಮೇಲಿನ ವರ್ಣನೆಯಿಂದ ವಿಮಾನಯಂತ್ರವೆಂಬುದು ಐಂದ್ರಜಾಲಿಕ ವ್ಯಾಪಾರವಿರದೆ ಅದೊಂದು ಮೇಲ್ತರದ ಶಿಲ್ಪವಿತ್ತೆಂದೂ, ಅದನ್ನು ಚೆನ್ನಾಗಿ ಕಲಿತು ಪಾರಂಗತರಾದವರಿಗೆ ಈ ಕಾಲದ ಯಂತ್ರಶಿಲ್ಪಗಳಿಗೆ "ಮಿಕೇನಿಕ್" (Mecha-

nic) ಎಂದು ಹೇಳುವಂತೆ 'ಯಂತ್ರತಕ್ಷ' ರೆಂದು ಹೇಳುತ್ತಿದ್ದರೆಂದೂ ತೋರುವದು.

ಆ ವಿಮಾನಯಂತ್ರಗಳನ್ನು ಯಾವ ಸಾಧನದಿಂದ ನಡೆಸುತ್ತಿದ್ದರೆಂಬದನ್ನೂ ಅದರ ವೇಗವು ಎಷ್ಟು ಇತ್ತೆಂಬದನ್ನೂ ಕೆಳಗಿನ ವರ್ಣನೆಯಿಂದ ತಿಳಿಯಬಹುದು.

वातयन्त्रविमानञ्च तन्ममास्तीहमंशुमत् ।
योजनाष्टाशतीं याति सत्कृत्प्रहतकीलकम् ॥ २८ ॥
आरुह्य स्वकृतेऽन्यस्मिन् वातयन्त्रविमानके ।
हुतं ततो गतोभूवं योजनानां शतद्वयम् ॥ ४४ ॥

ಕಥಾಸ೦ ರತ್ನಪ್ರಭಾಲಂಬಕ ೯ ಮ ತರಂಗ.

ಇದರಿಂದ ವಿಮಾನಯಂತ್ರವು ವಾಯುವಿನ ಸಾಹಾಯ್ಯದಿಂದ ನಡೆಯುತ್ತಿದ್ದ ದರಿಂದ ಅದಕ್ಕೆ 'ವಾತಯಂತ್ರವಿಮಾನ' ವೆಂಬ ಹೆಸರು ಬಂದಿರಬಹುದೆಂದು ತೋರುತ್ತದೆ. ಈಗಿನ ಬೆಲೂನ್‌ಯಂತ್ರವನ್ನು (Balloon) ಹೇಗೆ ತಪ್ತವಾಯುವಿನಿಂದ ಇಲ್ಲವೆ ಲಘುಬಾಷ್ಪದಿಂದ (Heated air or lightgas) ತುಂಬಿ ಹಾರಿಸುವಂತೆ ವಾತಯಂತ್ರವನ್ನೂ ಹಾರಿಸುತ್ತಿದ್ದರೆಂದು ತೋರುತ್ತದೆ. ಸ್ಕ್ರೂ ಮೊದಲಾದ್ದರಿಂದ ಯಂತ್ರದ ಕಾರ್ಯ್ಯವು ನಿಯಮಿತವಾಗುವಂತೆ ವಿಮಾನ ಯಂತ್ರದ ಕಾರ್ಯ್ಯವು ಕೀಲಕದಿಂದ ನಿಯಮಿತವಾಗುತ್ತಿತ್ತು. ಒಂದು ಸಾರೆ ಗತಿಕೊಟ್ಟ ವಿಮಾನವು ಇನ್ನೂರು ಗಾವುದದಿಂದ ಎಂಟುನೂರು ಗಾವುದದ ವರೆಗೆ ಹೋಗುತ್ತಿತ್ತು. ಈ ರೀತಿಯಲ್ಲಿ ವೇಗದ ಕ್ರಮವಿತ್ತೆಂದು ಕೆಳಗಿನ ಶ್ಲೋಕದಿಂದ ತಿಳಿಯುವದು.

प्रेरितेन पुनस्तेन विमानेन खगामिना ।
ततोपि योजनशतद्वयमन्यमगामहम् ॥ ४५ ॥

ಕಥಾಸ೦ ರತ್ನಪ್ರಭಾ ಲಂಬಕ ೯ ಮ ತರಂಗ.

[ಮತ್ತೆ ವ್ಯೋಮಗಾಮಿಯಾದ ವಿಮಾನಕ್ಕೆ ಗತಿಕೊಡಲು ನಾವು ಮತ್ತೆ ಇನ್ನೂರು ಯೋಜನ ಹೋದೆವು.]

ಆ ಕಾಲದ ವಿಮಾನಯಂತ್ರದಲ್ಲಿ ನಾವಿರಾರು ಜನರು ಕುಳಿತುಕೊಳ್ಳುವದಕ್ಕೆ ಅವಕಾಶವಿತ್ತೆಂದು ತೋರುವದು: —

व्यजिज्ञपच्च सुमहद्विमानं कृतमस्तिमे ।
यन्मानुषसहस्राणि वहत्यद्यावहेलया ॥ २२८ ॥

ಕಥಾ೦ ಲಂ ೨೦ ೯ ಮ ತರಂಗ.

[ಯಂತ್ರತಕ್ಷನು ರಾಜನಿಗೆ ಇಂತು ವಿಜ್ಞಾಪಿಸಿದನು—ನಾನು ಒಂದು ದೊಡ್ಡ

ವಿಮಾನವನ್ನು ಸಿದ್ಧಪಡಿಸಿರುವೆನು. ಅದು ಈಗ ಸಾವಿರ ಜನರನ್ನು ಅನಾಯಾಸವಾಗಿ ಹೊರುವದು.]

ವಿಮಾನಕ್ಕೆ ಗತಿಕೊಡುವದು ಸ್ವಾಧೀನದಲ್ಲಿದ್ದಂತೆ ಗತಿಯನ್ನು ಪ್ರತಿಬಂಧಿಸುವದಾದರೂ ಸ್ವಾಧೀನವಾಗಿತ್ತು. ಇದಕ್ಕೆ ಕಥಾಸರಿತ್ಸಾಗರದಲ್ಲಿಯೇ ಆಧಾರವುಂಟು. ಹಿಂದೆ ಹೇಳಿದ ದೊಡ್ಡ ವಿಮಾನವನ್ನು ಈ ಪ್ರಕಾರ ಇಳಿಸಿದ ವರ್ಣನೆಯನ್ನು ಕೆಳಗೆ ಕೊಡುತ್ತೇವೆ:—

तत्राम्बरादशंकिनमवतीर्णं वरविमानवहनंतम् ।
सानुचरं नववध्वायुक्तं दृष्ट्वा विसिस्मियेजनता ॥ २४२ ॥

कथास० रत्नप्रभा लंबक ० म तरंग.

[ಅಲ್ಲಿ ಒಮ್ಮೆಲೇ ಆಕಾಶದಿಂದ ಇಳಿದುಬಂದ, ಅನುಚರರಿಂದೂ, ಹೊಸ ಹೆಂಡತಿಯಿಂದೂ ಕೂಡಿದ ಆ ವಿಮಾನಚಾರಿಯನ್ನು ನೋಡಿ ಜನವು ಬೆರಗಾಯಿತು.]

ಈ ಪ್ರಕಾರ ದೊಡ್ಡ ವಿಮಾನವು ಅನೇಕ ಜನರೊಡನೆ ಇಳಿದರೂ ಯಾರ ಮನಸ್ಸಿನಲ್ಲಿಯೂ ವಿಪತ್ತಿನ ಸಂಶಯವು ಹುಟ್ಟಲಿಲ್ಲವೆಂದು ಹೇಳಿದ್ದರಿಂದ ಇಳಿಸುವಿಕೆಯು ಸ್ವಾಧೀನವಾಗಿತ್ತೆಂದು ತೋರುವದು.

ಈ ಸುಯಂತ್ರಿತವಾದ ವಿಮಾನವು ಈ ಕಾಲದ (Air-Ship) ಏರಪ್ಲಿನಂತೆ ರಾಜರಿಗೆ ಹೊಸದೊಂದು ಶಕ್ತಿಯ ಮತ್ತು ಸಂಪತ್ತಿಯ ಆಶೆಯನ್ನುಂಟು ಮಾಡಿತ್ತೆಂದು ಹೇಳಬಹುದು:—

दृष्ट्वा विमानवाहनसूचितभवितव्यखचरसाम्राज्यम् ।
तं सोऽभ्यनन्दतसुतं राजा चरणानतं वधूसहितम् ॥ २४४ ॥

कथास० रत्नप्र० ९ म तरंग.

[ವಿಮಾನ ವಾಹನದ ಸಾಹಾಯ್ಯದಿಂದ ಮುಂದೆ ಗಗನಚರಚಕ್ರವರ್ತಿಯಾಗಬಹುದಾದ ಸಪತ್ನೀಕನಾದ ಮಗನು ನಮಸ್ಕರಿಸಲು ರಾಜನು ಅಭಿನಂದಿಸಿದನು.]

ಹಿಂದೆ ಹೇಳಿದ ಸೂರ್ಯಪ್ರಭನು ಮಯನಿಂದ ವಿಮಾನವಿದ್ಯೆಯನ್ನು ಪೂರ್ಣವಾಗಿ ಕಲಿತು ಆಕಾಶರಾಜ್ಯದಲ್ಲಿ ಚಕ್ರವರ್ತಿಯಾದುದಲ್ಲದೆ ವಿಮಾನ ಸಾಹಾಯ್ಯದಿಂದ ದಿಗ್ವಿಜಯಕ್ಕೆ ಹೊರಟು ಚೀನದೇಶದವರೆಗೆ ಹೋಗಿದ್ದನೆಂಬದು ಕಥಾಸರಿತ್ಸಾಗರದಿಂದ ತಿಳಿದುಬರುತ್ತದೆ:—

" सोऽथसूर्यप्रभो विद्याप्रभवात्सचिवैः सह ।
नानादेशात् विमानेन सदा बभ्राव लीलया ॥ ४० ॥

अन्येऽपि च विमानेन सहसूर्यप्रभा ययुः ।
चन्द्रप्रभाद्याः सर्वेते चीनदेशं सपौरवाः ॥ १५५ ॥ ,,

कथास० सूर्यप्रभलम्बक १ म तरंग.

[ಬಳಿಕ ಆ ಸೂರ್ಯಪ್ರಭನು ವಿಮಾನವಿದ್ಯೆಯ ಪ್ರಭಾವದಿಂದ ಅನೇಕ ದೇಶಗಳನ್ನು ಅನಾಯಾಸವಾಗಿ ತಿರುಗಾಡಿದನು. ಒಂದು ದಿನ ಸೂರ್ಯಪ್ರಭನೊಡನೆ ಆ ಚಂದ್ರಪ್ರಭೆ ಮೊದಲಾದವರು ವಿಮಾನದಿಂದ ಚೀನದೇಶಕ್ಕೆ ಹೋದರು.]

ಈಗಿನ ಪಾಶ್ಚಾತ್ಯಜಗತ್ತಿನಲ್ಲಿರುವ ವಿರಚಿಪ್ಪಿಗೂ, ಮೇಲೆ ಹೇಳಿದ "ವರ ವಿಮಾನವಾಹನ"ಕ್ಕೂ ವಿಸ್ತಾರದಲ್ಲಿಯೂ, ಉದ್ದೇಶದಲ್ಲಿಯೂ ಇರುವಪೂರ್ಣವಾದ ಹೋಲಿಕೆಯನ್ನು ನೋಡಿ ನಮ್ಮ ದೇಶದವರು ಅತ್ಯಂತ ಚಮತ್ಕೃತರಾಗುವರೆನ್ನುವದಕ್ಕೆ ಸಂದೇಹವಿಲ್ಲ. ಮತ್ತು ಇದುವರೆಗೆ ಪಾಶ್ಚಾತ್ಯಶಾಸ್ತ್ರಜ್ಞರು ಬಹು ಪ್ರಯಾಸಪಟ್ಟರೂ ಪೂರ್ಣವಾಗಿ ಸಾಧ್ಯವಾಗದ ವಿಮಾನ ವಿದ್ಯೆಯಲ್ಲಿ ನಮ್ಮವರು ಪಾರೀಣತೆಯನ್ನು ಹೊಂದಿದ್ದರೆಂದು ಒಂದು ವಿಧವಾಗಿ ಗರ್ವಿತರಾಗುವರೆನ್ನುವದಕ್ಕೂ ಸಂದೇಹವಿಲ್ಲ. ಈ ವಿಮಾನ ಯಂತ್ರಗಳನ್ನು ಅರಸರು ಉಪಯೋಗಿಸುತ್ತಿದ್ದರೆಂದೂ ಅವಕ್ಕೆ ವಿಶೇಷವಾದ ವೆಚ್ಚವು ಬೇಕಾಗುತ್ತಿತ್ತೆಂದೂ ಸ್ಪಷ್ಟವಾಗಿ ತೋರುವದು.

ಈ ಮುಂದಿನ ಅವತರಣದಲ್ಲಿ ಪೌರ್ವಾತ್ಯ ಯಂತ್ರವಿದ್ಯೆಯ ಸಂಪೂರ್ಣತೆಯನ್ನು ಕುರಿತು ಒಂದು ಅದ್ಭುತವಾದ ವಿವರಣವನ್ನು ಕೊಡುವೆವು. ನರವಾಹನದತ್ತನೆಂಬ ರಾಜಪುತ್ರನು ರಾಜಪುತ್ರಿಯಾದ ಕರ್ಪೂರಿಕೆಯನ್ನು ಮದುವೆ ಮಾಡಬೇಕೆಂದು ಕರ್ಪೂರ ಸಂಭವನಗರದ ಅನುಸಂಧಾನ ಮಾಡುತ್ತ ಮಾಡುತ್ತ ಸಮುದ್ರತೀರದಲ್ಲಿ ಒಂದು ಆಶ್ಚರ್ಯಕಾರಕ ಸ್ಥಳಕ್ಕೆ ಬಂದನು. ಆ ಸ್ಥಳವು ಇವನ ಕಣ್ಣಿಗೆ ಒಂದು ಸಮೃದ್ಧಿಶಾಲಿಯಾದ ನಗರವೆಂದು ತೋರಿದರೂ ಅಲ್ಲಿಯ ನಿವಾಸಿಗಳೆಲ್ಲ ಕಾಷ್ಠಯಂತ್ರಗಳಿಂದ ಮಾಡಲ್ಪಟ್ಟವರೆಂದು ಕಂಡು ಬಂತು. ಆದರೆ ಜೀವವುಳ್ಳವರಂತೆ ಇರುವ ಇವರ ವ್ಯವಹಾರವನ್ನು ನೋಡಿ ಇವನಿಗೆ ಬಹಳ ಆಶ್ಚರ್ಯವಾಯಿತು. ಇವನು ಅಂಗಡಿ ಬೀದಿಯಲ್ಲಿ ಬರುತ್ತ ಕಾಷ್ಠಮಯರಾದ ವ್ಯಾಪಾರಿಗಳನ್ನೂ ಗಿರಾಕಿಗಳನ್ನೂ ನೋಡಿದನು. ಈ ಗೊಂಬೆಗಳು ಮಾತಾಡದಿರುವದು ಒಂದಲ್ಲದೆ ನಿರ್ಜೀವವೆಂದು ತಿಳಿಯುವ ಬೇರೆ ಉಪಾಯವಿದ್ದಿಲ್ಲ. ಇವನು ಮುಂದೆ ಅರಮನೆಯ ಸಮೀಪಕ್ಕೆ ಬಂದು ಕಾಷ್ಠಮಯವಾದ ಆನೆ ಕುದುರೆ ಕಾಲಾಳುಗಳನ್ನು ಕಂಡನು. ಬಾಗಿಲಲ್ಲಿ ದ್ವಾರಪಾಲಕರೂ ಕಾಷ್ಠನಿರ್ಮಿತರೇ ಇದ್ದರು. ಇಂದ್ರಿಯಗಳಿಗೆಲ್ಲ ಅಧಿಷ್ಠಾತೃರೂಪವಾದ ಚೈತನ್ಯವಿರುವಂತೆ ಈ ಎಲ್ಲ ಬಡ ಮೂರ್ತಿಗಳ ಚಲನವಲನ ಮಾಡಿಸುವ ಒಬ್ಬ ಶಿಷ್ಟಾಚಾರಸಂಪನ್ನನಾದ ಮನುಷ್ಯನು ಅಲ್ಲಿ ರತ್ನಸಿಂಹಾಸನದ ಮೇಲೆ ಕುಳಿತಿದ್ದನು. ಈ ಮನುಷ್ಯನು ಕಾಂಬ್ಯೇ ನಗರದ ಮಯಶಾಸ್ತ್ರಪಾರಣತನಾದ

ಒಬ್ಬ ಶಿಲ್ಪಿಯು ಅಲ್ಲಿಯ ಅರಸನ ಕೋಪವಾದ್ದರಿಂದ ತನ್ನನ್ನು ರಕ್ಷಿಸಿಕೊಳ್ಳುವದ ಕ್ಕಾಗಿ ವಿಮಾನದಿಂದ ಅಲ್ಲಿ ಬಂದು ವಾಸವಾಗಿದ್ದನು. ಆ ಸ್ಥಳವು ನಿರ್ಜನವಾದ್ದ ರಿಂದ ವಿನೋದಕ್ಕಾಗಿ ಹಿಂದೆ ಹೇಳಿದ ಯಂತ್ರದ ಗೊಂಬೆಗಳನ್ನು ಮಾಡಿ ಅವುಗಳ ಮಧ್ಯದಲ್ಲಿ ತಾನು ರಾಜನಂತೆ ಕುಳಿತುಕೊಂಡು ತನ್ನ "ರಾಜಧರ" ನಾಮವನ್ನು ಅನ್ವರ್ಥವಾಗಿ ಮಾಡಿಕೊಂಡಿದ್ದನು. ಹಿಂದೆ ಹೇಳಿದ ನರವಾಹನದತ್ತನು ಮಂತ್ರಿ ಪರಿಜನರೊಡನೆ ಅಲ್ಲಿಗೆ ಬರಲು ಆ ರಾಜಧರನು ಮಾಡಿದ ಆತಿಥ್ಯದ ಪ್ರಕಾರವು ಆಶ್ಚರ್ಯದಲ್ಲಿಯೂ ಆಶ್ಚರ್ಯವು. ಉತ್ತಮವಾದ ಆಹಾರಸಾಮಗ್ರಿಯು ಯೋಚಿಸಿದ ಕೂಡಲೆ ತನ್ನಷ್ಟಕ್ಕೆ ತಾನೇ ಸಮೀಪಕ್ಕೆ ಬರಹತ್ತಿತು. ಊಟ ಮುಗಿದೊಡನೆ ಅದೃಶ್ಯನಾದ ಯಾವನೋ ಒಬ್ಬನಿಂದ ಆ ಸ್ಥಳವು ತೊಳೆಯಲ್ಪಟ್ಟಿತು. ಪರಿಚಾರಕರು ಯಾರೂ ತಿರುಗಾಡುವದು ಕಂಡು ಬರಲಿಲ್ಲ. ಇದೇ ಮೇರೆಗೆ ತಾಂಬೂಲದಾನವೂ ಜರುಗಿಸಲ್ಪಟ್ಟಿತು.

" प्रविश्य तत्र विपणी मार्गेण स ददर्श च ।
काष्ठयन्त्र मयं सर्वं चेष्टमानं सजीववत् ॥
वणिग्विलासिनी पौरजनं जनित विस्मयम् ।
विशायमानं निर्जीव इति वाग्विरहात्परम् ॥
क्रमाच्च गोमुखसखः सोऽन्तिकं राजवेश्मनः ।
प्रापताहशमेवात्र हस्त्यश्वादि विलोकयन् ॥
विवेशचास्य सौवर्णपुर मस्तकशोभिनः ।
अभ्यान्तरं ससचिवः साश्चर्योराजसद्मनः ॥
तत्र यन्त्रप्रतीहारवारनारी परिश्रितम् ।
जनानां स्पंदनेहेतुं तेषांचेतनमेककम् ॥
इन्द्रियाणामिवात्मानमधिष्ठातृतया स्थितम् ।
रत्नसिंहासनासीनं भव्यं पुरुषमैक्षत ॥

× × ×

तेन यन्त्रमयोत्रायं जनः सर्वः कृतो मया ।
इतीहागत्य तक्षापि देवैकाकी करोम्यहम् ॥
राज्ञो लोलायितं राज्यधरोनाम विधेर्वशात् ।
तद्वेव निर्मितेऽमुष्मिन् भवंतोद्य पुरे दिनम् ॥
विश्राम्यन्तु यथाशक्ति परिचर्यापरेमयि ।

× × ×

बुभुजेतत्रचाहारान् ध्यातोपस्थिताञ्शुभान् ॥
तेन राज्यधरेणाग्रस्थितेन स समन्त्रिकः ।
ततः केनाप्यदृष्टेन प्रमृष्टोहारभूमिकः ॥
अनुतान्मूलभोगं स तस्थौ पीतासवः सुखम् ।

ರಾಜ್ಯಧರನ ಈ ವ್ಯವಸ್ಥೆಯೆಲ್ಲ ವಿದ್ಯುದ್ಯಂತ್ರಗಳಿಂದ ಜರುಗಿಸಲ್ಪಡುತ್ತಿತ್ತೆಂದು ತೋರುತ್ತದೆ. ಮನುಷ್ಯಸಂಪರ್ಕವಿಲ್ಲದೆ ಭೋಜನ ಪಾತ್ರಗಳನ್ನು ಕ್ರಮವಾಗಿ ಹಾಕುವದು ಮತ್ತು ಭೋಜನವು ಮುಗಿದೊಡನೆ ಕ್ರಮವಾಗಿ ಆ ಸ್ಥಳದಿಂದ ಒಯ್ಯುವದು ಈ ಕಾರ್ಯಗಳು ಈಗ ಅಮೇರಿಕದಲ್ಲಿ ವೈದ್ಯುತಿಕ ಯಂತ್ರಗಳಿಂದ ಮಾಡಿಸಲ್ಪಡುತ್ತಿರುವಂತೆ ಪುಸ್ತಕಗಳ ಮುದ್ರಣ, ಹೊಲಿಗೆ, ಕಟ್ಟುವದು ಮೊದಲಾದ ಕಾರ್ಯಗಳು ಹಸ್ತಸ್ಪರ್ಶವಿಲ್ಲದೆ ಯಂತ್ರಗಳಿಂದ ಸಾಗಿಸಲ್ಪಡುತ್ತಿರುವದನ್ನು ಬಹು ಜನರು ಬಲ್ಲರು. ಇದರಿಂದ ರಾಜ್ಯಧರನ ಕೌಶಲದಲ್ಲಿ ಯಾವದೂ ಅಸಂಭವವಿಲ್ಲವೆಂದು ತೋರುವದು.

ರಾಜ್ಯಧರನಿಗೆ ಪ್ರಾಣಧರನೆಂಬ ಒಬ್ಬ ಸೋದರನಿದ್ದನು. ಅವನೂ ವಿಚಕ್ಷಣ ಶಿಲ್ಪಿಯಿದ್ದನು. ಈ ಪ್ರಾಣಧರನೇ ಹಿಂದೆ ಹೇಳಿದ ದೊಡ್ಡ ವಿಮಾನಯಂತ್ರವನ್ನು ನಿರ್ಮಿಸಿದ ಪ್ರಾಣಧರನು. ಇವರಿಬ್ಬರೂ ಮಯಶಾಸ್ತ್ರಪಾರಂಗತರಿದ್ದರು.

तस्यराष्टेनृपस्यास्तां तक्षाणौ भ्रातरावुभौ ।
मयप्रणीत दार्वादि मायायन्त्रविचक्षणौ ॥

ಕಥಾಸಂ ।

ಧರ್ಮರಾಜನ ಮಹಾಸಭೆಯನ್ನು ನಿರ್ಮಿಸಿದ್ದೂ ಅದನ್ನು ಒಂದು ಸ್ಥಳದಿಂದ ಅವನ ರಾಜಧಾನಿಸ್ಥಾನಕ್ಕೆ ಒಯ್ದದ್ದೂ ಮಯನ ಆಶ್ಚರ್ಯಕಾರಕ ಕೃತಿಗಳಲ್ಲಿ ಒಂದಾಗಿರುವದು. ಈ ಕಾಲದಲ್ಲಿ ಇಟ್ಟಿಗೆಗಳಿಂದ ಕಟ್ಟಿದ ಮನೆಗಳನ್ನು ಕೆತ್ತಿ ಬೇರೆ ಸ್ಥಳದಲ್ಲಿ ಸ್ಥಾಪಿಸುವದಕ್ಕಾಗಿ ನಿರ್ಮಿಸಲ್ಪಟ್ಟ ಯಂತ್ರದಂತೆ (Hydraulic Machine) ಒಂದು ಪ್ರಕಾರದ ಯಂತ್ರವನ್ನು ಮಾಡಿ ಅದರ ಸಹಾಯದಿಂದ ಮಯನು ಸಭಾಗೃಹವನ್ನು ಸ್ಥಾನಾಂತರಕ್ಕೆ ಒಯ್ದಿರುವ ಸಂಭವವುಂಟೆಂದು ತೋರುತ್ತದೆ.

ಈ ಎಲ್ಲ ವಿವರಣೆಯಿಂದ ಮಯನು ಯಂತ್ರಶಾಸ್ತ್ರದ ಪ್ರವರ್ತಕನೆಂದು ತಿಳಿದು ಬರುತ್ತದೆ. ಇವನಿಗೆ ಪೌರ್ವಾತ್ಯ ಜಗತ್ತಿನ ಎಡಿಸನ್, ಎಂದು ಹೇಳಬಹುದು.

ಇಂತು ಯಂತ್ರಶಾಸ್ತ್ರದಲ್ಲಿ ಪಾರೀಣತೆಯನ್ನು ಹೊಂದಿದ ಭರತಖಂಡವನ್ನು ಘೋರವಾದ ಅಜ್ಞಾನಾಂಧಕಾರದಲ್ಲಿ ಕೆಡಹಿದ ಕಾಲಪುರುಷನ ಮಹಿಮೆಯು ಅಗಾಧವಾದದ್ದು. "कालायतस्मैनमः"।

ಮಹಾದೇವ ಪ್ರಭಾಕರ ಪೂಜಾರ.

ಮಾಘಚರಿತ್ರವು.

(ಕಳೆದ ಸಂಚಿಕೆಯ ೧೮೪ನೇ ಪುಟದಿಂದ ಮುಂದೆ ಸಾಗಿದ್ದು.)

विदितं क्षितिकेऽनीके तं यातं निजतार्जिनि ॥
विगदंगविरोद्धारो योद्धायो नतिमेतिन ॥ ९० ॥

ಈ ಶ್ಲೋಕವು ಬಹು ಚಮತ್ಕಾರವಿದೆ. ಇದರೊಳಗಿನ ಪ್ರತಿಯೊಂದು ಚರಣವನ್ನು (ಶ್ಲೋಕಾರ್ಧವನ್ನು) ವಿರುದ್ಧ ಕ್ರಮದಿಂದ ಓದಿದರೆ ಬೇರೊಂದು ಚರಣವು ಉತ್ಪನ್ನವಾಗುತ್ತದೆ; ಆದರೆ ಈ ಮೂತನ ಚರಣವು ರೂಪದ ಮಾತ್ರ ಭಿನ್ನವಾಗಿ ತೋರಿದರೂ ಅರ್ಥವು ಕೇವಲ ಅದೇ ಇರುತ್ತದೆ. ಇದೇ ಮೇರೆಗೆ ಇಡೀ ಶ್ಲೋಕವನ್ನು ವಿರುದ್ಧ ಕ್ರಮದಿಂದ ಓದಿದರೆ, ಬೇರೊಂದು ಹೊಸ ಶ್ಲೋಕವೇ (ರೂಪದಿಂದ) ದೃಷ್ಟಿಗೆ ಬೀಳುವದು; ಆದರೆ ಅರ್ಥದಲ್ಲಿ ಮಾತ್ರ ಎಳ್ಳಷ್ಟೂ ಹೆಚ್ಚುಕಡಿಮೆಯಾಗಿರುವದಿಲ್ಲ. ಈ ಶ್ಲೋಕದ ಅಭಿಪ್ರಾಯವೇನಂದರೆ:—"ಅನೇಕ ಸಂಗ್ರಾಮಗಳಲ್ಲಿ ಜಯಹೊಂದಿದ ಸೈನ್ಯದಲ್ಲಿ ಯುದ್ಧಮಾಡುವದಕ್ಕೋಸ್ಕರ ಹೋದಂಥ ಎಂದೂ ಶತ್ರುಗಳಿಗೆ ನಮ್ಮನಾಗದಂಥ ಸ್ವರ್ಗದಲ್ಲಿಯೂ ಕೂಡ ಪ್ರಖ್ಯಾತಿಯುಳ್ಳಂಥ ಎಂದೂ ಯಾವ ತರಹದ ವ್ಯಥೆಯನ್ನೂ ಹೊಂದದಂಥ ರಣಶೂರನಾದ ಶ್ರೀಕೃಷ್ಣನನ್ನು ಗೆಲ್ಲುವವರು ಈ ಪೃಥ್ವಿಯಲ್ಲಿ ಯಾರುಂಟು? ಅರ್ಥಾತ್ ಯಾರೂ ಇಲ್ಲ."

चक्रबन्ध.

सत्वं मानविशिष्टमाजिरभसादालंब्य भव्यः पुरो ॥
लब्धाघक्षयशुद्धिरुद्धुरतरश्रीवत्सभूमिर्मुदा ॥
मुक्त्वाकाममपास्तभीः परमृगव्याधः स नादं हरे ॥
रेकौघैः समकालमभ्रमुदयो रोपैस्तदा तस्तरे ॥ २० ॥

ಈ ಚಕ್ರಬಂಧದಲ್ಲಿ ರಚನಾಚಾತುರ್ಯವು ಬಹು ಹೊಗಳತಕ್ಕಂಥಾದ್ದಿರುತ್ತದೆ. ಹತ್ತುವರ್ತುಲಗಳಿಂದಾದ ಈ ಚಕ್ರದಲ್ಲಿ ವ್ಯಾಸಗಳಂತೆ ಮೂರು ಹಾದಿಗಳನ್ನು ಮಾಡಿದ್ದೇವೆ. ಒಂದೊಂದು ಹಾದಿಯಲ್ಲಿ ಒಂದೊಂದು ಚರಣವನ್ನು ಬರೆದಿದ್ದೇವೆ. ಅಂದರೆ ಮೂರು ಹಾದಿಗಳಲ್ಲಿ ಮೂರು ಚರಣಗಳು ಬಂದಿರುತ್ತವೆ. ನಾಲ್ಕನೇ ಚರಣವನ್ನು ಚಕ್ರದ ದಂಡೆಯ (ದೊಡ್ಡ ವರ್ತುಳದ ಪರಿಘದ) ಹಾದಿಯಲ್ಲಿ ಬರೆದಿರುತ್ತದೆ. ಇದರೊಳಗಿನ ವಿಲಕ್ಷಣ ರಚನೆಯೇನಂದರೆ:—ಮೊದಲಿನ ಮೂರೂ ಚರಣಗಳ ೧೦ನೇ ಅಕ್ಷರವು (र) ಒಂದೇ ಇರುತ್ತದೆ. ನಾಲ್ಕನೇ ಚರಣವು ಆ ಮೂರರಿಗಿಂತಲೂ ಕಷ್ಟಸಾಧ್ಯವಾಗಿದೆ; ಯಾಕಂದರೆ ಈ ನಾಲ್ಕನೇ ಚರಣದಲ್ಲಿ ಆ

ಮೂರೂ ಚರಣಗಳ ಅದ್ಯಂತ ಅಕ್ಷರಗಳು ಸಮಾವೇಶವಾಗಲಿಕ್ಕೆ ಬೇಕು! ಇದೂ ಅಲ್ಲದೆ ಇಡೀ ಚಕ್ರದಲ್ಲಿ, ಮೂರನೇ ಮತ್ತು ಆರನೇ ವರ್ತುಲಗಳಲ್ಲಿ "**माधवा-व्यभिचं शिशुपालवधः**" ಎಂಬ ಬಂಧವು ಸಾಧಿಸಲ್ಪಟ್ಟಿದೆ!! ಈ ಶ್ಲೋಕದ ತಾತ್ಪರ್ಯವೇನಂದರೆ:—" ಕಲ್ಯಾಣಪ್ರದನಾದಂಥ ಶತ್ರುಗಳೆಂಬ ಚಿಗುರಿಗಳಿಗೆ ವ್ಯಾಧನಾದಂಥ ದ್ವೇಷಭಯವನ್ನೂ ವೈರಶುದ್ಧಿಯನ್ನೂ ಸಂಪಾದಿಸಿದಂಥ ಶ್ರೀ ವತ್ಸ ಭೂಷಣನಾದ ಕೃಷ್ಣನು ಸಂಗ್ರಾಮದ ಆವೇಶದಿಂದ ಅಭಿಮಾನಯುಕ್ತ ಧೈರ್ಯವನ್ನು ಆಶ್ರಯಿಸಿ, ನಿರ್ಭಯದಿಂದ ಸಿಂಹಗರ್ಜನೆಯನ್ನು ಮಾಡಿ ಒಂದು ವೇಳೆಯಲ್ಲಿ ಬಿಟ್ಟಂಥ ಬಾಣಗಳಿಂದ ಒಮ್ಮಿಂದೊಮ್ಮೆ ಸರ್ವ ಆಕಾಶವನ್ನು ಆಚ್ಛಾದನ ಮಾಡುವಂಥವನಾದನು."

ಇದುವರೆಗೆ ಹೇಳಿದ ಬಂಧಗಳಲ್ಲಿ ಇಷ್ಟೊಂದು ವಿಲಕ್ಷಣವಾಗಿ ಚಾತುರ್ಯದ ರಚನೆಯನ್ನು ಸಾಧಿಸಿದ್ದರೂ ಅರ್ಥದೃಷ್ಟಿಯಿಂದ ಕ್ಲಿಷ್ಟತ್ವ, ವ್ಯಾಕರಣಚ್ಯುತಿ, ಛಂದೋಭಂಗ, ಏಕಾಕ್ಷರೀಕೋಶಾವಲಂಬನ ಮುಂತಾದವುಗಳು ಏನೂ ತೋರಿ ಬರುವದಿಲ್ಲ! ಇದರಿಂದ ಮಾಘಪಂಡಿತನ ಕಲ್ಪಕತ್ವವೂ ಚಾತುರ್ಯವೂ ಶಬ್ದಜ್ಞಾನದ ಅಗಾಧತ್ವವೂ ಯೋಜನಾಕೌಶಲ್ಯವೂ ಸಹಜವಾಗಿ ಲಕ್ಷದಲ್ಲಿ ಬರುವಂತಿವೆ.

ಇದುವರೆಗೆ ಕಾವ್ಯದೃಷ್ಟಿಯಿಂದ ವಿಚಾರ ಮಾಡಿದೆವು. ಇನ್ನು ಜ್ಞಾನದೃಷ್ಟಿಯಿಂದ ವಿಚಾರ ಮಾಡುವಾ. ಅಂದರೆ ಮಾಘಕಾವ್ಯದಲ್ಲಿ ವಿವಿಧಜ್ಞಾನವು ಹ್ಯಾಗೆ ತುಂಬಿ ತುಳುಕುತ್ತದೆಂಬದನ್ನು ತೋರಿಸುವಾ. ಆದರೆ ಆ ಕಾವ್ಯದೊಳಗಿನ ಎಲ್ಲ ಜ್ಞಾನವನ್ನೂ ಬಿಚ್ಚಿ ತೋರಿಸುವದು ಈ ಅಲ್ಪ ಸ್ಥಳದಲ್ಲಿ ಶಕ್ಯವಿಲ್ಲ. ಇದೂ ಅಲ್ಲದೆ ಈ ಮಾಘ ಪಂಡಿತನು ಮಂತ್ರಿಯ ಮಗನಿದ್ದುದರಿಂದ ಇವನಲ್ಲಿ ರಾಜಕೀಯ ಜ್ಞಾನವು ಎಷ್ಟಿತ್ತೆಂಬದನ್ನು ಸ್ವಲ್ಪಮಟ್ಟಿಗಾದರೂ ತೋರಿಸುವದು ನಮ್ಮ ಆದ್ಯಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಈಡೇರಿಸುವದರಲ್ಲಿಯೇ ನಮ್ಮ ವಿವಿಕ್ಷಿತ ಸ್ಥಳವು ಮುಗಿದು ಹೋಗುವದು. ಆದುದರಿಂದ ಈ ರಾಜಕೀಯ ಜ್ಞಾನವನ್ನು ವಿವರಿಸುವಾಗ್ಗೆ ಅದರಲ್ಲಿ ಅಡಗಿದ್ದ ಇನ್ನಿತರ ಜ್ಞಾನವು ಎಷ್ಟು ವ್ಯಕ್ತವಾಗುವದೋ ಅಷ್ಟಕ್ಕೇ ಮುಕ್ತಾಯ ಮಾಡಿಕೊಳ್ಳಬೇಕೆಂದು ನಮ್ಮ ವಾಚಕರಿಗೆ ವಿನಂತಿ ಮಾಡಿಕೊಳ್ಳುತ್ತೇವೆ.

ರಾಜಕೀಯ ಜ್ಞಾನ.

(೨ ನೇ ಸರ್ಗದೊಳಗಿನ ಕಥಾಭಾಗ.)

ಶ್ರೀ ಕೃಷ್ಣನು ಬಲರಾಮ ಹಾಗು ಉದ್ಧವ ಇವರಿಬ್ಬರನ್ನೊಡಗೊಂಡು ತನ್ನ ಓಲಗದಲ್ಲಿ ಪ್ರವೇಶವಾಡಿದನು. ಬಳಿಕ ಕೃಷ್ಣನು ಅನ್ನುತ್ತಾನೆ— " ತನ್ನ ಕಲ್ಯಾಣವನ್ನು ಇಚ್ಚಿಸುವಂಥ ಪುರುಷನು ಬೆಳೆಯುವ ಶತ್ರುವನ್ನು ಎಂದೂ ಉಪೇಕ್ಷಿಸಬಾ

ರದು; ಯಾಕಂದರೆ, ಬೆಳೆಯುವಂಥ ರೋಗವೂ ಶತ್ರುವೂ ಒಂದೇ ಎಂದು ಶಿಷ್ಟ ಜನರು ಹೇಳಿದ್ದಾರೆ. (೧೦). ಶಿಶುಪಾಲನು ನಮ್ಮ ಅಪ್ತನಾಗಿದ್ದು ನನ್ನ ಸಂಗಡ ದ್ವೇಷಮಾಡುತ್ತಾನೆಂದು ನೆನಗೆ ದು:ಖವೆನಿಸುವದಿಲ್ಲ; ಆದರೆ ಸಮಸ್ತ ಜನರಿಗೆ ನಿಂದ್ಯ ರೀತಿಯಿಂದ ಕಷ್ಟ ಕೊಡುತ್ತಾನೆಂಬದನ್ನು ನೋಡಿ ನೆನಗೆ ಬಹು ದು:ಖವಾಗುತ್ತದೆ. (೧೧) ಆದುದರಿಂದ ಅವನನ್ನು ಮೊದಲು ನಾಶಮಾಡಬೇಕೆಂದು ನನ್ನ ಮತವಿದೆ. ಇದಕ್ಕೆ ನಿಮ್ಮ ಅಭಿಪ್ರಾಯವನ್ನು ತಿಳಿಸಿರಿ. ಆಗ ಬಲರಾಮನು ಅನ್ನುತ್ತಾನೆ— "ತಮ್ಮ ಉತ್ಕರ್ಷವೆ ಹಾಗು ಶತ್ರುಗಳ ಹಾನಿಯು ಇವೇ ಎರಡು ರಾಜನೀತಿಯ ಮುಖ್ಯ ತತ್ವಗಳು. ಇವುಗಳನ್ನು ಆಧಾರವಾಗಿಟ್ಟುಕೊಂಡು ಜಾಣರಾದ ವ್ಯಾಖ್ಯಾನಕಾರರು ತಮ್ಮ ವಾಕ್ಚಾಂಡಿತ್ಯವನ್ನು ಬೆಳಿಸುತ್ತಾರೆ. (೩೦). ಶತ್ರುಗಳನ್ನು ಸಮೂಲವಾಗಿ ನಾಶಪಾಡದಹೊರ್ತು ಮಾನೀ ಪುರುಷನು ಉದಯನಾಗುವದಿಲ್ಲ. ಇದಕ್ಕೆ ನಿಬಿಡ ಅಂಧಕಾರವನ್ನು ವಿಧ್ವಂಸಮಾಡಿ ಉದಯನಾಗುವಂಥ ಸೂರ್ಯನು ಉದಾಹರಣೆಯಾಗಿದ್ದಾನೆ. (೩೩). ಮೊದಲೇ ರುಷ್ಟನಾಗಿದ್ದುಂಥ ಶತ್ರುವಿನ ವಿಷಯದಲ್ಲಿ ವೈರತ್ವ ಮಾಡಿ ಯಾವ ಮನುಷ್ಯನು ಅವನ ಬಗ್ಗೆ ಉದಾಸೀನನಾಗಿರುತ್ತಾನೋ ಅವನು ಹುಲ್ಲಿನ ರಾಸಿಯಲ್ಲಿ ಬೆಂಕಿಯನ್ನು ಬಗೆದು ಗಾಳಿಯ ಎದುರಿಗೆ ಮಲಗಿಕೊಂಡಂತೆಯೇ ಸೈ. ಅರ್ಥಾತ್ ಆ ಮೂರ್ಖನು ನಾಶಹೊಂದುತ್ತಾನೆ! (೪೫). ಆದುದರಿಂದ ಶ್ರೀ ಕೃಷ್ಣ! ನೀನು ರಾಜಸೂಯ ಯಜ್ಞಕ್ಕೆ ಇಂದ್ರಪ್ರಸ್ಥಕ್ಕೆ ಹೋಗುವದನ್ನು ಬಿಟ್ಟುಕೊಟ್ಟು ಶಿಶುಪಾಲನ ಸಂಗಡ ಯುದ್ಧ ಮಾಡಲಿಕ್ಕೆ ಹೋಗುವಂಥವನಾಗು. ಇಷ್ಟಾದಬಳಿಕ ಉದ್ಧವನು ಅನ್ನುತ್ತಾನೆ—ಜಾಣರಾದ ವಾಚಸ್ಪತಿಗಳು, ಶಾಟ (ವಸ್ತ್ರ) ಯಂತೆ ಅತ್ಯಂತ ಮೃದುವಾದಂಥ ಅರ್ಥಗಾಂಭೀರ್ಯವುಳ್ಳಂಥ ಅನೇಕ (ಶ್ಲೇಷಾದಿ) ಗುಣಗಳಿಂದ ರಚಿಸಲ್ಪಟ್ಟಿಂಥ ಆಹ್ಲಾದಕಾರಕವಾದ ವಾಣಿ

---

೨೦ ತಸ್ಮಿಷ್ಠಮಾನಸ್ತು ಪರೋಪೇಕ್ಷ್ಯ: ಪಥ್ಯಮಿಚ್ಛತಾ ॥
ಸಮೌ ಹಿ ಶಿಷ್ಟೈರಾಜ್ಞಾತೌ ವರ್ತ್ಸ್ಯನ್ತಾ ವಾಮಯಸ್ಸಚ ॥ ೨೦ ॥

೨೧ ಸದ್ಭಯೇ ಸಾತ್ವತೀಸೂನುರ್ಯನ್ಮಹಾಮಪರಾಧ್ಯತಿ ॥
ಯಸ್ತು ದ್ವೇಷ್ಟಿ ಜನಂ ಲೋಕಮದ್ಯೋ ದು:ಖೀಕರೋತಿಮಾಮ್ ॥ ೨೧ ॥

೨೨ ಆತ್ಮೋದಯಂ ಪರಗ್ಲಾನಿರ್ದ್ವಯಂ ನೀತಿರಿತೀಯತೀ ॥
ತದ್ಗುರೀಕೃತ್ಯ ಕೃತಿಭಿರ್ವಾಚಸ್ಪತ್ಯಂ ಪ್ರತಾಯತೇ ॥ ೨೨ ॥

೨೩ ಸಮೂಲಘಾತಮನ್ತತ: ಪರಾಞ್ಜೋಘನ್ತಿ ಭಾನಿನ: ॥
ಪ್ರಧ್ವಂಸಿತಾನ್ಧತಮಸಸ್ತತ್ರೋದಾಹರಣಂ ರವಿ: ॥ ೨೩ ॥

೨೪ ವಿಧಾಯವೈರಂ ಸಾಮರ್ಷೆ ನರೋಽರೌ ಯ ಉದಾಸತೆ ॥
ಪ್ರಾಕ್ಷೇಪ್ಯೋದ್ಧಿಷಂ ಕಕ್ಷೇ ಶೇರತೇತೇಽಭಿಮಾರುತಮ್ ॥ ೨೪ ॥

ಯನ್ನು ಪಸರಿಸುತ್ತಾರೆ. (೭೪). ರಸ ಹಾಗು ಭಾವಗಳನ್ನು ತಿಳಿಯುವಂಥ ಕವಿಯು ಓಜ ಅಥವಾ ಪ್ರಸಾದ ಇವುಗಳಲ್ಲಿ ಇಂಥಾದ್ದೇ ಗುಣವನ್ನು ಆಶ್ರಯಿಸಬೇಕೆಂದು ಅನ್ನುವದು ಯೋಗ್ಯವಾದುದಲ್ಲ. ಆದರೆ ರಸಾನುಕೂಲದ ಪ್ರಕಾರ ಇವೆರಡನ್ನೂ ಯೋಗ್ಯ ಸ್ಥಳದಲ್ಲಿ ಯೋಜಿಸತಕ್ಕದ್ದು. ಇದೇ ಮೇರೆಗೆ ಸಮಯವನ್ನರಿತಂಥ ಅರಸನಿಗೆ ಪರಾಕ್ರಮ ಹಾಗು ಕ್ಷಮೆ ಇವುಗಳಲ್ಲಿ ಇಂಥಾದ್ದೇ ಗ್ರಾಹ್ಯವೆಂಬ ನೇಮವಿಲ್ಲ ಆದರೆ ಪ್ರಸಂಗಾನುರೂಪವಾಗಿ ಪರಾಕ್ರಮ ಅಥವಾ ಕ್ಷಮೆ ಇವುಗಳನ್ನು ಅವಲಂಬಿಸಬೇಕು. (೮೩). ಜಾಣ್ಣ ಮನುಷ್ಯನು ಕೇವಲ ದೈವವನ್ನೂ ಅವಲಂಬಿಸುವದಿಲ್ಲ; ಕೇವಲ ತನ್ನ ಪರಾಕ್ರಮದ ಮೇಲಿಷ್ಟೇ ಕೈಯೂರಿ ನಿಲ್ಲುವದಿಲ್ಲ.

ಸತ್ಕವಿಯು ಹ್ಯಾಗೆ ಶಬ್ದ ಹಾಗು ಅರ್ಥಗಳೆರಡನ್ನೂ ಇಚ್ಛಿಸುತ್ತಾನೋ ಹಾಗೆ ನೀತಿ ಕುಶಲನು ದೈವ ಹಾಗು ಉದ್ಯೋಗ ಇವೆರಡನ್ನು ಆಶ್ರಯಿಸುತ್ತಾನೆ. (೮೩). ಸಾರಾಂಶ ಗೂಢಚಾರರನ್ನು ಎಲ್ಲಕಡೆಗೂ ಕಳುಹಿಸಿ ಯುಧಿಷ್ಠಿರನ ರಾಜಸೂಯ ಯಜ್ಞಕ್ಕೆ ಹೋಗಬೇಕೆಂದು ನನ್ನ ಅಭಿಪ್ರಾಯವದೆ; ಉಪೋದ್ಘಾತದ ಹೊರತು ಶಾಸ್ತ್ರಾರಂಭವು ಹ್ಯಾಗೆ ಶೋಭಿಸುವದಿಲ್ಲವೋ ಹಾಗೆಯೇ ಗೂಢಚಾರರ ಹೊರತು ರಾಜನೀತಿಯು ಶೋಭಿಸುವದಿಲ್ಲ.

ಇಷ್ಟಲ್ಲ ವಿವಿಧಜ್ಞಾನವೂ ಕಾವ್ಯಜ್ಞಾನವೂ ಮಾಘನಲ್ಲಿ ಇದ್ದಮೇಲೆ ಅವನಿಗೆ ಚಿಕ್ಕಂದಿನಲ್ಲಿ ದೊಡ್ಡ ದೊಡ್ಡ ವಿದ್ವಾಂಸರಿಂದ ಶಿಕ್ಷಣವು ದೊರೆತಿರಲಿಕ್ಕೇ ಬೇಕೆಂದು ಅನ್ನಬೇಕಾಗುತ್ತದೆ. ಹೀಗೆ ಅನ್ನಲಿಕ್ಕೆ ಇನ್ನೂ ಒಂದು ಕಾರಣವೇನಂದರೆ:—ಮಾಘನೂ ಭೋಜರಾಜನೂ ಸಮಕಾಲೀನರಾಗಿದ್ದರೆಂದು ಭೋಜಪ್ರಬಂಧದಿಂದಲೂ ಕವಿಚರಿತ್ರದಿಂದಲೂ ತಿಳಿದು ಬರುತ್ತದೆ. ಭೋಜರಾಜನಿಗೆ ಬಾಲ್ಯದಲ್ಲಿ ಅವನಕಕ್ಕನಾದ ಮುಂಜರಾಜನು ಅನೇಕ ವಿದ್ವಾಂಸರಿಂದ ಶಿಕ್ಷಣ ಕೊಡಿಸಿದನೆಂದು ಭೋಜಪ್ರಬಂಧದಲ್ಲಿ ಉಲ್ಲೇಖವದೆ. ಮುಂಜರಾಜನು ಬಹು ವಿದ್ಯಾಪ್ರಿಯನೂ ದಾನಶೂರನೂ ಇದ್ದುದರಿಂದ ಆ ಕಾಲದಲ್ಲಿ ಕವಿಗಳಿಗೂ ವಿದ್ವಾಂಸರಿಗೂ ಬಹು ಮರ್ಯಾದೆಯಿ

---

೭೪ ಸ್ರಗ್ಧರಾಸೀಮಪಿ ಘನಾಮನಲ್ಪಗುಣಕಲ್ಪಿತಾಮ್ ॥
ಪ್ರಸಾರಯನ್ತಿ ಕುಶಲಾಶ್ಚಿತ್ರಾಂ ವಾಚಂ ಪಟೀಮಿವ ॥

೮೩ ತೇಜಃ ಕ್ಷಮಾವಾನೈಕಾನ್ತಂ ಕಾಲಜ್ಞಸ್ಯ ಮಹೀಪತೇಃ ॥
ನೈಕಮೋಜಃ ಪ್ರಸಾದೋವಾ ರಸಭಾವವಿದಃ ಕವೇಃ ॥

೮೫ ನಾಲಂಬತೇ ದೈಷ್ಟಿಕತಾಂ ನ ನಿಷೀದತಿ ಪೌರುಷೇ ॥
ಶಬ್ದಾರ್ಥೌ ಸತ್ಕವಿರಿವ ದ್ವಯಂ ವಿದ್ವಾನಪೇಕ್ಷತೇ ॥

ತ್ತು. ಇದೇ ಕಾಲಕ್ಕೆ ಮುಂಜರಾಜನ ರಾಜಧಾನಿಯಾದ ಧಾರಾ ನಗರದ (ಮಾಳವಾ ಪ್ರಾಂತ) ನೆರೆಯಲ್ಲಿಯೇ ಇದ್ದು ಶ್ರೀಮಾಲಪುರದಲ್ಲಿ (ಗುಜರಾಥ ಪ್ರಾಂತ) ಸರ್ವಾಶ್ರಯನು ಇರುತ್ತಿದ್ದನು. ಇವನಾದರೂ ದಯಾಳುವೂ ಸುವಿಚಾರಿಯೂ ಆಗಿದ್ದನು. ಆದುದರಿಂದ ಆಗಿನ ಪರಿಸ್ಥಿತಿಯಲ್ಲಿ ಮಾಘನಿಗಾದರೂ ದೊಡ್ಡ ದೊಡ್ಡ ವಿದ್ವಾಂಸರಿಂದ ಶಿಕ್ಷಣವು ಕೊಡಲ್ಪಟ್ಟಿತ್ತೆಂದು ಹೇಳಲು ಅವಕಾಶವಿದೆ.

ಈ ಮಾಘಕವಿಯು ಸ್ವತಃ ಶ್ರೀಮಂತನಿದ್ದುದರಿಂದ ಯಾವ ಅರಸನ ಆಶ್ರಯವನ್ನೂ ಅವಲಂಬಿಸಿರಲಿಲ್ಲ; ಇಷ್ಟೇ ಅಲ್ಲ, ತಾನೇ ಸ್ವಂತವಾಗಿ ವಿದ್ವಾಂಸರಾದ ಕವಿಗಳಿಗೆ ಸಂಭಾವನೆಯನ್ನು ಕೊಡುತ್ತಿದ್ದನು. ಈ ಮಾಘ ಪಂಡಿತನ ಇಡೀ ಆಯುಷ್ಯವು ಜ್ಞಾನಾರ್ಜನೆ ಹಾಗು ಸಂಭಾವನೆಯ ರೂಪದಿಂದ ಸತ್ಪಾತ್ರದಲ್ಲಿ ದಾನಧರ್ಮ ಇವೆರಡೇ ಕೃತ್ಯಗಳಲ್ಲಿ ವೆಚ್ಚವಾಯಿತು! ಕೇವಲ ಪರೋಪಕಾರಕೃತ್ಯಗಳಲ್ಲಿಯೇ ಇವನ ಸಕಲ ಸಂಪತ್ತೂ ಅರ್ಪಿಸಲ್ಪಟ್ಟಿತು!! ಕಿಂಬಹುನಾ ಇವನ ಅಸ್ತಿತ್ವವೇ ಸತ್ಕೃತ್ಯಗಳ ಸಲುವಾಗಿ ಇತ್ತು!!! ಇದು ಸ್ತುತಿವಾಕ್ಯವಾಗಿರದೆ ಇದು ಗರ್ವೋಕ್ತಿಯಾಗಿರದೆ ಸ್ವಭಾವೋಕ್ತಿಯಾಗಿದೆ; ಇದು ಆತ್ಮಸ್ತುತಿಯಾಗಿರದೆ, ಆತ್ಮಸ್ವರೂಪವಾಗಿದೆ.

ಭೋಜರಾಜನಾದರೂ ತದ್ರೂಪ ಮಾಘನಂತೆಯೇ ಇದ್ದನು. ಒಮ್ಮೆ ಈ ಭೋಜನು ತನ್ನ ರಾಜಧಾನಿಯಾದ ಧಾರಾನಗರಕ್ಕೆ ಮಾಘಪಂಡಿತನನ್ನು ಬಹುಮರ್ಯಾದೆಯಿಂದ ಕರದೊಯ್ದು ಮೇಜವಾನಿ ಮಾಡಿಸಿದನು. ಮುಂದೆ ಈ ಮಾಘಪಂಡಿತನಾದರೂ ತನ್ನ ಗ್ರಾಮಕ್ಕೆ (ಶ್ರೀಮಾಲಪುರಕ್ಕೆ) ಭೋಜರಾಜನನ್ನು ಕರಿಸಿದನು. ಆಗ ಸಾವಿರಾರು ಜನರ ಪರಿವಾರ ಸಹಿತವಾಗಿ ಅವನು ಶ್ರೀಮಾಲಪುರಕ್ಕೆ ಬಂದನು. ಈ ಪರಿವಾರದ ಜನರು ಇಳಿದುಕೊಳ್ಳಲಿಕ್ಕೆ ಮಾಘನ ಅಶ್ವಶಾಲೆಯೊಂದೇ ಸಾಕಾಯಿತು! ಇದರ ಮೇಲಿಂದ ಮಾಘಪಂಡಿತನ ಐಶ್ವರ್ಯವು ಎಷ್ಟಿತ್ತೆಂಬುವದು ನಮ್ಮ ವಾಚಕರ ಲಕ್ಷದಲ್ಲಿ ಬಂದಿರಬಹುದು. ಅರಸನಿಗೆ ತನ್ನ ಸ್ವಂತ ವಾಡೇದಲ್ಲಿಯೇ ಇಳಿದುಕೊಳ್ಳಲಿಕ್ಕೆ ಸ್ಥಳಕೊಟ್ಟಿದ್ದನು. ಅಲ್ಲಿ ಅನೇಕತರದ ಹೂಗಿಡಗಳನ್ನೂ ಫಲವೃಕ್ಷಗಳನ್ನೂ ಸುಂದರವಾಗಿ ರಚಿಸಲ್ಪಟ್ಟ ಮಾರ್ಗಗಳನ್ನೂ ನೋಡಿ ಅರಸನು ಬೆರಗಾದನು! ಊಟದ ವ್ಯವಸ್ಥೆಯಾದರೂ ಸರ್ವೋತ್ಕೃಷ್ಟವಾಗಿತ್ತು, ಎಲ್ಲ ಋತುಗಳೊಳಗಿನ ಹಣ್ಣು ಹಂಪಲಗಳೂ ಪದಾರ್ಥಗಳೂ ಅದರಲ್ಲಿ ಇದ್ದವು!!

ನಮ್ಮ ಮಾಘಪಂಡಿತನು ಇಷ್ಟೊಂದು ರಾಜ್ಯೈಶ್ವರ್ಯಸಂಪನ್ನನಾಗಿದ್ದುದಲ್ಲದೆ ಅತಿ ಉದಾರನೂ ಆಗಿದ್ದನೆಂದು ಹಿಂದೆ ಹೇಳಿದ್ದೇವಷ್ಟೇ. ಈ ದಾತೃತ್ವದ ಮೂಲಕ ಮುಂದೆ ವಾರ್ಧಿಕ್ಯದಲ್ಲಿ ಈ ಮಹಾತ್ಮನಿಗೆ ಬಡತನವು ಪ್ರಾಪ್ತವಾಯಿತು! ಆದರೂ ಅಂಥಸ್ಥಿತಿಯಲ್ಲಿಯೂ ತನ್ನ ಪರೋಪಕಾರವೃತ್ತಿಯನ್ನು ಬಿಟ್ಟಿರಲಿಲ್ಲ! ಕಟ್ಟಕಡೆಗೆ

ಅನ್ನಕ್ಕೆ ಸಹಗತಿಯಿಲ್ಲದ ಹಾಗಾಯಿತು! ಆಗ ಒಂದುದಿವಸ ತನ್ನ ಪತ್ನಿಯನ್ನು ಕರಕೊಂಡು ಧಾರಾನಗರಕ್ಕೆ ತೆರಳಿದನು. ಬಳಿಕ ಆ ಪಟ್ಟಣದ ಸಮೀಪಕ್ಕೆ ಬಂದ ಕೂಡಲೆ ಒಂದು ತೋಟದಲ್ಲಿಳಿದುಕೊಂಡು, ಪತ್ನಿಯ ಕೈಯಲ್ಲಿ ಒಂದು ಪತ್ರವನ್ನು ಕೊಟ್ಟು ಭೋಜರಾಜನ ಕಡೆಗೆ ಕಳುಹಿಸಿದನು. ಮಾಘಪತ್ನಿಯು ರಾಜದ್ವಾರದಲ್ಲಿ ಬಂದು ನಿಂತಳು. ನಂತರ ದ್ವಾರಪಾಲಕನು ಆಕೆಯ ಸಂಗತಿಯನ್ನೆಲ್ಲ ಕೇಳಿಕೊಂಡು ಅರಸನ ಹತ್ತರ ಹೋಗಿ ತಿಳಿಸಿದ್ದೇನಂದರೆ:—" ಮಹಾರಾಜ! ಗುಜರಾಥದಿಂದ ಮಾಘಪಂಡಿತರು ಬಂದು ಪಟ್ಟಣದ ಹೊರಗೆ ಇಳಿದುಕೊಂಡಿದ್ದಾರೆ. ಮತ್ತು ಅವರು ತಮ್ಮ ಪತ್ನಿಯನ್ನು ರಾಜದ್ವಾರಕ್ಕೆ ಕಳುಹಿಸಿದ್ದಾರೆ. " ಆಗ ಅರಸನು ' ಒಳಗೆ ಕರೆದುಕೊಂಡುಬಾ ' ಎಂದು ಆಜ್ಞೆ ಮಾಡಿದನು. ಬಳಿಕ ಮಾಘಪತ್ನಿಯು ಭೋಜರಾಜನ ಓಲಗದ ಸಮೀಪಕ್ಕೆ ಬಂದು, ಪತಿಯ ಪತ್ರವನ್ನು ಅರಸನಿಗೆಕೊಟ್ಟಳು. ಭೋಜರಾಜನು ಆ ಪತ್ರವನ್ನು ತೆಗೆದುಕೊಂಡು ಓದಲಾರಂಭಿಸಿದನು. ಅದರಲ್ಲಿ ಮಾಘಕವಿಯು ಪ್ರಭಾತವರ್ಣನದ ಮಿಷದಿಂದ ಒಂದು ಪದ್ಯದಲ್ಲಿ ತನ್ನ ದೀನಸ್ಥಿತಿಯನ್ನು ಸೂಚಿಸಿದ್ದನು. ಆ ಪದ್ಯವು ಯಾವದೆಂದರೆ:—

(ಮಾಲಿನೀ)—ಕುಮುದವನಮಪಶ್ರೀ ಶ್ರೀಮದಂ ಭೋಜಖಣ್ಡಮ್ ॥
ತ್ಯಜತಿ ಮುದಮುಲೂಕಃ ಪ್ರೀತಿಮಾಂಶ್ಚಕ್ರವಾಕಃ ॥
ಉದಯಮಹಿಮರಶ್ಮಿರ್ಯಾತಿ ಶೀತಾಂಶುರಸ್ತಮ್ ॥
ಹತವಿಧಿನಿಹತಾನಾಂ ಹಾ ವಿಚಿತ್ರೋ ವಿಪಾಕಃ ॥ ೧ ॥

ಅರ್ಥ—(" ಪ್ರಭಾತಕಾಲದ ವರ್ಣನೆಯು) ಕುಮುದವನವು (ನೈದಿಲೆಗಳ ಸಮೂಹವು) ಮ್ಲಾನವಾದುದರಿಂದ ನಿಸ್ತೇಜವಾಗಿ ಕಾಣಿಸುತ್ತಿರುತ್ತದೆ. ಹಾಗು ಸೂರ್ಯಕಮಲಗಳು ಪ್ರಫುಲ್ಲಿತವಾದುದರಿಂದ (ಅರಳಿದ್ದರಿಂದ) ತೇಜಸ್ವಿಗಳಾಗಿ ತೋರುತ್ತಿರುತ್ತವೆ. ಗೂಗೆಯ ಆನಂದವು ಅಡಗುತ್ತಲಿದೆ. ಚಕ್ರವಾಕಪಕ್ಷಿಯ ಆನಂದವು ಹೆಚ್ಚಾಗುತ್ತಿಲಿದೆ. ಸೂರ್ಯನು ಉದಯನಾಗಲಾರಂಭಿಸಿದ್ದಾನೆ. ಚಂದ್ರನು ಅಸ್ತನಾಗಲಾರಂಭಿಸಿದ್ದಾನೆ. (ತಾತ್ಪರ್ಯ) ಹತಭಾಗ್ಯರ ಪರಿಣಾಮವು ಹೀಗೆ ವಿಚಿತ್ರವಾಗುತ್ತದೆ. "

ಅರಸನು ಈ ಆಶ್ಚರ್ಯಕರವಾದ ಪ್ರಭಾತವರ್ಣನವನ್ನು ನೋಡಿದ ಕೂಡಲೆ ಸಂತುಷ್ಟನಾಗಿ ಮಾಘಪತ್ನಿಗೆ ಮೂರುಲಕ್ಷ ರೂವಾಯಿಗಳನ್ನು ಕೊಟ್ಟನು; ಹಾಗು ಹೇಳಿದ್ದೇನಂದರೆ:—" ಮಾತೋತ್ರೀ! ಇವನ್ನು ತಮಗೆ ಭೋಜನದ ಸಲುವಾಗಿ ಕೊಟ್ಟಿರುತ್ತೇನೆ. ನಾನು ನಾಳೆ ಪ್ರಾತಃಕಾಲಕ್ಕೆ ಮಾಘಪಂಡಿತರ ಬಳಿಗೆ ಬಂದು ನಮಸ್ಕಾರ ಮಾಡಿ ಅವರ ಇಚ್ಛೆಯನ್ನು ಪೂರ್ಣಮಾಡುವೆನು. " ಮಾಘಪತ್ನಿಯು ಆ ದ್ರವ್ಯವನ್ನು ತೆಗೆದುಕೊಂಡು ಹೋಗುತ್ತಿರಲು, ಯಾಚಕರ ಮುಖದಿಂದ ತನ್ನ

ಪತಿಯು ಶರಚ್ಚಂದ್ರ ಕಿರಣಗಳಂತೆ ನಿರ್ಮಲವಾದ ಗುಣಗಳನ್ನು ಕೇಳಿ, ಆಕೆಯು ಆ ದ್ರವ್ಯವನ್ನೆಲ್ಲ ಬಹು ಸಂತೋಷದಿಂದ ಆ ಯಾಚಕರಿಗೆ ಕೊಟ್ಟಳು. ಮತ್ತು ಹಾಗೆಯೇ ಬರೆಗೈಯಿಂದ ಪತಿಯಕಡೆಗೆ ಹೋಗಿ ಹೀಗೆ ಅಂದಳು. "ಹೇ ಸ್ವಾಮಿ! ಭೋಜರಾಜನು ನನಗೆ ಬಹು ಮರ್ಯಾದೆ ಮಾಡಿದನು. ಇದಲ್ಲದೆ ದ್ರವ್ಯವನ್ನಾದರೂ ಬಹಳ (೩೦೦೦೦೦ ರೂ.) ಕೊಟ್ಟನು. ಅದರೆ ಯಾಚಕರ ಮುಖದಿಂದ ತಮ್ಮ ಗುಣಗಳನ್ನು ಕೇಳಿ, ನಾನು ಆ ದ್ರವ್ಯವನ್ನೆಲ್ಲ ಅವರಿಗೆ ಕೊಟ್ಟಿನು." ಇದನ್ನು ಕೇಳಿ ಮಾಘನು ಪತ್ನಿಯನ್ನು ಕುರಿತು—' ಅನಂದದಿಂದ) ಪ್ರಿಯೇ! ಒಳ್ಳೇದು ಮಾಡಿದೆ; ಅದರೆ ಈ ಅನ್ಯ ಯಾಚಕರು ಬರುತ್ತಿರುತ್ತಾರೆ, ಇವರಿಗೆ ಏನು ಕೊಡಬೇಕು?' ಎಂದು ಉದ್ಗಾರಗಳನ್ನು ತೆಗೆದನು!

ಹೀಗೆ ತಮ್ಮ ತಮ್ಮೊಳಗೆ ಈ ದಂಪತಿಗಳು ಮಾತಾಡುತ್ತಿರಲು ಅಲ್ಲಿಗೆ ಬಂದ ಒಬ್ಬ ಯಾಚಕನು ಕೇವಲ ವಸ್ತ್ರಾವಶೇಷನಾದಂಥ ಮಾಘಪಂಡಿತನನ್ನು ನೋಡಿ ಅನ್ನುತ್ತಾನೆ:—

आश्वास्य पर्वतकुलं तपनोष्णतप्तमुद्दामदावविधुराणि च काननानि ॥
नाना नदीनदशतानि च पूरयित्वा रिक्तोसियज्जलदसैव तवोत्तमश्रीः ॥१॥

"ಎಲೈ ಮೋಡವೇ! ಸೂರ್ಯನ ಉಷ್ಣತೆಯಿಂದ ಸಂತಪ್ತವಾದಂಥ ಪರ್ವತಗಳ ಸಮುದಾಯವನ್ನೂ ಉಗ್ರವಾದ ದಾವಾನಲದಿಂದ ಪೀಡಿಸಲ್ಪಟ್ಟ ಅರಣ್ಯಗಳನ್ನೂ ಶಾಂತಗೊಳಿಸಿ, ನೂರಾರು ನದೀನದಗಳಿಗೆ ನೀರನ್ನು ಪೂರಯಿಸಿ, ನೀನು ಬರೆದಾಗಿರುವದೇ ನಿನ್ನ ಶ್ರೇಷ್ಠವಾದ ಐಶ್ವರ್ಯವು!"

ಇದನ್ನು ಕೇಳಿದ ಬಳಿಕ ಮಾಘಪಂಡಿತನು ತನ್ನ ಪತ್ನಿಗೆ ಅಂದದ್ದೇನೆಂದರೆ—

अर्थो न सन्ति न च मुंचति मां दुराशा ।
त्यागे रतिं वहति दुर्ललितं मनो मे ॥
याचा च लाघवकरी स्ववधे च पापम् ॥
प्राणाः स्वयं व्रजत किं परिदेवितेन ॥ १ ॥

दारिद्र्यानलसन्तापः शांतः सन्तोषवारिणा ॥
याचकाशाविघातोत्थदाहः केनोपशाम्यति ॥ २ ॥

"(೧) ದ್ರವ್ಯವು ಇಲ್ಲ, ದುರಾಶೆಯು ನನ್ನನ್ನು ಬಿಡವಲ್ಲದು! ನನ್ನ ಅಶಿಕ್ಷಿತವಾದ ಮನಸ್ಸು ತ್ಯಾಗದಲ್ಲಿ ಪ್ರೀತಿಯುಳ್ಳದ್ದಾಗಿ ಬಿಟ್ಟಿದೆ! ಯಾಚನೆಯಾದರೋ ಕೀಳುತನವನ್ನು ತರತಕ್ಕಂಥಾದ್ದು, ಆತ್ಮಹತ್ಯವಂತೂ ಪಾಪಕೃತ್ಯವು. ಆದುದರಿಂದ ಪ್ರಾಣವೇ! ನಿನೇ ಸ್ವಂತವಾಗಿ ಹೋಗು! ಸುಮ್ಮನೆ ನನಗೆ ವ್ಯಥಾಕೊಡುವದರಲ್ಲಿ

ಏನು ಅರ್ಥವದೆ? (೨) ದಾರಿದ್ರ್ಯವೆಂಬ ಅಗ್ನಿಯಿಂದ ಹುಟ್ಟಿದ ಸಂತಾಪವು, ಸಂತೋಷವೆಂಬ ನೀರಿನಿಂದ ಶಾಂತವಾಗುತ್ತದೆ. ಆದರೆ ಯಾಚಕರಿಗೆ ಅಶಾಭಂಗ ಮಾಡಿದ್ದರಿಂದುಂಟಾದ ಅಂತರ್ದಾಹವು ಯಾತರಿಂದ ಶಾಂತವಾಗುತ್ತದೆ?"

ಬಳಿಕ ಮಾಘಪಂಡಿತನ ಆ ವೇಳೆಯ ಆ ಸ್ಥಿತಿಯನ್ನು ನೋಡಿ ಸರ್ವ ಯಾಚಕರು ತಮ್ಮ ತಮ್ಮ ಸ್ಥಾನಗಳಗೆ ಹೋಗಹತ್ತಿದರು. ಅವರು ಹೋಗುತ್ತಿರಲು ಮಾಘಪಂಡಿತನು ಅನ್ನುತ್ತಾನೆಃ—

व्रजत व्रजत प्राणा अर्थिभिर्व्यर्थतां गतैः ।
पश्चादपि च गंतव्यं क्व सोर्थः पुनरीदृशः ॥ १ ॥

"ಪ್ರಾಣವೇ! ಹೋಗು, ನಿರಾಶೆಯಾಗಿ ಯಾಚಕರು ಹೋಗುತ್ತಿರುತ್ತಾರೆ; ಅವರ ಸಂಗಡ ನೀನೂ ದಾರೀ ಹಿಡಿ. ಹಿಂದುಗಡೆಯಾದರೂ ಹೋಗಲಿಕ್ಕೆ ಬೇಕು. ಇಂಥ ಸುಸಮಯವು ಯಾವಾಗ್ಗೆ ದೊರೆಯುವದು!"

ಹೀಗೆ ಉದ್ಗಾರಗಳನ್ನು ತೆಗೆಯುತ್ತ ತೆಗೆಯುತ್ತಲೇ ಮಾಘಪಂಡಿತನು ಪರಲೋಕವಾಸಿಯಾದನು! ಧನ್ಯ! ಧನ್ಯ! ಮಾಘಪಂಡಿತಾ! ನೀನೇ ಧನ್ಯ!! ನೀನೇ ಚಿರಂಜೀವಿ!!! ಈ ನಿನ್ನ ಉದಾತ್ತಮರಣದಿಂದ ಒಂದು ದಿವ್ಯ ತೇಜಸ್ಸು ಹೊರಬಿದ್ದಿರುತ್ತದೆ! ಆ ಅದ್ವಿತೀಯವಾಥ ನೈತಿಕ ತೇಜಸ್ಸು, ಸರ್ವ ಜಗತ್ತನ್ನೂ ಪ್ರಕಾಶಿಸುತ್ತ ಅನೇಕ ಮಾಘರನ್ನು ಹುಟ್ಟಿಸುತ್ತಲಿದೆ! ನೈತಿಕ ಶಕ್ತಿಯು ಅವಿನಾಶಿಯಾದುದರಿಂದ ಈ ನಿನ್ನ ತೇಜಸ್ಸು ಅನಂತಕಾಲದ ವರೆಗೂ ಹೀಗೆಯೇ ದೇದೀಪ್ಯಮಾನವಾಗಿ ಪ್ರಕಾಶಿಸುತ್ತಲಿರುವದು!! ಹಾಗು ಸರ್ವರಲ್ಲಿ ಉದಾತ್ತವಿಚಾರಗಳನ್ನು ಎಚ್ಚರಗೊಳಿಸುತ್ತಲಿರುವದು!!!

ತನ್ನ ಪತಿಯು ಪ್ರಾಣೋತ್ಕ್ರಮಣವಾದುದನ್ನು ನೋಡಿ ಮಾಘಪತ್ನಿಯು ಅನ್ನುತ್ತಾಳೆ:—

सेवन्ते स्म गृहं यस्य वासवद् भूभुजः सदा ।
स स्वभार्योसहायाऽयं म्रियते माघपंडितः ॥ १ ॥

"ಯಾರ ಮನೆಗೆ ಅರಸರು ತಮ್ಮ ಮನೆಯಂತೆ ತಿಳಿದುಕೊಂಡು ಯಾವಾಗಲೂ ಬರುತ್ತಿದ್ದರೋ ಅಂಥಾ ಮಾಘಪಂಡಿತನು ಸ್ವಭಾರ್ಯೆಯ ಸಹಚರ ಮರಣ ಹೊಂದುತ್ತಾನೆ."

ಮಾಘಕವಿಯು ಪರಲೋಕವಾಸಿಯಾದ ಸುದ್ದಿಯನ್ನು ಕೇಳಿದೊಡನೆಯೇ ಭೋಜರಾಜನು ನೂರಾರು ಬ್ರಾಹ್ಮಣರನ್ನು ಸಂಗಡ ಕರಕೊಂಡು ಆಗಿಂದಾಗ್ಗೇ

ರಾತ್ರ್ಯೋರಾತ್ರಿ ಅಲ್ಲಿಗೆ ಬಂದನು. ಆಗ ಮಾಘಪತ್ನಿಯು ಅರಸನನ್ನು ನೋಡಿ ಅಂದ ದ್ದೇನಂದರೆ:—'ಹೇ ರಾಜಾ! ಪಂಡಿತರು ನಿಮ್ಮ ದೇಶದಲ್ಲಿ ಬಂದು ಪರಲೋಕ ವಾಸಿಯಾಗಿದ್ದಾರೆ. ಆದುದರಿಂದ ನೀವೇ ಅವರ ಪಾರಲೌಕಿಕ ಸರ್ವ ಕೃತ್ಯಗಳನ್ನು ಉತ್ತಮರೀತಿಯಿಂದ ಮಾಡಬೇಕು.' ಅದೇ ಪ್ರಕಾರ ಅರಸನು ಆ ದೇಹಕ್ಕೆ ನರ್ಮದಾ ದಂಡೆಯಲ್ಲಿ ಯಥಾವಿಧಿಯಾಗಿ ಅಂತ್ಯ ಸಂಸ್ಕಾರವನ್ನು ಮಾಡಿಸಿದನು. ಆಗ ಮಾಘಪತ್ನಿಯು ಅಲ್ಲಿಯೇ ಅಗ್ನಿಪ್ರವೇಶಮಾಡಿ ಪತಿಲೋಕಕ್ಕೆ ಹೋದಳು. ಈ ಪುಣ್ಯಾತ್ಮಳು ಕೊನೆಯವರೆಗೂ ಪತಿಸೇವೆಯಲ್ಲಿ ತತ್ಪರಳಾಗಿದ್ದಳು! ಮುಂದೆ ಭೋಜರಾಜನು ಪುತ್ರನಂತೆ ಆ ದಂಪತಿಗಳ ಸರ್ವ ಪಾರಲೌಕಿಕ ಕೃತ್ಯಗಳನ್ನು ಮಾಡಿದನು. ಹಾಗು ಮಾಘಪಂಡಿತನ ಮರಣದಿಂದ ಪರಮ ದುಃಖಿತನಾಗಿ ಬಹು ಶೋಕಮಾಡಿದನು! ಸಜ್ಜನರ ಯೋಗ್ಯತೆಯನ್ನು ಸಜ್ಜನರೇ ಬಲ್ಲರು!!

ಭರತಖಂಡಕ್ಕೆ ಇಷ್ಟೇ ಅಲ್ಲ, ಇಡೀ ಮನುಷ್ಯಜಾತಿಗೆ ಅನುಕರಣೀಯವಾದಂಥ ಈ ಮಹದ್ವಿಭೂತಿಯ ಚರಿತ್ರವು ಇಲ್ಲಿಗೆ ಮುಗಿಯಿತು. ಮಾಘಪಂಡಿತನು 'ಅಳಿವುದು ಕಾಯವು ಉಳಿವುದಲ್ಲದೆ ಕೀರ್ತಿ ಇಳೆಯೊಳು ಎಚ್ಚರಿಕೆ' ಎಂದ ಉಕ್ತಿಯನ್ನು ತನ್ನ ಚರಿತ್ರದಿಂದ ಸಾರ್ಥಮಾಡಿದನು! ಇವನ ತಂದೆಯಾದ ಪುಣ್ಯವಂತ ಸರ್ವಾಶ್ರಯಸು, ತಾನು ಅತ್ಯಂತ ಐಶ್ವರ್ಯ ಸಂಪನ್ನನಾಗಿದ್ದರೂ ಕೂಡ ಈಗಿನ ಮೂರ್ಖ ಶ್ರೀಮಂತರಂತೆ ವಿದ್ಯೆಯನು ದುರ್ಲಕ್ಷಿಸದೆ, ತನ್ನ ಕೋಮಲ ಹೃದಯದ ಬಾಲಕನಿಗೆ ಉತ್ತಮೋತ್ತಮ ವಿದ್ವಾಂಸರಿಂದ ಶಿಕ್ಷಣ ಕೊಡಿಸಿದನು. ಈ ಶಿಕ್ಷಣದ ಪಕ್ವಫಲವು, ಮಾಘಕಾವ್ಯದ ರೂಪದಿಂದ ಹಿಂದುಸ್ಥಾನದಲ್ಲಷ್ಟೇ ಅಲ್ಲ; ಜರ್ಮನಿ, ಇಂಗ್ಲಂಡ, ಅಮೇರಿಕಾ, ಜಪಾನ ಮೊದಲಾದ ಯಾವ ಯಾವ ಸುಧಾರಿಸಿದ ರಾಷ್ಟ್ರಗಳಲ್ಲಿ ಗಿರ್ವಾಣಭಾಷೆಯ ಘೋಷವು ಕೇಳಬರುತ್ತದೋ ಆ ಆ ದೇಶಗಳಲ್ಲೆ ಸಂಸ್ಕೃತ ಪಂಡಿತರನ್ನು ಸಂತೋಷಪಡಿಸುತ್ತಲಿದೆ! ಈ ಮಧುರ ಫಲದಿಂದ ಸರ್ವಾಶ್ರಯನ ಕಿಂಬಹುನಾ ಇಡೀ ಮಾಘವಂಶದ ಸುಧವಲವಾದ ಕೀರ್ತಿಯು ಅಚಂದ್ರಾರ್ಕವಾಗಿ ಭೂಮಂಡಲದ ತುಂಬಾ ಬೆಳಗುತ್ತಿರುವದು!!

ನಮ್ಮ ಆರ್ಯಭೂಮಿಯಲ್ಲಿರುವ ಅನಿರ್ವಚನೀಯವಾದ ಸದ್ಗುಣವೆಂದರೆ ಸ್ತ್ರೀಯರ ಪಾತಿವ್ರತ್ಯವೇ ಸೈ! ಭರತಖಂಡದ ಪ್ರಾಚೀನ ಇತಿಹಾಸದ ದೊಡ್ಡಭಾಗವು ನಮ್ಮ ಸುಶೀಲ ಸ್ತ್ರೀಯರ ಪಾತಿವ್ರತ್ಯದ ವರ್ಣನೆಯಿಂದ ತುಂಬಿ ಹೋಗಿದೆ!!! ಆದುದರಿಂದ ಈ ಪವಿತ್ರ ಭೂಮಿಯಲ್ಲಿ ಜನಿಸಿದ ನಮ್ಮ ಮಾಘಪತ್ನಿಯಾದರೂ ಮಹಾ ಪತಿವ್ರತೆಯಾಗಿದ್ದಳೆಂಬ ಸಂಗತಿಯು ಸಹಜವಾಗಿದೆ.

ದೇವರು ಭಕ್ತರ ಸೇವಕನಾಗಿರುವಂತೆ ನಮ್ಮ ಪ್ರಾಚೀನ ಅರಸರು ಪ್ರಜೆಗಳ ಸೇವಕರಾಗಿದ್ದರೆಂಬುವದು, ವಿದ್ಯಾಪ್ರಿಯನೂ ನೀತಿನಿಪುಣನೂ ಆದ ಭೋಜರಾಜನ ಆಚರಣೆಯಿಂದ ನಮ್ಮ ಸೂಜ್ಞ ವಾಚಕರಿಗೆ ಆಗಲೇ ತಿಳಿದು ಹೋಗಿರಬಹುದು.

ವಿಪತ್ಕಾಲದಲ್ಲಿ ಭೋಜರಾಜನಿಂದ ದೊರಕಿಸಿದ ೩ ಲಕ್ಷ ರೂಪಾಯಿಗಳನ್ನು ಪತ್ನಿಯು ಯಾಚಕರಿಗೆ ದಾನಮಾಡಿ ಪತಿಗೆ ತಿಳಿಸಿದಳು; ಆಗ್ಗೆ ಯಾವ ಪುಣ್ಯ ಪುರುಷನು, ಸತಿಗೆ ಒಂದೂ ದೋಷವನ್ನು ಕೊಡದೆ, ಮತ್ತಿಷ್ಟು ಗೌರವಿಸಿ— 'ಇನ್ನಿತರ ಯಾಚಕರಿಗೆ ಏನು ಕೊಡಬೇಕು?' ಎಂಬದೊಂದೇ ಆಪತ್ತನ್ನು ಪ್ರಕಟಮಾಡಿದನೋ ಹಾಗು ಆಗ ಆ ಯಾಚಕರು ವಿಮುಖರಾಗಿ ಹೋಗುತ್ತಿರುವದನ್ನು ನೋಡಿ, ಯಾವ ದಯಾರ್ದ್ರ ಅಂತಃಕರಣಿಗೆ ಯಾಚಕರ ಆಶಾಭಂಗದಿಂದುಂಟಾದ ಅಂತರ್ದಾಹದಿಂದ ಬೆಂದಾರ್ಯವೃತ್ತಿಯಲ್ಲಿಯೇ ಪ್ರಾಣವಿಸರ್ಜನವಾಯಿತೋ ಆ ಸತ್ಪುರುಷನನ್ನು ಎಷ್ಟು ಹೊಗಳಿದರೂ ತೀರದು. ಇಂತಹ ಸತ್ಪುರುಷರಿಗೆ ಜನ್ಮಕೊಟ್ಟ ನಮ್ಮಾರ್ಯಭೂಮಾತೆಗೆ ಸಾಷ್ಟಾಂಗಪ್ರಣಾಮಮಾಡಿ ಈ ಲೆಕ್ಕಣಿಕೆಯನ್ನು ಕೆಳಗಿಡುತ್ತೇನೆ.

ಶ್ರೀ ಕೃಷ್ಣಾರ್ಪಣಮಸ್ತು.

ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ಸಮಾರಂಭವು.

ಸಾಂಪ್ರದಾಯದಂತೆ ಈ ವರ್ಷದ ಸಮಾಗಂಭವು ತಾ॥ ೧೧ನೇ ಜೂನ ದಿವಸ ಪ್ರಾರಂಭವಾಗಿ ೨೩ನೇ ತಾರೀಖಿನ ಸಾಯಂಕಾಲದವರೆಗೆ ನಡೆಯಿತು. ೧೧ನೇ ತಾರೀಖಿನ ದಿವಸ ಪರೀಕ್ಷೆಗೆ ಬಂದ ವಿದ್ಯಾರ್ಥಿಗಳ ಪರೀಕ್ಷೆಯು ಆಯಾ ತರಗತಿಯಂತೆ ಾಯಿತು. ಸಂಘದ ಮಹಾಸಭೆಯು ಮರುದಿವಸ ಮುಂಜಾನೆ ೪ ಘಂಟೆಗೆ ಕೂಡಿ, ಸೆಕ್ರೆಟರಿಯವರಿಂದ ಕಳೆದ ವರ್ಷದ ರಿಪೋರ್ಟು ಓದಲ್ಪಟ್ಟಿತು. ರಿಪೋರ್ಟು ಪಾಸಾದ ಮೇಲೆ ಈ ವರ್ಷದ ಬಗ್ಗೆ ಕಾರ್ಯವಾಹಕ ಅಧಿಕಾರಿಗಳನ್ನು ಆರಿಸುವ ಕೆಲಸವಾಯಿತು. ಈ ಸಮಾರಂಭಕ್ಕೆ ಮೈಸೂರ ಸರಕಾರದವರು ದಯವಿಟ್ಟು ಮಿ॥ ಬಿ. ಸುಬ್ಬರಾವ ಬೀ. ಏ. ಆ॥ ಮಾಸ್ತರ ಮಹಾರಾಜಾ ಕಾಲೇಜ ಮೈಸೂರ ಮಿ॥ ಶೇಷಾಚಾರ್ಯ, ಹೆಡ್‌ಮಾಸ್ತರ ನಂಜಿನಗುಡ್ಡ ಸ್ಕೂಲ ಈ ಉಭಯತರನ್ನು ಕಳುಹಿಸಿದ್ದರು.

೨೩ನೇ ತಾರೀಖಿನ ದಿವಸ ಸಾಯಂಕಾಲದ ೩॥ ಘಂಟೆಗೆ ಮಿ॥ ಸುಬ್ಬರಾಯರು ಸುಶ್ರಾವ್ಯವಾದ ಉಪನ್ಯಾಸವನ್ನು ಮಾಡಿದರು. ಅಧ್ಯಕ್ಷಸ್ಥಾನವನ್ನು ಧಾರವಾಡದ ಕಲೆಕ್ಟರರಾದ ಮೆ॥ ಮೆಕಾನಕಿ ಸಾಹೇಬರು ಅಲಂಕರಿಸಿದ್ದರು. ಉತ್ತೀರ್ಣವಾದ ವಿದ್ಯಾರ್ಥಿಗಳಿಗೂ ಗ್ರಂಥಕರ್ತರಿಗೂ ಉತ್ತೇಜನಾರ್ಥವಾಗಿ ಇನಾಮುಗಳನ್ನು ಹಂಚುವ ಕೆಲಸವಾದ ಮೇಲೆ, ಬಾದಶಹರ ಹೆಸರಿನಿಂದಲೂ ಮೈಸೂರ ಸರಕಾರದ ಹೆಸರಿನಿಂದಲೂ ಮೆ॥ ಮೆಕಾನಕಿ ಸಾಹೇಬರ ಹೆಸರಿನಿಂದಲೂ ತ್ರಿವಾರ ಜಯಘೋಷವಾಗಿ ಸಭಾ ವಿಸರ್ಜನೆಯಾಯಿತು.

ವಾಗ್ಭೂಷಣ.

केयूरा न विभूषयंति पुरुषं हारा न चंद्रोज्वलाः ।
न स्नानं न विलेपनं न कुसुमं नालंकृता मूर्धजाः ॥
वाण्येका समलंकरोति पुरुषं या संस्कृता धार्यते ।
क्षीयंते खलु भूषणानि सततं वाग्भूषणम् भूषणम् ॥

(भर्तृहरिः)

ಸಂಪುಟ ೧೬.	ಜುಲೈ ೧೯೧೩.	ಸಂಚಿಕೆ ೧೨.

ಜಪಾನದೇಶದ ಬಾದಶಹರಾದ ಮುಟ್ಸುಹಿಟೋರವರ ಶೋಚನೀಯವಾದ ಮರಣವು.

ಸ್ವಲ್ಪಕಾಲದಿಂದೀಚೆಗೆ ಅಸ್ವಸ್ಥತೆಯಲ್ಲಿದ್ದ ಜಪಾನದ ಬಾದಶಹರಾದ ಮುಟ್ಸುಹಿಟೋರವರು ಜುಲೈತಿಂಗಳ ೞನೇ ತಾರೀಖಿನ ದಿವಸ ಪರಲೋಕವಾಸಿಗಳಾದರೆಂಬ ಹೃದಯದ್ರಾವಕವಾದ ವಾರ್ತೆಯನ್ನು ನಮ್ಮ ವಾಚಕರಿಗೆ ಅರುಹಲು ತುಂಬಾ ವಿಷಾದಿಸುತ್ತೇವೆ. ಬಾದಶಹರ ಮರಣದಿಂದ ಸುಧಾರಿಸಿದ ರಾಷ್ಟ್ರಗಳ ರಾಜಕರಣದಲ್ಲಿ ಹೆಚ್ಚಾಗಿ ಪ್ರಾವೀಣ್ಯವನ್ನು ಪಡೆದ ಮುತ್ಸದ್ದಿಗಳಲ್ಲಿ ಅಗ್ರಗಣ್ಯರಾದವರೊಬ್ಬರು ನಾಮಶೇಷರಾದರೆನ್ನಲಿಕ್ಕೆ ಅಡ್ಡಿತೋರುವದಿಲ್ಲ. ಇವರ ಮರಣದಿಂದ ತಮಗಾದ ಅತ್ಯಂತ ದುಃಖವನ್ನೂ ಹಾನಿಯನ್ನೂ ನಮ್ಮ ಬಾದಶಹರಾದ ೫ನೇ ಜಾರ್ಜರವರೂ ವ್ಹಾಯಿಸರಾಯರಾದ ಲಾರ್ಡಹಾರ್ಡಿಂಜರವರೂ ಜಪಾನದಯುವರಾಜರಿಗೂ ಅವರ ರಾಜಮನೆತನದವರಿಗೂ ವ್ಯಕ್ತಪಡಿಸಿರುವರು. ಇದರಂತೆ ಫ್ರಾನ್ಸ್, ಇಟಲಿ, ರಸಿಯಾ ಮೊದಲಾದ ಯುರೋಪೀಯ ರಾಷ್ಟ್ರಗಳ ಸರಕಾರದವರೂ ತಮಗಾದ ದುಃಖವನ್ನು ಆ ರಾಜಕುಟುಂಬಕ್ಕೆ ತಿಳಿಸಿರುವರು.

ಬಾದಶಹರಾದ ಮುಟ್ಸು ಹಿಟೋರವರ ಮರಣದಿಂದ ಜಪಾನೀಜನಾಂಗಕ್ಕಾದ ದುಃಖಕ್ಕೆ ಪಾರಾವಾರವಿಲ್ಲ. ಬಾದಶಹರ ಅಸ್ವಸ್ಥತೆಯ ವಾರ್ತೆಯು ಜನರಿಗೆ ತಿಳಿದ ಕೂಡಲೆ ಅವರು ಮನೆಮಾರುಗಳನ್ನೂ ಆಟನೋಟಗಳನ್ನೂ ಬಿಟ್ಟುಕೊಟ್ಟು ಖಿನ್ನವದನರಾಗಿ ಅರಮನೆಯ ಸುತ್ತಲು ಗುಂಪುಗುಂಪಾಗಿ ನೆರೆಯ ಹತ್ತಿದರು

ಎಷ್ಟೋ ಜನರು ದೇವಾಲಯಗಳಿಗೆ ಹೋಗಿ ತಮ್ಮ ಬಾದಶಹರಿಗೆ ಆಯುರಾರೋಗ್ಯಗಳನ್ನು ದಯಪಾಲಿಸೆಂದು ದೇವರಿಗೆ ಪ್ರಾರ್ಥಿಸುತ್ತಿದ್ದರು.

ಸಾಮಾನ್ಯವಾಗಿ ಎಲ್ಲ ಪೌರ್ವಾತ್ಯರು ಅರಸನು ದೇವತಾಂಶವೆಂದು ಭಾವಿಸುವದುಂಟು. ತತ್ರಾಪಿ ಜಪಾನೀಯರು ತಮ್ಮ ಅರಸು ದೇವರೇ ಎಂದು ನಂಬಿ ಆತನಿಗೆ "ಮಿಕಾಡೊ" ಎಂದರೆ "ಪರಮ ಪೂಜ್ಯ" ಎಂಬ ಗೌರವದ ಬಿರುದನ್ನು ಕೊಟ್ಟಿರುವರು. ಗತಿಸಿದ ಮುಟ್ಸ್ಸು ಹಿಟೋರವರ ಹಿಂದೆ ಆಗಿಹೋದ ರಾಜರೆಲ್ಲರು ಕೇವಲ ಧರ್ಮಗುರುಗಳಂತೆ ಇದ್ದದರಿಂದ ಅವರ ಆಳಿಕೆಯಲ್ಲಿ ಜಪಾನದೇಶದೊಳಗಿನ ಸರದಾರರು ಅತಿಪ್ರಬಲರಾಗಿ, ಅರಸರನ್ನು ಮೂಲೆಗೊತ್ತಿ, ದೇಶದಲ್ಲೆಲ್ಲ, ಅಂತಸ್ಥಕಲಹಗಳನ್ನೆಬಿಸಿ, ಒಬ್ಬರನ್ನೊಬ್ಬರು ಮುರಿಯ ತೊಡಗಿದ್ದರು. ದೇಶದಲ್ಲೆಲ್ಲ ಅನಾಯಕತ್ವದ ಚಿಹ್ನಗಳು ತಲೆದೋರುತ್ತಿದ್ದವು. ಯಾವತರದ ಸುಧಾರಣೆಗೂ ಮಾರ್ಗವಿಲ್ಲದೆ ಜಪಾನದೇಶವು ಸುಮಾರು ೫೦ ವರ್ಷಗಳ ಪೂರ್ವದಲ್ಲಿ ಹಲವು ಚಿಕ್ಕದೊಡ್ಡ ನಡುಗಡ್ಡೆಗಳಿಂದಾದ ಒಂದು ೩ನೇ ತರಗತಿಯ ಪೌರ್ವಾತ್ಯದೇಶವಾಗಿತ್ತು. ಇಂಥ ದುಸ್ಥಿತಿಯಿಂದ ತಪ್ಪಿಸಿ ಸುಮಾರು ಅರ್ಧ ಶತಕದ ಕಾಲಾವಧಿಯಲ್ಲಿ ತಮ್ಮ ಬುದ್ಧಿಬಲದಿಂದಲೂ ಪರಾಕ್ರಮದಿಂದಲೂ ಸ್ವಾರ್ಥತ್ಯಾಗದಿಂದಲೂ ಜಪಾನದೇಶವನ್ನು ಅತಿ ಊರ್ಜಿತಾವಸ್ಥೆಗೆ ತಂದ ಶ್ರೇಯವು ಗತಿಸಿದ ಬಾದಶಹರದೇ ಎಂದು ನಿ:ಸಂಶವಾಗಿ ಹೇಳಬಹುದು. ಈ ದೇಶದ ಮುತ್ಸದ್ದಿಗಳು ಸಾಂಪ್ರತಕಾಲದಲ್ಲಿ ಸುಧಾರಣೆಯ ಶಿಖರಕ್ಕೆ ಮುಟ್ಟಿದ ಪಾಶ್ಚಾತ್ಯರಾಷ್ಟ್ರಗಳ ಮುತ್ಸದ್ದಿಗಳ ಸರಿಸಮಾನರಾಗಿ ಅವರ ಸಂಗಡ ವ್ಯಾಪಾರೋದ್ಯೋಗಗಳ ವಿಷಯವಾಗಿ ಕರಾರುಗಳನ್ನೂ ತಹನಾಮೆಯನ್ನೂ ಮಾಡುತ್ತಿರುವರು. ಬಹಳ ಹೇಳುವದರಿಂದೇನು? ಜಗತ್ತಿನಲ್ಲಿ ಅತಿಬಲಾಢ್ಯರಾದ ಬ್ರಿಟಿಶರು ಸಹ ಸ್ನೇಹಭಾವವನ್ನು ಅಪೇಕ್ಷಿಸುವಂಥ ಘನತೆಯು ಮುಟ್ಸುಹಿಟೋ ಬಾದಶಹರಿಂದ ಜಪಾನದೇಶಕ್ಕೆ ಪ್ರಾಪ್ತವಾಯಿತು.

ಈ ತರದ ಮಹತ್ವವುಳ್ಳ ಸುಧಾರಣೆಗಳು ಗತಿಸಿದ ಬಾದಶಹರ ೪೫ ವರುಷಗಳ ರಾಜ್ಯದಾಡಳಿತೆಯಲ್ಲಿ ಆಗಬೇಕಾದರೆ ಆ ಸುಧಾರಣೆಗಳಿಗೆ ಮುಟ್ಸುಹಿಟೋ ಬಾದಶಹರು ಕಾರಣರೋ ಅಥವಾ ಅವರ ಪ್ರಧಾನ ಮುಂಡಲದ ಮುತ್ಸದ್ದಿಗಳು ಕಾರಣರೋ ಎಂದು ಕೆಲವು ಇತಿಹಾಸಕಾರರು ಶಂಕಿಸುವರು. ಆದರೆ ಈ ಬಾದಶಹರು ಮಾಡಿದ ಮಹತ್ಕಾರ್ಯಗಳನ್ನು ಇವರಿಗಿದ್ದ ಪ್ರಜಾವಾತ್ಸಲ್ಯವನ್ನೂ ದೂರದೃಷ್ಟಿಯನ್ನೂ ಇವರು ಮಾಡಿದ ಸ್ವಾರ್ಥತ್ಯಾಗವನ್ನೂ ಸಮಾಲೋಚಿಸಿದರೆ ದೇಶೋನ್ನತಿಯ ವಿಷಯವಾಗಿ ಮಾಡಿದ ಎಲ್ಲ ಸುಧಾರಣೆಗಳಿಗೆ ಗತಿಸಿದ ಬಾದಶಹರೇ ಕಾರಣೀಭೂತರಾಗಿದ್ದರೆಂಬದು ವ್ಯಕ್ತವಾಗುವದು. ಇವರ ಆಳಿಕೆಯಲ್ಲಿ ಎಷ್ಟೋ ಮುತ್ಸದ್ದಿಗಳು ಪ್ರಧಾನ ಪದವನ್ನು ಕೈಕೊಂಡಿದ್ದರು. ಆದರೂ ಪ್ರಜರ ವಿಶ್ವಾಸವು

ತಮ್ಮರಾಜರ ಮೇಲಿದ್ದಷ್ಟು ಈ ಮುತ್ಸದ್ದಿಗಳ ಮೇಲೆ ಎಂದೂ ಇರಲಿಲ್ಲವೆಂಬದು ಇತಿಹಾಸದಿಂದ ಗೊತ್ತಾಗುವದು. ದೇಶೋನ್ನತಿಗಾಗಿ ಈ ಬಾದಶಹರು ತಮಗಿದ್ದ, ಕುಲಪರಂಪರೆಯಿಂದ ಬಂದ ನಿರಂಕುಶ ಪ್ರಭುತ್ವವನ್ನು ಬಿಟ್ಟುಕೊಟ್ಟು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸದ್ಯಕ್ಕೆ ಪ್ರಚಾರದಲ್ಲಿರುವಂಥ ಸಾಂಕುಶ ಪ್ರಭುತ್ವವನ್ನು ಕೈಕೊಂಡರು. ಇದಕ್ಕಿಂತ ಹೆಚ್ಚಿನ ಸ್ವಾರ್ಥತ್ಯಾಗವು ಜಗತ್ತಿನಲ್ಲಿ ಮತ್ತಾವದಿರುವದು? ಇವರ ಶೌರ್ಯದ ವಿಷಯವಾಗಿ ಒಬ್ಬ ಇಂಗ್ಲೀಷ ಇತಿಹಾಸಕಾರನು ಹೇಳುವದೇನೆಂದರೆ- ಹಿಂದೆ ಆಗಿಹೋದ ಅರಸರಂತೆ ಈಗಿನ ರಾಜರು ಸ್ವತ: ಯುದ್ಧಮಾಡುವ ಪ್ರಘಾತ ವಿದ್ದದ್ದಾದರೆ ಮುಟ್ಸುಹಿಟೋರವರು ತಮ್ಮ ತುರಗವನ್ನೇರಿ ಸೈನಿಕರಿಗೆ ಅಪ್ಪಣೆ ಗಳನ್ನು ಕೊಡುತ್ತಾ ಪ್ರಸಂಗ ಬಂದಾಗ ಶತ್ರುಗಳ ಸೈನ್ಯವನ್ನು ಒಳನುಗ್ಗಿ ಅವರ ಕೂಡ ಕಲಿತನದಿಂದ ಕಾದಾಡಲಿಕ್ಕೆ ಎಂದೂ ಹಿಂಜರಿಯುತ್ತಿದ್ದಿಲ್ಲ. ತುಸು ವರುಷಗ ಳ ಹಿಂದೆ "ರುಸ್ಸೊ ಜಪಾನೀ" ಯುದ್ಧವು ನಡೆದಾಗ ಈ ಬಾದಶಹರು ಸ್ವತ:ಸಮ ರಭೂಮಿಯ ಮೇಲೆ ಹಾಜರಿದ್ದು ಯುದ್ಧದ ಸೂತ್ರಗಳನ್ನು ತಾವೇ ನಡಿಸುತ್ತಿದ್ದರು.

ಮುಟ್ಸುಹಿಟೋರವರ ವಂಶದವರು ಬಹು ಪುರಾತನ ಕಾಲದಿಂದ ಜಪಾನದೇ ಶವನ್ನು ಅಳುತ್ತಿರುವರು. ಆ ದೇಶದ ಇತಿಹಾಸಕಾರರು ಜಪಾನದ ಅರಸು ಮನೆತ ನದವರು ಹಿಂದುಸ್ತಾನದಲ್ಲಿ ಅಳಿಹೋದ ರಘುರಾಜನ ವಂಶದವರೆಂದು ಸಕಾರಣ ವಾಗಿ ಹೇಳುವದುಂಟು. ಈ ರಘುರಾಜನು ಸೂರ್ಯವಂಶದವನು. ಆ ವಂಶ ದಲ್ಲಿ ಶ್ರೀ ರಾಮಚಂದ್ರನಂಥ ಎಲ್ಲ ಸುಗುಣಗಳಿಗೆ ತವರ ಮನೆಯಾದ ಸಾರ್ವ ಭೌಮ ಅರಸನು ಆಗಿಹೋದನು. ಈಗಲೂ ಜಪಾನದೇಶದ ಪತಾಕೆಯ ಮೇಲೆ ಸೂರ್ಯದೇವತೆಯ ಚಿನ್ಹವಿರುವದರಿಂದ ಅಲ್ಲಿಯ ಅರಸರು ಸೂರ್ಯ ವಂಶದವರಿಗ ಬಹುದೆಂದು ಅನುಮಾನಿಸಬೇಕಾಗುವದು. ಗತಿಸಿದ ಮುಟ್ಸುಹಿಟೋರವರು ಶ್ರೀ ರಾಮಚಂದ್ರನಂತಿದ್ದದರಿಂದ ಅವರ ವಿಯೋಗದಿಂದ ಶ್ರೀ ರಾಮಚಂದ್ರನವಿಯೋಗ ದಿಂದ ಅಯೋಧ್ಯೆಯ ಜನರಿಗಾದಂಥ ಹೇಳಕೂಡದಷ್ಟು ದು:ಖವು ಜಪಾನದ ಜನಾಂಗಕ್ಕಾಗಿರುವದು. ಇವರ ಮರಣದ ವಾರ್ತೆಯನ್ನು ಕೇಳಿ ಸಾವಿರಾರು ಜನರು ತಮ್ಮ ಮೊಳಕಾಲೂರಿ ಕುಳಿತು ಕಣ್ಣೀರು ಸುರಿಸುತ್ತ ದೇವರಿಗೆ ಪ್ರಾರ್ಥನೆ ಮಾಡತೊಡಗಿದರು. ಒಬ್ಬನಂತೂ ಆತ್ಮ ಹತ್ಯೆಯನ್ನು ಮಾಡಿಕೊಂಡನು. ಇಂಥ ಮಹಾಪುರುಷರ ಜೀವನಚರಿತ್ರೆಯನ್ನು ಸ್ವಲ್ಪದರಲ್ಲಿ ನಮ್ಮ ವಾಚಕರಿಗಾಗಿ ಇಲ್ಲಿ ಕೊಡುವೆವು.

ಮುಟ್ಸುಹಿಟೋರವರು ಸನ್ ೧೮೫೨ ಇಸ್ವಿಯ ನೊವ್ಹೆಂಬರ ೩ನೇ ತಾರೀ ಖಿನ ದಿವಸ ಹುಟ್ಟಿದರು. ಇವರ ತಂದೆಯು ಸನ್ ೧೮೬೭ ರಲ್ಲಿ ಮರಣಹೊಂದಲು- ಜಪಾನದ ರಾಜಪಟ್ಟವು ಇವರಿಗೆ ಬಂದಿತು. ಇವರ ಪಟ್ಟಾಭಿಷೇಕವು "ಓಸಾಕಾ"

ಪಟ್ಟಣದಲ್ಲಿ ಸನ್ ಗಲಟೂಲ ರಲ್ಲಿ ಆಯಿತು. ಇವರು ಪಟ್ಟಕ್ಕೆ ಬಳಿತಕಾಲದಲ್ಲಿ ಜಪಾನದೇಶದಲ್ಲಿ ಶಾಂತತೆಯು ಎಷ್ಟು ಮಾತ್ರವೂ ಇರಲಿಲ್ಲ. ದೇಶದಲ್ಲೆಲ್ಲ ಷೋಗನ ರೆಂಬ ಅಧಿಕಾರಿಗಳು ಬಹು ಪುಂಡರಾಗಿ ಕೊಲೆಸುಲಗೆಗಳನ್ನು ನಡಿಸಿದ್ದರು. ಈ ಷೋಗೆನರನ್ನು ಮುರಿಯುವದೊಂದು ದೊಡ್ಡ ಕೆಲಸವು ಮುಟ್ಸುಹಿಟೋರವರ ಪಾಲಿಗೆ ಬಂದಿತು. ಆ ಕೆಲಸಕ್ಕೆ ತಕ್ಕಂಥ ಬುದ್ಧಿಬಲವೂ ಅತುಲವಾದ ಭುಜಬಲ ಪರಾಕ್ರಮವೂ ಇವರಲ್ಲಿ ಸ್ವಾಭಾವಿಕವಾಗಿದ್ದವು. ಆದರೆ ಈ ಬಾದಶಹರು ಷೋಗನರ ಅಧಿಕಾರವನ್ನು ಕೇವಲ ಸ್ವಾರ್ಥತ್ಯಾಗದಿಂದಲೇ ಮುರಿದರು. ಜನರಲ್ಲೆಲ್ಲ ದೇಶಾ ಭಿಮಾನದ ಸ್ಫೂರ್ತಿಯಿರುವದೊಂದು ಸಂಧಿಯನ್ನು ನೋಡಿಕೊಂಡು ದೇಶೋನ್ನತಿ ಗಾಗಿಯೂ ಪ್ರಜರಹಿತಕ್ಕಾಗಿಯೂ ತಮ್ಮ ಸ್ವಂತ ನಿರಂಕುಶಪ್ರಭುತ್ವವನ್ನು ಬಿಟ್ಟು ಕೊಟ್ಟು ಸಾಂಕುಶ ಪ್ರಭುತ್ವವನ್ನು ಸ್ವೀಕರಿಸಿ ಪ್ರಜರಿಗೆ ಹಲವು ಮಹತ್ವವುಳ್ಳ ರಾಜ ಕೀಯ ಹಕ್ಕುಗಳನ್ನು ಕೊಡುವೆನೆಂದು ಇವರು ಅಭಿವಚನವನ್ನಿತ್ತರು. ಕೂಡಲೆ ಇವರ ಅನುಕರಣವನ್ನು ಷೋಗನರು ಮಾಡಿ ತಮಗಿದ್ದ ಸಾಮ್ರಾಜ್ಯಾಧಿಕಾರವನ್ನು ಬಿಟ್ಟುಕೊಟ್ಟರು ಪ್ರಾಂತದ ಅಧಿಕಾರಿಗಳೂ ತಮಗಿದ್ದ ಅಧಿಕಾರವನ್ನು ತ್ಯಜಿಸಿದರು. ಕ್ರಮ ಕ್ರಮದಿಂದ ಎಲ್ಲ ಅಧಿಕಾರವು ಬಾದಶಹರ ಕೈ ಸೇರಲು ರಾಜಕರಣಕ್ಕಾಗಿ ಒಂದು ಅಲೋಚನಾ ಸಭೆಯನ್ನು ಕೂಡಿಸಿ ಅದಕ್ಕೆ ಕ್ರಮೇಣ ಪಾರ್ಲಿಮೆಂಟನ ರೂಪವನ್ನು ಕೊಟ್ಟು ಇಂಗ್ಲಂಡ, ಫ್ರಾನ್ಸ, ಜರ್ಮನಿ ಮೊದಲಾದ ಸುಧಾರಿಸಿದ ರಾಷ್ಟ್ರಗಳಲ್ಲಿರುವಂಥ ರಾಜ್ಯಪದ್ಧತಿಯನ್ನು ಇವರು ತಮ್ಮ ರಾಜ್ಯದಲ್ಲಿ ಸ್ಥಾಪಿಸಿ ದರು. ಇದರಿಂದ ಜಪಾನದ ಸುಧಾರಣೆಯು ಬೀಜಾರೋಪಣೆಯಾದಂತಾಯಿತು.

ಯುರೋಪಿಯನ್ ರಾಜ್ಯಪದ್ಧತಿಯನ್ನು ಸ್ವೀಕರಿಸಿದಂತೆ ಇವರು ಯುರೋಪಿ ಯನರ ನೀತಿ-ನಡಾವಳಿಗಳನ್ನೂ ಉಡಿಗೆತೊಡಿಗೆಗಳನ್ನೂ ಪ್ರಚಾರದಲ್ಲಿ ತಂದರು.

ರಾಷ್ಟ್ರದ ಪ್ರಗತಿಗೆ ಶಿಕ್ಷಣವೇ ಮೂಲಾಧಾರವೆಂದು ತಿಳಿದು ದೇಶದಲ್ಲೆಲ್ಲ ಶಾಲೆಗಳನ್ನು ಸ್ಥಾಪಿಸಿದರು. ಇಂಗ್ಲೀಷ ಭಾಷೆಯನ್ನು ದೇಶಭಾಷೆಯ ಸಂಗಡವೇ ಕಲಿಯತಕ್ಕದ್ದೆಂದು ನಿರ್ಬಂಧನೆಯನ್ನು ಮಾಡಿದರು. ಬುದ್ಧಿವಂತರೂ ಸಾಹಸಿಗಳೂ ಆದ ವಿದ್ಯಾರ್ಥಿಗಳನ್ನು ಇಂಗ್ಲಂಡ, ಫ್ರಾನ್ಸ, ಜರ್ಮನಿ, ಅಮೇರಿಕಾ ಮೊದಲಾದ ದೇಶಗಳಿಗೆ ಕಳುಹಿಸಿ ಅವರಿಗೆ ಯಂತ್ರಶಾಸ್ತ್ರವನ್ನೂ ಕಲಾಕೌಶಲ್ಯಗಳನ್ನೂ ನೌಕಾ ವಿದ್ಯೆಯನ್ನೂ ಕಲಿಸುವಂತೆ ವ್ಯವಸ್ಥೆಮಾಡಿದರು. ಇದರಿಂದ ಜಪಾನ ದೇಶದ ಕೊರತೆಗಳನ್ನು ಪೂರೈಸಿ ಪರದೇಶಗಳಿಗೆ ಕಳುಹಿಸುವಷ್ಟು ಸರಕುಗಳು ಆ ದೇಶದಲ್ಲಿ ಹುಟ್ಟಹತ್ತಿದವು.

ಮುಟ್ಸುಹಿಟೋರವರು ಈ ಬಗೆಯ ಸುಧಾರಣೆಗಳನ್ನು ಮಾಡತೊಡಗಿದಾಗ ಅವರಿಗೆ ಎಡರುಗಳು ಬರಲಿಲ್ಲವೆಂಬಂತಿಲ್ಲ. ಮೊದಲು ಮೊದಲು ಜಪಾನೀ ಜನರು

ವಿದೇಶೀಯರ ವಿಷಯವಾಗಿ ದ್ವೇಷಭಾವವುಳ್ಳವರಾಗಿದ್ದರು. ಜಪಾನಕ್ಕಿರುವ ಪರ ರಾಜ್ಯಗಳ ಸಂಬಂಧವನ್ನು ಬೆಳೆಸುವ ಉದ್ದೇಶದಿಂದ ಒಂದು ರಾಯಭಾರಿಗಳ ಮಹಾಸಭೆಯನ್ನು ಕೂಡಿಸಿದಾಗ ಇಂಗ್ಲಂಡದ ಪ್ರತಿನಿಧಿಯಾದ ಪಾರ್ಕ್ಸ್ ಎಂಬವರಿಗೆ ಕೆಲವು ಜನರು ಅಪಮಾನ ಮಾಡಿದರು. ಅದಕ್ಕಾಗಿ ಬಾದಷಹರು ತಮ್ಮ ಕೋಪವನ್ನು ವ್ಯಕ್ತಮಾಡಿ ಒಂದು ಪ್ರಕಟನೆಯನ್ನು ಪ್ರಕಟಿಸಿದರು. ಇವರ ಅಳಿಕೆಯಲ್ಲಿ ದೇಶದಲ್ಲಿ ಮೂರು ಸಾರೆ ಬಂಡಾಯಗಳಾದವು. ಅವುಗಳನ್ನು ಇವರು ಯುಕ್ತಿಯಿಂದ ಶಾಂತಮಾಡಿದರು.

ಸನ್ ೧೮೯೪ರಲ್ಲಿ ಚೀನದೇಶದ ಸಂಗಡ ಆದ ಯುದ್ಧದಿಂದಲೂ ಹತ್ತು ವರ್ಷಗಳ ನಂತರ ರಶಿಯಾ ದೇಶದ ಸಂಗಡ ಆದ ಅಪೂರ್ವ ಯುದ್ಧದಿಂದಲೂ ಮುಟ್ಟು ಹಿಟೋರವರ ಅಳಿಕೆಯಲ್ಲಿ ಜಪಾನ ದೇಶದಲ್ಲಾದ ಸುಧಾರಣೆಗಳೂ ಜಪಾನದ ಅತುಲ ಪರಾಕ್ರಮವೂ ಭೂಮಂಡಲದ ಎಲ್ಲ ಜನರಿಗೆ ದೃಗ್ಗೋಚರವಾಗಹತ್ತಿದವು. ಜಪಾನವು ಅತಿ ಬಲಾಢ್ಯವಾದ ಪೌರ್ವಾತ್ಯ ರಾಷ್ಟ್ರವಾಯಿತು.

ಈ ಬಾದಷಹರ ಸಂಸಾರಕ್ರಮವೂ ತೃಪ್ತಿಕರವಾಗಿತ್ತು. ಸನ್ ೧೮೮೯ ರಲ್ಲಿ ಇವರು ಜಪಾನ ದೇಶದ ಪುರಾತನ ವಂಶಕ್ಕೆ ಸೇರಿದ "ಹ್ಯಾರೋ" ಎಂಬ ಅರಸು ಮಗಳನ್ನು ಮದುವೆಯಾದರು. ಅವರ ಹೊಟ್ಟೆಯಲ್ಲಿ ಯೋಸಿಹಿಟೋ ಎಂಬ ಒಬ್ಬ ಗಂಡು ಮಗನೂ ಕೆಲವು ಹೆಣ್ಣು ಮಕ್ಕಳೂ ಹುಟ್ಟಿರುವರು. ಬಾದಷಹರ ಮರಣದ ನಂತರ ಯೋಸಿಹಿಟೋರವರು ಪಟ್ಟಕ್ಕೆ ಕುಳಿತರು.

ಸ್ವತ: ತಾವೇ ನಟ್ಟ ಸರ್ವತೋಮುಖವಾದ ಸುಧಾರಣೆಯು ವೃಕ್ಷವು ತಮ್ಮ ಆಯುಸ್ಸಿನ ಮರ್ಯಾದೆಯಲ್ಲಿಯೇ ಫಲವತ್ತಾದದ್ದನ್ನು ಕಣ್ಣಾರೆ ಕಂಡ ಈ ಮಹನೀಯರೇ ಧನ್ಯರು. ಇವರ ಆತ್ಮಕ್ಕೆ ಪರಮೇಶ್ವರನು ಸುಖಶಾಂತಿಗಳನ್ನೀಯಲೆಂದು ಪ್ರಾರ್ಥಿಸಿ ಈ ಲೇಖವನ್ನು ಮುಗಿಸುವೆವು.

ಎಡಿಟರ.

"ಚಾರು ಶೀಲೆ!"

ರುಕ್ಮಿಣೀ ಕುಮಾರನ ಕುಮಾರಿಯಾದ ಚಾರುಶೀಲೆಗೆ ನಾಳಿನ ಆಷಾಢಕ್ಕೆ ಹನ್ನೆರಡು ವರುಷಗಳೂ ತುಂಬಿ ಹದಿಮೂರನೆಯ ವರುಷವು ಆರಂಭವಾಗುವದು. ಅವಳಿಗೆ ಇನ್ನೂ ವಿವಾಹವಾಗಿಲ್ಲ. ಅದಕ್ಕಾಗಿ ಊರೊಳಗಿನ ಮುದುಕಿಯರಿಗೆಲ್ಲ ಅವಳ ಮೇಲೆಯೇ ದೃಷ್ಟಿ. ಅವರು ಹರಟುವದೆಲ್ಲ ಅವಳ ಸಲುವಾಗಿಯೇ ಅವರು ಅವಳನ್ನು ಕಂಡಾಗೆಲ್ಲ "ಬಸಿಯಾಗುವದಕ್ಕಿರುವಿಯೇನೇ?" ಎಂದು ಪರಿಹಾಸ

ಮಾಡುವರು. ಅವಳ ತಾಯಿತಂದೆಗಳಿಗೂ ಅನೇಕ ಹೆಸರಿಡುವ ಮಾತುಗಳನ್ನಾಡುವರು. "ಹೆಣ್ಣು ಹಡೆದು, ಹನ್ನೆರಡು ವರುಷಗಳಾದರೂ ಮದುವೆಯನ್ನು ಮಾಡಲಾರದಿದ್ದರೆ ಹುಟ್ಟಿದಾಗಲೇ ಬಾವಿಯಲ್ಲಿ ಚಲ್ಲಿಕೊಡಬಾರದಿತ್ತೇ?" ಎಂದು ಕೇಳುವರು. ಅವರಿಗೆ ಯಾವ ತೀರ್ಮಾನವೂ ತೋರಲಿಲ್ಲ!

ರುಕ್ಮಿಣೀಕುಮಾರನು ಬಡವ. ಅವನಿಗೆ ಪಿತ್ರಾರ್ಜಿತವಾದ ಆಸ್ತಿ ವೃತ್ತಿಗಳೇನೂ ಇದ್ದಿಲ್ಲ. ಅವನು ದೇವನಗರ (ದೇವಗಡ) ದ ತಾಲೂಕ ಕಚೇರಿಯಲ್ಲಿ ಕಾರಕೂನನಾಗಿದ್ದನು. ಅವನು ಅತ್ಯಂತ ಧರ್ಮಿಷ್ಠ, ಪಾಪ ಭೀರು; ಅನ್ಯಾಯಾಚರಣೆಯ ಹೆಸರು ಕೇಳಿದರೂ ಅವನಿಗಾಗದು. ಹೀಗಿದ್ದಮೇಲೆ ಉಳಿದವರಂತೆ ಇವನಿಗೆ ಹೊರಗಿನ ಉತ್ಪನ್ನವೆಲ್ಲಿಂದ ಬರಬೇಕು? ಪಗಾರ ಬಿಲ್ಲಿನ ಮೇಲೆ ಸಹಿ ಮಾಡಿ ತೆಗೆದುಕೊಂಡ ಇಪ್ಪತ್ತೈರಡು ರೂಪಾಯಿಗಳೇ ಅವನ ಉತ್ಪನ್ನ! ಅದರಲ್ಲಿಯೂ ಸ್ಟ್ಯಾಂಪಿಗಾಗಿ ಒಂದಾಣೆಯನ್ನು ಮುರಿದುಕೊಳ್ಳುವರು! ಈ ಅಲ್ಪವಾದ ಉತ್ಪನ್ನದಿಂದ ಇಂತಹ ಬರಗಾಲದ ದಿನಗಳಲ್ಲಿ ಮುದುಕಿಯಾದ ತಾಯಿಯೊಬ್ಬಳು, ಹೆಂಡತಿ, ಒಂದು ಗಂಡುಮಗು, ಚಾರುಶೀಲೆ ಇಷ್ಟು ಜನರುಳ್ಳ ತನ್ನ ಸಂಸಾರವನ್ನು ಸಾಗಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಮಗಳ ಮದುವೆಯ ವೆಚ್ಚವನ್ನು ಕೂಡಿ ಹಾಕುವದು ಅವನಿಂದಾಗಿದ್ದಿಲ್ಲ. ಅದರಿಂದಲೇ ಚಾರುಶೀಲೆಗೆ ಇನ್ನೂ ವಿವಾಹವಾಗಿಲ್ಲ.

ಈಗಿನ ಕಾಲದಲ್ಲಿ ಮಗಳ ಮದುವೆಯನ್ನು ಮಾಡುವದೆಂದರೆ ಸಾಮಾನ್ಯವಾದ ಮಾತಲ್ಲ; ಏನಿಲ್ಲೆಂದರೂ ಐನೂರು ರೂಪಾಯಿ ವರದಕ್ಷಿಣೆ, ಮೇಲಾಗಿ ಅಳಿಯನಿಗೆ ಒಂದೆರಡು ದಾಗಿನಿಗಳು, ಅದೂ ಅಲ್ಲದೆ ಮಂಗಲ ಸೂತ್ರವನ್ನು ಕಟ್ಟುವಾಗ ಏನಾದರೂ ಗದ್ದಲವೆಬ್ಬಿಸಿದರೆ ಅದಕ್ಕಾಗಿ ನೂರಾರು ರೂಪಾಯಿಗಳು ಬೇಕು. ಕಡಿಮೆಯಲ್ಲಿ ಕಡಿಮೆಯೆಂದರೆ ಖರ್ಚಿಗೆ ಇನ್ನೂರು ರೂಪಾಯಿಗಳ ಹೊರತು ಸಾಲದು, ಅಂತೂ ಹ್ಯಾಗೆ ಮಾಡಿದರೂ ಒಂದು ಸಾವಿರ ರೂಪಾಯಿಗಳನ್ನು ತಂದಿಟ್ಟುಕೊಂಡ ಹೊರತು ಮಗಳ ಮದುವೆಯ ಪ್ರಸ್ತಾಪವನ್ನೆತ್ತುವಂತಿಲ್ಲ. ರುಕ್ಮಿಣೀಕುಮಾರನ ಕಯ್ಯಲ್ಲಾದರೋ ಒಂದು ಕಾಸು ಸಹ ಇಲ್ಲ. ಈ ತಿಂಗಳ ಪಗಾರ ಬಿಲ್ಲು ನಾಲ್ಕು ದಿನ ತಡವಾಗಿ ಕ್ಯಾಶ್ ಅಂದರೆ ಅಂಗಡಿಕಾರನ ಅಳು ಇಪ್ಪತ್ತೊಂದು ರೂಪಾಯಿಗಳ ಬಿಲ್ಲು ತೆಗೆದುಕೊಂಡು ದಿನಕ್ಕೊಂದಾವರ್ತಿಯಂತೆ ಮೂರು ಸಾರೆ ಬಂದು ಬಂದು ತಿರುಗಿ ಹೋಗಬೇಕಾಗುವದು. ಇಂತಹ ಸ್ಥಿತಿಯಲ್ಲಿ ಒಂದು ಸಾವಿರ ರೂಪಾಯಿಗಳು! ಎಷ್ಟು ದುಸ್ಸಾಧ್ಯವಾದ ಮಾತು!!

ರುಕ್ಮಿಣೀಕುಮಾರನಿಗೆ ಅನ್ಯ ಬಂಧುಗಳಾದರೂ ಇದ್ದಿಲ್ಲ. ಅವನಂತೆಯೇ ಅನನ್ಯ ಬಾಂಧವನಾದ ತಕ್ಕ ಮಟ್ಟಿಗೆ ಆಸ್ತಿವೃತ್ತಿಗಳುಳ್ಳ ಶ್ಯಾಲಕನೊಬ್ಬನು ಮಾತ್ರ

ತಿರುವಾಂಕೂರಿನಲ್ಲಿ ಮುದುಕಿಯಾದ ತಾಯಿಯೊಬ್ಬಳನ್ನಿಟ್ಟುಕೊಂಡು ಮಾತೃಸೇವಾ ತತ್ಪರನಾಗಿ ಇರುತ್ತಿದ್ದನು. ಅವನೂ ಈಗ ಹದಿನೈದು ದಿನಗಳ ಕೆಳಗೆ ತಾಯಿಯು ಕಾಲಾಧೀನಳಾಗಲು, ಯಾರೋ ಉಪದೇಶಕರ ಮಾತು ಕೇಳಿ "ವಸುಮತಿ" ಯೆಂಬ ಧನಿಕಳಾದ ವಿಧವೆಯೊಬ್ಬಳನ್ನು ವಿವಾಹ ಮಾಡಿಕೊಂಡು ದೇಶಾಂತರಕ್ಕೆ ಹೋಗಿ ಬಿಟ್ಟನೆಂಬ ಸಿಡಿಲಂತಹ ದುರ್ವಾರ್ತೆಯು ಊರಲ್ಲೆಲ್ಲಾ ಹಬ್ಬಿ ರುಕ್ಮಿಣೀ ಕುಮಾರನ ಕಿವಿಯ ತನಕವೂ ಬಂದು ಮುಟ್ಟಿತು! ಅದರಿಂದ ರುಕ್ಮಿಣೀಕುಮಾರ ನಿಗಿದ್ದ ಬಂದೇ ಬಂದಾದ ಧೈರ್ಯಸೂತ್ರವೂ ಹರಿದು ಹೊಯಿತು. ವಿದ್ಯಾಧನನು (ರುಕ್ಮಿಣೀಕುಮಾರನ ಹೆಂಡತಿಯ ತಮ್ಮ) ವಿದ್ಯಾವಂತನೂ ಸದ್ಗುಣಿಯೂ ಆಗಿದ್ದ ನಾಗಿ ಅವನ ಮೇಲಿನ ಅಪವಾದವು ಕೇವಲ ದುಷ್ಟ ಕಲ್ಪಿತವೇ ಅಲ್ಲದೆ ನಿಜವಾಗಿರ ಲಾರದೆಂದು ರುಕ್ಮಿಣೀ ಕುಮಾರನು ತಿಳಿದಿದ್ದನು. ಅದಕ್ಕಾಗಿ ಅವನು ಬೀಗ ನನ್ನು ಎಷ್ಟೋ ಹುಡುಕಿ ನೋಡಿದನು. ಆದರೆ ಅದರಿಂದ ಏನೂ ಪ್ರಯೋಜನ ವಾಗಲಿಲ್ಲ!

ರುಕ್ಮಿಣೀಕುಮಾರನು ಬ್ರಾಹ್ಮಣ, ಅದರಲ್ಲಿಯೂ ಪ್ರಾಚೀನ ಸಾಂಪ್ರ ದಾಯಾಭಿಮಾನಿಯು. ಅರ್ವಾಚೀನರ ಹಾಗೆ ಪ್ರೌಢ ವಿವಾಹಕ್ಕೆ ಅವನ ಅನುಮತಿ ಯಿದ್ದಿಲ್ಲ. ಅಂದಮೇಲೆ ಅವನು ಎಂಟನೆಯ ವರ್ಷದಲ್ಲಿಯೇ ಕನ್ಯಾದಾನವನ್ನು ಮಾಡತಕ್ಕದ್ದು. ಚಾರುಶೀಲೆಗಾದರೋ ಹನ್ನೆರಡನೆಯ ವರುಷವೂ ತುಂಬುತ್ತ ಬಂದಿತು! ಅಂದ ಬಳಿಕ ರುಕ್ಮಿಣೀಕುಮಾರನ ವ್ಯಸನಕ್ಕೇನು ಕಡಿಮೆ! ಅವನು ಚಿಂತೆಯಲ್ಲಿ ಮುಳುಗಿ ಹೋಗಿದ್ದನು. ಮಗಳಿಗೆ ಸರಿಯಾದ ವರನು ಸಿಗುವನೇ? ಅವಳು ಸುಖವನ್ನು ಹೊಂದುವಳೇ? ಎಂಬ ಚಿಂತೆಯು ಅವನ ಹೃದಯವನ್ನೆಲ್ಲಾ ವ್ಯಾಪಿಸಿಕೊಂಡಿತು. ನೆರೆಹೊರೆಗೂ ಹೋಗನು. ಹೋದರೆ ಮದುವೆಯ ಪ್ರಸ್ತಾ ಪವನ್ನೆತ್ತುವರೆಂದು ನಾಚಿಕೆ; ಅವನ ಭಾರ್ಯೆಗೂ ಪುತ್ರಿಗೂ ಇದೇ ಗತಿ, ಅವರು ಮನೆಯಿಂದ ಹೊರಗೆ ಹೊರಡರು. ಏನು ಮಾಡಬೇಕು? ಬಡವನ ಮಗಳು ಯಾರಿಗೆ ಬೇಕು?

ನಾವು ಚಾರುಶೀಲೆಗೆ ವರನನ್ನು ಹುಡಕಹತ್ತಿರುವೆವು. ಈ ಸಮಯದಲ್ಲಿ ಅವಳ ರೂಪಗುಣಗಳನ್ನು ತುಸುಮಟ್ಟಿಗಾದರೂ ವರ್ಣಿಸದಿದ್ದರೆ, ತಕ್ಕ ವರದಕ್ಷಿಣೆಯೂ ಇಲ್ಲದೆ ಸರಿಯಾದ ವರನು ದೊರಕುವ ಬಗೆಹ್ಯಾಗೆ? ಅದಕ್ಕಾಗಿ ನಾವು ಅವಳ ರೂಪಗುಣಗಳನ್ನು ನೋಡೋಣ.

ಚಾರುಶೀಲೆಯು ಬ್ರಾಹ್ಮಣರ ಹುಡುಗಿ, ಅವಳ ದರ್ಶನವು ನಮಗೆ ಹ್ಯಾಗಾ ಗಬೇಕು? ಅವಳೇನು ಈಗಿನ ಹುಡುಗಿಯರ ಹಾಗೆ ಪಾಕೇಟನ್ನು ಬಗಲಲ್ಲಿರಿಕೊಂಡು ಸಾಲೆಗೆ ಹೋಗುತ್ತಿರುವಳೇ? ಈಚೀಚೆಗಂತೂ ನಾಚಿಕೆಯಿಂದ ಮನೆಯಿಂದ ಹೊರ

ಗೆಸಹ ಹೊರಡುವದಿಲ್ಲ. ಅಂದಮೇಲೆ ನಮಗೆ ಅವಳ ದರ್ಶನವು ಹ್ಯಾಗಾಗಬೇಕು? ಕನ್ಯಾರ್ಥಿಗಳಾಗಿ ಅವಳನ್ನು ನೋಡಲಿಕ್ಕೆ ಹೋದವರಲ್ಲಿ ಒಬ್ಬಿಬ್ಬರನ್ನು ಕೇಳಿದುದರಿಂದ ಕೆಲವು ಸಂಗತಿಗಳು ನಮಗೆ ಗೊತ್ತಾಗಿರುವವು. ಅವುಗಳನ್ನು ನಮ್ಮ ವಾಚಕಮಹನೀಯರ ಮುಂದೆ ಯಥಾರೀತಿಯಾಗಿ ಹೇಳುವೆವು.

ಚಾರುಶೀಲೆಯು ಸುಂದರಿ, ಪರಮಸುಂದರಿ; ಯಾರಾದರೂ ರತೀದೇವಿಯನ್ನು ನೋಡಿದ್ದರೆ ಅವಳೇ ಇವಳೆಂದು ಹೇಳುತ್ತಿದ್ದರು. ಆ ದುಂಡುದುಂಡಾದ ಕೈಕಾಲುಗಳೂ, ಸುವರ್ಣ ವರ್ಣವನ್ನು ತಿರಸ್ಕರಿಸುವ ವರ್ಣವೂ ಲಜ್ಜಾಸರಳತೆಗಳಿಂದ ಕೂಡಿದ, ಸಜಲವಾದ ವಿಸ್ತಾರವಾದ ಚಂಚಲವಾದ ಕಪ್ಪನೆಯ ಕಣ್ಣುಗಳೂ, ಚೆಂದಳಿರದಂತೆ ಕೋಮಲವಾದ ಕೆಚ್ಚನೆಯ ತುಟಿಗಳೂ, ದಾಳಿಂಬದ ಬೀಜಗಳನ್ನು ಸಾಲಾಗಿ ಹೊಂದಿಸಿದಂತಿರುವ ದಂತ ಪಂಕ್ತಿಯೂ, ಸಂಪಿಗೆಯ ಮೊಗ್ಗಿನಂತಿರುವ ನಾಸಿಕವೂ, ವಿಶಾಲವಾದ ಹಣೆಯೂ, ನಿಷ್ಕಳಂಕನಾದ ಚಂದ್ರನನ್ನು ಮುಸಕಲೆತ್ತಿಸುವ ಮೇಘಮಾಲೆಯಂತಿರುವ ಅಲಕರಾಜಿಯೂ, ನಿತಂಬಪ್ರದೇಶವನ್ನೂ ಮೀರಿ ಹೋಗುವ ಕೃಷ್ಣ ಸರ್ಪದಂತಿರುವ ವೇಣಿಯೂ, ಅವಳ ಸೌಂದರ್ಯದ ಘಟಿಕಗಳಾಗಿದ್ದವು. ಅಲ್ಲದೆ ಮೂಗಿನಲ್ಲಿ ಚಿಕ್ಕದಾದ ಮೂಗು ಬಟ್ಟೊಂದಲ್ಲದೆ ಉಳಿದ ಕಡೆಯಲ್ಲಿ ಅವಳ ಮೈಗೆ ಭಂಗಾರದ ಸ್ಪರ್ಶವೇ ಆಗಿದ್ದಿಲ್ಲ. ಹಾಗೂ ಹರಕಾದ ಮಸಕು ಮಸಕಾದ (ಬಣ್ಣವಿಲ್ಲದ) ಹಳೇ ಸೀರೆಯೂ, ದುಡ್ಡಿಗೆ ನಾಲ್ಕರ ಕರೇ ಕಂಕಣಗಳೂ ಅವಳ ಸೌಂದರ್ಯವನ್ನು ಮುಚ್ಚಿಟ್ಟು ಶರೀರಚ್ಛಾಯವನ್ನು ಕಂದಿಸಲಿಕ್ಕೆ ಯತ್ನ ಮಾಡುತ್ತಿದ್ದವು.

ಈ ರೀತಿಯಾದ ದೈವದತ್ತವಾದ ರೂಪರಾಶಿಯೂ ರೋಗರಹಿತವಾದ ಪ್ರಕೃತಿಯೂ ಅವಳ ವಯಸ್ಸನ್ನು ಮತ್ತಿಷ್ಟು ಬೆಳೆಯಿಸಿ ತೋರಿಸುತ್ತಿದ್ದವು. ಅವಳನ್ನು ನೋಡಿದ ಕನ್ಯಾರ್ಥಿಗಳಲ್ಲನೇಕರು " ಇವಳಿಗೆ ಈಗ ಹನ್ನೆರಡುವರುಷಗಳೇ? ದರಿದ್ರ ಬ್ರಾಹ್ಮಣನು ಮಗಳಿಗೆ ಯೋಗ್ಯಕಾಲದಲ್ಲಿ ಮದುವೆಯನ್ನು ಮಾಡಲಾರದೆ ಹೋಗಿ ಈಗ ಕಡಿಮೆ ವಯಸ್ಸೆಂದು ಹೇಳುವದಕ್ಕಾಗಿ ಸುಳ್ಳು ಜಾತಕವನ್ನು ಸೃಷ್ಟಿಸಿಕೊಂಡಿರುವನು. ಜಾತಕನಿಲ್ಲದ (ಸುಳ್ಳು ಜಾತಕದ) ಹುಡುಗಿಯನ್ನು ಮದುವೆ ಮಾಡಿಸಿಕೊಳ್ಳುವದಕ್ಕಾದೀತೇ " ಎಂದು ಮನಸ್ಸಿನಲ್ಲಿಯೇ ಅಂದುಕೊಂಡು ರುಕ್ಮಿಣೀಕುಮಾರನಿಗೆ ಕಾರಣಾಂತರವನ್ನು ಸೂಚಿಸಿಬಿಟ್ಟು ಹೊರಟು ಹೋಗಿದ್ದರು.

ಈ ರೀತಿಯಾಗಿ ಚಾರುಶೀಲೆಗೆ ಮುಖ್ಯಾಧಾರವಾಗಿದ್ದ ರೂಪರಾಶಿಯು ಹೇಡಿಯು ಕೈ ಸೇರಿದ ಚಂದ್ರಾಯುಧದಂತಾಗಿ ಅವಳ ಅಪಕಾರಕ್ಕೇ ಕಾರಣವಾಯಿತು. ಇನ್ನು ಅವಳ ಗುಣವನ್ನು ನೋಡೋಣ.

ಚಾರುಶೀಲೆಯು ಬಡತನದಲ್ಲಿ ಬೆಳೆದವಳು. ಮನೆಯೊಳಗಿನ ಅನೇಕ ಕೆಲಸ ಬೊಗಸೆಗಳನ್ನು ಅವಳೇ ಮಾಡಬೇಕಾಗುವದು. ಅಂದಮೇಲೆ ಅವಳಿಗೆ ಅಹಂಕಾರ

ಆಲಸ್ಯಗಳು ಎಲ್ಲಿಂದ ಬರಬೇಕು? ಮತ್ತು ಅವಳು ನಿಷ್ಕರವಾದ ನುಡಿಗಳನ್ನು ಯಾರಿಗೆ ಆಡಬೇಕು? ಹಾಗು ತನ್ನ ಅಧಿಕಾರದ ಕ್ರೂರತನವನ್ನು ಯಾರ ಮೇಲೆ ತೋರಿಸಬೇಕು? ಅದರಿಂದ ಮೃದು ಮಧುರನಾದ ನುಡಿಯೂ ಸದಯವಾದ ಅಂತಃಕರಣವೂ ಅವಳಲ್ಲಿ ಸ್ವಾಭಾವಿಕವಾಗಿ ನೆಲೆಗೊಂಡಿದ್ದವು. ಹಾಗು ಅವಳ ಮುದುಕಿಯಾದ ಅಮ್ಮನು ಕೆಲಸಬೊಗಸೆಗಳನ್ನು ಮಾಡಲಿಕ್ಕೆ ಹೆಚ್ಚಿಗೆ ಅಡ್ಡಾಡ ಲಿಕ್ಕೆ ಬರದಕಾರಣ ಕೂತಲ್ಲಿಯೇ ಅನೇಕ ನೀತಿಪರವಾದ ಕಥೆಗಳನ್ನು ಹೇಳಿ ಸಂಸಾರಕ್ಕೆ ಯೋಗ್ಯವಾಗುವ ಹಾಗೆ ಅವಳ ಮನಸ್ಸನ್ನು ತಿದ್ದುತ್ತಿದ್ದಳು. ಹಾಗು ಅವಳ ತಾಯಿಯು ಕೂಡಿದಾಗ ಒಂದೊಂದು ಕಸೂತಿಯ ಹಾಗು ಹೊಲಿಗೆಯ ಕೆಲಸಗಳನ್ನು ಕಲಿಸುತ್ತಿದ್ದಳು. ತಂದೆಯು ಮನೆಯಲ್ಲಿದ್ದಾಗ ಓದು ಬರಹಗಳನ್ನು ಕಲಿಸುತ್ತಿದ್ದನು. ಈ ರೀತಿಯಾಗಿ ಅವಳು ದೈವದತ್ತವಾದ ಹಾಗು ಹಿರಿಯರಿಂದ ಕೊಡಲ್ಪಟ್ಟ ಗೃಹಶಿಕ್ಷಣದಿಂದ ಚಾರುಶೀಲೆಯೆಂಬ ತನ್ನ ಹೆಸರನ್ನು ಅನ್ವರ್ಥವಾಗಿ ಮಾಡಿಕೊಂಡು ಈಹೊತ್ತೇ ಒಂದು ಸಂಸಾರವನ್ನಾದರೂ ಸಾಗಿಸಿಕೊಂಡು ಹೋಗು ವಷ್ಟು ಯೋಗ್ಯತೆಯನ್ನು ಪಡೆದಿದ್ದಳು. ಅವಳಿಗೆ ದುರಹಂಕಾರ, ದುರಾಚಾರ, ಸ್ವಾತಂತ್ರ್ಯಾಭಿಲಾಷೆ, ನಿರ್ಲಜ್ಜೆ, ಅಶ್ರದ್ಧೆ ಮುಂತಾದ ದುರ್ಗುಣಗಳ ಗಾಳಿಯು ಸಹ ಸೋಂಕಿದ್ದಿಲ್ಲ. ಇರಲಿ.

ಚಾರುಶೀಲೆಯು ಸುಗುಣೆಯೂ ಸುರೂಪಿಯೂ ಆಗಿರುವಳು. ಅದರೆ ಅವಳ ಗುಣರೂಪಗಳನ್ನು ಈ ವರವಿಕ್ರಯದ ಯುಗದಲ್ಲಿ ಯಾರು ಕೇಳಬೇಕು? ಯಾರು ಕನ್ಯಾವಿಕ್ರಯವು ಅಧರ್ಮವೆಂದು ಅಲ್ಲಗಳೆಯುತ್ತಿರುವರೋ ಅವರೇ ರೂಪಾಂತರ ದಿಂದ ವರವಿಕ್ರಯವನ್ನು ಮಾಡುತ್ತಿರುವರು. ಧನವಂತರಾಗಿದ್ದು ವರನು ಒಂದೆ ರಡು ಉಚ್ಚತರಗತಿಯ ಪರೀಕ್ಷೆಗಳಲ್ಲಿ ಪಾಸಾಗಿದ್ದರಂತೂ ತೀರೇ ಹೋಯಿತು. ಅವಳ ತಾಯಿತಂದೆಗಳಿಗೆ ತಮ್ಮಕೈಯು ಆಕಾಶಕ್ಕೆ ಮುಟ್ಟುವದಕ್ಕೆ ಮೂರೇ ಬೆರಳು ಕಡಿಮೆ ಯಿದ್ದಂತೆ ಭಾಸವಾಗಹತ್ತುವದು. ಸುಶಿಕ್ಷಿತರೆಂದು ಹೇಳಿಕೊಳ್ಳುವವರಲ್ಲಿಯೂ ಇದೇ ಅವಸ್ಥೆಯೇ?

ಒಂದು ದಿನ ಸಂಜೆಯ ಮುಂದೆ ರುಕ್ಮಿಣೀಕುಮಾರನು ಕಚೇರಿಂದ ತಿರುಗಿ ಬರುವಾಗ ಹಿಂದಿನಿಂದ ಯಾರೋ "ಕುಮಾರ" "ಕುಮಾರ" ಎಂದು ಒದರಿದರು. ಅವನು ತಿರುಗಿನೋಡಲಾಗಿ ನೆರಮನೆಯ ಮುರಲೀಧರ ವಂದ್ಯೋಪಾಧ್ಯಾಯರು ತಮ್ಮಾ ಸ್ಥೂಲವಾದ ದೇಹವನ್ನು ಅಲುಗಾಡಿಸುತ್ತ ಲಗುಬಗೆಯಿಂದ ಬರಹತ್ತಿದ್ದರು. ಕುಮಾರನು ನಿಂತುಕೊಂಡನು. ಬಳಿಕ ಅವರಿಬ್ಬರೂ ಮಾತಾಡಿಕೊಳ್ಳುತ್ತ ಕುಮಾರನ ಮನೆಗೆ ಬಂದರು. ಗೆಂಡನ ಸಂಗಡ ಉಪಾಧ್ಯಾಯರು ಬಂದದ್ದನ್ನೂ ಅವನ ಆನಂದ ವ್ಯಂಜಕಗಳಾದ ಮುಖಲಕ್ಷಣಗಳನ್ನೂ ನೋಡಿ ಗುಣಪ್ರಭೆಯ ಹೃದಯ ದಲ್ಲಿ ಒಂದು ತರದ ಆನಂದ ತರಂಗಳು ಏಳಹತ್ತಿದವು. ಅವಳು "ತಂಗೀ ಚಾರು

ಶೀಲೇ, ಒಂದು ತಂಬಿಗೆ ನೀರು ತಾ, ಉಪಾಧ್ಯಾಯರು ಬಂದಿರುವರು. ಕಾಲುತೊಳೆದುಕೊಳ್ಳಲಿ. ಕೂಡ್ರುವದಕ್ಕೆ ಕಂಬಳಿಯನ್ನು ಹಾಸು" ಎಂದು ಒದರಿ ಹೇಳಿದಳು. ಚಾರುಶೀಲೆಯು ಒಂದು ತಂಬಿಗೆ ನೀರು ತಂದು ಬಾಗಿಲಲ್ಲಿಟ್ಟು ಒಳಗಿನಿಂದ ಕಂಬಳಿಯನ್ನು ತಂದುಪಡಸಾಲೆಯಲ್ಲಿ ಹಾಸಲಿಕ್ಕೆಹತ್ತಿದ್ದಳು. ಅಷ್ಟರಲ್ಲಿ ಉಪಾಧ್ಯಾಯರು "ಅಮ್ಮಾ ಚಾರೂ, ನಿನ್ನ ದೈವ ಒಳ್ಳೆಯದು. ದೈವುಳ್ಳ ಗಂಡನನ್ನು ಹೊಂದುವೆ" ಎಂದು ಹೇಳಿದರು. ಚಾರುಶೀಲೆಯು ಕಂಬಳಿಯನ್ನು ಅಸ್ತವ್ಯಸ್ತವಾಗಿ ಹಾಸಿಬಿಟ್ಟು ಓಡಿ ಹೋಗಿ ಒಳಗೆ ಅಮ್ಮನ ಹತ್ತರ ಕುಳಿತುಕೊಂಡಳು. ಅದನ್ನು ನೋಡಿ ಗುಣಪ್ರಭೆಯು ಕಂಬಳಿಯನ್ನು ಸರಿಯಾಗಿ ಹಾಸಿದಳು. ಉಪಾಧ್ಯಾಯರೂ ರುಕ್ಮಿಣೀಕುಮಾರನೂ ಎಷ್ಟೋ ಹೊತ್ತಿನ ತನಕ ಮಾತಾಡುತ್ತ ಕುಳಿತುಕೊಂಡಿದ್ದರು. ಕಡೆಗೆ ಉಪಾಧ್ಯಾಯರು "ರಾತ್ರಿಯಾಗಿ ಹೋಯಿತು. ಯಾವದೂ ನಾಳೆಸಂಜೆಯ ಒಳಗಾಗಿ ತಿಳಿಸು. ಬೆಳಕಿಗೇನಾದರೂ ತಾ" ಎಂದು ಹೇಳಿ ರುಕ್ಮಿಣೀಕುಮಾರನ ಮನೆಯ ಕಂದೀಲನ್ನು ತೆಗೆದುಕೊಂಡು ಹೊರಟು ಹೋದರು. ಅವರವರು ಏನೇನು ಮಾತಾಡಿಕೊಂಡರೋ ಕೇಳಿಸಲಿಲ್ಲ. ಆದರೆ ರುಕ್ಮಿಣೀಕುಮಾರನು ಊಟಕ್ಕೆ ಕುಳಿತಾಗ ತನ್ನ ತಾಯಿಯ ಸಂಗಡ ಆಡಿದ ಈ ಕೆಳಗಿನ ಮಾತುಗಳಿಂದ ಉಪಾಧ್ಯಾಯರ ವಿಚಾರವು ಸ್ಪಷ್ಟವಾಗಿ ತಿಳಿಯಿತು.

ಈ ಹೊತ್ತು ಮುರಲೀಧರಾಚಾರ್ಯರು ನಮ್ಮ ಚಾರುಶೀಲೆಗೆ ರಘುಪತಿರಾಯನೆಂಬ ವರನನ್ನು ಗೊತ್ತುಮಾಡಿಕೊಂಡು ನನ್ನನ್ನು ಕೇಳಲಿಕ್ಕೆ ಬಂದಿದ್ದರು. ಮತ್ತು ಅವರು ವರನು ದೊಡ್ಡ ಮನೆತನಕ್ಕೆ ಸೇರಿದವನೆಂದೂ, ಅವನಿಗೆ ಅಸ್ತಿ ವೃತ್ತಿಗಳಿಗೇನೂ ಕಡಿಮೆಯಿಲ್ಲವೆಂದೂ ಅನುರೂಪಳಾದ ಕನ್ನೆಯು ದೊರೆಯದೆ ಇದ್ದದರಿಂದ ಮೂವತ್ತು ವರುಷಗಳಾಗುವವರೆಗೂ ಮದುವೆಯಾಗದೆ ಇರುವನೆಂದೂ, ಅವನು ನಮ್ಮ ಚಾರುಶೀಲೆಯ ಗುಣರೂಪಗಳಿಗೆ ಮೋಹಿತನಾಗಿ ಲೋಕರೂಢಿಗೆ ವಿರುದ್ಧವಾಗಬಾರದೆಂಬದಿಷ್ಟೇ ಉದ್ದೇಶದಿಂದ ಬರೇ ಐನೂರು ರೂಪಾಯಿ ವರದಕ್ಷಿಣೆಯನ್ನು ಮಾತ್ರ ಬೇಡುವನೆಂದೂ, ಹುಡುಗಿಗೆ ಎರಡು ಸಾವಿರ ರೂಪಾಯಿಗಳ ದಾಗಿನೆಯನ್ನು ಹಾಕುವನೆಂದೂ, ಹೇಳಿದರು. ಮುಖ್ಯವಾಗಿ ಚಾರುಶೀಲೆಗೆ ಹನ್ನೆರಡು ವರುಷಗಳೂ ತುಂಬಿ ಹೋಗುವದರಿಂದ ಮುಂದಿನ ವರುಷಕ್ಕೆ ಉಳಿಸುವಂತಿಲ್ಲ. ರಘುಪತಿರಾಯನ ವಿದ್ಯಾದಿಗುಣಗಳ್ಯಾವವೂ ಗೊತ್ತಿಲ್ಲದಿದ್ದರೂ ಮುರಲೀಧರೋಪಾಧ್ಯಾಯರು ಹೇಳಿದ್ದರ ಮೇಲಿಂದ ನೋಡಿದರೆ ಈ ಸಂಬಂಧಕ್ಕೆ ಒಪ್ಪಿಕೊಳ್ಳಲು ಏನೂ ಅಡ್ಡಿಯಿಲ್ಲವೆಂದು ತೋರುತ್ತದೆ. ಎಂದು ರುಕ್ಮಿಣೀಕುಮಾರನು ತಾಯಿಯೊಡನೆ ಹೇಳಿದನು. ಅದಕ್ಕೆ ತಾಯಿಯು ಉಪಾಧ್ಯಾಯರು ನಮ್ಮ ನೆರೆಯಲ್ಲಿಯೇ ಇದ್ದು ಚಿರಪರಿಚಿತರಾಗಿ ಸದಾಚಾರಪರರಾಗಿ ತೋರುವದರಿಂದ ಅವರು ಹೇಳುವ ವರನ ಬಗ್ಗೆ ಹೆಚ್ಚಿಗೇನೂ ವಿಚಾರ ಮಾಡುವ ಕಾರಣವಿಲ್ಲೆಂದು ಹೇಳಿದಳು. ಇದನ್ನೆಲ್ಲ ಕೇಳುತ್ತಿದ್ದ ಚಾರುಶೀ

ಲೆಗೆ ಅನ್ನವೇ ಸೇರಲಿಲ್ಲ. ಅದನ್ನು ನೋಡಿ ಹತ್ತಿರ ಕುಳಿತಿದ್ದ ತಂದೆಯು "ಚಾರೂ ಅದೇಕೆ ಊಟವನ್ನೇ ಮಾಡುವದಿಲ್ಲ?" ಎಂದನು. ಅದನ್ನು ಕೇಳಿ, ಬಡಿಸುತ್ತಿದ್ದ ಗುಣಪ್ರಭೆಯು "ಭಾಗ್ಯವಂತನ ಹೆಂಡತಿಯಾದವಳಿಗೆ ಈ ದರಿದ್ರರ ಮನೆಯ ಕೂಳು ಹೇಗೆ ಸೇರೀತು" ಎಂದು ನಗುತ್ತ ಹೇಳಿದಳು. ಚಾರುಶೀಲೆಯ ಈ ಸಮಯದ ಮನಸ್ಸಿನ ಸ್ಥಿತಿಯನ್ನೇ ಅವಳ ಗೆಳತಿಯರೇ ಚನ್ನಾಗಿ ತಿಳಿಯುವರು.

ಮಾರನೆಯದಿನ ಮುಂಜಾನೆ ರುಕ್ಮಿಣೀಕುಮಾರನು ಮಗಳ ಜಾತಕವನ್ನು ತೆಗೆದುಕೊಂಡು ಹೋಗಿ ಉಪಾಧ್ಯಾಯರ ಕೈಯಲ್ಲಿ ಕೊಟ್ಟು ಜಾತಕದ ಅನುಕೂಲವಾದರೆ ವಿವಾಹಕ್ಕೇನೂ ಅಡ್ಡಿಯಿಲ್ಲವೆಂದು ಹೇಳಿ ಮನೆಗೆ ಬಂದನು. ಸಂಜೆಯಮುಂದೆ ಕುಮಾರನು ಕಚೇರಿಯಿಂದ ತಿರುಗಿ ಬರುವದರೊಳಗಾಗಿ ಉಪಾಧ್ಯಾಯರ ಅಳಿಯ ಮನೆಯ ಮುಂದೆ ನಿಂತಿದ್ದನು. ಅವನು ಹತ್ತರ ಬಂದೊಡನೆಯೇ "ಜಾತಕವು ಸರ್ವ ರೀತಿಯಿಂದಲೂ ಅನುಕೂಲವೇ ಆಗುವದು. ಬೇಕಾದ ಸಾಮಾನುಗಳನ್ನೆಲ್ಲ ಅಣಿ ಮಾಡಿಕೊಂಡು ಅದಷ್ಟು ಬೇಗನೆ ಬಂದು ಲಗ್ನವನ್ನು ನಿಶ್ಚಯಿಸಿ ಹೋಗಬೇಕು" ಎಂಬ ಅಭಿಪ್ರಾಯವುಳ್ಳ ಒಂದು ಚೀಟಿಯನ್ನು ರುಕ್ಮಿಣೀಕುಮಾರನ ಕೈಯೊಳಗೆ ಕೊಟ್ಟು ಹೊರಟು ಹೋದನು. ರುಕ್ಮಿಣೀಕುಮಾರನ ಆನಂದಕ್ಕೆ ಪಾರವೇ ಇರಲಿಲ್ಲ. ಅವನು ತನ್ನ ತಾಯಿಗೂ ಭಾರ್ಯೆಗೂ ಈ ಸಂಗತಿಯನ್ನು ತಿಳಿಸಿದನು.

ಅಂತೂ ಇಂತೂ ವರನು ಗೊತ್ತಾದ ಹಾಗಾಯಿತು. ವರಹಕ್ಕೇನುಗತಿ! ಏನಿಲ್ಲೆಂದರೂ ಎರಡು ನೂರು ವರಹಗಳು ಬೇಕು. ರುಕ್ಮಿಣೀಕುಮಾರನು ಪುನಃ ಚಿಂತೆಯಲ್ಲಿ ಬೀಳಬೇಕಾಯಿತು. ಇಷ್ಟುಹೊತ್ತಿನತನಕ ಅವನ ಮೋರೆಯ ಮೇಲಿದ್ದ ಕಳೆಯು ಒಮ್ಮಿಂದೊಮ್ಮೆ ಇಳಿದು ಹೋಯಿತು. ಎಷ್ಟೋ ಹೊತ್ತಿನತನಕ ಆಲೋಚಿಸಿ ಕಡೆಗೆ ತುಸು ಸಮಾಧಾನವನ್ನು ತಂದುಕೊಂಡನು. ಮಾರನೆಯದಿನ ಅದೇ ಊರಲ್ಲಿದ್ದ ಧನಕಾಂಕ್ಷಿಯೆಂಬ ವರ್ತಕನಲ್ಲಿ ಹೋಗಿ ತಾನು ವಾಸವಾಗಿದ್ದ ಮನೆಯನ್ನೂ ಸುತ್ತಲಿನ ಹಿತ್ತಲವನ್ನೂ ಒತ್ತೆಹಾಕಿ ೬೦೦ ರೂಪಾಯಿಗಳನ್ನು ಸಾಲವಾಗಿ ತಂದನು. ಹಾ! ದೈವವೇ! ಹೆಣ್ಣು ಹೆತ್ತ ಬಡವನ ಹಣೇಬರಹವೇ! ಪಿತ್ರಾರ್ಜಿತವಾದ ಸ್ವತ್ತೆನಿಸುವ ಒಂದೇ ಒಂದಾದ ವಾಸಗ್ರಹವೂ ನಿನಗೆ ಬೇಸರವಾಗಿ ತೋರಿತೇ?

ಆ ಹಣದಿಂದ ರುಕ್ಮಿಣೀಕುಮಾರನು ಲಗ್ನಕ್ಕೆ ಬೇಕಾಗುವ ಸಾಮಾನುಗಳನ್ನೆಲ್ಲ ಅಣಿ ಮಾಡಿಕೊಂಡು ಉಪಾಧ್ಯಾಯರ ಮನೆಗೆ ಹೋಗಿ ಮುಹೂರ್ತವನ್ನು ನಿಶ್ಚಯಿಸಿ ಬಂದನು. ಯೋಗ್ಯವಾದ ಮುಹೂರ್ತದಲ್ಲಿ ಚಾರುಶೀಲೆಗೆ ವಿವಾಹವಾಯಿತು. ಲಗ್ನದ ಕಾರ್ಯಗಳೆಲ್ಲವೂ ಯಥಾರೀತಿಯಾಗಿ ನಡೆದವು. ಚಾರುಶೀಲೆಗೆ ರೂಪದಲ್ಲಿಯೂ ಸಂಪತ್ತಿನಲ್ಲಿಯೂ ಅನುರೂಪನಾದ ವರನೇ ದೊರೆತನು. ಆದರೆ ಗುಣದಲ್ಲಿ ಮಾತ್ರ ಸರಿಯಾದವನಲ್ಲವೆಂದು ಹೇಳಲು ವಿಷಾದಪಡಬೇಕಾ

ಗಿದೆ. ತಿಂಗಳೊಪ್ಪತ್ತಿನಲ್ಲಿಯೇ ರಘುಪತಿರಾಯನ ಸರಿಯಾದ ಚರಿತ್ರೆಯು ಗೊತ್ತಾ ಯಿತು. ಅವನ ಗೃಹಸ್ಥಿತಿಯೇನೋ ಒಳ್ಳೆಯದೇ ಸರಿ. ಅದರೆ ವಿದ್ಯೆಯನ್ನೂ ಆಚಾರವಿಚಾರಗಳನ್ನೂ ನೋಡಿದರೆ ಇಂತಹ ಮಹಾ ಪುರುಷನಿಗೆ ಮಗಳನ್ನು ಕೊಡು ವದಕ್ಕಿಂತ ಮಗಳಿಗೆ ವಿಷವನ್ನು ಕೊಡುವದೇ ಮೇಲೆಂದು ತಿಳಿಯಬಹುದಾಗಿತ್ತು. ಅದರಿಂದಲೇ ಅವನು ಇಲ್ಲಿಯವರೆಗೂ ಮದುವೆಯಾಗದೆ ಉಳಿದಿದ್ದನು. ಈ ಸಂಗತಿಯು ರುಕ್ಮಿಣೀಕುಮಾರನಿಗೇನು ಗೊತ್ತು? ಅದನ್ನೆಲ್ಲ ವಿಚಾರಿಸುವಷ್ಟು ಅನುಕೂಲವಾದರೂ ಅವನಿಗೆಲ್ಲಿತ್ತು? ಅಂತೂ ಇಂತೂ ಹುಟ್ಟಿದ ಮಗಳನ್ನು ಮದುವೆ ಮಾಡಿ ಕೊಟ್ಟು ದರಿದ್ರನಾದ ರುಕ್ಮಿಣೀಕುಮಾರನು ಕೃತಕೃತ್ಯನಾದನು. ಚಾರುಶೀಲೆಯನ್ನು ಅವಳ ಗಂಡನು ಮದುವೆಯ ಮರುದಿನ ಕರೆದುಕೊಂಡು ಹೋದವನು ತಿರುಗಿ ಕಳುಹಿ ಸಲೇ ಇಲ್ಲ.

ಚಾರುಶೀಲೆಯ ವಿವಾಹವಾದ ಬಳಿಕ ಒಂದು ವರ್ಷ ಕಾಲವು ಕಳೆದು ಹೋಯಿತು. ಕಾರ್ಯರೂಪವಾದ ಹೆಜ್ಜೆಗಳನ್ನು ಮಾನವರ ಜೀವನ ಮಾರ್ಗದಲ್ಲಿ ಬಲವಾಗಿ ಊರಿ ಗುರುತುಮಾಡುತ್ತ ಒಂದು ವರುಷ ಕಾಲವು ಸಾಗಿಹೋಯಿತು. ರುಕ್ಮಿಣೀಕುಮಾರನ ಧನಿಯಾದ ಧನಕಾಂಕ್ಷಿಯು ಕೇವಲ ಧನದಲ್ಲಿಯೇ ದೃಷ್ಟಿ ಯುಳ್ಳವನಾಗಿಯೂ ಜನರ ಅನುವು ಆಪತ್ತುಗಳನ್ನು ಎಷ್ಟುಮಾತ್ರವೂ ನೋಡದವ ನಾಗಿಯೂ ಇದ್ದನು. ಅವನು ವರುಷವು ಪೂರ್ಣವಾದ ಮಾರನೆಯ ದಿನವೇ ಬಡ್ಡಿಯನ್ನು ಕೇಳುವದಕ್ಕೆ ರುಕ್ಮಿಣೀಕುಮಾರನ ಮನೆಗೆ ಆಳನ್ನು ಕಳುಹಿಸಿ ಕೊಟ್ಟನು, ರುಕ್ಮಿಣೀಕುಮಾರನಿಗೆ ಅವನನ್ನು ನೋಡಿದೊಡನೆಯೇ ಎದೆಯು ಒಡೆದು ಹೋಯಿತು. ಆ ಆಳಿನ ಸಂಗಡ ತಾನೇ ಹೋಗಿ ಧನಿಯರಿಗೆ ಏನಾದರೂ ಹೇಳಿಕೊಳ್ಳಬೇಕೆಂದು ಧನಕಾಂಕ್ಷಿಯ ಮನೆಗೆ ಹೋದನು. ಯಜಮಾನನ ಗಂಟು ಹಾಕಿದ ಮೋರೆಯನ್ನು ನೋಡಿದೊಡನೆಯೇ ರುಕ್ಮಿಣೀಕುಮಾರನ ಮನಸ್ಸಿನೊಳಗಿನ ವ್ಯಸನವು ಇಮ್ಮಡಿಸಿತು. ಮಾತಾಡುವದಕ್ಕೆ ನಾಲಿಗೆಯೇ ಏಳಲಿಲ್ಲ. ಧನಕಾಂಕ್ಷಿಯು ಅವನು ವಿಗಲಿತವಾದ ಧ್ವನಿಯಿಂದ ಹೇಳಿಕೊಳ್ಳುವ ಮಾತುಗಳನ್ನು ಎಷ್ಟು ಮಾತ್ರವೂ ಲಕ್ಷಿಸದೆ ಮುದ್ದತಿಗೆ ಸರಿಯಾಗಿ ಬಡ್ಡಿಯನ್ನು ಕೊಡಲೇ ಬೇಕೆಂದೂ ಆಗದಿದ್ದರೆ ಅಡವಾಗಿದ್ದ ಮನೆಯನ್ನು ಬಿಟ್ಟು ಕೊಡಬೇಕೆಂದೂ ಕಠಿಣ ವಾಗಿ ನುಡಿದು ಬಿಟ್ಟನು! ರುಕ್ಮಿಣೀಕುಮಾರನು ಬಹಳವಾಗಿ ಬೇಡಿಕೊಂಡ ಮೇಲೆ ಎರಡು ತಿಂಗಳ ಮುದ್ದತ್ತು ದೊರೆಯಿತು. ಸಾಲಗಾರನಾಗಿ ಸಾವುಕಾರನ ಬಿರುನುಡಿಗಳನ್ನು ಕೇಳುವದಕ್ಕಿಂತಲೂ ಅಸಹ್ಯವಾದ ಕಷ್ಟವು ಬೇರೊಂದಿರುವದೇ! ರುಕ್ಮಿಣೀಕುಮಾರನು ಚಿಂತೆಯಲ್ಲಿ ಭ್ರಾಂತನಾಗಿ ಹೋದನು. ಇಂತಹ ಕಷ್ಟ ಕಾಲದಲ್ಲಿ ಅವನಿಗೆ ಸಹಾಯ ಮಾಡುವವರು ಯಾರು? ಹಣವನ್ನು ಕಳಕೊಂಡಾಗ

ಗುಣಗಳನ್ನು ಕೇಳುವವರು ಯಾರು? ಅಂಥವರ ಗುಣಗಳು ಸಾವಿರವಿದ್ದರೂ ವ್ಯರ್ಥವೇ ಸರಿ. ಕಾನನದ ಬಿಳದಿಂಗಳಂತೆಯೇ ಸರಿ.

ರುಕ್ಮಿಣೀಕುಮಾರನ ಚಿಂತಾಗ್ನಿಯು ದಿನೇ ದಿನೇ ಹೆಚ್ಚುತ್ತ ಬಂದಿತು. ಅದು ಅವನ ಸಜೀವವಾದ ಶರೀರವನ್ನು ದಹಿಸತೊಡಗಿತು. ಒಂದೇ ತಿಂಗಳಲ್ಲಿ ಅವನ ಶರೀರದ ಮಾಂಸಭಾಗವೆಲ್ಲ ಧ್ವಂಸವಾಗಿ ಹೋಗಿ ಅಸ್ಥಿಚರ್ಮಗಳು ಮಾತ್ರ ಉಳಿದವು. ಪತಿಯಗತಿಯನ್ನು ನೋಡಿದ ಸತೀಶಿರೋಮಣಿಯಾದ ಗುಣಪ್ರಭೆಯ ಶರೀರವೂ ಕುಂದುತ್ತ ಬಂದಿತು. ಅವನ ತಾಯಿಯಂತೂ ತನ್ನ ಜೀವನ ಯಾತ್ರೆಯನ್ನೇ ಮುಗಿಸಿಬಿಟ್ಟು ಹೊರಟು ಹೋದಳು. ಒಂದು ದಿನ ಸಂಜೆಯ ಮುಂದೆ ಸತಿಪತಿಗಳಿಬ್ಬರೂ ಚಿಂತಿಸುತ್ತ ಕುಳಿತುಕೊಂಡಾಗ ಅಕಸ್ಮಾತ್ತಾಗಿ ವಿದ್ಯಾಧನನು ಅಲ್ಲಿಗೆ ಬಂದನು. ಅವನು ಭಾವನ ಮುಖಲಕ್ಷಣದ ಮೇಲಿಂದಲೇ ಅವನು ಯಾವದೋ ಒಂದು ಗಾಢವಾದ ಚಿಂತೆಯಲ್ಲಿ ಮುಳುಗಿ ಹೋಗಿರುವನೆಂದು ತಿಳಿದುಕೊಂಡು ಅವನು ತನ್ನನ್ನು ಮಾತಾಡಿಸದೆ ಇದ್ದರೂ ಅವನ ಹತ್ತರ ಹೋಗಿ ಕುಳಿತುಕೊಂಡನು. ರುಕ್ಮಿಣೀಕುಮಾರನು ಒಂದೆರಡು ಬಿರುಸಾದ ಮಾತುಗಳನ್ನಾಡಿದನು. ಅದಕ್ಕೆ ವಿದ್ಯಾಧನನು ಏನೂ ಹೇಳದೆ ಸುಮ್ಮನೆ ಕುಳಿತುಕೊಂಡಿದ್ದನು. ತುಸು ಹೊತ್ತಿನ ಮೇಲೆ ಅವನು ತನ್ನ ಅಕ್ಕನ ಹೇಳಿಕೆಯ ಮೇಲಿಂದ ಅವರ ಚಿಕ್ಕದಾದ ಸಂಸಾರರಾಷ್ಟ್ರದಲ್ಲಿ ಉಂಟಾದ ಪರಿವರ್ತನೆಗಳನ್ನೆಲ್ಲ ತಿಳಿದುಕೊಂಡನು. ತನ್ನ ಸಂಬಂಧದಿಂದ ಊರಲ್ಲಿ ಹುಟ್ಟಿದ ಅಪವಾದವನ್ನೂ ಕೇಳಿದನು. ಅವನು ತನ್ನ ತಾಯಿಯು ಗತಿಸಿದ ಬಳಿಕ ಅವಳ ಉತ್ತರ ಕ್ರಿಯಾದಿಗಳನ್ನು ನೆರವೇರಿಸಿ ಅವಳಿಗೆ ಸದ್ಗತಿಯುಂಟಾಗಲೆಂದು ಅವಳ ಅಸ್ಥಿಯನ್ನು ತೆಗೆದುಕೊಂಡು ಕಾಶಿಗೆ ಹೋಗಿದ್ದನು. ಅವನು ದಾರಿಯಲ್ಲಿ ಭಯಂಕರವಾದ ವ್ಯಾಧಿಪೀಡಿತನಾದದ್ದರಿಂದ ತಿರುಗಿ ಬರಲಿಕ್ಕೆ ಒಂದು ವರುಷ ಕಾಲವು ಹಿಡಿಯಿತು. ಈ ತನ್ನ ನಿಜವಾದ ಸಂಗತಿಯನ್ನೆಲ್ಲ ಅಕ್ಕಭಾವಂದಿರಿಗೆ ತಿಳಿಸಿದನು. ಹಾಗೂ ಅವನ ಸಂಬಂಧದ ಅಪವಾದದ ಸೃಷ್ಟಿಗೆ ಮುರಲೀಧರೋಪಾಧ್ಯಾಯರು ಹಾಗು ರಘುಪತಿರಾಯ ಇವರೇ ಕಾರಣರಾಗಿರಬೇಕೆಂದು ಅವರೆಲ್ಲರೂ ತಿಳಿದುಕೊಂಡರು. ವಿದ್ಯಾಧನನು ತನ್ನಲ್ಲಿದ್ದ ಹಣದಿಂದ ಭಾವನಿಗೆ ಸಹಾಯಮಾಡಿ ಅವನನ್ನು ಋಣಮುಕ್ತನನ್ನಾಗಿ ಮಾಡಿದನು. ದುಃಖಸಾಗರದಲ್ಲಿ ತೇಲಿ ಹೋಗುತ್ತಿದ್ದ ರುಕ್ಮಿಣೀಕುಮಾರನಿಗೆ ಅಕಸ್ಮಾತ್ತಾಗಿ ಒಂದು ಓಡೆಯು ದೊರೆತು ಧಡವನ್ನು ಸೇರಿದನು.

ಒಟ್ಟಿನ ಮೇಲೆ ಚಾರುಶೀಲೆಯು ಈಗಿನ ಕಾಲದಲ್ಲಿ ದರಿದ್ರ ಬ್ರಾಹ್ಮಣನಲ್ಲಿ ಜನ್ಮಿಸಿದ್ದಕ್ಕೆ ಎಂತಹ ವರನನ್ನು ಹೊಂದಬೇಕೋ ಅಂಥವನನ್ನು ಹೊಂದಿದಳು. ರುಕ್ಮಿಣೀಕುಮಾರನು ಹೆಣ್ಣುಹಡೆದ ಬಡವನು ಹೊಂದಬೇಕಾಗಿರುವ ಕಷ್ಟನಷ್ಟಗಳನ್ನೆಲ್ಲ

ದಿದನು. ಮುರಲೀಧರೋಪಾಧ್ಯಾಯರು ಹಣದಾಶೆಯಿಂದ ಮನುಷ್ಯನು ಮಾಡುವ ದುಷ್ಕೃತ್ಯವೊಂದನ್ನು ಜಗತ್ತಿಗೆ ತೋರಿಸಿಕೊಟ್ಟರು. ವಿದ್ಯಾಧನನು ಮಾತ್ರ ಸರಿಯಾದ ನೀತಿ ನಡತೆಗಳಿಂದಿದ್ದುಕೊಂಡು ಯೋಗ್ಯಕಾಲದಲ್ಲಿ ಸುರೂಪಿಯೂ ಸದ್ಗುಣಿಯೂ ಆದ ಭಾರ್ಯೆಯನ್ನು ತಂದುಕೊಂಡು ಸಂಸಾರ ಮಾಡಿಕೊಂಡು ಸುಖವಾಗಿ ಇರುತ್ತಿದ್ದನು. ಅಪವಾದ ಮಾತ್ರಕ್ಕೆ ಗುಣಿಯ ಗುಣಗಳು ಲೋಪವಾಗುವದುಂಟಿ!!

ಮಕ್ಕಳಿಗೆ ನೆಲ್ನುಡಿ.

ಶ್ರೀವರನಾವಂಭಕ್ತ ।
ಶ್ರೀವರದನದಾವನತುಳವಿಭವಾಂಚಿತಸು ॥
ಶ್ರೀವರನಾರದಮುನಿಸಂ ।
ಸೇವಿತನಾದಾವುಚಂದ್ರನೀಗೆಸುಮತಿಯಂ ॥ ೧ ॥
ಆರಂನಚ್ಚುವರೆಲ್ಲರ ।
ದಾರಂಸರ್ವೇಶನೆಂದುರಕ್ಷಕನೆನುತಂ ॥
ಸಾರುವರಾಜಗದೀಶಂ ।
ಕಾರುಣ್ಯದೆಪೊರೆಗೆನಿಚ್ಚಮುಂ ರಘುರಾಮಂ ॥ ೨ ॥
ಎಳೆಯರ್ಗುತ್ತಮನೀತಿಯ ।
ತಿಳಿಪಲ್ಬಗೆದಂದುಪಲವುಸಿತಬೋಧೆಗಳಂ ॥
ಸುಲಭದೊಳುಸಿರ್ವೆಂಸುಜನ ।
ರ್ಮುಳಿಯದೆತಪ್ಪುಗಳತಿರ್ದಿಕ್ಕೈಕೊಳ್ಳುದಿದಂ ॥ ೩ ॥

ಎಲೆಪಸುಳಿನೇಸರುದಯಾ ।
ಚಲವನಡರ್ವುದಕೆಮುನ್ನಮೇಳ್ವಾಸಿಗೆಯಿಂ ॥
ಜಲಜದಳಾಕ್ಷನನೆನೆನಿ ॥
ಶ್ಚಲಭಕ್ತಿಯೊಳೆರಗಿನವಿಸುತಾಯ್ತುಂದೆಗಳಂ ॥ ೪ ॥
ಜಲಮಲಬಾಧೆಯತೀರ್ಚಿವಿ ।
ಮಲಜಲದಿಂವೊಗವನಂತೆಕೈಕಾಲ್ಗಳನೀಂ ॥
ತೊಳೆವುತ್ತೊಗದಿಹವಸ್ತ್ರದೊ ।
ಳೆಲೆಮಗುನೀನೊರಸುಧರಿಸುಚಿಹ್ನೆಯಪಣೆಯೊಳ್ ॥ ೫ ॥

ಧರಿಸೈವಿಮಲಾಂಬರಮುಂ ।
ಪಿರಿಯರ್ಕಳ್ಳುಡುವತಿಂಡಿಯಂಮೆಲ್ಲುತ್ತಂ ॥
ಸರಿಸದೊಳಿಹರಂಮನ್ನಿಸಿ ।
ಕರದೊಳ್ಪೊತ್ತುಗೆಯಕೊಂಡುನಡೆಶಾಲೆಗೆನೀಂ ॥ ೬ ॥
ನೆರೆಬಿಜ್ಜೆವನೆಯಪುಗುತಂ ।
ಗುರುಗಳ್ಗಭಿನಮಿಸಿನಿನ್ನಕಾಣದೆಕುಳ್ಳಿ ॥
ರ್ದುರುಗಾಂಭೀರ್ಯದೆಕಲ್ತುದ ।
ನೊರೆಗುರುಕೇಳ್ದುದಕೆಬಿತ್ತರಿಪುದುತ್ತರಮುಂ ॥ ೭ ॥
ನೆರೆಕೆಳೆಯರಮನ್ನಿಸುಸುಂ
ದರದಿಂಬರೆಚೇಷ್ಟೆಗಡೆಯನೀಯದಿರೆಂದುಂ ॥
ಕರುಣಾಪೂರಿತನಾಗಿರು ।
ಪರಮೇಶನನೆಂಬುಭಕ್ತಿಭಾವದೆತರಳಾ ॥ ೮ ॥
ತರಳನೆವಿದ್ಯಾಗೇಹದೆ ।
ಪೊರಮಡುತಲ್ಲಲ್ಲಿನಿಲ್ಲದೆಯೆಮನೆವೊಕ್ಕಾ ॥
ತುರಿಸದೆಮಿಂದಾಧೌತಾಂ ।
ಬರಮುನೀನುಟ್ಟುಧರಿಸುಮತಚಿಹ್ನೆಗಳಂ ॥ ೯ ॥
ವಿಧಿವಿಹಿತಕರ್ಮಮಾಚರಿ ।
ಪುದುಬಳಿಕಂದೇವಪೂಜೆಯುಂಸಲಿಪುದುಮೇ ॥
ಸೊದವಿದನಿತರೊಳೋವ್ದುದು ।
ಸದಯದಿನಭ್ಯಾಗತರ್ಗೆಭೋಜನಮುಂನೀಂ ॥ ೧೦ ॥
ಬಿಸಿಯುಣುಸಂಭುಂಜಿಸಿಸಂ ।
ತಸದಿಂಕೈವೊಗವತೊಳೆದುಕೆಲವೊಳ್ತಂತಿಂ ॥
ತೆಸೆವುತೆಲೆಕ್ಕಮಲೆಕ್ಕಿಸಿ ।
ಜಸದಿಂದಂಬಿಜ್ಜೆವನೆಯನೊಳಪುಗುತರಳಾ ॥ ೧೧ ॥
ಗುರುವರ್ಯರಮನದಿಚ್ಛೆಯ ।
ನರಿಯುತೆಕಲ್ತುದನುಸಿರ್ದುಪೊಸವಾಠವನೆ ॥
ಳ್ಕರಿನಾಲಿಸಿಸಂಗ್ರಹಿಸುತೆ ।
ಪೊರಮಡುನೀಂಮನೆಗೆನಿಚ್ಚಮುಂಮಾಣವತಾ ॥ ೧೨ ॥

ಅನುವಿಂದೊಡನಾಡಿಗಳೊಡ ।
ನನುನಯದಿಂದಂಗಸಾಧನಂಗಳನೆಸಗು ॥
ತ್ತನುದಿನಮುಂಸಾಯಾಹ್ನದೊ ।
ಳನುವರ್ತಿಸುಪಿರಿಯರೆಡೆಯನೀನೆಭರ್ಕನೆ ॥ ೧೩ ॥

ದೀವಿಗೆಬಳಿಕುಳ್ಳಿರುಸಂ ।
ಭಾವಿಸುಗುರುವರ್ಯರೊರೆದಸಂಗತಿಯಂಬೋ ॥
ಧಾವನತನಾಗಿಭುಂಜಿಸಿ ।
ಭಾವದೆಭಗವಂತನಡಿಯನೆನೆವಾಣವಕಾ ॥ ೧೪ ॥

ನೆರೆಸಜ್ಜೀವನೆಯೆಪ್ರಗುತಂ ।
ಪರಿಶುದ್ಧಸ್ವಾಂತನಾಗಿವಿಮಲಾಂಬರದಿಂ ॥
ಪರಿಸೇವಿತತಲ್ಪದೆಸಂ ।
ತರಮನೆಮೆಂಬಂತೆಮಲಗಿನಿದ್ರಿಸುಕುವರಾ ॥ ೧೫ ॥

ಇಂತನುದಿನಮುಂಗೆಯ್ಯ ।
ಲ್ಸಂತಸದಿಂಬಾಣಿಯೊಲ್ಮೆಯಿಂದತುಲಕಲಾ ॥
ವಂತಂನೀನೆಪ್ಪೆಕರಂ ।
ಶಾಂತಿಗುಣಂಬೆಳೆಯೆಕೀರ್ತಿವಂತನುಮಪ್ಪಯ್ ॥ ೧೬ ॥

ಸಟೆಯಂನುಡಿಯದಿರೆಂದುಂ ।
ಹಟಮುಂನೀಂಗೆಯ್ಯವೇಡಮುಳಿಕಲಿನತೆಯಂ ॥
ವಿಟಕಿಸದಿರ್ದ್ದನವುದದಿಂ ।
ಪಟುತೆಯೆನೀನಾಂಪುದಣುಗಪರಿಂತಕೃತಿಯೊಳ್ ॥೧೭॥

ಸಾಧುಗಳಂಸಜ್ಜನರಂ ।
ಬೋಧಕರಂತಂದೆತಾಯ್ವಿರಂಪಸುಳಿಯರಂ ॥
ಆದರಿಸುಕಾಣಲೊಡಮಿರ ।
ದಾಧರ್ಮದಪಥವಿಾರದಿರ್ಮಾಣವಕಾ ॥ ೧೮ ॥

(ಸಶೇಷ.)

ಎಂ. ಎಸ್. ಶ್ರೀನಿವಾಸಯ್ಯಂಗಾಲ್ ಕೋಲಾರ.